1951

ಆನಂದ ಬ್ರದರ್ಸ್

ಬೆಂಗಳೂರು

Mr. K. Srinivas Rao
Sandow Cafe Boarding
House.

ಅರುಳು ಮರುಳು

ಅರುಳು ಮರುಳು

(ಸಾಮಾಜಿಕ ಕಾದಂಬರಿ)

ಅ. ನ. ಕೃಷ್ಣರಾಯ

ಆನಂದ್ ಬ್ರದರ್ಸ್
ಬೆಂಗಳೂರು ೨

ಮೊದಲನೆಯ ಮುದ್ರಣ: ಏಪ್ರಿಲ್ ೧೯೫೧

[redacted]

ಮುದ್ರಣಕಾರರು:
ವಿ. ರಾಮಯ್ಯ
ಶ್ರೀ ಸತ್ಯನಾರಾಯಣ ಪ್ರೆಸ್,
೬೩, ಗೌಡನಪೇಟೆ, :: ಬೆಂಗಳೂರು ಸಿಟಿ.

ಮುನ್ನುಡಿ

ಧರ್ಮವೆಂದರೇನು ? ಎಂದು ಕಾಲಕಾಲಕ್ಕೆ ಸಾಧಕರು, ಜಿಜ್ಞಾಸುಗಳು ಕೇಳುತ್ತ ಬಂದಿದ್ದಾರೆ. ಉಪನಿಷತ್ತಿನ ಋಷಿಗಳು, ಒಡಂಬಡಿಕೆಗಳು, ಪ್ರವಾದಿಗಳು, ಖುರಾನಿನ ಖಲೀಫರು ಈ ಪ್ರಶ್ನೆ ಬಿಡಿಸಲು ಪ್ರಯತ್ನಿಸಿದ್ದಾರೆ. ತಿಳಿದವರು ಬೇಕಾದಷ್ಟು ಗ್ರಂಥಗಳನ್ನು ಬರೆದಿದ್ದಾರೆ. ಆದರೆ ಇಂದಿಗೂ ಈ ಪ್ರಶ್ನೆ ನಿತ್ಯನೂತನವಾಗಿ – ಸಜೀವವಾಗಿದೆ. ನಾವೂ ಧರ್ಮವೆಂದರೇನು ಎಂದು ವಿಚಾರಮಾಡುತ್ತಿದ್ದೇವೆ; ಧರ್ಮದ ನೆಲೆಯನ್ನರಿಯಲು ನಮ್ಮ ಶಕ್ತ್ಯನುಸಾರ ಪ್ರಯತ್ನಿಸುತ್ತಿದ್ದೇವೆ. ವಾಙ್ಮನಕ್ಕಗೋಚರವಾದ ಧರ್ಮ ತತ್ತ್ವವನ್ನರಿಯಲು ಅನುಭಾವವೇ ಮಾರ್ಗವೆಂದು ಉಪನಿಷತ್ತುಗಳು, ಸೂಫಿ ಸಂತರು, ಕ್ರೈಸ್ತ ಮಿಸ್ಟಿಕ್ಸ್ (Mystics) ಸಾರಿದರು. ಅನುಭಾವದ ಮಾರ್ಗ ಅತಿದುರ್ಗಮವಾದುದೆಂದು ಎಲ್ಲರೂ ಸಾರಿ ಹೇಳಿ, ಅದರ ಪ್ರಭಾವ, ಪ್ರಕಟನೆಗಳನ್ನು ಚಿತ್ರಿಸಿದರು. ಸಾಧಕನಲ್ಲಿ ಆ ಮನಃಪ್ರವೃತ್ತಿ ಬೆಳೆಯುವ ವರೆಗೆ, ಅವನು ತನ್ನ ಉತ್ಕ್ರಾಂತಿ ಮಾರ್ಗವನ್ನು ಗುರುಬೋಧೆ ಯಿಂದಲೋ, ನಿರಂತರ ಸಾಧನೆಯಿಂದಲೋ ಆವಿಷ್ಕಾರಮಾಡಿಕೊಳ್ಳುವ ವರೆಗೆ ಎಲ್ಲರ ಮಾತೂ ಅರುಂಧತಿ ನಕ್ಷತ್ರದಂತೆ ಗುಹ್ಯತರವೆಂದು ಎಚ್ಚರಿಸಿದರು.

ಧರ್ಮದ ತವರು ಎಂದು ಹೆಸರಾದ ಭಾರತವರ್ಷದಲ್ಲಿ ಧರ್ಮದ ನೆಲೆಯನ್ನು ಕಂಡುಹಿಡಿಯಲು ಮಿಕ್ಕದೇಶಗಳಿಗಿಂತ ಹೆಚ್ಚಿನ ಪ್ರಯತ್ನ ನಡೆದಿದೆಯೆನ್ನುವುದು ನಿರ್ವಿವಾದ. ಶ್ರದ್ಧಾಪೂರಿತವೂ, ಸತ್ಯಯುತವೂ ಆದ ಈ ಪ್ರಯತ್ನದೊಂದಿಗೆ ಅಷ್ಟೇ ಪ್ರಮಾಣದಲ್ಲಿ ಧರ್ಮದ ಸುಲಿಗೆಯೂ ನಡೆದಿದೆ. ಧರ್ಮಾವತಾರದ ಸಹಸ್ರ ಮುಖಗಳನ್ನೂ ಎರಡು ದೃಷ್ಟಿಯಿಂದ ನೋಡಬಹುದು. ೧) ಧರ್ಮ ಮಾನವನ ಅಲ್ಪಪ್ರಮಾಣ, ಅಲ್ಪಶಕ್ತಿ, ಅಲ್ಪಚೇತನಗಳಿಗಿಂತ ಮಿಗಿಲಾದುದು. ಅದರ ವ್ಯಾಪ್ತಿ ಆಕಾಶದಷ್ಟು, ಆಳ ಸಾಗರದಷ್ಟು, ಪ್ರಕಾಶ ಪ್ರಭಾಕರನಷ್ಟು! ಅಮಿತವಾದುದನ್ನು ತನ್ನ ಮಿತಶಕ್ತಿ

ಯಿಂದ ಗ್ರಹಿಸುವ ಪ್ರಯತ್ನಮಾಡುವ ಮಾನವ ವಂದ್ಯ. ಆದರೆ ಅವನಿಗೆ ಧರ್ಮದ ಕೇವಲ ಸ್ವರೂಪ (Absolute entity) ದೊರೆಯುವುದು ಕಷ್ಟ ಸಾಧ್ಯ. ಧರ್ಮದ ಒಂದಂಶವನ್ನು ಅವನು ಸಾಕ್ಷಾತ್ಕಾರಮಾಡಿಕೊಂಡು, ಅದರ ವಿಶ್ವರೂಪವನ್ನು ತನ್ನ ತಪಃಶಕ್ತಿಯಿಂದ ಕಾಣುತ್ತಾನೆ. ೨) ಶಿವಗಂಗೆ ಬೆಟ್ಟ ನಾಲ್ಕು ನಿಟ್ಟಿನಿಂದ ನಾಲ್ಕು ವಿಧವಾಗಿ ಕಾಣುತ್ತದೆ. ಲಿಂಗ, ಸರ್ಪ, ಬಸವಣ್ಣ, ಗಣಪತಿ. ಒಂದು ಕಡೆಯಿಂದ ನೋಡಿದವನು ಉಳಿದ ಕಡೆ ಕಾಣುವ ನೋಟ ಮಿಥ್ಯವೆಂದು ಹೇಳುವುದು ಸತ್ಯದ ಆಭಾಸ. ನಾಲ್ಕು ರೂಪದಲ್ಲಿ ಪ್ರಕಟವಾಗುವ ಬೆಟ್ಟ ಒಂದೇ ಘನೀಭೂತ ವಸ್ತುವಿನ ವಿವಿಧ ಪ್ರಕಾರಗಳಾಗಿವೆ. ನೋಟ ನಾಲ್ಕಾದರೂ ಇರುವ ವಸ್ತುವೊಂದೇ. ಮುಪ್ಪಿನ ಷಡಕ್ಷರಿ ಹೇಳುವಂತೆ

ಅವರವರ ದರುಶನಕೆ
ಅವರವರ ವೇಷದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ ||

ಅವರವರ ಭಾವಕ್ಕೆ
ಅವರವರ ಪೂಜೆಗಂ
ಅವರವರಿಗೆಲ್ಲ ದೇವ ನೀನೊಬ್ಬನೆ ||

ಹೋರಾಟವಿಕ್ಕಿಸಲು
ಬೇರಾದೆಯಲ್ಲದೆ
ಬೇರುಂಟೆ ಜಗದೊಳಗೆ ಎಲೆ ದೇವನೆ ||

ಉಪನಿಷತ್ತಿನ 'ಸರ್ವಂ ಖಲ್ವಿದಂ ಬ್ರಹ್ಮ' ಮಹಾವಾಣಿಯ ಪ್ರತಿಸ್ಪಂದನ ನಮಗೆ ಭಾರತದಲ್ಲಿ ೧೯ನೆಯ ಶತಮಾನದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರಿಂದ ಕೇಳಿ ಬರುತ್ತದೆ; ಉಪನಿಷತ್ ಜೀವನದ ಉದಾತ್ತವೃತ್ತಿ ಪರಮಹಂಸರ ಜೀವನದಲ್ಲಿ ಸಾಕಾರಗೊಂಡಿದೆ. ಧರ್ಮದ ವಿಶ್ವವ್ಯಾಪ್ತಿಯನ್ನು

ಈ ಮಧ್ಯೆ ಕಂಡವರು ತಮ್ಮ ಆಚಾರ, ವಿಚಾರಗಳ ಮೂಸೆಯಲ್ಲಿ ಧರ್ಮವನ್ನು ಎರಕ ಹುಯ್ಯಲೆತ್ನಿಸಿದರು. ಇದರಿಂದಾಗಿ ಧರ್ಮ ತನ್ನ 'ಸಾಗರೋಪಮ' ವ್ಯಾಪ್ತಿಯನ್ನು ಕಳೆದುಕೊಂಡು ಕಿರುಗಾಲುವೆ ಯಾಯಿತು.

ಭಾರತವರ್ಷದಲ್ಲಿ ಧರ್ಮದ ಹೆಸರಿಗೆ ಬಂದಿರುವಷ್ಟು ಕಳಂಕ ಬೇರೆ ಯಾವದಕ್ಕೂ ಬಂದಿಲ್ಲವೆಂದರೆ ತಪ್ಪಾಗದು. ಇದು ಧರ್ಮದ ದೋಷವಲ್ಲ – ಧರ್ಮವನ್ನು ಸ್ವಾರ್ಥಕ್ಕೆ ಅಳವಡಿಸಿಕೊಂಡ ಲೋಗರ ದೋಷ. ಮತ, ಮಠಗಳ ವ್ಯಾಪ್ತಿಯಿಂದ ಧರ್ಮ ಹಿಂಬಾಗಿಲಿನಲ್ಲಿ ಓಡಿಹೋಗಬೇಕಾಯಿತು. ಭಗವಂತನನ್ನು ಭದ್ರಪೀಠದಿಂದ ನೆಲಕ್ಕುರುಳಿಸಿದ ಮಾನವ ತಾನೇ ಭಗವಂತ ನಾದ – ಭಗವಂತನಾದೆನೆಂದು ಭಾವಿಸಿಕೊಂಡ. ಈ ನೂತನ ಭಗವಂತನಿಗೆ ವಜ್ರಖಚಿತ ಕಿರೀಟ, ಅಡ್ಡಪಲ್ಲಕ್ಕಿ, ಸುಂದರಿಯರ ಸೇವೆ, ರಸಖಾದ್ಯಗಳ ನೈವೇದ್ಯವಾರಂಭವಾಯಿತು. ತ್ಯಾಗದ ಮುಳ್ಳು ಹಾಸಿಗೆಗಿಂತ ಭೋಗದ ಹಂಸತೂಲಿಕಾತಲ್ಪ ನೂತನ ಭಗವಂತನಿಗೆ ಪ್ರಿಯವಾಗುತ್ತ ಬಂದಿತು. ಕಣ್ಣಿಗೆ ಕಾಣದ ಭಗವಂತನಿಗಿಂತಲೂ, ಕಣ್ಣಿಗೆ ಕಾಣುವ ಈ ಕೃತಕ ಭಗವಂತ ದೊಡ್ಡವನೆಂಬ ಭಾವನೆ ಬೆಳೆಯಿತು. ಮಾನವನ ಆತ್ಮಪ್ರಗತಿ ಅಧಃಪಾತಾ ಳಕ್ಕೆ ಇಳಿಯಲಾರಂಭಿಸಿತು. ಧರ್ಮಪೀಠಗಳು ಪಾಪಕೂಪಗಳಾದವು; ಪೀಠಾಧಿಕಾರಿಗಳ ಹೇಯಬಾಳುವೆ ಧರ್ಮವನ್ನು ಅಣಕಿಸಿ, ವಿಕಟಾಟ್ಟ ಹಾಸದಿಂದ ನಗುವುದಕ್ಕಾರಂಭಿಸಿತು.

ಲೋಕದ ಅಜ್ಞರಿಗೆ ಮಾರ್ಗದರ್ಶನ ಮಾಡಬೇಕಾದ ಗುರುಸಂತಾನವೇ ಶನಿಸಂತಾನವಾದಾಗ ಶಿಷ್ಯರ ಗತಿಯೇನು? ಶಿಷ್ಯರ ರೀತಿ, ನೀತಿಗಳಲ್ಲಿ ಯಾವ ಋಜುತ್ವ, ಯಾವ ಸತ್ಯ, ಯಾವ ಸದ್ಶೀಲವನ್ನು ನಾವು ನಿರೀಕ್ಷಿಸ ಬಹುದು! ಇಷ್ಟೊಂದು ಧರ್ಮ – ಇಷ್ಟೊಂದು ಪೀಠಾಧಿಕಾರಿಗಳ ಪ್ರಭಾವ ದಲ್ಲಿರುವ ಭಾರತೀಯರ ನೀತಿಯ ಮಟ್ಟವೆಂಥದು? ನಿಂತರೆ ಕುಳಿತರೆ ಸುಳ್ಳು ಹೇಳುವ ಪ್ರವೃತ್ತಿ, ಲೋಕ ಹಾಳಾದರೂ ಚಿಂತೆಯಿಲ್ಲ – ನಾನೂ ನನ್ನವರೂ ಸುಖವಾಗಿರಬೇಕೆನ್ನುವ ಮನೋಭಾವ, ಏನಕೇನ ಪ್ರಕಾರೇಣ ಸಂಪತ್ತು ಸಂಗ್ರಹಿಸಿ ಜತೆಯ ಜೀವಿಗಳ ಮೇಲೆ ಪಾಳೆಯಗಾರ ಪ್ರಭುತ್ವ ಸ್ಥಾಪಿಸ

ಬೇಕೆಂಬ ರಾಕ್ಷಸೀ ಮಹತ್ವಾಕಾಂಕ್ಷೆಗಳಿಗೆ ಯಾವ ಧರ್ಮಗ್ರಂಥದ ಯಾವ ಅಧ್ಯಾಯದಲ್ಲಿ ಆಧಾರವಿದೆ ?

ನಾನು ಇದುವರೆಗೆ ಪ್ರಸ್ತಾಪಿಸಿರುವುದು ಹಳೆಯ ಧರ್ಮಪೀಠಗಳ ವಿಷಯವಾಯಿತು. ಭಾರತವರ್ಷದಲ್ಲಿ ಧಾರ್ಮಿಕ ನವೋದಯವನ್ನು ಹದಿನೆಂಟನೆಯ ಶತಮಾನದಲ್ಲಿ ರಾಜಾ ರಾಮಮೋಹನರಾಯರು ಆರಂಭಿಸಿದ ಮೇಲೆ ಹೊಸಹೊಸ ಧರ್ಮಪೀಠಗಳು ಹುಟ್ಟಿಕೊಂಡವು. ಆದರೆ ಆಚಾರ ಬದಲಾಯಿಸಿದರೂ ವಿಚಾರ ಬದಲಾಯಿಸಲಿಲ್ಲ. ಪ್ರಾಚೀನ ಪೀಠಗಳ ಗುರು ಕಾವೀ ಉಡುಪು ಧರಿಸುತ್ತಿದ್ದರೆ ಅರ್ವಾಚೀನ ಪೀಠಗಳ ಗುರು ಖಾದಿ ಉಡುಪು ಧರಿಸಲಾರಂಭಿಸಿದ. ಪ್ರಾಚೀನ ಪೀಠಗಳ ಗುರು ಸಂಸ್ಕೃತದಲ್ಲಿಯೋ, ಕನ್ನಡದಲ್ಲಿಯೋ ಶಿಷ್ಯಕೋಟಿಗೆ ಉಪದೇಶಮಾಡುತ್ತಿದ್ದರೆ ಅರ್ವಾಚೀನ ಪೀಠಗಳ ಗುರು ಇಂಗ್ಲಿಷಿನಲ್ಲಿ ಉಪದೇಶ ಮಾಡುವುದಕ್ಕಾರಂಭಿಸಿದ. ಪ್ರಾಚೀನ ಪೀಠಗಳ ಶಿಷ್ಯ ತಲೆಬೋಳಿಸಿಕೊಂಡು ಹಣೆಯ ಮೇಲೆ ವಿಭೂತಿ ಧರಿಸುತ್ತಿದ್ದರೆ ಅರ್ವಾಚೀನ ಪೀಠಗಳ ಶಿಷ್ಯ ನರ್ತಕರಂತೆ ನೀಳವಾದ ಕೂದಲುಬಿಟ್ಟು, ಹಣೆಗೆ ಕುಂಕುಮ ಧರಿಸಲಾರಂಭಿಸಿದ. ಹಳೆಯ ಹೆಂಡಕ್ಕೆ ಹೊಸ ಮಡಿಕೆ ಸಿಕ್ಕಿತಷ್ಟೇ – ಹೆಂಡ ತನ್ನ ದುರ್ನಾತ ಬಿಡಲಿಲ್ಲ ! ! ಹಿಂದೆ ಶಿಷ್ಯನ ಮೈಮೇಲೆ ರೇಷ್ಮೆವಸ್ತ್ರವಿರುತ್ತಿದ್ದರೆ ಈಗ ಚೆನ್ನಾಗಿ ಚೆಲುವೆಮಾಡಿದ ಜರತಾರಿ ವಸ್ತ್ರವಿರುತ್ತದೆ. ಆದರೆ ಮನೋಭಾವ ಸಾಸವೆ ಕಾಳಿನಷ್ಟು ವ್ಯತ್ಯಾಸವಾಗಲಿಲ್ಲ !

ಧರ್ಮಾಭಿಮಾನಿಗಳ ಸುಲಿಗೆಗೆ ಹೊರಟಿರುವ ಮಠ, ಪೀಠ, ಆಶ್ರಮಗಳನ್ನು ಹೀಗೆ ವಿಭಾಗಿಸಬಹುದು : ೧) ಯೋಗ್ಯ ಗುರು – ಅಯೋಗ್ಯ ಆಡಳಿತವರ್ಗ. ಆಡಳಿತವರ್ಗದ ಕೈಗೊಂಬೆಯಾಗಿ ಗುರು ಸಂಸ್ಥೆಯಲ್ಲಿ ನಡೆಯುವ ಅನಾಚಾರ ತಡೆಗಟ್ಟಲು ದುರ್ಬಲನಾಗಿರುತ್ತಾನೆ. ೨) ಅಯೋಗ್ಯ ಗುರು – ಯೋಗ್ಯ ಶಿಷ್ಯರು. ಅರಿಯದ ಶಿಷ್ಯರ ಅಜ್ಞಾನವನ್ನು ದುರುಪಯೋಗಪಡಿಸಿಕೊಂಡು ಗುರು ತನ್ನ ವಿಲಾಸ ವೈಭವ ನಡೆಸಿರುತ್ತಾನೆ. ೩) ಅಯೋಗ್ಯ ಗುರು – ಅಯೋಗ್ಯ ಶಿಷ್ಯವರ್ಗ. ಇದು ವಿಷಚಕ್ರದ ಪರಾಕಾಷ್ಠದೆಸೆ.

ಪ್ರಕೃತ ನಡೆಯುತ್ತಿರುವ ಪ್ರತಿಯೊಂದು ಧರ್ಮ ಸಂಸ್ಥೆಯೂ ಅಯೋಗ್ಯವಾಗಿದೆಯೆಂದು ನಾನು ಹೇಳಬಯಸುವುದಿಲ್ಲ. ಅಲ್ಲಿ ಇಲ್ಲಿ, ಧರ್ಮದ ದಂಡಕಾರಣ್ಯದಲ್ಲಿ ಒಬ್ಬಿಬ್ಬ ಸ್ಥಿತಪ್ರಜ್ಞರಾದ ಧರ್ಮಗುರುಗಳು ಮಿಂಚುಬಳ್ಳಿಗಳಂತೆ ಪ್ರಕಾಶಿಸುತ್ತಾರೆ. ಆದರೆ ತಿಮಿರಾಂಧಕಾರ ಹಬ್ಬಿರುವಾಗ, ಆದ್ಯ ತತ್ತ್ವಗಳೆಲ್ಲಾ ವಿರೂಪಗೊಂಡು ತಾನೇತಾನಾಗಿ ನಿಂತಿರುವಾಗ ಈ ವಿರಳರ ಕಡೆ ಯಾರ ಲಕ್ಷ್ಯ ಹೋಗುತ್ತದೆ. ಆದರೆ ಯೋಗ್ಯತೆಯ ಪ್ರಶಂಸನಾಪತ್ರವನ್ನು ಬಹು ಸಂಸ್ಥೆಗಳಿಗೆ ಕೊಡಲು ಸಾಧ್ಯವಿಲ್ಲವೆಂಬುದು ಸ್ವತಃಸ್ಸಿದ್ಧವಾಗಿದೆ.

'ಅರುಳು ಮರುಳು' ಕಾದಂಬರಿಯಲ್ಲಿ ನಾನು ಮೊದಲನೆಯ ವರ್ಗದ ಚರಿತ್ರೆ ಬರೆಯಲೆತ್ನಿಸಿದ್ದೇನೆ. ಇದರಲ್ಲಿ ನಾನು ಕಾಣಿಸಿರುವ ಅನೇಕ ವಿಷಯಗಳು ಹಲವಾರು ಧರ್ಮಸಂಸ್ಥೆ, ಆಶ್ರಮಗಳು, ಪೀಠಗಳ ವಸ್ತುಸ್ಥಿತಿಯನ್ನವಲಂಬಿಸಿದುದಾಗಿವೆ. ಕಲೆಯ ಕಟ್ಟಡ ನನ್ನದಾದರೂ ಸತ್ಯದ ಸೋಪಾನ ವಸ್ತುಸ್ಥಿತಿಯದು. ಇಂಥ ಸಂಸ್ಥೆಗಳ ಬಗ್ಗೆ ಸತ್ಯಸಾಧಕನಿಗೆ ಲವಲೇಶವಾದ ಭಕ್ತಿಯಾಗಲಿ ವಿಶ್ವಾಸವಾಗಲಿ ಕನಿಕರವಾಗಲಿ ಇರುವುದು ಸಾಧ್ಯವಿಲ್ಲ. ಪುಂಡು ಅರಸರ ಪ್ರಭಾವವನ್ನು ಅಳಿಸಿ ಭಾರತದ ಸ್ವಾತಂತ್ರ್ಯವನ್ನು ಮಾನ್ಯ ವಲ್ಲಭಭಾಯಿ ಪಟೇಲರು ಸಂಘಟಿಸಿದಂತೆ, ಈ ಪುಂಡು ಸ್ವಾಮಿ, ಸನ್ಯಾಸಿಗಳು, ಮಠಾಧಿಪತಿಗಳು, ಪೀಠಾಧಿಕಾರಿಗಳ ಮಾರ್ಮಲೆತನ ನುಚ್ಚುನೂರು ಮಾಡಿ ಧರ್ಮದ ಮೇಲೆ ಮುಸುಗಿರುವ ಕಾಳ್ಗತ್ತಲೆಯನ್ನು ಪರಿಹರಿಸಲ್ಲ ಬಲ್ಲ ದಿವಾಕರನ ಬರುವನ್ನು ನಾವು ಎದುರು ನೋಡಬೇಕಾಗಿದೆ, ಹಾಗೆ ಬರಲಿರುವ ದಿವಾಕರ ವ್ಯಕ್ತಿಯಲ್ಲ – ಪ್ರವಾದಿಯಲ್ಲ – ದೇವದೂತನಲ್ಲ. ಮಾನವಾಂತರ್ಗತ ಸತ್ಯದ ಪ್ರಣವನಾದವೇ ಆ ಮಹಾಕೆಲಸ ಸಾಧಿಸಬೇಕಾಗಿದೆ. ಕಾರ್ಲೈಯಿಲ್, ನೀಷೆ, ಷಾ ನಿರೀಕ್ಷಿಸಿದ 'ಮಹಾಪುರುಷ'ನ ಬರುವು ಇಂದಿನ ಲೋಕಚಾರಿತ್ರ್ಯಕ್ಕೆ ಅಳವಡುವುದಿಲ್ಲ. ನಮಗೆ ಬೇಕಾದುದು ಒಬ್ಬ ಪ್ರವಾದಿಯಲ್ಲ – ಒಬ್ಬ ಮಹಾಪುರುಷನಲ್ಲ – ಒಬ್ಬ ಸೂಪರ್‌ಮ್ಯಾನ್ (Superman) ಅಲ್ಲ. ಪ್ರತಿಯೊಬ್ಬ ಮಾನವನಲ್ಲಿಯೂ ಸುಪ್ತವಾಗಿರುವ 'ಮಹಾಪುರುಷತ್ವ'ದ ಪ್ರಚೋದನೆ, ಪ್ರತಿಯೊಂದು ಜೀವದಲ್ಲಿಯೂ ಹುದುಗಿ

ಕುಳಿತಿರುವ ಜ್ಯೋತಿಯ ಪ್ರಕಾಶ. ಬರ್ಗಸನ್ ಹೇಳಿದಂತೆ ಮಾನವನ 'ಇಲಾನ್‌ವೈಟಲ್'ನ (Elan vital) ವಿಕಾಸ – ಪ್ರಕಾಶ.

ಧರ್ಮತತ್ತ್ವ ಚೆನ್ನಾಗಿ ಮನಗಾಣಬೇಕಾದರೆ ಅದರ ಬಗ್ಗೆ ಏಕಮೇವಾವ ದ್ವಿತೀಯವಾದ ನಿಷ್ಠೆಬೇಡವೇ ? ಒಂದರ ಜಾಡು ಹಿಡಿದು ಹೋಗುವವನು ಹಲವು ಹನ್ನೊಂದರ ಕಡೆ ಲಕ್ಷ್ಯಕೊಡುವುದು ಹೇಗೆ ಸಾಧ್ಯ ? ಈ ಪ್ರಶ್ನೆ ಕೇಳುವವರು ಧರ್ಮಕ್ಕೂ ಮತಕ್ಕೂ ಒಂದೇ ಅರ್ಥ ಕಲ್ಪಿಸುತ್ತಾರೆ. ಸಾಧಕನಲ್ಲಿ ನಿಷ್ಠೆ, ಚಿತ್ತೈಕಾಗ್ರತೆ, ಭಕ್ತಿ ಬೆಳೆಯಲು ಮತಗಳು ವಿವಿಧ ಆಚಾರಗಳನ್ನು ವಿಧಿಸಿರುತ್ತವೆ. ಒಂದು ಮತದ ಆಚಾರ, ಇನ್ನೊಂದು ಮತಕ್ಕೆ ಅನಾಚಾರವಾಗಬಹುದು. ಒಂದು ಮತದ ಪ್ರಕ್ರಿಯೆ ಇನ್ನೊಂದು ಮತಕ್ಕೆ ಅಸಹ್ಯವಾಗಬಹುದು. ಕೆಲವರಿಗೆ ಮಂಡೆ ಬೋಳಿಸಿಕೊಳ್ಳುವುದು ಆಚಾರ, ಕೆಲವರಿಗೆ ಶಿಖಿಬಿಡುವುದು ಆಚಾರ. ಕೆಲವರಿಗೆ ಯಜ್ಞೋಪವೀತ ಧರಿಸುವುದು ಆಚಾರ, ಕೆಲವರಿಗೆ ಲಿಂಗ ಧರಿಸುವುದು ಆಚಾರ. ಯಜ್ಞೋಪವೀತ ಧರಿಸುವವನೂ, ಲಿಂಗಧರಿಸುವವನೂ ಶ್ರದ್ಧಾಳುವಾಗಿ ಸತ್ಯಸಾಧಕನಾಗಿದ್ದಲ್ಲಿ ಅವನು ಅರಸುವುದು ಏನನ್ನು ? ಅದೇ ಸತ್ – ಚಿತ್ – ಆನಂದವನ್ನಲ್ಲವೇ ? ಯಜ್ಞೋಪವೀತದಲ್ಲಿಯಾಗಲಿ ಲಿಂಗದಲ್ಲಿಯಾಗಲಿ ಸಚ್ಚಿದಾನಂದ ಅಡಗಿ ಕುಳಿತಿದ್ದಾನೆ, ಅವುಗಳನ್ನು ಧರಿಸದವರು ದೈತ್ಯರು, ಭವಿಗಳು ಎಂದು ಹೇಳುವುದು ಅವಿದ್ಯೆಯ ಕುರುಹು. ಕ್ರಿಸ್ತ, ಮುಸಲ್ಮಾನರು ಯಜ್ಞೋಪವೀತವನ್ನೂ ಧರಿಸುವುದಿಲ್ಲ – ಲಿಂಗವನ್ನೂ ಧರಿಸುವುದಿಲ್ಲ. ಅವರೆಲ್ಲಾ ನಾಸ್ತಿಕರೇನು ? – ದೈತ್ಯರೇನು ? – ಪಾಖಂಡಿಗಳೇನು ? ಅನಾದ್ಯ ವಿಷಯಗಳಿಗೆ ನಾವು ಅನವಶ್ಯಕ ಪ್ರಾಶಸ್ತ್ಯಕೊಟ್ಟು ಆದ್ಯ ವಿಷಯಗಳ ಮಾರಣಹೋಮ ಮಾಡುತ್ತಿದ್ದೇವೆ. ಇತರರಿಗೆ ಅಹಿತವಾಗದ ಯಾವ ಆಚಾರ ಯಾರು ಆಚರಿಸಿದರೂ ನಾವು ಸಿಡಿಮಿಡಿಗೊಳ್ಳಬೇಕಾದ ಅಗತ್ಯವಿಲ್ಲ. ಧರ್ಮದ ಹೆಸರಿನಲ್ಲಿ ಲೋಕಕಂಟಕವಾದ ಪ್ರಾಣಿಬಲಿ, ನರಮೇಧ, ಸತಿ ಮೊದಲಾದ ಆಚಾರಗಳು ಬೆಳೆದಾಗ ಮಾತ್ರ ಸಮಾಜ ಹಿತರಕ್ಷಣೆಯ ದೃಷ್ಟಿಯಿಂದ ನಾವು ಪ್ರತಿರೋಧ ಸೂಚಿಸಬೇಕಾಗುತ್ತದೆ. ಉಳಿದ ವಿಷಯ ಗೌಣ. ತವಡಿಗೆ ಹೊಡೆದಾಡುತ್ತ ಕಾಳನ್ನು ತೂರುವುದು ಬೇಡ.

ಧಾರ್ಮಿಕ ಸಂಸ್ಥೆಗಳಲ್ಲಿ ನಡೆಯುತ್ತಿರುವ ಅತ್ಯಾಚಾರವನ್ನು ನಾನು ಕೇವಲ ನೈತಿಕ, ಆಧ್ಯಾತ್ಮಿಕ ದೃಷ್ಟಿಯಿಂದಲೇ ನೋಡುತ್ತಿಲ್ಲ. ಇದಕ್ಕೆ ಪ್ರಬಲವಾದ ಆರ್ಥಿಕಮುಖವೂ ಇದೆ ಈ ಸಂಸ್ಥೆಗಳು ದೊಡ್ಡ ಸುಲಿಗೆಯ ಕೇಂದ್ರಗಳಾಗಿವೆ – ಅನೀತಿಯುತ ಅರ್ಥಸಂಗ್ರಹದ ಆಗರಗಳಾಗಿವೆ. ಭಕ್ತರನ್ನು ಹೆದರಿಸಿ, ಬೆದರಿಸಿ ಹಣ ಸಂಗ್ರಹಿಸುವುದರ ಜತೆಗೆ, ಸ್ವಾಮಿಗಳು ದೊಡ್ಡ ದೊಡ್ಡ ಲೇವಾದೇವಿಗಾರರು, ಬಂಡವಾಳಗಾರರು, ಕೈಗಾರಿಕೆಗಾರರೂ ಆಗಿದ್ದಾರೆ. ಸಾವಿರಾರು ಎಕರೆ ಹೊಲ ಗದ್ದೆ ತೋಟ ಅವರ ಯಾಜಮಾನ್ಯಕ್ಕೆ ಒಳಪಟ್ಟಿದೆ. ಸಾರ್ವಜನಿಕ ಸಂಪತ್ತು ಇಂತು ಒಬ್ಬ ವ್ಯಕ್ತಿಯ, ಅಥವಾ ಕೆಲವು ವ್ಯಕ್ತಿಗಳ ವಿಲಾಸ ವೈಭವಕ್ಕೆ ವಿನಿಯೋಗವಾಗುವುದು ಎಂಥ ನಾಚಿಗೆಗೇಡಿನ ಪ್ರಸಂಗ. ಜ್ಞಾನ ಪ್ರಸಾರಕ್ಕೆ ಕುರುಡು ಕವಡೆಕೊಡದ ಈ ಸ್ವಾಮಿಗಳು ಒಣ ಪ್ರತಾಪ ಪ್ರತಿಷ್ಠೆಯ ಸ್ಥಾಪನೆಗೆ ಲಕ್ಷಾಂತರ ರೂಪಾಯಿಗಳನ್ನು ಕೋರ್ಟು ಕಛೇರಿಗಳಿಗೆ ತೆರುತ್ತಾರೆ. ಒಬ್ಬ ಕವಿಯನ್ನು ಸಾಕಲು ಯೋಗ್ಯತೆಯಿಲ್ಲದ ಈ ಪೀಠಗಳು ನೂರಾರು ಕೀಳು ಲೇಖಕರಿಗೆ ಪ್ರೋತ್ಸಾಹವಿತ್ತು ಅವರಿಂದ ಪರನಿಂದೆಯ ಹೀನ ಸಾಹಿತ್ಯ ನಿರ್ಮಾಣ ಮಾಡಿಸುತ್ತಾರೆ. ಭಾರತೀಯ ಸಮಾಜಕ್ಕೆ ಮಾರಿಕೋಪದ್ರವದಂತೆ ಅಂಟಿರುವ ಈ ಧರ್ಮವ್ಯಾಪಾರಿಗಳ ಶಾಸನವಾದ ಹೊರತು ಭಾರತೀಯರ ಜೀವನ ಪರಿಶುದ್ಧವಾಗುವುದಿಲ್ಲ – ಸಮರಸವಾಗುವುದಿಲ್ಲ.

'ಅರುಳು ಮರುಳು' ಕಾದಂಬರಿಯಲ್ಲಿ, ಕಾದಂಬರಿ ಕಲೆಯ ವ್ಯಾಪ್ತಿಯನ್ನು ನಾನು ವಿಸ್ತರಿಸಲೆತ್ನಿಸಿದ್ದೇನೆ. ಧರ್ಮದ ವಿಗಡಚಿತ್ರ ಕೊಡುವಲ್ಲಿ ಅದರ ನಿಜಸ್ವರೂಪದ ಚಿತ್ರವನ್ನೂ ಕೊಡಲು ಪ್ರಯತ್ನಿಸಿದ್ದೇನೆ. ಜಿಜ್ಞಾಸುಗಳ ಮನಸ್ಸಿನಲ್ಲಾಗುವ ತೊಳಲಾಟ, ಏಳುವ ಸಂದೇಹಗಳು, ಕೆರಳುವ ಪ್ರಶ್ನೆಗಳನ್ನು ಸೂಚಿಸಿದ್ದೇನೆ. ಅಲ್ಲಲ್ಲಿ ಗೀತೆ, ಉಪನಿಷತ್ತುಗಳಿಂದ ಉತ್ತಮ ವಾಕ್ಯಗಳನ್ನೆತ್ತಿ ಉದ್ಧರಿಸಿದ್ದೇನೆ. ಈ ವ್ಯಾಜದಲ್ಲಿಯಾದರೂ ಓದುಗರು ಗೀತೋಪನಿಷತ್ತುಗಳ ನಿತ್ಯಸತ್ಯದ ಕಡೆಗೆ ಲಕ್ಷ್ಯಕೊಡಲಿ ಎನ್ನುವುದೇ ನನ್ನ ಉದ್ದೇಶ.

ಧರ್ಮ, ಧರ್ಮವಿಚಾರ ಕೇವಲ ಭಾರತೀಯರ ಸೊತ್ತೆಂಬ ಮೌಢ್ಯ, ನಮ್ಮಲ್ಲಿ ವ್ಯಾಪಿಸಿದೆ. ಉನ್ನತ ವಿಚಾರಗಳ ಚಿಂತನೆ, ಉದ್ಬೋಧ ವಿಷಯಗಳ

ಪ್ರಕಟನೆ ಯಾವ ವ್ಯಕ್ತಿ, ಸಂಸ್ಥೆ, ದೇಶ, ಭಾಷೆಯ ಸೊತ್ತೂ ಅಲ್ಲ. ಸಾಧಕರ ಸರ್ವಸಮಾನಲೋಕದಲ್ಲಿ ಇಂಥ ಭಿನ್ನಭೇದಗಳಿಗೆ ಅವಕಾಶವಿಲ್ಲ. ಶ್ರೀರಾಮಕೃಷ್ಣ, ಅಲ್‌ಹಲ್ಲಾಜ್ ಮನ್‌ಸೂರ್, ಸೇಂಟ್ ಫ್ರಾನ್ಸಿಸ್ ಇವರ ಭಾವಮೈತ್ರಿಯನ್ನು ಸಾಧಕ ನೋಡಬಲ್ಲ. ವಿಶ್ವತೋಮುಖವಾದ ಮೈತ್ರಿಯ ಕಡೆಗೆ 'ಅರುಳು ಮರುಳು' ಓದುಗರ ಲಕ್ಷ್ಯ ಎಳೆಯುತ್ತದೆ. ಸ್ಕಿನ್ನರ್, ಎಮಿಲಿಯಂಥ ವ್ಯಕ್ತಿಗಳು ಯಾವ ನಾಡಿನವರಾದರೇನು – ಯಾವ ಭಾಷೆ ಮಾತನಾಡುವವರಾದರೇನು – ಯಾವ ಆಚಾರ ವಿಚಾರವನ್ನನುಸರಿಸುವುದಾದರೇನು – ಅವರು ಲೋಕಪೂಜ್ಯರು. ಅನಂತ ಸತ್ಯದ ವಿಶ್ವವ್ಯಾಪಕತ್ವದ ಕಡೆ ಓದುಗರ ಗಮನವನ್ನೆಳೆಯುವ ನನ್ನ ಪ್ರಯತ್ನವನ್ನು 'ಅರುಳು ಮರುಳು' ಕಾದಂಬರಿಯಲ್ಲಿಯೂ ಗ್ರಹಿಸಬಹುದು. ಉದ್ದೇಶ ಸಫಲವಾಗದಿದ್ದರೆ ಅದು ಸತ್ಯದ ಕೊರತೆಯಲ್ಲ – ನನ್ನ ದೌರ್ಬಲ್ಯದ ಚಿಹ್ನೆ.

ನನ್ನ ಸಮಸ್ಯಾತ್ಮಕ ಕಾಂದಬರಿಗಳನ್ನು ಕುರಿತು ಓದುಗರು ವಿಮರ್ಶಕರು ಕೆಲವು ಭಿನ್ನಾಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. 'ಅರುಳು ಮರುಳು' ಕಾದಂಬರಿಯಲ್ಲಿಯೂ ಭಿನ್ನಾಭಿಪ್ರಾಯಕ್ಕೆ ಸಾಕಷ್ಟು ಅವಕಾಶವಿದೆ. ಕಾದಂಬರಿಯ ತಂತ್ರ, ಸಮಸ್ಯೆಯ ವಿವಿಧ ಮುಖಗಳನ್ನು ಒಂದೇ ನಿಟ್ಟಿನಲ್ಲಿ ನೋಡಲು ಅವಕಾಶಕೊಡುವುದಿಲ್ಲವೆಂಬುದನ್ನು ಓದುಗರು ಮರೆಯಬಾರದು. ಓದುಗರ ವಿವಿಧ ದೃಷ್ಟಿಗಳ ಬಗ್ಗೆಯೂ ಲೇಖಕ ವಿಚಾರಮಾಡಿರುತ್ತಾನೆ. ಎಲ್ಲವನ್ನೂ ಅವನು ನೋಡಿದರೂ ತನಗೆ ಬೇಕಾದುದನ್ನು ಆಯ್ದುಕೊಳ್ಳುವ ಅಧಿಕಾರ ಪಡೆದಿರುತ್ತಾನೆ. ಕಲೆಯ ರಹಸ್ಯ ಹುದುಗಿರುವುದು ಆಯ್ಕೆಯಲ್ಲಲ್ಲವೇ ?

'ಅರುಳು ಮರುಳು' ಕಾದಂಬರಿಯಲ್ಲಿ ಉದ್ಧರಿತವಾಗಿರುವ ಗೀತೋಪನಿಷತ್ತುಗಳ ಮಂತ್ರ, ಮಂತ್ರಾರ್ಥಕ್ಕೆ ಲೇಖಕ ಕೀರ್ತಿಶೇಷ ಹೊಸಕೆರೆ ಚಿದಂಬರಯ್ಯನವರ 'ಗೀತೆಯ ಕೈಗನ್ನಡಿ' ಗ್ರಂಥದಿಂದಲೂ, ಶ್ರೀ ರಂ. ರಾ. ದಿವಾಕರವರ 'ಉಪನಿಷದ್ರಹಸ್ಯ' ಮತ್ತು 'ಕನ್ನಡ ಉಪನಿಷತ್ಪ್ರಕಾಶ' (ಭಾಗ ೧. ೨) ಗ್ರಂಥಗಳಿಂದಲೂ, ಹ್ಯೂಮ್, ಡಾಯಸನ್, ರೋಯರ್, ರಾಧಾಕೃಷ್ಣನ್, ಟಿ. ಎಂ. ಪಿ. ಮಹದೇವನ್ ಇವರ ಉಪನಿಷತ್ ಗ್ರಂಥಗಳಿಂದಲೂ, ಸ್ವಾಮಿ ಸ್ವರೂಪಾನಂದ, ಅರವಿಂದಯೋಗಿಗಳು,

ರಾಧಾಕೃಷ್ಣನ್, ಕ್ರಿಸ್ಟೋಫರ್ ಈಷರ್‌ವುಡ್, ಇವರ ಗೀತಾಗ್ರಂಥಗಳಿಂದಲೂ ವಿಶೇಷ ನೆರವು ಪಡೆದಿದ್ದಾನೆ. ಗುರುವರ್ಯ ಸ್ವಾಮಿ ವಿವೇಕಾನಂದರ ಗ್ರಂಥಗಳು ಲೇಖಕನಿಗೆ ಸದಾ ದಾರಿ ತೋರುತ್ತಿವೆ. ಈ ಮಾನ್ಯ ಲೇಖಕರಿಗೆಲ್ಲಾ ಲೇಖಕ, ತನ್ನ ಹೃತ್ಪೂರ್ವಕ ಕೃತಜ್ಞತೆ ಅರ್ಪಿಸುತ್ತಾನೆ.

ಈ ಕಾದಂಬರಿಯನ್ನು ಪ್ರಕಟಿಸಿದ ಮೆಸರ್ಸ್ ಆನಂದ್ ಬ್ರದರ್ಸ್ ಕಂಪೆನಿಯವರಿಗೂ, ಅಂದವಾಗಿ ಮುದ್ರಿಸಿಕೊಟ್ಟಿರುವ ಶ್ರೀ ಸತ್ಯನಾರಾಯಣ ಪ್ರೆಸ್ಸಿನ ಒಡೆಯರಾದ ಶ್ರೀ ವಿ. ರಾಮಯ್ಯನವರಿಗೂ ಲೇಖಕನ ವಿಶ್ವಾಸ ಸಲ್ಲುತ್ತದೆ.

"ಅನ್ನಪೂರ್ಣ"
ವಿಶ್ವೇಶ್ವರಪುರಂ, ಬೆಂಗಳೂರು ೨.
೧೯–೪–೧೯೫೧

ಅ. ನ. ಕೃಷ್ಣರಾಯ

ಅರುಳು ಮರುಳು

ಅರುಳು ಮರುಳು

೧

ವಾಸೂಗೆ ಬಂದ ಪಾಡುಕಂಡು, ಅವನಿಗಿಂತ ಹೆಚ್ಚಾಗಿ ಪಶ್ಚಾತ್ತಾಪ ಪಟ್ಟವನು ರಾಮಸ್ವಾಮಿ. ವಾಸುವಿನ ಸರ್ವಸ್ವವೂ ನಾಶವಾಗಿತ್ತು; ಜೀವನವೇ ಕುಸಿದುಹೋಗಿತ್ತು. 'ಮುಂದೇನು ಗತಿ' ಎನ್ನುವ ಯೋಚನೆಗಿಂತಲೂ 'ಈ ಕುತ್ತಿನಿಂದ ಪಾರಾಗುವುದು ಹೇಗೆ' ಎನ್ನುವ ಸಮಸ್ಯೆ ಅವನನ್ನು ಕಬಳಿಸಿತ್ತು. ಆದರೂ ಅವನ ಮುಖದ ಮೇಲೆ ಚಿಂತೆಯ ನೇಗಿಲುಗೆರೆ ಮೂಡಿರಲಿಲ್ಲ. ಮಂದಹಾಸ ಅಳಿದಿರಲಿಲ್ಲ. 'ನೀನು ಡೆಸ್ಪರಾಡೋ (Desperado) ಕಣಯ್ಯಾ' ಎಂದ ರಾಮಸ್ವಾಮಿ; 'ನೀನು ಸ್ಥಿತಪ್ರಜ್ಞ ಕಣಯ್ಯಾ' ಎಂದಿದ್ದ ಶಂಕರಯ್ಯ. ತಾನು ಎರಡೂ ಅಲ್ಲವೆಂದು ತಿಳಿದಿದ್ದ ವಾಸು ಗೆಳೆಯರ ನಲ್ನುಡಿಗೆ ಮುಗುಳ್ನಗೆ ನಕ್ಕಿದ್ದ.

"ಮುಂದೇನು ಮಾಡುತ್ತೀ ವಾಸು."

ಎಂದು ರಾಮಸ್ವಾಮಿ ಕೇಳಿದ ಪ್ರಶ್ನೆಗೆ

"ಮುಂದಿನ ಯೋಚನೆ ಏತಕ್ಕಯ್ಯಾ: ಉಮರ್‌ಖಯ್ಯಂ ಹೇಳುವ ಹಾಗೆ 'ನಿನ್ನೆ ಸತ್ತಿಹುದಿನ್ನು, ನಾಳೆ ಹುಟ್ಟದೆಯಿಹುದು; ಇಂದು ಸೊಗ ವಿರಲವನು ನೆನೆದಳುವುದೇಕೆ?"

"ಇಂದೇನು ಸೊಗವಿದೆಯೋ – ಕಾರು ಕೂಡ ಅಟ್ಯಾಚ್ (attach) ಆಯಿತು."

"ಕಾರು ಹಳೆಯದಾಗಿತ್ತು – ತುಂಬ ತೊಂದರೆ ಕೊಡುತ್ತಿತ್ತು. ಯಾವನೋ ನಿರ್ಭಾಗ್ಯ ಅದನ್ನು ಕಟ್ಟಿಕೊಂಡ. ಹೋಗಲಿ ಬಿಡು. ಹಳೆಯದು ಹೋದರೆ ಹೊಸದು ಬರುತ್ತದೆ."

"ಈಗ ನಡೆದಿರುವ ರಾಮಾಯಣದಲ್ಲಿ ನೀನು ಈ ಊರಿನಲ್ಲಿ ಬಾಳ್ವೆ ಮಾಡುವುದು ಕಷ್ಟವಾಗುತ್ತದೆ."

"ಹಿಂದೂಸ್ಥಾನ ಬರಿದೇ—ಈ ಊರಲ್ಲದಿದ್ದರೆ ಇನ್ನೊಂದು ಊರಾಯಿತು. ಹುಲಿಗೇನು-ತನ್ನ ಕಾಡೂ ಒಂದೇ ಪರರ ಕಾಡೂ ಒಂದೇ."

ರಾಮುಸ್ವಾಮಿಯನ್ನು ಅಸ್ತವ್ಯಸ್ತಗೊಳಿಸಿದುದು ಮುಂದಿನೂರಿನ ಚಿಂತೆ. ವಾಸು ನಿರ್ದಾಕ್ಷಿಣ್ಯವಾಗಿ ಬೆಂಗಳೂರು ತ್ಯಜಿಸಿದರೆ ಮುಂದೆ ತನ್ನ ಗತಿ ಯೇನು ಎನ್ನುವ ಚಿಂತೆ ಅವನನ್ನು ಕಾಡತೊಡಗಿತು.

"ನಗುತ್ತಾ ಇರೋ ಮೂದೇವಿ. ನಿನ್ನ ಸೌತೇಕಾಯಿ ಮುಖ ನೋಡಲಾರೆ. ಒಂದಿಷ್ಟು ಕಾಫಿಯಾಧರೂ ಹುಯ್ದುಕೊಳ್ಳೋ"

ಎಂದು ಮೇಜಿನ ಮೇಲಿದ್ದ ಗೋಲ್ಡ್‌ಫ್ಲೇಕ್ ಸಿಗರೇಟ್ ಡಬ್ಬವನ್ನು ರಾಮುಸ್ವಾಮಿ ಮುಂದೆ ತಳ್ಳಿ, ವಾಸು ಹನುಮನನ್ನು ಕೂಗಿದ.

"ಹೋಟೆಲಿಗೆ ಹೋಗಿ ಎರಡು ಫಸ್ಟ್‌ಕ್ಲಾಸ್ ಕಾಫಿ, ಒಂದು ಹಾಲು ತೆಗೆದುಕೊಂಡು ಬಾ"

ಎಂದು ಹೇಳಿದ. ರಾಮುಸ್ವಾಮಿ ಅವನ ಮುಖನೋಡಿ

"ಹಾಲು ಕುಡಿಯುವ ಹಸುಮಗು ಇನ್ನೂ ಬಂದಿಲ್ಲವಲ್ಲಯ್ಯಾ."

"ಈಗ ಬರುತ್ತದೆ. ಅವನ ಪಾಲಿನದು ಅವನಿಗೆ ಮೀಸಲಾಗಿಟ್ಟಿರು ವುದು ನಮ್ಮ ಕರ್ತವ್ಯ."

ಹನುಮ ನಿಂತ ಸ್ಥಳದಿಂದ ಅಳ್ಳಾಡಿರಲಿಲ್ಲ. ವಾಸು ಕೆರಳಿ

"ಕಾಫೀಗೆ ಹೇಳೂಂತ ಹೇಳಲಿಲ್ಲವೇನೋ ?"

ಎಂದ. ಹನುಮ ತಲೆ ಕೆರೆದುಕೊಳ್ಳುತ್ತಾ

"ಹೋಟಲಯ್ಯ ಸಾಲಕೊಡಲ್ಲ ಎಂತಾ ಏಳನ್ನೆ ಬುದ್ಧಿ."

"ನೋಡಿದೆಯೇನಯ್ಯಾ. ಬಡದೇವರನ್ನ ಕಂಡರೆ ಬಿಲ್ವಪತ್ರೆ ಕೂಡ ಬುಸುಗುಟ್ಟುತ್ತದೆ ಎನ್ನುವುದು ಇವಕ್ಕೇ. ಬಾಂಡ್ಲೆ, ಸೌಟು ಹಿಡಿದು ಕೊಂಡು ಉಡುಪಿಯಿಂದ, ಸ್ವಾಮಿಗಳ ಪರಿವಾರದ ಜತೆ ಬೆಂಗಳೂರಿಗೆ ಬಂದ ನಾರ್ಣಾಚಾರಿ ಇವತ್ತು ಗಣ್ಯ ಗೃಹಸ್ಥ; ಸಾವಿರಾರು ರೂಪಾಯಿಗಳ ಯಜಮಾನ. ಅವನನ್ನು ಆ ಸ್ಥಾನಕ್ಕೇರಿಸಿದ ನಾನು ಭಿಕಾರಿ. ಆಚಾರಿ

ಕಾಲಚಕ್ರದ ಮಹಿಮೆ ಕಾಣ – ಬಡವಂ ಬಲ್ಲಿದನಾಗನೇ, ಎಳಗರುಂ ಎತ್ತಾಗದೇ ?"

"ಹೋಗಲಿ ಬಿಡಯ್ಯಾ – ಈಗ ಕಾಫಿ ಯಾರಿಗೆ ಬೇಕು."

"ಹಾಗಲ್ಲ ರಾಮು, ಇದು ಪ್ರೆಸ್ಟೀಜ್ (Presteige) ಪ್ರಶ್ನೆ – ಕಾಫಿ ಬೇಡದಿದ್ದರೂ ಅವನ ಹೋಟಲಿನಿಂದಲೇ ತರಿಸಿಕೊಂಡು ಕುಡಿಯಲೇ ಬೇಕು. ಹನುಮಾ, ಆಚಾರೀಗೆ ಎಷ್ಟು ಕೊಡಬೇಕೋ ?"

"ಅರವತ್ತು ರೂಪಾಯಿ ತನ್ಕಾ ಕೊಡಬೇಕು ನನ್ನೊಡೆಯಾ."

"ಹೋಗಿ ಅವನಿಗೆ ಹೇಳು. ಈಗ ಕಾಫಿ, ಹಾಲು ಕಳಿಸಿಕೊಟ್ಟು, ಮುಂದೆಯೂ ಹೇಳಿ ಕಳಿಸಿದಾಗ ಕಾಫಿ ತಿಂಡಿ ಸರಬರಾಯಿ ಮಾಡುತ್ತಾ ಇದ್ದರೆ ಹಿಂದಿನ ಬಾಕೀನ ಒಂದಲ್ಲ ಒಂದು ದಿನ ಯಜಮಾನರು ಕೊಡುತ್ತಾರೆ. ಇಲ್ಲದಿದ್ದರೆ ಅದಕ್ಕೆ ಸೊನ್ನೇಂತ ಹೇಳು. ಸಾವಿರಾರು ರೂಪಾಯಿ ಕೊಟ್ಟವರೇ ತೆಪ್ಪಗಿದ್ದಾರೆ – ಅರವತ್ತು ರೂಪಾಯಿನ ಈ ತಿರುಬೋಕಿ ಶಂಖ ಬಾರಿಸುತ್ತಾ ಇದ್ದಾನೆ."

ಹನುಮ ಅರೆಮನಸ್ಸಿನಿಂದ ನಿಂತಿದ್ದ ಜಾಗ ಬಿಟ್ಟು ಕದಲಿದ.

ಹನುಮ ಹೋದ ಸ್ವಲ್ಪ ಹೊತ್ತಿನಲ್ಲಿ ಶಂಕರಯ್ಯ ಧಾವತಿಗೊಂಡು ಏರುಬ್ಬಸಪಡುತ್ತಾ ಬಂದು ವಾಸುವಿನ ಮುಂದೆ ಕುಳಿತ. ಅವನ ಮೈ, ಮುಖ ಬೆವರೊಡೆದಿತ್ತು. ಬೆವರು ಒರಸಿಕೊಳ್ಳುತ್ತಾ

"ಕೆಟ್ಟಸುದ್ದಿ ಕೇಳಿದೆ, ನಿಜವೇ ವಾಸೂ."

"ಯಾರು ಸತ್ತರಪ್ಪಾ !"

"ಹಾಸ್ಯ ಸಾಕು. ಏನಾಯಿತು ಹೇಳೋ ಮಾರಾಯ. ಕಾರು, ಮನೆ ಎಲ್ಲಾ ಅಟ್ಯಾಚ್ ಆಯಿತಂತೆ! ನೀನು ಇನ್‌ಸಾಲ್ವೆನ್ಸಿ ಅರ್ಜಿ ಹಾಕಿದ್ದೀಯಂತೆ !"

"ಸತ್ಯ – ಸತ್ಯ – ಸರ್ವವೂ ಸತ್ಯ! ಕೋರ್ಟಿನವರಿಗೆ ನನ್ನ ಕಾರು ಮನೆಯ ಮೇಲಿರುವ ಅಟ್ಯಾಚ್‌ಮೆಂಟ್ (attachment) ನನ್ನ ಮೇಲೆ ಇಲ್ಲವಲ್ಲಾ – ಏನನ್ಯಾಯ."

"ಪ್ರಾಣ ಹೋಗುತ್ತಿದ್ದರೂ ನಿನ್ನ ಪರಿಹಾಸ್ಯಬಿಡಬೇಡ."

"ನಿಮ್ಮ ದುಃಖನೋಡಿ ನನಗೆ ಪರಿಹಾಸ್ಯವಾಗದೆ ಇನ್ನೇನಾಗಬೇಕು ಹೇಳು. 'ಕೊಟ್ಟ ದೇವರು ಕೊಂಡುಹೋದರೆ ಕುಟ್ಟಿಕೊಂಡು ಅಳುವು ದ್ಯಾಕೋ?' ನನ್ನದು ಯಾವದೋ ಅದು ನನ್ನಲ್ಲಿಯೇ ಇದೆ; ನನ್ನದು ಯಾವದಲ್ಲವೋ ಅದು ಕಂಡವರಿಗೆ ಸೇರಿದೆ."

"ನಿನ್ನದು ಯಾವದು?"

"ಸಾಹಸಪ್ರಿಯತೆ. ಸುಖದುಃಖಗಳೆರಡೂ ಒಂದೇ ಎಂದು ಭಾವಿಸುವ ಸ್ಥೈರ್ಯ."

"ಸಾಕ್ಷಾತ್ ಗೀತಾಚಾರ್ಯನೇ ಆಗಿಬಿಟ್ಟೆಯಲ್ಲಯ್ಯಾ."

"ನೋಡುತ್ತಾ ಇರು – ಒಂದು ದಿವಸ ಗೀತೆಗೆ ವ್ಯಾಖ್ಯಾನವನ್ನೂ ಬರೆದು ಬಿಡುತ್ತೇನೆ."

ಶಂಕರ ಗಂಭೀರವಾಗಿ ನಕ್ಕ; ರಾಮಸ್ವಾಮಿ ಗಹಗಹಿಸಿ ನಕ್ಕ.

ಹನುಮ ಕಾಫಿ, ಹಾಲು ತಂದುದನ್ನು ನೋಡಿ ರಾಮಸ್ವಾಮಿ ಬೆರಗಾಗಿ "ಕೊಟ್ಟನೇನೋ ಕಾಫಿಯನ್ನ" ಎಂದು ಕೇಳಿದ.

"ಬುದ್ಧ್ಯೋರ ರಾಮಬಾಣ ಎಸೆದೆ ಬುದ್ಧಿ – ನಾರ್ಣಾಚಾರಿ ಅತ್ತ ಗೋಂತ ಕೊಟ್ಟ."

"ನೀನು ನಾಷ್ಟಾಗೀಷ್ಟಾ ಮಾಡಿದೆಯೋ ಇಲ್ಲವೋ?"

ಎಂದು ವಾಸು ಕೇಳಿದ.

"ಗಲಾಸು ಕೊಟ್ಟುಬಿಟ್ಟು ತಿಂದುಕೊಂಡು ಬತ್ತೀನಿ ಬುದ್ಧಿ."

ಕಾಫಿ ಕುಡಿಯುತ್ತ ವಾಸು ಮುಖಮುದ್ರೆ ಗಂಭೀರವಾಯಿತು. ಶಂಕರನನ್ನು ನೋಡಿ

"ನನಗೊಂದಕ್ಕೇ ವ್ಯಸನ ಶಂಕರೂ. ನಿನ್ನ ಉಪನಿಷದ್ಭಾಷ್ಯ ಅಚ್ಚು ಹಾಕಿಸಿಕೊಡುತ್ತೇನೆಂದು ಹೇಳಿದ್ದೆ. ಮಾತಿಗೆ ತಪ್ಪಿದ ಹಾಗಾಯಿತು."

"ಇಂದಲ್ಲ ನಾಳೆಯಾಗುತ್ತೆ ಏನವಸರ. ನಿನ್ನದೇ ನಿನಗೆ ಸಾಕಾ ಗಿರುವಾಗ ನನ್ನ ಪುಸ್ತಕ ಬರಲಿಲ್ಲ ಎಂದು ಯಾವ ದೇವರು ಅಳುತ್ತವೆ."

"ಜೋಸಫ್ ಬರಲಿಲ್ಲವೇನೋ?"

"ಲಾಲನ್‌ದೇವನಹಳ್ಳೀಲಿ ಇವತ್ತು ಜಾತ್ರೆ. ನಾಳೆ ಬತ್ತೀನೀಂತ ಏಳವ್ನೆ."

ಹಸುನು ಗ್ಲಾಸುಗಳನ್ನು ತೆಗೆದುಕೊಂಡು ಹೋಗಲು ರಾಮಸ್ವಾಮಿ

"ಹನುಮ, ಜೋಸಫ್‌ನ ಏನುಮಾಡುತ್ತೀ ವಾಸು ?"

"ಮಾಡೋದೇನು ಇರುತ್ತಾರೆ – ಸಂಬಳಕ್ಕೋಸ್ಕರ ಗಲಾಟೆಮಾಡೋ ಆಸಾಮಿಗಳೇನಲ್ಲ. ಕೈಗೆ ಕಾಸು ಬಂದಾಗ ಸಂಬಳ ಕೊಟ್ಟರಾಯಿತು."

"ಕೈಯಲ್ಲಿ ದುಡ್ಡಿದ್ದಾಗ ನಿನಗೆ ಮೈಮೇಲೆ ಸ್ಮೃತಿಯೇ ತಪ್ಪಿ ಹೋಗಿರತ್ತಪ್ಪಾ."

"ಸ್ಪೆನ್ಸರ್ ಸಾಲ ಕೊಡೋತನಕ ಸ್ಮೃತಿ ವಿಷಯ ಯೋಚಿಸ ಬೇಕಾದದ್ದಿಲ್ಲ."

"ಇನ್ನಾದರೂ ನಿನ್ನ ವಿಷಯ ನೀನು ಯೋಚನೆಮಾಡುವು ದೊಳ್ಳೆಯದು ವಾಸು. ಕಳೆದಷ್ಟು ದಿವಸವೂ ಹೀಗೇ ಇದ್ದರೆ ಹೇಗೆ? ನಿನಗೆ ಶಕ್ತಿ ಇದೆ – ಯೋಗ್ಯತೆ ಇದೆ – ಆದರೆ............"

"ಬುದ್ಧಿ ಸ್ಥಿಮಿತವಿಲ್ಲ."

"ಹಾಗೆ ಹೇಳಲಾರೆ. ಒಂದು ವಿಷಯದಲ್ಲಿ ಸ್ಥಿಮಿತವಿಲ್ಲ."

"ನೋಡು ಶಂಕರೂ, ನನ್ನ ಜೀವನ ಅನಂತ ನೌಕಾಕ್ರೀಡನ. ಅದು ಭೂಮಿಯಲ್ಲಿ ಬೇರುಬಿಟ್ಟು ಬೆಳೆಯುವ ಮರವಲ್ಲ – ಸಮುದ್ರದ ಮೇಲೆ ಸದಾ ತೂಗಾಡುವ ಉಯ್ಯಾಲೆ. ಬಿರುಗಾಳಿ ಎದ್ದಿತು, ದೋಣಿ ಮಗುಚಿಕೊಳ್ಳು ತ್ತದಲ್ಲಾ ಎಂದು ನೀವು ಭಯಗ್ರಸ್ತರಾಗುವಿರಿ. ಅದೂ ನಿಜ! ಬಿರುಗಾಳಿಗೆ ದೋಣಿ ಮಗುಚಿಕೊಳ್ಳುತ್ತದೆ. ಆದರೆ ನೀವು ಎವೆಯಿಕ್ಕುವದರೊಳಗಾಗಿ ದೋಣಿ ಮತ್ತೆ ಪೂರ್ವಸ್ಥಿತಿಗೆ ಬಂದು ಪ್ರಯಾಣ ಸನ್ನದ್ಧವಾಗಿರುತ್ತದೆ."

"ನಿನ್ನ ದೋಣಿ ಮಗುಚಿಕೊಳ್ಳದೆ ಸದಾ ಪ್ರಯಾಣಮಾಡುತ್ತಿರ ಬೇಕೆಂದು ನನ್ನ ಆಶಯ."

"ಆಸೆಯೆಂಬ ಪಕ್ಷಿಗೆ ರೆಕ್ಕೆಯಿಲ್ಲದಿರುವುದೊಂದು ಕೊರತೆ."

ಯಾರೋ ಮಹಡಿಯ ಮೆಟ್ಟಲೇರಿ ಬರುವಂತೆ ಮೆಟ್ಟಲಿನ ಹಲಗೆಗಳು ಶಬ್ದಮಾಡಿದವು.

"ಯಾರೋ ಬರುತ್ತಿರುವಂತಿದೆ" ಎಂದ ಶಂಕರ.

“ಯಾರೂ ಅಲ್ಲ – ಪ್ರಮೀಳಾ ಇರಬಹುದು – ಕೂಡಿ ಪರವಾಯಿಲ್ಲ”
ಎಂದು ವಾಸು ಹೇಳಿದ.

ಧರಿಸಿದ್ದ ಹಿಮ್ಮಡಿಯೆತ್ತರದ ಷೂಸು ಆಯತಪ್ಪುವುದನ್ನೂ ಲೆಕ್ಕಿಸದೆ ಪ್ರಮೀಳಾ ಧಾವಿಸಿ ಬಂದಳು. ಅವಳ ಮುಖ ಕಂಡು ಶಂಕರ, ರಾಮಸ್ವಾಮಿ ಹೊರಡಲನುವಾದರು.

“ಚಿಂತೆಯಿಲ್ಲ ಕೂಡಿ”
ಎಂದು ವಾಸು ಉಪಚಾರ ಹೇಳಿದ.

“ಇಲ್ಲ – ನಮಗೆ ಸ್ವಲ್ಪ ಕೆಲಸವಿದೆ. ಬೆಳಿಗ್ಗೆ ಬರುತ್ತೇವೆ.”
ಎಂದು ಇಬ್ಬರೂ ಹೇಳಿದರು. ಪ್ರಮೀಳಾ ಅವರಿಬ್ಬರಿಗೂ ಕೈಮುಗಿದಳು. ರಾಮಸ್ವಾಮಿ, ಶಂಕರ ಅವಳಿಗೆ ಪ್ರತಿವಂದನೆ ಮಾಡಿ ಹೊರಟರು.

ಪ್ರಮೀಳಾ ಉಸಿರುಕಟ್ಟುವಂತೆ
“ಏನಾಯಿತೂಂದ್ರೆ- ನನಗೆ ಈಗ ತಾನೆ ತಿಳಿಯಿತು. ಮನೇನೂ ಅಟ್ಯಾಚ್ ಮಾಡಿದರಂತಲ್ಲಾ.”

“ಎಲ್ಲಾ ಕೊಚ್ಚಿಕೊಂಡು ಹೋಯಿತು ಪ್ರಮೀಳಾ.”

“ನನಗಾದರೂ ಹೇಳಬಾರದಾಗಿತ್ತೇ. ನಿಮ್ಮನ್ನ ನೋಡಿ ಒಂದು ವಾರವಾಯಿತಲ್ಲಾ.”

“ಈ ಹುಚ್ಚು ಹೊಳೆಗೆ ನಿನ್ನನ್ನೇಕೆ ಆಹುತಿಕೊಡಬೇಕೆಂದು ತಿಳಿಸಲಿಲ್ಲ.”

“ಬೆಳಿಗ್ಗೆ ಊಟಮಾಡಿದಿರಾ ?”

“ತಿಂಡಿ ಕಾಫಿಯಾಯಿತು.”

“ಏಳಿ – ಮನೆಗೆ ಹೋಗೋಣ.”

“ಈಗ ಏಕೆ ಬರಬೇಕು. ನಾಲ್ಕು ದಿವಸ ಬಿಟ್ಟು ಬರುತ್ತೇನೆ.”

“ಸುಖದಲ್ಲಿ ಮಾತ್ರ ನಾನು ನಿಮ್ಮವಳು – ಕಷ್ಟದಲ್ಲಿ ಅಲ್ಲವೋ ?”

“ನಾನು ಹಾಗೆ ಹೇಳಿದೆನೇ ?”

“ಈಗ ಬರುವುದಿಲ್ಲವೆಂದರೆ ಅದೇ ಅರ್ಥ ತಾನೆ !”

“ನಾನಿಂದು ನಿರ್ಗತಿಕ...........”

ಪ್ರಮಿಳಾ ಕಣ್ಣಲ್ಲಿ ಕೋಡಿ ಹರಿಯಿತು. ಅವಳ ಬಾಯಲ್ಲಿ ಮಾತು ಹೊರಡಲಿಲ್ಲ. ಹೊರಡಲನುವಾಗಿ ಎದ್ದುನಿಂತಳು. ವಾಸು, ಕೈಯಲ್ಲಿದ್ದ ಸಿಗರೇಟ್ ಮೂಲೆಗೊಗೆದು ಅವಳ ಸಮೀಪಕ್ಕೆ ಹೋಗಿ, ಕೂಡಿಸಿ, ತಾನು ಕುರ್ಚಿಯ ಕೈಮೇಲೆ ಕುಳಿತ.

ಪ್ರಮಿಳಾ ಅವನ ಎದೆಯ ಮೇಲೆ ಮುಖವಿಟ್ಟು ಬಿಕ್ಕಿಬಿಕ್ಕಿ ಅತ್ತಳು. ವಾಸು ಅವಳ ತಲೆ ನೇವರಿಸಿ, ಮುಂಗುರುಳು ತಿದ್ದಿದ.

"ಅಳುವುದಕ್ಕೇನಾಯಿತು, ಪ್ರಮಿಾ."

"ನಾನು ಹಣದಾಸೆಯಿಂದ ನಿಮ್ಮನ್ನು ಪ್ರೀತಿಸಲಿಲ್ಲ. ನಮ್ಮ ಸಂಬಂಧಕ್ಕೆ ಹಣದ ಕೆಸರನ್ನೇಕೆ ಹಚ್ಚುವಿರಿ. ನನಗೆ ಸಾವಿರಾರು ರೂಪಾಯಿ ಮಾಡಿಕೊಟ್ಟರಿ. ನಿಮಗಿಂತಲೂ ಹಣ ಹಿರಿದೇ ನನಗೆ. ನನ್ನ ಮನೆ ನಿಮ್ಮದಲ್ಲವೇ ? ನಾನು ಬೇರೆ ನೀವು ಬೇರೆ ಎಂದೇಕೆ ಭಾವಿಸುವಿರಿ."

"ಪುರುಷನ ಗರ್ವ ಹಾಗಾಡಿಸಿತು ಪ್ರಮಿಾ. ಕ್ಷಮಿಸು. ನಿನ್ನ ವಿಶ್ವಾಸಕ್ಕೆ ನಾನು ಎರಡು ಬಗೆಯುವುದಿಲ್ಲ."

"ಈಗ ನನ್ನ ಜತೆ ಬರುವಿರಷ್ಟೇ!"

"ಬರುತ್ತೇನೆ – ಸ್ವಲ್ಪ ಕಾಲ ತಡೆದು ಬರುತ್ತೇನೆ. ನೀನು ಮನೆಗೆ ಹೋಗು – ನಿನ್ನ ಹಿಂದೆಯೇ ಬರುತ್ತೇನೆ."

"ಸುಳ್ಳು."

"ಸತ್ಯವಾಗಿ ಬರುತ್ತೇನೆ"

ಎಂದು ಆಶ್ವಾಸನವಿತ್ತು ಪ್ರಮಿಳೆಯನ್ನು ಕಳುಹಿಸಿಕೊಟ್ಟ.

ಪ್ರಮಿಳೆಯನ್ನು ಕಳಿಸಿಕೊಟ್ಟು ತಾನೊಬ್ಬನೇ ಕಛೇರಿಯಲ್ಲಿ ಉಳಕೊಳ್ಳುವ ಪ್ರಮೇಯವೇನೂ ವಾಸುಗಿರಲಿಲ್ಲ. ಅವನು ಏಕಾಂಗಿಯಾಗಿ ಕುಳಿತು ಯೋಚಿಸಬೇಕಾಗಿತ್ತು. ಎದುರಿಗಿದ್ದ ಮೇಜಿನ ಮೇಲೆ ಎರಡು ಕಾಲುಗಳನ್ನೂ ಚಾಚಿ ಕುಳಿತು ಹನುಮನನ್ನು ಕರೆದು

"ಹೊರಗಿರೋ ಕಂಪೆನಿ ಬೋರ್ಡು ತಂದು ಒಳಗಿಡು"

ಎಂದು ಹೇಳಿದ. 'ಯಾಕ ಬುದ್ದಿ' ಎಂದು ಕೇಳಬೇಕೆಂದು ಹನುಮನಿಗೆ ಮನಸ್ಸಾಯಿತು. ಆದರೆ ಕೇಳುವುದಕ್ಕೆ ಧೈರ್ಯವಾಗಲಿಲ್ಲ. ಧಣಿ ಹೇಳಿದಂತೆ ಹೊರಗೆ ತೂಗುಹಾಕಿದ್ದ 'ಷಾಲಿಮಾರ್ ಇನ್‌ಷ್ಯೂರೆನ್ಸ್ ಕಂಪೆನಿ'ಯ

ಬೋರ್ಡನ್ನು ತಂದು ಒಳಗಿಟ್ಟ. ಬೋರ್ಡನ್ನು ಕೆಳಗಿಳಿಸುವಾಗ ಹನುಮನ ಕಣ್ಣಲ್ಲಿ ಧಾರೆಸುರಿಯಿತು.

ವಾಸು ಸ್ಮೃತಿಪಟಲದ ಮೇಲೆ ಅವನ ಇಡಿಯ ಜೀವನ ಹಾದು ಹೋಯಿತು. ತಾನು ಮನೆಬಿಟ್ಟು ಓಡಿಹೋದುದು – ಉತ್ತರ ಹಿಂದೂಸ್ಥಾನವನ್ನೆಲ್ಲಾ ಸುತ್ತಿಕೊಂಡು ಕಾಲಹಾಕಿದ್ದು – ಕೊನೆಗೆ ಷಾಲಿಮಾರ್ ಕಂಪೆನಿಯ ಏಜಂಟಾಗಿ ಕೆಲಸಮಾಡಿದ್ದು – ಅವನ ಕೆಲಸದ ದಕ್ಷತೆ ಕಂಡು ಬೆಂಗಳೂರು ಬ್ರ್ಯಾಂಚಿಗೆ ಕಂಪೆನಿಯವರು ಅವನನ್ನು ಚೀಫ್ ಆರ್ಗನೈಸರಾಗಿ ಕಳಿಸಿದ್ದು – ಬೆಂಗಳೂರು ಬ್ರ್ಯಾಂಚಿಗೆ ಅವನು ಹತ್ತು ಲಕ್ಷ ರೂಪಾಯಿ ವಿಮೆತಂದದ್ದು—

ಈ ಸಂದರ್ಭದಲ್ಲಿಯೇ ತನಗೂ ಪ್ರಮಿಳೆಗೂ ಆದ ಪರಿಚಯ ನೆನಪಿಗೆ ಬಂದಿತು. ಅವಳು ಇನ್ಷ್ಯೂರೆನ್ಸ್ ಕೆಲಸ ಕೈಗೊಂಡು ಎರಡು ಲಕ್ಷ ರೂಪಾಯಿ ವಿಮೆ ತಂದದ್ದು – ಪರಿಚಯ ಸ್ನೇಹವಾದದ್ದು – ಸ್ನೇಹ ಅನುರಾಗವಾಗಿ ಪರಿಣಮಿಸಿದ್ದು—

ಚೀಫ್ ಆರ್ಗನೈಸರಾಗಿ ತಾನು ನಡೆಸಿದ ವೈಭವ – ಆ ವೈಭವ ಕುಸಿದು ಬಿದ್ದದ್ದು – ಬಂದ ಹಣ ಬಂದಂತೆಯೇ ಮಾಯವಾಗಿ ತನ್ನನ್ನು ಸಾಲಗಾರನನ್ನಾಗಿ ಮಾಡಿದ್ದು—

ಲಾಹೋರಿನ ಹೆಡ್ ಆಫೀಸಿಗೆ ತನ್ನ ಮೇಲೆ ದೂರುಗಳು ಹೋದದ್ದು – ಇನ್‌ಸ್ಪೆಕ್ಟರ್ ತೇಕ್‌ಚಂದ್ ಬಂದು ಲೆಕ್ಕಪತ್ರ ನೋಡಿ ತನ್ನ ಕೆಲಸ ಕೊನೆಗಾಣಿಸಿದ್ದು—

ತೋಳ ಹಳ್ಳಕ್ಕೆ ಬಿತ್ತು – ಆಳಿಗೊಂದು ಕಲ್ಲು. ಸಾಲಗಾರರೆಲ್ಲಾ ಎದ್ದು ಕುಳಿತರು. ಸ್ಥಿರಚರ ಸ್ವತ್ತುಗಳು ಅಟ್ಯಾಚ್ ಆದವು – ಕೊನೆಗೆ ವಿಧಿಯಿಲ್ಲದೆ ತಾನು ಇನ್‌ಸಾಲ್ವೆನ್ಸಿ ತೆಗೆದುಕೊಳ್ಳಬೇಕಾಗಿ ಬಂದದ್ದು—

ಹೊತ್ತು ಹೋದುದರ ಪರಿವೆಯೇ ವಾಸುವಿಗಾಗಲಿಲ್ಲ. ಹನುಮ ಬಂದು

"ಬುದ್ದಿ" ಎಂದ.

"ಏನೋ ?"

"ಗಂಟೆ ಎಂಟು ಬಡೀತ್ರಲ್ಲಾ ನನ್ನೊಡೆಯಾ."

"ಆಗಲೇ ಎಂಟಾಯಿತೇ?—ಹನುಮಾ, ನಿನಗೆಷ್ಟೋ ಸಂಬಳ ಕೊಡುತ್ತಿದ್ದೆ."

"ಯಾಕ್ರಾ ಬುದ್ದಿ."

"ಕೇಳಿದ್ದಕ್ಕೆ ಉತ್ತರ ಹೇಳು. ಪಾಟಿಸವಾಲು ಮಾಡಬೇಡ."

"ಹದಿನೆಂಟು ಅಲ್ವರಾ ಬುದ್ದಿ."

"ನಾಳೆಯಿಂದ ನೀನು ಕೆಲಸಕ್ಕೆ ಬರಬೇಡ. ದೇವರು ಅನುಕೂಲ ಮಾಡಿದಾಗ ನಿನ್ನ ಕರಸಿಕೊಳ್ಳುತ್ತೇನೆ."

"ನಾನೇನ್ರಾ ಬುದ್ದಿ ಮಾಡಿದ್ದು ಅಪರಾಧಾನಾ."

"ನೀನು ಅಪರಾಧ ಮಾಡಲಿಲ್ಲವೋ ಮುಂಕುಮುಂಡೇದೇ. ನಿನಗೆ ಸಂಬಳ ಕೊಡೋ ಚೈತನ್ಯ ನನಗಿಲ್ಲ. ನಾನು ದಿವಾಳಿ ತೆಗೆದಿದ್ದೇನೆ. ನನ್ನ ಆಫೀಸು ಮುಚ್ಚಿಬಿಡಬೇಕಾಗಿದೆ."

"ನಿಮ್ಮ ತಾವ ಜೀತಮಾಡಿ ಇನ್ನೊಬ್ಬರ ತಾವ ಎಂಗ್ಹೋಗ್ಲಿ ಬುದ್ದಿ."

"ನನ್ನ ಜತೆ ಇದ್ದುಕೊಂಡು ಉಪವಾಸಾ ಸಾಯ್ತೀಯಾ."

"ಬುದ್ದ್ಯೋರ ದಯದಿಂದ ಎರಡು ಎಮ್ಮೆ ಮಾಡ್ಕೊಂಡಿನ್ನಿ. ಎಂಗೋ ದೇವರು ನಡಸ್ತಾನೆ. ನಿಮಗೆ ಅನ್ಕೂಲವಾದಾಗ ಸಂಬಳಕೊಡಿ ಬುದ್ದಿ–ಕೆಲಸ ಬಿಟ್ಟು ಓಗೂಂತ ಮಾತ್ರ ಅಪ್ಣೆಕೊಡಿಸ್ಬೇಡಿ."

"ನಿನ್ನಿಷ್ಟ–ನಿನ್ನ ಕರ್ಮಕ್ಕೆ ನಾನೇನು ಮಾಡಲಿ? ಜೋಸಫ್ ಏನುಮಾಡ್ತಾನಂತೆ."

"ಅವನೂ ಅದೇ ಏಳಿಓದ ಬುದ್ದಿ."

"ನಾನು ಪ್ರಮಿಳಾಳಮ್ಮನವರ ಮನೆಯಲ್ಲಿರುತ್ತೇನೆ. ಜೋಸಫ್ ಬಂದರೆ ಅಲ್ಲಿಗೆ ಬಂದು ನೋಡು ಎಂದು ಹೇಳು."

"ಈ ಆಫೀಸು ಖಾಲಿಮಾಡ್ಬೇಕಾ ಬುದ್ದಿ."

"ಆಫೀಸ್ ಬಿಟ್ಟರುಂಟೇ? ಷಾಲಿಮಾರ್ ಹೋದರೇನಾಯಿತು. ಪಂಚಾಂಗ ಹೋದರೆ ನಕ್ಷತ್ರ ಹೋಗುತ್ತದೇನೋ? ಅದರ ಬದಲು ದಿಲ್ ಬಹಾರ್ ಬರುತ್ತದೆ."

"ಅಂಗಂದ್ರೇನಾ ಬುದ್ದಿ."

"ಅದೊಂದು ಕಂಪೆನಿ ಹೆಸರು. ನಾನು ಹೊರಡುತ್ತೇನೆ. ಹೇಳಿದ್ದು ಜ್ಞಾಪಕದಲ್ಲಿಟ್ಟುಕೊಂಡಿರು. ನಾಳೆ ಯಾರಾದರೂ ಬಂದು ಕೇಳಿದರೆ ಊರಿನಲ್ಲಿಲ್ಲ ಎಂದು ಹೇಳು."

"ರಾಮಸ್ವಾಮಪ್ಪನೋರು, ಶಂಕರಪ್ಪನೋರು ಬಂದರೆ!"

"ಅವರನ್ನು ಪ್ರಮೀಳಮ್ಮನವರ ಮನೆಗೆ ಕಳಿಸು."

"ಅಪ್ಪಣೆ ಬುದ್ಧಿ"

ಎಂದು ಹೇಳಿದ. ವಾಸು ಅಲ್ಲಿಂದೆದ್ದು, ಸಿಗರೇಟ್ ಟಿನ್ ಜೇಬಿಗೆ ಸೇರಿಸಿ ಪ್ರಮೀಳನ ಮನೆಯ ಕಡೆ ನಡೆದ.

೨

ಬಸವನಗುಡಿಯ ಕೊಟ್ಟಕೊನೆಯಲ್ಲಿರುವ ರತ್ನವಿಲಾಸ ಬೀದಿಯಲ್ಲಿ ಕಣ್ಣು ಕೋರೈಸುವ ತೋಟವಿರುವ ಮನೆಯೇ ಪ್ರಮೀಳೆಯದು. ಮನೆ ಪ್ರಮೀಳೆಯ ಯಾಜಮಾನ್ಯಕ್ಕೆ ಬಂದಾಗ ಅದಕ್ಕೆ ಮಹಡಿಯಿರಲಿಲ್ಲ– ತೋಟವೂ ಇರಲಿಲ್ಲ. ಆ ರಸ್ತೆಯಲ್ಲಿ ನೀರಿಗೂ ಸ್ವಲ್ಪ ತೊಂದರೆಯಾಗಿತ್ತು.

ಮನೆ ಕಟ್ಟುವುದಕ್ಕೆ ಗಂಡನನ್ನು ಪ್ರೇರೇಪಿಸಿದವಳೇ ಪ್ರಮೀಳೆ. 'ಮಾಡರ್ನ್ ಸಿಲ್ಕ್ ಪ್ಯಾಲೆಸ್'ನಲ್ಲಿ ಕಾರಕೂನಿಕೆ ಮಾಡಿ ಗಳಿಸುತ್ತಿದ್ದ ನೂರಿಪ್ಪತ್ತು ರೂಪಾಯಿಗಳಲ್ಲಿ, ಸಂಸಾರ ಸಾಗಿಸಿಕೊಂಡು ಹೋಗುವುದೇ ಚನ್ನಕೇಶವಯ್ಯನಿಗೆ ಪ್ರಬಲ ಸಮಸ್ಯೆಯಾಗಿದ್ದಾಗ ಅವನು ಸ್ವಂತ ಮನೆ ಮಾಡುವ ವಿಷಯ ಕೇವಲ ಕನಸಿನ ಗಂಟಾಗಿತ್ತು. ಆದರೆ ಪ್ರಮೀಳೆ ಹಿಡಿದ ಹಟ ಬಿಡಲಿಲ್ಲ. 'ಬಾಡಿಗೆಯ ಮನೆ ವಾಸ ಸಾಕಾಗಿದೆ' ಎಂದು ಪಲ್ಲವಿ ಹಾಡತೊಡಗಿದಳು. ರತ್ನವಿಲಾಸ ಬೀದಿಯನ್ನು ನಿರ್ಮಾಣಮಾಡಿ, ಮುನಿಸಿಪಾಲಿಟಿಯವರು ಸೈಟುಗಳನ್ನು ವಿಂಗಡಿಸಿ ಮಾರಾಟಕ್ಕಿಟ್ಟಾಗ ಗಂಡನ ಪ್ರಾಣ ಹಿಂಡಿ ಒಂದು ಸೈಟು– ನಲವತ್ತು ಅಡಿ ಅಗಲ, ಅರವತ್ತಡಿ ಉದ್ದ– ಕೊಳ್ಳಲು ಒತ್ತಾಯಮಾಡಿದಳು.

"ಹಣವೆಲ್ಲಿಂದ ತರಲೇ" ಎಂದು ಚನ್ನಕೇಶವಯ್ಯ ಕೇಳಿದ.

"ಅಂಗೈಯಗಲದ ಸೈಟಿಗೆ ಎಷ್ಟಾದೀತು ಮಹಾ"

"ಅಂಗೈಯಗಲವೋ ಬ್ರಹ್ಮಾಂಡದಗಲವೋ ಮುನಿಸಿಪಾಲಿಟಿಯವರು ಸುಮ್ಮನೆ ಕೊಡುತ್ತಾರೆಯೇ ?"

"ಎಷ್ಟಾಗುತ್ತದೆ ಹೇಳಿ."

"ಎಂಟುನೂರು ರೂಪಾಯಿ ಆಗಬಹುದು."

ಮರುಮಾತಾಡದೆ ಪ್ರಮೀಳಾ ತನ್ನ ಟ್ರಂಕ್ ತೆಗೆದು ಎಂಟುನೂರು ರೂಪಾಯಿಗಳನ್ನೆಣಿಸಿ ಗಂಡನ ಕೈಗಿತ್ತಳು.

ಚನ್ನಕೇಶವಯ್ಯ ಬೆರಗಾಗಿ

"ಎಲ್ಲಿ ಮುಚ್ಚಿಟ್ಟಿದ್ದೆಯೇ ಇಷ್ಟು ಹಣ. ನನಗೆ ಸುಳುಸೂಕ್ಷ್ಮ ಒಂದೂ ಕೊಡದೆ."

"ಊರಿಗೆ ಹೋದಾಗ ನನ್ನ ತಂದೆ ಅಲ್ಪಸ್ವಲ್ಪ ಹಣ ಕೊಡುತ್ತಿದ್ದರು. ಅದನ್ನು ಕೂಡಿಹಾಕಿದ್ದೆ. ನಿಮಗೆ ಈ ಮೊದಲೇ ತಿಳಿಸಿದ್ದರೆ ಉಳಿಯುತ್ತಿತ್ತೇ !"

"ಸರಿಸರಿ. ಇನ್ನೂ ಎಷ್ಟು ದಾಸ್ತಾನು ಮಾಡಿದ್ದೀ ?"

"ನಿಮಗೇನು ಹುಡುಗಾಟವಾಯಿತೋ ? ಇನ್ನು ಹಣ ಎಲ್ಲಿಂದ ಬರಬೇಕು ಹೇಳಿ."

"ಸೈಟು ಕೊಳ್ಳುವುದಂತೂ ಆಗುತ್ತದೆ. ಮನೆ ಕಟ್ಟುವ ವಿಚಾರ."

"ಮೊದಲು ಸೈಟು ನಮ್ಮದಾಗಲಿ ಮನೆ ಕಟ್ಟುವ ಯೋಚನೆ ಮುಂದಿನದು."

"ನಿನ್ನ ಹಣದಲ್ಲಿ ಸೈಟು ಕೊಳ್ಳುತ್ತಿದ್ದೇನೆ. ನಿನ್ನ ಹೆಸರಿನಲ್ಲೇ ತೆಗೆದುಕೊಳ್ಳುತ್ತೇನೆ."

ಪ್ರಮೀಳಾ ಬೇಡವೆನ್ನಲಿಲ್ಲ.

ಸೈಟು ಕೊಂಡ ಮೇಲೂ ಬಾಡಿಗೆಯ ಮನೆಯ ವಾಸ ಪ್ರಮೀಳೆಗೆ ತಪ್ಪಲಿಲ್ಲ. ಎರಡು ವರ್ಷ ಹಾಗೇ ತಳ್ಳಿಹೋಯಿತು.

ಒಂದು ದಿನ ಬೇಸರಗೊಂಡು ಪ್ರಮೀಳೆ

"ಮನೆಕಟ್ಟುವ ಯೋಚನೆ ಇಲ್ಲದಿದ್ದರೆ ಸೈಟು ಮಾರಿಬಿಡಿ" ಎಂದಳು.

"ಕಟ್ಟುವ ದಾರಿಯಾವದು ಹೇಳು. ನಿಮ್ಮ ತಂದೆಗೆ ಒಂದು ಕಾಗದ ಬರೆದು ನೋಡಬಾರದೇ ?"

"ಅವರು ಮೊನ್ನೆತಾನೆ ಮೈಸೂರಿನಲ್ಲಿ ಮನೆ ಕೊಂಡಿದ್ದಾರೆ. ಅವರ ಹತ್ತಿರ ಹಣವೆಲ್ಲಿಂದ ಬರಬೇಕು. ನಿಮ್ಮ ಅಂಗಡಿ ಸಾಹುಕಾರನ್ನ ಐದು ಸಾವಿರ ರೂಪಾಯಿ ಸಾಲಕೊಡು ಎಂದೇಕೆ ಕೇಳಬಾರದು."

"ಒಂದುವೇಳೆ ಅವನು ಕೊಟ್ಟರೂ ಕೊಡಬಹುದು. ದುಬಾರಿ ಬಡ್ಡಿಯನ್ನಂತೂ ಹಾಕುತ್ತಾನೆ."

"ಮನೆ ಬಾಡಿಗೆ ಬದಲು ಬಡ್ಡಿ ತೆತ್ತಹಾಗಾಗುತ್ತದೆ."

"ಸರಿ – ಅಸಲು ತೀರಿಸುವ ಬಗೆ."

"ನೀವು ಹಣ ಜತೆಮಾಡಿ. ಅದನ್ನು ತೀರಿಸುವ ಮಾರ್ಗ ನಾನು ಮುಂದೆ ಯೋಚನೆಮಾಡಿ ತಿಳಿಸುತ್ತೇನೆ."

ಪ್ರಮಿಳೆಗೆ ಎಂಟುನೂರು ರೂಪಾಯಿ ಒದಗಿಸಿದ ಅವಳ ತಂದೆ ಮನೆಗೂ ಐದು ಸಾವಿರ ಉತ್ತರೋತ್ತರ ಒದಗಿಸಬಹುದೆಂದು ಚೆನ್ನ ಕೇಶವಯ್ಯ ಭಾವಿಸಿದ. ಅಂಗಡಿ ಸಾಹುಕಾರನನ್ನು ಒಪ್ಪಿಸಿ ಸಾಲತರಲು ಬಹಳ ದಿನಸ ಹಿಡಿಯಲಿಲ್ಲ. ಶೇಕಡ ಒಂಭತ್ತರಂತೆ ಬಡ್ಡಿಯೆಂದು ನಿಗದಿ ಯಾಯಿತು. ಬಡ್ಡೀ ಹಣ ಪ್ರತಿ ತಿಂಗಳೂ ಮುರಿದುಕೊಂಡು, ಉಳಿದ ಸಂಬಳ ಕೊಡುವುದಾಗಿ ಸಾಹುಕಾರ ತಿಳಿಸಿದ. ಚನ್ನಕೇಶವಯ್ಯ ನಿರ್ವಾಹ ವಿಲ್ಲದೆ ಒಪ್ಪಲೇಬೇಕಾಯಿತು.

ಆರು ತಿಂಗಳಲ್ಲಿ ಮನೆ ಸಿದ್ಧವಾಯಿತು. ಒಂದು ಶುಭ ಮುಹೂರ್ತ ನೋಡಿ ಚನ್ನಕೇಶವಯ್ಯ, ಪ್ರಮಿಳೆ ಗೃಹಪ್ರವೇಶಮಾಡಿದರು. ಅವಳ ಆನಂದಕ್ಕೆ ಪಾರವೇ ಇರಲಿಲ್ಲ. ಮುಂದೆ ಎರಡು ಕೋಣೆಗಳು, ಒಂದು ತೊಟ್ಟಿ, ಪಡಸಾಲೆ, ಬಚ್ಚಲು ಮನೆ, ಅಡಿಗೆ ಮನೆಗಳಿದ್ದವು. ಮನೆಯ ಮುಂದೆ ತಾನೇ ಕೆಲವು ಹೂವಿನ ಗಿಡಗಳನ್ನು ನೆಟ್ಟು ಪ್ರಮಿಳಾ ಒಂದು ಸಣ್ಣ ತೋಟಕ್ಕೆ ಅಸ್ತಿಭಾರ ಹಾಕಿದಳು.

ಸ್ವಂತ ಮನೆ ಮಾಡಿಕೊಂಡು ಬಂದ ಸಂತೋಷ ಗಂಡ ಹೆಂಡರಿಬ್ಬರ ಮನಸ್ಸಿನಲ್ಲಿಯೂ ಬಹಳ ಕಾಲ ಉಳಿಯಲಿಲ್ಲ. ಸಾಲ ಮಾಡಿದ ಚಿಂತೆ ಚನ್ನಕೇಶವಯ್ಯನಿಗೆ; ಸಾಲ ಮಾಡಿಸಿದ ಚಿಂತೆ ಪ್ರಮಿಳೆಗೆ ಬಲವಾಯಿತು. ಅವರ ಮನೆಯ, ಮನದ ಶಾಂತಿಯನ್ನು ಅದು ಛಿದ್ರಛಿದ್ರಮಾಡುತ್ತ ಬಂತು.

ಬಡ್ಡಿಹಣ ಮುರಿದುಕೊಂಡು ಅಂಗಡಿ ಸಾಹುಕಾರ ಕೇಶವಯ್ಯನ

ಕೈಯಲ್ಲಿಡುತ್ತಿದ್ದ ಎಂಭತ್ತೆರಡು ರೂಪಾಯಿ, ಎಂಟಾಣೆಯಲ್ಲಿ ಸಂಸಾರ ಸಾಗುವುದು ದುಸ್ತರವಾಗಿತ್ತು.

ಗಂಡ ಸಾಲದ ಹೊರೆಯಿಂದ ಕುಸಿಯುತ್ತಿದ್ದುದನ್ನು ಪ್ರಮೀಳಾ ನಿತ್ಯ ನೋಡುತ್ತಿದ್ದಳು. ಸದ್ಯಕ್ಕೆ ಆವನ ವರಮಾನ ಹೆಚ್ಚಿ ಸಾಲತೀರುವ ಮಾರ್ಗ ಯಾವದೂ ಕಂಡುಬರಲಿಲ್ಲ.

ಪ್ರಮೀಳೆಯನ್ನು ಅವಳ ತಂದೆ ಫಾರೆಸ್ಟ್‌ರೇಂಜರ್ ಸುಬ್ಬರಾಮಯ್ಯ ನವರು ಅಕ್ಕರೆಯಿಂದ, ಮುಚ್ಚಟೆಯಿಂದ ಬೆಳಸಿದ್ದರು. ತಾಯಿಯಿಲ್ಲದ ಮಗುವೆಂದು ಅವಳ ಮೇಲೆ ಪ್ರೇಮದ ಅಮೃತವರ್ಷ ಕರೆದಿದ್ದರು. ಆರು ವರ್ಷ ಸತತವಾಗಿ ಸಂಗೀತಾಭ್ಯಾಸವಾಗಿತ್ತು. ಪ್ರಮೀಳಾ ಕಾಲೇಜಿಗೆ ಎರಡು ವರ್ಷ ಮಣ್ಣು ಹೊತ್ತಿದ್ದಳು.

ಹುಡುಗಿ ವಯಸ್ಸಿಗೆ ಬಂದಿತು. ಹದಿನೆಂಟು ತುಂಬಿದ ಮೇಲೂ ಮಗಳನ್ನು ಮನೆಯಲ್ಲಿಟ್ಟುಕೊಂಡಿರುವುದು ನ್ಯಾಯವಲ್ಲ ಎಂದು ನಂಟರಿಷ್ಟರು ಸುಬ್ಬರಾಮಯ್ಯನವರನ್ನು ಒತ್ತಾಯಪಡಿಸಿದರು.

"ಮಗಳು ವಯಸ್ಸಿಗೆ ಬಂದಳೆಂದು ಬೀದಿಯಲ್ಲಿ ಹೋಗುವವನನ್ನು ಕರೆದು ಧಾರೆಯೆರೆಯುವುದಕ್ಕಾಗುತ್ತದೆಯೇ ?"

ಎಂದು ಸುಬ್ಬರಾಮಯ್ಯನವರು ಘೂಂಕರಿಸಿದರು. ಆದರೆ ಅವರ ಘೂಂಕಾರ, ಠೇಂಕಾರ ಬಂಧು ಬಳಗದ ಸಮಾಜದ ವಜ್ರದಂಡಕ್ಕೆ ಶರಣು ಹೋಗಬೇಕಾಯಿತು. ದೂರದ ಸಂಬಂಧಿ ಚನ್ನಕೇಶವಯ್ಯನನ್ನು ವರನೆಂದು ನಿಷ್ಕರ್ಷಿಸಿದ್ದೂ ಆಯಿತು.

ಚನ್ನಕೇಶವಯ್ಯನ ರೀತಿ, ನೀತಿ, ಇರುಸರಿಕೆ ಪ್ರಮೀಳೆಗೆ ಆಪ್ಯಾಯ ಮಾನವಾಗಲಿಲ್ಲ. ಕುತ್ತಿಗೆ ಬಳಿ ಹರಿದು ಹೊಲಿಗೆ ಕಂಡಿದ್ದ ಅವನ ಕೋಟು ಕಂಡಕೂಡಲೆ ಅವಳ ಕನಸು ಪುಡಿಗೂಡಿ ಹೋಯಿತು. ಸಮೀಪದ ಬಂಧುಗಳು ಬಂದು ಚನ್ನಕೇಶವಯ್ಯನ ಗುಣವರ್ಣನೆ ಮಾಡಿ, ಅವನ ಸಜ್ಜನಿಕೆಯನ್ನು ಪ್ರಮೀಳೆಯ ಮುಂದೆ ಮೆರೆದಾಡಿದರು.

ಚನ್ನಕೇಶವಯ್ಯನನ್ನು ಗಂಡನೆಂದು ಒಪ್ಪಿಕೊಳ್ಳುವುದು ಪ್ರಮೀಳೆಗೆ ನುಂಗಲಾರದ ತುತ್ತಾಗಿತ್ತು. ಆದರೆ ಇಷ್ಟು ಜನರ ಮನಸ್ಸು ನೋಯಿಸುವುದು ಹೇಗೆ ? ತಂದೆಯ ಮಾತು ಮೀರುವುದು ಹೇಗೆ ?

ಪ್ರಮೀಳೆಯ ವಿವಾಹವೂ ಆಗಿಹೋಯಿತು.

ವಿವಾಹವಿಧಿ ಪೂರೈಸಿದ ನಾಲ್ಕೇ ತಿಂಗಳಲ್ಲಿ ಪ್ರಮೀಳಾ ಗಂಡನ ಮನೆ ಸೇರಿದಳು.

ಚನ್ನಕೇಶವಯ್ಯನ ಮನೆಯಲ್ಲಿ ಪ್ರಮೀಳೆಗೆ ಸುಸ್ವಾಗತ ಸಿಗಲಿಲ್ಲ. ಪ್ರಮೀಳಾ ಓದಿದವಳೆಂದು ಅವಳ ವಾರಗಿತ್ತಿಯರು ಮುನಿಸುಗೊಂಡರು. ಅತ್ತೆ ನಾಗಮ್ಮ ಜಗಳಕಂಟಕಿಯೆಂದು ಸುತ್ತಮುತ್ತ ಪ್ರಸಿದ್ಧಳಾಗಿದ್ದಳು.

ಹದಿನೆಂಟು ವರ್ಷ ಪ್ರಮೀಳಾ ತೌರುಮನೆಯಲ್ಲಿ, ಕಾಲೇಜಿನಲ್ಲಿ ಪಡೆಯದಿದ್ದ ಅನುಭವವನ್ನು ಒಂದೇ ವರ್ಷದಲ್ಲಿ ಅತ್ತೆಯ ಮನೆಯಲ್ಲಿ ಪಡೆದಳು. ಮನೆಯವರ ಅಲ್ಪತನ, ಸ್ವಾರ್ಥ, ಪಿಶುಣತನ ಅವಳ ಜೀವನಕ್ಕೆ ಮುರುವಾಯಿತು.

ತೌರುಮನೆಗೆ ಹೋದ ಪ್ರಮೀಳಾ, ಅಲ್ಲಿಗೇ ಗಂಡನನ್ನೂ ಕರೆಸಿಕೊಂಡು

"ನೀವು ಬೇರೆ ಮನೆಮಾಡಿ ನನ್ನ ಕರೆದುಕೊಂಡು ಹೋದರೆ ಬರುತ್ತೇನೆ. ನಿಮ್ಮ ತಾಯಿ, ಅತ್ತಿಗೆಯರ ಜತೆ ಸಂಸಾರ ಮಾಡುವುದಕ್ಕೆ ನನಗೆ ಸಾಧ್ಯವಿಲ್ಲ. ಅವರು ಮನುಷ್ಯರಲ್ಲ – ಹೆಣ್ಣು ಹುಲಿಗಳು"

ಎಂದು ಸ್ಪಷ್ಟವಾಗಿ ಹೇಳಿದಳು.

ಚನ್ನಕೇಶವಯ್ಯ ಹೆಂಡತಿಗೆ ಸಮಾಧಾನ ಹೇಳಿದ; ಅಂಗಲಾಚಿದ; ಗೋಗೆರೆದ. ಪ್ರಮೀಳೆ ಹಿಡಿದ ಹಟ ಬಿಡಲಿಲ್ಲ. ಚನ್ನಕೇಶವಯ್ಯ ಬಸವನಗುಡಿ 'ಪೂರ್‌ಹೌಸ್ ಬ್ಲಾಕಿ' (Poor House Block) ನಲ್ಲಿ ಒಂದು ಬಾಡಿಗೆ ಮನೆ ಮಾಡಿ ಹೆಂಡತಿಯನ್ನು ಕರೆದುಕೊಂಡು ಹೋದ.

ಪ್ರಮೀಳೆಗೆ ಮನಃಶಾಂತಿ ದೊರೆಯಿತು. ಅಂಬಲಿ ಉಣ್ಣಲಿ ಗಂಜಿ ಕುಡಿಯಲಿ ಸ್ವತಂತ್ರವಾಗಿ, ಒಬ್ಬರ ಹಂಗಿಲ್ಲದೆ ಇದ್ದೇವಲ್ಲಾ ಎಂದು ಅವಳು ಸಂತೋಷಪಟ್ಟುಕೊಂಡಳು.

ಆದರೆ ಪ್ರಮೀಳೆಯದು ಅಂಬಲಿ, ಗಂಜಿ ಉಂಡು ಸಮಾಧಾನವಾಗಿರುವ ಜಾಯಮಾನವಾಗಿರಲಿಲ್ಲ. ಅಕ್ಕಪಕ್ಕದವರು ಸೈಟುಕೊಂಡು ಮನೆ ಕಟ್ಟಿಕೊಂಡು ಹೋಗುತ್ತಿದ್ದುದನ್ನು ನೋಡುತ್ತಿದ್ದಳು. ಶತಾಯ

ಗತಾಯ ತಾನೂ ಒಂದು ಮನೆ ಮಾಡಬೇಕೆಂಬ ನಿರ್ಧಾರ ಅವಳ ಮನದಲ್ಲಿ ಮೂಡಿತು.

ಸಾಲ ಮಾಡಿ ರತ್ನವಿಲಾಸ ಬೀದಿಯಲ್ಲಿ ಮನೆ ಮಾಡಿಕೊಂಡದ್ದೂ ಆಯಿತು. ಬಾಡಿಗೆ ಮನೆಯಲ್ಲಿದ್ದಾಗಿನ ಮನಃಶಾಂತಿ ಉಳಿಯಲಿಲ್ಲ. ಸಾಲ ತೀರಿಸುವ ಯೋಚನೆ ಅವಳ ಹೃದಯವನ್ನು ಕುಟ್ಟಿ ಹುಳುವಂತೆ ಕೊರೆಯುತ್ತಿತ್ತು.

ಯೋಚನೆ ಮಾಡಿ ಮಾಡಿ ಕೊನೆಗೆ ಪ್ರಮೀಳೆ ಉಗ್ರಾಣದಲ್ಲಿ ಧೂಳು ಹಿಡಿದು ಕುಳಿತಿದ್ದ ತನ್ನ ಹಾರ್ಮೋನಿಯಂ ಪೆಟ್ಟಿಗೆ ಹೊರಗೆ ತೆಗೆದಳು. ತನಗೆ ಪಾಠವಾಗಿದ್ದ ವರ್ಣ, ಕೀರ್ತನೆಗಳನ್ನು ಅಭ್ಯಾಸ ಮಾಡಿಕೊಳ್ಳುವು ದಕ್ಕಾರಂಭಿಸಿದಳು.

ನೆರೆಹೊರೆಯವರ ನೆರವಿನಿಂದ ಒಂದೆರಡು ಪಾಠ ಸಿಕ್ಕಲು ಕಷ್ಟ ವಾಗಲಿಲ್ಲ. ಪ್ರಮೀಳಾ ತಿಂಗಳಿಗೆ ನಲವತ್ತು ರೂಪಾಯಿ ತರಲಾರಂಭಿಸಿದ ಮೇಲೆ ಮನೆಯ ಸ್ಥಿತಿಗತಿ ಸ್ವಲ್ಪ ಸುಧಾರಿಸಿತು. ಅವಳ ಸ್ನೇಹ, ಸೌಹಾರ್ದ ಸ್ವಭಾವ ಸುತ್ತಮುತ್ತಲೆಲ್ಲಾ ಅವಳ ಖ್ಯಾತಿಯನ್ನು ಹರಡಿತು. ಆರೇಳು ತಿಂಗಳ ಅವಧಿಯಲ್ಲಿ ಪ್ರಮೀಳೆಯ ಪಾಠ ಎರಡರಿಂದ ನಾಲ್ಕಾಯಿತು; ವರಮಾನ ನಲವತ್ತರಿಂದ ನೂರಕ್ಕೇರಿತು. ಆದಾಯದ ಜತೆಗೆ ಖರ್ಚೂ ಬೆಳೆಯುತ್ತ ಬಂತು. ಪ್ರಮೀಳೆಯ ಮೈಮೇಲೆ ಲಕ್ಷಣವಾದ ಸೀರೆಗಳು ಮೆರೆಯತೊಡಗಿದವು. ಬಿಸಿಲಿನ ಬೇಗೆಯಿಂದಾಗಿ ಕೈಗೆ ಕೊಡೆಯೂ ಕಾಲಿಗೆ ಷೂಸುಗಳೂ ಬಂದವು. ಅವಳ ವೇಷಭೂಷಣ ನೋಡಿ ಕೆಲವರು ಆಡಿಕೊಳ್ಳುವುದಕ್ಕೂ ಆರಂಭಿಸಿದರು. 'ಆಡಿಕೊಳ್ಳುವವರ ಬಾಯಿಗೇ ಹುಳು ಬೀಳುತ್ತೆ' ಎಂದಂದು ಪ್ರಮೀಳಾ ತೃಪ್ತಳಾದಳು.

ಹೆಂಡತಿಯಲ್ಲಿ ಕಂಡು ಬಂದ ಮಾರ್ಪಾಟಿನ ಬಗ್ಗೆ ಮಾತನಾಡಲು ಚನ್ನಕೇಶವಯ್ಯನಿಗೆ ಉಸಿರು ಇರಲಿಲ್ಲ. 'ಅವಳು ರಕ್ತ ಬಸಿದು ಸಂಪಾದಿಸಿ, ಒಂದೆರಡು ಸೀರೆ, ಷೂಸು ತೆಗೆದುಕೊಂಡರೆ ಯಾವ ಬಾಯಲ್ಲಿ ಬೇಡ ವೆನ್ನಲಿ? ನಾನಂತೂ ತೆಗೆದುಕೊಡಲಿಲ್ಲ. ಅವಳೇ ತೆಗೆದುಕೊಂಡಾಗಲೂ ನಾನು ಆಕ್ಷೇಪಣೆ ಮಾಡಿದರೆ ಅವಳೇನು ಅಂದುಕೊಂಡಾಳು' ಎಂದು ತನಗೆ ತಾನೇ ಸಮಾಧಾನ ಹೇಳಿಕೊಂಡ.

ಪ್ರಮೀಳಾ ಪಾಠಕ್ಕೆ ಹೋಗುತ್ತಿದ್ದ ನಾಲ್ಕು ಮನೆಗಳಲ್ಲಿ ಒಂದು ಮನೆ 'ಸನ್ನಿಧಿ ಬೀದಿ'ಯಲ್ಲಿತ್ತು. ಆ ಮನೆಯ ಪಕ್ಕದ್ದೇ 'ಷಾಲಿಮಾರ್ ಇನ್‌ಷ್ಯೂರೆನ್ಸ್ ಕಂಪೆನಿ'ಯ ಚೀಫ್ ಆರ್ಗನೈಜರ್ ವಾಸುದೇವ ರಾಯರ ಮನೆ.

ವಾಸು ನಿತ್ಯವೂ ಪ್ರಮೀಳಾ ಹೋಗಿ ಬರುತ್ತಿದ್ದುದನ್ನು ನೋಡುತ್ತಿದ್ದ. ಪ್ರಮೀಳೆ ಪಾಠಕ್ಕೆ ಬರದಿದ್ದ ದಿನ ಅವನ ಹೃದಯ ಅಶಾಂತವಾಗುತ್ತಿತ್ತು. ಎದ್ದ ಗಳಿಗೆಗೆ ಶಾಪಕೊಡುತ್ತಿದ್ದ. ಅವಳನ್ನು ಕಂಡ ಕೂಡಲೆ ವಾಸುವಿಗೆ ರೋಮಾಂಚವಾಗುತ್ತಿತ್ತು; ಮುಖದ ಮೇಲೆ ಬೆವರು ಸಾಲುಕಟ್ಟು ತ್ತಿತ್ತು; ಬಾಯಿ ಒಣಗಿಹೋಗುತ್ತಿತ್ತು. ಕಿಟಕಿಯ ಮರೆಯಲ್ಲಿ ನಿಂತು ಅವಳ ರೂಪವನ್ನು ಕದ್ದುನೋಡಿ ತನ್ನ ಕಣ್ಣು, ಮನಸ್ಸು ತುಂಬಿ ಕೊಳ್ಳುತ್ತಿದ್ದ.

ನೋಡುತ್ತಿದ್ದಷ್ಟೂ ನೋಡಬೇಕೆಂಬ ಆಸೆ ಹೆಚ್ಚುತ್ತಿತ್ತು. ತೀರದ ಆಸೆಯಿಂದ ಮನಸ್ಸು ತಲ್ಲಣಿಸುತ್ತಿತ್ತು. 'ಸುಮ್ಮನೆ ನೋಡಿ ನೋಡಿ ಮನಸ್ಸು ಕೆಡಿಸಿಕೊಳ್ಳುವುದಕ್ಕಿಂತ ಗಂಭೀರವಾಗಿ ಮನೆಯ ಒಳಗಿರುವುದು ಲೇಸು' ಎಂದು ನಿರ್ಧಾರ ಮಾಡಿ ವಾಸು ಒಂದೊಂದು ದಿನ ಹೊರಗೆದ್ದು ಬರುತ್ತಿರಲಿಲ್ಲ. ಆದರೆ ಅವಳು ಪಾಠದ ಮನೆಹೊಕ್ಕು ಹಾರ್ಮೋನಿಯಂ ಶಬ್ದಮಾಡಿದ ಕೂಡಲೆ ಮನಸ್ಸು ಜಗ್ಗನೆದ್ದು ಕುಳಿತುಕೊಳ್ಳುತ್ತಿತ್ತು; ಅವಳು ಪಾಠ ಮುಗಿಸಿ ಕೊಂಡು ಹೋಗುವುದನ್ನೇ ಕಾಯುತ್ತ ಪೆರಾಂಡದಲ್ಲಿ ನಿಲ್ಲುತ್ತಿದ್ದ.

ವಾಸು ತನ್ನನ್ನು ಎವೆಯಿಕ್ಕದೆ ನೋಡುತ್ತಿದ್ದುದನ್ನು ಪ್ರಮೀಳೆಯೂ ಕಂಡುಕೊಂಡಿದ್ದಳು. ಆದರೆ ಬಗ್ಗಿಸಿದ ತಲೆಯೆತ್ತುತ್ತಿರಲಿಲ್ಲ. ಕಿರುನೋಟ ದಿಂದ ಅವನ ಚಂಚಲನೇತ್ರಗಳ ವ್ಯಾಪಾರವನ್ನು ಅರಿತಿದ್ದಳು. 'ಗಂಡಸರೇ ಹೀಗೆ – ಬೀದಿಯಲ್ಲಿ ಹೋಗುವವರನ್ನೆಲ್ಲಾ ನುಂಗಿಬಿಡುವಂತೆ ನೋಡು ತ್ತಾರೆ' ಎಂದು ಸಮಾಧಾನ ಹೇಳಿಕೊಂಡಿದ್ದಳು.

ವಾಸು ಸುಮ್ಮನೆ ಕೂಡಲಿಲ್ಲ. ಕೆಲವು ದಿವಸಗಳಲ್ಲಿ ಪ್ರಮೀಳೆಯ ಮನೆಯ ಚರಿತ್ರೆ, ಅವಳ ಗಂಡನ ವಿಷಯ, ಮನೆಕಟ್ಟುವುದಕ್ಕೆ ಅವರು ಸಾಲಮಾಡಿದ ವಿಷಯ – ಅದನ್ನು ತೀರಿಸಲಾಗದೆ ಅವರು ಪಡುತ್ತಿದ್ದ ಪಾಡಿನ ವಿವರಗಳೆಲ್ಲವನ್ನೂ ಸಂಗ್ರಹಿಸಿಕೊಂಡ.

ಅದೇ ವಾರ ಪ್ರಮಿಳಾದೇವಿಯವರ ವಿಳಾಸಕ್ಕೆ 'ಷಾಲಿಮಾರ್ ಇನ್‌ಷ್ಯೂರೆನ್ಸ್ ಕಂಪೆನಿ'ಯ ಕಛೇರಿಯಿಂದ ಕಂಪೆನಿಗೆ ಸಂಬಂಧಪಟ್ಟ ಸಾಹಿತ್ಯ, ಏಜನ್ಸಿಯ ವಿವರ, ಅದಕ್ಕೆ ದೊರೆಯುವ ವರಮಾನದ ಯಾದಿಗಳು ಹೋದವು. ಜತೆಗೆ ಚೀಫ್ ಆರ್ಗನೈಸರ್ ಅವರು ಒಂದು ಕಾಗದ ಬರೆದು, 'ಇನ್‌ಷ್ಯೂರೆನ್ಸ್ ಕೆಲಸ ಕೈಗೊಳ್ಳುವ ಹೆಣ್ಣು ಮಕ್ಕಳಿಗೆ ಕೊಡುವ ವಿಶೇಷ ಸವಲತ್ತುಗಳನ್ನು ತಿಳಿಸಿದ್ದರು.

ಪ್ರಮಿಳಾ ಪಾಠ ಮುಗಿಸಿಕೊಂಡು ಒಂದು ದಿನ ಮನೆಗೆ ಬಂದಾಗ ವೆರಾಂಡದಲ್ಲಿ ಬಿದ್ದಿದ್ದ ದಪ್ಪ ಲಕೋಟೆಯನ್ನೆತ್ತಿಕೊಂಡು ನೋಡಿದಳು. ವಿಳಾಸ ತನ್ನದೇ ಆಗಿತ್ತು – ಚಾಚೂ ತಪ್ಪದೆ ಸರಿಯಾಗಿತ್ತು, ಸಾಹಿತ್ಯದ ಪುಟ ತಿರುವಿನೋಡಿ, ಚೀಫ್ ಆರ್ಗನೈಸರ್ ಕಾಗದ ಓದಿಕೊಂಡು

"ನನ್ನ ವಿಳಾಸ ಇವರಿಗೆ ಯಾರು ತಿಳಿಸಿದರು"

ಎಂದು ಆಶ್ಚರ್ಯಗೊಂಡಳು.

"ಯಾರದೋ ಹುಡುಗಾಟಿಕೆ ಇರಬೇಕು – ನಾನು ಎಂದರೇನು ಇನ್‌ಷ್ಯೂರೆನ್ಸ್ ಕೆಲಸವೆಂದರೇನು ? ನನಗೆ ಇನ್‌ಷ್ಯೂರೆನ್ಸ್ ಅನುಭವ ವೇನಿದೆ ?"

ಎಂದು ತರ್ಕಿಸಿಕೊಂಡು, ಲಕೋಟೆಯನ್ನು ಒಂದು ಮೂಲೆ ಗೆಸೆದಳು.

ಎರಡು ದಿನಗಳ ತರುವಾಯ 'ಷಾಲಿಮಾರ್ ಕಂಪೆನಿ'ಯ ಕಛೇರಿ ಯಿಂದ ಮತ್ತೊಂದು ಕಾಗದ ಬಂದಿತು.

ಅದಕ್ಕೂ ಉತ್ತರಗೊಡುವ ಗೋಜಿಗೆ ಪ್ರಮಿಳಾ ಹೋಗಲಿಲ್ಲ.

ಮೂರು ದಿವಸಗಳಾನಂತರ ಮತ್ತೊಂದು ಕಾಗದ ಬಂತು. ಆ ಕಾಗದ ಪ್ರಮಿಳೆಯ ಕುತೂಹಲವನ್ನು ಕೆರಳಿಸಿತು.

"ಮಾಸಾಶನದ ಮೇಲೆ ಕಂಪೆನಿ ಕೆಲವು ಹೆಂಗಸು ಏಜಂಟರನ್ನು ನಿಯಾಮಕ ಮಾಡಬೇಕೆಂದು ನಿರ್ಧರಿಸಿದೆ. ಆರಂಭಕ್ಕೆ ತಿಂಗಳಿಗೆ ಇನ್ನೂ ರೈವತ್ತು ರೂಪಾಯಿ ಸಂಬಳ, ಏಜಂಟರು ಹೊರಗೆ ಹೋಗಬೇಕಾದ ಪ್ರಸಂಗ ಬಂದರೆ ಹೋಗಬರುವ, ಸೆಕೆಂಡ್ ಕ್ಲಾಸ್ ವೆಚ್ಚ, ದಿನಕ್ಕೆ ಹತ್ತು ರೂಪಾಯಿ ಬಾಟಾ ಕೊಡಲಾಗುತ್ತದೆ"

ಎನ್ನುವ ಪಂಕ್ತಿ ಪ್ರಮೀಳೆಯ ಗಮನವನ್ನು ಸೆಳೆಯಿತು.

"ತಿಂಗಳಿಗೆ ಇನ್ನೂರೈವತ್ತಾದರೆ ವರ್ಷಕ್ಕೆ ಮೂರು ಸಾವಿರ ರೂಪಾಯಿಗಳಾದವು. ಒಂದೂವರೆ ವರ್ಷ ದುಡಿದರೆ ಮನೆಯ ಸಾಲ ತೀರಿಹೋಗುತ್ತದೆ. ಒಂದೇ ಕಡೆ ಕೆಲಸ – ನಿಗದಿಯಾದ ಸಂಬಳ. ಏತಕ್ಕೆ 'ಷಾಲಿಮಾರ್' ಕಛೇರಿಗೆ ಹೋಗಿ ಬರಬಾರದು"

ಎಂದು ವಿಚಾರಮಾಡಿದಳು.

ಈ ವಿಷಯ ತಾನು ನಿರ್ಧರಿಸುವುದಕ್ಕೆ ಮುಂಚೆ ಗಂಡನಿಗೊಂದು ಮಾತು ತಿಳಿಸಲೇ ಎಂದು ಯೋಚನೆಮಾಡಿದಳು. ಅವಳ ಮನಸ್ಸಿಗೆ ತಟ್ಟನೆ ಒಂದು ಭಾವನೆ ಹೊಳೆಯಿತು – 'ಅವರ ಸಂಪಾದನೆಗೆ ಎರಡರಷ್ಟಾಗುತ್ತದೆ ತನ್ನ ಸಂಪಾದನೆ. ಅವರಿಗೆ ಅಸಮಾಧಾನವಾಗಬಹುದು. ಸದ್ಯ ತಿಳಿಸುವುದು ಬೇಡ. ಒಂದೆರಡು ತಿಂಗಳ ಸಂಬಳ ಕೈಹತ್ತಿದ ಮೇಲೆ ತಿಳಿಸಿದರಾಯಿತು' ಎಂದುಕೊಂಡಳು.

ಮಾರನೆಯ ದಿನವೇ 'ಷಾಲಿಮಾರ್ ಕಂಪೆನಿ'ಗೆ ಕಾಗದ ಬರೆದು 'ಹೆಂಗಸು ಏಜಂಟರ ನಿಯಾಮಕದ ಬಗ್ಗೆ ಹೆಚ್ಚು ವಿಷಯಗಳನ್ನು ತಿಳಿಯುವ ಆಸಕ್ತಿಯಿದೆ. ಕಛೇರಿಗೆ ಯಾವ ಹೊತ್ತಿನಲ್ಲಿ ಬರಬೇಕು' ಎಂದು ಕೇಳಿದಳು.

ಪ್ರಮೀಳೆಯ ಕಾಗದ ನೋಡಿ ವಾಸು ಹಿರಿಹಿರಿ ಹಿಗ್ಗಿದ. ಅವಳ ಕಾಗದವನ್ನು ಜೇಬಿನಲ್ಲಿ ಹಾಕಿಕೊಂಡು ಮಧ್ಯಾಹ್ನ ಮೂರು ಗಂಟೆಯ ಸುಮಾರಿಗೆ ತಾನೇ ಪ್ರಮೀಳನ ಮನೆಗೆ ಬಂದ.

ಪ್ರಮೀಳಾ ಮಲಗಿ ವಿಶ್ರಾಂತಿ ಪಡೆಯುತ್ತಿದ್ದಳು. ಯಾರೋ ಬಾಗಿಲು ಬಡಿದಂತಾಯಿತು. 'ಯಾರು?' ಎಂದಳು. ಹೊರಗಿನಿಂದ ಉತ್ತರ ಬರಲಿಲ್ಲ. ಮತ್ತೆ ಬಾಗಿಲು ಬಡಿದ ಶಬ್ದವಾಯಿತು. 'ಯಾರು' ಎನ್ನುತ್ತಾ ತಾನೇ ಎದ್ದು ಬಂದಳು.

ವಾಸುವನ್ನು ನೋಡಿ ಚಕಿತಳಾದಳು. 'ಮನೆಗೆ ಬರುವುದಕ್ಕೆ ಇವನಿಗೆಷ್ಟು ಧೈರ್ಯ' ಎಂದುಕೊಂಡು ಬಾಗಿಲು ತೆಗೆಯದೆ ಒಳಗಿನಿಂದಲೇ

"ಯಾರು ಬೇಕಾಗಿತ್ತು ನಿಮಗೆ?" ಎಂದು ಕೇಳಿದಳು.

ವಾಸು ಜೇಬಿನಿಂದ ಕಾಗದ ತೆಗೆದು

"ನಾನು ಷಾಲಿಮಾರ್ ಕಂಪೆನಿಯಿಂದ ಬಂದಿದ್ದೇನೆ"

ಎಂದ. ಪ್ರಮಿಳಾ ಬಾಗಿಲು ತೆಗೆದು

"ಒಳಗೆ ಬನ್ನಿ – ನಾನು ಯಾರೋ ಎಂದುಕೊಂಡೆ. ಕ್ಷಮಿಸಿ"

ಎಂದು ಹೇಳಿದಳು. ವಾಸು ವೆರಾಂಡದಲ್ಲಿದ್ದ ಒಂದು ಮುರುಕು ಕುರ್ಚಿಯ ಮೇಲೆ ಕುಳಿತ. ಪ್ರಮಿಳಾ ಒಳಗೆ ಹೋಗಿ ಮುಖ ತೊಳೆದು ಕೊಂಡು ಹಣೆಗಿಟ್ಟುಕೊಂಡು ಬಂದಳು.

"ನಿಮ್ಮ ಕಾಗದ ಇಂದೇ ಕೈಸೇರಿತು."

"ನಾನು ಕಛೇರಿಗೆ ಯಾವಾಗ ಬರಲಿ ಎಂದು ಕೇಳಿದ್ದೆ."

"ಹೌದು! ನಿಮಗೇಕೆ ತೊಂದರೆಯೆಂದು ನಾನೇ ಬಂದೆ. ನನ್ನ ಮನೆಯೂ ಸಮೀಪದಲ್ಲಿಯೇ ಇದೆ."

"ಕಂಪೆನಿ ಸಾಹಿತ್ಯ ಕಳಿಸಿಕೊಟ್ಟವರು ನೀವೇನೋ?"

"ಹೌದು – ನಾನೇ."

"ನಾನು ಇನ್ಷ್ಯೂರೆನ್ಸ್ ಕೆಲಸ ಒಪ್ಪಿಕೊಳ್ಳಬಹುದೆಂದು ನಿಮಗೆ ಯಾರು ಹೇಳಿದರು?"

"ಯಾರೂ ಹೇಳಲಿಲ್ಲ. ನೀವು ಪಡುತ್ತಿದ್ದ ಶ್ರಮ ನೋಡಿ ಈ ಕೆಲಸ ಒಪ್ಪಿಕೊಂಡರೆ ನಿಮಗೆ ಅನುಕೂಲವಾಗಬಹುದೆಂದು ನಾನು ಊಹಿಸಿದೆ. ಇನ್ಷ್ಯೂರೆನ್ಸ್ ಕೆಲಸಕ್ಕೆ ಹೆಂಗಸರು ದೊರೆಯುವುದು ದುರ್ಲಭ. ನಿಮ್ಮಂಥ ಕಲಿತ ಹೆಣ್ಣು ಮಕ್ಕಳು ನಮಗೆ ಸಹಕಾರ ನೀಡಬೇಕು. ವ್ಯವಹಾರ ದೃಷ್ಟಿಯಿಂದ ಮಾತ್ರವೇ ಅಲ್ಲ – ಸಮಾಜೋದ್ಧಾರ ದೃಷ್ಟಿಯಿಂದಲೂ ಇನ್ಷ್ಯೂರೆನ್ಸ್ ಒಳ್ಳೆಯ ಕೆಲಸ – ಹನಿಕೂಡಿದರೆ ಹಳ್ಳ ತೆನೆಕೂಡಿದರೆ ಭತ್ತ."

"ನನಗೆ ಏನೂ ಅನುಭವವಿಲ್ಲವಲ್ಲಾ..........."

"ಒಂದೋ ಎರಡೋ ಕೇಸು ನೋಡಿಕೊಂಡರೆ ಅನುಭವ ತಾನೇ ಆಗುತ್ತದೆ."

"ದಿವಸಕ್ಕೆ ಎಷ್ಟು ಗಂಟೆ ಕೆಲಸ ಮಾಡಬೇಕು."

"ನಾವು ಯಾವದನ್ನೂ ವಿಧಾಯಕಮಾಡುವುದಿಲ್ಲ. ನಿಮಗೆ ಹೇಗೆ ಅನುಕೂಲವೋ ಹಾಗೆ ಕಾರ್ಯಕ್ರಮ ನಿಯೋಜಿಸಿಕೊಳ್ಳಿ."

"ಪ್ರತಿನಿತ್ಯ ಕಛೇರಿಗೆ ಬರಬೇಕೇ ?"

"ಅಗತ್ಯವಿಲ್ಲ, ನಾಳೆಯೊಂದು ದಿನ ಬನ್ನಿ. ಕೆಲಸದ ವಿವರ ತಿಳಿದುಕೊಂಡ ಮೇಲೆ ನಿಮಗೆ ಮನಸ್ಸು ಬಂದಾಗ ಬರಬಹುದು."

"ನೀವು ನಿಜವಾಗಿ ನನಗೆ ತುಂಬ ಉಪಕಾರಮಾಡಿದಿರಿ."

"ಉಪಕಾರ ಸ್ಮರಿಸಬೇಕಾದವನು ನಾನು. ಕಂಪೆನಿ ಕೆಲವು ಹೊಸ ಸ್ಕೀಮುಗಳನ್ನು ಜಾರಿಯಲ್ಲಿ ತರಲು ಯೋಚಿಸುತ್ತಿದ್ದೆ. ಅದಕ್ಕೆ ಮಹಿಳಾ ಏಜಂಟರೇ ಬೇಕು. ಈ ಕೆಲಸದಲ್ಲಿ ನೀವು ಸ್ವಲ್ಪ ಆಸಕ್ತಿ ವಹಿಸಿದರೆ ಸಂಬಳ ಎರಡರಷ್ಟು ಮಾಡಿಸುತ್ತೇನೆ."

ಪ್ರಮಿಳಾಳೆಯ ಹೃದಯ ಕೃತಜ್ಞತೆಯಿಂದ ತುಂಬಿ ತುಳುಕಿತು. ಅವಳ ಬಾಯಲ್ಲಿ ಮಾತು ಹೊರಡಲಿಲ್ಲ.

ವಾಸು ಹೊರಡಲೆದ್ದು ನಿಂತು

"ನಾಳೆ ಕಛೇರಿಗೆ ಬಂದರೆ ಅಲ್ಲೇ ಆರ್ಡರ್ ಟೈಪು ಮಾಡಿಸಿ ಸಹಿ ಹಾಕಿಕೊಡುತ್ತೇನೆ. ನಿಮಗೆ ಅಡ್ವಾನ್ಸ್ ಬೇಕಾದರೆ ತೆಗೆದುಕೊಳ್ಳಬಹುದು.

"ಎಷ್ಟು ?"

"ಒಂದು ತಿಂಗಳ ಅಡ್ವಾನ್ಸ್ ಕೊಡುವುದು ವಾಡಿಕೆ. ನಿಮಗೆ ಬೇಕಾದರೆ ಹೆಚ್ಚು ಕೊಡಿಸುತ್ತೇನೆ. ಇನ್ನು ನಾನು ಬರುತ್ತೇನೆ."

"ಇಷ್ಟು ಉಪಕಾರ ಮಾಡಿದ ನಿಮಗೆ ಒಂದು ಕಪ್ ಕಾಫಿಕೂಡ ನಾನು ಕೊಡಲಿಲ್ಲವಲ್ಲಾ. ಐದು ನಿಮಿಷ ಇರಲು ಸಾಧ್ಯವೇ ?"

"ಕಾಫಿಗೋಸ್ಕರವೇ ? ಆಗಬಹುದು"

ಎಂದು ಹೇಳಿದ.

ಪ್ರಮಿಳಾ ಸ್ಟೌವ್ ಹೊತ್ತಿಸಿಟ್ಟು, ಸಿದ್ಧವಾಗಿದ್ದ ಡಿಕಾಕ್ಷನ್ನಿಗೆ ಹಾಲು ಸೇರಿಸಿ ಬಿಸಿಮಾಡಿ ತಂದಿತ್ತಳು.

"ಇಷ್ಟು ಬೇಗ ಹೇಗೆ ಮಾಡಿದಿರಿ ?"

"ಮಧ್ಯಾಹ್ನವೇ ಫ್ಲ್ರೇನರಿಗೆ ಪುಡಿ, ಬಿಸಿನೀರು ಹಾಕಿರುತ್ತೇನೆ."

ವಾಸು ಕಾಫಿ ಸವಿಯುತ್ತಾ"

"ಮನೆ ತುಂಬ ಚೆನ್ನಾಗಿದೆ. ಸ್ವಂತದ್ದೇ ?"

"ಹೂ"

ಎಂದು ಪ್ರಮಿಳಾ ಮೆಲ್ಲನೆ ಉತ್ತರವಿತ್ತಳು. ಅವಳ ಉತ್ತರದ ಜತೆಗೆ ಹೊರಟ ನಿಟ್ಟುಸಿರನ್ನು ವಾಸು ಗಮನಿಸದಿರಲಿಲ್ಲ.

"ನಾಳೆ ಕಛೇರಿಗೆ ಎಷ್ಟು ಹೊತ್ತಿಗೆ ಬರಲಿ ?"

"ಹನ್ನೆರಡು ಗಂಟೆಗೆ ಬನ್ನಿ."

"ಹನ್ನೆರಡು ಗಂಟೆಗೆ ನನಗೆ ಅನುಕೂಲವಾಗುವುದಿಲ್ಲ. ಮಧ್ಯಾನ್ಹ ಬರಬಹುದೇ ?"

"ಎರಡು ಗಂಟೆಯ ಮೇಲೆ ಯಾವಾಗಲಾದರೂ ಬನ್ನಿ"

ಎಂದು ಹೇಳಿ ಅಲ್ಲಿಂದೆದ್ದ.

ವಾಸುವಿನ ಮನಸ್ಸಿಗೆ ಪೀಯೂಷಪಾನ ಮಾಡಿಸಿದಂತಾಗಿತ್ತು. ಪ್ರಮಿಳೆ ಏಜಂಟ್ ಕೆಲಸ ಒಪ್ಪಿಕೊಂಡದ್ದು ಅವನ ಮನಸ್ಸಿನಿಂದ ದೊಡ್ಡ ಭಾರವನ್ನಿಳುಹಿದಂತಾಗಿತ್ತು.

ಮಾರನೆಯ ದಿನ ಕಛೇರಿಯ ವಿಧಿಗಳೆಲ್ಲಾ ಸಾಂಗವಾಗಿ ಪೂರೈಸಿದವು. ವಾಸು ಅವಳಿಗೆ ಮೂರು ತಿಂಗಳ ಸಂಬಳ ಮುಂಗಡವಾಗಿ ಕೊಟ್ಟ. ಪ್ರಮಿಳೆಯ ಮನಸ್ಸು ಸಂತೋಷದಿಂದ ಅರಳಿತು.

ಪ್ರಮಿಳಾ ಇನ್‌ಷ್ಯೂರೆನ್ಸ್ ಕೆಲಸ ಮಾಡುತ್ತಿರುವುದು ಚನ್ನ ಕೇಶವಯ್ಯನಿಗೆ ತಿಳಿಯದಿರಲಿಲ್ಲ. ಮನೆಯ ತುಂಬ ಇನ್‌ಷ್ಯೂರೆನ್ಸ್ ಸಾಹಿತ್ಯ ಓಡಿಯಾಡುತ್ತಿದ್ದುದನ್ನು ಅವನು ಗಮನಿಸಿದ್ದ.

ಒಂದು ದಿನ ಪ್ರಮಿಳಾ ಗಂಡನ ಕೈಯಲ್ಲಿ ಐದು ನೂರು ರೂಪಾಯಿಗಳ ಚೆಕ್ಕನ್ನಿಟ್ಟು

"ಸಾಲದ ಅಸಲಿಗೆ ಕಟ್ಟಿಬಿಡಿ" ಎಂದಳು.

"ಇಷ್ಟು ಹಣ ಎಲ್ಲಿತ್ತು ಪ್ರಮಿಳಾ."

"ಮೂರು ತಿಂಗಳಲ್ಲಿ ನಾನು ಮಿಗಿಸಿದ್ದು."

"ನೀನು ಇನ್‌ಷ್ಯೂರೆನ್ಸ್ ಕೆಲಸ ಒಪ್ಪಿಕೊಂಡದ್ದು ನನಗೆ ಹೇಳಲೇ ಇಲ್ಲ."

"ಈ ಚೆಕ್ ಕೈಸೇರಿದ ಕೂಡಲೆ ಹೇಳುವ ಎಂದಿದ್ದೆ."

"ನಿಜವಾಗಿ ಈ ಹಣ ತೆಗೆದುಕೊಳ್ಳುವುದಕ್ಕೆ ನನಗೆ ನಾಚಿಕೆಯಾಗುತ್ತದೆ."

"ಏಕೆ ?"

"ನೀನು ದುಡಿದು ತಂದು ಮನೆಯ ಸಾಲ ತೀರಿಸಬೇಕಾಯಿತಲ್ಲಾ !"

"ಯಾರು ದುಡಿದರೇನು ? ನೀವೂ ದುಡಿಯುತ್ತಿದ್ದೀರಿ."

"ನನ್ನದೇನು ದುಡಿಮೆ – ಇಹಕ್ಕಿಲ್ಲ ಪರಕ್ಕಿಲ್ಲ."

"ಮನೆಯ ಸಾಲ ತೀರಿಹೋಗಲಿ – ಆ ಮೇಲೆ ಮಾತು.

"ಮುಂದೇನು ಯೋಚನೆ ಮಾಡಿರುವೆ ?"

"ನಿಮ್ಮ ಪಿತ್ರಾರ್ಜಿತ ಭೂಮಿಯಿಂದ ವರ್ಷಕ್ಕಾಗುವಷ್ಟು ದವಸ ಬರುವುದಿಲ್ಲ."

"ಹೇಗೆ ಬರಬೇಕು. ಒಳ್ಳೆಯ ಜಮೀನನ್ನೆಲ್ಲಾ ಅಣ್ಣತಮ್ಮಂದಿರು ನುಂಗಿಹಾಕಿದರು. ಯಾರಿಗೂ ಬೇಡದ್ದು – ಆ ರಾಮಗಿರಿ ಬುಡದಲ್ಲಿರೋ ಹೊಲ, ಗದ್ದೆ ನನ್ನ ತಲೆಗೆ ಕಟ್ಟಿದರು."

"ಅದನ್ನಾದರೂ ನೀವು ಆಗಾಗ್ಗೆ ಹೋಗಿ ನೋಡಿಕೊಂಡು ಬಂದಿದ್ದರಾಗಿತ್ತು. ರೈತರ ಮೇಲೆಯೇ ಬಿಟ್ಟರೆ ಅವರು ದವಸ ನಮ್ಮ ತನಕ ಬರಗೊಡುತ್ತಾರೆಯೇ ?"

"ನೀನೇ ನೋಡುತ್ತಿರುವೆಯಲ್ಲ. ಅಂಗಡಿ ಬಿಟ್ಟು ಅಲ್ಲಾಡುವುದಕ್ಕೆ ನನಗೆ ಪುರಸತ್ತೆಲ್ಲಿದೆ."

"ನೀವು ಹೊಸದಾಗಿ ಆಸ್ತಿ ಮಾಡುವ ಹಾಗಿಲ್ಲ, ಹಳೆಯ ಆಸ್ತಿ ಉಳಿಸಿಕೊಳ್ಳುವ ಹಾಗಿಲ್ಲ"

ಎಂದು ಪ್ರಮೀಳಾ ಬೇಸರದ ದನಿಯಲ್ಲಿ ನುಡಿದಳು.

"ಹೊಸ ಆಸ್ತಿ ಮಾಡುವುದಕ್ಕೆ ದಾರಿಯೆಲ್ಲಿದೆ ಹೇಳು ?"

"ಮನಸ್ಸಿದ್ದರೆ ಮಾರ್ಗವಿದ್ದೇ ಇರುತ್ತದೆ."

"ಇರುವುದೊಂದೇ ಮಾರ್ಗ – ಪುನಃ ಸಾಲ ಮಾಡುವುದು. ಈಗ ಮಾಡಿ ಅನುಭವಿಸುತ್ತಿರುವ ಯಾತನೆಯೇ ಸಾಕಾಗಿದೆ."

"ಈ ಸಾಲದ ಭಾರ ನಿಮ್ಮ ತಲೆಯ ಮೇಲಿಂದ ಇಳಿಸಿದ್ದೀನಲ್ಲ."

"ನಿನ್ನ ಉದ್ದೇಶವೇನು ಸ್ಪಷ್ಟವಾಗಿ ಹೇಳು."

"ರಾಮಗಿರಿ ಪಕ್ಕದಲ್ಲಿಯೇ ಇನ್ನು ಐದೋ ಹತ್ತೋ ಎಕರೆ ಗದ್ದೆ ಮಾಡಬೇಕು. ವರ್ಷಾಕಾಲ ನಿರಾತಂಕವಾಗಿ ಕುಳಿತು ತಿನ್ನಲನುಕೂಲಿಸು ವಂತೆ ಮನೆಗೆ ಭತ್ತ ಬಂದು ಬೀಳಬೇಕು."

"ನಮ್ಮ ಗದ್ದೆಯ ಪಕ್ಕದಲ್ಲಿಯೇ ಐದು ಎಕರೆ ಗದ್ದೆ ಸಿಕ್ಕಬೇಕೆಂದರೆ ಸುಮ್ಮನಾಯಿತೇ ? ಕೊಡುವವರು ಒಬ್ಬರು ಸಿದ್ಧವಾಗಿರಬೇಕಲ್ಲ."

"ನೀವೆಲ್ಲಾ ಮನೆಯಲ್ಲಿಯೇ ಕುಳಿತು ಉತ್ತರಹೇಳಿ. ಒಂದು ಹೆಜ್ಜೆ ಮುಂದೆ ಇಡಬೇಡಿ."

ಹೆಂಡತಿಯ ಭರ್ತ್ಸನೆಗೆ ಬೇಸತ್ತು ಚನ್ನಕೇಶವಯ್ಯ

"ಭಾನುವಾರ ರಜಾ ಇದೆ – ಹೋಗಿ ಬರುತ್ತೇನೆ ಸುಮ್ಮನಿರು"

ಎಂದು ಹೇಳಿದ.

ಪ್ರಮೀಳೆಯ ಬಲವಂತಕ್ಕೆ ಚನ್ನಕೇಶವಯ್ಯ ಭಾನುವಾರ ರಾಮಗಿರಿಗೆ ಹೋಗಿ ಬಂದ.

"ವಿಚಾರಿಸಿದಿರಾ" ಎಂದು ಕೇಳಿದಳು.

"ವಿಚಾರಿಸಿದೆ. ಹೊನ್ನೇಗೌಡ ಮೂರು ಎಕರೆ ಮಾರುವುದಕ್ಕೆ ಸಿದ್ದವಾಗಿದ್ದಾನೆ ಆದರೆ ಅವನಿಗೆ ಎಕರೆಗೆ ಎರಡು ಸಾವಿರ ಬೇಕಂತೆ."

"ನಾವು ಬೇಡವೆನ್ನುವ ತನಕ ಗದ್ದೆ ಯಾರಿಗೂ ಕೊಡಬೇಡ ಎಂದು ನಾಳೆಯೇ ಒಂದು ಕಾಗದ ಬರೆಯಿರಿ."

"ಮಾರುವ ಆತುರ ಅವನಿಗೇನೂ ಇರುವ ಹಾಗಿಲ್ಲ. ಒಳ್ಳೆಯ ಬೆಲೆ ಬಂದರೆ ಕೊಡಬೇಕೆಂದಿದ್ದಾನೆ."

ಪ್ರಮೀಳೆಯ ತಲೆಯನ್ನು ಒಂದೇ ಸಮನಾಗಿ ಹೊನ್ನೇಗೌಡನ ಮೂರು ಎಕರೆ ಗದ್ದೆ ಕೊರೆಯತೊಡಗಿತು. 'ಮೂರು ತಿಂಗಳ ಸಂಬಳವನ್ನು ಮುಂಗಡವಾಗಿ ಕೊಟ್ಟ ಇನ್‌ಷ್ಯೂರೆನ್ಸ್ ಕಂಪೆನಿಯವರು, ಹಣ ಕೊಡ ಲಾರರೇ ?' ಎಂದು ಯೋಚಿಸಿದಳು. ತನ್ನ ಆಸೆ ಹುಚ್ಚು ಆಸೆ ಎಂದು ಅವಳಿಗೇ ಅನಿಸಿತು. 'ನಾನು ಕಂಪೆನಿಗೆ ಇನ್ನೂ ಐದು ಸಾವಿರದ ಬಿಸಿನೆಸ್ ಕೂಡ ತಂದುಕೊಟ್ಟಿಲ್ಲ – ಸುಮ್ಮನೆ ಹಣಕೇಳಿ 'ಇಲ್ಲ' ಎನಿಸಿಕೊಳ್ಳುವುದು ಜಾಣತನವಲ್ಲ' ಎಂದು ಮನಸ್ಸು ಬಿಗಿಹಿಡಿದಳು.

ಇನ್‌ಷ್ಯೂರೆನ್ಸ್ ಕೆಲಸ ಕಲಿಯಲು ಪ್ರಮಿಳೆಗೆ ಬಹಳ ದಿನ ಹಿಡಿಯಲಿಲ್ಲ. ತನ್ನ ಸಮಸ್ತ ಕಾಲವನ್ನೂ ಅದಕ್ಕೆ ವಿನಿಯೋಗಿಸ ತೊಡಗಿದಳು. ಸಂಗೀತ ಪಾಠದ ಮನೆಗಳಿಂದಲೂ ವಿಮೋಚನೆ ಪಡೆದು ಕೊಂಡಳು.

ಐದು ತಿಂಗಳ ತರುವಾಯ ಒಂದು ದಿನ ಪ್ರಮಿಳೆಯ ಕೈಗೆ ಅಂಚೆಯಲ್ಲಿ ಉದ್ದನೆಯ ಲಕೋಟೆಯೊಂದು ಬಂದಿತು. ಷಾಲಿಮಾರ್ ಕಂಪೆನಿಯ ಹೆಡ್ ಆಫೀಸಿನ ಕಾಗದ. ಹೆಡ್ ಆಫೀಸಿನವರು ನನಗೆ ಬರೆಯುವ ಕಾರಣವೇನಿತ್ತು ಎಂದು ಅಂಜುತ್ತಲೇ ಕಾಗದವನ್ನು ಒಡೆದು ನೋಡಿದಳು. ಕಂಪೆನಿಯವರು ಪ್ರಮಿಳೆಯ ಸೇವೆಯನ್ನು ಪ್ರಶಂಸಿಸಿ ಬರೆದಿದ್ದಳು. 'ನಾನೇನು ಅಂಥ ಅದ್ಭುತ ಸೇವೆ ಮಾಡಿದ್ದು – ಇಷ್ಟು ದಿವಸಕ್ಕೆ ಕಂಪೆನಿಗೆ ಹತ್ತು ಹದಿನೈದು ಸಾವಿರ ರೂಪಾಯಿ ಬಿಸಿನೆಸ್ ಕೊಟ್ಟಿದ್ದರೆ ಹೆಚ್ಚು. ಹೆಣ್ಣು ಮಕ್ಕಳಿಗೆ ಉತ್ಸಾಹ ಬರಲಿ ಎಂದು ಕಂಪೆನಿಯವರು ಈ ರೀತಿ ಬರೆದಿರಬಹುದು' ಎಂದು ಕೊಂಡಳು.

ಚನ್ನಕೇಶವಯ್ಯ ಒಂದು ಗಂಟೆಗೆ ಯಥಾಕ್ರಮದಂತೆ ಮನೆಗೆ ಊಟಕ್ಕೆ ಬಂದು, ಊಟ ಮುಗಿಸಿಕೊಂಡು ಮೂರು ಗಂಟೆಗೆ ಅಂಗಡಿಗೆ ಹೋದ. ಪ್ರಮಿಳಾ, ಹಿತ್ತಲಲ್ಲಿ ಒಗೆದು ಹರವಿದ್ದ ಬಟ್ಟೆಗಳನ್ನು ಒಳಗೆ ತಂದು ಮಡಿಸುತ್ತಿದ್ದಳು. ಬಾಗಿಲು ಹೊರಗೆ ವಾಸು ಬಂದು ನಿಂತಿದ್ದುದು ಕಾಣಿಸಿತು.

ಹೊರಬಾಗಿಲು ತೆಗೆದು ಒಳಗೆ ಹೋಗಿ ಒಗೆದ ಬಟ್ಟೆಗಳನ್ನು ಸ್ಟ್ಯಾಂಡಿನ ಮೇಲೆ ಹಾಕಿ, ಹೆಡ್ ಆಫೀಸಿನ ಕಾಗದ ತಂದು ವಾಸುವಿನ ಕೈಗಿತ್ತಳು. ವಾಸು ಕಾಗದವನ್ನು ಓದಿಕೊಂಡು

"ನಮ್ಮ ಕಛೇರಿಗೂ ಒಂದು ಪ್ರತಿ ಕಳುಹಿಸಿದ್ದಾರೆ. ಹೆಡ್ ಆಫೀಸಿನ ಮೆಚ್ಚುಗೆಯನ್ನು ಇಷ್ಟು ಬೇಗ ದೊರಕಿಸಿಕೊಂಡ ನೀವೇ ಧನ್ಯರು."

"ಇದೆಲ್ಲಾ ನನಗೊಂದು ಮಹಾ ಸಮಸ್ಯೆಯಾಗಿದೆ."

"ಸಮಸ್ಯೆಯೇನು ಬಂತು! ಚೆನ್ನಾಗಿ ಕೆಲಸಮಾಡಿರುವಿರಿ. ಹೆಡ್ ಆಫೀಸ್ ಮೆಚ್ಚುಗೆ ವ್ಯಕ್ತಮಾಡಿದೆ."

"ಆರು ತಿಂಗಳಿಗೆ ಹದಿನೈದು ಸಾವಿರ ಬಿಸಿನೆಸ್ ಮಾಡಿದ್ದು ಚೆನ್ನಾಗಿ ಕೆಲಸ ಮಾಡಿದ ಲಕ್ಷಣವೇ ?"

"ಹದಿನೈದು ಸಾವಿರವೆಂದು ಯಾರು ಹೇಳಿದರು ?"

"ಇನ್ನೆಷ್ಟು ?"

"ಎಪ್ಪತ್ತೈದು ಸಾವಿರ."

"ಎಪ್ಪತ್ತೈದು ಸಾವಿರ!! ನನ್ನನ್ನೇನು ಪರಿಹಾಸ್ಯ ಮಾಡುತ್ತಿರುವಿರೋ ?"

ವಾಸು ತನ್ನ ಒಳಕಿಸೆಯಿಂದ ಒಂದು ಉದ್ದನೆಯ ಕವರು ತೆಗೆದು, ಅದರೊಳಗಿಂದ ಒಂದು ಸ್ಟೇಟ್‌ಮೆಂಟ್ ತೆಗೆದ.

"ಇಲ್ಲಿ ನೋಡಿ – ನಿಮ್ಮ ಹೆಸರಿನ ಮುಂದೆ ಯಾವ ಸಂಖ್ಯೆ ಇದೆ."

"ಎಪ್ಪತ್ತೈದು ಸಾವಿರ!"

ಪ್ರಮಿಳಾ ಒಮ್ಮೆ ವಾಸುವಿನ ಮುಖವನ್ನು ದಿಟ್ಟಿಸಿ ನೋಡಿ

"ನಿಮ್ಮ ದುಡಿಮೆಯನ್ನೆಲ್ಲಾ ನನ್ನ ಹೆಸರಿಗೆ ಹಾಕುತ್ತಿರುವಿರಾ ?"

"ಎಲ್ಲಾ ಅಲ್ಲ – ಸ್ವಲ್ಪ ಭಾಗ ಮಾತ್ರ."

"ಏಕೆ ಹಾಗೆ ಮಾಡಿದಿರಿ ?"

"ಆ ಪ್ರಶ್ನೆಗೆ ಉತ್ತರ ನನ್ನಲ್ಲಿಲ್ಲ – ನಿಮ್ಮಲ್ಲಿಯೇ ಇದೆ."

ಪ್ರಮಿಳಾ ನಸುನಾಚಿ ತಲೆಬಾಗಿಸಿ, ಉಂಗುಷ್ಟದಿಂದ ನೆಲವನ್ನು ಕೆರೆಯತೊಡಗಿದಳು.

ಕುಳಿತಿದ್ದ ಸ್ಥಳ ಬಿಟ್ಟೆದ್ದು ವಾಸು ಪ್ರಮಿಳೆಯ ಮುಂದೆನಿಂತು

"ಏಕೆ ಹಾಗೆ ಮಾಡಿದೆ ತಿಳಿಯಿತೇ ?"

ಎಂದು ಅವಳನ್ನು ಭರದಿಂದಪ್ಪಿ ಮುದ್ದಿಟ್ಟ. ಪ್ರಮಿಳಾ ಒಲ್ಲೆಯೆನ್ನಲಿಲ್ಲ.

ಮಾರನೆಯ ದಿನ ಚನ್ನಕೇಶವಯ್ಯ ಊಟಮುಗಿಸಿ ಅಂಗಡಿಗೆ ಹೊರಟಿದ್ದ. ಅವನ ಕೈಗೆ ಕೋಟುಕೊಡುತ್ತಾ ಪ್ರಮಿಳ

"ಹತ್ತು ನಿಮಿಷ ಪುರಸತ್ತಿದೆಯೇನು ?"

"ಏಕೆ ?"

"ಒಂದು ಕಾಗದ ತೋರಿಸಬೇಕಾಗಿತ್ತು."

"ತೋರಿಸು."

ಪ್ರಮಿಳಾ ಅವನ ಕೈಗೆ ಹೆಡ್ ಅಫೀಸಿನ ಕಾಗದವನ್ನಿತ್ತಳು. ಅವಳ ಕಾಗದ ನೋಡುತ್ತ ಚನ್ನಕೇಶವಯ್ಯ ವಿಸ್ಮಯಗೊಂಡು

"ಬಿಸಿನೆಸ್ ಎಷ್ಟು ಮಾಡಿದ್ದೀ?"

"ಎಪ್ಪತ್ತೈದು ಸಾವಿರ! ತೆಗೆದುಕೊಳ್ಳಿ – ನಿಮ್ಮ ಅಂಗಡಿಯವನ ತಲೆಯ ಮೇಲೆ ಈ ಚೆಕ್ ಬಿಸಾಡಿ ಅವನ ಋಣದಿಂದ ಬಿಡುಗಡೆಯಾಗಿ"

ಎಂದು ಚನ್ನಕೇಶವಯ್ಯನ ಕೈಗೆ ನಾಲ್ಕುವರೆ ಸಾವಿರದ ಒಂದು ಚೆಕ್ಕನ್ನಿತ್ತಳು.

ಚನ್ನಕೇಶವಯ್ಯ ಚೆಕ್ಕನ್ನು ನೋಡುತ್ತ ನೋಡುತ್ತ ಪಕ್ಕದಲಿದ್ದ ಕುರ್ಚಿಯನ್ನೆಳೆದುಕೊಂಡು ಕುಕ್ಕರಿಸಿದ.

"ಅಂಗಡೀಗೆ ಹೊತ್ತಾಗುವುದಿಲ್ಲವೇ?"

"ಪ್ರಮಿಳಾ – ಇದು ಕನಸಲ್ಲವಷ್ಟೇ?"

"ಕನಸಲ್ಲ – ಸತ್ಯ – ಸೆಂಟ್ರಲ್ ಬ್ಯಾಂಕಿನ ಚೆಕ್ಕು."

"ನನ್ನ ಈ ಜನ್ಮದಲ್ಲಿ ಸಾಲ ತೀರುವುದಿಲ್ಲವೆಂದಿದ್ದೆ."

"ನಂಬಿದವರನ್ನು ದೇವರು ಕೈಬಿಡುವುದಿಲ್ಲ."

"ನಿಜ – ನಿನ್ನ ಸೇವೆ, ಭಕ್ತಿ ಆ ಕಲ್ಲುದೇವರ ಕಠಿಣ ಮನಸ್ಸನ್ನೂ ಕರಗಿಸಿದೆ."

"ರಾತ್ರಿ ಎಷ್ಟು ಗಂಟೆಗೆ ಬರುವಿರಿ?"

"ಯಥಾಪ್ರಕಾರ ಒಂಭತ್ತು ಗಂಟೆಗೆ! ಸಾಧ್ಯವಾದರೆ ಇವತ್ತು ಸ್ವಲ್ಪ ಜೇಗ ಬರುತ್ತೇನೆ. ಸ್ಟಾಕ್ ಚೆಕಿಂಗ್ ಜೇರೆ ಆರಂಭವಾಗಿದೆ. ಎಷ್ಟು ಹೊತ್ತಾಗುತ್ತದೋ ಏನೋ?"

ಚನ್ನಕೇಶವಯ್ಯನನ್ನು ಬೀಳ್ಕೊಟ್ಟು ಅವನು ಹೋದ ಮಾರ್ಗವನ್ನು ಕ್ಷಣಕಾಲ ನೋಡಿ ಪ್ರಮಿಳಾ ಬಾಗಿಲು ಹಾಕಿಕೊಂಡು ಒಳಕ್ಕೆ ಬಂದಳು. ಸಂಮಿಶ್ರ ಭಾವನೆಗಳಿಂದ ಅವಳ ಮನಸ್ಸು ಭಾರವಾಗಿತ್ತು. ದುಃಖ ಉಮ್ಮಳಿಸಿ ಬಂತು – ಕಣ್ಣೀರು ಕಟ್ಟೆಯೊಡೆದು ಬಂತು – ಮುಖಕ್ಕೆ ಸೆರಗು ಕೊಟ್ಟು ಅತ್ತು ತೃಪ್ತಳಾದಳು.

ವಾಸು ಬಂದ ಕೂಡಲೆ ಬಚ್ಚಲು ಮನೆಗೆ ಹೋಗಿ ಕಣ್ಣು, ಮುಖ ಚೆನ್ನಾಗಿ ತೊಳೆದುಕೊಂಡು ಬಂದರೂ, ಅವಳು ಅತ್ತಿದ್ದುದು ಚೆನ್ನಾಗಿ ಕಾಣ ಬರುತ್ತಿತ್ತು.

ಪ್ರಮಿಳೆಯ ಸಮೀಪದಲ್ಲಿ ಕುಳಿತು ಅವಳ ಮುಂಗುರುಳನ್ನು ಸೇವರಿಸುತ್ತಾ

"ಏಕೆ ಅಳುತ್ತಿದ್ದೆ ಪ್ರಮಿಳಾ ?" ಎಂದು ಮೃದುವಾಗಿ ಕೇಳಿದ.

"ಅಳಲಿಲ್ಲವಲ್ಲಾ !"

"ಸುಳ್ಳು ಊರ್ಜಿತವಾಗುವುದಿಲ್ಲ. ನೀನು ಹೇಳುತ್ತಿರುವುದು ಸುಳ್ಳೆಂದು ನಿನ್ನ ಕಣ್ಣುಗಳು ಸಾರುತ್ತಿವೆ."

"ದುಃಖವಾಯಿತು – ಕಣ್ಣಲ್ಲಿ ನಾಲ್ಕು ಹನಿ ನೀರು ಬಂದಿರಬಹುದು."

"ದುಃಖ, ಚಿಂತೆ ನಿನ್ನ ಬಳಿ ಸುಳಿಯಬಾರದೆಂದಲ್ಲವೇ ನಾನು ಯೋಚಿಸುತ್ತಿರುವುದು."

"ಹೀಗೇಕಾಯಿತು ?"

"ಯಾವದು ? ನನ್ನ ನಿನ್ನ ಸಂಬಂಧವೇ ?"

"ಹೂ."

"ವಿಧಿವಿಲಾಸ. ವಿಧಿ ಯಾರನ್ನು ಎಲ್ಲಿ ಕೂಡಿಸಿರುತ್ತದೋ ಹೇಳ ಬಲ್ಲವರು ಯಾರು ?"

"ನಿಮ್ಮ ದೊಡ್ಡ ಗುಣಕ್ಕೆ ನಾನು ತಕ್ಕವಳಲ್ಲ."

"ನನ್ನಲ್ಲಿ ದೊಡ್ಡ ಗುಣವಿದೆಯೆಂದು ಇದುವರೆಗೆ ಯಾರೂ ಹೇಳಿರಲಿಲ್ಲ."

"ಅವರಿಗೆ ಕಣ್ಣಿಲ್ಲ."

"ನಿನ್ನನ್ನು ನೋಡಿದ ದಿನವೇ ಮನಸ್ಸು ಅಸ್ತವ್ಯಸ್ತವಾಯಿತು. ನೀನು ಪಾಠಕ್ಕೆ ಬರುವಾಗ ಹೋಗುವಾಗ ಕದ್ದು ಕದ್ದು ನಿನ್ನ ನೋಡುತ್ತಿದ್ದೆ. ನೋಡಿದರೆ ಅತೃಪ್ತಿ – ನೋಡದಿದ್ದರೆ ನಿರಾಶೆ. ಕೊನೆಗೆ ಕಂಪೆನಿಯ ವ್ಯಾಜದಲ್ಲಿ ನಿನ್ನ ಪರಿಚಯ ಸಂಪಾದಿಸಬೇಕಾಯಿತು."

"ನಿಮ್ಮ ವಿಷಯ ಏನೂ ಹೇಳಿಲಿಲ್ಲವಲ್ಲ. ನಾನು ಕೇಳಬಾರದೇ ?"

"ನೀನು ಕೇಳದೆ ಇನ್ನು ಯಾರು ಕೇಳಬೇಕು."

"ನಿಮಗೆ ಮದುವೆಯಾಗಿಲ್ಲವೇ ?"

ವಾಸು ಮುಖ ಗಂಭೀರವಾಯಿತು. ಸ್ವಲ್ಪಕಾಲ ನೀರವವಾಗಿದ್ದು

"ಆ ವಿಷಯ ನಿನಗೆ ಎಂದಾದರೂ ಒಂದುದಿನ ತಿಳಿಸಲೇ ಬೇಕಾಗಿತ್ತು. ನೀನು ಈಹೊತ್ತು ಕೇಳಿದ್ದು ಒಳ್ಳೆಯದೇ ಆಯಿತು. ಇಬ್ಬರ ಮನಸ್ಸೂ ನಿರಾತಂಕವಾಗುತ್ತದೆ."

"ನಿಮಗೆಲ್ಲಿ ಅಸಮಾಧಾನವಾಗುತ್ತದೊ ಎಂದು ಹೆದರಿ ಹೆದರಿಯೇ ಕೇಳಿದೆ. ಮದುವೆಯಾಗಿದೆ!"

"ಆಗಿದೆ– ಆಗಿತ್ತು."

"ಹಾಗಂದರೆ."

"ಅದೊಂದು ದುರಂತ ಕಥೆ. ಮದುವೆಯಾಗಿತ್ತು – ಹುಡುಗಿಯೂ ಚೆನ್ನಾಗಿದ್ದಳು. ಅವಳ ತಂದೆಯ ಮನೆಯವರೂ ಅನುಕೂಲಸ್ಥರು – ನನಗೆ ಆರುಸಾವಿರ ರೂಪಾಯಿ ವರದಕ್ಷಿಣೆ ಕೊಟ್ಟಿದ್ದರು. ಪ್ರಸ್ಥದ ಏರ್ಪಾಡಾಯಿತು – ಮಲಗುವ ಮನೆಗೆ ಇಬ್ಬರೂ ಹೋದೆವು – ನನ್ನ ಹೆಂಡತಿಯ ಹೊಟ್ಟೆಯ ಮೇಲೆ, ಬಲತೊಡೆಯ ಮೇಲೆ ಅಂಗೈಯಗಲ ಬಿಳಿ ಕೆಂಪು ಮಿಶ್ರ ಮಚ್ಚೆಗಳಿದ್ದವು. ನನ್ನ ಎದೆಯೊಡೆದು ಹೋಯಿತು. ಅವಳನ್ನಲ್ಲಿಯೇ ಬಿಟ್ಟು ನನ್ನ ಗೆಳೆಯನೊಬ್ಬನ ಮನೆಗೆ ಅದೇ ರಾತ್ರಿ ಹೊರಟುಹೋದೆ. ಮಾರನೆಯ ದಿನ ಅವಳನ್ನು ಕರೆದುಕೊಂಡು ಹೋಗಿ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರಿಗೆ ತೋರಿಸಿದೆ. 'ಲ್ಯೂಕೋಡರ್ಮಾ' ಎಂದು ಡಾಕ್ಟರು ಹೇಳಿದರು; ಈ ವ್ಯಾಧಿಗೆ ಚಿಕಿತ್ಸೆ ಇಲ್ಲವೇ ಎಂದು ಕೇಳಿದೆ. ಇಲ್ಲವೆಂದು ಡಾಕ್ಟರು ಖಂಡಿತವಾಗಿ ಹೇಳಿಬಿಟ್ಟರು. ಅದೇ ಕೊನೆಯಾಯಿತು. ವರದಕ್ಷಿಣೆ, ಹಣ ಹಿಂದಿರುಗಿಸಿ 'ನಿಮ್ಮ ಮಗಳ ಯೋಗಕ್ಷೇಮ ನೀವು ನೋಡಿಕೊಳ್ಳಿ' ಎಂದು ನನ್ನ ಮಾವನವರಿಗೆ ಹೇಳಿ ಹೊರಟುಬಿಟ್ಟೆ. ತಿರುಗಿ ಅವಳ ಮುಖ ನೋಡಲಿಲ್ಲ."

"ಬೇರೆ ಮದುವೆ ಏಕೆ ಮಾಡಿಕೊಳ್ಳಲಿಲ್ಲ."

"ಈ ಜಗತ್ತು ಬರೀ ಮೋಸದ ಜಗತ್ತೆಂಬ ಅಭಿಪ್ರಾಯ ನನ್ನ ಮನಸ್ಸಿನಲ್ಲಿ ನೆಟ್ಟುಬಿಟ್ಟಿತು. ಮನೆಬಿಟ್ಟು ಹೊರಟು ತ್ರಿಪಾದಿ ದನಿಷ್ಠಾ ಪಂಚಕದ ಹಾಗೆ ಊರೂರು ಅಲೆದೆ. ಕೊನೆಗೆ ಈ ಷಾಲಿಮಾರ್ ಕಂಪೆನಿ

ಗಂಟುಬಿತ್ತು. ಮದುವೆಯೆಂದರೆ ಮನಸ್ಸು ನವಿರೇಳುವಂತಾಯಿತು. ಪ್ರಾಯಶಃ ನನ್ನ ಜೀವನ ನಿನಗಾಗಿ ಕಾದಿತ್ತೆಂದು ಕಾಣುತ್ತದೆ.''

"ಮನೆಯಲ್ಲಿರುವ ಮಡಿ ಹೆಂಗಸು ಯಾರು ?''

"ವೇಣಕ್ಕ – ವರಸೆಯಲ್ಲಿ ನನಗೆ ಅಕ್ಕನಾಗಬೇಕು. ಆಕೆಯೂ ನಿರಾಶ್ರಿತಳಾಗಿದ್ದಳು. ಬೆಂಗಳೂರಿಗೆ ಬಂದು ನಿಂತ ಮೇಲೆ ಆಕೆಯನ್ನು ಕರೆಸಿಕೊಂಡೆ."

"ವೇಣಕ್ಕನಿಗೆ ಗೊತ್ತಾದರೆ !"

"ಯಾವದು ?"

"ನಮ್ಮ ಸಂಬಂಧ."

"ಗೊತ್ತಾದರೆ ಭಯವಿಲ್ಲ. ಒಂದಲ್ಲ ಒಂದು ದಿನ ಗೊತ್ತಾಗಲೇ ಬೇಕು. ಮುದುಕಿ ಒಳ್ಳೆಯ ಜೀವ – ತರಲೆ ಸ್ವಭಾವವಿಲ್ಲ. ನನ್ನ ವಿಷಯ ಹಾಗಿರಲಿ – ನಿನ್ನ ವಿಷಯ ಹೇಳು – ನಿಮ್ಮ ಯಜಮಾನರಿಗೆ ತಿಳಿದರೆ............"

"ಅದನ್ನು ನಾನು ಯೋಚಿಸಿಲ್ಲ. ಬಹಳ ದಿವಸ ಅವರಿಂದ ಮುಚ್ಚಿಡಲು ಸಾಧ್ಯವಿಲ್ಲ."

"ಮನೆಯಲ್ಲಿ ನಿನಗಿದ್ದ ಶಾಂತಿಗೆ ನಾನು ಭಂಗತಂದ ಹಾಗಾಯಿತು."

"ಮನೆಯಲ್ಲಿ ನನಗೆ ಶಾಂತಿಯಿತ್ತೇ ?"

"ಅದನ್ನು ನಾನು ಹೇಗೆ ಬಲ್ಲೆ ? ನೀನು ಹೇಳಬೇಕು."

"ಕಾರ್ಪಣ್ಯದ ಬಾಳಿನಲ್ಲಿ ಶಾಂತಿ ಇರಲು ಹೇಗೆ ಸಾಧ್ಯ."

"ಅವರು ಒಳ್ಳೆಯವರ ಹಾಗೆ ಕಾಣುತ್ತಾರೆ."

"ಹೌದು – ಮುಂದೆ ಬಂದರೆ ಹಾಯುವುದಿಲ್ಲ, ಹಿಂದೆ ಬಂದರೆ ಒದೆಯುವುದಿಲ್ಲ."

"ಇಷ್ಟು ಬೇಸರವಿರುವಾಗ ಮದುವೆ ಏಕೆಮಾಡಿಕೊಂಡೆ ?"

"ನಾನು ಮಾಡಿಕೊಳ್ಳಲಿಲ್ಲ. ಗುರು ಹಿರಿಯರು ಮಾಡಿದರು. ವಯಸ್ಸಿಗೆ ಬಂದ ಅಪರಾಧ ಮಾಡಿದ್ದೆ. ಪಶುವಾಗಿ ಹುಟ್ಟಿದ ಮೇಲೆ ಅದು ಯಜ್ಞಕ್ಕೆ ತಾನೆ ಮೀಸಲು."

"ನನಗೊಂದು ಮಾತು ಕೊಡುವೆಯಾ ?"

"ಹೇಳಿ."

"ನಾಳೆ ಎಂಥ ಪರಿಸ್ಥಿತಿ ಬಂದರೂ ನೀನು ನನ್ನ ಕೈಬಿಡಕೂಡದು."

"ನೀವು."

"ಕೈಬಿಡುವ ಯೋಚನೆ ನನಗಿದ್ದರೆ ನಿನ್ನನ್ನು ಕೂಡಲು ಇಷ್ಟು ಪ್ರಯತ್ನ ಮಾಡುತ್ತಿರಲಿಲ್ಲ."

"ಗಂಡಸರು ನೀವು – ತುಂಬ ಚಪಲಚಿತ್ತರು."

"ಇಲ್ಲಿ ನೋಡು ಪ್ರಮಿಳಾ. ನನಗೆ ನನ್ನವರು ಎನ್ನುವವರು ಯಾರೂ ಇಲ್ಲ. ನನ್ನ ಬಾಳೊಂದು ಅರಣ್ಯ ಕುಸುಮ. ಅದನ್ನು ನೀನೆತ್ತಿ ಮುಡಿದುಕೊಂಡೆ. ಕುಸುಮ ನಿನ್ನ ಮುಡಿಯನ್ನು ಬಿಟ್ಟು ಅಲುಗಾಡ ದಿರಲಿ."

"ಕುಸುಮ ಬೇರೆ ಮುಡಿಯನ್ನು ಆಶಿಸದಿರಲಿ."

ಪ್ರಮಿಳೆಯ ಮಾರ್ಮಿಕ ಸೂಚನೆ ವಾಸುವಿನ ವಿಚಾರಶಕ್ತಿಯನ್ನು ಕೆರಳಿಸಿತು. ಅವಳು ಆಡಿದ ಮಾತನ್ನೇ ಯೋಚಿಸುತ್ತ ಕುಳಿತ.

ಪ್ರಮಿಳಾ ಗಡಿಯಾರವನ್ನೊಮ್ಮೆ ನೋಡಿದಳು. ವಾಸು ಅದನ್ನು ಲಕ್ಷಿಸಿ

"ಗಡಿಯಾರ ನೋಡುತ್ತಿದ್ದೀ."

"ಹೂ! ಇವತ್ತು ಮನೆಗೆ ಬೇಗ ಬರುವುದಾಗಿ ತಿಳಿಸಿದ್ದಾರೆ."

ವಾಸು ಅಂತರಂಗದಲ್ಲಿ ತೀವ್ರ ವೇದನೆಯಾಯಿತು. ಒಳಗಿನ ನೋವು ಬಿಸುಸುಯ್ಯಲಾಯಿತು.

"ಹೀಗೇ ಇನ್ನೆಷ್ಟು ದಿನ ಕಳೆಯಬೇಕು ?"

"ನನ್ನ ಕರ್ಮ ಸವೆಯುವವರೆಗೆ."

"ನಾಳೆ ನಿನ್ನ ನೋಡುವವರೆಗೆ ನನ್ನ ಪರಿಸ್ಥಿತಿ ಏನಾಗಿರುತ್ತದೆ ಬಲ್ಲೆಯಾ ?"

"ಬಲ್ಲೆ – ಆ ಪರಿಸ್ಥಿತಿಯೇ ನನ್ನದೂ ಅಲ್ಲವೇ ?"

ಪ್ರಮಿಳೆಯ ನಲ್ನುಡಿ ವಾಸುವಿನ ಅಂತರಂಗಕ್ಕೆ ಸ್ವಲ್ಪ ಶಾಂತಿಯನ್ನು ನೀಡಿತು.

"ಬೆಳಿಗ್ಗೆ ಬರುವಿರಾ ?" ಎಂದು ಕೇಳಿದಳು.

"ತಪ್ಪದೆ ಬರುತ್ತೇನೆ" ಎಂದು ಉತ್ತರ ಹೇಳಿದ.

ಚನ್ನಕೇಶವಯ್ಯ ಹೆಂಡತಿಗೆ ವಾಗ್ದಾನಮಾಡಿದ್ದಂತೆ ಒಂಭತ್ತು ಗಂಟೆಗೇ ಬರಲು ಸಾಧ್ಯವಾಗಲಿಲ್ಲ. ಅವನು ಮನೆಗೆ ಬಂದಾಗ ಅದೇ ಹತ್ತು ಗಂಟೆಯಾಗಿತ್ತು.

ಊಟ ಮುಗಿಸುತ್ತ ಚನ್ನಕೇಶವಯ್ಯ ಉತ್ಸಾಹದಿಂದ

"ಇಂದು ಋಣ ವಿಮುಕ್ತನಾದೆ"

ಎಂದ. ಪ್ರಮೀಳಾ ಉತ್ತರಕೊಡದಿರಲು

"ನಿನಗೆ ಸಂತೋಷವಿಲ್ಲವೇ ?"

"ಇಲ್ಲದೆ ಇರುತ್ತದೆಯೇ. ಸಾಹುಕಾರ ಏನು ಹೇಳಿದ."

"ಇಷ್ಟೇಕೆ ಅವಸರಪಟ್ಟುಕೊಂಡಿರಿ – ನಿಧಾನವಾಗಿ ಕೊಟ್ಟಿದ್ದರೆ ಆಗಿತ್ತು ಎಂದು ಹೇಳಿದ."

"ಹಣ ಕೈಗೆ ಬಂದಮೇಲೆ ಹಾಗೆ ಹೇಳುವುದು ಸ್ವಾಭಾವಿಕ."

"ನೀನು ಊಟ ಮಾಡಿದೆಯಾ ?"

"ಇಲ್ಲ – ನನಗೆ ಹಸಿವಿಲ್ಲ."

"ಹಸಿವಿಲ್ಲವೆಂದರಾಗುತ್ತದೆಯೇ. ಸೇರಿದಷ್ಟು – ಒಂದು ತುತ್ತು ಊಟಮಾಡು."

"ಸಾಲದ ಶೂಲ ತಪ್ಪಿದುದು ಹಬ್ಬದೂಟ ಮಾಡಿದಂತಾಗಿದೆ. ಊಟಕ್ಕೆ ನನ್ನ ಬಲವಂತ ಮಾಡಬೇಡಿ"

ಎಂದಳು.

ಚನ್ನಕೇಶವಯ್ಯ ಕೈತೊಳೆದುಕೊಂಡು, ಯಾವದೋ ಪೇಪರ್ ತಿರುವಿಹಾಕಿದ ಶಾಸ್ತ್ರಮಾಡಿದ. ಪ್ರಮೀಳೆ ಮಿಕ್ಕ ಅಡಿಗೆ ಮುಚ್ಚಿಟ್ಟು, ಹಾಲಿಗೆ ಹೆಪ್ಪುಹಾಕಿ ಅಡಿಗೆಯ ಮನೆ ಬಾಗಿಲು ಹಾಕಿಕೊಂಡು ಬಂದಳು.

"ವೀಳೆಯದೆಲೆ ತರಿಸಲಿಲ್ಲವೇ ?"

"ಇಲ್ಲ. ಪೇಟೆಯಿಂದ ಬರುವಾಗ ನೀವೇ ತಂದಿದ್ದರಾಗಿತ್ತು."

"ಮನೆ ಸೇರುವ ಅವಸರದಲ್ಲಿ ಮರೆತುಬಿಟ್ಟೆ."

ದೀಪ ನಂದಿಸಿದ್ದಾಯಿತು. ಚನ್ನಕೇಶವಯ್ಯ ತನ್ನ ಬಾಹು ಚಾಚಿ ಹೆಂಡತಿಯನ್ನಪ್ಪಿಕೊಂಡು ಮಲಗಿದ. ಗಂಡನ ಆಲಿಂಗನ ಪ್ರಮಿಳೆಗೆ ಮೃತ್ಯುಬಂಧನವಾಯಿತು.

ವಾಸು, ಪ್ರಮಿಳೆಯರ ಸ್ನೇಹ ತಳೆಯುತ್ತಿದ್ದ ರೂಪ ಬಹಳ ದಿವಸ ಚನ್ನಕೇಶವಯ್ಯನ ಕಣ್ಣಿಗೆ ಬೀಳಲಿಲ್ಲ. ಅವಳ ಉಡುಗೆ, ತೊಡುಗೆ ಸುಧಾರಿಸುತ್ತ ಬಂದನ್ನು, ಆಲಂಕಾರಿಕ ಸಾಮಗ್ರಿಗಳು ಸಮೃದ್ಧಿಯಾದುದು, ಮನೆಗೆ ಎಂಟು ವಾಲ್ವಿನ ಫಿಲಿಪ್ಸ್ ರೇಡಿಯೋ ಬಂದದ್ದು ಎಲ್ಲವನ್ನೂ ಚನ್ನ ಕೇಶವಯ್ಯ ನೋಡುತ್ತಿದ್ದ. ಅವಳ ವರಮಾನದ ಇನ್ನೂರೈವತ್ತು ರೂಪಾಯಿ, ತನ್ನ ಸಂಪಾದನೆಯ ನೂರಿಪ್ಪತ್ತು ರೂಪಾಯಿಯಲ್ಲಿ ಈ ವೈಭವ ಸಾಧ್ಯ ವೆಂದು ಅವನು ಭಾವಿಸಿಕೊಂಡ.

ಆದರೆ ಆಗಾಗ್ಗೆ ಅವನ ಕಿವಿಯ ಮೇಲೆ ಒಡಕು ಮಾತುಗಳು ಕೇಳಿ ಬರುತ್ತಿದ್ದವು. 'ವಾಸು ಜತೆಯಲ್ಲಿ, ಅವನ ಕಾರಿನಲ್ಲಿ ಪ್ರಮಿಳಾ ಕಬ್ಬನ್ ಪಾರ್ಕಿನಲ್ಲಿದ್ದಳು'—'ಅವಳೂ ಅವನೂ ಕೈಹಿಡಿದುಕೊಂಡು ಕೆನ್‌ಸಿಂಗ್‌ಟನ್ ಪಾರ್ಕಿನಲ್ಲಿ ಓಡಿಯಾಡುತ್ತಿದ್ದರು'—'ಇಬ್ಬರೂ ಲಾಲ್‌ಬಾಗ್ ರೆಸ್ಟುರಾದಲ್ಲಿ ಐಸ್‌ಕ್ರೀಮ್ ತಿನ್ನುತ್ತಿದ್ದರು' ಎಂಬ ವಿಶೇಷ ಸುದ್ದಿಗಳು ಅವನ ಕಿವಿ ಮುಟ್ಟುತ್ತಿದ್ದವು.

ಆ ವಿಷಯ ಯಾವ ರೀತಿಯಲ್ಲಿ ಪ್ರಮಿಳೆಯ ಹತ್ತಿರ ಪ್ರಸ್ತಾಪಿಸ ಬೇಕೆಂದು ಚನ್ನಕೇಶವಯ್ಯ ದೀರ್ಘವಾಗಿ ಆಲೋಚಿಸುತ್ತಿದ್ದ. ಒಂದು ದಿನ ಅವಕಾಶ ತಾನಾಗಿಯೇ ಒದಗಿತು.

ಪ್ರಮಿಳೆಯ ಮನಸ್ಸಿನಲ್ಲಿ ರಾಮಗಿರಿಯ ಹೊನ್ನೇಗೌಡನ ಮೂರು ಎಕರೆ ಗದ್ದೆಯ ನೆನಪು ಅಳಿಸಿಹೋಗಿರಲಿಲ್ಲ. ಗಂಡನ ಮುಂದೆ ಆ ವಿಷಯ ವನ್ನೆತ್ತಿ ಕೇಳಿದಳು

"ಗದ್ದೆ ವಿಷಯ ಮರೆತೇ ಬಿಟ್ಟಿರಿ."

"ಮರೆತಿಲ್ಲ ಜ್ಞಾಪಕವಿದೆ. ಆದರೆ............"

"ದುಡ್ಡಿಗೇನು ಮಾಡುವುದೆಂದು ಯೋಚಿಸುತ್ತಿರುವಿರೇನೋ ?"

"ಹೌದು. ಮತ್ತೆ ಅಂಗಡಿ ಸಾಹುಕಾರರ ಹತ್ತಿರ ಸಾಲಮಾಡಿ, ಅವನ ಅಡಿಕೆ ಕತ್ತರೀಗೆ ಸಿಕ್ಕಿಕೊಳ್ಳುವುದಕ್ಕೆ ನನಗಿಷ್ಟವಿಲ್ಲ."

"ನನಗೂ ಇಷ್ಟವಿಲ್ಲ."

"ಹಾಗಾದರೆ ಹಣ."

"ಎಕರೆಗೆ ಎರಡು ಸಾವಿರ ಹೆಚ್ಚು."

"ವ್ಯಾಪಾರ ಕುದುರಿಸುವಾಗ ಚೌಕಾಸಿಮಾಡಿದರೆ ಚೆನ್ನಾಗಿರುತ್ತದೆ. ಬರೀಗೈಯಲ್ಲಿ ಮೊಳಹಾಕಿದರೆ.........."

"ನಾನು ಐದು ಸಾವಿರ ಕೊಡಿಸಿದರೆ ಕುದುರಿಸುತ್ತೀರೇನು ?"

"ಅಷ್ಟು ಹಣ ನಿನಗೆ ಎಲ್ಲಿಂದ ಬರಬೇಕು."

"ಕಂಪೆನಿಯವರು ನಾನು ಕೇಳಿದಷ್ಟು ಅಡ್ವಾನ್ಸ್ ಕೊಡುತ್ತಾರೆ."

"ಈ ಮಾತು ಸತ್ಯವೇ ?"

"ನೀವೇ ಬೇಕಾದರೆ ವಿಚಾರಸಿ ನೋಡಿ. ಈ ವಿಷಯ ಸುಳ್ಳು ಹೇಳಿ ನಾನೇನು ಸಾಧಿಸಬೇಕಾಗಿದೆ."

ನಿನ್ನ ಮಾತಿನಲ್ಲಿ ಅಪನಂಬಿಕೆ ತಳೆಯುತ್ತಿದ್ದೇನೆಂದು ಭಾವಿಸಬೇಡ. ಜನ ವಿಧವಿಧವಾಗಿ ಮಾತಾಡಿಕೊಳ್ಳುತ್ತಿದ್ದಾರೆ."

"ಅವರ ಮಾತುಗಳು ನನ್ನ ಕಿವಿಯ ಮೇಲೂ ಬಿದ್ದಿವೆ. ಆಡುವವರ ಬಾಯಿಗೆ ಬುಟ್ಟಿ ಹೊಲೆಸುವುದು ಸಾಧ್ಯವೇ ? ನಾನು ದೊಡ್ಡ ಕೇಸುಗಳನ್ನು ಹಿಡಿದಾಗ, ಚೀಫ್ ಆರ್ಗನೈಸರ್ ಅವರ ಸಹಾಯ ತೆಗೆದುಕೊಳ್ಳಬೇಕಾಗುತ್ತದೆ. ಅವರ ಕಾರಿನಲ್ಲಿ ಓಡಿಯಾಡಬೇಕಾಗುತ್ತದೆ. ನಿಮಗೆ ಬೇಡವಾದರೆ ಹೇಳಿಬಿಡಿ. ಕೆಲಸಕ್ಕೆ ರಾಜೀನಾಮೆ ಕಳಿಸಿಬಿಡುತ್ತೇನೆ. ಬಡತನದ ಬಾಳ್ವೆ ಮಾಡುವ ಅಭ್ಯಾಸವೂ ನನಗಿದೆ."

ಪ್ರಮೀಳೆಯ ಮೇಲೆ ಆಕ್ಷೇಪಣೆಯೆತ್ತಿ ಅನುಮಾನಪಟ್ಟುದಕ್ಕೆ ಚನ್ನಕೇಶವಯ್ಯ ನಾಚಿದ. 'ನಾನೆಂಥ ಕೃತಘ್ನ' ಎಂದುಕೊಂಡು

"ಜನಗಳು ಆಡಿಕೊಳ್ಳುವುದನ್ನು ನಾನು ನಂಬಿದೆ ಎಂದು ಹೇಳಲಿಲ್ಲ ಪ್ರಮೀಳಾ – ಮುನ್ನೆಚ್ಚರಿಕೆಗಾಗಿ ನಾನು ಕೇಳಿದುದನ್ನು ನಿನಗೆ ತಿಳಿಸಿದೆ. ಈ ಮನೆ ಗೆಲುವಾಗಲು, ಚೆಲುವಾಗಲು ನೀನು ಮಾಡುತ್ತಿರುವ ದುಡಿಮೆಯನ್ನು. ನೋಡಿ ಆಕ್ಷೇಪಣೆ ಮಾಡಲು ನನಗೆ ಬಾಯಿ ಹೇಗೆ ಬರಬೇಕು."

"ಈಗೇನು ಹೇಳಿ. ಕಂಪೆನಿಯಿಂದ ಅಡ್ವಾನ್ಸ್ ತೆಗೆದುಕೊಂಡು ಜಮೀನು ಕೊಳ್ಳೋಣವೇ ಬೇಡವೋ ? ಕಾಲ ಒಂದೇ ರೀತಿಯಿರುವುದಿಲ್ಲ.

ನಾಳೆ ಯಾರೋ ನಾವು ಯಾರೋ? ಕೈನಡೆಯುವಾಗ ಆಸ್ತಿಮಾಡಿಕೊಳ್ಳ ದಿದ್ದರೆ ಮುಂದೆ ಪಶ್ಚಾತ್ತಾಪ ಪಡಬೇಕಾಗುತ್ತದೆ."

"ನಿನಗೆ ಹೇಗೆ ಸೂಕ್ತವೋ ಹಾಗೆ ಮಾಡು."

ಎಂದು ಹೇಳಿದ. ಪ್ರಮೀಳೆಯ ಹೃದಯಕ್ಕೆ ಗಂಡನ ಆಶ್ವಾಸನ ಹಾಲೆರೆದಂತಾಯಿತು.

ಒಂದೇ ವಾರದಲ್ಲಿ ಖರೀದಿಯೂ ಆಯಿತು – ಪತ್ರದ ರಿಜಿಸ್ಟ್ರೇಷನ್ನೂ ಆಯಿತು. ಪ್ರಮೀಳಾ ಚನ್ನಕೇಶವಯ್ಯನ ಜತೆ ರಾಮಗಿರಿಗೆ ಹೋಗಿ ಜಮೀನು ನೋಡಿಕೊಂಡು ಒಕ್ಕಲುಮಕ್ಕಳ ಪರಿಚಯಮಾಡಿಕೊಂಡು ಬಂದಳು.

ಪ್ರಮೀಳೆಯ ಮನಸ್ಸಿಗೆ ದೊರೆತ ಸಂತಸ ಅವಳ ದೇಹದ ಮೇಲೂ ಪರಿಣಾಮವನ್ನುಂಟುಮಾಡಿತ್ತು. ಕೊರಗಿನಿಂದ ಸವೆದಿದ್ದ ಮೈ ದುಂಡಾಗು ತ್ತಿತ್ತು. ಮುಖದ ಮೇಲೆ ಹೊಸ ಕಾಂತಿ ಬಂದಿತ್ತು. ಹದವರಿತು ಅವಳು ಮುಖಕ್ಕೆ ಬಳಿಯುತ್ತಿದ್ದ ಪೌಡರ್ ಅವಳ ಮುಖದ ವರ್ಚಸ್ಸನ್ನು ಇಮ್ಮಡಿಸಿತ್ತು. ಸುಂದರಿಯಾಗಿಯೇ ಜನಿಸಿದ್ದ ಪ್ರಮೀಳಾ ಕೃತ್ರಿಮ ಸೌಂದರ್ಯ ಸಾಧನಗಳನ್ನುಪಯೋಗಿಸಬೇಕಾಗಿರಲಿಲ್ಲ. ಅವಳು ನಕ್ಕರೆ, ಕಿವಿಯಲ್ಲಿದ್ದ ವಜ್ರದ ಬೆಂಡೋಲೆಯ ಕಾಂತಿ ಕುಂದುತ್ತಿತ್ತು. ಅವಳು ಕಣ್ಣು ಹೊರಳಿಸಿದ ಕಡೆ ವಿದ್ಯುತ್ ಸಂಚಾರವಾಗುತ್ತಿತ್ತು, ಚಲುವಿಗೆ ತಕ್ಕ ನಿಲುವೂ ಇದ್ದುದರಿಂದ ಕತ್ತು ತಗ್ಗಿಸಿಹೋಗುತ್ತಿದ್ದವರು ಕತ್ತೆತ್ತಿ ನೋಡು ತ್ತಿದ್ದರು; ಒಮ್ಮೆ ನೋಡಿದವರು ಮತ್ತೊಮ್ಮೆ ನೋಡಲು ಬಯಸು ತ್ತಿದ್ದರು.

ಪ್ರಮೀಳೆಯ ಚೆಲುವನ್ನು ಕಣ್ತುಂಬ, ಮನತುಂಬ, ಮೈತುಂಬ ತುಂಬಿಕೊಳ್ಳುತ್ತಿದ್ದವನು ವಾಸು. ಅವಳ ಮೃದು ಕೋಮಲವಾದ, ನಸು ನೀಳವಾದ ಬೆರಳುಗಳನ್ನು ನೇವರಿಸುತ್ತ, ಕತ್ತೆತ್ತಿ, ಕಣ್ಣಿಗೆ ಕಣ್ಣಿಟ್ಟು 'ಸುಂದರಿ' ಎಂದು ಅವನು ಅಂದರೆ ಪ್ರಮೀಳೆಗೆ ರೋಮಾಂಚನವಾಗುತ್ತಿತ್ತು. ಪ್ರಮೀಳೆಯ ಒಳಗೆ ಹುದುಗಿ ಕುಳಿತಿದ್ದ ಸೌಂದರ್ಯಾನುಭೂತಿ, ಶೃಂಗಾರ ಲಾಲಸೆ, ಪ್ರೇಯಾಕಾಂಕ್ಷೆಗಳನ್ನು ವಾಸುವಿನ ನೋಟ, ಸ್ಪರ್ಶ, ಒಲವು ಕೆದಕಿ ಕೆದಕಿ ಕೆರಳಿಸಿ ಏಳಿಸುತ್ತಿತ್ತು.

ವಾಸು ಬರುವುದು ಕಾಲುಗಂಟೆ ತಡವಾದರೆ ಅವಳ ಹೃದಯ ಹಿಂಡಿ ಹೋಗುತ್ತಿತ್ತು. ಒಳಬಾಗಿಲಿಂದ ಹೊರಬಾಗಿಲಿಗೆ ಹತ್ತು ಸಾರಿ - ನೂರು ಸಾರಿ ಯಾತ್ರೆ ಮಾಡಿಬಿಡುತ್ತಿದ್ದಳು. ಅವನು ಹೊರಡಲೆದ್ದಾಗ ಅವಳ ಹೃದಯಕ್ಕೆ ವಿಪರೀತ ಯಾತನೆಯಾಗುತ್ತಿತ್ತು. ಚನ್ನಕೇಶವಯ್ಯ ಬರುವ ವೇಳೆಯಾಯಿತೆಂದು ಅವನು ಹಲವು ಸಾರಿ ಎಚ್ಚರಿಸಿ, ಬಲವಂತವಾಗಿ ಅವಳ ಬಾಹುಬಂಧನದಿಂದ ಬಿಡುಗಡೆಯಾಗಬೇಕಾಗಿತ್ತು.

ವಾಸುವಿನ ಎಚ್ಚರ ನೋಡಿ ಪ್ರಮಿಳಾ ಒಮ್ಮೊಮ್ಮೆ ಕೆಣಕಿದ ಫಣಿಯಂತಾಗುತ್ತಿದ್ದಳು.

"ನಿಮಗೆ ಹೋಗಲು ಆತುರ. ಅವರು ಬಂದಾರೆಂದು ನೆಪ ಒಡ್ಡುತ್ತೀರಿ."

"ಇಲ್ಲ ಪ್ರಮಿ - ಸತ್ಯವಾಗಿ ನಿನ್ನನ್ನು ಬಿಟ್ಟುಹೋಗಲು ಕಾಲು ಬಾರದು. ಆದರೆ..........."

"ಆದರೇನು? ಅವರು ಕಂಡಾರೆಂದಲ್ಲವೇ ಭಯ. ಕಂಡರೆ ಕಾಣಲಿ, ನಾವಿಬ್ಬರೂ ಕುಳಿತಿರುವಾಗ ಅವರು ಬರಲಿ, ನಾನೇ ಹೇಳಿಬಿಡುತ್ತೇನೆ."

"ಏನು ಹೇಳುತ್ತೀಯೋ?"

"ನಿಮಗೆ ನಾನೇನೂ ಅನ್ಯಾಯ ಮಾಡಿಲ್ಲ. ಹತ್ತು ಹನ್ನೊಂದು ಸಾವಿರ ರೂಪಾಯಿ ಆಸ್ತಿ ಮಾಡಿದ್ದೇನೆ. ಇದನ್ನು ಅನುಭವಿಸಿಕೊಂಡು ನನ್ನನ್ನು ಬಿಟ್ಟುಬಿಡಿ - ನನ್ನನ್ನು ಮರೆತುಬಿಡಿ. ನನಗೆ ಸ್ವಾತಂತ್ರ್ಯಕೊಡಿ ಎಂದು ಬೇಡಿಕೊಳ್ಳುತ್ತೇನೆ."

"ಅವರು ಒಪ್ಪದಿದ್ದರೆ."

"ನೀವು ಒಪ್ಪುವಿರೋ ಇಲ್ಲವೋ?"

"ಯಾವದಕ್ಕೆ?"

"ನನ್ನನ್ನು ಕರೆದುಕೊಂಡು ಹೋಗುವುದಕ್ಕೆ."

"ಎಲ್ಲಿಗೆ?"

"ನಾವಿಬ್ಬರೂ ಸುಖವಾಗಿ ಎಲ್ಲಿ ಬಾಳಬಹುದೋ ಅಲ್ಲಿಗೆ."

"ನಿಜವಾಗಿ ನೀನು ಈ ಹೆಜ್ಜೆ ಇಡಲು ಸಿದ್ಧವಾಗಿರುವೆಯಾ?"

"ಈಗಲೇ ಹೊರಡೋಣವೇ?"

"ಹೊರಡಬೇಕಾದ ಪ್ರಸಂಗ ಬಂದಿಲ್ಲವಲ್ಲ."

"ಬಂದಾಗ – ನೀವು ಹಿಮ್ಮೆಟ್ಟುವುದಿಲ್ಲವಷ್ಟೇ ?"

"ನಾನು ಹಿಮ್ಮೆಟ್ಟುವುದೇ? ಇಲ್ಲಿದ್ದು ನನಗಾಗಬೇಕಾದದ್ದೇನು. ಷಾಲಿಮಾರ್ ಹೋದರೆ ಶನಿ ಕಳೆದುಹೋಯಿತು. ಬೇಕಾದಲ್ಲಿದ್ದು ನನ್ನ ಜೀವನ ನಾನು ಸಾಗಿಸಬಲ್ಲೆ."

"ಇನ್ನು ಮೇಲೆ 'ನನ್ನ ಜೀವನವಲ್ಲ'—'ನಮ್ಮ ಜೀವನ'"

"ನಾನು ಎಂದರೆ ನಾವು ಎಂದೇ ಅಲ್ಲವೇ ಅರ್ಥ."

ಪ್ರಮಿಳಾ ಹಿಗ್ಗಿನಿಂದ ವಾಸುವಿನ ತೊಡೆಯೇರಿ ಕುಳಿತು ಅವನ ತುಟಿ ಬಿರಿಯುವಷ್ಟು ಮುದ್ದಿಟ್ಟಳು. ಮಧ್ಯೆ ಸ್ವಲ್ಪ ಪುರಸತ್ತು ಮಾಡಿಕೊಂಡು, ವಾಸುವಿನ ತುಟಿಯನ್ನು ತನ್ನ ತುಟಿಯಿಂದ ಮಾತನಾಡಿಸುತ್ತ

"ನನ್ನನ್ನು ನಾಚಿಗೆಗೆಟ್ಟವಳೆಂದು ಭಾವಿಸುವಿರೇನೋ ?"

"ಇಲ್ಲ – ಭಾವಿಸುವುದಿಲ್ಲ."

"ಏಕೆ ಭಾವಿಸುವುದಿಲ್ಲ."

"ನಾನೂ ನಾಚಿಕೆಬಿಟ್ಟದ್ದೇನೆ – ಆದ್ದರಿಂದ."

ಅವರ ನಗೆಯ ಕಿಲಕಿಲನಾದ ಮನೆಯನ್ನು ತುಂಬಿ ಮೊರೆಯಿತು.

ವಾಸುವಿಗೆ ಬೇರೆ ಮದುವೆಮಾಡಿಸಿ, ಅವನು ಸಂಸಾರವಂದಿಗನಾಗಿ ಬಾಳ್ವೆಮಾಡುವುದನ್ನು ನೋಡಬೇಕೆಂದು ಬಯಸಿದವರಲ್ಲಿ ವೇಣಕ್ಕನೂ ಒಬ್ಬಳು. ಅವಕಾಶ ಸಿಕ್ಕಿದಾಗಲೆಲ್ಲಾ ಈ ಮಾತನ್ನು ಅವನ ಕಿವಿಯ ಮೇಲೆ ಹಾಕುತ್ತಲೇ ಇದ್ದಳು. ಆಡಿದ ಮಾತನ್ನೇ – ಅಪ್ರಿಯವಾದ ವಿಷಯವನ್ನು – ಮತ್ತೆ ಮತ್ತೆ ಆಡುತ್ತಿದ್ದ ವೇಣಕ್ಕನ ಸ್ವಭಾವಕ್ಕೆ ಬೇಸರಗೊಂಡು ವಾಸು ಅವಳ ಮೇಲೆ ಸಿಡಿಗುಟ್ಟಿಯೂ ಇದ್ದ. ಆದರೆ ವೇಣಕ್ಕ ವೇಣಕ್ಕನೇ! ವಾಸು ರೇಗಿ ಕೆರಳಿದಾಗ ತೆಪ್ಪಗಾಗುತ್ತಿದ್ದಳು. ಎರಡು ದಿವಸ ತರುವಾಯ ಪುನಃ ಅದೇ ವಿಷಯ ಪ್ರಸ್ತಾಪಮಾಡುತ್ತಿದ್ದಳು. ವೇಣಕ್ಕನ ಜತೆ ಜಗಳಕಾದು ಪ್ರಯೋಜನವಿಲ್ಲವೆಂದು ವಾಸು, 'ಆಗಲಿ – ಮಾಡಿಕೊಳ್ಳೋಣ' ಎಂದು ಮಾತು ಹಾರಿಸಿಬಿಡುತ್ತಿದ್ದ.

ಒಂದು ದಿನ ಈ ವಿಷಯ ವೇಣಕ್ಕ ಪ್ರಸ್ತಾಪಿಸಿದಾಗ

"ಯಾರನ್ನು ಮಾಡಿಕೊಳ್ಳಲಿ ಹೇಳು." ಎಂದು ಕೇಳಿದ.

"ನಿಂತ ನಿಲುವಿನಲ್ಲಿ ಯಾರನ್ನು ಮಾಡಿಕೊಳ್ಳಲಿ ಎಂದರೆ ನಾನು ಏನು ಹೇಳಲೋ ವಾಸು. ಮದುವೆ ಮಾಡಿಕೊಳ್ಳುವ ವಿಷಯ ನಿರ್ಧರಿಸಿದರೆ ಮುಂದಿನ ಯೋಚನೆಮಾಡಬಹುದು. ನಿನಗೇನು – ಯಾರಾದರೂ ಪಾದ ಪೂಜೆ ಮಾಡಿ ಹೆಣ್ಣು ಕೊಡುತ್ತಾರೆ."

"ಪ್ರಪಂಚದಲ್ಲಿ ಇಷ್ಟು ಜನ ಮದುವೆ ಮಾಡಿಕೊಂಡಿದ್ದಾರಲ್ಲಾ, ಅವರಿಂದ ಪ್ರಪಂಚಕ್ಕಾಗಿರುವ ಉದ್ಧಾರವೇನು ವೇಣಕ್ಕ. ನಾನೊಬ್ಬ ಮದುವೆ ಮಾಡಿಕೊಳ್ಳದಿದ್ದರೆ ಪ್ರಪಂಚಕ್ಕಾಗುವ ನಷ್ಟವೇನು ?"

"ಹಾಗಂದರೆ ಹೇಗೋ ಮಗೂ."

ಎಂದು ಉದ್ಗಾರ ತೆಗೆದಳು. ಅದಕ್ಕೂ ಹೆಚ್ಚಾಗಿ ಹೇಳುವುದು ವೇಣಕ್ಕನಿಗೆ ಸಾಧ್ಯವಾಗಲಿಲ್ಲ. ವೇಣಕ್ಕನ ಮುಖ ಮ್ಲಾನವಾದುದನ್ನು ಕಂಡು ವಾಸುವಿಗೆ ವಿಷಾದವಾಯಿತು.

"ನಿನ್ನ ಇಷ್ಟಾರ್ಥ ನೆರವೇರಿಸಿದ್ದೇನೆ ವೇಣಕ್ಕ. ನಾನು ಮದುವೆ ಮಾಡಿಕೊಂಡಿದ್ದೇನೆ."

ವೇಣಕ್ಕನ ಆಶ್ಚರ್ಯಕ್ಕೆ ಕೊನೆ ಮೊದಲಿರಲಿಲ್ಲ. ವಾಸು ಮಾತಿಗೆ ಯಾವ ಅರ್ಥ ಕಲ್ಪಿಸಬೇಕು, ಎಷ್ಟು ಬೆಲೆ ಕೊಡಬೇಕು ಅವಳಿಗೆ ತಿಳಿಯಲಿಲ್ಲ. ಮೂಬೆರಗಾಗಿ ನಿಂತಳು.

"ನಿನಗೆ ಆಶ್ಚರ್ಯವಾಯಿತಲ್ಲವೇ ವೇಣಕ್ಕ."

"ಏನು ಹೇಳುವುದಕ್ಕೂ ನನಗೆ ತೋರುವುದೇ ಇಲ್ಲಪ್ಪ. ಇದು ವಿಚಿತ್ರ ಕಾಲ – ಹೋಗಲಿ, ಹೆಣ್ಣು ಯಾರು ಅದನ್ನಾದರೂ ಹೇಳು."

"ಇವತ್ತು, ನಾಳೆ ಅವಳನ್ನು ಇಲ್ಲಿಗೇ ಕರೆದುಕೊಂಡು ಬಂದು ಪರಿಚಯಮಾಡಿಕೊಡುತ್ತೇನೆ."

ವೇಣಕ್ಕನ ಮಂದಬುದ್ಧಿಗೆ ತಕ್ಷಣವೇ ಬೆಳಕು ಮೂಡಿದಂತಾಯಿತು.

"ಯಾರನ್ನಾದರೂ ಗಂಟು ಹಾಕಿಕೊಂಡಿದ್ದೀಯೇನೋ ?"

"ಗಂಟೇ! ಪ್ರಾಯಶಃ ಜನ್ಮಜನ್ಮಾಂತರಗಳ ಗಂಟು ಇರಬಹುದು."

"ಯಾವೋಳು ಅವಳು ರಂಭೆ."

"ನೀನು ಕೋಪಿಸಿಕೊಳ್ಳುವುದಿಲ್ಲವಷ್ಟೆ."

"ನಾನು ಕೋಪಿಸಿಕೊಳ್ಳುವ ವಿಷಯ ಹಾಗಿರಲಿ – ಅವಳು ಯಾರು ಹೇಳು."

"ಪಕ್ಕದ ಮನೆಗೆ ಪಾಠಕ್ಕೆ ಬರುತ್ತಿದ್ದಳಲ್ಲಾ ಪ್ರಮಿಳಾ – ಅವಳು."

"ರತ್ನವಿಲಾಸ ಬೀದಿಯಲ್ಲಿದ್ದಾಳಲ್ಲಾ ಅವಳು..........."

"ಹೂ!"

"ಅವಳಿಗೇನೋ ಬಂತು ಕೇಡು. ಅಂಥಾ ಚೆನ್ನಾಗಿ ಗಂಡ ಇದ್ದಾನೆ."

"ನನಗೂ ಅಂಥ ಚೆನ್ನಾಗಿ ಹೆಂಡತಿ ಇರಲಿಲ್ಲವೇ?"

"ನಿನ್ನ ಹೆಂಡತಿಗೆ ರೋಗವಿತ್ತು."

"ಹಾಗೇ ಅವಳ ಗಂಡನಿಗೂ..........."

"ಏನಾದರೂ ರೋಗವೇ?"

"ಹೂ! ಪ್ರಬಲರೋಗ – ಗಂಡ ಹೆಂಡತಿಗೆ ಸಾಮಂಜಸ್ಯವಿಲ್ಲದಿರುವ ರೋಗ."

"ಅದು ಎಲ್ಲಾದರೂ ಉಂಟೇನೋ ನಾನು. ಗರತಿ ಸಂಸಾರ ಮುರಿಯುವುದು ನ್ಯಾಯವೇ?"

"ಆ ಸಂಸಾರ ಎಂದೋ ಮುರಿದುಹೋಗಿದೆ ವೇಣಕ್ಕ. ನಾನು ಅದನ್ನು ನಿಲ್ಲಿಸಲು ಪ್ರಯತ್ನ ಮಾಡಿರುವೆ"

ಎಂದು ಪ್ರಮಿಳಳನ್ನು ಕಂಡ ದಿನದಿಂದ ಅಂದಿನವರೆಗೆ ತಮ್ಮ ಬಾಂಧವ್ಯ ಬೆಳೆದ ಬಗೆಯನ್ನು ಕೂಲಂಕಷವಾಗಿ ವೇಣಕ್ಕನಿಗೆ ನಿವೇದಿಸಿದ. ವೇಣಕ್ಕ ಅವಾಕ್ಕಾದಳು.

"ಏಕೆ ಸುಮ್ಮನೆ ಕುಳಿತೆ ವೇಣಕ್ಕ. ಏನಾದರೂ ಹೇಳು."

"ಏನು ಹೇಳಲಪ್ಪಾ. ನನಗೊಂದೂ ಅರ್ಥವೇ ಆಗಲ್ಲ. ನಾನೊಂದು ಹಳೆಯ ಕಾಲದ ಗೊಡ್ಡು."

"ಅವಳನ್ನು ನೀನೊಂದು ಸಲ ನೋಡಬೇಕೆಂದು ನನ್ನ ಆಸೆ."

"ಯಾಕೆ? ನಾನು ನೋಡಿ ಏನು ಮಾಡಬೇಕು. ನೀನು ನೋಡಿ ಮೆಚ್ಚಿಕೊಂಡಿರುವೆಯಲ್ಲಾ."

"ಅದೇನೋ ಸರಿ – ಆದರೆ ನಾನು ನೋಡಿದರೆ ನೀನು ನೋಡಿದ ಹಾಗಾಯಿತೇ?"

“ಎಲ್ಲಾ ಹಾಗಿರಲಿ. ಅವಳು ಒಳ್ಳೆಯಳೇನೋ ವಾಸು. ನಿನ್ನ ಕಂಡರೆ ನಿಜವಾಗಿಯೂ ವಿಶ್ವಾಸವಾಗಿದ್ದಾಳೆಯೇ ? ನಿನಗೆ ಹಾಲು ಯಾವದು, ಸುಣ್ಣದ ತಿಳಿನೀರು ಯಾವದು ಒಂದೂ ತಿಳಿಯಲ್ಲಪ್ಪ. ನನ್ನ ಮನಸ್ಸಿಗೆ ಅತಂಕವಾಯಿತು ಕೇಳಿದೆ.”

“ಅದಕ್ಕೇ ನೀನೇ ಅವಳನ್ನು ನೋಡಿ ಮಾತನಾಡಲಿ ಎಂದು ನಾನು ಹೇಳಿದ್ದು. ನಿಜವಾಗಿಯೂ ಅವಳು ಬಹಳ ಒಳ್ಳೆಯವಳು ವೇಣಕ್ಕ. ನನಗಾಗಿ ಜೀವ ಬಿಡುವುದಕ್ಕೂ ಸಿದ್ಧವಾಗಿದ್ದಾಳೆ.”

“ನಿನಗೆಲ್ಲೋ ಮೊಬ್ಬು - ಇರಲಿ ಬರಹೇಳು. ನಾನೂ ಕಣ್ತುಂಬ ನೋಡಿಬಿಡುತ್ತೇನೆ.”

ವಾಸುವಿಗೆ ಒಂದು ರಾಜ್ಯ ಗೆದ್ದಷ್ಟು ಸಂತೋಷವಾಯಿತು. ಮಾರನೆಯ ದಿನ ಮಧ್ಯಾಹ್ನಾನಂತರ ಮೂರು ಗಂಟೆಗೆ ಪ್ರಮಿಳಾ ವೇಣಕ್ಕನನ್ನು ಬಂದು ನೋಡುವುದೆಂದು ನಿಷ್ಕರ್ಷೆಯಾಯಿತು.

ಪ್ರಮಿಳೆಯ ವಿಷಯದಲ್ಲಿ ಒಳ್ಳೆಯ ಅಭಿಪ್ರಾಯ ತಳೆಯಲು ವೇಣಕ್ಕನಿಗೆ ಸಾಧ್ಯವಾಗಲಿಲ್ಲ. ಆದರೆ ಪೂರ್ವಭಾವಿಯಾಗಿ ಅವಳ ಬಗ್ಗೆ ದುರಭಿಪ್ರಾಯ ತಳೆಯುವುದಕ್ಕೂ ವೇಣಕ್ಕ ಮನಸ್ಸುಮಾಡಲಿಲ್ಲ. ಪ್ರಮಿಳಾ ಗಂಡನಿಗೆ ಮೋಸಮಾಡಿ ವಾಸು ಸ್ನೇಹ ಮಾಡಿದುದು ಘೋರ ಅಪರಾಧವೆನ್ನುವ ಬಗ್ಗೆ ವೇಣಕ್ಕನಿಗೆ ಸಂದೇಹವೇ ಇರಲಿಲ್ಲ. ನೀತಿಯ ನೆಲೆಗಟ್ಟು ಒಂದೆಡೆಗೆ ಅವಳನ್ನು ಜಗ್ಗಿದರೆ ಮಮತೆಯ ಲೋಹಕಾಂತ ಇನ್ನೊಂದೆಡೆಗೆ ಸೆಳೆಯುತ್ತಿತ್ತು.

ಪ್ರಮಿಳಾ ಬರುವ ಮುನ್ನ ವೇಣಕ್ಕ ಹೂವು, ವೀಳೆಯದೆಲೆ, ಹಣ್ಣು ತರಿಸಿಟ್ಟು, ಮನೆಯಲ್ಲಿ ಕೇಸರೀಭಾತ್, ಬೋಂಡ, ಕಾಫಿ ಮಾಡಿಟ್ಟಳು.

ಉದ್ದೇಶಪೂರ್ವಕವಾಗಿಯೇ ಪ್ರಮಿಳಾ ಸೌಮ್ಯವಾಗಿ ವೇಷಭೂಷಿತಳಾಗಿ ಬಂದಳು. ಕಾಲಿಗೆ ಷೂಕೂಡ ಹಾಕಲಿಲ್ಲ. ಅವಳು ಉಟ್ಟಿದ್ದುದು ನೀರಿಗೆ ಹಾಕಿದ ನೀಲಿ ಧರ್ಮಾವರದ ಸೀರೆ; ಧರಿಸಿದ್ದುದು ಲಾಂಗ್ ಕ್ಲಾತಿನ ಸಾಧಾರಣ ಕುಪ್ಪಸ. ನಿತ್ಯಕ್ಕಿಂತಲೂ ಸ್ವಲ್ಪ ದೊಡ್ಡದಾಗಿಯೇ ಹಣೆಗೆ ಕುಂಕುಮವಿಟ್ಟಿದ್ದಳು.

ವಾಸುವೇ ಅವಳಿಗೆ ಸ್ವಾಗತ ಬಯಸಿ ಒಳಕ್ಕೆ ಬರಮಾಡಿಕೊಂಡ. ತೊಟ್ಟಿಯಲ್ಲಿದ್ದ ಚಾಪೆಯ ಮೇಲೆ ಪ್ರಮೀಳಾ ಗಂಭೀರವಾಗಿ ಕುಳಿತಳು. ಅವಳ ಎದುರು ಗೋಡೆಯನ್ನೊರಗಿಕೊಂಡು ವಾಸು ಕುಳಿತ.

ಅಡಿಗೆ ಮನೆಯಲ್ಲಿದ್ದ ವೇಣಕ್ಕನಿಗೆ ವಾಸು

"ಅಕ್ಕ – ಪ್ರಮೀಳಾ ಬಂದಿದ್ದಾಳೆ."

ಎಂದು ಕೂಗಿ ಹೇಳಿದ.

"ಇದೋ ಬಂದೆ" ಎಂದು ವೇಣಕ್ಕ ಕೈಯಲ್ಲಿ ಎರಡು ಬೆಳ್ಳಿಯ ತಟ್ಟೆಗಳನ್ನು ಹಿಡಿದು ಹೊರಗೆ ಬಂದು, ವಾಸು, ಪ್ರಮೀಳಾ ಮುಂದಿಟ್ಟಳು.

ಪ್ರಮೀಳೆಯನ್ನು ವೇಣಕ್ಕ ಈ ಮೊದಲೇ ನೋಡದೆ ಇರಲಿಲ್ಲ. ಆದರೆ ಈಗ ನೋಡುವ ಬಗೆ ಬೇರೆ. ಎವೆಯಿಕ್ಕದೆ ಅವಳನ್ನು ನೋಡಿ

"ತೆಗೆದುಕೊಳ್ಳಿ. ಆರಿಹೋಗುತ್ತೆ"

ಎಂದಳು.

ವಾಸು ಬಾಯಿಗೆ ಬಿಸಿ ಬೋಂಡ ಹಾಕಿಕೊಂಡು

"ವೇಣಕ್ಕ, ನಿನ್ನ ನೋಡಬೇಕೆಂದು ಬಹಳ ಕುತೂಹಲಿಯಾಗಿದ್ದಳು"

ಎಂದ.

ತಿಂಡಿಯ ತಟ್ಟೆಗೆ ಪ್ರಮೀಳಾ ಕೈಹಾಕದಿರುವುದನ್ನು ಕಂಡು ವೇಣಕ್ಕ

"ತೊಗೋಳಮ್ಮ. ಆರಿಹೋಗುತ್ತೆ"

ಎಂದು ಮತ್ತೆ ಉಪಚರಿಸಿದಳು.

ವಾಸು ಕೇಸರೀಭಾತನ್ನು ಮುಗಿಸುತ್ತ

"ವೇಣಕ್ಕನ ಮಾತಿಗೆ ಹೆದರಿಕೊಳ್ಳಬೇಡ ಪ್ರಮೀಳಾ. ಅವಳ ಮಾತು ಎಷ್ಟು ಒರಟೋ ಹೃದಯ ಅಷ್ಟು ಮೃದು"

"ಅವರು ಮಾತಾಡಿಯೇ ಇಲ್ಲ."

"ನೋಡಮ್ಮಾ – ಹೊರಗಿನವರ ಎದುರಿಗೆ ಇವನು ತನ್ನ ಮಾನ ಕಳೆಯುವುದು"

ಎಂದು ವೇಣಕ್ಕ ಹುಸಿಮುನಿಸಿನಿಂದ ನುಡಿದಳು.

"ಇಲ್ಲಿ ಹೊರಗಿನವರು ಯಾರೂ ಇಲ್ಲವಲ್ಲ"

ಎಂದು ವಾಸು ಮರುನುಡಿದ.

ವಾಸು ತಿಂಡಿ ಮುಗಿಸಿದ್ದನ್ನು ನೋಡಿ ವೇಣಕ್ಕ ಒಳಗೆ ಹೋಗಿ ಎರಡು ಗ್ಲಾಸುಗಳಲ್ಲಿ ಕಾಫಿ ತಂದು ವಾಸು, ಪ್ರಮೀಳೆಯರಿಗಿತ್ತಳು.

ವಾಸು ಕಾಫಿ ಮುಗಿಸಿ

"ನೀವು ನೀವು ಏನುಬೇಕೋ ಮಾತಾಡಿಕೊಳ್ಳಿ. ನನಗೆ ಸ್ವಲ್ಪ ಕೆಲಸವಿದೆ. ನಾನು ಹೋಗುತ್ತೇನೆ"

ಎಂದು ಎದ್ದು ಹೋದ.

ಪ್ರಮೀಳಾ ತಿಂಡಿ ತಟ್ಟೆಯನ್ನು ಸೆಂಚಿಯಾಡುತ್ತಿದ್ದಳು. ಅವಳ ತಟ್ಟೆಯನ್ನು ನೋಡಿ ವೇಣಕ್ಕ

"ಸರಿಯಾಗಿ ತೊಗೊಂಡು ತಿನ್ನಮ್ಮಾ. ಹೀಗೆ ಸೆಂಚಿಯಾಡಿದರೆ ಆಗುತ್ತದೆಯೇ?"

"ಎಷ್ಟೊಂದು ಕೊಟ್ಟುಬಿಟ್ಟದ್ದೀರಿ. ಹ್ಯಾಗರಿ ತಿನ್ನುವುದು."

"ಇದು ಚೆನ್ನಾಗಿ ತಿನ್ನಬೇಕಾದ ವಯಸ್ಸಮ್ಮ. ತೊಗೋ ಹೆಚ್ಚಲ್ಲ"

ಎಂದು ಉಪಚರಿಸಿದಳು. ತಟ್ಟೆಯಲ್ಲಿದ್ದ ಮುಕ್ಕಾಲು ಭಾಗ ತಿಂಡಿಯನ್ನು ಪ್ರಮೀಳಾ ಮುಗಿಸಲೇ ಬೇಕಾಯಿತು. ಕೈತೊಳೆದುಕೊಂಡು ಕಾಫಿ ಕುಡಿದು ಕುಳಿತಳು.

"ಮನೆಯಲ್ಲಿ ಅಡಿಗೆ ಕೆಲಸವೆಲ್ಲಾ ನಿನ್ನದೇನೇ."

"ಹೌದು."

"ಮನೆ ಕೆಲಸವೂ ಮಾಡಿಕೊಂಡು ಹೊರಗೆ ಇನ್‌ಷ್ಯೂರೆನ್ಸ್ ಕೆಲಸ ಮಾಡುವುದಕ್ಕೆ ಸಾಧ್ಯವಾಗಿದೆಯೇ?"

"ಹಾಗೇ ಮಾಡಿಕೊಂಡು ಹೋಗುತ್ತಿದ್ದೇನೆ."

"ವಾಸು ಎಲ್ಲಾ ಹೇಳಿದ."

ಪ್ರಮೀಳೆಯ ಎದೆ ಡಡಗುಟ್ಟಲಾರಂಭಿಸಿತು. ಮುಖದ ಬಣ್ಣ ಬದಲಾಯಿಸಿತು. ತನ್ನ ಉದ್ವೇಗ ಹೊರಕಾಣದಿರುವಂತೆ ಪ್ರಯತ್ನಿಸಿದಳು.

"ನಾನು ಹಳೆಯಕಾಲದವಳು. ನನಗೆ ಇದೆಲ್ಲ ಅರ್ಥವಾಗುವುದಿಲ್ಲ – ಅರ್ಥಮಾಡಿಕೊಳ್ಳುವ ಪ್ರಯತ್ನವನ್ನೂ ಮಾಡುವುದಿಲ್ಲ. ನೀನೇ ಅನ್ನುವ ದಿಕ್ಕಿಲ್ಲದೆ ಅನಾಥೆಯಾಗಿದ್ದ ನನ್ನನ್ನು ಇಲ್ಲಿಗೆ ಕರೆದುಕೊಂಡು ಬಂದು

ಕಾಪಾಡಿದ. ಅವನ ಉಪ್ಪಿನ ಋಣಕ್ಕೆ ಪ್ರತಿಯಾಗಿ ಅವನ ಕಷ್ಟಸುಖ ನಾನುನೋಡಿಕೊಳ್ಳಬೇಕಾದುದು ನನ್ನ ಧರ್ಮ."

"ನೀವು ಅವರ ಅಕ್ಕನಲ್ಲವೇ? ಇದರಲ್ಲಿ ಋಣದ ಪ್ರಶ್ನೆಯೆಲ್ಲಿಂದ ಬಂತು. ನಿಮ್ಮ ಯೋಗಕ್ಷೇಮ ನೋಡಿಕೊಳ್ಳಬೇಕಾದುದು ಅವರ ಕರ್ತವ್ಯ."

"ಹಾಗೆ ತಿಳಿದುಕೊಳ್ಳುವವರು ಈ ಲೋಕದಲ್ಲಿ ಲಕ್ಷಕ್ಕೊಬ್ಬರಿಲ್ಲವೇ ತಾಯಿ. ವಾಸುಗಿಂತ ನನಗೆ ಹತ್ತಿರದ ಬಳಗವಿದೆ ಎಲ್ಲರೂ ನನ್ನ ಹೊರ ದೂಡಿದರು. ಆದರೆ ವಾಸು ನನ್ನ ಭಾಗ್ಯದ ದೇವರಾದ."

"ಅವರ ಮನಸ್ಸೇ ಅಂಥದು. ಯಾರ ಕಷ್ಟವನ್ನೂ ನೋಡಿ ಸಹಿಸ ಲಾರರು."

"ನನ್ನದು ಶಾಶ್ವತವಲ್ಲ. ಇದು ಇಂದಲ್ಲ ನಾಳೆ ಬಿದ್ದುಹೋಗುವ ದೇಹ. ಮುಂದೆ ಅವನ ಯೋಗಕ್ಷೇಮ ನೋಡಿಕೊಳ್ಳುವ ಜವಾಬ್ದಾರಿ ನಿನ್ನದು. ನೀನೂ ತಿಳುವಳಿಕಸ್ತೆ – ಅವನಿಗೆ ಯಾವ ರೀತಿಯಲ್ಲಿಯೂ ನೋವಾಗದ ರೀತಿಯಲ್ಲಿ ನಡೆದುಕೊಳ್ಳುವೆ ಎಂಬ ನಂಬಿಕೆ ನನಗಿದೆ."

"ನಿಮ್ಮ ನಂಬಿಕೆ ನಾನು ಕಳೆಯುವುದಿಲ್ಲ."

"ಇನ್ನೊಂದು ವಿಷಯ. ಸ್ಪಷ್ಟವಾಗಿ ಕೇಳು ಅಂದರೆ ಕೇಳುತ್ತೇನೆ. ನಿನಗೆ ಅಸಮಾಧಾನವಾಗುವ ಹಾಗಿದ್ದರೆ ಆ ವಿಷಯವೇ ಬೇಡ."

"ಕೇಳಿ. ಅದೂ ನೀವು ಎಂದಾದರೂ ಕೇಳಬೇಕಾದ ವಿಷಯವೇ. ಇಂದೇ ಮುಗಿದುಹೋಗಲಿ."

"ನಿನ್ನ ಗಂಡನಿಗೆ ಈ ವಿಷಯ ಗೊತ್ತಿಲ್ಲವೇ?"

"ಗೊತ್ತಿಲ್ಲ."

"ನಾಳೆ ಗೊತ್ತಾದರೆ."

"ನಾಳೆಯೇನು ಮಾಡಬೇಕೆಂಬುದು ಇನ್ನೂ ನನ್ನ ಮನಸ್ಸಿಗೆ ಸ್ಪಷ್ಟ ವಾಗಿಲ್ಲ. ಆದರೂ ಈ ವಿಷಯ ಯೋಚನೆಮಾಡಿದ್ದೇನೆ. ಅವರ ಸಾಲ ತೀರಿಸಿ, ಕೈತುಂಬ ಆಸ್ತಿ ಮಾಡಿಟ್ಟದ್ದೇನೆ. ಅವಕಾಶ ನೋಡಿಕೊಂಡು ನಾನೇ ಸ್ಪಷ್ಟವಾಗಿ 'ನೀವು ಬೇರೆ ಮದುವೆ ಮಾಡಿಕೊಳ್ಳಿ. ನನಗೂ ನಿಮಗೂ ಋಣಾನುಬಂಧವಿಲ್ಲ' ಎಂದು ಹೇಳಿಬಿಡುತ್ತೇನೆ."

"ನೀನು ಲೋಕವಿರೋಧಿಯಾಗಬೇಕಾಗುತ್ತದೆ."

"ನಿಮ್ಮ ತಮ್ಮಂದಿರು ಕೈಬಿಡದಿದ್ದರೆ ನಾನು ಯಾವದಕ್ಕೂ ಹೆದರುವುದಿಲ್ಲ."

"ಅವನ ಬಗ್ಗೆ ಯಾವ ಸಂಶಯವೂ ಬೇಡ. ನಂಬಿದವರಿಗೆ ಅವನು ಪ್ರಾಣವನ್ನಾದರೂ ಕೊಟ್ಟಾನು – ಕೈಬಿಡುವುದಿಲ್ಲ."

"ನೀವು ನನ್ನ ವಿಷಯ ತಪ್ಪುಭಾವಿಸುವುದಿಲ್ಲವಷ್ಟೇ ?"

"ವಾಸುಗಾಗಿ ನಾನು ಏನುಬೇಕಾದರೂ ಮಾಡಲು ಸಿದ್ಧ. ನೀನು ಅವನಿಗೆ ಬೇಕಾದವಳಾದ ಮೇಲೆ ನನಗೂ ಬೇಕಾದವಳೇ."

ವೇಣಕ್ಕನ ಹಾರ್ದಿಕ ಮಾತು ಪ್ರಮಿಳೆಯ ಅಂತಃಕರಣವನ್ನು ಕಲಕಿತು. ಎದ್ದು ನಿಂತು ವೇಣಕ್ಕನಿಗೆ ಸಾಷ್ಟಾಂಗ ಪ್ರಣಾಮುಮಾಡಿದಳು. ವೇಣಕ್ಕನ ಕಣ್ಣುಗಳು ತೇವಗೊಂಡವು. ಎದ್ದು

"ನನಗೆ ಪುರಾಣಕ್ಕೆ ಹೊತ್ತಾಯ್ತು. ಹೋಗಿ ಬರುತ್ತೇನೆ. ವಾಸು ಕೇಳಿದರೆ ನೀನೇ ಹೇಳಿಬಿಡು"

ಎಂದು ಹೊರಡಲು ಸಿದ್ಧಳಾದಳು. ತಲೆಬಾಗಿಲಿನವರೆಗೆ ಹೋಗಿ ಏನೋ ಜ್ಞಾಪಿಸಿಕೊಂಡು ಪ್ರಮಿಳೆಯ ಬಳಿಗೆ ಬಂದು

"ಅಡಿಗೆಯ ಮನೆಯಲ್ಲಿ ವೀಳೆಯದೆಲೆ, ಹೂವಿನ ತಟ್ಟೆಯಿದೆ."

ಎಂದು ಹೇಳಿಹೋದಳು.

ಪ್ರಮಿಳಾ ಅಡಿಗೆಯ ಮನೆಗೆ ಹೋಗಿ ತಟ್ಟೆ ಕೈಗೆ ತೆಗೆದುಕೊಂಡಳು. ಸೊಗಸಾದ ಒಂದು ಕುಚ್ಚು ಮಲ್ಲಿಗೆಯ ಹೂವು. ಹೂವನ್ನು ಮಾಟವಾಗಿ ಸುತ್ತಿ ಮುಡಿದುಕೊಂಡಳು. ಎಂಟು ಹತ್ತು ಚಿಗುರೆಲೆ ಆರಿಸಿ ಸುಣ್ಣ ಸವರಿ ತಟ್ಟೆಯಲಿಟ್ಟುಕೊಂಡು ಅದನ್ನು ತೆಗೆದುಕೊಂಡು ವಾಸು ರೂಮಿನ ಬಳಿ ಬಂದಳು.

ಬರವಣಿಗೆಯಲ್ಲಿ ತೊಡಗಿದ್ದ ವಾಸು, ಬಾಗಿಲು ಶಬ್ದವಾದುದನ್ನು ಕೇಳಿ, ಕತ್ತುಯೆತ್ತದೆ

"ವೇಣಕ್ಕ !" ಎಂದ.

ಉತ್ತರ ಬರದಿರಲು ಕತ್ತು ತಿರುಗಿಸಿ ನೋಡಿದ. ಪ್ರಮಿಳಾ ತಟ್ಟೆ ಹಿಡಿದು ನಿಂತಿದ್ದಳು. ಅವಳ ಕೈಹಿಡಿದು ಒಳಗೆ ಕರೆದುಕೊಂಡು

"ವೇಣಕ್ಕ ಮನೆಯಲ್ಲಿಲ್ಲವೇ ?"

"ಇಲ್ಲ - ಪುರಾಣಕ್ಕೆ ಹೋದರು."

"ಏನು ಹೇಳಿದಳು."

"ಅವರು ತುಂಬ ಒಳ್ಳೆಯವರು. ನನ್ನ ಮನಸ್ಸನ್ನು ಅರೆಗಳಿಗೆಯಲ್ಲಿ ಸೂರೆಗೊಂಡರು."

"ನೀನು ನನ್ನ ಮನಸ್ಸನ್ನು ಸೂರೆಗೊಂಡಂತೆ..........."

"ತಾಂಬೂಲ ಹಾಕಿಕೊಳ್ಳುವಿರಾ ?"

"ಇವತ್ತು ಹಾಕಿಕೊಳ್ಳದಿದ್ದರೆ ನೀನು ಬಿಡುತ್ತೀಯಾ ?"

ಪ್ರಮಿಳಾ ಎಲೆಯೊಳಗೆ ಅಡಕೆತುಂಬಿ, ವಾಸುವಿನ ಬಾಯಿಗಿತ್ತಳು. ಅವನ ಬಾಯಲ್ಲಿ ಅರೆಸುರಿಯಾದ ತಾಂಬೂಲ ಅವಳ ಬಾಯಿಗೆ ಹೋಯಿತು. ಮತ್ತೆ ಎರಡು ಎಲೆಮಡಿಸಿ, ಅಡಿಕೆತುಂಬಿ ವಾಸು ಬಾಯಲ್ಲಿಟ್ಟಳು.

ತೊಟ್ಟಿಯ ದೊಡ್ಡ ಗಡಿಯಾರದಲ್ಲಿ ಎಂಟುಗಂಟೆ ಹೊಡೆದಾಗಲೇ ಅವರಿಗೆ ಎಚ್ಚರ. ಪ್ರಮಿಳಾ ಆತುರದಿಂದ ಮಂಚವಿಳಿದು

"ಎಂಟು ಹೊಡೆಯಿತು. ನಾನು ಹೊರಡಬೇಕು."

"ಅಲ್ಲಿಯವರೆಗೆ ಕಳಿಸಿಬರುತ್ತೇನೆ."

"ಬೇಡಿ - ಯಾರಾದರೂ ನೋಡಿಯಾರು. ನಾನು ಹೋಗುತ್ತೇನೆ. ಮನೆಯೇನೂ ದೂರವಿಲ್ಲ."

ಅವಳು ಹೊರಟು ನಿಂತದ್ದು ನೋಡಿ ವಾಸು ಮುಖ ಚಿಕ್ಕದಾಯಿತು. ಪ್ರಮಿಳಾ ಅವನ ಬಳಿ ಬಂದು, ತಲೆನೇವರಿಸಿ, ಮುಖವನ್ನಪ್ಪಿ - ಮುದ್ದಿಟ್ಟು

"ಇಷ್ಟೇಕೆ ಕಳವಳ ಪಡುವಿರಿ. ನಾನು ಎಲ್ಲೇ ಇದ್ದರೂ ನಿಮ್ಮವಳಲ್ಲವೆ ? ಹಗಲಿರುಳೂ ನಿಮ್ಮ ಧ್ಯಾನವಲ್ಲದೆ ನನಗೆ ಬೇರೆ ಧ್ಯಾನ ಯಾವದಿದೆ ? ಯೋಚನೆ ಮಾಡಬೇಡಿ - ನಾಳೆ ಬರುತ್ತೇನೆ."

"ಈ ರಾತ್ರಿ ಹೇಗೆ ಕಳೆಯಲಿ ಪ್ರಮಿಾ."

"ಮಲಗಿ ನಿದ್ರೆ ಹೋಗಿ, ನಿಮಗೂ ಆಯಾಸವಾಗಿದೆ."

ಪ್ರಮಿಳಾ ಹೊರಟ ಮೇಲೆ ಬಾಗಿಲಲ್ಲೇ ನಿಂತು ಅವಳು ಮೂಲೆ ತಿರುಗುವುದನ್ನು ವಾಸು ನೋಡಿ ಅತೃಪ್ತ ಆಶೆಯನ್ನು ಹೊತ್ತು ಒಳಕ್ಕೆ ಬಂದು ಮಲಗಿದ.

ವೇಣಕ್ಕ ನಾಲ್ಕಾರು ಸಲ ಬಾಗಿಲು ಬಡಿದು ವಾಸುವನ್ನೆಬ್ಬಿಸ ಬೇಕಾಯಿತು.

"ಊಟ ಮಾಡುವುದಿಲ್ಲವೇ ವಾಸು" ಎಂದು ಕೇಳಿದಳು.

"ನನಗೆ ಹಸಿವಿಲ್ಲ. ನೀನು ಫಲಹಾರ ಮಾಡಿ ಮಲಗಿಕೋ"

ಎಂದು ಹೇಳಿ ಬಂದು ಮಲಗಿದ.

ಮಾರನೆಯ ದಿನದಿಂದ ವಾಸು ಮನೆಗೆ ಪ್ರಮಿಳಾ ಧಾರಾಳವಾಗಿ ಬಂದು ಹೋಗಲಾರಂಭಿಸಿದಳು. ವೇಣಕ್ಕ ಆಗಾಗ್ಗೆ ಪ್ರಮಿಳೆಯ ಮನೆಗೆ ಹೋಗಿ ಬರುತ್ತಿದ್ದಳು. ಸುತ್ತ ಮುತ್ತಲಿನ ಜನ ಕಣ್ಣುಮುಚ್ಚಿಕೊಂಡು ಕೂಡುವ ಸ್ವಭಾವದವರಲ್ಲ. ಆಚೆ ಈಚೆ ಬೀದಿಗಳಲ್ಲಿ ಗುಸುಗುಸು ಮಾತು ಆರಂಭ ವಾಯಿತು. ವಾಸು, ವೇಣಕ್ಕ, ಪ್ರಮಿಳಾ, ಚನ್ನಕೇಶವಯ್ಯ ಬೀದಿಯಲ್ಲಿ ಹೋಗುತ್ತಿದ್ದರೆ ಜನ ಅವರನ್ನೇ ದಿಟ್ಟಿಸಿ ನೋಡುತ್ತಿದ್ದರು.

ಚನ್ನಕೇಶವಯ್ಯನ ಕಿವಿಗೆ ವಾಸು, ಪ್ರಮಿಳಾ ಸಂಬಂಧದ ವಿವರಗಳು ಬೀಳತೊಡಗಿದವು. ಅವನು ಆ ವಿಷಯ ಸೂಕ್ಷ್ಮವಾಗಿ ಪ್ರಸ್ತಾಪಿಸಿ ದಾಗಲೆಲ್ಲಾ ಪ್ರಮಿಳಾ ದಿಟ್ಟತನದಿಂದ ಉತ್ತರವಿತ್ತು ಅವನ ಬಾಯಿ ಮುಚ್ಚಿಸುತ್ತಿದ್ದಳು.

ಒಂದು ದಿನ ವಾಸು ಬೆಳಿಗ್ಗೆ ಅಂಗಡಿಗೆ ಹೊರಟಾಗ ಪ್ರಮಿಳಾ ಅವನನ್ನು ಕೇಳಿದಳು

"ಇವತ್ತು ಎಷ್ಟು ಹೊತ್ತಿಗೆ ಊಟಕ್ಕೆ ಬರುತ್ತೀರಿ."

"ಏಕೆ ? ದಿನ ಬರುವಷ್ಟು ಹೊತ್ತಿಗೇ ಬರುತ್ತೇನೆ – ಒಂದು ಗಂಟೆಗೆ."

"ಸ್ವಲ್ಪ ಬೇಗ ಬನ್ನಿ."

"ಏಕೆಯೆಂದು ಹೇಳಲೇ ಇಲ್ಲವಲ್ಲ."

"ಇವತ್ತು ತಾರೀಕೆಷ್ಟು ಜ್ಞಾಪಿಸಿಕೊಳ್ಳಿ."

"ಜನವರಿ ಹನ್ನೆರಡು."

"ನಿಮ್ಮ ಹುಟ್ಟಿದ ಹಬ್ಬವಲ್ಲವೇ ? ತಲೆಯ ಮೇಲೆ ಎರಡು ಚೊಂಬು ನೀರು ಹಾಕಿಕೊಂಡಿದ್ದರಾಗಿತ್ತು."

"ಅಷ್ಟು ಹೊತ್ತಿನ ಮೇಲೆ ನೀರು ಹಾಕಿಕೊಂಡು ಮತ್ತೆ ಅಂಗಡಿಗೆ ಹೋಗಬೇಕಾದರೆ ಸಾಕಾಗಿ ಹೋಗುತ್ತದೆ."

"ಹೋಗಲಿ-ಊಟಕ್ಕಾದರೂ ಬೇಗಬನ್ನಿ."

ಚನ್ನಕೇಶವಯ್ಯನ ಮನಸ್ಸು ಸಂತೋಷದಿಂದ ಕುಣಿದಾಡತೊಡಗಿತು. 'ಇಂಥ ಹೆಂಡತಿಯಲ್ಲಿ ಸಂಶಯ ತಳೆದನಲ್ಲಾ. ಕಂಡವರು ಆಡುವ ಮಾತಿಗೆ ಕಿವಿಗೊಟ್ಟೆನಲ್ಲ' ಎಂದು ತನ್ನನ್ನು ತಾನೇ ಹಳಿದುಕೊಂಡ.

ಮಧ್ಯಾಹ್ನ ಹನ್ನೆರಡು ಗಂಟೆಗೇ ಚನ್ನಕೇಶವಯ್ಯ ಮನೆಗೆ ಬಂದ. ಪ್ರಮಿಳಾ ಅವನಿಗೆ ತಟ್ಟೆಹಾಕಿ ಬಡಿಸಿದಳು. ಸೊಗಸಾದ ವಾಂಗೀಭಾತ್, ಶಾವಿಗೆಕೀರು, ಜೋಂಡ ಸ್ವಲ್ಪ ಶಕ್ತಿಮೀರಿಯೇ ಗಿಟ್ಟಿಸುತ್ತಾ

"ನೀನು ಊಟ ಮಾಡುವುದಿಲ್ಲವೇ" ಎಂದು ಕೇಳಿದ.

"ಇನ್ನೊಂದು ಸಾರಿ ಸ್ನಾನಮಾಡಿ ನಾನು ಊಟಕ್ಕೆ ಕುಳಿತುಕೊಳ್ಳುತ್ತೇನೆ."

ಎಂದು ಪ್ರಮಿಳಾ ಉತ್ತರವಿತ್ತಳು.

ಊಟ ಮುಗಿಸಿದ ಕೂಡಲೆ ಅರ್ಧ ಗಂಟೆ ಮಲಗುವುದು ಚನ್ನಕೇಶವಯ್ಯನಿಗೆ ಅಭ್ಯಾಸವಾಗಿ ಹೋಗಿತ್ತು.

ಮಲಗಿದ್ದು ಎದ್ದವನೇ ಪ್ರಮೀಳೆಯನ್ನು ಕೇಳಿದ

"ನಿನ್ನ ಊಟವಾಯಿತೇ ?"

"ಆಯಿತು."

ಎಂದು ಹೇಳಿದಳು. ಚನ್ನಕೇಶವಯ್ಯ ಅಂಗಡಿಗೆ ಹೊರಡಲು ಸಿದ್ಧನಾದುದನ್ನು ಕಂಡು ಅವನ ಕೈಗೆ ಒಂದು ಲೋಟಾ ಕಾಫಿ ತಂದಿತ್ತಳು.

"ಮದರಾಸಿನಿಂದ ಜವಳಿ ಬಂದು ಬಿದ್ದಿದೆ. ರಜಾ ಕೇಳಿದ್ದಕ್ಕೆ ಮಾಲಿಕ ಜವಳಿ ಗಂಟು ತೋರಿಸಿದ"

ಎಂದು ಚನ್ನಕೇಶವಯ್ಯ ತನ್ನ ದುಃಖವನ್ನು ಸುರಿಕೊಂಡ.

"ಏನು ಮಾಡುವುದಕ್ಕಾಗುತ್ತದೆ"

ಎಂದು ಪ್ರಮಿಳಾ ಕೇಳಿದಳು.

ಚನ್ನಕೇಶವಯ್ಯ ಹೋದ ಹತ್ತು ನಿಮಿಷಗಳಲ್ಲಿ ವಾಸು ಬಂದ.

"ಹೋಗಿ ಎಷ್ಟು ಹೊತ್ತಾಯಿತು" ಎಂದು ಕೇಳಿದ.

"ಇದೇ ಹೋದರು."

ಎಂದು ಪ್ರಮಿಳಾ ಹೇಳಿ, ಅಡಿಗೆಯ ಮನೆಯಲ್ಲಿ ಎರಡು ತಟ್ಟೆ ಹಾಕಿ ಬಡಿಸಿದಳು.

ತಟ್ಟೆಯ ಮುಂದೆ ಕುಳಿತ ವಾಸು

"ನನ್ನಿಂದ ನಿನಗೆ ಎರಡು ಗಂಟೆ ಊಟವಾಯಿತು."

"ಚಿಂತೆಯಿಲ್ಲ. ಒಂದು ದಿನ ಸ್ವಲ್ಪ ತಡವಾದರೇನಂತೆ!"

"ಎರಡು ತಟ್ಟೆಯೇಕೆ ?"

ಪ್ರಮಿಳಾ ನಸುನಕ್ಕಳು.

ಇಬ್ಬರೂ ಒಂದೇ ತಟ್ಟೆಯಲ್ಲಿ ಊಟ ಮುಗಿಸಿದರು. ಕೈತೊಳೆದು ಕೊಂಡು ಇಬ್ಬರೂ ಎದ್ದು ರೂಮು ಸೇರಿದರು.

ಅಂಗಡಿಗೆ ಹೋದ ಚನ್ನಕೇಶವಯ್ಯನಿಗೆ ಸ್ವಲ್ಪವೂ ಲವಲವಿಕೆ ಯಿರಲಿಲ್ಲ. ಅವನ ತಲೆಯಲ್ಲಿ ಒಂದೇ ಯೋಚನೆ ಕೊರೆಯುತ್ತಿತ್ತು. 'ಈ ದಿನವೂ ಮನೆಯಲ್ಲಿರಲಾಗಲಿಲ್ಲ. ಅವಳೆಷ್ಟು ಉತ್ಸಾಹದಿಂದ ಹಬ್ಬದ ಅಡಿಗೆ ಮಾಡಿದ್ದಳು. ಮನೆಯಲ್ಲಿದ್ದು ಅವಳನ್ನು ಒಂದು ಸಿನೀಮಾಕ್ಕೆ ಕರೆದುಕೊಂಡು ಹೋಗಲಿಲ್ಲವಲ್ಲಾ' ಎಂದು ಚಿಂತಿಸುತ್ತಿದ್ದ.

ಅಂಗಡಿಯ ಯಜಮಾನ ಲಿಂಗಪ್ಪ, ಚನ್ನಕೇಶವಯ್ಯನ ವಿಮನಸ್ಕತೆ ಯನ್ನು ಗಮನಿಸಿ

"ಯಾಕಿರಿ ಹೀಗಿದ್ದೀರಿ ಚನ್ನಕೇಶವಯ್ಯ. ಮೈಯಲ್ಲಿ ಸರಿ ಇಲ್ಲವೇ ?" ಎಂದು ಕೇಳಿದ.

"ಏನೂ ಇಲ್ಲ ಸ್ವಾಮಿ. ತಲೆ ಸ್ವಲ್ಪ ನೋಯುತ್ತಿದೆ ಅಷ್ಟೇ."

ಲಿಂಗಪ್ಪ ರೈಟರಿಗೆ ಹೇಳಿ ಚನ್ನಕೇಶವಯ್ಯನಿಗೆ ಬಿಸಿಕಾಫಿ, ಸಾರಿಡಾನ್ ಮಾತ್ರೆ ತರಿಸಿಕೊಟ್ಟ. ಮಾತ್ರೆಯ ಆವಶ್ಯಕತೆಯಿಲ್ಲದಿದ್ದರೂ ತಲೆನೋವು ಎಂದು ಹೇಳಿದ ಅಪರಾಧಕ್ಕಾಗಿ ಚನ್ನಕೇಶವಯ್ಯ ಅದನ್ನು ನುಂಗಲೇಬೇಕಾಯಿತು.

"ಆ ಬೇಲ್ ಒಂದು ಚೆಕ್ ಮಾಡಿಬಿಟ್ಟು ಮನೆಗೆ ಹೋಗಿ. ನಾಳೆ ಉಳಿದದ್ದು ನೋಡಿಕೊಂಡರಾಯಿತು"

ಎಂದು ಲಿಂಗಪ್ಪ ಉದಾರವಾಗಿ ಅಪ್ಪಣೆಯನ್ನಿತ್ತ.

ಒಂದು ಬೇಲನ್ನು ಚೆಕ್‌ಮಾಡಿ ಮುಗಿಸುವ ವೇಳೆಗೆ ಆರೂವರೆ ಗಂಟೆಯಾಗಿತ್ತು. 'ಇಷ್ಟು ಬೇಗ ಹೋಗುವುದಕ್ಕಾದರೂ ಸಾಧ್ಯವಾಯಿತಲ್ಲ' ಎಂದು ಹಿರಿಹಿಗ್ಗಿ ಚನ್ನಕೇಶವಯ್ಯ ಮಾರ್ಕೆಟ್ ಬಳಿ ಬಂದ.

ಮಾರ್ಕೆಟ್ಟಿನಲ್ಲಿ ಕ್ಯೂ ನಿಂತು ಬಸವನಗುಡಿ ಬಸ್ ಹತ್ತಬೇಕಾದರೆ ಮುಕ್ಕಾಲು ಗಂಟೆ ಹಿಡಿಯಿತು.

ಬಸ್ ಇಳಿದವನೇ ಚನ್ನಕೇಶವಯ್ಯ ಮನೆಯಕಡೆ ನಡೆದ.

ಮನೆಯ ಬಾಗಿಲೆಲ್ಲಾ ಹಾಕಿತ್ತು. ತೊಟ್ಟಿಯಲ್ಲಿ ದೀಪವೂ ಇರಲಿಲ್ಲ. ತಮ್ಮ ರೂಮಿನ ದೀಪ ಮಾತ್ರ ಬೆಳಕಿಂಡಿಯಲ್ಲಿ ಕಾಣುತ್ತಿತ್ತು. ಒಳಗೆ ಯಾರೋ ಮಾತನಾಡುವ ಧ್ವನಿ. 'ಯಾರು ಬಂದಿರಬಹುದು' ಎಂದು ಚನ್ನಕೇಶವಯ್ಯ ವಿಚಾರಮಾಡಿದ. ಇಬ್ಬರು ಕೇಕೇ ಹಾಕಿಕೊಂಡು ನಗುವ ಧ್ವನಿ ಕೇಳಿಬಂತು. ಚನ್ನಕೇಶವಯ್ಯನ ಬೆನ್ನು ಹುರಿಯ ಮೇಲೆ ಮಂಜಿನ ಗಡ್ಡೆ ಇಟ್ಟಂತಾಯಿತು. ಮನಸ್ಸನ್ನು ಸಂಶಯ, ಕಳವಳ ಕಬಳಿಸಿತು. ಮೆಲ್ಲನೆ ರೂಮಿನ ಹೊರಗಡೆ ಕಿಟಕಿಯ ಬಳಿ ಹೋಗಿ ನಿಂತ. ಕಿಟಕಿ ತೆಗೆದಿದ್ದರೂ ಆವರಣ ಒಳನೋಟವನ್ನು ಮುಚ್ಚಿತ್ತು. ಆವರಣ ಕಿಟಕಿಯನ್ನು ಪೂರ್ತಿಯಾಗಿ ಮುಚ್ಚಿದ್ದರೂ ಒಂದು ಕೊನೆಯನ್ನು ಸ್ವಲ್ಪ ಬಿಟ್ಟಿತ್ತು. ಗೋಡೆಯ ಅಂಚಿಗೆ ನಿಂತು ಆವರಣ ಎಡೆಬಿಟ್ಟಿದ್ದ ಕಿಂಡಿಯಲ್ಲಿ ನೋಡಿದ.

ನೋಟ ಅವನನ್ನು ಚಕಿತನನ್ನಾಗಿ ಮಾಡಿತು. ಮೈಬೆವರಿತು. ಕಾಲುಗಳು ನಿಂತಲ್ಲಿಯೇ ಕುಸಿದವು. ಕಣ್ಣುಗತ್ತಲೆ ಕವಿದುಬಂತು. ಧೈರ್ಯ ತಂದುಕೊಂಡು ದೃಷ್ಟಿಯಲುಗಿಸದೆ ನೋಡಿದ.

ವಾಸು, ಪ್ರಮೀಳಾ ಲೋಕದ ಇರುವನ್ನೇ ಮರೆತುಬಿಟ್ಟಿದ್ದರು. ಅವಳು ಅರ್ಧನಗ್ನೆಯಾಗಿದ್ದಳು – ಉಡಿಯಲ್ಲಿ ಸೀರೆಯಿತ್ತಾದರೂ ಮೈಮೇಲೆ ಕುಪ್ಪಸ ವಿರಲಿಲ್ಲ. ವಾಸು ಬರೀ ದಟ್ಟಿ ಉಟ್ಟಿದ್ದ. ಆಲಿಂಗನ, ಚುಂಬನ ಅವ್ಯಾಹತವಾಗಿ ಸಾಗಿತ್ತು. ಪ್ರಮೀಳಾ ವಾಸುವಿನ ಮೇಲೆ ಬಿದ್ದು ಅವನ ತುಟಿಗಳ ಮೇಲೆ ಮುತ್ತಿನ ಮಳೆಗರೆಯುತ್ತಿದ್ದಳು; ವಾಸು ಅದಕ್ಕೆ ಪ್ರತೀಕಾರ ಮಾಡುವಂತೆ ಪ್ರಮೀಳೆಯ ಮುಖವನ್ನು ಕೈಯಲ್ಲಿ ಹಿಡಿದು, ಅವಳ ಹಣೆ, ಕಣ್ಣು, ಮೂಗು, ತುಟಿಗಳಿಗೆ ಮುದ್ದಿಡುತ್ತಿದ್ದ.

ಚನ್ನಕೇಶವಯ್ಯನಿಗೆ ನೋಡಿದ್ದು ಸಾಕಾಗಿತ್ತು. 'ಮುಂದೇನು ಮಾಡಬೇಕು' ಎಂದು ನಿಂತಲ್ಲಿಯೇ ಯೋಚಿಸಿದ. ಅಲ್ಲಿ ನಿಲ್ಲುವುದು ಸರಿಯಲ್ಲವೆಂದೆನಿಸಿತು.

ಸೀಸದ ಕೊರಡುಗಳಂತೆ ಭಾರವಾಗಿದ್ದ ಕಾಲುಗಳನ್ನೆಳೆದುಕೊಂಡು ಅಲ್ಲಿಂದ ನಡೆದುಬಿಟ್ಟ.

ಎಲ್ಲಿಗೆ ಹೋಗಬೇಕೆನ್ನುವ ಯೋಜನೆಯಿರಲಿಲ್ಲ; ಬೇಗ ತಲುಪಬೇಕು ಎನ್ನುವ ಚಿಂತೆಯಿರಲಿಲ್ಲ.

ನಡೆಯುತ್ತ ನಡೆಯುತ್ತ ಬಸವನಗುಡಿ ವಿಸ್ತರಣದ ಮನೆಗಳ ಸಾಲುಗಳನ್ನು ದಾಟಿದ. ಒಂದು ಕಡೆ ವಿಶಾಲವಾದ ಬಯಲು; ಇನ್ನೊಂದು ಕಡೆ ಗುಡ್ಡಗಳಿಗೆ ಹೋಗುವ ದಾರಿ. ಗುಡ್ಡಗಳ ದಾರಿ ಹಿಡಿದು ನಡೆದ. ಗುಡ್ಡಗಳನ್ನು ದಾಟುತ್ತ ಮುಂದೆ ನಡೆದು, ಕಾಲು ಸೋಲಲು ಒಂದು ಗುಡ್ಡದ ಮೇಲೆ ಕುಳಿತ.

ಪ್ರಕೃತಿ ಪರಮ ಶಾಂತವಾಗಿತ್ತು; ನಿತ್ಯಸುಂದರವಾಗಿತ್ತು. ಆಗಾಗ್ಗೆ ತೀಡುತ್ತಿದ್ದ ತಂಗಾಳಿ 'ನಿಶಾರಾಣಿ' ಪೊದೆಯಿಂದ ಸೌಗಂಧವನ್ನು ಕದ್ದು ತಂದು ಹರಡುತ್ತಿತ್ತು. ಹುಣ್ಣಿಮೆಯ ಚಂದ್ರ, ನೀಲಾಕಾಶದಲ್ಲಿ ನಿಂತು ಲೋಕವನ್ನು ನಗೆಯಲ್ಲಿ, ಗೆಲುವಿನಲ್ಲಿ ಮುಳುಗಿಸಲು ಹವಣಿಸುತ್ತಿದ್ದ. ಆಗಾಗ್ಗೆ ಚೀತ್ಕಾರಮಾಡುತ್ತಿದ್ದ ಒಂದು ಗೂಗೆ ಮಾತ್ರ ನಿಸರ್ಗದ ಸೌಂದರ್ಯ ಮೀಮಾಂಸೆಯನ್ನು ಪ್ರತಿಭಟಿಸುತ್ತಿತ್ತು.

ಸ್ವಲ್ಪಕಾಲ ಕಳೆಯಿತು. ಚನ್ನಕೇಶವಯ್ಯನ ಉಡುಗಿಹೋದ ಚೇತನ ಮತ್ತೆ ಜಾಗೃತವಾಯಿತು. ಮುಖಮುಚ್ಚಿಕೊಂಡು ಕಂಬನಿಗರೆದ.

ಜಾಗೃತ ಚೇತನ ಏಡಿಸಿಕೇಳುತ್ತಿತ್ತು – 'ಮುಂದೇನು ಮಾಡುವೆ – ಮನೆಗೆ ಹಿಂದಿರುಗುವೆಯಾ – ಏನೂ ಕಾಣದಂತೆ ನಟಿಸುವೆಯಾ – ಇದೇ ಸುಳ್ಳು ಬಾಳನ್ನು ಬಾಳುವೆಯಾ – ಅವಳ ಸುಳ್ಳು ವಿಶ್ವಾಸವನ್ನು ಸತ್ಯ ಪ್ರೇಮವೆಂದು ಇನ್ನು ಮುಂದೆಯೂ ನಂಬುವೆಯಾ ?'

ಅಂದಿನ ಔತಣ ನೆನಪಾಯಿತು. ಸ್ನಾನಮಾಡಬೇಕೆಂದು ನೆಪ ಹೇಳಿ ಪ್ರಮಿಳಾ ಊಟ ತಪ್ಪಿಸಿಕೊಂಡಿದ್ದುದು ಸ್ಮರಣೆಗೆ ಬಂತು – 'ಇಂದು ನನ್ನ

ಹುಟ್ಟಿದ ಹಬ್ಬ! ನನ್ನ ಹೆಂಡತಿ ಅದನ್ನು ಸಂಭ್ರಮದಿಂದ ಆಚರಿಸಿದ್ದಾಳೆ. ಈಗಲೂ ಆಚರಿಸುತ್ತಿದ್ದಾಳೆ.'

ದೂರದಲ್ಲಿ ಕಾಣುತ್ತಿದ್ದ ಕೆರೆಯಲ್ಲಿ ಪ್ರತಿಬಿಂಬಿಸಿದ್ದ ಚಂದ್ರಬಿಂಬ ಚನ್ನಕೇಶವಯ್ಯನ ಕಣ್ಣನ್ನತ್ತ ಸೆಳೆಯಿತು. 'ಅವಳೇ ಸುಖವಾಗಿರಲಿ. ನಾನೇತಕ್ಕೆ ಅವಳ ಸುಖಕ್ಕೆ ಅಡ್ಡಿಬರಬೇಕು. ನನ್ನ ಹುಟ್ಟಿದ ಹಬ್ಬ ಪುನಃ ಆಚರಿಸುವ ಕಷ್ಟ ಅವಳಿಗೆ ಒದಗದಿರಲಿ' ಎಂಬ ಭಾವನೆ ಹೊಳೆಯಿತು. ಆದರೆ ಏಕೋ ಕಾಲು ಅತ್ತ ಅಡಿಯಿಡಲೊಲ್ಲದಾಯಿತು.

ಕುಳಿತಿದ್ದ ಬಂಡೆಯಮೇಲೆ ಮಲಗಿಬಿಟ್ಟ.

ವಾಸು ಎಂಟುಗಂಟೆ ಹೊಡೆವಕೂಡಲೆ ಮನೆಗೆ ಹೊರಟುಬಿಟ್ಟ. ಪ್ರಮೀಳಾ ಪದ್ಧತಿಯಂತೆ ಒಂಭತ್ತುಗಂಟೆಯ ತನಕ ಎಚ್ಚರವಿದ್ದು, ಚನ್ನಕೇಶವಯ್ಯನನ್ನು ನಿರೀಕ್ಷಿಸಿದಳು. ಒಂಭತ್ತು ಹೊಡೆಯಿತು – ಅವನು ಮನೆಗೆ ಬರಲಿಲ್ಲ. 'ಹೊಸಸ್ಟಾಕ್ ಬಂದಿದೆ ಎಂದು ಹೇಳಿದರು, ಎಷ್ಟು ಹೊತ್ತಿಗೆ ಬರುತ್ತಾರೋ' ಎಂದುಕೊಂಡು ಮಲಗಿದಳು. ಸುಖವಾದ ನಿದ್ರೆ ಹತ್ತಿತು.

ಚನ್ನಕೇಶವಯ್ಯ ಕಣ್ದೆರೆದು ನೋಡಿದಾಗ ಅರುಣಕಿರಣ ಮೂಡಿತ್ತು. ಎದ್ದವನೇ ಗಾಬರಿಯಾಗಿ ಓಡಿದ. ಫ್ಲೂರ್ ಹೌಸ್ ಬ್ಲಾಕಿನ ಬಳಿ ನಿಂತಿದ್ದ ಗಾಡಿಯನ್ನು ಗೊತ್ತುಮಾಡಿಕೊಂಡು ಸ್ಟೇಷನ್ನಿಗೆ ಬಂದ. ಒಂದು ಟಿಕೆಟ್ ಕೊಂಡು ಹೊರಡಲು ಸಿದ್ಧವಾಗಿ ನಿಂತಿದ್ದ ಪುಣೆಯ ಗಾಡಿ ಹತ್ತಿದ.

ಫಾಲಿನವಳು ಬಂದು ಎಬ್ಬಿಸಿದಾಗಲೇ ಪ್ರಮೀಳೆಗೆ ಎಚ್ಚರ. ಕಣ್ಣು ಬಿಟ್ಟು ನೋಡುತ್ತಾಳೆ – ಹಗಲು ಚೆನ್ನಾಗಿ ವಿಸ್ತರಿಸಿದೆ. ಗಡಿಯಾರ ಏಳು ಗಂಟೆ ಸೂಚಿಸುತ್ತಿದೆ. ರೂಮಿನ ಸುತ್ತ ಕಣ್ಣು ಹೊರಳಿಸಿ ನೋಡಿದಳು. ಚನ್ನಕೇಶವಯ್ಯ ಕಾಣಲಿಲ್ಲ, ಮನೆಯನ್ನೊಮ್ಮೆ ಹುಡುಕಿಬಂದಳು. ತಕ್ಷಣ ರಾತ್ರಿಯದು ನೆನಪಾಯಿತು – ತಾನು ಮಲಗುವ ವೇಳೆಗೆ ಗಂಡ ಮನೆಗೆ ಬಂದಿರಲಿಲ್ಲ. ಅವಳ ಎದೆ ಹೊಡೆದುಕೊಳ್ಳಲಾರಂಭಿಸಿತು. 'ರಾತ್ರಿ ಅವರು ಮನೆಗೆ ಬರಲಿಲ್ಲ – ಎಲ್ಲಿಗೆ ಹೋಗಿರಬಹುದು' ಮರುಕ್ಷಣವೇ ಬೇರೊಂದು ಯೋಚನೆ ಹೊಳೆದು ಅವಳ ಚಿತ್ತವನ್ನು ಹಿಡಿದಲುಗಿಸಿತು. 'ಬಂದಿದ್ದು ಹೋಗಿರಬಹುದೇ?'. . . .

ಪ್ರಮೀಳೆಗೆ ಮನೆಯಲ್ಲಿ ನಿಲ್ಲಲಾಗಲಿಲ್ಲ. ನೇರವಾಗಿ ವಾಸು ಮನೆಗೆ ಓಡಿ ತನ್ನ ಸಂಶಯವನ್ನು ಅವನಿಗೆ ವಿವರಿಸಿದಳು.

"ಇಷ್ಟೇಕೆ ಗಾಬರಿಪಟ್ಟುಕೊಳ್ಳುತ್ತೀ ಪ್ರಮಿ. ಶಾಂತಳಾಗು. ನಾನು ಹುಡುಕಿ ನೋಡುತ್ತೇನೆ"

ಎಂದು ಧೈರ್ಯಹೇಳಿ, ಗಾಡಿಮಾಡಿಕೊಂಡು ನೇರವಾಗಿ 'ಮಾಡರ್ನ್ ಸಿಲ್ಕ್ ಪ್ಯಾಲೆಸಿ'ನ ಬಳಿಹೋದ. ಅಂಗಡಿ ಬಾಗಿಲು ತೆಗೆದಿತ್ತು. ಸಾಹುಕಾರರು ಇನ್ನೂ ಬಂದಿರಲಿಲ್ಲ. ಸಾಹುಕಾರರು ಬರುತ್ತಲೇ

"ನಿನ್ನೆ ಚನ್ನಕೇಶವಯ್ಯನವರು ಅಂಗಡಿಗೆ ಬಂದಿದ್ದರೇ?"

"ಬಂದಿದ್ದರಲ್ಲಾ. ಸಂಜೆ ಆರೂವರೆಗೆ ಇಲ್ಲಿಂದ ಮನೆಗೆ ಹೊರಟರು. ಏಕೆ ಹಾಗೆ ಕೇಳುತ್ತಿರುವಿರಿ."

"ಅವರ ಪತ್ತೆಯಿಲ್ಲ. ಮನೆಗೆ ಬರಲಿಲ್ಲವಂತೆ. ಅವರ ಮನೆಯವರು ಗಾಬರಿಯಾಗಿದ್ದಾರೆ. ನಿಮಗೇನಾದರೂ ಹೇಳಿದರೇ?"

"ಏನೂ ಹೇಳಲಿಲ್ಲವೇ? ಸ್ವಲ್ಪ ತಲೆನೋವು ಎಂದರು – ನಾನು ಸ್ಯಾರಿಡಾನ್ ತರಿಸಿಕೊಟ್ಟೆ – ಮನೆಗೆ ಬೇಗ ಹೋಗಿ ಎಂದು ನಾನೇ ಹೇಳಿ ಕಳಿಸಿಕೊಟ್ಟೆ. ಆಶ್ಚರ್ಯಕರವಾಗಿದೆಯಲ್ಲಾ." [redacted]

"ಲಿಂಗಪ್ಪನವರೇ – ನಿಮ್ಮ ಲೆಕ್ಕ ನೋಡಿ."

"ಯಾಕೆ ಸ್ವಾಮಿ."

"ನೋಡಿ – ಎಲ್ಲಾ ಸರಿಯಾಗಿದೆಯೋ ಇಲ್ಲವೋ ಹೇಳಿ."

"ನಮ್ಮಲ್ಲಿ ಹೆಚ್ಚುಕಡಿಮೆಯಾಗುವುದಕ್ಕೆ ಸಾಧ್ಯವೇ ಇಲ್ಲ. ಕ್ಯಾಷ್ ಎಲ್ಲಾ ನನ್ನ ಕಡೆಗೇ ಇರುತ್ತದೆ. ನಾವೇ ಅವರಿಗೆ ಇಪ್ಪತ್ತು ದಿವಸಗಳ ಸಂಬಳ ಕೊಡಬೇಕು. ಒಂದೆರಡು ದಿನ ನೋಡೋಣ – ಎಲ್ಲಿಗೆ ಹೋಗಿದ್ದಾರೋ ಏನೋ ಬರುತ್ತಾರೆ. ಆಳು ತುಂಬ ನಂಬಿಕೆಯ ಮನುಷ್ಯ. ನನ್ನಲ್ಲಿ ತೆಗೆದುಕೊಂಡಿದ್ದ ಸಾಲವನ್ನು ಕೂಡ ಕಾಸು ಹೆಚ್ಚುಕಡಿಮೆಯಾಗದಂತೆ ತೀರಿಸಿದರು."

ಲಿಂಗಪ್ಪನ ಪ್ರತಿಯೊಂದು ಮಾತೂ ವಾಸು ಹೃದಯಕ್ಕೆ ಒಂದೊಂದು ಅಲಗು ನೆಟ್ಟಂತಾಗುತ್ತಿತ್ತು.

ವಾಸು ಸೋತಮುಖಹಾಕಿಕೊಂಡು ಬಂದುದನ್ನು ನೋಡಿ ಅವನಿಗೆ ಚನ್ನಕೇಶವಯ್ಯನ ಪತ್ತೆ ಸಿಗಲಿಲ್ಲವೆಂಬುದನ್ನು ಪ್ರಮಿಳಾ ಅರಿತಳು.

"ಮುಂದೇನುಗತಿ ?"

"ಸಮಾಧಾನ ತಂದುಕೋ ಪ್ರಮಿ. ಲಿಂಗಪ್ಪ ಹೇಳಿದಂತೆ ಒಂದೆರಡು ದಿನ ಕಾದು ನೋಡೋಣ."

"ಅವರು ಕೆರೆಯೋ ಭಾವಿಯೋ ಹುಡುಕಿಕೊಂಡಿದ್ದರೆ...."

"ಅವರು ಅಷ್ಟುಧೈರ್ಯಶಾಲಿಗಳೆಂದು ನಾನು ನಂಬಲಾರೆ."

"ನಿನ್ನೆ ಅವರು ಮನೆಗೆ ಬಂದೇ ಹೋಗಿದ್ದಾರೆ. ನಾವಿಬ್ಬರೂ ಜತೆಯಲ್ಲಿದ್ದುದನ್ನು ನೋಡಿಯೂ ಇದ್ದಾರೆ."

"ಹಾಗೇ ಕಾಣುತ್ತದೆ. ಆದರೆ ಈ ವಿಷಯ ಆತನಿಗೆ ಚನ್ನಾಗಿ ಗೊತ್ತಿದೆ ಎಂದಿದ್ದೆ."

ಪ್ರಮಿಳೆಯ ಮನಸ್ಸನ್ನು ಭಯ, ಕಳವಳ ಆವರಿಸಿತು. ಬಿಕ್ಕಿ ಬಿಕ್ಕಿ ಅಳುವುದಕ್ಕಾರಂಭಿಸಿದಳು. ವಾಸು ಅವಳನ್ನು ಹಲವು ಬಗೆಯಲ್ಲಿ ಸಮಾಧಾನಮಾಡತೊಡಗಿದ.

"ನೀನೇಕೆ ಹೆದರಬೇಕು ಪ್ರಮಿ. ನಾನಿಲ್ಲವೇ?"

"ಅವರು ಇದ್ದಾಗ ಬೇಡವೆನ್ನುತ್ತಿತ್ತು ಮನಸ್ಸು – ಈಗ ಏನೋ ಕಳವಳ."

"ಏಕೋ"

"ಅವರು ಜೀವಂತರಾಗಿದ್ದಾರೆಂದು ತಿಳಿದರೆ ಸಾಕು."

"ಆ ವಿಷಯದಲ್ಲಿ ನೀನು ಅಧೈರ್ಯಪಡುವ ಕಾರಣವೇ ಇಲ್ಲ. ಅವರು ಎಲ್ಲಿಗೆ ಹೋಗಿರಬಹುದು ಯೋಚಿಸಿಹೇಳು. ಎಲ್ಲಿದ್ದರೂ ಹುಡುಕುತ್ತೇನೆ."

"ಅವರು ಎಲ್ಲಿಗೂ ಹೋಗುತ್ತಿರಲಿಲ್ಲ."

"ಯಾರೂ ಸ್ನೇಹಿತರಿರಲಿಲ್ಲವೇ?"

"ಯಾರೂ ಇಲ್ಲ."

"ಊರು ಬಿಟ್ಟೇ ಹೋಗಿರಬೇಕು."

"ಎಲ್ಲಿಗೆ ಹೋಗಿರಬಹುದು. ಅವರ ಹತ್ತಿರ ಹಣವೂ ಇರಲಿಲ್ಲ."

"ಅಂಗಡಿಯಲ್ಲಿ ಒಂದು ಕಾಸೂ ಮುಟ್ಟಿಲ್ಲವಂತೆ."

ಪ್ರಮೀಳಾ ಸೋತು ತಲೆಯಮೇಲೆ ಕೈಹೊತ್ತು ಕುಳಿತುಬಿಟ್ಟಳು.

ಅವಳಿಗೆ ದಿನಗಳೆಯುವುದೇ ದೊಡ್ಡ ಸಮಸ್ಯೆಯಾಯಿತು. ಸಂಜೆ ಬಂತು – ಸುದ್ದಿಯಿಲ್ಲ; ಬೆಳಗಾಯಿತು – ಸುದ್ದಿಯಿಲ್ಲ. ವೇಣಕ್ಕ ಬಲವಂತ ದಿಂದ ಸ್ನಾನಮಾಡಿಸಿ ಪ್ರಮೀಳೆಗೆ ಒಂದು ಪಿಡಿಚೆ ಉಪ್ಪಿಟ್ಟು ತಿನ್ನಿಸಿದರು.

ಮಧ್ಯಾಹ್ನವಾಯಿತು – ಅಂಚೆಯಾಳು ಒಂದು ಕಾಗದ ತಂದುಕೊಟ್ಟ. ಪ್ರಮೀಳಾ ವಿಳಾಸನೋಡಿದಳು – ಅವರದೇ ಅಕ್ಷರ – ಮನಸ್ಸಿಗೆ ಒಮ್ಮೆಲೇ ಒದಗಿದ ಶಾಂತಿ ಅವಳನ್ನು ನಿಶ್ಶಕ್ತಳನ್ನಾಗಿಮಾಡಿತು. ಕುಳಿತು ಕಾಗದ ವನ್ನು ಸಾವಕಾಶವಾಗಿ ಒಡೆದು ಓದಿಕೊಂಡಳು.

"ಪ್ರಮೀಳಾ,

ನಿನ್ನ ಕೈಗೆ ಈ ಕಾಗದ ಸೇರುವ ವೇಳೆಗೆ ನಾನು ಬೆಂಗಳೂರಿನಿಂದ ಬಹಳ ದೂರದಲ್ಲಿರುತ್ತೇನೆ. ನಿನ್ನೆ ನಾನು ಮನೆಗೆ ಬರದೆ ಏನಾದೆ ಎಂದು ನಿನಗೆ ಚಿಂತೆಯಾಗಿರಬಹುದು.

ನಿನ್ನೆ ಮನೆಗೆ ಬಂದೆ – ನಿತ್ಯಕ್ಕಿಂತ ಬೇಗನೆ ಬಂದೆ. ಸಾಹುಕಾರರಿಗೆ ದಯೆಬಂದು 'ಮನೆಗೆ ಬೇಗ ಹೋಗು' ಎಂದು ಕಳಿಸಿಕೊಟ್ಟರು. ಇದೂ ವಿಧಿಯ ಅಣಕವಲ್ಲವೇ? ಕಿಟಕಿಯ ಕಿಂಡಿಯಿಂದ ಒಳಗೆ ನಡೆಯು ತ್ತಿದ್ದುದನ್ನು ಕಣ್ಣಾರೆ ಕಂಡೆ ಅಲ್ಲಿಂದ ಹೊರಟು ರಾತ್ರಿಯನ್ನು ಬಸವನಗುಡಿ ಬಂಡೆಯೊಂದರ ಮೇಲೆ ಕಳೆದು, ಬೆಳಗಾಗುವ ವೇಳೆಗೆ ಸ್ಟೇಷನ್ ಮುಟ್ಟಿ ರೈಲು ಹತ್ತಿದೆ.

ನಾನು ನಿನಗೆ ಸರಿಯಾದ ಪತಿಯಲ್ಲವೆಂದು ನನಗೆ ಗೊತ್ತಿತ್ತು. ನಿನ್ನ ಆಸೆಯ ವೇಗಕ್ಕೆ ಸರಿಯಾಗಿ ಓಡುವ ಯೋಗ್ಯತೆ ನನ್ನ ಜೀವನದ ಕುಂಟು ಕುದುರೆಗಿರಲಿಲ್ಲ. ಆದರೆ ನೀನು ನನ್ನನ್ನು ನಿರಾಕರಿಸಬಹುದೆಂಬುದು ನನ್ನ ಮಂದಮತಿಗೆ ಹೊಳೆಯಲಿಲ್ಲ.

ನೀನು ಸಾಲ ತೀರಿಸಿದುದು – ಭೂಮಿ ಕೊಂಡದ್ದು ಎಲ್ಲವೂ ನ್ಯಾಯ ವಾದ ಮಾರ್ಗದಲ್ಲಿಯೇ ಎಂದು ನಂಬಿದ್ದೆ. ನನಗೆ ಈ ಪಾಪದ ಸೊತ್ತಿನ ಪಾಲು ಬೇಡ. ಯಾವ ತ್ಯಾಗದಿಂದ ನೀನು ಅವುಗಳನ್ನು ದೊರಕಿಸಿ ಕೊಂಡೆಯೋ – ಯಾವ ತ್ಯಾಗವನ್ನು ನಿನ್ನಿಂದ ಸ್ವೀಕರಿಸಿ ಅವುಗಳನ್ನು

ನಿನಗೆ ದೊರಕಿಸಿಕೊಟ್ಟರೂ ನೀವಿಬ್ಬರೇ ಚಿರಕಾಲ ಅದರ ಸುಖ ಅನುಭವಿಸಿ.

ನನ್ನನ್ನು ಹುಡುಕುವ ಪ್ರಯತ್ನಮಾಡಬೇಡಿ. ನೀವು ಎಂದು ನನ್ನನ್ನು ಹುಡುಕುವ ಪ್ರಯತ್ನ ನಡೆಸಿರುವಿರೆಂದು ನನಗೆ ತಿಳಿದುಬರುತ್ತದೆಯೋ ಅಂದು ನಾನು ಪ್ರಾಣತೆಗೆದುಕೊಳ್ಳುತ್ತೇನೆ. ನನ್ನ ಪಾಡಿಗೆ ನನ್ನ ಬಿಟ್ಟುಬಿಡಿ – ನನ್ನ ಮರೆತುಬಿಡಿ. ಎಲ್ಲಾದರೂ ಮುಖಮರೆಸಿಕೊಂಡು ನನ್ನ ಬಾಳಿನ ಮುರಿದಮನೆಯನ್ನು ಮತ್ತೆ ಕಟ್ಟಿಕೊಳ್ಳುತ್ತೇನೆ.

ಇಂತು 'ನಿನ್ನವನು ಎಂದುಕೊಂಡಿದ್ದ'

"ಚನ್ನಕೇಶವ"

ಪ್ರಮೀಳೆಗೆ ದುಃಖ,ಸಂತೋಷ ಸಂಮಿಶ್ರವಾಗಿ ಉಕ್ಕಿಬಂತು. 'ಅವರು ಜೀವಂತರಾಗಿದ್ದಾರೆ' – ಜೀವಂತರಾಗಿದ್ದಾರೆ 'ಎಂದು ಚೀರಿದಳು.

ಅದೇ ಸಂಜೆ ಸಾಹುಕಾರ ಲಿಂಗಪ್ಪನ ಅಂಗಡಿಯ ಆಳು ಒಂದು ಕಾಗದ, ಅದರ ಜತೆಗೆ ತೊಂಭತ್ತು ರೂಪಾಯಿಗಳನ್ನು ತಂದಿತ್ತು ಹೋದ.

"ಚನ್ನಕೇಶವಯ್ಯನವರಿಂದ ಕಾಗದ ಬಂದಿದೆ. ಅಂಗಡಿಯ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಅವರ ಸಂಬಳದ ಬಾಕಿ ತೊಂಭತ್ತು ರೂಪಾಯಿಗಳನ್ನು ಇದರೊಂದಿಗೆ ಕಳುಹಿಸಿದೆ."

ಎಂದು ಕಾಗದದಲ್ಲಿತ್ತು

ನಿರ್ಜೀವ ನೋಟುಗಳು ಪ್ರಮೀಳೆಯ ಕೈಸುಡತೊಡಗಿದವು.

ಪ್ರಮೀಳೆ ದುಃಖ ಮರೆತು ಹಾಸಿಗೆ ಬಿಟ್ಟೇಳಬೇಕಾದರೆ ಒಂದು ತಿಂಗಳು ಬೇಕಾಯಿತು. ವೇಣಕ್ಕ ಅವಳ ಎಡಬಿಡದೆ ಸೇವೆ ಶುಶ್ರೂಷೆ ಮಾಡಿದಳು.

ಚನ್ನಕೇಶವಯ್ಯ ಮನೆಬಿಟ್ಟುಹೋದ ಸಂಗತಿ ಬೆಂಗಳೂರಿನಲ್ಲೇ ಅಡಕವಾಗಿರಲಿಲ್ಲ; ಮೈಸೂರಿಗೂ ನಡೆದುಹೋಯಿತು. ಪ್ರಮೀಳೆಯ ತಂದೆ ಸುಬ್ಬರಾಮಯ್ಯನವರು ಧಾವಿಸಿ ಓಡಿಬಂದರು. ಮಗಳಿಗೂ ತಂದೆಗೂ ಬಿಸಿ ಬಿಸಿ ಮಾತುಕತೆ ನಡೆಯಿತು.

"ನಮ್ಮ ಕುಲಕ್ಕೆ ನೀನು ಕೊಡಲಿಯಾಗಿ ಹುಟ್ಟಿದೆ."

ಎಂದು ಸುಬ್ಬರಾಮಯ್ಯನವರು ಮಗಳನ್ನು ಆಕ್ಷೇಪಿಸಿದರು.

"ನನ್ನ ಏನುಮಾಡು ಎಂದು ಹೇಳುವಿರಿ."

"ನಾನೇನು ಹೇಳುವುದು – ಮಾಡುವುದೆಲ್ಲಾ ಮಾಡೇ ಇದ್ದೀಯಲ್ಲಾ."

"ನನ್ನ ಹಣೆಯಲ್ಲಿ ಬರೆದದ್ದಕ್ಕೆ ಯಾರೇನು ಮಾಡುವುದಕ್ಕಾಗುತ್ತದೆ."

"ಪಾಪಮುಚ್ಚುವುದಕ್ಕೆ ಇದೊಂದು ಸೋಗು. ಹಗಲು ಕಂಡ ಭಾವಿಯಲ್ಲಿ ಇರುಳು ಬಿದ್ದರೆ ಹಣೆಯಬರೆಹ ಏನುಮಾಡುತ್ತದೆ. ಆಗಿಹೋದ ಅವಿವೇಕ ಈಗ ತಿದ್ದುವುದಕ್ಕಾಗುವುದಿಲ್ಲ. ಆದರೂ 'ಕೆಟ್ಟುದರಲ್ಲಿ ಮಧ್ಯಸ್ಥ' ಎಂದ ಹಾಗೆ ಈ ಸ್ನೇಹಿತನ ಗೀಳುಬಿಟ್ಟು ಮೈಸೂರಿಗೆ ಬಂದು ಮರ್ಯಾದೆಯಾಗಿರು. ಚನ್ನಕೇಶವ ಒಂದಲ್ಲ ಒಂದು ದಿನ ಹಿಂದಿರುಗಿ ಬಂದರೂ ಬರಬಹುದು."

ಪ್ರಮೀಳಾ ಕ್ಷಣಕಾಲ ಆಲೋಚಿಸಿ

"ಅದು ಸಾಧ್ಯವಿಲ್ಲ"

ಎಂದು ಹೇಳಿದಳು. ಸುಬ್ಬರಾಮಯ್ಯನವರಿಗೆ ಸಹನೆ ಉಳಿಯಲಿಲ್ಲ.

"ಹಾಗಾದರೆ ಹಾಳಾಗಿಹೋಗು. ಇದೇಕೊನೆ. ಇನ್ನು ನಿನ್ನ ಮುಖಾವಲೋಕನ ಮಾಡುವುದಿಲ್ಲ. ನನ್ನ ಮಗಳು ಇವತ್ತು ಸತ್ತು ಹೋದವಳೆಂದು ಭಾವಿಸಿಕೊಂಡು ಸ್ನಾನಮಾಡಿಬಿಡುತ್ತೇನೆ. ನಮ್ಮ ಋಣಾನು ಬಂಧ ತೊಡೆದು ಹೋಯಿತೆಂದು ತಿಳಿದುಕೋ"

ಎಂದು ಹೇಳಿ ಅಲ್ಲಿ ನಿಲ್ಲದೆ ಹೊರಟು ಹೋದರು. ತಂದೆ ಪ್ರಯೋಗಿಸಿದ ವಜ್ರಾಯುಧ ಪ್ರಮೀಳೆಯ ಶಕ್ತಿಯನ್ನು ಪರೀಕ್ಷಿಸಿತು. ಮನಸ್ಸಿಗಾದ ಆವೇಗ, ಆಘಾತಗಳನ್ನು ದೇಹ ಸಹಿಸಲು ಸಾಧ್ಯವಾಗಲಿಲ್ಲ. ಒಂದು ತಿಂಗಳು 'ಅವಳು' ಹಾಸಿಗೆ ಹಿಡಿದು ಮಲಗಬೇಕಾಯಿತು. ಆದರೆ ಅವಳ ನಿರ್ಧಾರ ಚಲಿಸಲಿಲ್ಲ.

೩

ಪುನೆಗೆ ಹಿಂದಿರುಗಿದ ಪ್ರಮೀಳಾ ವಾಸುವಿನ ಸ್ವಾಗತಕ್ಕೆ ಸಿದ್ಧಪಡಿಸಿದಳು. ರೂಮನ್ನು ಸ್ವಚ್ಛಮಾಡಿ, ಕುರ್ಜಿ ಮೇಜನ್ನು ಸರಿಯಾಗಿ ಜೋಡಿಸಿ,

ಹಾಸಿಗೆಯ ಮೇಲಿದ್ದ ಮಗ್ಗುಲಾಸಿಗೆ ಬದಲಾಯಿಸಿದಳು. ಕಿತ್ತಲೆ ಹಣ್ಣು ಸುಲಿದು, ಕುಸುಮಗಳನ್ನು ಸಂಗ್ರಹಿಸಿ ಒಂದು ಬೆಳ್ಳಿ ತಟ್ಟೆಯಲ್ಲಿ ಹಾಕಿಟ್ಟಳು; ಹಾಲು ಕಾಸಿ ಒಂದು ಗ್ಲಾಸಿನಲ್ಲಿ ಹಾಕಿ ಮುಚ್ಚಿಟ್ಟಳು, ಚಿಗುರು ವೀಳೆಯದೆಲೆಗಳನ್ನು ಆರಿಸಿ, ಅವುಗಳಿಗೆ ಸುಣ್ಣ ಸವರಿ ಅಣಿಮಾಡಿಟ್ಟಳು.

ತಾನು ಸೊಗಸಾಗಿ ಅಲಂಕಾರಮಾಡಿಕೊಂಡು, ಮುಖಕ್ಕೆ ತೆಳ್ಳಗೆ ಪೌಡರ್ ಹಚ್ಚಿಕೊಂಡು, ತಲೆಯ ತುಂಬ ಘಮಘಮಿಸುವ ಹೂಮುಡಿದು ಕೊಂಡಳು.

ವಾಸು ಬಂದದ್ದು ನೋಡಿ

"ಹಾ!" ಎಂದು ಮೇಲುಸಿರುಬಿಟ್ಟಳು.

"ಏಕೆ ಪ್ರಮಿ?" – ಎಂದು ವಾಸು ಕೇಳಿದ.

"ಎಂಟಾಯಿತು – ಎಂಟೂವರೆಯಾಯಿತು – ನೀವು ಬರಲಿಲ್ಲ – ಬರುವಿರೋ ಇಲ್ಲವೋ ಎಂಬ ಅನುಮಾನ ಕಾಡತೊಡಗಿತು."

ವಾಸು ಪ್ರಮೀಳೆಯನ್ನು ಆಪಾದಮಸ್ತಕ ನೋಡಿದ. ಅವಳ ಸೌಂದರ್ಯಕ್ಕೆ ಅಲಂಕಾರ ಕುಂದಣವಿಟ್ಟಂತಾಗಿತ್ತು. ಕೈಹಿಡಿದುಕೊಂಡು ವಿಶ್ವಾಸದಿಂದ ತೊಡೆಯಮೇಲೆ ಕೂಡಿಸಿಕೊಂಡು

"ಇದೇನು, ನನ್ನ ಸುಂದರಿ ಇವತ್ತು ಸೌಂದರ್ಯಸ್ಪರ್ಧೆಗೆ ಹೊರಟಿದ್ದಾಳೆ."

"ಒಲ್ಲದ ರಮಣನನ್ನು ಒಲಿಸಿಕೊಳ್ಳಬೇಕಲ್ಲಾ. ಅದಕ್ಕಾಗಿ."

"ಒಲ್ಲದ ರಮಣ ಎನ್ನಬೇಡ. ದರಿದ್ರ ರಮಣ ಎಂದು ಹೇಳು."

"ನನ್ನ ರಮಣ ಎಂದಿಗೂ ದರಿದ್ರನಲ್ಲ."

ಎಂದು ವಾಸು ಕೋಟು ಕಳಚಿದಳು.

"ನೀವೂ ಇಷ್ಟು ಚಿಂತೆ ಮಾಡಬಲ್ಲಿರೆಂದು ನಾನು ತಿಳಿದಿರಲಿಲ್ಲ."

"ನನ್ನ ವೈಯುಕ್ತಿಕ ವಿಷಯವಾಗಿದ್ದರೆ ನಾನು ಯೋಚಿಸುತ್ತಲೇ ಇರಲಿಲ್ಲ."

"ಇನ್ನು ಯಾರ ವಿಷಯ ಯೋಚಿಸುತ್ತಿರುವಿರಿ ?"

"ಯಾರ ವಿಷಯ ಹೇಳು."

"ನನಗೇನು ನೀವು ಕಡಿಮೆಮಾಡಿಲ್ಲ."

"ನಾನು ಆಸೆಯ ಗೋಪುರ ಕಟ್ಟುತ್ತಿದ್ದಂತೆ ಅದು ಮುರಿದುಬಿತ್ತು."

"ನಿಮ್ಮ ತಳಪಾಯ ಭದ್ರವಾಗಿದೆ. ಗೋಪುರ ಮುರಿದು ಬೀಳಲು ಸಾಧ್ಯವೇ ಇಲ್ಲ."

"ನನ್ನ ತಳಪಾಯ ಯಾವುದು?"

"ಸ್ವ - ಸಾಮರ್ಥ್ಯ!"

"ನಿನ್ನ ಅಪಾರ ನಂಬಿಕೆ ನನಗೆ ಹೊಸಶಕ್ತಿಯನ್ನು ಕೊಡುತ್ತಿದೆ."

"ಆ ನಂಬಿಕೆ ಯಥಾರ್ಥವಾದುದು. ಕಳೆದುಹೋದುದು ಹೋಯಿತು. ಪ್ರಾಯಶಃ ಇದಕ್ಕೂ ಉತ್ತಮ ಭವಿಷ್ಯ ಕಾದಿದೆಯೆಂದು ಕಾಣುತ್ತದೆ. ದೀಪ ಚೆನ್ನಾಗಿ ಬೆಳಗುವ ಮುನ್ನ ಸ್ವಲ್ಪ ಮಂಕಾಗುತ್ತದೆ. ಮುಂದೇನು ಮಾಡಬೇಕೆಂದು ಯೋಚಿಸಿರುವಿರಿ."

"ಸದ್ಯಕ್ಕೆ ಯಾವ ಯೋಚನೆಯೂ ಹೊಳೆಯಲೊಲ್ಲದು. ಕೆಲಕಾಲ ಈ ಊರು ಬಿಟ್ಟು ಎಲ್ಲಿಗಾದರೂ ಹೋಗಬೇಕೆಂದನಿಸುತ್ತಿದೆ."

"ಒಬ್ಬರೇ...."

"ಅದೂ ಅನಿಶ್ಚಿತ."

"ಇನ್ನೂ ನೀವು ಬೇರೆ - ನಾನು ಬೇರೆ ಎಂಬ ಭಾವನೆ ಬಿಡಲೊಲ್ಲಿರಿ."

"ನಾನು ಭಿನ್ನಭೇದ ಭಾವನೆ ತಳೆಯಲಿಲ್ಲವಲ್ಲಾ."

"ಒಬ್ಬರೇ ಹೋಗುವ ಯೋಚನೆ ಏಕೆ ಮಾಡಿದಿರಿ."

"ನಿನಗಾಗಿ."

"ನನಗಾಗಿ ಅಂಥ ದುರಾಲೋಚನೆ ಮಾಡಬೇಡಿ. ಎಲ್ಲಿಗೆ ಹೋಗಬೇಕೆಂದು ಸನ್ನಾಹ."

"ಅದೂ ಅನಿಶ್ಚಿತ."

ಪ್ರಮೀಳೆಯ ಬುದ್ಧಿಗೆ ಏನೋ ಥಟ್ಟನೆ ಹೊಳೆದಂತಾಯಿತು. ವಾಸು ತೊಡೆಯಿಂದಿಳಿದು ಕಿಟಕಿಯ ಬಳಿ ನಿಂತಳು. ವಾಸು ಎದ್ದು ಹೋಗಿ ಅವಳ ಎಡಬುಜದ ಮೇಲೆ ಕೈಯಿಟ್ಟು ಅಪ್ಪಿಕೊಂಡ.

"ನನ್ನ ಪ್ರಮೀಗೆ ಸ್ಫೂರ್ತಿಬಂದಿರುವ ಹಾಗಿದೆ."

"ನಿಸ್ಸಂದೇಹವಾಗಿ."

"ಏನೆಂದು ಕೇಳಬಹುದೇ ?"

"ಕೇಳಬಹುದು ಮಾತ್ರವೇ ಅಲ್ಲ – ಹೇಳಿದ ಹಾಗೆ ಕೇಳಲೂ ಬೇಕು."

"ರಾಣಿ ಸಾಹೇಬರು ಹೇಗೆ ಆಜ್ಞೆಮಾಡಿದರೆ ಹಾಗೆ ನಡೆದುಕೊಳ್ಳಲು ಗುಲಾಮ ಸಿದ್ಧವಾಗಿದ್ದಾನೆ."

ವಾಸುವಿನ ಸರಸನುಡಿ ಪ್ರಮೀಳೆಯ ಮನಸ್ಸನ್ನು ಹಗುರ ಮಾಡಿತು. ಅವನ ಕಡೆ ತಿರುಗಿ, ಅವನ ಷರಟಿನ ಗುಂಡಿಯ ಮೇಲೆ ಬೆರಳಾಡಿಸುತ್ತ

"ನನ್ನದು ಬಹಳ ದಿವಸಗಳ ಒಂದು ಆಸೆ ಇದೆ."

"ಹೇಳು – ಪೂರಯಿಸಲು ಪ್ರಯತ್ನಿಸುತ್ತೇನೆ."

"ಕೈ ಮೇಲೆ-ಕೈಹಾಕಿ ಶಪಥಮಾಡಿ."

"ಇದಕ್ಕೆ ಶಪಥವೂ ಬೇಕೇ ? ನಿನ್ನ ಒಂದು ಸಣ್ಣ ಆಕಾಂಕ್ಷೆಯೂ ನನಗೊಂದು ಮಹದಾಜ್ಞೆಯೆಂಬುದನ್ನು ಕಾಣೆಯಾ "

ಎಂದು ಅವಳ ಕೈಹಿಡಿದು ಶಪಥಮಾಡಿದ.

"ಬಹಳ ದಿವಸಗಳಿಂದ ಶೃಂಗೇರಿ, ಉಡುಪಿ, ತಿರುಪತಿ, ಕಾಶಿ, ದಕ್ಷಿಣದ ಕೆಲವು ಪುಣ್ಯಕ್ಷೇತ್ರಗಳನ್ನು ನೋಡಬೇಕೆಂಬ ಆಸೆಯಿದೆ. ಬನ್ನಿ ಹೋಗಿಬರೋಣ. ನಿಮಗೂ ಬೇಸರವಾಗಿದೆ."

"ಯೋಚನೆ ಪ್ರಶಸ್ತವಾಗಿದೆ. ಆದರೆ............"

"ಆದರೇನು ? ದುಡ್ಡಿನ ವಿಷಯ ತಾನೇ."

"ಹೌದು – ಈಗ ದುಡ್ಡಿಗೆ ಬಹಳ ಬೆಲೆ ಬಂದಿದೆ."

"ಎಷ್ಟು ಬೇಕಾಗಬಹುದು."

"ಎರಡು ಮೂರು ಸಾವಿರ ರೂಪಾಯಿ ಬೇಡವೇ ? ಮೊದಲು ನಾನು ಯಾರನ್ನು ಕೇಳಿದರೂ ಎಷ್ಟುಬೇಕಾದರೂ ದುಡ್ಡು ಹುಟ್ಟುತ್ತಿತ್ತು – ಈಗ ಯಾರನ್ನು ಕೇಳುವುದಕ್ಕೂ ಸಂಕೋಚವಾಗುತ್ತದೆ."

"ನಾನು ಹೇಳುವ ಒಂದು ಸಲಹೆ ಕೇಳುವಿರಾ ?"

"ಏನು ಹೇಳು"

"ದುಡ್ಡಿನ ಯೋಚನೆ ಬಿಟ್ಟುಬಿಡಿ."

"ಎರಡು ಮೂರು ಸಾವಿರದ ಮಾತು !"

"ಇರಲಿ ಚಿಂತೆಯಿಲ್ಲ. ನನ್ನ ಕುತ್ತಿಗೆಯಲ್ಲಿ ಮೂರೆಳೆ ಸರವಿದೆ. ಕೈಯಲ್ಲಿ ಎರಡೆರಡು ಜತೆ ಬಳೆಯಿದೆ. ಸರ, ಎರಡು ಜತೆ ಬಳೆಕೊಡುತ್ತೇನೆ. ಮಾರಿ ಪ್ರಯಾಣದ ವ್ಯವಸ್ಥೆಮಾಡಿ. ಪ್ರವಾಸದಲ್ಲಿರುವಾಗ ಮೈತುಂಬ ಒಡವೆ ಹೇರಿಕೊಂಡು ಹೋಗುವುದು ಕ್ಷೇಮವಲ್ಲ."

ವಾಸು ನಿರುತ್ತರನಾದ. ಪ್ರಮೀಳೆಯ ಸಲಹೆ ಅವನನ್ನು ದಂಗುಬಡಿಸಿತ್ತು.

"ಇದು ಯಾವ ನ್ಯಾಯ ಪ್ರಮೀ. ನಿನ್ನನ್ನು ಸುಲಿದು ಈ ಯಾತ್ರೆ ಮಾಡದಿದ್ದರೆ ಯಾವ ಪ್ರಪಂಚ ಮುಳುಗಿಹೋಗುತ್ತದೆ."

"ನಿಮ್ಮ ಮತ್ತು ನನ್ನ ಪ್ರಪಂಚ. ಈಗ ನಾವು ಮೂರು ನಾಲ್ಕು ತಿಂಗಳು ಬೆಂಗಳೂರು ಬಿಟ್ಟುಹೋದರೆ ಒಳ್ಳೆಯದು. ನಾಳೆ ಇಂಥ ಹತ್ತು ಒಡವೆ ನೀವು ಮಾಡಿಸಿಕೊಡಬಲ್ಲಿರಿ. ಏಳಿ, ಊಟ ಮಾಡಿ. ಬೆಳಿಗ್ಗೆ ಊಟ ಮಾಡಿದಿರೋ ಇಲ್ಲವೋ! ಮಾಡಿದ ಅಡಿಗೆ ತಂಗಳಾಯಿತು."

"ವಿಶ್ವಾಸ ತಂಗಳಾಗದಿದ್ದರೆ ಸಾಕು."

ಎಂದು ಹೇಳಿದ.

ಮಾರನೆಯ ಬೆಳಿಗ್ಗೆ ಪ್ರಮೀಳೆ ತನ್ನ ಒಡವೆಗಳನ್ನು ತೆಗೆದು ವಾಸು ಕೈಯಲ್ಲಿಟ್ಟಳು. ಅದನ್ನೇ ನೋಡುತ್ತ ಸಾಲಭಂಜಿಕೆಯಂತೆ ವಾಸು ನಿಂತುಬಿಟ್ಟ

"ಇನ್ನೂ ಯೋಚನೆಮಾಡುವಿರಲ್ಲ."

"ಅಕಾರ್ಯಮಾಡುವ ಕೈನಡುಗುವುದು ಸ್ವಾಭಾವಿಕವಷ್ಟೆ."

"ಅಕಾರ್ಯವೂ ಅಲ್ಲ, ಸುಕಾರ್ಯವೂ ಇಲ್ಲ. ಸುಮ್ಮನೆ ಹೋಗಿಬನ್ನಿ. ನೀವು ಬರುವವರೆಗೆ ನಾನು ಊಟ ಮಾಡಿರುವುದಿಲ್ಲ."

"ನನ್ನ ಕಾಯಬೇಡ. ತುಂಬ ತಡವಾಗಬಹುದು."

"ಚಿಂತೆಯಿಲ್ಲ. ನಿಮ್ಮ ಕೆಲಸವೆಲ್ಲಾ ಮುಗಿಸಿಕೊಂಡು ಬನ್ನಿ"

ಎಂದು ಹೇಳಿದಳು.

ಒಡವೆಗಳನ್ನು ಮಾರದೆ ಹಣ ದೊರಕಿಸುವ ಹಂಚಿಕೆ ಹೂಡಿಕೊಂಡು ವಾಸು ರಾಮನಾಥಯ್ಯನನ್ನು ಹುಡುಕಿಕೊಂಡು ಹೋದ.

ರಾಮನಾಥಯ್ಯ ವಾಸು ಕಂಪೆನಿಯ ಏಜಂಟರಲ್ಲಿ ಭಾರಿ ಕುಳ. ಅವನು ಇನ್‌ಷ್ಯೂರೆನ್ಸ್ ಕಂಪೆನಿಯ ಮೇಲೆ ಅವಲಂಬಿಸಿ ಬಾಳ್ವೆ ಸಾಗಿಸ ಬೇಕಾಗಿರಲಿಲ್ಲ. ಸಾವಿರಾರು ರೂಪಾಯಿ ಬಡ್ಡೀಗೆ ಕೊಟ್ಟುಕೊಂಡಿದ್ದ; ಬೆಂಗಳೂರಿನಲ್ಲಿ ನಾಲ್ಕು ಮನೆ ಬಾಡಿಗೆ ದುಡಿಯುತ್ತಿತ್ತು; ಅಕ್ಕೀಪೆಬ್ಬಾಳಿನಿಂದ ಸಾವಿರಾರು ರೂಪಾಯಿ ಭತ್ತ ಮನೆಗೆ ಬಂದು ಬೀಳುತ್ತಿತ್ತು. 'ಇನ್‌ಷ್ಯೂರೆನ್ಸಿನಲ್ಲಿ ನಾಲ್ಕು ಕಾಸು ಬಂದರೆ ಯಾರನ್ನು ಕೆಡಿಸಿತು' ಎಂದುಕೊಂಡು ತನಗೆ ಪುರಸತ್ತಾದಾಗ ಸ್ವಲ್ಪ ಇನ್‌ಷ್ಯೂರೆನ್ಸ್ ಕೆಲಸವನ್ನೂ ಮಾಡುತ್ತಿದ್ದ.

ವಾಸುವನ್ನು ಕಂಡು ರಾಮನಾಥಯ್ಯನಿಗೆ ಆನಂದ ಆಶ್ಚರ್ಯಗಳು ಏಕಕಾಲದಲ್ಲಿ ಆದವು.

"ನಾನೇ ನಿಮ್ಮನ್ನು ನೋಡಲು ಬರಬೇಕೆಂದಿದ್ದೆ. ನೀವು ಬಂದದ್ದು ಬಹಳ ಸಂತೋಷ ಸಾರ್. ಕುಳಿತುಕೊಳ್ಳಿ."

ಎಂದು ವಾಸು ಕೈಗೆ ಸಿಗರೇಟ್ ಡಬ್ಬಕೊಟ್ಟು, ಒಳಗೆ ಹೋಗಿ ಕಾಫಿ ತಂದಿತ್ತ.

"ಏನೋ ಸಮಾಚಾರ ಕೇಳಿದೆ. ನಿಜವೇ ಸಾರ್."

"ನನ್ನ ಕ್ರ್ಯಾಷ್ (Crash) ವಿಷಯವೇ ?"

"ಹೌದು."

"ನಿಜ ರಾಮನಾಥಯ್ಯ. ವಿಧಿಯಿಲ್ಲದೆ ನಾನು ಇನ್‌ಸಾಲ್ವೆನ್ಸಿ ತೆಗೆದುಕೊಳ್ಳಬೇಕಾಯಿತು."

"ಹೀಗೇಕಾಯಿತು ಸಾರ್. ಸ್ವಲ್ಪ ಹೆಚ್ಚುಕಡಿಮೆಯಾಗಿದ್ದರೆ ನಾವು ಯಾಥಾದರೂ ಸಹಾಯಮಾಡುತ್ತಿದ್ದೆವು."

"ಅದು ಸ್ವಲ್ಪದ ವಿಷಯವಲ್ಲ ರಾಮನಾಥಯ್ಯನವರೇ. ಅದಕ್ಕೇ ನಿಮಗೆ ಯಾರಿಗೂ ತಿಳಿಸಲಿಲ್ಲ. ಕಂಪೆನಿ ಇನ್‌ಸ್ಪೆಕ್ಟರು ಬಂದು ಎಲ್ಲಾ ಕುಲಗೆಡಿಸಿಬಿಟ್ಟ."

"ಮುಂದೇನು ಯೋಚನೆಮಾಡಿರುವಿರಿ ?"

"ಅದನ್ನು ತಿಳಿಸುವುದಕ್ಕೇ ಬಂದೆ. ನನಗೆ ಸ್ವಲ್ಪ ಹಣಕೊಡಲು ಸಾಧ್ಯವೇ ?"

"ಎಷ್ಟು ?"

"ನಾಲ್ಕೈದು ಸಾವಿರ ರೂಪಾಯಿ. ನನ್ನ ಸ್ಥಿತಿ ಚೆನ್ನಾಗಿ ತಿಳಿದು ಕೊಂಡೇ ನೀವು ಕೊಡಬೇಕು. ಈಗ ನಾನು ಭಿಕಾರಿ. ನನ್ನ ಮನೆಯೂ ಹೋಯಿತು – ಮಾನವೂ ಹೋಯಿತು. ನೀವು ಹಣಕೊಟ್ಟರೆ ಅದನ್ನೇ ಬಂಡವಾಳ ಮಾಡಿಕೊಂಡು ಏನಾದರೂ ಮಾಡುತ್ತೇನೆ. ಹಣ ಯಾವಾಗ ಹಿಂದಿರುಗಿಸುತ್ತೀ ಎಂದು ಕೇಳಬೇಡಿ. ದೈವಾನುಕೂಲ ಒದಗಿದರೆ ಮೂರು ನಾಲ್ಕು ತಿಂಗಳಲ್ಲಿ ಹಿಂದಿರುಗಿಸುತ್ತೇನೆ. ಇಲ್ಲದಿದ್ದರೆ ನಾನು ಸಾಯುವುದ ರೊಳಗಾಗಿ ತೀರಿಸುತ್ತೇನೆ. ನಿಮ್ಮ ಋಣ ಇಟ್ಟುಕೊಳ್ಳುವುದಿಲ್ಲ. ಆದರೆ ಹಣ ಹೋಯಿತು ಎಂದುಕೊಂಡೇ ನೀವು ಕೊಡಬೇಕು."

ವಾಸು ವಿಷಯ ಚೆನ್ನಾಗಿ ಬಲ್ಲ ರಾಮನಾಥಯ್ಯ ತನ್ನ ಹಣದ ಗತಿಯೇನು ಎಂದು ಯೋಚನೆಮಾಡಲಿಲ್ಲ.

"ನೀವು ಕೇಳುವಷ್ಟು ಹಣ ಈ ಕೂಡಲೆ ಒದಗಿಸಲು ನನ್ನಲ್ಲಿಲ್ಲ."

"ಇವತ್ತು ಎಷ್ಟು ಕೊಡಲು ಸಾಧ್ಯ ?"

"ಎರಡು ಸಾವಿರ ರೂಪಾಯಿ ಕೂಡಿಸಿಕೊಡಬಲ್ಲೆ."

"ಅಷ್ಟೇ ಕೊಡಿ – ಉಳಿದದ್ದು ನಾನು ಹೇಗೋ ಮಾಡಿಕೊಳ್ಳುತ್ತೇನೆ."

"ನಿಮ್ಮನ್ನೆಲ್ಲಿ ಕಾಣುವುದು ?"

"ಇನ್ನು ಒಂದು ಗಂಟೆ ಬಿಟ್ಟು ನಾನು ಆಫೀಸಿನಲ್ಲಿರುತ್ತೇನೆ."

"ನಾನು ಬ್ಯಾಂಕಿಗೆ ಹೋಗಿ ಆಫೀಸಿಗೆ ಹನ್ನೊಂದೂವರೆ ಸುಮಾರಿಗೆ ಬರುತ್ತೇನೆ."

"ಇನ್ನೂ ಒಂದು ಸಾರಿ ಯೋಚನೆಮಾಡಿ ರಾಮನಾಥಯ್ಯ. ನೀವು ಕಷ್ಟಪಟ್ಟು ಸಂಪಾದಿಸಿದ ಹಣ ನನ್ನ ಕೈಯಲ್ಲಿಟ್ಟು 'ಕೃಷ್ಣಾರ್ಪಣಮಸ್ತು' ಎನ್ನಬಾರದು."

"ನೀವು ಹೋಗಿ ಸ್ವಾಮಿ. ನಾನು ಹನ್ನೊಂದೂವರೆಗೆ ಬರುತ್ತೇನೆ. ಹಣವೇ ಪ್ರಧಾನವಾದುದೇನು – ನಾನೂ ಸಂಪಾದನೆಮಾಡಿಯೂ ಇದ್ದೇನೆ, ಕಳೆದೂ ಇದ್ದೇನೆ. ದೇವರ ದಯೆಯಿಂದ ಎರಡು ಸಾವಿರ ನನಗೇನೂ ಅಷ್ಟು ದೊಡ್ಡ ವಿಷಯವಾಗಿಲ್ಲ"

ಎಂದು ಹೇಳಿದ. ತನ್ನ ಕೆಲಸ ನಿರೀಕ್ಷಿಸಿದುದಕ್ಕಿಂತಲೂ ಸುಲಭವಾಗಿ ಆದುದಕ್ಕೆ ವಾಸುವಿಗೆ ಪರಮಸಂತೋಷವಾಯಿತು.

ವಾಸು ನೇರವಾಗಿ ನಗರ್ತರಪೇಟೆಗೆ ಹೋಗಿ ಪ್ರಮೀಳೆಯ ಸರ ಬಳೆ ಮಾರಿ ಬಂದ ಸಾವಿರದೈನೂರು ರೂಪಾಯಿಗಳನ್ನು ತೆಗೆದುಕೊಂಡು ತನ್ನ ಕಛೇರಿಗೆ ಬಂದು ಕುಳಿತ.

ಯಜಮಾನರು ನಗೆಮೊಗದಿಂದಿದ್ದುದನ್ನು ಕಂಡು ಹನುಮನಿಗೆ ಆಶ್ಚರ್ಯವಾಯಿತು. ಹನುಮನನ್ನು ಕರೆದು

"ನಾನು ಇನ್ನು ಎರಡು ಮೂರು ದಿವಸದಲ್ಲಿ ಊರಿಗೆ ಹೋಗಿ ಬರುತ್ತೇನೆ. ನೀನು ಮೊದಲು ಹೋಗಿ ಆ ಹೋಟಲಿನವನಿಗೆ ಅರವತ್ತು ರೂಪಾಯಿ ಅಸಲು ಐದು ರೂಪಾಯಿ ಬಡ್ಡಿ ಎಂದು ಹೇಳಿ ಅರವತ್ತೈದು ಕೊಟ್ಟುಬಾ. ಜೋಸೆಫ್ ಬಂದಿದ್ದನೇನು ?"

"ಊರಿಗೆ ಬಂದಿರಬೋದು ಬುದ್ಧಿ. ನೋಡ್ಕೊಂಡು ಬತ್ತೀನಿ."

"ಅವನನ್ನು ಸಾಯಂಕಾಲ ಪ್ರಮೀಳಮ್ಮನವರ ಮನೆಯ ಹತ್ತಿರ ಬರಹೇಳು. ಹಾಗೇ ರಾಮಸ್ವಾಮಿಯವರಿಗೂ ಶಂಕರಯ್ಯನವರಿಗೂ ಅಲ್ಲೀಗೆ ಬರಹೇಳು."

"ಇದೇನ್ಬುದ್ಧಿ ಎಲ್ಲಾ ಲೆಕ್ಕಾಚಾರ ಮಾಡ್ತಿದ್ರಿ."

"ಎಲ್ಲೂ ದೇಶಾಂತರ ಹೋಗೋದಿಲ್ಲ ಹೆದರಬೇಡ. ಕೆಲವು ದಿವಸ ಯಾತ್ರೆ ಮಾಡಿಕೊಂಡು ಬರುತ್ತೇನೆ. ನನಗೂ ಬೇಸರವಾಗಿದೆ."

"ಅಪ್ಪಣೆ ಬುದ್ಧಿ."

"ಇದು ತೆಗೆದುಕೋ, ಎಂಭತ್ತುರೂಪಾಯಿ, ನಾಲ್ಕು ತಿಂಗಳು ನಿನ್ನ ಸಂಬಳ ಅಡ್ವಾನ್ಸ್– ನಾನು ಬರುವವರೆಗೆ ಕಾಲ ಹಾಕುತ್ತಿರು. ಸಾಯಂಕಾಲ ನೀನು ಬಂದು, ಜತೆಗೆ ಒಂದು ಆಳು ತೆಗೆದುಕೊಂಡು, ನನ್ನ ಮನೆಯ ಸಾಮಾನನೆಲ್ಲಾ ಪ್ರಮೀಳಮ್ಮನವರ ಮನೆಗೆ ಸಾಗಿಸಿಬಿಡು."

"ಊರಿಗೆ ಯಾವಾಗ ಬತ್ತೀರಿ ಬುದ್ಧಿ."

"ಹೇಳಿದೆನಲ್ಲೊ ಮೂರು ನಾಲ್ಕು ತಿಂಗಳಲ್ಲಿ ಎಂದು. ಪ್ರಮೀಳಮ್ಮನವರ ಮನೆಯಲ್ಲಿ ನಮ್ಮ ವೇಣಕ್ಕ ಒಬ್ಬರೇ ಇರುತ್ತಾರೆ. ನಾನು ಬರುವವರೆಗೆ ನೀನು ಅಲ್ಲೇ ಬಂದು ರಾತ್ರಿ ಮಲಗಿಕೋ. ಹೋಗು – ಹೋಟೆಲ್

ಬಾಕಿ ತೀರಿಸಿ ರಾಮಸ್ವಾಮಿ, ಶಂಕರಯ್ಯ, ಜೋಸೆಫ್‌ಗೆ ಹೇಳಿ ಬೇಗ ಬಂದು ಬಿಡು – ನಾನೂ ಮನೆಗೆ ಹೋಗಬೇಕಾಗಿದೆ."

ಹನುಮ ಹೋದ ಸ್ವಲ್ಪ ಹೊತ್ತಿನೊಳಗಾಗಿ ರಾಮನಾಥಯ್ಯ ಬಂದು "ನಿಮಗೆ ಸ್ವಲ್ಪ ನಿರಾಶೆಯುಂಟುಮಾಡಬೇಕಾಗಿದೆ" ಎಂದ.

"ಏಕೆ? ಹಣ ಸಿಕ್ಕಲಿಲ್ಲವೇ ?"

"ಸಿಕ್ಕಿತು. ನೀವು ಕೇಳಿದಷ್ಟು ಜತೆಯಾಗಲಿಲ್ಲ."

"ಎಷ್ಟು ಕೊಡಬಲ್ಲಿರಿ ?"

"ಈಗ ಸಾವಿರದೈನೂರು ಕೊಡುತ್ತೇನೆ. ಮುಂದೆ ಬೇಕಾದರೆ ತಿಳಿಸಿ ಕೊಡುತ್ತೇನೆ."

"ಈಗ ನನಗಿಷ್ಟೇ ಸಾಕು. ಬೊಂಬಾಯಿನಿಂದ ನಾನೇನಾದರೂ ಬರೆದರೆ ಸ್ವಲ್ಪ ಹಣ ಕಳುಹಿಸಿ. ಇದು ಸಾಲವೇ ವಿನಾ ದಾನವಲ್ಲ ರಾಮನಾಥಯ್ಯನವರೇ."

"ಸರಿ, ಬಿಡಿಸ್ವಾಮಿ – ನೀವು ಒಂದು ದಿನ ಖರ್ಚುಮಾಡುತ್ತಿದ್ದ ಹಣದ ಸಾಟಿಯಲ್ಲ ಇದು. ಇಂಥ ಸಮಯದಲ್ಲಿ ನಿಮಗೆ ಸಾಕಷ್ಟು ಹಣ ಕೊಡಲು ಸಾಧ್ಯವಾಗಲಿಲ್ಲವಲ್ಲಾ ಎಂದು ವಿಷಾದಪಡುತ್ತೇನೆ."

"ಈಗ ನನಗೆ ನೀವು ಹಣಕೊಟ್ಟದ್ದು ಮುಖ್ಯವಲ್ಲ ರಾಮನಾಥಯ್ಯ ನವರೇ. ಇವನು ಇನ್ನೂ ನಂಬಿಕೆಗೆ ಅರ್ಹನೆಂದು ತಿಳಿದುಕೊಂಡಿದ್ದೀರಲ್ಲಾ – ಆ ಋಣ ಎಂದಿಗೂ ತೀರಿಸಲಾರೆ. ಈ ತೋಳ ಇಂದು ಹಳ್ಳಕ್ಕೆ ಬಿದ್ದಿದೆ – ಆದರೆ ಒಂದಲ್ಲ ಒಂದು ದಿನ ಮತ್ತೆ ಮೇಲಕ್ಕೇಳುತ್ತದೆ."

"ನೀವು ಮೇಲಕ್ಕೇಳಬೇಕೆಂದು ಮನಃಪೂರ್ವಕವಾಗಿ ನಾನು ಬಯಸು ತ್ತೇನೆ. ಎಂದು ಪ್ರಯಾಣ ?"

"ಇನ್ನು ಎರಡು ಮೂರು ದಿವಸದಲ್ಲಿ. ನಿಮಗೆ ಎಲ್ಲಿಂದಲಾದರೂ ಬರೆಯುತ್ತೇನೆ."

"ಸಾವಕಾಶವಾಗಿ ಬರೆಯಿರಿ. ಇನ್ನು ಅಪ್ಪಣೆಯಾದರೆ ಬರುತ್ತೇನೆ" ಎಂದು ಹೇಳಿ ಹೊರಟ. ವಾಸು ಹೃದಯ ಕೃತಜ್ಞತೆಯಿಂದ ತುಂಬಿ ಹೋಯಿತು.

ಹನುಮ ಹಿಂದಿರುಗುವುದಕ್ಕೆ ಸ್ವಲ್ಪ ತಡವಾಯಿತು. ಅವನು ಬರುವ ವರೆಗೆ ವಾಸು ಕಛೇರಿಬಿಟ್ಟು ಕದಲುವಂತಿರಲಿಲ್ಲ. ಹನುಮ ಬರಲು

"ಯಾಕೋ ಇಷ್ಟು ಹೊತ್ತು."

"ಶಂಕರಪ್ಪನೋರು ಸಿಕ್ನಿಲ್ಲ ಬುದ್ಧಿ."

"ಏನು ಮಾಡಿದೆ?"

"ರಾಮಸ್ವಾಮಪ್ನೋರಿಗೆ ಏಳಿ ಬಂದೆ. ಓಟ್ಲನೋನಿಗೆ ಅಣಕೊಟ್ಟೆ. ಜೋಸಪ್ಪನಿಗೂ ಏಳಿ ಬಂದೆ."

"ನೀನೂ ಕಛೇರಿ ಬೀಗ ಹಾಕಿಕೊಂಡು ಮನೆಗೆ ಹೋಗಿ ಮೂರು ನಾಲ್ಕು ಗಂಟೆ ಹೊತ್ತಿಗೆ ಬಾ."

ಎಂದು ಹೇಳಿ ಮನೆಯ ಕಡೆ ಹೊರಟ.

ಪ್ರಮಿಳಾಳ ಕೈಯಲ್ಲಿ ನೋಟಿನ ಕಂತೆಗಳನ್ನಿಟ್ಟು 'ಎಣಿಸು' ಎಂದ. ಅವಳು ಅವನ ಮುಖವನ್ನೇ ದಿಟ್ಟಿಸಿ ನೋಡಿ

"ನಿಮ್ಮ ಮೇಲೆ ನನಗೆ ಅನುಮಾನವಿಲ್ಲವಲ್ಲಾ" ಎಂದಳು.

"ಅದಕ್ಕಲ್ಲ. ಇವತ್ತೊಂದು ವ್ಯಾಪಾರ ಕುದುರಿಸಿದ್ದೇನೆ. ಅದ ಕ್ಕೋಸ್ಕರ."

ಪ್ರಮಿಳಾ ಹಣ ಎಣಿಸಿ

"ಎರಡು ಸಾವಿರದ ಎಂಟುನೂರ ಮೂವತ್ತೈದು. ಇಷ್ಟು ಹಣ ಹೇಗೆ ಬಂತು?"

"ನಿನ್ನ ಒಡವೆಗಳಲ್ಲಿ ಒಂದು ಸಾವಿರದೈನೂರು - ಉಳಿದ ಸಾವಿರ ದೈನೂರು ರಾಮನಾಥಯ್ಯ ತಂದುಕೊಟ್ಟ. ಹನುಮನಿಗೆ ನಾಲ್ಕು ತಿಂಗಳ ಅಡ್ವಾನ್ಸ್‌ಕೊಟ್ಟೆ. ಚಿಲ್ಲರೆ ಖರ್ಚು ಸ್ವಲ್ಪವಾಯಿತು. ಉಳಿದದ್ದು ನಿನ್ನ ಕೈಯಲ್ಲಿದೆ."

"ಹಣ ನಿಮ್ಮ ಬಳಿಯಿದ್ದರಾಗದೇ?"

"ಛೆ! ಛೆ! ಹಣಕ್ಕೂ ನನಗೂ ಜನ್ಮವೈರ. ಧನರೇಖೆ ಇರುವುದು ನಿನ್ನ ಕೈಯಲ್ಲಿ - ಅದು ನಿನ್ನಲ್ಲಿಯೇ ಇರಲಿ."

ವಾಸು, ಪ್ರಮಿಳಾ ಊಟ ಮುಗಿಸಿ ವಿಶ್ರಮಿಸಿಕೊಂಡು ಏಳು ವಷ್ಟರಲ್ಲಿ ಹನುಮ ಬಂದ. ವಾಸು ಹನುಮನನ್ನು ತನ್ನ ಮನೆಗೆ ಕರೆದು

ಕೊಂಡು ಹೋಗಿ, ಸಾಗಿಸಬೇಕಾದ ಸಾಮಾನುಗಳನ್ನೆಲ್ಲಾ ತೋರಿಸಿ ಪ್ರಮಿಳೆಯ ಮನೆಗೆ ಹಿಂದಿರುಗಿದ.

ಹನುಮ ಜತೆಗೆ ಎರಡಾಳು ಕರೆದುಕೊಂಡು ವಾಸು ಮನೆಯ ಸಾಮಾನುಗಳನ್ನೆಲ್ಲಾ ಪ್ರಮಿಳೆಯ ಮನೆಗೆ ಸಾಗಿಸತೊಡಗಿದ.

ರಾಮಸ್ವಾಮಿ, ಶಂಕರಯ್ಯನನ್ನು ಕರೆದುಕೊಂಡು ಐದು ಗಂಟೆ ಸುಮಾರಿಗೆ ಬಂದ. ಪ್ರಮಿಳಾ ಎಲ್ಲರಿಗೂ ಕಾಫಿ ತಂದುಕೊಟ್ಟಳು.

"ಇದ್ದಕ್ಕಿದ್ದಂತೆ ಪ್ರಯಾಣ ನಿಶ್ಚಯಿಸಿದ್ದೀಯಂತೆ!"

"ಹೌದು! ಅದಕ್ಕೇ ನಿನ್ನ ಬರಮಾಡಿಕೊಂಡಿದ್ದು."

"ನಾನು ಏನು ಮಾಡಬೇಕು ಹೇಳು."

"ಹನುಮನ ಹತ್ತಿರ ಕಛೇರಿ ಬೀಗದಕೈಯಿದೆ. ಅದನ್ನು ತೆಗೆದು ಕೊಂಡು ಕಛೇರಿ ಮಾಲಿಕನ ಕೈವಶಮಾಡು. ಬಾಡಿಗೆ ಬಾಕಿಯಿಲ್ಲ. ಅವನ ಮೇಲೇ ಎರಡು ತಿಂಗಳ ಅಡ್ವಾನ್ಸ್ ಇದೆ. ಕಛೇರಿಯಲ್ಲಿ ಒಂದಿಷ್ಟು ಕುರ್ಚಿ ಮೇಜು, ಬೆಂಚು ಇದೆ - ಅವುಗಳನ್ನೆಲ್ಲಾ ನೀನೂ ಶಂಕರ ತೆಗೆದು ಕೊಳ್ಳಿ."

"ನೀನು ಹೇಳುವುದು ನೋಡಿದರೆ ಹಿಂದಕ್ಕೆ ಬರುವ ಸೂಚನೆಯೇ ಕಂಡುಬರುವುದಿಲ್ಲವೇ?"

"ಖಂಡಿತ ಬರುತ್ತೇನೆ. ಮೂರು ನಾಲ್ಕು ತಿಂಗಳಾಗಬಹುದು. ಮಧ್ಯೆ ಏನಾದರೂ ಅನುಕೂಲವಾದರೆ ನಿನ್ನ - ಶಂಕರನ್ನ ಬೊಂಬಾಯಿಗೆ ಕರೆಸಿ ಕೊಳ್ಳುತ್ತೇನೆ."

ಸಾಮಾನು ತಂದು ಇಳಿಸಿದ ಹನುಮ ಬಂದು

"ಜೋಸಪ್ಪ ಬಂದವ್ನೆ ಬುದ್ಧಿ" ಎಂದು ಹೇಳಿದ.

ಜೋಸೆಫ್ ಬಂದು ನಮಸ್ಕಾರಮಾಡಿ ನಿಲ್ಲಲು

"ಜೋಸೆಫ್, ನಾನು ಊರಿನಲ್ಲಿರುವುದಿಲ್ಲ. ನಿನಗೆ ನಾಲ್ಕು ತಿಂಗಳ ಸಂಬಳ ಅಡ್ವಾನ್ಸಾಗಿ ಕೊಟ್ಟಿರುತ್ತೇನೆ. ಸುಖವಾಗಿ ಊಟ ಮಾಡಿಕೊಂಡು ಕಾಲ ತಳ್ಳಿಕೊಂಡಿರು. ನಾನು ಬಂದ ಮೇಲೆ ಕಾರು ತೆಗೆದುಕೊಳ್ಳುತ್ತೇನೆ. ಒಳಗೆ ಹೋಗಿ ಅಮ್ಮಾವರ ಹತ್ತಿರ ಇನ್ನೂರು ರೂಪಾಯಿ ತೆಗೆದುಕೊಂಡು ಹೋಗು"

"ಕೆಲಸವಿಲ್ಲ ಕಾರ್ಯವಿಲ್ಲ ಸುಮ್ಮನೆ ಸಂಬಳ ಏಕೆ ತೆಗೆದುಕೊಳ್ಳಲಿ ಸಾರ್"

"ಇರಲಿ ತೊಗೋ ಹೋಗೋ. ಲಕ್ಷಾಧಿಕಾರಿ ನೊಮ್ಮಗನ ಹಾಗೆ ಮಾತಾಡಬೇಡ"

ಎಂದು ವಾಸು ಗದರಿಸಿಕೊಂಡ.

"ಬಂದ ಮೇಲೆ ಕಾರ್ ತೆಗೆನುಕೊಳ್ಳುತ್ತೇನೆ ಎಂದು ಎಷ್ಟು ಧೈರ್ಯವಾಗಿ ಹೇಳಿದೆ ವಾಸು."

"ಇದೆಲ್ಲಾ ಏನಯ್ಯಾ ಜುಜಬಿ. ಇವತ್ತು ಐದು ಆರು ಸಾವಿರ ರೂಪಾಯಿಗೆಲ್ಲಾ ಸೊಗಸಾದ ಕಾರ್ ಸಿಕ್ಕತ್ತೆ."

"ವಾಸು, ನಿನ್ನ ಬಿಟ್ಟಿರೋದು ಕಷ್ಟಕಣೋ"

ಎಂದು ಶಂಕರಯ್ಯ ಹೇಳಿದ.

"ನನ್ನ ನೀವೂ ಬಿಡಲಾರಿರಿ; ನಿಮ್ಮನ್ನ ನಾನೂ ಬಿಡಲಾರೆ. ಬಂದು ಬಿಡುತ್ತೇನೆ ಸುಮ್ಮನಿರಿ. ಬೆಂಗಳೂರಿನ ಮೇಲೆ ಧೂಮಕೇತು ಹಾಗೆ ಧುಮುಕುತ್ತೇನೆ."

"ಏನು ಮಾಡುತ್ತೀಯೋ ಮಾಡಪ್ಪ"

"ರಾಮಸ್ವಾಮಿ – ನನಗೊಂದು ಕೆಲಸ ಮಾಡಿಕೊಡು. ನಾಳೆ ರಾತ್ರೀಗೆ ಮದರಾಸಿಗೆ ಎರಡು ಸೆಕೆಂಡ್‌ಕ್ಲಾಸ್ ಬರ್ತ್ ಬುಕ್ ಮಾಡು."

"ಸಂಸಾರ ಸಮೇತ ಪ್ರಯಾಣವೋ ?"

"ವೇಣಕ್ಕ ಇಲ್ಲೇ ಇರುತ್ತಾಳೆ. ನಾವು ಹಿಂದಿರುಗಿದ ಮೇಲೆ ಅವಳನ್ನ ಕಾಶೀಯಾತ್ರೇಗೆ ಕಳಿಸಿಕೊಡುತ್ತೇನೆ. ಮುದುಕಿ ಅಲ್ಲೇ ಹೋಗಿ ಸಾಯಬೇಕೆಂದಿದ್ದಾಳೆ."

ಗೆಳೆಯರು ಸ್ವಲ್ಪಹೊತ್ತು ಹರಟೆ ಕೊಚ್ಚುತ್ತ ಕುಳಿತಿದ್ದು ಮನೆಯ ದಾರಿ ಹಿಡಿದರು. ಹನುಮನೂ ತನ್ನ ಕೆಲಸ ಮುಗಿಸಿದ್ದ. ವೇಣಕ್ಕ ಮನೆ ಬೀಗ ಹಾಕಿಕೊಂಡು ಪ್ರಮಿಳೆಯ ಮನೆಗೇ ಬಂದಳು.

ವಾಸು ಪ್ರಮಿಳೆಯನ್ನು ಕರೆದು

"ಆರೇಂಜ್‌ಮೆಂಟ್ಸ್ (arrangements) ಎಲ್ಲಾ ಕಂಪ್ಲೀಟ್ (complete). ಟಿಕೆಟ್ಟಿಗೂ ಹೇಳಿದ್ದೇನೆ. ನಾಳೆ ರಾತ್ರಿ ಪ್ರಯಾಣ."

ಎಂದು ಹೇಳಿದ. ಪ್ರಮೀಳೆ ಅಕ್ಕರೆಯಿಂದ ಅವನನ್ನು ಬಾಚಿ ತಬ್ಬಿಕೊಂಡಳು.

ಮಾರನೆಯ ದಿನ ಪ್ರಯಾಣದ ಎಲ್ಲಾ ಸನ್ನಾಹವೂ ಪೂರೈಸಿತು. ವೇಣಕ್ಕ ಬೆಳಿಗ್ಗೆಯಿಂದ ಬಾಣಲೆಯ ಮುಂದೆ ಕುಳಿತು ಚಕ್ಕುಲಿ, ಕೋಡಬಳೆ, ಮುಚ್ಚೋರೆ, ರವೆವುಂಡೆ, ಬೇಸಿನ್‌ಲಾಡು ಮಾಡಿ ಬುತ್ತಿ ಕಟ್ಟಿಕೊಟ್ಟಳು.

ವಾಸು ವೇಣಕ್ಕನಿಗೆ ಎಲ್ಲವನ್ನೂ ಒಪ್ಪಿಸಿ ಮನೆಯ ಖರ್ಚಿಗೆಂದು ಐದು ನೂರು ರೂಪಾಯಿ ಅವಳ ಕೈಯಲ್ಲಿ ಹಾಕಿ,

"ರಾಮಸ್ವಾಮಿ ಬಂದು ವಿಚಾರಿಸಿಕೊಳ್ಳುತ್ತಿರುತ್ತಾನೆ. ಲೈಟ್‌ಬಿಲ್, ನೀರಿನ ಬಿಲ್ ಅವನು ತೆಗೆದುಕೊಂಡು ಹೋಗಿ ಕಟ್ಟುತ್ತಾನೆ. ಹನುಮ ಬಂದು ಇಲ್ಲೇ ಮಲಗಿಕೊಳ್ಳುತ್ತಾನೆ. ಯಾವದಕ್ಕೂ ಕಾರ್ಪಣ್ಯ ಪಟ್ಟುಕೊಳ್ಳದೆ ಸುಖವಾಗಿರು ವೇಣಕ್ಕ"

ಎಂದು ಹೇಳಿದ. ಪ್ರಮೀಳಾ ವೇಣಕ್ಕನ ಪಾದಮುಟ್ಟಿ ನಮಸ್ಕರಿಸಿ ಅವಳ ಆಶೀರ್ವಾದ ಪಡೆದಳು.

ರೈಲಿನಲ್ಲಿ ವಾಸು, ಪ್ರಮೀಳಾ ಕೂಡಲು ಹನುಮ ಬಿಕ್ಕಿಬಿಕ್ಕಿ ಅಳುವುದಕ್ಕಾರಂಭಿಸಿದ. ವಾಸು ಅವನಿಗೆ ಸಮಾಧಾನ ಹೇಳಬೇಕಾಯಿತು.

ರೈಲು ಹೊರಡುವ ಮುನ್ನ ರಾಮಸ್ವಾಮಿ ವಾಸು ಕೈಕುಲಿಕಿ

"ಚೀರಿಯೋ! ಆಲ್ ಫಾರ್ ಗುಡ್ (Cheerio ! All for good)"

ಎಂದ. ವಾಸುವೂ ದನಿಗೂಡಿಸಿ

"ಆಲ್ ಫಾರ್ ಗುಡ್ (All for good)"

ಎಂದು ಹೇಳಿದ.

ಪ್ರಮೀಳೆ ಎಲ್ಲರಿಗೂ ಕೈಮುಗಿದಳು.

ರೈಲು ಸಾವಕಾಶವಾಗಿ ಹೊರಟಿತು.

ವಾಸು ಪ್ರಮೀಳೆಯ ಕಡೆ ತಿರುಗಿ

"ಹೊಸ ದೇಶ – ಹೊಸ ಬಾಳು – ಹೊಸ ದಿಗ್ವಿಜಯ"

ಎಂದು ಹೇಳಿದ. ಪ್ರಮೀಳಾ ಮುಗುಳ್ನಗೆ ಬೀರಿ ತನ್ನ ಸಮ್ಮತಿ ಸೂಚಿಸಿದಳು.

೪

ವಾಸು, ಪ್ರಮೀಳೆ ತಮ್ಮ ತೀರ್ಥಯಾತ್ರೆಗೆ ಮದರಾಸು ಪಟ್ಟಣವನ್ನು ಕೇಂದ್ರ ಮಾಡಿಕೊಂಡರು. ಮದರಾಸಿನ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಕೊಂಡು, ಜಗತ್ಪ್ರಸಿದ್ಧವಾದ ದಕ್ಷಿಣದ ದೇವಾಲಯಗಳನ್ನು ನೋಡಿ ಬಂದರು. ಕಂಚಿ, ಕುಂಭಕೋಣ, ಪಳನಿ, ರಾಮೇಶ್ವರ, ಚಿದಂಬರ, ತಿರುವನಂತಪುರ ಮುಗಿಸಿಕೊಂಡು ತಿರುಪತಿಗೆ ಯಾತ್ರೆ ಬಂದರು.

ತಿರುಪತಿಯ ನಿಸರ್ಗ ರಾಮಣೀಯಕತೆಯನ್ನು ನೋಡಿ ಪ್ರಮೀಳಾ ಮೈಮರೆತಳು. ಗಿಡಮರಗಳಿಂದ ಆಚ್ಛಾದಿಸಲ್ಪಟ್ಟು ಸಾಲುಸಾಲಾಗಿ ನಿಂತಿದ್ದ ಬೆಟ್ಟಗುಡ್ಡಗಳು ಮಾನವನಿಗೆ ಯಾವದೋ ರಹಸ್ಯಸಂದೇಶವನ್ನು ಸುರುತ್ತಿದ್ದಂತಿತ್ತು.

ತಿರುಪತಿ ಮುಗಿದಕೂಡಲೆ

"ತಿರುವಣ್ಣಾಮಲೆಗೆ ಹೋಗಬೇಕಾಗಿತ್ತು"

ಎಂದು ವಾಸು ಹೇಳಿದ.

"ಕಂಚಿ, ಕುಂಭಕೋಣದಲ್ಲಿಲ್ಲದಿರುವುದು ತಿರುವಣ್ಣಾಮಲೆಯಲ್ಲೇನಿದೆ"

ಎಂದು ಪ್ರಮಿಳಾ ಕೇಳಿದಳು.

"ಇದೆ ಬಾ, ನೋಡುವೆಯಂತೆ"

ಎಂದು ವಾಸು ಅವಳನ್ನು ತಿರುವಣ್ಣಾಮಲೆಗೆ ಕರೆದೊಯ್ದ. ಊರು, ದೇವಸ್ಥಾನ ನೋಡಿಕೊಂಡು ಯಾತ್ರಾರ್ಥಿಗಳು 'ರಮಣಾಶ್ರಮ'ಕ್ಕೆ ಹೋದರು. ಅಲ್ಲಿನ ಅಚ್ಚುಗಟ್ಟು, ಸಿಸ್ತು ಕಂಡು ವಾಸು ಬೆರಗಾದ

ರಮಣಮಹರ್ಷಿಗಳ ದರ್ಶನವಾದ ಮೇಲೆ ಪಾಂಡಿಚೇರಿ ನೋಡಬೇಕೆಂಬ ಲವಲವಿಕೆ ವಾಸುವಿಗೆ ಹುಟ್ಟಿತು.

ಪಾಂಡಿಚೇರಿಯಲ್ಲಿ ಮಹರ್ಷಿ ಅರವಿಂದರ ದರ್ಶನ ಪಡೆಯಲು ಸಾಧ್ಯವಾಗಲಿಲ್ಲ. ಆದರೆ ವಾಸು ಆಶ್ರಮದ ವಿತರಣೆ, ವ್ಯವಸ್ಥೆಗಳನ್ನು ಕೂಲಂಕಷವಾಗಿ ನೋಡಿದ.

ಪಾಂಡಿಚೇರಿಯನ್ನು ಬಿಟ್ಟು ವಾಸು ಪ್ರಮೀಳೆ ಉತ್ತರ ಹಿಂದೂ

ಸ್ಥಾನದ ಕೆಲವು ಮುಖ್ಯ ಕ್ಷೇತ್ರಗಳನ್ನು ನೋಡಿದರು, ಕಾಶಿ, ಪ್ರಯಾಗ, ಅಯೋಧ್ಯೆಗಳ ಯಾತ್ರೆ ಮುಗಿಸಿ ಮುಂಬಯಿಗೆ ಬಂದು ನಿಂತರು.

ಮುಂಬಯಿಯಲ್ಲಿ ಒಂದೆರಡು ತಿಂಗಳು ಕಾಲ ತಳ್ಳುವುದೆಂದು ನಿಶ್ಚಯಿಸಿದರು. ವಾಸು ಒಂದು ದಿನವೆಲ್ಲಾ ಹುಡುಕಿ ದಾದರಿನಲ್ಲಿ ಬಂದು ಫ್ಲ್ಯಾಟ್ (flat) ಗೊತ್ತು ಮಾಡಿದ. ರಾಮಸ್ವಾಮಿಗೂ ಶಂಕರಯ್ಯನಿಗೂ ಕಾಗದ ಬರೆದ ಮುಂಬಯಿ ವಿಳಾಸ ಅವರಿಗೆ ತಿಳಿಸಿದ.

ಪ್ರವಾಸ ಪ್ರಮೀಳೆಯನ್ನು ಅತ್ಯಂತ ಉಲ್ಲಸಿತಳನ್ನಾಗಿ ಮಾಡಿತ್ತು. ತಾನು ಕಂಡ ದೇವರುಗಳೂ ದೇವಾಲಯಗಳು, ಜೋಗಿ, ಜಂಗಮ, ಸಾಧು ಗಳನ್ನು ನೆನೆನೆನೆದು ಅವಳು ಹಿಗ್ಗುವಳು.

ಪ್ರಮೀಳೆಯ ಸಂತೋಷ, ನಿಶ್ಚಿಂತೆ ವಾಸುವಿಗೂ ಹಿಗ್ಗನ್ನು ತಂದಿತ್ತು.

ತೀರ್ಥಯಾತ್ರೆ ಪ್ರಮೀಳೆಯ ಮನಸ್ಸಿನ ಮೇಲೆ ಮಾಡಿದ್ದ ವಿಚಿತ್ರ ಪರಿಣಾಮವನ್ನು ವಾಸು ಗಮನಿಸದಿರಲಿಲ್ಲ. ಹೋದ ಹೋದಲ್ಲಿ ಅವಳು ಕೈಗೆ ಸಿಕ್ಕಿದ ದೇವತಾಮೂರ್ತಿಗಳನ್ನು ಕೊಂಡು ತಂದಿದ್ದಳು. ತಿರುಪತಿಯಲ್ಲಿ ಸೊಗಸಾದ ಕಂಚಿನ ವೆಂಕಟರಮಣಸ್ವಾಮಿ ವಿಗ್ರಹ, ತಿರುವನಂತಪುರದಲ್ಲಿ ಕಂಚಿನ ನಟರಾಜಮೂರ್ತಿ, ಉತ್ತರ ಹಿಂದೂಸ್ಥಾನದಲ್ಲಿ ರಾಮ ಲಕ್ಷ್ಮಣ ಸೀತೆಯರ ವಿಗ್ರಹಗಳು, ಕೃಷ್ಣ ರುಕ್ಮಿಣಿಯರ ವಿಗ್ರಹಗಳನ್ನು ಸಂಗ್ರಹಿ ಸಿದ್ದಳು.

ದಾದರಿನ ಫ್ಲ್ಯಾಟಿನಲ್ಲಿ (flat) ಅವುಗಳನ್ನು ಓರಣವಾಗಿಟ್ಟು ನಿತ್ಯ ಪೂಜೆಯಾರಂಭಿಸಿದಳು. ಪ್ರಮೀಳೆಯಲ್ಲಿ ಬೆಳೆಯುತ್ತಿದ್ದ ದೈವಭಕ್ತಿಯನ್ನು ಕಂಡು ವಾಸುವಿಗೆ ಆಶ್ಚರ್ಯವೂ ಆಯಿತು; ಸಂತೋಷವೂ ಆಯಿತು.

"ನನ್ನ ಪೂಜೆ ನೋಡಿ ನಗುವಿರೇನೋ" ಎಂದೊಮ್ಮೆ ಕೇಳಿದಳು.

"ನಗುವುದೇತಕ್ಕೆ ? ಪೂಜೆಯಿಂದ ನಿನ್ನ ಮನಸ್ಸಿಗೆ ಶಾಂತಿ ದೊರೆಯು ವುದಾದರೆ ನಾನೇಕೆ ವಿರೋಧಿಸಲಿ."

"ನನ್ನ ಮನಸ್ಸಿಗೆ ಯಾವಾಗಲೂ ಶಾಂತಿಯಿದ್ದೇ ಇದೆ. ಅಶಾಂತ ವಾಗಿರುವುದು ನಿಮ್ಮ ಮನಸ್ಸು."

"ನನ್ನ ಮನಸ್ಸೇ ? ಹೇಗೆ ?"

"ಮುಂದೆ ಏನು ಎಂಬ ಯೋಚನೆ ನಿಮಗಿಲ್ಲವೇ ?"

“ಇದೆ.”

“ಏನು ನಿರ್ಧರಿಸಿರುವಿರಿ ?”

“ಏನೂ ನಿರ್ಧರಿಸಿಲ್ಲ. ಆದರೆ ತಲೆಯಲ್ಲಿ ವಿಚಾರಗಳು ಒಂದರ ಮೇಲೊಂದು ಬಂದು ಕಾಡುತ್ತಿದೆ.”

“ನಿಮ್ಮ ತಲೆಗೆ ಮುತ್ತಿಗೆ ಹಾಕುವ ಅಧಿಕಾರ ನನಗಿದೆಯೇ ?”

“ನನ್ನ ಕಾಯ, ವಾಚ, ಮನಸ್ಸುಗಳಿಗೆ ನೀನಾಗಲೆ ಮುತ್ತಿಗೆ ಹಾಕಿರುವೆಯಲ್ಲಾ. ಇನ್ನು ಅಧಿಕಾರದ ಮಾತು ಎಲ್ಲಿಂದ ಬಂತು ?”

“ಬಾಯಲ್ಲಿ ಉಪಚಾರ ಹೇಳುವಿರಿ. ನೀವೊಬ್ಬರೇ ಯೋಚನೆ ಮಾಡುವಿರಿ.”

“ಇಲ್ಲ ಪ್ರಮಿಾ. ಯೋಚನೆಗಳು ಕುದುರಲೆಂದು ಸುಮ್ಮನಿದ್ದೆ.”

“ಅವು ಕುದುರುವುದು ಯಾವಾಗ.”

“ಈಗಲೇ. ಮುಂಬಯಿಯಲ್ಲೇ ನನ್ನ ಮುಂದಿನ ಜೀವನ ಕ್ರಮ ನಿರ್ಧರಿಸಿಬಿಡುತ್ತೇನೆ.”

“ಅದರಲ್ಲಿ ನಾನಿರುತ್ತೇನಷ್ಟೇ ?”

“ನೀನೇ ಅದರ ಆಧಾರಸ್ತಂಭ.”

ಪ್ರಮಿಾಳಿಯ ಕುತೂಹಲ ಮತ್ತಷ್ಟು ಕೆರಳಿತು. ‘ಅದೇನು ಹೇಳಿ’ ಎಂದು ವಾಸುವನ್ನು ಪೀಡಿಸಿದಳು.

ವಾಸು ದೀರ್ಘವಾಗಿ ಆಲೋಚಿಸಿ

“ಪ್ರಮಿಾ – ನಮ್ಮೀ ಯಾತ್ರೆಯಲ್ಲಿ ನಾವು ಎಷ್ಟು ದೇವರುಗಳು, ಕ್ಷೇತ್ರಗಳು, ಪಂಡರು, ಪುರೋಹಿತರು ಅರ್ಚಕರನ್ನು ಕಂಡೆವು ನೆನಪಿದೆಯೇ ?”

“ಬಹಳ ನೋಡಿದೆವು.”

“ಉಡುಪಿ, ತಿರುಪತಿ, ಕಾಶಿ ಮತ್ತು ಇತರ ಕಡೆಗಳಲ್ಲಿ ಪುರೋಹಿತ ವರ್ಗ ಸಾವಿರಾರು ರೂಪಾಯಿ ಸಂಪಾದಿಸಿ ಶ್ರೀಮಂತರಾಗಿರುವುದನ್ನು ಲಕ್ಷಿಸಿದೆಯಾ ?”

“ನೋಡಿದೆ. ಅವರ ಮನೆಗಳು, ವೇಷಭೂಷಣ, ಭೋಗ ವಿಲಾಸ ಕಂಡು ಪರಮಾಶ್ಚರ್ಯವಾಯಿತು.”

"ಅವರೇ ನನ್ನ ಬದುಕಿನ ಮಾರ್ಗ ತೋರಿದ್ದಾರೆ."

"ವಿಚಿತ್ರ ವಿನೋದ ಸಾಕು. ಒಡಪು ಬಿಡಿಸಿ ಹೇಳಿ."

"ನೋಡು ಪ್ರಮಿಾ. ಈಗ ಯಾವ ವೃತ್ತಿ ಕೈಗೊಂಡು, ಅದಕ್ಕಾಗಿ ಎಷ್ಟು ಹಗಲು ಮುರಿಯ ದುಡಿದರೂ ಪ್ರಯೋಜನವಿಲ್ಲ. ದುಡಿಯುವವರು ನಾವು ಆಗುತ್ತೇನೆ; ಅದರ ಪ್ರಯೋಜನ ಯಾವನೋ ತಾರಾಚಂದ್ ಪಡೆದುಕೊಳ್ಳುತ್ತಾನೆ. ಪ್ರತಿಯೊಂದು ವೃತ್ತಿಗೂ ಈ ಗ್ರಹಚಾರ ತಪ್ಪಿದ್ದಲ್ಲ. ಸಣ್ಣ ಮಿಾನನ್ನು ದೊಡ್ಡ ಮಿಾನು ಸದಾ ನುಂಗುತ್ತಿರುತ್ತದೆ."

"ಅದಕ್ಕೆ ಸಣ್ಣ ಮಿಾನು ದೊಡ್ಡ ಮಿಾನಾಗುವುದೊಂದೇ ಪರಿಹಾರ."

"ಸತ್ಯ – ಸಣ್ಣ ಮಿಾನು ದೊಡ್ಡಮಿಾನಾಗಬೇಕು. ಅದು ಇತರ ಸಣ್ಣ ಮಿಾನುಗಳನ್ನು ನುಂಗುತ್ತ ಬರಬೇಕು."

"ನಾನು ಹಾಗೆ ಹೇಳಲಿಲ್ಲ."

"ಹೇಳದೆ ಗತ್ಯಂತರವೇ ಇಲ್ಲ. ನಾನು ದೊಡ್ಡ ಮಿಾನಾಗುವುದಿಲ್ಲ – ದೊಡ್ಡ ಮೊಸಳೆಯಾಗಬೇಕೆಂದಿದ್ದೇನೆ."

"ವೃತ್ತಿಗಳಲ್ಲಿ ಮೊಸಳೆವೃತ್ತಿ ಎಂದೂ ಒಂದಿದೆಯೇನು ?"

"ಇದೆ – ಅದೇ ಧರ್ಮದ ವೃತ್ತಿ. ಧರ್ಮಕ್ಕೆ ತಲೆಬಾಗುವಷ್ಟು ನಮ್ಮ ಜನ ಬೇರೆ ಯಾವುದಕ್ಕೂ ತಲೆಬಾಗುವುದಿಲ್ಲ. ಸಮಾಜದ, ರಾಷ್ಟ್ರದ ಪ್ರಗತಿಗೆ ಸಹಾಯವಾಗುವ ಯಾವ ಕಾರ್ಯಕ್ಕೂ ಅವರು ಒಂದು ಚಿಕ್ಕಾಸುಕೊಡಲು ಮನಸ್ಸು ಮಾಡುವುದಿಲ್ಲ. ದೇವರ ಹೆಸರು ಹೇಳಿದರೆ – ಪೂಜೆ ಪುರಸ್ಕಾರವೆಂದರೆ – ಸ್ವಾಮಿ ಸನ್ಯಾಸಿಯೆಂದರೆ ಸುವರ್ಣವೃಷ್ಟಿ ಯಾಗುತ್ತದೆ. ನಮ್ಮ ದೇಶದ ಅತ್ಯಂತ ಪ್ರಾಗತಿಕ ವೃತ್ತಿಯೆಂದರೆ ಧರ್ಮದ ವೃತ್ತಿ."

"ನೀವೇನು ಸನ್ಯಾಸತೆಗೆದುಕೊಳ್ಳಬೇಕೆಂದಿರುವಿರೇನು ?"

"ಛೆ! ಸನ್ಯಾಸಕೊಡಿಸಿ, ಅದರ ಪ್ರಯೋಜನ ಪಡೆದುಕೊಳ್ಳಬೇಕೆಂದಿದ್ದೇನೆ. ಇದರಿಂದ ಇಹಪರ ಎರಡೂ ಒಟ್ಟಿಗೆ ಸಾಧಿಸಿದಂತಾಗುತ್ತದೆ."

"ನನಗೇನೂ ಸಂಬಂಧವಿಲ್ಲವೆಂದಂತಾಯಿತು !"

"ಉಂಟೇ! ನೀನೇ ಅದರ ಕೇಂದ್ರ. ಸದ್ಯಕ್ಕೆ ಹೆಚ್ಚು ವಿಷಯ ಕೇಳಬೇಡ. ಮೊದಲು ರಾಮಸ್ವಾಮಿ, ಶಂಕರೂನ ಇಲ್ಲಿಗೆ ಬರಮಾಡಿಕೊಂಡು

ನಾವು ನಾಲ್ವರೂ ಆಲೋಚಿಸಿ ಮುಂದಿನ ಕಾರ್ಯಕ್ಷೇತ್ರ ಸಿದ್ಧಮಾಡ ಬೇಕು."

"ನನ್ನ ಪುಟ್ಟಗಂಟು ಕರಗುತ್ತಿದೆ."

"ಯೋಚನೆ ಮಾಡಬೇಡ. ರಾಮಸ್ವಾಮಿ ಬರುವಾಗ ರಾಮ ನಾಥಯ್ಯನ ಹತ್ತಿರ ಹಣ ತೆಗೆದುಕೊಂಡು ಬರುವಂತೆ ತಿಳಿಸುತ್ತೇನೆ."

ವಾಸು ತಲೆಯಲ್ಲಿ ಯಾವ ವಿಚಾರ ಸುಳಿಯುತ್ತಿರಬಹುದೆಂದು ಪ್ರಮೀಳಾ ಊಹಿಸಲು ಸಾಧ್ಯವಾಗಲಿಲ್ಲ. 'ರಾಮಸ್ವಾಮಿ, ಶಂಕರ ಬರುವವರೆಗೆ ಮುಂದಿನ ವಿಷಯ ಕೇಳಬೇಡ' ಎಂದು ಅವನು ಕಟ್ಟಾಜ್ಞೆ ವಿಧಿಸಿದ್ದ.

ವಾಸು ಕಳಿಸಿದ ತಂತೀ, ಕಾಗದ, ತಂತೀ ಮನಿಯಾರ್ಡರ್ ರಾಮ ಸ್ವಾಮಿ ಕೈಗೆ ಸಕಾಲಕ್ಕೆ ತಲುಪಿದವು. ಎಲ್ಲವನ್ನೂ ಶಂಕರಯ್ಯನಿಗೆ ತೋರಿಸಿ ಅವನನ್ನು ಹೊರಡಿಸಿದ. ರಾಮನಾಥಯ್ಯ ಒಂದು ದಿನ ಕಾಲಾವಕಾಶ ತೆಗೆದುಕೊಂಡು ರಾಮಸ್ವಾಮಿ ಕೈಗೆ ಒಂದು ಸಾವಿರ ರೂಪಾಯಿಯಿತ್ತ.

ಮುಂಬಯಿ ರೈಲು ಹತ್ತುವ ಮುನ್ನ ರಾಮಸ್ವಾಮಿ ವಾಸೂಗೆ ತಾರು ಮಾಡಿ ತಾವು ಬರುವ ವಿಷಯ ತಿಳಿಸಿದ. ವಾಸು ಪ್ರಮೀಳೆಗೆ ತಾರು ತೋರಿಸಿ

"ಪ್ರಮೀ– ನನ್ನ ನಿಯೋಜನೆ ಕಾರ್ಯರೂಪಕ್ಕೆ ಬರಲಾರಂಭ ವಾಯಿತು. ನಿನ್ನ ಕರ್ತವ್ಯಭಾಗವೂ ಈಗಲೇ ಆರಂಭವಾಗುತ್ತದೆ."

"ನಾನು ಏನು ಮಾಡಬೇಕು."

"ಶಂಕರ ಇಲ್ಲಿ ಇರುವವರೆಗೆ ಪೂಜೆಯ ಮೇಲೆ ಪೂಜೆ ಮಾಡಬೇಕು. ದಿನಕ್ಕೆ ಹೂವು ಹಣ್ಣುಗಳಿಗೆ ಐವತ್ತು ರೂಪಾಯಿ ಖರ್ಚಾದರೂ ಚಿಂತೆಯಿಲ್ಲ. ನಿನ್ನ ವೇಷಭೂಷಣದಲ್ಲಿಯೂ ಸ್ವಲ್ಪ ಮಾರ್ಪಾಟು ಮಾಡಿಕೊಳ್ಳಬೇಕು."

"ಏನು ಬದಲಾವಣೆ ಮಾಡಿಕೊಳ್ಳಬೇಕು."

"ತಲೆ ಗಂಟು ಹಾಕಿಕೊಳ್ಳಬೇಡ. ನಿನ್ನ ನೀಳವಾದ ಕೂದಲನ್ನು ಇಳಿ ಬಿಟ್ಟು ಬಿಡು. ಶುಭ್ರವಾದ ಬಿಳೀ ರೇಶ್ಮೆಯ ಸೀರೆ, ಕುಪ್ಪಸಧರಿಸಿ ಹಣೆಯ ತುಂಬ ಕುಂಕುಮವಿಡಬೇಕು. ಅನ್ನಪೂರ್ಣೇಶ್ವರಿಗೆ ನಿತ್ಯ ಕುಂಕುಮಾರ್ಚನೆಯಾಗುತ್ತಿರಬೇಕು."

"ಏಕೆ ಎಂದು ಹೇಳುವುದಿಲ್ಲವಲ್ಲಾ ನೀವು."

"ನೀನೇ ಸಾಕ್ಷಾತ್ ಅನ್ನಪೂರ್ಣೇಶ್ವರಿ ಎಂದು ಶಂಕರನ ಮನಸ್ಸಿಗೆ ಮೊದಲು ಹೊಳೆಯಬೇಕು. ಅವನು ಒಪ್ಪಿಬಿಟ್ಟರೆ ನಮ್ಮ ಕೆಲಸವಾದ ಹಾಗಾಯಿತು."

"ನೀವು ಹಡಗು ಮುಳುಗಿಸುವ ವ್ಯಾಪಾರಕ್ಕೇ ಕೈಹಾಕಿದ ಹಾಗೆ ಕಾಣುತ್ತದೆ."

"ಒಂದು ಹಡಗಲ್ಲ - ನನ್ನ ಸಮುದ್ರದ ಮೇಲೆ ಹಲವು ಹಡಗುಗಳು ಓಡಾಡುತ್ತಿವೆ."

ಎಂದು ಹೇಳಿದ.

"ನನಗೆ ನೀವು ಸನ್ಯಾಸಿನಿಪಟ್ಟ ಕಟ್ಟುವಿರೇನು ?"

"ಯೋಚನೆ ಮಾಡಬೇಡ - ನಿನ್ನ ರಾಜಯೋಗಿನಿ ಮಾಡುತ್ತೇನೆ. ನಾಡಿದ್ದು ರಾಮಸ್ವಾಮಿ, ಶಂಕರ ಬರುತ್ತಾರೆ. ಅವರು ಬರುವಷ್ಟರಲ್ಲಿ ನಿನ್ನ ಸಿದ್ಧತೆಯಾಗಿರಬೇಕು. ನಾನು ಸ್ವಲ್ಪ ಕಾಳ್ಬಾದೇವಿಯ ಕಡೆ ಹೋಗಿ ಬರುತ್ತೇನೆ."

"ಅಲ್ಲಿ ಯಾರಿದ್ದಾರೆ ?"

"ನನ್ನ ಹಳೆಯ ಸ್ನೇಹಿತ ರತನ್‌ಲಾಲ್ ಇದ್ದಾನೆ. ಈಗವನು ಭಾರಿ ಶ್ರೀಮಂತ."

"ಅವನನ್ನೂ ನಿಮ್ಮ ಹಡಗಿನ ವ್ಯಾಪಾರಕ್ಕೆ ಸೇರಿಸಿಕೊಳ್ಳುವಿರೇನು ?"

"ಛೆ! ಛೆ! ಇದರಲ್ಲಿ ನಾವು ನಾಲ್ವರೇ ಪಾಲುಗಾರರು - ನೀನು, ನಾನು, ರಾಮಸ್ವಾಮಿ, ಶಂಕರ. ಇದೊಂದು ಪ್ರೈವೇಟ್ ಲಿಮಿಟೆಡ್ ಕಂಪೆನಿ (Private Limited Company)"

ಕಾಳ್ಬಾದೇವಿಯ ಜನಜಾತ್ರೆಯನ್ನು ದಾಟಿಕೊಂಡು ರತನ್‌ಲಾಲನ ಅಂಗಡಿ ಹುಡುಕುವ ಹೊತ್ತಿಗೆ ವಾಸೂಗೆ ಸಾಕು ಸಾಕಾಗಿ ಹೋಯಿತು ಬೀದಿಯ ತುಂಬ ರತನ್‌ಲಾಲ್‌ಗಳಿದ್ದರು. ವಾಸು ಮೂರು ಜನ ರತನ್ ಲಾಲರನ್ನು ಭೆಟ್ಟಿಯಾಗಿ ತನ್ನ ರತನ್‌ಲಾಲನನ್ನು ಹುಡುಕಿಕೊಂಡು ಹೊರಟ. ದೊಡ್ಡರಸ್ತೆ ಬಿಟ್ಟು ಸ್ವಲ್ಪದೂರ ಹೋಗಿ ಪಕ್ಕದಲ್ಲಿ ಹೊರಳುವ ರಸ್ತೆಯ ಮೂಲೆ ಯಲ್ಲಿ 'ರತನ್‌ಲಾಲ್, ಝಾವೇರ್‌ಚಂದ್' ಎಂಬ ಬೋರ್ಡು ಕಾಣಿಸಿತು.

ರತನ್‌ಲಾಲ್ ನೆಪಮಾತ್ರಕ್ಕೆ ಅಲ್ಯುಮಿನಂ ಪಾತ್ರೆಗಳ ಒಟ್ಟು ರಾಶಿ (wholesale) ವ್ಯಾಪಾರಿಯಾಗಿದ್ದ. ಅಲ್ಯುಮಿನಂ ಪಾತ್ರೆಗಳ ವ್ಯಾಪಾರದಲ್ಲಿ ಅವನು ಹದಿನೆಂಟು ಲಕ್ಷಗಳಿಸಿದ್ದನೆಂದರೆ ಯಾರೂ ನಂಬಲು ಸಾಧ್ಯವಿರಲಿಲ್ಲ. ಅವನ ವ್ಯಾಪಾರಗಳಲ್ಲಿ ಸಟ್ಟಾವ್ಯಾಪಾರವೇ ದೊಡ್ಡದು. ಅದರ ಜತೆಗೆ ಇನ್‌ಷ್ಯೂರೆನ್ಸ್, ಮನೆ ಮಠಗಳ ಮಾರಾಟ – ಇವೆಲ್ಲದರ ಜತೆಗೆ ಅಲ್ಯೂಮಿನಂ ಪಾತ್ರೆ ಅಂಗಡಿ. ಕಾಳ್ಬಾದೇವಿಯ ರಸ್ತೆಯಲ್ಲಿದ್ದ ಅಂಗಡಿ, ಪಾತ್ರೆ ವ್ಯಾಪಾರ ತಲೆತಲಾಂತರದಿಂದ ಬಂದುದರಿಂದ ರತನಲಾಲ್ ಅದನ್ನು ನಡಸಿಕೊಂಡು ಹೋಗುತ್ತಿದ್ದ. ಅಂಗಡಿಯ ಮೇಲೆ ಹೆಚ್ಚಾಗಿ ಕೂಡುತ್ತಿದ್ದವನು ರತನ್‌ಲಾಲನ ತಮ್ಮ ಮೋಹನಲಾಲ್.

ವಾಸೂಗೆ ಮೋಹನಲಾಲನ ಪರಿಚಯವಿರಲಿಲ್ಲ. ಅಂಗಡಿಯ ಗದ್ದುಗೆಯ ಮೇಲೆ ಕುಳಿತಿದ್ದ ಮೋಹನಲಾಲನನ್ನೇ

"ರತನ್‌ಲಾಲರು ಇದ್ದಾರೆಯೇ" ಎಂದು ಕೇಳಿದ.

"ಇದ್ದಾರೆ – ನೀವು ಯಾರು ?"

"ನಾನು ಅವರ ಬೆಂಗಳೂರು ಸ್ನೇಹಿತ. ಮುಂಬಯಿಗೆ ಬಂದಿದ್ದೆ. ರತನ್‌ಲಾಲರನ್ನು ನೋಡಿ ಹೋಗುವ ಎಂದು ಬಂದೆ."

ಮೋಹನಲಾಲ ತನ್ನ ಮುನೀಮನನ್ನು ಕರೆದು

"ಅಣ್ಣಾವರು ಏನು ಮಾಡುತ್ತಿದ್ದಾರೆ – ನೋಡಿ ಬಾ"

ಎಂದು ಹೇಳಿದ. ಸ್ವಲ್ಪ ಹೊತ್ತಿನಲ್ಲಿ ರತನ್‌ಲಾಲ್ ಮುನೀಮನ ಜತೆಯಲ್ಲಿಯೇ ಬಂದು ವಾಸುವಿಗೆ ಭೆಟ್ಟಿಯಾದ. ಪರಿಚಯ ಸ್ವಲ್ಪ ಮಾಸಿ ಹೋಗಿತ್ತು. ನೆನಪಿಸಿಕೊಳ್ಳುತ್ತಾ ರತನ್‌ಲಾಲ್ ತಲೆಕೆರೆದುಕೊಳ್ಳುತ್ತಿದ್ದ.

"ನನ್ನ ಪರಿಚಯ ಮರೆತುಹೋಯಿತೇ ರತನ್‌ಭಾಯ್. ನಾನು ವಾಸುದೇವರಾವ್ – ಷಾಲಿಮಾರ್ ಕಂಪೆನಿಯ ಚೀಫ್ ಆರ್ಗನೈಜರ್."

ತನ್ನ ಅವಿವೇಕಕ್ಕೆ ನಾಚಿ ರತನ್‌ಲಾಲ್ ವಾಸುವಿನ ಕ್ಷಮೆ ಕೇಳುತ್ತಾ ಅವನನ್ನು ಒಳಗೆ ಕರೆದೊಯ್ದ.

ರತನ್‌ಲಾಲಿನ ಕಛೇರಿಯ ತುಂಬಾ ಗಾದಿಗಳು, ಲೋಡುಗಳು. ರತನ್‌ಲಾಲ್ ಕೂಡುವೆಡೆ ಒಂದು ಟೆಲಿಫೋನ್. ಗೋಡೆಯ ಮೇಲೆ. ಗಾಂಧೀಜಿ, ವಲ್ಲಭಭಾಯ್, ಜವಾಹರಲಾಲ್ ನೆಹರು ಅವರ ಫೋಟೋಗಳು.

ರೂಮಿನ ಒಂದು ಮೂಲೆಯಲ್ಲಿ ಒಂದು ರೇಡಿಯೋ – ಇನ್ನೊಂದು ಮೂಲೆಯಲ್ಲಿ ಒಂದು ಕಬ್ಬಿಣದ ತಿಜೋರಿ (Safe).

"ಕ್ಷಮಿಸಬೇಕು ವಾಸುದೇವರಾವ್‌ಜೀ – ನಿಮ್ಮನ್ನು ನೋಡಿ ಆರೇಳು ವರ್ಷಗಳಾದವು. ನೆನಪು ಹಾರುವುದು ಸ್ವಾಭಾವಿಕ."

"ಲಕ್ಷ್ಮಿಯ ವರಪುತ್ರರಾದ ಮೇಲಂತೂ ನೆನಪು ಹಾರಲೇಬೇಕಲ್ಲವೇ ?"

"ಹಾಗೇನಿಲ್ಲ. ನನ್ನ – ಕೈಯಲ್ಲಿರುವ ವಜ್ರದ ಉಂಗುರಗಳನ್ನು ನೋಡಿ ಲಕ್ಷ್ಮೀಪುತ್ರನೆಂದು ಭಾವಿಸಬೇಡಿ. ಇವೆಲ್ಲಾ ವ್ಯಾಪಾರ ಲಕ್ಷಣಗಳು."

"ಷಾಲಿಮಾರ್ ಸಂಬಂಧ ಇನ್ನೂ ಇಟ್ಟುಕೊಂಡಿರುವಿರಾ ?"

"ಅದನ್ನೇಕೆ ಬಿಡಲಿ – ನೀವು..........."

"ನಾನು ಮೊನ್ನೆತಾನೆ ರಾಜೀನಾಮೆ ಸಲ್ಲಿಸಿದೆ."

"ಅಂತಹದೇನಾಯಿತು."

"ಹೆಡ್ ಆಫೀಸಿನವರು ತಮ್ಮ ಜನಗಳನ್ನು ನಮ್ಮ ತಲೆಯ ಮೇಲೆ ಕೂರಿಸಲೆತ್ನಿಸಿದರು."

"ಈ ಉತ್ತರದವರಿಗೆ ವ್ಯಾಪಾರಧರ್ಮವೇ ಗೊತ್ತಿಲ್ಲ ನೋಡಿ........... ಚಹಾ ತೆಗೆದುಕೊಳ್ಳುವಿರಾ ?"

ವಾಸು ಬೇಡಬೇಡವೆಂದರೂ ಕೇಳದೆ ರತನ್‌ಲಾಲ್ ಚಹಾ ತರಿಸಿದ. ಚಹಾ ಕುಡಿಯುತ್ತಿರುವಂತೆ

"ಮುಂಬಯಿಗೆ ಯಾವಾಗ ಬಂದಿರಿ ? ಎಲ್ಲಿದ್ದೀರಿ ? ಬರುವ ಮುನ್ನ ನನಗೊಂದು ಕಾಗದ ಬರೆಯಬಾರದಾಗಿತ್ತೇ ?"

"ಬಂದು ಸ್ವಲ್ಪ ದಿವಸವಾಯಿತು. ದಾದರಿನಲ್ಲಿ ಮನೆಮಾಡಿದ್ದೇನೆ."

"ಮನೆಯೇಕೆ ಮಾಡಿದಿರಿ – ನನ್ನ ಮನೆ ನಿಮ್ಮದೇ ಆಗಿತ್ತಲ್ಲ."

"ಆ ವಿಷಯ ಬೇರೆ ರತನ್‌ಭಾಯ್. ನಾನು ಒಬ್ಬನೇ ಬಂದಿಲ್ಲ."

"ಕುಟುಂಬ ಬಂದಿದ್ದಾರೇನು ?"

"ಕುಟುಂಬವಲ್ಲ, ಒಬ್ಬ ದೊಡ್ಡ ಯೋಗಿನಿ ಬಂದಿದ್ದಾರೆ. ಅವರ ಸೇವೆಯಲ್ಲಿ ಈ ಜನ್ಮ ತೇಯಬೇಕೆಂದೇ ನಾನು ಕೆಲಸಕ್ಕೆ ರಾಜೀನಾಮೆ ಕೊಟ್ಟೆ. ಅವರ ಜತೆ ತೀರ್ಥಯಾತ್ರೆ ಹೋಗಿದ್ದೆ. ಸಮುದ್ರದ ತೀರದಲ್ಲಿ ಅನುಷ್ಠಾನ ಮಾಡಬೇಕೆಂದರು. ಮುಂಬಯಿ ಯೋಗ್ಯವಾದ ಸ್ಥಳವೆಂದು

ಇಲ್ಲಿಗೇ ಬಂದೆ. ಬಂದ ಮೇಲೆ ನಿಮ್ಮನ್ನು ನೋಡದೆ ಊರಿಗೆ ಹೇಗೆ ಹೋಗಲಿ."

ವಾಸೂ ವಿವರಣೆ ಕೇಳಿ ರತನ್‌ಲಾಲ್ ಬೆಕ್ಕಸ ಬೆರಗಾದ.

"ನಿಮ್ಮಂಥ ವ್ಯಾಪಾರದ ಖದೀಮರೂ ಹೀಗೆ ವೈರಾಗ್ಯ ತಾಳುವಿರೆಂದು ನಾನು ಕನಸು ಮನಸಿನಲ್ಲಿಯೂ ಊಹಿಸಲಾರೆ.''

"ನನ್ನ ಕಣ್ಣನ್ನು ನಾನೇ ನಂಬಲಾರೆ ರತನ್‌ಭಾಯ್. ಅವರ ಯೋಗ್ಯತೆ ಅಷ್ಟು ದೊಡ್ಡದು. ಇಂಥವರು ಒಬ್ಬರಿದ್ದಾರೆ ಎಂದು ಯಾರೋ ಕಛೇರಿಯಲ್ಲಿ ನನಗೆ ಹೇಳಿದರು. ನನಗೆ ಇಂಥವುಗಳಲ್ಲಿ ಸ್ವಲ್ಪವೂ ನಂಬಿಕೆ ಯಿಲ್ಲವೆನ್ನುವುದು ನಿಮಗೆ ಗೊತ್ತೇ ಇವೆಯಲ್ಲಾ. ಕುತೂಹಲದಿಂದ ಹೋಗಿ ನೋಡಿದೆ. ಚಿಕ್ಕ ವಯಸ್ಸು – ಕಣ್ಣು ಕುಕ್ಕಿಸುವ ಸೌಂದರ್ಯ! ಇದೂ ಒಂದು ವೇಷ ಎಂದು ಭಾವಿಸಿದೆ. ಅಲ್ಲಿಯೇ ಕುಳಿತು ಅವರ ಮಂತ್ರಶಕ್ತಿ ಪರೀಕ್ಷಿಸಿದೆ. ಸ್ವಲ್ಪ ಕಾಲ ಕಳೆಯಿತು – ನನ್ನ ಕಡೆ ಯೋಗಿನಿಯವರು ತಿರುಗಿ ನಸುನಕ್ಕು 'ಇವೆಲ್ಲಾ ಮೋಸವಲ್ಲವೇ' ಎಂದು ಕೇಳಿದರು. ನನ್ನ ಮನಸ್ಸಿನಲ್ಲಿ ನಡೆಯುತ್ತಿದ್ದುದನ್ನು ಇವರು ಹೇಗೆ ತಿಳಿದರು ಎಂದು ಆಶ್ಚರ್ಯ ಪಟ್ಟೆ. ನನ್ನನ್ನು ಹತ್ತಿರ ಕರೆದು 'ನಿಮ್ಮ ಹೃದಯದಲ್ಲಿ ಆಳವಾದ ಆಧ್ಯಾತ್ಮಿಕ ಚೇತನವಿದೆ. ಅದನ್ನು ನೀವೇ ಪ್ರಯತ್ನಪೂರ್ವಕವಾಗಿ ಲೋಕದ ಹೊಲಸು ತುಂಬಿ ಮುಚ್ಚುತ್ತಿರುವಿರಿ. ಕಣ್ಣುಬಿಟ್ಟು ನೋಡಿ' ಎಂದು ಹೇಳಿ ಒಂದು ಚಿಟಿಕೆ ಕುಂಕುಮವಿತ್ತರು. ನನಗಾದ ಅನುಭವ ವರ್ಣನಾತೀತ. ಲೋಕವೇ ಗಿರ್ರನೆ ತಿರುಗಿತು. ಕಣ್ಣುಗತ್ತಲೆ ಕವಿಯುತ್ತ ಬಂತು. ಯಾವದೋ ಶಕ್ತಿ ನನ್ನನ್ನು ಹಿಡಿದು ಕೊಡಹಿದಂತಾಯಿತು. ಸ್ವಲ್ಪ ಹೊತ್ತು ಕಳೆದ ಮೇಲೆ ಸ್ಮೃತಿಬಂತು. ಅಂದಿನಿಂದ ಅವರ ದಾಸಾನು ದಾಸನಾಗಿಬಿಟ್ಟೆ. ಇಷ್ಟು ಚಿಕ್ಕ ವಯಸ್ಸಿಗೆ ಅವರು ದೊರಕಿಸಿಕೊಂಡಿರುವ ಶಕ್ತಿ ಅನ್ಯಾದೃಶ."

ರತನ್‌ಲಾಲ್‌ನ ಮೈಯೆಲ್ಲಾ ಕಿವಿಗಳಾದವು. ಕಣ್ಣು ಮಿಟುಕಿಸದೆ ವಾಸುವನ್ನು ನೋಡುತ್ತ ಕುಳಿತ. ವಾಸು ವರ್ಣನೆ ಅವನಿಗೆ ರೋಮಾಂಚನ ವನ್ನುಂಟುಮಾಡಿತ್ತು.

"ಆಶ್ಚರ್ಯ! ಆಶ್ಚರ್ಯ!"

"ಅವರ ಪವಾಡಗಳನ್ನು ಕೇಳಿದರೆ ಏನು ಹೇಳುವಿರೋ? ಅವರ ಪೂಜೆಯ ಕುಂಕುಮದಲ್ಲಿ ಏನು ಮಹತ್ತ್ವವಿದೆಯೋ – ಯೋಗಿನಿಯವರು ನುಡಿದದ್ದು ನಡೆದುಹೋಗುತ್ತದೆ."

ರತನ್‌ಲಾಲನ ಕುತೂಹಲ ಸಂಪೂರ್ಣವಾಗಿ ಕೆರಳಿ ನಿಂತಿತು

"ವಾಸೂಭಾಯ್ – ನನಗೆ ಯೋಗಿನಿಯವರ ದರ್ಶನಮಾಡಿಸಿ"

ಎಂದು ಅಂಜಲಿಬದ್ಧನಾಗಿ ಕೇಳಿಕೊಂಡ. ವಾಸುವದನ ಗಂಭೀರವಾಯಿತು.

"ಈಗವರು ಯಾರಿಗೂ ದರ್ಶನಕೊಡುವುದಿಲ್ಲ ರತನ್‌ಭಾಯ್. ಅವರ ಅನುಷ್ಠಾನ ಮುಗಿಯಬೇಕು."

"ಅದು ಇನ್ನೆಷ್ಟು ದಿವಸವಾಗುತ್ತದೆ."

"ಈ ಅಮಾವಾಸ್ಯೆ ಕಳೆಯಬೇಕು. ಅಮಾವಾಸ್ಯೆ ದಿನ ಅವರದು ಭಾರೀ ಪೂಜೆ."

"ಆಮೇಲಾದರೂ ನನಗೆ ತಿಳಿಸುವಿರಾ?"

"ಅವಶ್ಯಕವಾಗಿ ಆಗಲಿ. ನಿಮ್ಮ ಫೋನ್ ನಂಬರು ಕೊಡಿ – ಫೋನ್ ಮಾಡುತ್ತೇನೆ."

ರತನ್‌ಲಾಲ್ ಒಂದು ಕಾಗದದ ಮೇಲೆ ಫೋನ್ ನಂಬರು ಗುರುತು ಹಾಕಿಕೊಟ್ಟ

"ಅವರಿಗೆ ಎಲ್ಲಾ ಅನುಕೂಲವಾಗಿದೆ ತಾನೆ."

"ಅವರು ಏನನ್ನೂ ಅಪೇಕ್ಷಿಸುವುದಿಲ್ಲ. ನನ್ನ ಫ್ಲ್ಯಾಟು (flat) ಚೆನ್ನಾಗಿದೆ."

"ಪೂಜೆಗೆ ಅಲ್ಲಿ ತೊಂದರೆಯಾಗುವ ಹಾಗಿದ್ದರೆ ತಿಳಿಸಿ. ನನ್ನ ಸ್ನೇಹಿತರು ಬೊಂಬಾಯಿವಾಲಾ ಅವರದು ವರ್ಲೀವಾದಲ್ಲಿ ಸೊಗಸಾದ ಬಂಗಲೆ ಇದೆ. ಅದನ್ನು ಬಿಡಿಸಿಕೊಡುತ್ತೇನೆ."

"ಆಗಲಿ – ಬೇಕಾದರೆ ತಿಳಿಸುತ್ತೇನೆ."

"ನಾನು ದಾದರಿಗೆ – ನಿಮ್ಮ ಮನೆಗೆ ಬರಬಾರದೇ?"

"ಈಗ ಬೇಡಿ. ಅವರ ಅಪ್ಪಣೆ ದೊರಕಿಸಿಕೊಂಡು ನಾನೇ ಫೋನ್ ಮಾಡಿ ತಿಳಿಸುತ್ತೇನೆ"

ಎಂದು ಹೇಳಿ ವಾಸು ಮನೆಯ ಕಡೆ ಹೊರಟ.

ವಾಸು ನಿರುಪಿಸಿದ ಸಂಗತಿ ಕೇಳಿ ಪ್ರಮಿಳಾ ಬಿದ್ದುಬಿದ್ದು ನಕ್ಕಳು.

"ಜನ ಎಂಥ ಮೂಢರು. ಎಷ್ಟು ಬೇಗ ಮರುಳಾಗುತ್ತಾರೆ."

"ದೇವರ ಅಮಲು ಅಂಥದು ಪ್ರಮಿ."

"ನಿಮ್ಮ ಸ್ನೇಹಿತರು ದೊಡ್ಡ ವ್ಯಾಪಾರಿಗಳು ಎಂದು ಹೇಳಿದಿರಿ. ಬೇಕಾದಷ್ಟು ಲೋಕ ಕಂಡವರು – ಅವರೂ ಹೀಗೆ ಭ್ರಾಂತರಾಗುವುದೇ ?"

"ಪ್ರಮಿ – ಈ ಶ್ರೀಮಂತರಿಗೆ ದುಡ್ಡುಮಾಡುವುದೊಂದು ಬಿಟ್ಟು ಮತ್ತೇನೂ ಗೊತ್ತಿರುವುದಿಲ್ಲ. ಅವರು ದುಡ್ಡುಮಾಡುವುದಾದರೂ ಕೇವಲ ಅನ್ಯಾಯದಲ್ಲಿ. ಮನಸ್ಸಿನಲ್ಲಿ ಯಾವಾಗಲೂ ಭಯಕಾಡುತ್ತಲೇ ಇರುತ್ತದೆ. ಅವರು ಮಾಡುವ ಅನ್ಯಾಯ, ರಕ್ತಶೋಷಣೆ, ಬ್ಲ್ಯಾಕ್‌ಮಾರ್ಕೆಟ್ಟುಗಳ ಪಾಪ ಮುಚ್ಚುವುದಕ್ಕೆ ಧರ್ಮದ, ದೇವರುಗಳ ನೆರವು ಬೇಕೇಬೇಕು. ಅವರಿಗಿರುವಷ್ಟು ಧರ್ಮಶ್ರದ್ಧೆ ಮತ್ತೆ ಯಾರಿಗೂ ಇರುವುದಿಲ್ಲ."

"ನಮ್ಮ ಕಾರ್ಯಕ್ಷೇತ್ರ ವಿಸ್ತರಿಸುತ್ತ ಬಂತು. ಮುಂದೆ ಇದು ನಮ್ಮನ್ನೆಲ್ಲಿ ಒಯ್ಯುವುದೋ ಕಾಣೆನಲ್ಲಾ."

"ಸಾಹಸವಿಲ್ಲದ ಜೀವನ ನಿರರ್ಥಕ. ಈಗ ಒಂದು ಪಶು ಕೈಗೆ ಸಿಕ್ಕಿದೆ........ರತನ್ ; ಅವನೇ ಬೊಂಬಾಯಿವಾಲನನ್ನು ಎಳೆಯುತ್ತಿದ್ದಾನೆ. ನೋಡುತ್ತಿರುವೆಯಂತೆ, ಇನ್ನು ಒಂದು ತಿಂಗಳೊಳಗಾಗಿ ಇಡಿಯ ಮುಂಬಯಿ ಪಟ್ಟಣವೇ ನಿನ್ನನ್ನು ಆರಾಧಿಸುತ್ತದೆ."

"ನಿಮಗೆ ಹೇಗೆ ಸಂತೋಷವೋ ಹಾಗೆ ಮಾಡಿ."

"ಏಕೆ ? ನಿನಗೆ ಸಂತೋಷವಿಲ್ಲವೇ ?"

"ನೀವು ಸಂತೋಷವಾಗಿದ್ದರೆ ನನಗೂ ಸಂತೋಷವೇ ತಾನೆ."

ಮಾರನೆಯ ದಿನ ರಾಮಸ್ವಾಮಿ, ಶಂಕರ ಬಂದಿಳಿದರು. ವಾಸುನೇ ದಾದರ್ ಸ್ಟೇಷನ್ನಿಗೆ ಹೋಗಿ ಅವರನ್ನು ಮನೆಗೆ ಕರೆದುಕೊಂಡು ಬಂದ.

ಪ್ರಮಿಳೆಯಲ್ಲಾಗಿದ್ದ ಮಾರ್ಪಾಟನ್ನು ಕಂಡು ರಾಮಸ್ವಾಮಿ ದಿಙ್ಮೂಢನಾದ. ಅವಳ ಪೂಜೆಯ ವೈಭವನೋಡಿ ಶಂಕರನ ಮನಸ್ಸು ಪ್ರಫುಲ್ಲವಾಯಿತು.

"ಇದೇನು ವಾಸು. ಪ್ರಮಿಳಕ್ಕನ ಗುರುತೇ ಸಿಕ್ಕದಂತಾಗಿದೆಯಲ್ಲಾ"

ಎಂದು ರಾಮಸ್ವಾಮಿ ಕೇಳಿದ. ಶಂಕರ ಅವರ ಜತೆ ಇದ್ದುದನ್ನು ಗಮನಿಸಿ ವಾಸು

“ತೀರ್ಥಯಾತ್ರೆ ಅವಳ ಮೇಲೆ ವಿಚಿತ್ರ ಪರಿಣಾಮವನ್ನುಂಟುಮಾಡಿದೆ ರಾಮಸ್ವಾಮಿ. ತಿರುವಣ್ಣಾಮಲೆಯಲ್ಲಿ ಕನಸಾಯಿತು ಎಂದು ಹೇಳಿದಳು. ತೀರ್ಥಕ್ಷೇತ್ರಗಳ ವಾತಾವರಣದಲ್ಲಿ ಭಾವಿಕರ ಮನಸ್ಸು ಬಗೆಬಗೆಯ ಆಂದೋಲನಕ್ಕೀಡಾಗುವುದು ಸ್ವಾಭಾವಿಕವೆಂದುಕೊಂಡು ನಾನು ಸುಮ್ಮನಿದ್ದೆ. ತಿರುಪತಿಯಲ್ಲಿ ಅದೇ ಕನಸು ಪುನಃ ಆಯಿತೆಂದು ಹೇಳಿದಳು. ಎರಡನೆಯ ಸಲವೂ ಅವಳ ಮಾತಿಗೆ ನಾನು ಲಕ್ಷ್ಯಕೊಡಲಿಲ್ಲ. ತಿರುಪತಿ ಬಿಟ್ಟು ಹೊರಡುವ ಹಿಂದಿನ ರಾತ್ರಿ ಅವಳಿಗೆ ಪುನಃ ಕನಸಾಯಿತು. ನಾನು ಎಚ್ಚರಗೊಳಿಸಿದೆ. ಅವಳ ಮೈ ಕಂಪಿಸುತ್ತಿತ್ತು. ಧಾರಾಕಾರವಾಗಿ ಬೆವರಿಳಿಯುತ್ತಿತ್ತು. ಕಣ್ಣುಗಳಿಗೆ ಅಪೂರ್ವಕಾಂತಿ ಬಂದಿತ್ತು. ನೆತ್ತಿಗೆ ನೀರು ತಟ್ಟಿ ಅವಳನ್ನು ಬಹಿರ್ಮುಖಳನ್ನಾಗಿಮಾಡಿ

‘ಏನಾಯತು ಪ್ರಮಿಾ’ ಎಂದು ಕೇಳಿದೆ.

‘ಮೂರನೆಯ ಸಲ ಅದೇ ಕನಸಾಯಿತು. ಹಿಂದೆ ಕನಸಾಯಿತೆಂದು ನಾನು ಹೇಳಿದಾಗ ನೀವು ನಂಬಲಿಲ್ಲ. ಅದೇ ಕನಸು ಮೇಲಿಂದ ಮೇಲೆ ಆಗುತ್ತಿದೆಯಲ್ಲಾ – ಇದಕ್ಕೇನು ಹೇಳುವಿರಿ ?’

‘ಏನು ಕನಸು – ವಿವರಿಸಿ ಹೇಳು.’

‘ನಾನು ಮಲಗಿದ್ದೇನೆ. ಚೆನ್ನಾಗಿ ನಿದ್ರೆ ಹತ್ತಿದೆ. ಯಾರೋ ಬಂದು ಎಬ್ಬಿಸಿದಂತಾಯಿತು. ಕಣ್ಣುಬಿಟ್ಟು ನೋಡುತ್ತೇನೆ. ಯಾರೂ ಇಲ್ಲ. ಮತ್ತೆ ಹೊದಿಕೆ ಎಳೆದುಕೊಂಡು ಮಲಗಿದೆ. ಪುನಃ ಯಾರೋ ಎಬ್ಬಿಸಿದಂತಾಯಿತು. ಕಣ್ಣುಬಿಟ್ಟು ನೋಡುವಲ್ಲಿ ಸಣ್ಣಬೆಳಕೊಂದು ಕಾಣಿಸುತ್ತಿತ್ತು. ಯಾರ ಮುಖವೂ ಕಾಣಬರಲಿಲ್ಲ. ನಾನು ಆಶ್ಚರ್ಯದಿಂದ ನೋಡುತ್ತಿರುವಂತೆ ಬೆಳಕಿನಿಂದ ಒಂದು ವಾಣಿ ಕೇಳಬಂತು – ನನ್ನೊಂದಿಗೆ ಬಾರೆಂದು ವಾಣಿ ಹೇಳಿತು – ಬೆಳಕನ್ನನುಸರಿಸಿಹೊರಟೆ – ಅದು ಎಲ್ಲಿಗೆ ಕರೆದೊಯ್ದಿತೋ ಹೇಳಲಾರೆ. ಗಾವುದ ಗಾವುದ, ಯೋಜನ ಯೋಜನಹೋಗಿರಬಹುದು. ದಟ್ಟವಾದ ಕಾಡು – ಹುಲಿ, ಚಿರತೆ, ಕಾಡುಹಂದಿಗಳ ಭಯಂಕರ ಘೋಷಣೆ ಕೇಳಬರುತ್ತಿತ್ತು – ನಾನು ಗಡಗಡ ನಡುಗಿದೆ – ಹೆದರಿಕೆಯಾಗುತ್ತದೆಯೇ

ಎಂದು ವಾಣಿ ಕೇಳಿತು – ಆಗುತ್ತದೆ ಎಂದೆ – ನಾನು ಇರುವಾಗ ಹೆದರಿಕೆ ಯೇಕೆ ಎಂದು ಹೇಳಿತು – ಕೊನೆಗೆ ಬೆಳಕು ಒಂದು ಗುಹೆಯ ಒಳಗೆ ನನ್ನನ್ನು ಕರೆದೊಯ್ದಿತು – ಗಾಂಡಾಂಧಕಾರ ಕವಿದಿತ್ತು – ಮುಂದಕ್ಕೆ ಹೋಗುತ್ತ ಹೋಗುತ್ತ ಗುಹೆ ವಿಶಾಲವಾಗಿರುವಂತೆ ಕಂಡು ಬಂದಿತು – ಗುಹೆಯ ಮಧ್ಯೆ ಒಬ್ಬ ತೇಜಸ್ವಿ ತಪೋನಿರತನಾಗಿದ್ದ – ನೀಳವಾದ ತೆಳ್ಳನೆಯ ಮುಖ – ಭೂಮಿ ಮುಟ್ಟುವಂತಹ ನೀಳವಾದ ಬಿಳಿಯಗಡ್ಡ – ಪದ್ಮಾಸನಾ ಸೀನನಾಗಿದ್ದಾನೆ – ಅವನ ಕಣ್ಣುಗಳು ಅರೆತೆರೆದಿವೆ – ನಾನು ಹೋಗಿ ಅವನ ಎದುರು ನಿಲ್ಲಲು ಬೆಳಕು ಮಾಯವಾಯಿತು – ಆದರೆ ಆ ತಪೋನಿಧಿಯ ಕಣ್ಣುಗಳಿಂದ ಪ್ರಚಂಡ ತೇಜಸ್ಸು ಬಿತ್ತರಿಸಿತು. ತಪಸ್ವಿ ನನ್ನನ್ನು ಸಮೀಪಕ್ಕೆ ಕರೆದ – ಅಂಜುತ್ತ ಅಂಜುತ್ತ ಹೋಗಿ ಅವನ ಸಮೀಪದಲ್ಲಿ ನಿಂತೆ—

'ನಾನು ಯಾರು ಗೊತ್ತೋ ?' ಎಂದು ಕೇಳಿದ

'ಇಲ್ಲ' ವೆಂದೆ.

'ನಾನು – ನಿನ್ನ ಪುಣ್ಯದ ಮೂರ್ತಿವಂತ ಸ್ವರೂಪ.'

'ನಾನು ಪುಣ್ಯವಂತೆಯಲ್ಲ – ಮಹಾಪಾಪಿ.'

'ನೀನು ಪಾಪಮಾಡದೆ ಇಲ್ಲ – ಆದರೆ ನಿನ್ನ ಅಂತರಂಗ ಪರಿಶುದ್ಧ ವಾಗಿದೆ. ನೀನು ಕಳೆದ ಜನ್ಮದಲ್ಲಿ ಮಹಾ ತಪಸ್ವಿನಿಯಾಗಿದ್ದೆ. ಯೋಗ ಸಿದ್ಧಿಯಾಗುವ ವೇಳೆಗೆ ನಿನ್ನ ಗುರುಸೋದರನಲ್ಲಿ ಅನುರಕ್ತಳಾದೆ. ಆ ವಾಸನೆ ಕಳೆಯಲು ನೀನು ಮಾನವಜನ್ಮ ಮತ್ತೆ ಹೊರಬೇಕಾಯಿತು. ಈ ಜನ್ಮದಲ್ಲಿ ವಾಸನಾವಿಶೇಷವನ್ನು ಕಳೆದುಕೊಂಡಿರುವೆ. ಇನ್ನು ನಿನ್ನ ಯೋಗ ಪೂರ್ಣವಾಗಬೇಕು – ಹಿಂದೆ ದೊರೆಯದಿದ್ದ ಸಿದ್ಧಿ ಈಗ ದೊರಕಿಸಿ ಕೊಳ್ಳಬೇಕು. ನಿನ್ನ ಸಿದ್ಧಿಯಿಂದ ಲೋಕಕಲ್ಯಾಣವಾಗುತ್ತದೆ. ಲೋಕ ಕಲ್ಯಾಣ ಸಾಧಿಸುವ ಮೂಲಕ ನಿನ್ನ ಕರ್ಮವನ್ನು ಕಳೆದುಕೊಂಡು ನಿರ್ಮಲಳಾಗುವೆ.'

'ನಾನೇನು ಮಾಡಬೇಕು ಗುರುದೇವಾ.'

'ಕಾಲಕಾಲಕ್ಕೆ ಅದು ನಿನಗೇ ಭಾಸವಾಗುತ್ತದೆ. ಸದ್ಯಕ್ಕೆ ಅನ್ನ ಪೂರ್ಣೇಶ್ವರಿಯ ಅನುಷ್ಠಾನಮಾಡು. ಅನುಷ್ಠಾನ ಆರಂಭಿಸಿದ ಕೂಡಲೆ

ಕೆಲವು ಸಿದ್ಧಿಗಳು ದೊರೆಯುತ್ತವೆ. ಯಾವದನ್ನೂ ದುರುಪಯೋಗಪಡಿಸಿಕೊಳ್ಳಬೇಡ. ಕೃಪಣ ಧನಶೇಖರಿಸುವಂತೆ ಅವುಗಳನ್ನೂ ಶೇಖರಿಸು. ದುಃಖಿಗಳು ತಂಡತಂಡವಾಗಿ ಬರುತ್ತಾರೆ. ಅವರಿಗೆ ಆಶೀರ್ವಾದ ಮಾಡು.'

'ಮಹದಾಜ್ಞೆ'

ಎಂದು ಹೇಳಿದೆ. ಗುರು ಅದೃಶ್ಯರಾದರು. ಬೆಳಕು, ಮತ್ತೆ ಕಾಣಿಸಿಕೊಂಡು ನನ್ನನ್ನು ಮನೆಗೆ ಕರೆದುಕೊಂಡು ಬಂದುಬಿಟ್ಟಿತು'

ಎಂದು ಹೇಳಿದಳು. ಅಂದಿನಿಂದ ಅವಳ ಚರ್ಯೆಯೇ ಬದಲಾಯಿಸಿತು. ಧ್ಯಾನಕ್ಕೆ ಕೂಡುವುದೊಂದು ಬಿಟ್ಟು ಅವಳಿಗೆ ಏನೂ ಬೇಕಾಗುತ್ತಿರಲಿಲ್ಲ. ಮಾತನಾಡುವುದೇ ಕಷ್ಟವಾಯಿತು. ನಾನು ಬಲವಂತಮಾಡಿ ಅನ್ನ ಗಿಡಿಯುವ ಪರಿಸ್ಥಿತಿಯೊದಗಿತು. ಪ್ರವಾಸವನ್ನು ಅಲ್ಲಿಗೇ ಮುಗಿಸಿ ಊರಿಗೆ ಹಿಂದಿರುಗುವ ಎಂದು ಯೋಚಿಸಿದೆ. ನನ್ನ ಮನಸ್ಸಿನಲ್ಲಿ ಹೊಳೆದುದು ಅವಳಿಗೆ ಹೇಗೆ ತಿಳಿಯಿತೋ ಕಾಣೆ–'ನಾನು ಕಾಶಿವಿಶ್ವೇಶ್ವರನ ದರ್ಶನ ಮಾಡಬೇಕು – ಗಂಗಾಸ್ನಾನಮಾಡಬೇಕು' ಎಂದು ಹೇಳಿದಳು. ಅಲ್ಲಿಂದ ಉತ್ತರ ಪ್ರವಾಸ ಹೊರಡಬೇಕಾಯಿತು. ಮುಂಬಯಿಗೆ ಬಂದು ಸಮುದ್ರ ದರ್ಶನಮಾಡಿದ ಕೂಡಲೆ 'ಸಾಧನೆಗೆ ಇಲ್ಲೇ ನಿಲ್ಲಲು ಗುರುವಾಜ್ಞೆಯಾಗಿದೆ' ಎಂದು ಹೇಳಿದಳು. ನಿರುಪಾಯನಾಗಿ ಮುಂಬಯಿಯಲ್ಲಿ ನಿಂತೆ. ಮನೆ ಮಾಡಿ ನಿಮ್ಮನ್ನು ಬರಮಾಡಿಕೊಂಡೆ.''

ಶಂಕರ ಮಂತ್ರಮುಗ್ಧನಂತೆ ಕುಳಿತುಬಿಟ್ಟ. ರಾಮುಸ್ವಾಮಿಯ ಬಾಯಲ್ಲಿ ಸ್ವರವೇ ಹೊರಡಲಿಲ್ಲ.

ವಾಸು ಶಂಕರನನ್ನೆಬ್ಬಿಸಿ ಸ್ನಾನಕ್ಕೆ ಕಳಿಸಿಕೊಟ್ಟು ರಾಮುಸ್ವಾಮಿಯನ್ನು ದಿಟ್ಟಿಸಿ ನೋಡಿ

"ಅಯ್ಯೋ ಮಂಕೇ. ನೀನೂ ಇಂಥಾ ಮರುಳು ಎಂದು ನನಗೆ ತಿಳಿದಿರಲಿಲ್ಲವೋ ರಾಮು"

ಎಂದ. ರಾಮುಸ್ವಾಮಿಯನ್ನು ಹೊಡೆದೆಬ್ಬಿಸಿದಂತಾಯಿತು. ನಿದ್ರೆಯಿಂದೆದ್ದವನಂತೆ ಕಣ್ಣುಜ್ಜಿಕೊಳ್ಳುತ್ತ

"ನಿಜವಾದ ಸಮಾಚಾರ ಏನು ವಾಸು" ಎಂದು ಕೇಳಿದ.

"ನನ್ನ ವರ್ಣನೆ ಹೇಗಿತ್ತು ?''

"ಅದ್ಭುತವಾಗಿತ್ತು."

"ಶಂಕರ ಪೂರ್ಣವಾಗಿ ನಂಬಿದನೋ ಇಲ್ಲವೋ ?"

"ನಂಬದೆಯೇನು ? ನಾನೇ ಮೂಕನಾಗಿ ಹೋದೆ. ಇದೆಲ್ಲಾ ನಿನ್ನ ಸೃಷ್ಟಿವಿಲಾಸವೋ ?"

"ನಿಸ್ಸಂದೇಹವಾಗಿ. ಆದರೆ ಗುಟ್ಟು ನಮ್ಮಿಬ್ಬರಲ್ಲೇ ಇರಲಿ. ಶಂಕರ ನಿಂದ ಮುಂದೆ ಬಹಳ ಕೆಲಸವಾಗಬೇಕಾಗಿದೆ. ಅವನಿಗೆ ಅಪನಂಬಿಕೆ ಹುಟ್ಟಿದರೆ ನಮ್ಮ ಪ್ರಯತ್ನವೆಲ್ಲಾ ನೀರಿನಲ್ಲಿ ಹೋಮಮಾಡಿ ದಂತಾಗುತ್ತದೆ."

"ನಿನ್ನ ಹಂಚಿಕೆ ಸ್ಪಷ್ಟವಾಗಿ ತಿಳಿಯಲಿಲ್ಲ."

"ಅದೇನೂ ಅಷ್ಟು ಗೂಢವಾದುದಲ್ಲ. ಎಲ್ಲ ವ್ಯಾಪಾರಕ್ಕಿಂತ ಧರ್ಮದ ವ್ಯಾಪಾರವೇ ಹೆಚ್ಚು ಲಾಭಕರ ಎಂದು ತಿಳಿಯಬಂತು. ಮಿಕ್ಕ ವ್ಯಾಪಾರಗಳಿಗೆ ಬಂಡವಾಳ ಬೇಕು – ತೊಂದರೆ ಹೆಚ್ಚು – ದುಡಿಮೆಗೆ ತಕ್ಕ ಪ್ರತಿಫಲವಿಲ್ಲ; ಇದು ಬಂಡವಾಳವಿಲ್ಲದ ವ್ಯಾಪಾರ – ತೊಂದರೆಯೇ ಇಲ್ಲ – ಪ್ರತಿಫಲ ದುಡಿಮೆಯ ಕೋಟಿಪಾಲಿನಷ್ಟು. ಸದ್ಯಕ್ಕೆ ನೀನೂ ನಾನೂ ಸೇರಿ ಒಂದು ಧರ್ಮಪೀಠ ಸ್ಥಾಪಿಸುವುದು – ಅದರಲ್ಲಿ ಪ್ರಮೀಳಾ 'ಜಗನ್ಮಾತೆ' – ಶಂಕರ 'ಜಗದ್ಗುರು' – ನಾನೂ ಮಠದ ಮಹಂತ – ನೀನು ಮಠದ ಕಾರ್ಯಭಾರಿ. ಪೋರ್ಟ್‌ಫೋಲಿಯೋಗಳನ್ನು ಹಂಚಿದ್ದೇನೆ. ಶಿಷ್ಯರನ್ನೂ ಸಿದ್ಧಗೊಳಿಸಿದ್ದೇನೆ."

"ಶಿಷ್ಯರು ಯಾರು ?"

"ಸದ್ಯಕ್ಕೆ ರತನ್‌ಲಾಲ್ – ನಾನು ಕ್ರೋವ್ ವ್ಯಾಪಾರ ಮಾಡುತ್ತಿದ್ದಾಗ ನನ್ನ ಭಾಗಸ್ಥ ಆಗಿದ್ದ ನೋಡು ಅವನು. ರತನ್‌ಲಾಲ್ ಈಗ ಲಕ್ಷಾಧೀಶ್ವರ ನಾಗಿದ್ದಾನೆ. ಅವನೇ ಇನ್ನೊಂದು ಬೇಟೆ ಸಿದ್ಧಗೊಳಿಸಿದ್ದಾನೆ."

"ಅವನು ಯಾರು ?"

"ಯಾರೋ ಅವನ ಸ್ನೇಹಿತನಂತೆ ಬೊಂಬಾಯಿವಾಲಾ. ಅವನ ಪರಿಚಯವಿನ್ನೂ ನನಗೆ ಆಗಿಲ್ಲ. ವರ್ಲ್ಸೀವಾದಲ್ಲಿರುವ ಬೊಂಬಾಯಿವಾಲನ ಅರಮನೆ ನಮ್ಮ ಹಾದಿ ನೋಡುತ್ತಿದೆ."

"ನೀನು ಪ್ರಚಂಡನಯ್ಯ. ನಿನ್ನ ಲೆಕ್ಕಾಚಾರ ಭಗವಂತನಿಗೂ ಅರ್ಥವಾಗುವುದಿಲ್ಲ. ಆದರೆ ಈ ನಿಯೋಜನೆಯಲ್ಲಿ ಮುಂಕುಮುಂಡೇದು ಶಂಕರ, ಏನು ಮಾಡುತ್ತಾನೋ ಏನೋ ?''

"ನಮ್ಮ ನಿಯೋಜನೆಯ ಒಳಗುಟ್ಟು ನೀನು, ನಾನು, ಪ್ರಮಿಳಾ ನಮ್ಮ ಮೂವರಲ್ಲೇ ಇರಬೇಕು. ಈ ಕಂಪೆನಿಗೆ ನಾವೇ ಮೂವರು ಭಾಗಸ್ಥರು. ಶಂಕರ ಸುಮ್ಮನೆ ಜತೆಯಲ್ಲಿರಲಿ. ಅವನು ಒಳ್ಳೆಯ ಸಂಸ್ಕೃತ ಪಂಡಿತ – ವೇದ ಪುರಾಣಗಳನ್ನು ಅರೆದು ಕುಡಿದಿದ್ದಾನೆ. ನಮ್ಮ ವೃತ್ತಿಗೆ ಪಾಂಡಿತ್ಯದ ಅಸ್ತಿಭಾರ, ಹಾಕುವುದಕ್ಕೆ ಅವನು ಬೇಕೇಬೇಕು.''

"ಇದೇ ಅವನು 'ಉಪನಿಷದ್ – ಸಾರ' ಮುಗಿಸಿದ್ದಾನೆ.''

"ಸೊಗಸಾಯಿತು. ನೋಡು ರಾಮು, ನಮ್ಮ ಕೆಲಸಕ್ಕೆ ದೈವ ಸಹಾಯ ಹೇಗೆ ಒದಗುತ್ತದೆಂಬುದನ್ನು. ನಮ್ಮ ಆಶ್ರಮದ ಪ್ರಥಮ ಪ್ರಕಟನೆ – ಮಹರ್ಷಿ ಶಂಕರರ 'ಉಪನಿಷದ್ – ಸಾರ'.''

"ಮಹರ್ಷಿ! ಬಿರುದು ಬಹಳ ಭಾರಿಯಾಯಿತು. ಶಂಕರ ಜೀರ್ಣಿಸಿ ಕೊಳ್ಳುವುದು ಕಷ್ಟವಾಗುತ್ತದೆ."

"ಹೂರಣ ಕಡಿಮೆಯಿದ್ದರೂ ಕಣಕ ದಪ್ಪಗಿರಬೇಕು ರಾಮು. ನಮ್ಮ ದೇಶದ ತುಂಬ ಜಗದ್ಗುರುಗಳು ಮೆರೆದಾಡುತ್ತಿರುವಾಗ ಅವರ ತಲೆಯ ಮೇಲೆ ಒಬ್ಬ 'ಮಹರ್ಷಿ' ತಾನೇ ಇರಬೇಕಾದದ್ದು. ಜೀವನದಲ್ಲಿ ಶ್ರೇಯಸ್ಸನ್ನು ದೊರಕಿಸಲು ಒಂದೇ ಮಾರ್ಗ ನೋಡು – ಸುಳ್ಳು ಹೇಳಬೇಕು, ಆದರೆ ಅದನ್ನೇ ಮೇಲಿಂದ ಮೇಲೆ ಸುಟಿಯಾಗಿ ಹೇಳಬೇಕು. ಗಾಬೆಲ್ಸ್‌ನಿಂದ ನಾವು ಇಷ್ಟನ್ನಾದರೂ ಕಲಿತುಕೊಳ್ಳದಿದ್ದರೆ ಹಿಟ್ಲರ್ ಹುಟ್ಟಿದುದೇ ನಿಷ್ಪ್ರಯೋಜಕವಾಗುತ್ತದೆ.''

"ಈ ಕಂಪೆನಿಯ ಗಾಬೆಲ್ಸ್ ಯಾರು ?''

"ಯಾರು ಅಂದರೆ, ನೀನು – ಭಾರತದ ಏಸ್ ಜರ್ನಲಿಸ್ಟ್ (Ace journalist)—ಫ್ಲೇಮಿಂಗ್ ಕಾಲಮಿಸ್ಟ್ (flaming coloumnist)"

"ಫ್ಲೇಮಿಂಗ್ ಕಾಲಮಿಸ್ಟನ ಫ್ಲೇವರ್ಸ್‌ಗೆ ಒಪ್ಪಿಸದಾದರೆ ಸಾಕು."

"ಈಗ ಒಂದು ದೋಣಿಯಲ್ಲಿ ನಾವು ನಾಲ್ವರೂ ಪ್ರಯಾಣ ಹೊರಡಲಿದ್ದೇವೆ. ದೋಣಿ ಒಡಕಾದರೆ ನಾಲ್ವರೂ ಮುಳುಗುತ್ತೇವೆ."

ಶಂಕರ ಸ್ನಾನ ಮುಗಿಸಿ ಬರಲು ರಾಮಸ್ವಾಮಿ ಸ್ನಾನಕ್ಕೆ ತೆರಳಿದ. ಶಂಕರ ಶಿವಪಂಚಾಕ್ಷರಿ ಜಪಿಸುತ್ತ ವಾಸುಗೆ ಹೇಳಿದ

"ಪ್ರಮೀಳಮ್ಮನ ಜೀವನದಲ್ಲಿ ಕ್ರಾಂತಿಯಾಗುತ್ತದೆಂದು ನನಗೆ ಮೊದಲಿನಿಂದಲೂ ಗೊತ್ತಿತ್ತು ವಾಸು. ಆದರೆ ನೀನು ಹೇಳಿದ ವಿಷಯ ನನ್ನ ನಿರೀಕ್ಷಣೆಯನ್ನೂ ಮೀರಿದೆ. ದೈವಲೀಲೆ ಹೀಗೆಂದು ಹೇಳುವುದಕ್ಕೆ ಯಾರಿಗೆ ಸಾಧ್ಯ."

"ಅವಳ ಪೂಜೆ ಪುರಸ್ಕಾರ ಇದ್ದಕ್ಕಿದ್ದಂತೆ ಪ್ರಬಲವಾದುವನ್ನು ಕಂಡು 'ಹೂ, ಇದೂ ಒಂದು ಹುಚ್ಚು. ನಾಲ್ಕು ದಿವಸವಿರುತ್ತದೆ – ತಾನೇ ತಾನಾಗಿ ಹೋಗುತ್ತದೆ' ಎಂದು ನಾನು ಭಾವಿಸಿಕೊಂಡೆ. ಆದರೆ ಅದು ಹೋಗುವ ಹುಚ್ಚಾಗಿರಲಿಲ್ಲ. ಹಿಂದೆ ನಡೆದುದನ್ನು ಅವಳು ಹೇಳುವುದ ಕ್ಕಾರಂಭಿಸಿದಳು – ಅದಕ್ಕೂ ನಾನು ಆಶ್ಚರ್ಯಪಡಲಿಲ್ಲ. ಕ್ರಮಕ್ರಮೇಣ ಭವಿಷ್ಯ ಹೇಳುವುದಕ್ಕಾರಂಭಿಸಿದಳು. 'ಈಗ ಇಂಥವರು ಬರುತ್ತಾರೆ – ಇಂಥ ಮಾತುಕತೆ ನಡೆಯುತ್ತದೆ – ನಾಳೆ ಬೆಳಗ್ಗೆ ಇಂಥ ಊರಿಗೆ ಪ್ರಯಾಣ ಮಾಡುತ್ತೇವೆ' ಎಂದು ಹೇಳಲಾರಂಭಿಸಿದಳು. ಅವಳ ಭವಿಷ್ಯತ್ ಜ್ಞಾನದ ಒಂದು ಸೊಗಸಾದ ನಿದರ್ಶನ ಸಿಕ್ಕಿತು."

"ಎಲ್ಲಿ – ಯಾವಾಗ ?"

"ನಾವು ಅಲಹಾಬಾದಿಗೆ ಹೋದೆವು. ಕುಂಭಮೇಳದ ಗಲಾಟೆ. ಇಳಿದುಕೊಳ್ಳುವುದಕ್ಕೆ ಸ್ಥಳವಿಲ್ಲ. ಹೋಟೆಲುಗಳೆಲ್ಲಾ ಭರ್ತಿ. ಏನುಗತಿ ಎಂದು ಯೋಚಿಸುವುದಕ್ಕಾರಂಭಿಸಿದೆ. ಪ್ರಮೀಳೆಯ ಮನಸ್ಸಿನಲ್ಲಿ ಲವಲೇಶ ವಾದ ಚಿಂತೆಯೂ ಇರಲಿಲ್ಲ. ಅಲಹಾಬಾದ್ ಬಿಡುವುದೇ ಒಳ್ಳೆಯದೆಂದು ನಾನು ನಿಶ್ಚಯಿಸಿದೆ. ಪ್ರಮೀಳೆ ನಸುನಗುತ್ತಾ,

'ನಿಮಗೆ ಇಷ್ಟು ಕ್ಲೇಶವಾಗುತ್ತಿರುವುದು ಏಕೆ ಗೊತ್ತೇ ?'

ಎಂದು ಕೇಳಿದಳು

'ಕ್ಲೇಶ ಏಕೆ ಎಂದು ಕೇಳುವೆಯಲ್ಲಾ. ದೂರದೇಶ – ಹೊಸಸ್ಥಳ – ಗುರುತು ಪರಿಚಯುದವರು ಒಬ್ಬರೂ ಇಲ್ಲ. ನಾನೊಬ್ಬನೇ ಆಗಿದ್ದರೆ ಹೇಗೋ ಆಗುತ್ತಿತ್ತು. ಯಾರದಾದರೂ ಮನೆಯ ಜಗುಲಿಯ ಮೇಲೆ ಕಾಲ ತಳ್ಳಿ ಬಿಡುತ್ತಿದ್ದೆ. ನಿನ್ನನ್ನು ಜತೆಯಲ್ಲಿ ಕರೆದುಕೊಂಡು ಬಂದು ಹಾಗೆ ಮಾಡಲು

ಸಾಧ್ಯವೇ ? ಸಾಲದುದಕ್ಕೆ ನಿನ್ನ ಮೈಮೇಲೆ ನಾಲ್ಕಾರು ಒಡವೆಗಳಿವೆ. ಇರುವುದನ್ನು ಯಾರಾದರೂ ದೋಚಿ ರೈಲು ಚಾರ್ಜಿಗೂ ಕಾಸಿಲ್ಲದಂತೆ ಮಾಡಿದರೆ ನಮ್ಮ ಗತಿ !'

ಪ್ರಮೀಳಾ ನಸುನಗುತ್ತಾ

'ನಾವು ಅಲಹಾಬಾದಿಗೆ ಬರಬೇಕೆಂದು ಸಂಕಲ್ಪಮಾಡಿದ್ದೆವೇ ?'

'ಇಲ್ಲ.'

'ಯಾವದೋ ಶಕ್ತಿ ನಮ್ಮನ್ನು ಇಲ್ಲಿಗೆ ಕರೆದುಕೊಂಡು ಬಂದಿತು.'

'ಹೂ! ಹಾಗೇ ಇರಬಹುದು.'

'ಇನ್ನೂ ಅನುಮಾನದಲ್ಲಿಯೇ ಇರುವಿರಲ್ಲಾ ! ಯಾವ ಶಕ್ತಿ ನಮ್ಮನ್ನು ಇಲ್ಲಿಗೆ ಕರೆದುಕೊಂಡು ಬಂದಿತೋ ಅದೇ ಶಕ್ತಿ ಇಲ್ಲಿಯೂ ನಮ್ಮ ಯೋಗ ಕ್ಷೇಮ ನೋಡಿಕೊಳ್ಳುತ್ತದೆ. ಎಲ್ಲಾ ನಮ್ಮಿಂದಲೇ ಆಗುತ್ತದೆ – ನಾವೇ ಎಲ್ಲದಕ್ಕೂ ಹೊಣೆಗಾರರು ಎಂಬ ಅಹಂಭಾವವೇ ಕ್ಲೇಶಗಳ ಮೂಲ. ಅದನ್ನು ಸ್ವಲ್ಪ ಮರೆತು ನೀವು ಭಗವಂತನಲ್ಲಿ ನಂಬಿಕೆಯಿಡಿ.'

'ಭಗವಂತನಲ್ಲಿ ನಂಬಿಕೆಯಿಟ್ಟರೆ ಈಗವನು ಬಂದು ನಮಗೆ ರೂಮು ಮಾಡಿಕೊಟ್ಟು ಊಟಕ್ಕೆ ಹಾಕುತ್ತಾನೆಯೇ ?'

ಎಂದು ಕೇಳಿದೆ. ಅವಳು ನಗುತ್ತಾ 'ನೋಡುತ್ತಾ ಇರಿ' ಎಂದು ಹೇಳಿದಳು. ಮುಂದಿನ ವಿಷಯ ಏನೆಂದು ಹೇಳಲಿ ಶಂಕರೂ, ಸ್ವಲ್ಪ ಹೊತ್ತಿನೊಳಗಾಗಿ ಮೋಟಾರಿನಲ್ಲಿ ಯಾರೋ ಬಂದು ನಮ್ಮ ಯೋಗಕ್ಷೇಮ ವಿಚಾರಿಸಿ, ನಮ್ಮನ್ನು ಕರೆದೊಯ್ದು ತಮ್ಮ ಮನೆಯಲ್ಲಿ ಎಲ್ಲ ಅನುಕೂಲ ಮಾಡಿಕೊಟ್ಟರು. ನನಗಾದ ಆಶ್ಚರ್ಯ ವರ್ಣಿಸಲು ಸಾಧ್ಯವಿಲ್ಲ. ಇವಳೇನು ಮನುಷ್ಯಳೋ ದೇವತೆಯೋ ಎಂದು ಯೋಚನೆಮಾಡಿದೆ. ಇಂಥ ನಿದರ್ಶನಗಳು ನೂರಾರು ಆದವು. ಅವಳ ಬಾಯಲ್ಲಿ ಬಂದುದು ನಡೆದು ಹೋಗುತ್ತಿತ್ತು. ಕಾಲಕ್ರಮೇಣ ನನ್ನ ಸಂದೇಹಗಳು ಪರಿಹಾರವಾಗಿ, 'ಅವಳಲ್ಲಿ' ಅಪೂರ್ವ ಭಕ್ತಿ, ಗೌರವ ಹುಟ್ಟಿತು."

"ದೇವರ ವಿಷಯ ನಾನು ಏನಾದರೂ ಹೇಳಿದರೆ ಹಾಸ್ಯ ಮಾಡುತ್ತಿದ್ದೆಯಲ್ಲಾ ವಾಸು – ಈಗೇನನ್ನುವೆ ?"

"ಶಂಕರೂ, ಮಾಯೆಯ ತೆರೆ ಕಣ್ಣುಮುಂದೆ ಮುಸುಕಿದ್ದಾಗ ಹಾಗೇ ನೋಡು. ಅದಕ್ಕೂ ಕಾಲ ಬರಬೇಕಾಯಿತು. ಈಗ ಯಾರು ಬೇಡವೆಂದರೂ ನಂಬಿಕೆ ಬಂದಿದೆ."

"ನಂಬಿಕೆ ಹಾಗೇ ಬರಬೇಕು ವಾಸು. ಯಾರೋ ಹೇಳುತ್ತಾರೆಂದು ಕೇಳುವುದಕ್ಕಿಂತಲೂ ತನ್ನ ಮನಸ್ಸು ಒಪ್ಪಿದುದನ್ನು ನಂಬುವುದೇ ನಿಜವಾದ ನಂಬಿಕೆ."

"ಅವಳಲ್ಲಿ ಆದ ಪರಿವರ್ತನೆ ನನ್ನ ಮನಸ್ಸಿನ ಮೇಲೆ ವಿಚಿತ್ರ ಪರಿಣಾಮವನ್ನುಂಟುಮಾಡಿದೆ ಶಂಕರ. ಹಿಂದಿನ ಬಾಳು, ವಿಲಾಸಜೀವನ ಬೇಸರವಾಗಿದೆ. ಮುಂದಿರುವ ಆಯುಷ್ಯವನ್ನು ಜನರ ಸೇವೆಯಲ್ಲಿ ಕಳೆದು ಪುನೀತನಾಗಬೇಕೆಂದಿದ್ದೇನೆ. ಈ ವಿಷಯದಲ್ಲಿ ನನಗೆ ದಾರಿತೋರಿಸಿದ ಗುರು – ಪ್ರಮಿಳಾ."

ಶಂಕರನ ಆನಂದಕ್ಕೆ ಪಾರವೇ ಇರಲಿಲ್ಲ. ವಾಸುವನ್ನು ಸನ್ಮಾರ್ಗಕ್ಕೆ ತಿರುಗಿಸಿದ ಪ್ರಮಿಳೆಯನ್ನು ಅವನು ಮನಸಾರೆ ವಂದಿಸಿದ.

ರಾಮಸ್ವಾಮಿ ಸ್ನಾನ ಮುಗಿಸಿಕೊಂಡು ಬರಲು ಮೂವರೂ ಊಟ ಮುಗಿಸಿದರು.

"ಪ್ರಮಿಳಾ ತಾಯಿಯ ಊಟ"

ಎಂದು ಶಂಕರ ಕೇಳಿದ.

"ಅವಳು ಊಟ ಬಿಟ್ಟು ಎಷ್ಟೋ ದಿವಸಗಳಾದವು ಶಂಕರ. ಕೇವಲ ಹಾಲು ಹಣ್ಣುಗಳಲ್ಲಿ ಜೀವಧಾರಣೆ ಮಾಡಿಕೊಂಡಿದ್ದಾಳೆ"

ಎಂದು ವಾಸು ಉತ್ತರಿಸಿದ.

ಸಂಜೆಯವರೆಗೆ ಶಂಕರ, ರಾಮಸ್ವಾಮಿ ವಿಶ್ರಾಂತಿ ಪಡೆದರು. ಕಾಫಿಯಾದ ಮೇಲೆ ವಾಸು ಒಂದು ಟ್ಯಾಕ್ಸಿ ಗೊತ್ತುಮಾಡಿಕೊಟ್ಟು ಊರು ನೋಡಿಕೊಂಡು ಬನ್ನಿರೆಂದು ಹೇಳಿ ಕಳಿಸಿಕೊಟ್ಟ.

ಪಂಜರದಿಂದ ಹೊರಬಿದ್ದ ಗಿಣಿಯಂತೆ ಪ್ರಮಿಳಾ ತನ್ನ ರೂಮಿನಿಂದ ಹೊರಗೆ ಬಂದು ತೊಟ್ಟಿಯಲ್ಲಿ ಕುಳಿತು

"ಇದೇನು ಗ್ರಹಚಾರ ತಂದಿಟ್ಟಿರಿ ನನಗೆ"

ಎಂದು ಕೇಳಿದಳು.

"ಗ್ರಹಚಾರವೇನು ಬಂತು ಪ್ರಮಿಾ."

"ಈ ವೇಷ ಕಟ್ಟಿಕೊಂಡು ನಾನು ಇನ್ನೆಷ್ಟು ದಿವಸ ಸೆರೆಮನೆ ವಾಸ ಮಾಡಬೇಕು."

"ಪ್ರಮಿಾ – ನಿಜವಾಗಿಯೂ ನಮಗೆ ದೈವಸಹಾಯವಿದೆ."

"ಯಾವ ವಿಷಯದಲ್ಲಿ."

"ಎಲ್ಲಾ ವಿಷಯಗಳಲ್ಲಿಯೂ. ಶಂಕರ ನಿನ್ನ ಪರಮಭಕ್ತನಾಗಿ ಬಿಟ್ಟಿದ್ದಾನೆ."

ಎಂದು ತನಗೂ ಶಂಕರನಿಗೂ ನಡೆದ ಸಂಭಾಷಣೆಯನ್ನು ಪ್ರಮಿಾಳಿಗೆ ತಿಳಿಸಿದ.

"ಪಾಪ! ಮಗುವಿನಂಥ ಮನುಷ್ಯರವರು. ಅವರನ್ನೂ ಮೋಸಗೊಳಿಸಬೇಕಲ್ಲ."

"ಜಗತ್ತನ್ನೇ ಮೋಸಗೊಳಿಸಲು ಹೊರಟಿರುವಾಗ ಶಂಕರನೊಬ್ಬ ನನ್ನೇಕೆ ಉಳಿಸಬೇಕು."

"ನನ್ನ ಮಹಾಶಕ್ತಿಯ ಬಗ್ಗೆ ಇಷ್ಟು ಪ್ರಚಾರಮಾಡುತ್ತಿರುವಿರಲ್ಲಾ – ಮುಂದೆ ನನ್ನಗತಿ – ಇವುಗಳನ್ನು ನಾನು ಜೀರ್ಣಗೊಳಿಸಿಕೊಳ್ಳುವುದು ಹೇಗೆ?"

"Trust in God and do the right (ದೇವರಲ್ಲಿ ನಂಬಿಕೆಯನ್ನಿಟ್ಟು ಸತ್ಯಮಾರ್ಗದಲ್ಲಿ ನಡೆ)"

"ನಾವು ಸತ್ಯಮಾರ್ಗದಲ್ಲಿ ಹೋಗುತ್ತಿದ್ದೇವೆಯೇ?"

"ಸತ್ಯಾಸತ್ಯಗಳ ನಿಷ್ಕೃಷ್ಟ ಸ್ವರೂಪವನ್ನು ಯಾರು ಕಂಡಿದ್ದಾರೆ?"

"ಬೇರೆಯವರ ಮಾತು ಬೇಡ – ನಮ್ಮ ಮಾತು ಹೇಳಿ."

"ನಮ್ಮಿಂದ ಯಾರಿಗೆ ಅನ್ಯಾಯವಾಗಿದೆ?"

"ಈಗ ಆಗಿದೆಯೋ ಇಲ್ಲವೋ ನಾನು ಕಾಣೆ. ಇದು ಹೀಗೇ ಬೆಳೆದರೆ ಮುಂದೆ ಅನ್ಯಾಯವಾಗಬಹುದು."

"ಯಾರಿಗೆ?"

"ನಮ್ಮನ್ನು ನಂಬುವವರಿಗೆ – ಬಡಬಗ್ಗರಿಗೆ – ದೀನದಲಿತರಿಗೆ."

"ಅವರಿಗೆ ಅನ್ಯಾಯವಾಗುವುದಿಲ್ಲ – ಆ ಬಗ್ಗೆ ನೀನು ಯೋಚಿಸ ಬೇಕಾಗಿಲ್ಲ. ಅನ್ಯಾಯವಾಗುವುದಾದರೆ ನಾಲ್ಕು ಜನ ಶ್ರೀಮಂತರಿಗಾಗ ಬಹುದು. ಅವರು ನೂರು ಜನರ ತಲೆಹೊಡೆದು ಶ್ರೀಮಂತಿಕೆ ಗಳಿಸಿ ಕೊಂಡಿರುತ್ತಾರೆ – ನಾವು ಅವರ ತಲೆಹೊಡೆದು ಶ್ರೀಮಂತಿಕೆಯ ಪಿತ್ಥ ಇಳಿಸು ತ್ತೇವೆ."

"ಜನರ ಮನಸ್ಸಿನಲ್ಲಿ ಇಲ್ಲಸಲ್ಲದ ಭಕ್ತಿ ಹುಟ್ಟಿಸಿ ಅವರನ್ನು ಮೋಸ ಮಾಡುವುದು ನ್ಯಾಯವೇ ?"

"ನಾವಿಷ್ಟು ಕ್ಷೇತ್ರ ನೋಡಿ ಬಂದೆವು – ಅನೇಕ ಋಷಿ, ಮಹರ್ಷಿ ಗಳನ್ನು ಕಂಡು ಬಂದೆವು – ಅನೇಕ ಆಶ್ರಮಗಳನ್ನು ನೋಡಿ ಬಂದೆವು. ಅವರೆಲ್ಲರೂ ಸತ್ಯಸಂಧರೇನು ? ಭಕ್ತಿಯ ಶಕ್ತಿಗಿಂತ ಭಕ್ತನ ನಂಬಿಕೆ ದೊಡ್ಡದು – ಅವನ ನಂಬಿಕೆಯೇ ಅವನನ್ನು ಎಲ್ಲ ಸಂಕಟಗಳಿಂದ ಪಾರು ಮಾಡುತ್ತದೆ. ಇದರಲ್ಲಿ ನಮ್ಮ ಭಾಗ ಬಹಳ ಸ್ವಲ್ಪವಾದುದು – ನಾವು ಕೇವಲ ನಿಮಿತ್ತಮಾತ್ರರಾಗಿದ್ದೇವೆ."

"ಸ್ವಲ್ಪ ಜೋಕೆಯಾಗಿರಿ."

"ನೀನು ನಿಶ್ಚಿಂತೆಯಾಗಿರು ಪ್ರಮಿಳಾ – ನನ್ನ ಇಷ್ಟು ದಿವಸದ ವ್ಯವಹಾರ ಜ್ಞಾನವನ್ನು ನಾನು ಬೀದಿಗೆಸೆಯುವುದಿಲ್ಲ."

"ಮುಂದೆ ನಾನೇನು ಮಾಡಬೇಕು."

"ಅಮಾವಾಸ್ಯೆಗೆ ನಿನ್ನ ಅನುಷ್ಠಾನ ಮುಗಿಯುತ್ತದೆ. ಅದರ ಉದ್ಯಾಪನೆಯಾಗಬೇಕು. ಸಾವಿರಾರು ಜನಕ್ಕೆ ಅನ್ನದಾನ ಮಾಡ ಬೇಕು."

"ಸಾವಿರಾರು ಜನಕ್ಕೆ ಅನ್ನದಾನ! ನಮ್ಮಲ್ಲಿ ಹಣವೆಷ್ಟಿದೆ ಯೆಂಬುದನ್ನು ಜ್ಞಾಪಿಸಿಕೊಳ್ಳಿ."

"ರಾಮನಾಥಯ್ಯ ಒಂದು ಸಾವಿರ ರೂಪಾಯಿ ರಾಮಸ್ವಾಮಿ ಹತ್ತಿರ ಕಳಿಸಿದ್ದಾನೆ."

"ಅದರಲ್ಲಿ ಏನಾಗುತ್ತದೆ. ಅನ್ನಸಂತರ್ಪಣೆಗೆ ಸಾವಿರಾರು ರೂಪಾಯಿ ಬೇಕು."

"ಮುಂಬಯಿಯಲ್ಲಿ ಬಹಳ ಹಣ ಸೆರೆಯಲ್ಲಿ ಬಿದ್ದು ಕೊಳೆಯುತ್ತಿದೆ ಪ್ರಮಿಳಾ – ಅದು ನಮ್ಮ ಕಡೆ ಆರ್ತದೃಷ್ಟಿಯಿಂದ ನೋಡುತ್ತಿದೆ."

"ಏತಕ್ಕೆ ?"

"ಮುಕ್ತಿಗಾಗಿ."

"ನಿಮ್ಮ ಮಾತು ನನಗೇ ಅರ್ಥವಾಗುವುದಿಲ್ಲ."

"ಅರ್ಥವಾಗುತ್ತದೆ – ಸ್ವಲ್ಪ ತಡೆ"

ಎಂದು ವಾಸು ಎದ್ದುಹೋಗಿ, ಎದುರಿಗಿದ್ದ ಇರಾನಿ ಚಹಾ ಅಂಗಡಿಯಿಂದ ರತನ್‌ಲಾಲನಿಗೆ ಫೋನ್ ಮಾಡಿ ಬಂದು,

"ರತನ್‌ಲಾಲ್ ಈಗ ಬರುತ್ತಾನೆ. ನೀನು ಒಳಗಿದ್ದು ನಮ್ಮ ಸಂಭಾಷಣೆ ಕೇಳಿಸಿಕೋ. ನನ್ನ ಮಾತು ಆಗ ಅರ್ಥವಾಗುತ್ತದೆ."

"ನಾನು ಕೇವಲ ಡಂಬಾಚಾರಕ್ಕೆ ಪೂಜೆ ಪುರಸ್ಕಾರ ಆರಂಭಿಸಿದೆ. ಈಗ ಮನಃಪೂರ್ವಕವಾಗಿ ಪೂಜೆ ಮಾಡುವಂತಾಗಿದೆ."

"ಏಕೆ ?"

"ನಿಮ್ಮ ಸಾಹಸಜೀವನಕ್ಕೆ ಪೆಟ್ಟು ತಾಕದಿರಲೆಂದು."

"ನೀನು ನಿಜವಾದ ಯೋಗಿನಿಯೇ ಆಗಿಬಿಡುತ್ತೀಯೇನು ?"

"ಬಲ್ಲವರು ಯಾರು."

ಸ್ವಲ್ಪಕಾಲ ಕಳೆದನಂತರ ತಲೆಬಾಗಿಲಿನಲ್ಲಿದ್ದ ಕರೆಗಂಟೆಯ (Calling bell) ಶಬ್ದವಾಯಿತು. ವಾಸು ಎದ್ದು ಹೋಗಿ ರತನ್‌ಲಾಲನನ್ನು ಒಳಗೆ ಕರೆದುಕೊಂಡು ಬಂದ. ಪ್ರಮಿಳಾ ತನ್ನ ಪೂಜಾಮಂದಿರಕೆ ಜಾರಿದಳು.

"ನೀವು ನನ್ನ ಮರತೇಬಿಟ್ಟರೆಂದು ಭಾವಿಸಿದ್ದೆ ವಾಸುಭಯ್."

"ನಿಮ್ಮನ್ನು ಹೇಗೆ ಮರೆಯಲಿ ರತನ್‌ಲಾಲ್‌ಜೀ. ಕಾಲ ಬಂದಾಗ ನಾನೇ ತಿಳಿಸುತ್ತೇನೆಂದು ವಾಗ್ದಾನಮಾಡಿರಲಿಲ್ಲವೇ ?"

"ಇನ್ನಾದರೂ ಯೋಗಿನಿಯವರ ದರ್ಶನಮಾಡಿಸುವಿರಷ್ಟೇ."

"ಎರಡು ಮೂರು ದಿವಸ ನೀವು ತಡೆದುಕೊಳ್ಳಬೇಕು. ನಿಮ್ಮ ವಿಷಯ ನಾನು ಯೋಗಿನಿಯವರಿಗೆ ಅರಿಕೆ ಮಾಡಿಕೊಂಡಿದ್ದೇನೆ."

"ಎರಡು ಮೂರು ದಿನವೇಕೆ ?"

"ಅಮಾವಾಸ್ಯೆಗೆ ಅವರ ಅನುಷ್ಠಾನ ಮುಗಿಯುತ್ತದೆ. ಮಾರನೆಯ ದಿನ ಉದ್ಯಾಪನೆ. ಅಂದು ನೂರಾರು ಜನಕ್ಕೆ ಅನ್ನಸಂತರ್ಪಣೆ ಮಾಡಿಸಬೇಕೆಂದು ಯೋಗಿನಿಯವರ ಆಜ್ಞೆಯಾಗಿದೆ. ಅನ್ನಸಂತರ್ಪಣೆ ಮುಗಿದ ಮೇಲೆ ನಿಮಗೆ ಅವರ ದರ್ಶನಮಾಡಿಸುತ್ತೇನೆ."

"ಧನ್ಯನಾದೆ. ನಾನು ಅವರ ಹೆಸರು ಹೇಳಿ ಒಂದು ವ್ಯವಹಾರಕ್ಕೆ ಕೈಹಾಕಿರುವೆ. ಅದರ ಫಲಿತಾಂಶವೂ ನಾಳೆ ನಾಡಿದ್ದು ತಿಳಿಯುವುದು."

"ದೊಡ್ಡ ವ್ಯವಹಾರವೋ?"

"ಬಂದರೆ ಒಂದು ಲಕ್ಷ ರೂಪಾಯಿ ಆದಾಯ. ಇದು ಯಶಸ್ವಿಯಾದರೆ ಯೋಗಿನಿಯವರಿಗೆ ಇಪ್ಪತ್ತು ಸಾವಿರ ಕಾಣಿಕೆ ಕೊಡಬೇಕೆಂದು ನಿರ್ಧರಿಸಿದ್ದೇನೆ—ಅನ್ನಸಂತರ್ಪಣೆ ಎಂದಿರಲ್ಲಾ, ಅದಕ್ಕೆ ನನ್ನಿಂದೇನಾದರೂ ಸಹಾಯವಾಗಬೇಕೇ?"

"ನಿಮ್ಮ ಸಹಾಯ ಅಗತ್ಯಬೇಕು. ಇಲ್ಲಿ ಸ್ಥಳಸಂಕೋಚ........ಏನು ಮಾಡುವುದೆಂದು ನಿಮ್ಮನ್ನು ಕೇಳಲೋಸುಗವೇ ಫೋನ್ ಮಾಡಿದೆ."

"ಅದಕ್ಕೇಕೆ ಯೋಚನೆ. ಬೊಂಬಾಯಿವಾಲಾ ಅವರ ಬಂಗಲೆ ಖಾಲಿಯಿದೆಯೆಂದು ತಿಳಿಸಿದೆನಲ್ಲಾ. ಬಂಗಲೆಯ ಕಾಂಪೌಂಡು ವಿಶಾಲವಾಗಿದೆ. ಅಲ್ಲಿ ಸಂತರ್ಪಣೆ ನಡಸಬಹುದಲ್ಲಾ. ಬಂಗಲೆಯನ್ನೊಮ್ಮೆ ನೋಡುವಿರೇನು?"

"ಸ್ಥಳ ನಿಶ್ಶಬ್ದವಾಗಿದೆ ತಾನೆ!"

"ಸುತ್ತಮುತ್ತಲೂ ಮನೆಗಳೇ ಇಲ್ಲ. ಕಾಂಪೌಂಡಿನಲ್ಲಿ ಸೊಗಸಾದ ತೋಟವಿದೆ. ಯೋಗಿನಿಯವರ ಪೂಜೆಗೆ ಯಥೇಚ್ಛವಾಗಿ ಹೂ ಸಿಕ್ಕುತ್ತದೆ."

"ನಾಳೆ ಮಧ್ಯಾಹ್ನಕ್ಕೆ ಅವರ ಪೂಜಾವಿಧಿ ಮುಗಿಯುತ್ತದೆ. ಸಂಜೆ ನಾವು ಅಲ್ಲಿಗೆ ಹೋಗಬಹುದು. ಆ ವೇಳೆಗೆ ನೀವು ಮನೆಯನ್ನು ಸ್ವಚ್ಛ ಮಾಡಿಸಿದ್ದರೆ ಒಳ್ಳೆಯದು. ಬೆಂಗಳೂರಿನಿಂದ ನನ್ನ ಇಬ್ಬರು ಸ್ನೇಹಿತರು ಬಂದಿದ್ದಾರೆ – ಅವರ ನೆರವೂ ನೀವು ತೆಗೆದುಕೊಳ್ಳಬಹುದು."

"ಅವರೆಲ್ಲಿ ಈಗ?"

"ಊರು ನೋಡಿಬನ್ನಿ ಎಂದು ಕಳಿಸಿದ್ದೇನೆ. ಇನ್ನೇನು ಬರಬಹುದು."

"ನನಗೆ ಫೋನ್ ಮಾಡಿದ್ದರೆ ಕಾರು ಕಳಿಸಿಕೊಡುತ್ತಿದ್ದೆ."

"ನಿಮಗೇತಕ್ಕೆ ತೊಂದರೆ."

"ತೊಂದರೆಯೇನು ಬಂತು. ಮನೆಯಲ್ಲಿ ಮೂರು ಕಾರಿದೆ. ನಾಳೆಯಿಂದ ಒಂದು ಕಾರ್ ಕಳಿಸಿಕೊಡುತ್ತೇನೆ. ಬೇಕಾದಲ್ಲಿ ಹೋಗಿ ಬನ್ನಿ."

"ಇಲ್ಲಿಗೇಕೆ ಕಳಿಸುವಿರಿ. ನಾವು ವರ್ಸೋವಾಕ್ಕೆ ಹೋದ ಮೇಲೆ ಕಳಿಸಬಹುದು."

ತಲೆಬಾಗಿಲಿನಲ್ಲಿ ಕರೆಗಂಟೆಯ (Calling bell) ಶಬ್ದವಾಯಿತು. ವಾಸು ಬಾಗಿಲು ತೆಗೆದು ಶಂಕರ, ರಾಮಸ್ವಾಮಿಯೊಂದಿಗೆ ಬಂದು ಕುಳಿತ. ಪರಸ್ಪರ ಪರಿಚಯವಾಯಿತು.

"ಇವರು ಉಪನಿಷತ್ತುಗಳ ಮೇಲೆ ವ್ಯಾಖ್ಯಾನ ಬರೆದಿದ್ದಾರೆಯೇ ?"

ಎಂದು ರತನ್‌ಲಾಲ್ ಆಶ್ಚರ್ಯಚಕಿತನಾಗಿ ಕೇಳಿದ.

"ಸಂಸ್ಕೃತ ಗ್ರಂಥಗಳೆಲ್ಲಾ ಇವರ ಕಂಠದಲ್ಲಿಯೇ ಇದೆ ರತನ್‌ಲಾಲ್‌ಜೀ – ಅದ್ಭುತ ಪಾಂಡಿತ್ಯ."

ರತನ್‌ಲಾಲ್ ಹೊರಡಲು ಎದ್ದುನಿಲ್ಲಲು ವಾಸು ಅವನಿಗೆ 'ತಡೆಯಿರಿ ಬಂದೆ' ಎಂದು ಹೇಳಿ ಒಳಗೆ ಹೋಗಿ ಕೆಲವು ನಿಮಿಷಗಳ ತರುವಾಯ ಹಿಂದಿರುಗಿ

"ರತನ್‌ಲಾಲ್‌ಜೀ, ನಾಳೆ ಮಧ್ಯಾಹ್ನ ಹನ್ನೆರಡು ಗಂಟೆಗೆ ನೀವು ಇಲ್ಲಿಗೆ ದಯೆಮಾಡಿಸಬೇಕು. ಯೋಗಿನಿಯವರ ಪೂಜೆ ಅದೇ ಮುಗಿದಿರುತ್ತದೆ. ನೀವು ಪ್ರಸಾದ ಸ್ವೀಕರಿಸುವುದಕ್ಕೆ ಬರಬೇಕೆಂದು ಆಜ್ಞೆಯಾಗಿದೆ."

ರತನ್‌ಲಾಲನ ಮನಸ್ಸು ಆನಂದದಿಂದ ಕುಣಿಯತೊಡಗಿತು. ವಾಸುವಿನ ಉಪಕಾರಕ್ಕೆ ಪದೇಪದೇ ವಂದನೆಯನ್ನರ್ಪಿಸಿದ. ವಾಸು ಅವನನ್ನು ಹೊರಗೆ ನಿಂತಿದ್ದ ಕಾರಿನ ಬಳಿಗೆ ಕರೆದುಕೊಂಡು ಹೋಗಿಬಿಟ್ಟು,

"ಇದು ಇನ್ನೂ ಕೆಲವು ದಿನ ಗೋಪ್ಯವಾಗಿರಲಿ ರತನ್‌ಲಾಲ್‌ಜೀ. ಪ್ರಚಾರವಾದರೆ ಜನಗಳ ಹಿಂಸೆ ಹೆಚ್ಚಾಗುತ್ತದೆ. ಯೋಗಿನಿಯವರ ಧ್ಯಾನಕ್ಕೆ ಭಂಗಬರಬಾರದು."

"ಹಾಗೇ ಆಗಲಿ. ಆದರೆ ನನ್ನ ಗೆಳೆಯ ಬೊಂಬಾಯಿವಾಲನಿಗೆ ಈ ವಿಷಯ ಈಗಾಗಲೇ ತಿಳಿಸಿದ್ದೇನೆ. ನಾಳೆ ಅವನನ್ನೂ ಕರೆದುಕೊಂಡು ಬರಬಹುದೇ ?"

"ಯೋಗಿನಿಯವರ ಅಪ್ಪಣೆಯಾಗಿಲ್ಲ. ಸದ್ಯಕ್ಕೆ ಬೇಡ. ಮುಂದೆ ಸಮಯ ನೋಡಿ ನಾನೇ ತಿಳಿಸುತ್ತೇನೆ"

ಎಂದು ಹೇಳಿದ.

ರಾಮಸ್ವಾಮಿ ಹಿಂದೆ ಒಂದೆರಡು ಬಾರಿ ಮುಂಬಯಿ ಪಟ್ಟಣಕ್ಕೆ ಬಂದಿದ್ದ. ಆದರೆ ಶಂಕರ ಬಂದಿದ್ದುದೇ ಇದೇ ಮೊದಲನೆಯ ಬಾರಿ. ಅವನಿಗೆ ಮುಂಬಯಿ ಪಟ್ಟಣದ ಜನಜಂಗುಳಿ, ಟ್ರಾಮುಗಳು, ಎಲೆಕ್ಟ್ರಿಕ್ ರೈಲುಗಳು ಕಾರುಗಳು ದಂಗುಬಡಿಸಿದ್ದವು. ಗಗನಮುಟ್ಟುತ್ತಿದ್ದ ಮುಂಬಯಿಯ ಮನೆಗಳನ್ನು ನೋಡಿ ಅವನು ವಿಸ್ಮಯಗೊಂಡಿದ್ದ.

ಊಟ ಮುಗಿಸಿ ರಾತ್ರಿ ಬಹಳ ಹೊತ್ತಿನವರೆಗೆ ಗೆಳೆಯರು ಮಾತ ನಾಡುತ್ತ ಕುಳಿತಿದ್ದರು. ಶಂಕರ ತನ್ನ ಅನುಭವಗಳನ್ನು ವರ್ಣಿಸಿದ.

೫

ಮಾರನೆಯ ಬೆಳಿಗ್ಗೆ ಶಂಕರ, ರಾಮಸ್ವಾಮಿ ಏಳುವ ಹೊತ್ತಿಗೇ ಯೋಗಿನಿಯವರ ಪೂಜೆ ಆರಂಭವಾಗಿತ್ತು. ಶಂಕರ ದೂರದಿಂದಲೇ ಕೈಮುಗಿದು ಸ್ನಾನಕ್ಕೆ ಹೋದ.

ಉಪಾಹಾರ ಮುಗಿದ ಮೇಲೆ ರಾಮಸ್ವಾಮಿ ಜತೆಮಾಡಿ ಶಂಕರನನ್ನು ಪುತ್ತಿ ನಗರಪರ್ಯಟನಕ್ಕೆ ವಾಸು ಕಳಿಸಿಕೊಟ್ಟ.

ಆ ವೇಳೆಗೆ ಬಿಸಿಯಾಗಿ ಕಾಫಿಮಾಡಿ ಪ್ರಮೀಳಾ ವಾಸುವಿಗೆ ತಂದಿತ್ತಳು. ವಾಸು ಅವಳೊಂದಿಗೆ ಕಾಫಿ ಸೇವಿಸುತ್ತ

"ಪ್ರಮೀ – ಇವತ್ತು ನಮ್ಮ ಪೂಜೆಯ ಫಲ ಸಿಕ್ಕುತ್ತದೆ."

"ನನಗೆ ಸಿಕ್ಕಿಯೇ ಇದೆ."

"ಹಾಗೆಂದರೆ."

"ಈ ಸೆರೆಮನೆ ವಾಸ."

"ಇಂದು ಮಧ್ಯಾಹ್ನ ಹನ್ನೆರಡು ಗಂಟೆಗೆ ಅದರ ವಿಸರ್ಜನೆಯಾಗುತ್ತದೆ. ಯೋಗಿನಿ ಅಮ್ಮನವರ ಪೂಜೆ ಪರಿಸಮಾಪ್ತಿಯಾಗುತ್ತದೆ."

"ರತನ್‌ಲಾಲ್ ಹನ್ನೆರಡು ಗಂಟೆಗೆ ಬರುತ್ತಾನೆಯೇ ?"

"ಖಂಡಿತ ಬರುತ್ತಾನೆ."

"ನನಗೆ ಹೆದರಿಕೆಯಾಗುತ್ತದೆ. ಅವನಿಗೆ ನಾನು ಏನು ಹೇಳಲಿ."

"ಏನೂ ಹೇಳಬೇಡ. ನಿನ್ನ ಪಾಡಿಗೆ ನೀನು ಧ್ಯಾನಮುದ್ರೆಯಲ್ಲಿ ಕುಳಿತಿರು. ಭಕ್ತ ಬಂದು ನಮಸ್ಕರಿಸುತ್ತಾನೆ. ನಿನ್ನ ಕರುಣಾಕಟಾಕ್ಷ ಬೀರಿ ಅವನನ್ನು ಆಶೀರ್ವದಿಸಿ, ಒಂದು ಚಿಟಿಕೆ ಕುಂಕುಮ ಅವನ ಕೈಯಲ್ಲಿ ಹಾಕು. ಪುನಃ ಅವನು ನಮಸ್ಕಾರ ಹಾಕಿ ಹೋಗುತ್ತಾನೆ. ಇಲ್ಲಿಗೆ ಒಂದು ಅಂಕ ಮುಗಿಯುತ್ತದೆ."

"ಒಳ್ಳೆಯ ನಾಟಕವಾಡಬೇಕಾಗಿದೆಯಲ್ಲಾ."

"ನಿಜ. ಜೀವನವೇ ಒಂದು ನಾಟಕ. ನಮ್ಮ ರಾಜಕಾರಣ ಪಟುಗಳು, ಮಠಾಧಿಪತಿಗಳು, ಸಮಾಜ ಸುಧಾರಕರು, ಗಾಂಧೀಭಕ್ತರು ಆಡುತ್ತಿರುವುದು ನಾಟಕವಲ್ಲದೆ ಮತ್ತೇನು ?— ಹಾಗೇ ಇದೂ ಒಂದು ನಾಟಕ."

"ರತನ್‌ಲಾಲ್ ಬಂದಾಗ ನೀವು ಸಮೀಪದಲ್ಲಿರುವಿರಷ್ಟೇ ?"

"ಇದ್ದೇ ಇರುತ್ತೇನೆ. ನೀನು ನಿರ್ಭೀತಳಾಗಿರು."

ವಾಸುವೇ ಹೊರಗೆ ಹೋಗಿ ಎರಡು ದೊಡ್ಡ ಬುಟ್ಟಿ ಹೂವು, ಹಣ್ಣು, ಅಧಿಕ ಪ್ರಮಾಣದಲ್ಲಿ ಕುಂಕುಮ ತಂದು, ದೇವಿಯ ಪೂಜೆ ಮಾಡಿ, ಅಲಂಕರಿಸಿದ. ನಾಲ್ಕು ಮೂಲೆಗಳಲ್ಲಿಯೂ ಮೈಸೂರು ಊದುಕಡ್ಡಿ ತನ್ನ ಸುವಾಸನೆ ಚೆಲ್ಲುತ್ತಿತ್ತು. ದೇವಿಯ ಮುಂದೆ ಎರಡು ನಂದಾದೀಪ ಬೆಳಗುತ್ತಿದ್ದವು.

ಶಂಕರ, ರಾಮಸ್ವಾಮಿ ಹಿಂದಿರುಗುವುದರೊಳಗಾಗಿ ವಾಸು ಸ್ನಾನ ಮಾಡಿ, ಶುಭ್ರ ವಸ್ತ್ರಧರಿಸಿ, ಸೊಂಟಕ್ಕೊಂದು ಟವಲು ಬಿಗಿದ. ಅವನ ಹಣೆಯ ಮೇಲೆ ತ್ರಿಪುಂಡ್ರ, ಕುಂಕುಮ ರಾರಾಜಿಸಿದವು.

ಪ್ರಮೀಳೆ ತಲೆಗೆ ಸ್ನಾನಮಾಡಿ, ಬಿಳಿಯ ವಸ್ತ್ರಧರಿಸಿ ದೇವರ ಮುಂದೆ

ಕುಳಿತಳು. ಅವಳ ಹಣೆಯಲ್ಲಿ ಎಂದಿಗಿಂತಲೂ ಹೆಚ್ಚಿನ ಕುಂಕುಮ ಬೆಳಗಿತು.

ರಾಮಸ್ವಾಮಿ, ಶಂಕರ ಹಿಂದಿರುಗಲು ಅವರಿಗೆ ಸ್ನಾನಮಾಡಿ ಸಿದ್ಧರಾಗ ಬೇಕೆಂದು ವಾಸು ಸೂಚನೆಯನ್ನಿತ್ತ.

ಶಂಕರ, ರಾಮಸ್ವಾಮಿ ಸ್ನಾನ ಮುಗಿಸಿ, ಶುಭ್ರ ವಸ್ತ್ರಧರಿಸಿ, ಹಣೆಗೆ ವಿಭೂತಿಯಿಟ್ಟುಕೊಂಡು ಸಿದ್ಧರಾದರು.

ಮಧ್ಯಾಹ್ನದ ವೇಳೆಗೆ ಯೋಗಿನಿ ಮಹಾಮಂಗಳಾರತಿ ಮಾಡಿದಳು. ಅವಳ ಮುಖದಲ್ಲಿ ಬೆಳಗುತ್ತಿದ್ದ ದಿವ್ಯತೇಜಸ್ಸು ಕಂಡು ರಾಮಸ್ವಾಮಿಯೂ ಆವಾಕ್ಕಾದ; ಶಂಕರನಂತೂ ಸ್ಮೃತಿತಪ್ಪಿ ಬೀಳುವುದು ಬಾಕಿ ಉಳಿದಿತ್ತು.

ಮಹಾ ಮಂಗಳಾರತಿ ಮುಗಿದ ಸ್ವಲ್ಪ ಹೊತ್ತಿನೊಳಗಾಗಿ ರತನ್‌ಲಾಲ್ ಸೇವಕರ ಕೈಯಲ್ಲಿ ತಟ್ಟೆ, ಬುಟ್ಟಿ ಹೊರಸಿಕೊಂಡು ಬಂದ. ಅವನಿಂದ ಅವುಗಳನ್ನು ತೆಗೆದುಕೊಂಡು ವಾಸು ಯೋಗಿನಿಯವರಿಗೆ ಒಪ್ಪಿಸಿದ.

ಯೋಗಿನಿ ಧ್ಯಾನಮುದ್ರೆಯಲ್ಲಿ ಕುಳಿತಿದ್ದರು. ವಾಸು ರತನ್ ಲಾಲನನ್ನು ಒಳಗೆ ಕರೆದೊಯ್ದು ಯೋಗಿನಿಯ ಮುಂದೆ ನಿಲ್ಲಿಸಿ

"ಇವರೇ ರತನ್‌ಲಾಲ್‌ಜೀ - ತಮ್ಮ ಆಶೀರ್ವಚನಕ್ಕೆ ದಯೆ ಮಾಡಿಸಿದ್ದಾರೆ"

ಎಂದು ವಿನಮ್ರನಾಗಿ ತಿಳಿಸಿದ.

ಯೋಗಿನಿ ಕಣ್ಣುಬಿಟ್ಟರು.

ರತನ್‌ಲಾಲ್ ಸಾಷ್ಟಾಂಗ ಪ್ರಣಾಮಮಾಡಿದ.

ಅಂಜಲಿಬದ್ಧನಾಗಿ ನಿಂತಿದ್ದ ರತನ್‌ಲಾಲನನ್ನು ಯೋಗಿನಿ ಹತ್ತಿರ ಕರೆದು ಅವನ ಕೈಗೆ ಒಂದು ಜತೆ ಕಿತ್ತಲೆ ಹಣ್ಣುಹಾಕಿ, ಒಂದು ಚಿಟಿಕೆ ಕುಂಕುಮವಿತ್ತರು. ರತನ್‌ಲಾಲ್ ಮತ್ತೆ ಸಾಷ್ಟಾಂಗ ಪ್ರಣಾಮಮಾಡಿ ವಾಸುವಿನೊಂದಿಗೆ ಹೊರಗೆ ಬಂದ.

ರತನ್‌ಲಾಲನ ಸ್ಥಿತಿ ಅವರ್ಣನೀಯವಾಗಿತ್ತು. ಸಾಕ್ಷಾತ್ ದೇವರ ದರ್ಶನವಾಗಿದ್ದರೂ ಅವನು ಅಷ್ಟು ಆವೇಶಗೊಳ್ಳುತ್ತಿದ್ದನೋ ಇಲ್ಲವೋ? ಪ್ರಮಿಾಳೆಯ ಕಣ್ಣು ಕೋರೈಸುವ ರೂಪ; ಅದನ್ನು ಎತ್ತಿ ಕಾಣಿಸುತ್ತಿದ್ದ ಶುಭ್ರಸ್ನಿಗ್ಧ ಉಡುಪು; ಬಿಳಿಯ ಉಡುಸಿಗೆ ಹಿನ್ನೆಲೆಕೊಡುವಂತೆ

ಕೆದರಿದ ನೀಳವಾದ ಕೇಶರಾಶಿ. ಆವಳ ಹಣೆಯಮೇಲೆ ಅಸ್ತಂಗತ ಸೂರ್ಯನಂತೆ ವಿರಾಜಿಸುತ್ತಿದ್ದ ಕುಂಕುಮ ರತನ್‌ಲಾಲನನ್ನು ಬೆರಗುಗೊಳಿಸಿದುದಲ್ಲದೆ, ಪೂಜೆಯ ಸಂಭ್ರಮ, ಪ್ರಮಿಳೆಯ ಯೋಗಮುದ್ರೆಯೂ ಆವನನ್ನು ಮರುಳುಗೊಳಿಸಿದವು. ರತನ್‌ಲಾಲನ ಕಣ್ಣುಗಳಲ್ಲಿ ಆನಂದ ಭಾಷ್ಪ ನಿಂತಿತ್ತು; ಕಂಠ ಗದ್ಗದವಾಗಿತ್ತು; ಮುಖದ ಮೇಲೆ ಗಾಂಭೀರ್ಯ ಮೂಡಿತ್ತು.

ಅವನ ಉದ್ವಿಗ್ನಸ್ಥಿತಿಯನ್ನು ವಾಸು ಚೆನ್ನಾಗಿ ಅರ್ಥ ಮಾಡಿಕೊಂಡ.

"ಇಂದೇ ಸುದಿನ ವಾಸುದೇವ್ ಭಯ್, ಮಹಾತಾಯಿಯ ದರ್ಶನ ಮಾಡಿಸಿ ಮಹೋಪಕಾರ ಮಾಡಿದಿರಿ."

"ನಿಜವಾಗಿ ನೀವು ಭಾಗ್ಯವಂತರು ರತನ್‌ಲಾಲ್‌ಜೀ. ಯೋಗಿನಿಯವರು ನಿಮ್ಮನ್ನು ಆಶೀರ್ವದಿಸಿ ಫಲದಾನಮಾಡಿದ್ದಾರೆ. ಇನ್ನು ನೋಡಿ. ನೀವು ಮುಟ್ಟಿದ್ದು ಚಿನ್ನ."

"ಇಷ್ಟು ಚಿಕ್ಕವಯಸ್ಸಿನಲಿ ಎಂಥಾ ಸಿದ್ಧಿ ದೊರಕಿಸಿಕೊಂಡಿದ್ದಾರೆ."

"ದೈವ ಕಟಾಕ್ಷದ ಮೇರೆಯನ್ನು ನಿಷ್ಕರ್ಷಿಸಲು ನಮ್ಮಂಥ ಸಾಮಾನ್ಯರಿಗೆ ಸಾಧ್ಯವೇ ರತನ್‌ಲಾಲ್‌ಜೀ."

"ಬಂಗಲೆ ಸಿದ್ಧವಾಗಿದೆ. ನಾಲ್ಕು ಗಂಟೆ ವೇಳೆಗೆ ನಾನು ಕಾರು ಕಳಿಸಿಕೊಡುತ್ತೇನೆ. ನೀವೂ – ಯೋಗಿನಿಯವರೂ ಅಲ್ಲಿಗೆ ಬಂದು ಬಿಡಿ. ನಾನು ಬಂಗಲೆಯಲ್ಲಿಯೇ ನಿಮ್ಮ ದಾರಿ ನೋಡುತ್ತಿರುತ್ತೇನೆ."

"ಆಗಬಹುದು"

ಎಂದು ವಾಸು ತನ್ನ ಒಪ್ಪಿಗೆ ಸೂಚಿಸಿದ.

ರತನ್‌ಲಾಲ್ ಹೊರಡಲು ವಾಸು ಬಂದು ಪಕ್ಕಕ್ಕೆ ರಾಮಸ್ವಾಮಿಯನ್ನು ಕರೆದು

"ರಾಮೂ, ಮೊದಲು ಬೆಂಗಳೂರಿಗೆ ತಾರುಮಾಡಿ ನನ್ನ ಡ್ರೈವರ್ ಜೋಸಫ್‌ನನ್ನು ಕರೆಸು. ಅವನ ಪ್ರಯಾಣದ ಖರ್ಚಿಗೆ ನೂರು ರೂಪಾಯಿ ತಾರು ಮನಿಯಾರ್ಡರು ಮಾಡು."

"ಅಂಥ ಅವಸರವೇನಯ್ಯ? ರತನ್‌ಲಾಲ್ ಕಾರೂ ಕೊಡುತ್ತಾನೆ, ಜತೆಗೆ ಡ್ರೈವರನ್ನೂ ಕೊಡುತ್ತಾನೆ."

"ಅದೇ ಬೇಡವೆಂದುದು. ಅವನು ಕಾರುಕೊಡಲಿ– ಡ್ರೈವರ್ ಬೇಡ– ನಮ್ಮ ವಿಷಯ ನಮ್ಮಲ್ಲಿಯೇ ಇರಬೇಕು. ಜೋಸೆಫ್ ಬರುವತನಕ ರತನ್‌ಲಾಲ್ ಡ್ರೈವರನ್ನು ಇಟ್ಟುಕೊಂಡಿರೋಣ"

"ನಿನ್ನ ಲೆಕ್ಕಾಚಾರವೇ ಲೆಕ್ಕಾಚಾರ ವಾಸೂ."

ಎಂದು ರಾಮಸ್ವಾಮಿ ಪೋಸ್ಟ್ ಆಫೀಸಿಗೆ ತಾರು ಕೊಟ್ಟುಬರಲು ಹೋದ.

ರಾಮಸ್ವಾಮಿ ಹಿಂದಿರುಗಿದ ಮೇಲೆ ಊಟ ಮುಗಿಸಿ ಸಾಮಾನು ಕಟ್ಟಲು ಆರಂಭಿಸಿದರು.

ನಾಲ್ಕು ಗಂಟೆಗೆ ಸರಿಯಾಗಿ ರತನ್‌ಲಾಲ್ ಎರಡು ಕಾರು ಕಳಿಸಿ ಕೊಟ್ಟ. ಮೊದಲನೆಯ ಸಲ ಸಾಮಾನುಗಳೊಂದಿಗೆ ರಾಮಸ್ವಾಮಿ, ಶಂಕರ ವರ್ಲೀವಾಕ್ಕೆ ಹೋದರು. ಕಾರು ಮರಳಿ ಬರಲು ಪ್ರಮಿಳೆಯನ್ನು ಕರೆದುಕೊಂಡು ವಾಸು ಹೊರಟ.

ರತನ್‌ಲಾಲ್ ಬಂಗಲೆಯ ಬಾಗಿಲಲ್ಲೇ ಕಾದಿದ್ದು ಯೋಗಿನಿ ಅಮ್ಮ ನವರಿಗೂ, ವಾಸುವಿಗೂ ಸ್ವಾಗತ ಬಯಸಿದ. ಅವರಿಗೆ ಮನೆಯ ಪರಿಚಯ ಮಾಡಿಕೊಟ್ಟು ಮಹಡಿಯ ಮೇಲಕ್ಕೆ ಕರೆದೊಯ್ದ.

ಮಹಡಿಯ ಮೇಲೆ ಒಂದು ವಿಶಾಲವಾದ ತೊಟ್ಟಿ, ತೊಟ್ಟಿಯ ಅಕ್ಕ ಪಕ್ಕದಲ್ಲಿ ಎರಡೆರಡು ಕೋಣೆಗಳು, ತೊಟ್ಟಿಯ ಹಿಂದೆ ಎರಡು ಕೋಣೆಗಳು. ಹಿಂಬದಿಯಲ್ಲಿದ್ದ ಕೋಣೆಗಳಿಗೆ ಪ್ರತ್ಯೇಕ ಸ್ನಾನಗೃಹಗಳಿದ್ದವು.

ಮಹಡಿಯ ಕೆಳಗಿನ ಭಾಗದಲ್ಲಿಯೂ ಮನೆ ಅಷ್ಟೇ ವಿಸ್ತಾರವಾಗಿತ್ತು. ಕೆಳಗಿನ ಭಾಗದಲ್ಲಿ ಶಂಕರ, ರಾಮಸ್ವಾಮಿ ಇರುವುದೆಂದು ನಿಷ್ಕರ್ಷೆ ಯಾಯಿತು.

ಮಹಡಿಯ ಮೇಲೆ ಯೋಗಿನಿ ಅಮ್ಮನವರು ವಾಸಮಾಡುವುದಕ್ಕೆ ರತನ್‌ಲಾಲ್ ಸೊಗಸಾದ ವ್ಯವಸ್ಥೆಮಾಡಿದ್ದ.

ಮಹಡಿಯ ಬಲಭಾಗಕ್ಕೆ ಕೆಳಗಿನಿಂದ ಮೆಟ್ಟಲುಗಳಿದ್ದವು. ಮಹಡಿಯ ಮಧ್ಯದ ತೊಟ್ಟಿಯನ್ನು ಸ್ವಾಗತ ಕೋಣೆ (reception room) ಯನ್ನಾಗಿ ಸಜ್ಜುಗೊಳಿಸಲಾಗಿತ್ತು. ನೆಲದಮೇಲೆ ರತ್ನಕಂಬಳಿಗಳು. ಒಂದು ಭಾಗದಲ್ಲಿ ಸೋಫಾಸೆಟ್, ಅದರ ಸಮೀಪದಲ್ಲಿ ಒಂದು ರೇಡಿಯೋಗ್ರಾಂ. ತೊಟ್ಟಿಯ

ಎಡಪಕ್ಕದಲ್ಲಿದ್ದ ಕೋಣೆಯನ್ನು ಯೋಗಿನಿ ಅಮ್ಮನವರ ಪೂಜಾಗೃಹವಾಗಿ ಮಾರ್ಪಡಿಸಲಾಗಿತ್ತು. ಪೂಜಾಗೃಹದಿಂದ ಯೋಗಿನಿ ಅಮ್ಮನವರ ಶಯ್ಯಾಗೃಹಕ್ಕೆ ಹೋಗುವುದಕ್ಕೆ ಒಂದು ಬಾಗಿಲಿತ್ತು.

ಯೋಗಿನಿ ಅಮ್ಮನವರ ಶಯ್ಯಾಗೃಹ ಸೊಗಸಾದ ಮಂಚ, ಗಾದಿ, ದಿಂಬುಗಳಿಂದ ಅಲಂಕೃತವಾಗಿತ್ತು. ಅಲ್ಲಿಯೇ ಐದಡಿ ಎತ್ತರದ ಒಂದು ನಿಲುಗನ್ನಡಿ ತೂಗುಹಾಕಲ್ಪಟ್ಟಿತ್ತು.

ಯೋಗಿನಿ ಅಮ್ಮನವರ ಶಯ್ಯಾಗೃಹದ ಎದುರಿಗಿದ್ದ ಕೋಣೆಯೇ ವಾಸುವಿನ ಶಯ್ಯಾಗೃಹವಾಗಿತ್ತು. ಅದರ ಪಕ್ಕದ ಕೋಣೆ ವಾಸುವಿನ ಕಛೇರಿಯಾಗಿತ್ತು. ವಾಸುವಿನ ಶಯ್ಯಾಗೃಹವೂ ಸೊಗಸಾದ ಮಂಚ, ದಿಂಬುಗಳಿಂದ ಸಜ್ಜಾಗಿತ್ತು. ಯೋಗಿನಿ ಅಮ್ಮನವರ ಶಯ್ಯಾಗೃಹ ಮತ್ತು ವಾಸು ಶಯ್ಯಾಗೃಹಗಳೆರಡಕ್ಕೂ ಪ್ರತ್ಯೇಕ ಸ್ನಾನಗೃಹಗಳಿದ್ದವು.

ವಾಸು ಮಹಡಿಯ ಮೇಲಕ್ಕೆ ಬಂದು ಪ್ರಮೀಳೆಗೆ ಎಲ್ಲ ವ್ಯವಸ್ಥೆಯನ್ನೂ ತೋರಿಸಿದ. ತನ್ನ ವಸ್ತ್ರ, ಉಡುಗೆಗಳನ್ನು ಜೋಡಿಸಿಕೊಳ್ಳಲು ಪ್ರಮೀಳೆ ತನ್ನ ಶಯ್ಯಾಗೃಹ ಸೇರಿದಳು.

ವಾಸು ತೊಟ್ಟಿಯಲ್ಲಿ ನಿಂತು ಗೋಡೆಯ ಮೇಲಿದ್ದ ಚಿತ್ರಗಳನ್ನು ಗಮನಿಸಿ ಕೂಡಲೇ ರತನ್‌ಲಾಲನನ್ನು ಬರಮಾಡಿದ.

"ಏನು ವಾಸುದೇವ್‌ಭಯ್, ಏನಾದರೂ ಬೇಕಾಗಿತ್ತೇ?"

"ಏನೂ ಇಲ್ಲ – ರತನ್‌ಲಾಲ್‌ಜಿ – ಗೋಡೆಯ ಮೇಲಿರುವ ಚಿತ್ರಗಳನ್ನು ನೋಡಿ."

ಮನೆಯ ಮಾಲಿಕ ಬೊಂಬಾಯಿವಾಲಾ ಶ್ರೀಮಂತನಾಗಿದ್ದಂತೆ ರಸಿಕನೂ ಆಗಿದ್ದ. ಮೂರು ನಾಲ್ಕುಸಾರಿ ಅವನಿಗೆ ಪ್ರಪಂಚಪರ್ಯಟನವಾಗಿತ್ತು. ಅವನು ಇಟಲಿ, ಫ್ರಾನ್ಸ್ ದೇಶಗಳಿಗೆ ಹೋದಾಗ ಅಲ್ಲಿನ ಕೆಲವು ಸುಂದರ ಚಿತ್ರಪ್ರತಿಗಳನ್ನು ಕೊಂಡು ತಂದಿದ್ದ. ರ್‍ಯಾಫೇಲನ 'ಮ್ಯಾಡೋನ,' ಕೊರೀಜಿಯೋನ 'ಮದನನ ಶಿಕ್ಷಣ' ಲಿಯೋನಾರ್ಡೊ ವಿಂಚಿಯ 'ಕೊನೆಯ ಊಟ,' ಟಿಟನ್ನನ 'ಮಾಗ್ಡಾಲಿನ್,' ವಾಟೋನ 'ಸ್ನಾನಗೃಹದಲ್ಲಿ ಸುಂದರಿ,' ಕೋರೋನ 'ಪ್ರಕೃತಿ ನೋಟಗಳ'ನ್ನು ಸಂಗ್ರಹಿಸಿ ಮಹಡಿಯ ಮೇಲಣ ತೊಟ್ಟಿಯನ್ನಲಂಕರಿಸಿಕೊಂಡಿದ್ದ.

ವಾಸೂ ಸೂಚನೆಯಂತೆ ರತನ್‌ಲಾಲ್ ಗೋಡೆಯ ಮೇಲಣ ಚಿತ್ರಗಳನ್ನು ದಿಟ್ಟಿಸಿ ನೋಡಿ

"ಏನಾಯಿತು ಹೇಳಿ" ಎಂದ.

"ಈ ಚಿತ್ರಗಳು ಯೋಗಿನಿಯವರ ಕಣ್ಣಿಗೆ ಬಿದ್ದರೆ ಅವರು ಒಂದು ಕ್ಷಣವೂ ಈ ಮನೆಯಲ್ಲಿರುವುದಿಲ್ಲ."

ರತನ್‌ಲಾಲ್ ಕೂಡಲೆ ಸೇವಕನನ್ನು ಬರಮಾಡಿಕೊಂಡು ಚಿತ್ರಗಳನ್ನು ಕೆಳಕ್ಕಿಳಿಸಿದ. ವಾಸು ಅವುಗಳಲ್ಲಿ ರ್‍ಯಾಫೇಲನ 'ಮ್ಯಾಡೋನ,' ವಿಂಚಿಯ 'ಕೊನೆಯ ಊಟ' ಇರಬಹುದೆಂದು ಸೂಚಿಸಿದ.

ಚಿತ್ರಗಳು ಮಹಡಿಯ ಮೇಲಿದ್ದ ಒಂದು ಕೋಣೆ ಸೇರಿದವು. ರತನ್‌ಲಾಲ್ ದೈನ್ಯದಿಂದ ಕೇಳಿದ

"ನಾನು ಮೊದಲು ನೋಡಲಿಲ್ಲ. ಕ್ಷಮಿಸಿ"

"ಚಿಂತೆಯಿಲ್ಲ. ಯೋಗಿನಿಯವರು ನೇರವಾಗಿ ತಮ್ಮ ರೂಮಿಗೆ ಹೊರಟುಹೋದರು. ಅವರು ನೋಡಿದ್ದರೆ ಅಭಾಸವಾಗುತ್ತಿತ್ತು."

"ಏನು ಬೇಕಾದರೂ ನಿಸ್ಸಂಕೋಚವಾಗಿ ಹೇಳಿ. ಒಂದು ಕಾರ್ ಇಲ್ಲೇ ಗ್ಯಾರೇಜ್‌ನಲ್ಲಿ ಬಿಟ್ಟಿರುತ್ತೇನೆ. ಧಾರಾಳವಾಗಿ ಉಪಯೋಗಿಸಿಕೊಳ್ಳಿ."

"ಡ್ರೈವರ್ ಎಲ್ಲಿರುತ್ತಾನೆ."

"ಅವನ ಮನೆ ವರ್ಲಿಯಲ್ಲಿದೆ. ರಾತ್ರಿ ಮನೆಗೆ ಹೋಗುತ್ತಾನೆ. ಬೇಕಾದರೆ ಇಲ್ಲೇ ಇರು ಎಂದು ಹೇಳುತ್ತೇನೆ."

"ಬೇಡಿ – ನಾಳೆ ನಾಳಿದ್ದರಲ್ಲಿ ನನ್ನ ಡ್ರೈವರ್ ಬರುತ್ತಾನೆ."

"ನಿಮ್ಮ ಡ್ರೈವರ್ ಏಕೆ ಬರಬೇಕು. ನನ್ನ ಡ್ರೈವರ್ ಇಲ್ಲವೇ ?"

"ಅಲ್ಲಿ ಅವನು ಕುಳಿತು ಮಾಡುವುದೇನು. ಇಲ್ಲಿಯೇ ಬಾ ಎಂದು ಬರೆದಿದ್ದೇನೆ."

"ನಿಮ್ಮ ಇಷ್ಟ. ನೀವು ಸುಖವಾಗಿದ್ದರೆ ನನಗೆ ಸಂತೋಷ."

"ಮನೆಯ ಕಾವಲಿಗೆ ಯಾರಿದ್ದಾರೆ."

"ಪಠಾನ್ ಇದ್ದಾನೆ."

"ನಮ್ಮ ಅನುಮತಿಯಿಲ್ಲದೆ ಯಾರನ್ನೂ ಒಳಗೆ ಬಿಡಕೂಡದೆಂದು ಅವನಿಗೆ ಹೇಳಿ."

"ಹಾಗೇ ಆಗಲಿ."

"ಸಮಾರಾಧನೆಯ ವ್ಯವಸ್ಥೆ."

"ನಾನು ಎಲ್ಲಾ ಮಾಡುತ್ತೇನೆ. ನೀವು ನಿಶ್ಚಿಂತರಾಗಿ ವಿಶ್ರಾಂತಿ ತೆಗೆದುಕೊಳ್ಳಿ."

"ನಾಡಿದ್ದು ದಿನ ಚೆನ್ನಾಗಿದೆ."

"ಹಾಗೆಯೇ ಆಗಲಿ."

ಕೆಳಗಡೆ ವೆರಾಂಡದ ಪಕ್ಕದಲ್ಲಿದ್ದ ಕೋಣೆಯಲ್ಲಿ ಫೋನ್ ಇತ್ತು. ಅದನ್ನೇ ರಾಮಸ್ವಾಮಿ ತನ್ನ ಕಛೇರಿಯನ್ನಾಗಿಮಾಡಿಕೊಂಡ. ಅದರ ಪಕ್ಕದ ಕೋಣೆಯೇ ರಾಮಸ್ವಾಮಿಯ ಶಯ್ಯಾಗೃಹವಾಯಿತು. ಅವನ ಶಯ್ಯಾಗೃಹದ ಎದುರಿಗಿದ್ದ ಕೋಣೆ ಶಂಕರನ ಬೀಡಾಯಿತು.

ಬೆಳಿಗ್ಗೆ ಬಂದು ಕಾಣುವುದಾಗಿ ತಿಳಿಸಿ ರತನ್‌ಲಾಲ್ ಹೊರಟುಬಿಟ್ಟ. ಪ್ರಮಿಳೆ ರೂಮಿನಿಂದ ಹೊರಬಿದ್ದು ಮಹಡಿಯನ್ನು ಪರೀಕ್ಷಿಸಿ ನೋಡುತ್ತ

"ಅದೇನು ಕೆಲಸಮಾಡಿಸುತ್ತಿದ್ದಿರಿ – ರತನ್‌ಲಾಲನ ಕೈಯಲ್ಲಿ."

"ತೊಟ್ಟಿಯ ಗೋಡೆಯ ಮೇಲೆ ಕೆಲವು ಅಶ್ಲೀಲ ಚಿತ್ರಗಳಿದ್ದವು – ಅವುಗಳನ್ನು ತೆಗೆಸಿಹಾಕಿದೆ."

"ಯಾವವು – ನಾನು ನೋಡಬೇಕು"

ಎಂದಳು. ವಾಸು ಅವಳನ್ನು ಕರೆದೊಯ್ದು ಮುಂದಿನ ಕೋಣೆಯಲ್ಲಿ ಮೂಲೆಗುಂಪಾಗಿ ಬಿದ್ದಿದ್ದ ಚಿತ್ರಗಳನ್ನು ತೋರಿಸಿದ.

ಪ್ರಮಿಳಾ ಚಿತ್ರಗಳನ್ನು ಎವೆಯಿಕ್ಕದೆ ನೋಡುತ್ತಾ

"ಎಷ್ಟು ಸುಂದರವಾಗಿವೆ. ಇವುಗಳನ್ನೇಕೆ ತೆಗೆಸಿಹಾಕಿದಿರಿ. ಇವುಗಳಲ್ಲಿ ಅಶ್ಲೀಲವೇನಿದೆ ?"

"ಬರಿಬತ್ತಲೆ ಹೆಂಗಸನ್ನು ಕೊರೀಜಿಯೋ, ಟಿಟನ್, ವಾಟೋ ಚಿತ್ರಿಸಿದ್ದಾರೆ. ಅವುಗಳು ಅಶ್ಲೀಲವಲ್ಲವೇ ?"

"ಇವು ಜಗದ್ವಿಖ್ಯಾತ ಕಲಾವಿಭೂತಿಗಳ ಕೃತಿಗಳು. ಇವುಗಳನ್ನು ಅಶ್ಲೀಲವೆಂದು ತೆಗಳುವಿರಾ ?"

"ಪ್ರಮೀ - ಟಿಟೆನ್, ವಾಟೋಯವರ ಕಲಾವೈಭವಕ್ಕೆ ತಲೆದೂಗದ ರೂಕ್ಷ ನಾನೆಂದು ಭಾವಿಸಬೇಡ. ಆಟಕ್ಕೆ ತಕ್ಕ ಬಹಿರೂಪ ಕಟ್ಟಲೇಬೇಕು. ಈ ಚಿತ್ರಗಳನ್ನು ನಾನು ಅಶ್ಲೀಲವೆಂದುದು ರತನ್‌ಲಾಲನ ಕಣ್ಣಿಗೆ ನಾನೊಬ್ಬ ಧರ್ಮಪುರುಷನಾಗಿಬಿಟ್ಟೆ. ನಾಳೆ ನಿನ್ನ ಭಕ್ತಕೋಟಿ ಇಲ್ಲಿ ನೆರೆಯುತ್ತಿದೆ. ಈ ಚಿತ್ರಗಳನ್ನು ನೋಡಿ ಅವರು ವಿಪರೀತವಾಗಿ ಭಾವಿಸಬಾರದು."

"ನಾನು ಹೊರಬಹುದಾದುದಕ್ಕಿಂತಲೂ ಹೆಚ್ಚಿನ ಹೊರೆ, ಜವಾಬ್ದಾರಿ ನನ್ನ ಹೆಗಲ ಮೇಲೆ ಹೇರುತ್ತಿರುವಿರಿ."

"ನಿನ್ನ ಹೆಗಲಿನ ಜತೆಗೆ ನನ್ನ ಹೆಗಲೂ ಇದೆಯೆಂಬುದನ್ನೇತಕ್ಕೆ ಮರೆಯುತ್ತಿರುವೆ."

"ಇಬ್ಬರ ಹೆಗಲೂ ಮುರಿಯಬಾರದು."

"ಬಂದದ್ದೆಲ್ಲಾ ಬರಲಿ - ಗೋವಿಂದನ ದಯೆಯೊಂದಿರಲಿ."

"ಮೇಲಕ್ಕೆ ಯಾರೂ ಬರುವುದಿಲ್ಲವಷ್ಟೇ ?"

"ಇಲ್ಲ - ಬಾಗಿಲು ಹಾಕಿದ್ದೇನೆ. ಏಕೆ ?"

"ನನಗೆ ಈ ಬಿಳಿ ಪತ್ತಲ ಉಟ್ಟು ಸಾಕಾಗಿಹೋಗಿದೆ. ಇವತ್ತು ಲಕ್ಷಣವಾಗಿರುವ ಒಂದು ಸೀರೆ ಉಡುವವೆಂದೆನಿಸಿದೆ."

"ವ್ರತಮುಗಿಯಿತು. ನಾಡಿದ್ದು ಉದ್ಯಾಪನೆ - ಸಮಾರಾಧನೆ. ಆಲ್ಲಿಂದ ಮುಂದೆ ನೀನು ಮಾಡುವ ಪೂಜೆ ರಾಜರಾಜೇಶ್ವರಿಯ ಪೂಜೆ."

"ಇನ್ನೊಂದು ಪೂಜೆ ಗಂಟು ಹಾಕುವಿರಾ ?"

"ಈ ಪೂಜೆ ನಿನಗೆ ಸ್ವಲ್ಪವೂ ತೊಂದರೆಕೊಡುವುದಿಲ್ಲ. ಬೇಕಾದ ಅಲಂಕಾರಮಾಡಿಕೊಳ್ಳಬಹುದು - ಬೇಕಾದ ಒಡವೆ ಹಾಕಿಕೊಳ್ಳಬಹುದು."

"ಹಾಗಾದರೆ ಚಿಂತೆಯಿಲ್ಲ. ರಾಜರಾಜೇಶ್ವರಿ ಪೂಜೆಯನ್ನು ಇಂದಿನಿಂದಲೇ ಆರಂಭಿಸುತ್ತೇನೆ."

"ನಾನು ಬೇಡವೆಂದೆನೆ. ರಾಮು, ಶಂಕರೂ ಬಂದ ದಿವಸದಿಂದ ನನಗೂ ವ್ರತವಾಗಿ ಹೋಗಿದೆ - ಬ್ರಹ್ಮಚರ್ಯವ್ರತ"

ಎಂದು ನಕ್ಕ. ಪ್ರಮೀಳೆಯ ನಕ್ಕು ಅವನ ಸಮೀಪಕ್ಕೆ ಸರಿದಳು. ವಾಸು ತನ್ನ ರಾಜರಾಜೇಶ್ವರಿಯನ್ನು ಬಿಗಿದಪ್ಪಿ ಮುದ್ದಿನ ಮಳೆಗರೆದ.

೬

ಸಮಾರಾಧನೆ ರತನ್‌ಲಾಲನ ಮೇಲ್ವಿಚಾರಣೆಯಲ್ಲಿ ಯಶಸ್ವಿಯಾಗಿ ನಡೆದುಹೋಯಿತು. ಯೋಗಿನಿ ಅಮ್ಮನವರೇ ನಿಂತುಕೊಂಡು ಎಲ್ಲರ ಯೋಗಕ್ಷೇಮ ವಿಚಾರಿಸಿಕೊಂಡರು. ಸಾವಿರಾರು ಜನ ಬಡಬಗ್ಗರಿಗೆ ಒಪ್ಪತ್ತು ಹೊಟ್ಟೆಯತುಂಬ ಊಟವಾಯಿತು. ಸಮಾರಾಧನೆಯ ಸಮಸ್ತ ಖರ್ಚನ್ನೂ ರತನ್‌ಲಾಲನೇ ವಹಿಸಿಕೊಂಡ. ಖರ್ಚಿನ ಸ್ವಲ್ಪ ಭಾಗವನ್ನು ತಾನು ವಹಿಸಿಕೊಳ್ಳುವುದಾಗಿ ವಾಸು ಎಷ್ಟು ಹೇಳಿದರೂ ರತನ್‌ಲಾಲ್ ಕೇಳಲಿಲ್ಲ.

ಒಂದು ದಿನ ವಾಸು ಶಂಕರನ 'ಉಪನಿಷದ್ ಸಾರ' ಗ್ರಂಥದ ಹಾಳೆ ತಿರುವುತ್ತ ಕುಳಿತಿದ್ದ. ಗ್ರಂಥದ ಬಗ್ಗೆ ಅವನು ತೋರುತ್ತಿದ್ದ ಆಸಕ್ತಿ ಕಂಡು ರಾಮಸ್ವಾಮಿಯ ಕುತೂಹಲ ಕೆರಳಿತು.

"ಹೇಗಿದೆ ವಾಸೂ, ಶಂಕರನ ಗ್ರಂಥ."

"ಚೆನ್ನಾಗಿ ಬರೆದಿದ್ದಾನೆ. ವಿಷಯ ಚೆನ್ನಾಗಿ ಅರ್ಥಮಾಡಿಕೊಂಡಿದ್ದಾನೆ. ಆದರೆ…………"

"ಏನು ಆದರೆ…………"

"ವಿಷಯ ಬಹಳ ಕ್ಲಿಷ್ಟ. ಇವನ್ನು ಆದಷ್ಟು ಸುಲಭವಾಗಿ, ಲಲಿತವಾಗಿ, ಸಾಮಾನ್ಯರಿಗೂ ಅರ್ಥವಾಗುವಂತೆ ಬರೆಯಬೇಕೇ ವಿನಾ ಪಂಡಿತ ರಂಜಕವಾಗುವಂತೆ ಬರೆದರೆ ಪ್ರಯೋಜನವಿಲ್ಲ."

"ನನಗೂ ಹಾಗೇ ಅನ್ನಿಸಿತು. ಶಂಕರನಿಗೆ ಪಾಂಡಿತ್ಯವಿರುವಷ್ಟು ಲೋಕಾನುಭವವಿಲ್ಲ. ಅಗೋ, ಶಂಕರ ಬರುತ್ತಿದ್ದಾನೆ. ನೀನೇ ಅವನಿಗೊಂದು ಮಾತು ಹೇಳು."

"ನಿನ್ನ ವಿಷಯವೇ ಚರ್ಚೆಮಾಡುತ್ತಿದ್ದೆವು ಶಂಕರ."

"ಅದೇನಪ್ಪ, ನನ್ನ ವಿಷಯ ಅಷ್ಟು ಚರ್ಚಾಸ್ಪದವಾದದ್ದು."

"ನಿನ್ನ ಉಪನಿಷದ್ – ಸಾರ ಓದುತ್ತಿದ್ದೆ."

"ನಿನ್ನ ಅಭಿಪ್ರಾಯವೇನು ?"

"ಚೆನ್ನಾಗಿದೆ. ಆದರೆ ತುಂಬ ಕ್ಲಿಷ್ಟ. ಎಲ್ಲರಿಗೂ ಅರ್ಥವಾಗುವಂತೆ ಬರೆಯಬೇಕು."

"ವಿಷಯ ಅಂಥದು ವಾಸು. ನಾನೇನುಮಾಡಲಿ."

"ಬೇಕಾದಷ್ಟು ತಿಳಿದುಕೊಂಡಿರುವ ಪಂಡಿತ ನೀನೇ ಹೀಗೆ ಹೇಳಿದರೆ ನಮ್ಮ ಗತಿಯೇನಯ್ಯ. ನಮ್ಮಂಥ ಪಾಮರರಿಗೆ ಈ ವಿಷಯ ಅರ್ಥವಾಗ ಬೇಕೋ ಬೇಡವೋ ?"

"ನೀನು ಹೇಳುವುದೂ ನ್ಯಾಯವಾಗಿದೆ."

"ಒಂದು ಕೆಲಸಮಾಡು ಶಂಕರ. ಇಂಗ್ಲಿಷಿನಲ್ಲಿಯೂ ಇಂಥ ಪುಸ್ತಕಗಳು ವಿರಳ. ನೀನು 'ಉಪನಿಷದ್ – ಸಾರ'ವನ್ನು ಇಂಗ್ಲಿಷಿನಲ್ಲಿ ಏಕೆ ಬರೆಯ ಬಾರದು. ಅದನ್ನು ನಾವೇ ಪ್ರಕಟಿಸೋಣ. ನಾವು ಕೈಗೊಂಡಿರುವ ಧರ್ಮ ಗೆಲಸಕ್ಕೆ ನಿನ್ನ ಗ್ರಂಥ ಒಳ್ಳೆಯ ಪೀಠಿಕೆ ಹಾಕಿಕೊಡುತ್ತದೆ."

"ಯಾರಾದರೂ ನೆರವುಕೊಟ್ಟರೆ ಇಂಗ್ಲಿಷಿನಲ್ಲಿ ಬರೆದುಕೊಡುತ್ತೇನೆ."

"ನಿನಗೊಬ್ಬ ಷಾರ್ಟ್‌ಹ್ಯಾಂಡ್ ಟೈಪಿಸ್ಟ್ ಕೊಟ್ಟರೆ ಸಾಕೋ ?"

"ಸಾಕು."

ವಾಸು ಕೂಡಲೆ ಫೋನ್ ತೆಗೆದುಕೊಂಡು ರತನ್‌ಲಾಲನಿಗೆ ತಿಳಿಸಿದ. ತಾನು ವಿಚಾರಮಾಡಿ ಒಬ್ಬನನ್ನು ಗೊತ್ತುಮಾಡಿ ಕಳಿಸುವುದಾಗಿ ರತನ್‌ಲಾಲ್ ಉತ್ತರಿಸಿದ.

ರತನ್‌ಲಾಲ್ ವಿಚಾರಮಾಡಿ ನಾಲ್ಕುಜನ ಶೀಘ್ರಲಿಪಿಕಾರರನ್ನು ಕಳಿಸಿಕೊಟ್ಟ. ಶಂಕರ, ರಾಮಸ್ವಾಮಿ ಅವರ ಪರೀಕ್ಷೆಮಾಡಿ, ಜೀವನ್‌ನನ್ನು ಗೊತ್ತುಮಾಡಿಕೊಂಡರು.

ರತನ್‌ಲಾಲ್ ತನ್ನ ಅಂಗಡಿಯಲ್ಲಿದ್ದ ರೆಮಿಂಗ್‌ಟನ್ ಸ್ಟ್ಯಾಂಡರ್ಡ್ ಟೈಪರೈಟರ್ ಯಂತ್ರವನ್ನು ಕಳಿಸಿಕೊಟ್ಟ.

ಶಂಕರನಿಗೆ ಸ್ವಲ್ಪವೂ ಬಿಡುವಿಲ್ಲದಂತಾಯಿತು. ಕನ್ನಡದಿಂದ ಇಂಗ್ಲಿಷ್‌ಗೆ ತನ್ನ ಗ್ರಂಥವನ್ನು ಅನುವಾದ ಮಾಡತೊಡಗಿದ. ಪ್ರತಿನಿತ್ಯದ ಅನುವಾದವನ್ನು ರಾಮಸ್ವಾಮಿ, ವಾಸು ಓದಿನೋಡಿ ಅನೇಕ ಉಪಯುಕ್ತ ಸಲಹೆಗಳನ್ನು ನೀಡುತ್ತಿದ್ದರು.

'ಉಪನಿಷದ್ – ಸಾರ'ದ ಇಂಗ್ಲಿಷ್ ಅನುವಾದ ಕ್ರಮವಾಗಿ ರೂಪು ಗೊಳ್ಳಲಾರಂಭಿಸಿತು.

ಬೆಂಗಳೂರಿನಿಂದ ಬಂದ ಜೋಸೆಫ್ ಮನೆಯ ಸುದ್ದಿ ತಿಳಿಸಿದ. ವೇಣಕ್ಕ, ಹನುಮ ಆರೋಗ್ಯವಾಗಿದ್ದಾರೆಂದು ಕೇಳಿ ವಾಸು, ಪ್ರಮೀಳಾ ಸಂತೋಷಪಟ್ಟರು.

ಇಪ್ಪತ್ತು ದಿವಸಗಳ ಸತತ ಪ್ರಯತ್ನದಿಂದ 'ಉಪನಿಷದ್ - ಸಾರ' ಸಿದ್ಧವಾಯಿತು. ಗ್ರಂಥಕ್ಕೆ 'ಅರಣ್ಯಜೀವಿಗಳ ಅಮರಸಂದೇಶ' (Immortal Message of the Forest Dwellers) ಎಂದು ಹೆಸರಿಡಬೇಕೆಂದು ಇತ್ಯರ್ಥವಾಯಿತು.

ಒಂದು ಸಂಜೆ ರಾಯಭಾರವೊಂದನ್ನು ಹೊತ್ತೇ ರತನ್‌ಲಾಲ್ ವಾಸುವನ್ನು ನೋಡಲು ಬಂದ.

"ನೀವು ನನಗೆ ಮಾಡಿದ ಉಪಕಾರ ನಾನೆಂದಿಗೂ ಮರೆಯಲಾರೆ ವಾಸುಭಾಯ್."

"ನನ್ನಿಂದೇನು ಅಂಥ ಮಹೋಪಕಾರವಾಗಿರುವುದು."

"ಒಂದು ಲಕ್ಷರೂಪಾಯಿನ ವ್ಯವಹಾರಕ್ಕೆ ನಾನು ಕೈಹಾಕಿದ್ದ ಸಂಗತಿ ಈ ಮೊದಲೇ ನಿಮಗೆ ತಿಳಿಸಿರುವೆನಲ್ಲವೇ ?"

"ತಿಳಿಸಿರುವಿರಿ."

"ಅದು ಯಶಸ್ವಿಯಾಯಿತೆಂದು ತಿಳಿಸಲು ಸಂತೋಷಿಸುತ್ತೇನೆ. ನನ್ನ ಪ್ರಯತ್ನ ಸಫಲವಾದರೆ ಯೋಗಿನಿ ಅಮ್ಮನವರಿಗೆ ಇಪ್ಪತ್ತು ಸಾವಿರ ರೂಪಾಯಿ ಕಾಣಿಕೆ ಕೊಡಲು ಸಂಕಲ್ಪಮಾಡಿದ್ದೆ."

ಎಂದು ಒಂದು ಚೆಕ್ ತೆಗೆದು ವಾಸುವಿನ ಕೈಯಲ್ಲಿಟ್ಟ. ವಾಸು ಚೆಕ್ಕನ್ನು ತಿರುಗಿಸಿ ಮರುಗಿಸಿ ನೋಡುತ್ತ

"ಇದೆಲ್ಲಾ ಏಕೆ ರತನ್‌ಭಾಯ್. ನಿಮ್ಮ ವಿಶ್ವಾಸ ಸಾಲದೆ."

"ಹಾಗಲ್ಲ. ತಾಯಿಯವರ ಆಶೀರ್ವಾದದಿಂದ ನನ್ನ ಸಂಪತ್ತು ಇಮ್ಮಡಿಯಾಗಿದೆ – ಅವರಿಗೆ ನನ್ನ ಕೃತಜ್ಞತೆ ಅರ್ಪಿಸದಿದ್ದರೆ ದೇವರು ಮೆಚ್ಚುತ್ತಾನೆಯೇ ?"

"ಆಗಲಿ ಕೊಡಿ. ಒಳ್ಳೆಯ ಸಮಯಕ್ಕೆ ನೀವು ಹಣಕೊಟ್ಟ ಹಾಗಾಯಿತು. ನಮ್ಮ ಶಂಕರಾನಂದರು ಗ್ರಂಥ ಮುಗಿಸಿದ್ದಾರೆ. ಅದರ ಪ್ರಕಟನೆಗಾಗುತ್ತದೆ."

"ಗ್ರಂಥ ಪ್ರಕಟನೆಗೆ ಈ ಹಣ ನೀವು ಉಪಯೋಗಿಸಬೇಡಿ. ಅದರ ಪ್ರಕಟನೆಗೆ ನಾನು ತಕ್ಕ ವ್ಯವಸ್ಥೆಮಾಡುತ್ತೇನೆ – ನೀವು ನನಗೊಂದು ಉಪಕಾರಮಾಡಬೇಕು."

"ಹೇಳಿ – ಅವಶ್ಯಕವಾಗಿ ಮಾಡುತ್ತೇನೆ."

"ನನ್ನ ಮಿತ್ರರು ಬೊಂಬಾಯಿವಾಲಾ ಅವರ ಪರಿಚಯ ನಿಮಗಿನ್ನೂ ಆಗಿಲ್ಲ."

"ನೀವು ಪರಿಚಯಮಾಡಿಕೊಟ್ಟೇ ಇಲ್ಲವಲ್ಲಾ."

"ಆತ ಬಹಳ ದುಃಖಿ. ಅವರ ದುಃಖನಿವಾರಣೆ ನಿಮ್ಮಿಂದಲೇ ಆಗ ಬೇಕು."

"ನನ್ನ ಕೈಯಿಂದ ಏನಾಗುತ್ತದೆ ಹೇಳಿ. ಖಂಡಿತ ಮಾಡಿಕೊಡು ತ್ತೇನೆ."

"ಬೊಂಬಾಯಿವಾಲಾ ಅವರು ಭಾರಿ ಶ್ರೀಮಂತರು. ಇಡಿಯ ಪ್ರಪಂಚದ ಪರ್ಯಟನ ಅನೇಕ ಸಲ ಮಾಡಿಬಂದಿದ್ದಾರೆ. ದೇಶವಿದೇಶ ಗಳಲ್ಲಿ ವ್ಯಾಪಾರಮಾಡುತ್ತಿದ್ದರು. ಮಜಗಾಂವಿನಲ್ಲಿ ಅರಮನೆಯಂಥ ಮನೆ ಇದೆ. ಇಂಗ್ಲಿಷಿನ ದೈನಂದಿನ ಪತ್ರಿಕೆ 'ಬಾಂಬೆ ಮೆಸೆಂಜರ್' ಗುಜರಾತಿ ದೈನಂದಿನ ಪತ್ರಿಕೆ 'ಮುಂಬಯರ್' ಪತ್ರಿಕೆಗಳ ಮಾಲಿಕರು ಅವರೇ. 'ನವಯುಗ್ ಪಬ್ಲಿಕೇಷನ್ಸ್' ಕಂಪೆನಿಯೂ ಅವರದೇ ಆಗಿದೆ. ತಾತಾ ಕಂಪೆನಿ, ರಿಸರ್ವ್ ಬ್ಯಾಂಕ್, ಸಿಂಧ್ಯ ನ್ಯಾವಿಗೇಷನ್ಸ್, ಡೆಕನ್ ಏರ್‌ವೇಸ್, ಭಾರತ್ ಕನ್‌ಫೆಕ್ಷನರಿ, ಅರುಣಾ ಮಿಲ್ಸ್ ಮೊದಲಾದ ನೂರಾರು ಕಂಪೆನಿ ಗಳಲ್ಲಿ ಅವರ ಷೇರುಗಳಿವೆ. ಲಕ್ಷ್ಮಿ ಬೊಂಬಾಯಿವಾಲಾ ಅವರ ಮನೆಯಲ್ಲಿ ಕುಣಿದಾಡುತ್ತಾಳೆ – ಆದರೆ ಅವರ ಮನಸ್ಸಿಗೆ ನೆಮ್ಮದಿಯಿಲ್ಲ – ಜೀವಕ್ಕೆ ಸುಖವಿಲ್ಲ."

"ಏಕೆಯೆಂದು ಕೇಳಬಹುದೇ?"

"ಮನುಷ್ಯ ತುಂಬ ಉದಾರಿ. ಲಕ್ಷಾಂತರ ರೂಪಾಯಿಗಳನ್ನು ದಾನ ಧರ್ಮಕ್ಕೆ ಕೊಟ್ಟಿದ್ದಾರೆ. ಕನಸು ಮನಸ್ಸಿನಲ್ಲಿಯೂ ಯಾರಿಗೂ ಅನ್ಯಾಯ ಮಾಡುವ ವ್ಯಕ್ತಿಯಲ್ಲ. ಆದರೆ ದೇವರು ಅವರನ್ನು ಮನೋರೋಗಕ್ಕೆ ಈಡುಮಾಡಿದ್ದಾನೆ."

"ಕಾರಣ ಹೇಳಲಿಲ್ಲವಲ್ಲಾ!"

"ಬೊಂಬಾಯಿವಾಲಾ ಅವರ ಪತ್ನಿ ಎಂಟು ಹತ್ತು ವರ್ಷಗಳಿಂದ ಹಾಸಿಗೆ ಹಿಡಿದು ಮಲಗಿದ್ದಾರೆ. ಹಿಂದೂಸ್ಥಾನದ ಸುಪ್ರಸಿದ್ಧ ಡಾಕ್ಟರುಗಳ ಚಿಕಿತ್ಸೆಯೆಲ್ಲಾ ಮುಗಿಯಿತು. ಸ್ವಿಟ್ಜರ್ಲೆಂಡ್, ಫ್ರಾನ್ಸ್, ವಿಯನ್ನಾ ದೇಶಗಳಿಗೆ ಪತ್ನಿಯನ್ನು ಕರೆದುಕೊಂಡು ಹೋಗಿ ಚಿಕಿತ್ಸೆಮಾಡಿಸಿದರು. ಆದರೆ ಏನೂ ಸಾರ್ಥಕವಾಗಲಿಲ್ಲ."

"ಕಾಹಿಲೆ ಏನೆಂದು ಡಾಕ್ಟರುಗಳು ಹೇಳಿದರು."

"ಒಬ್ಬೊಬ್ಬರು ಒಂದೊಂದು ಹೇಳಿದರು. ಹಲವಾರು ಚಿಕಿತ್ಸೆಗಳಾದವು. ಯಾವದೋ ವಿಚಿತ್ರ ಬಗೆಯ ಕ್ಷಯ ಎಂದು ಡಾಕ್ಟರುಗಳು ಅಭಿಪ್ರಾಯ ಪಡುತ್ತಾರೆ."

"ಇಷ್ಟು ಜನ ಡಾಕ್ಟರುಗಳು ಕೈಬಿಟ್ಟಮೇಲೆ ನಾವೇನು ಮಾಡಲಾಗುತ್ತದೆ ರತನ್‌ಲಾಲ್‌ಜೀ. ನಾವೇನು ವೈದ್ಯರೇ?"

"ಇದು ವೈದ್ಯರಿಂದ ಗುಣವಾಗುವ ಕಾಹಿಲೆಯಲ್ಲ. ಯೋಗಿನಿ ಅಮ್ಮನವರು ಕೃಪೆಮಾಡಿದರೆ ಗುಣವಾಗಬಹುದು. ಅಮ್ಮನವರಿಗೆ ನೀವು ತಿಳಿಸಿ ನನ್ನ ಮಿತ್ರರ ಪತ್ನಿಯನ್ನು ಉಳಿಸಿಕೊಡಬೇಕು."

"ಸದ್ಯಕ್ಕೆ ನಾನು ಯಾವ ಆಶ್ವಾಸನವನ್ನೂ ಕೊಡಲಾರೆ ರತನ್‌ಲಾಲ್‌ಜೀ. ಯೋಗಿನಿಯವರನ್ನು ಕೇಳಿ ನೋಡಿ, ಅವರ ಅಭಿಪ್ರಾಯ ತಿಳಿಸುತ್ತೇನೆ."

"ಬರೀ ಅಭಿಪ್ರಾಯ ತಿಳಿಸಿದರೆ ಸಾಲದು ವಾಸುಭಾಯ್, ಅವರ ಒಪ್ಪಿಗೆ ನೀವು ದೊರಕಿಸಬೇಕು."

"ಪ್ರಯತ್ನಮಾಡಿ ನೋಡುತ್ತೇನೆ."

"ಅಮ್ಮನವರು ಬೇಕಾದ ಪೂಜೆ ಮಾಡಲಿ. ಎಷ್ಟು ಖರ್ಚಾದರೂ ಚಿಂತೆಯಿಲ್ಲ."

"ಸದ್ಯದಲ್ಲೇ ಯೋಗಿನಿಯವರು 'ರಾಜರಾಜೇಶ್ವರಿ' ಪೂಜೆಯನ್ನಾರಂಭಿಸಬೇಕೆಂದಿದ್ದಾರೆ. ಬೊಂಬಾಯಿವಾಲಾ ಅವರ ಹೆಸರಿನಲ್ಲಿ ಪೂಜೆ ನಡೆಸಬೇಕೆಂದು ನಾನು ಸೂಚಿಸಿ ನೋಡುತ್ತೇನೆ. ದೊಡ್ಡವರ ವಿಷಯ – ನಾವು ಕಡ್ಡಾಯವಾಗಿ ಏನೂ ಹೇಳುವಂತಿಲ್ಲ."

"ಹಾಗೇ ಮಾಡಿ. ನಿಮಗೆ ಹೇಗೆ ಸೂಕ್ತವೋ ಹಾಗೆಮಾಡಿ. ಈ ಉಪಕಾರ ನೀವು ಮಾಡಿದರೆ ನನ್ನ ಮಿತ್ರರು ಯಾವಜ್ಜೀವವೂ ನಿಮಗೆ ಋಣಿಗಳಾಗಿರುತ್ತಾರೆ."

"ಇತರರ ಮುಖವೆಂದರೆ ಯೋಗಿನಿಯವರು ಮುಮ್ಮಲ ಮರುಗುತ್ತಾರೆ ರತನ್‌ಲಾಲ್‌ಜೀ. ಪ್ರಾಯಶಃ ಅವರು ನನ್ನ ಪ್ರಾರ್ಥನೆ ನಿರಾಕರಿಸುವುದಿಲ್ಲ."

ರತನ್‌ಲಾಲನ ಮನಸ್ಸಿಗೆ ಸಮಾಧಾನವಾಯಿತು.

ಆದರೆ ವಾಸು ಮನಸ್ಸು ಅಲ್ಲಕಲ್ಲೋಲವಾಯಿತು. ರಾಮಸ್ವಾಮಿಯನ್ನು ಕರೆದು ಅವನಿಗೆ ರತನ್‌ಲಾಲನ ಸೂಚನೆಯನ್ನು ವಿವರಿಸಿ,

"ಏನು ಮಾಡೋದು ರಾಮು. ಒಳ್ಳೆಯ ಪರೀಕ್ಷಾಕಾಲ ಬಂದು ಬಿಟ್ಟಿತಲ್ಲಾ."

"ಯೋಚನೆ ಮಾಡಬೇಕಾದ ವಿಷಯವಪ್ಪಾ ಇದು."

"ನನಗೆ ಬಗೆಹರಿಯದಿರುವ ಹೊತ್ತಿಗೇ ನಿನ್ನ ಕೇಳಿದ್ದು."

"ಔಷಧಗಳು ಮಾಡದಿರುವ ಕೆಲಸ, ಕೆಲವು ವೇಳೆ ನಂಬಿಕೆ ಮಾಡಬಲ್ಲುದು ವಾಸು."

"ನಿಜ. ಆದರೆ ಏನಾದರೂ ಹೆಚ್ಚುಕಡಿಮೆಯಾದರೆ ನಮ್ಮ ಪಾಡು ನಾಯಿಪಾಡಾಗುತ್ತದೆ."

"ಆಕೆಗೆ ಎಷ್ಟು ದಿವಸಗಳಿಂದ ಕಾಹಿಲೆಯಂತೆ."

"ಎಂಟು ಹತ್ತು ವರ್ಷಗಳಿಂದ."

"ಹತ್ತುವರ್ಷ ಕಾಹಿಲೆ ನರಳಿದ ಪ್ರಾಣ ಸದ್ಯಕ್ಕೆ ಪ್ರಾಣ ಒಪ್ಪಿಸುವುದಿಲ್ಲವೆಂಬುದಂತೂ ಖಂಡಿತ. ಇನ್ನೂ ಒಂದೆರಡು ವರ್ಷವಾದರೂ ಜೀವ ಎಳೆಯುತ್ತದೆ. ಆದರೆ ಈ ರೋಗಿಯನ್ನು ಬದುಕಿಸುತ್ತೇವೆಂಬ ಮಾತು ಸುಳ್ಳು. ಧನ್ವಂತರಿ ತನ್ನ ಆಯಸ್ಸನ್ನೇ ಬರೆದುಕೊಟ್ಟರೂ ಈ ಜೀವ ಉಳಿಯುವುದಿಲ್ಲ."

"ಈ ಪುಣ್ಯಾತ್ಗಿತ್ತಿ ಸಾವು – ಬದುಕಿನ ಮೇಲೆ ನಮ್ಮ ಸಾವು – ಬದುಕು ಅವಲಂಬಿಸುವ ಹಾಗಾಯಿತಲ್ಲಾ."

"ಏನಾಯಿತು ?"

"ಏನೂ ಇಲ್ಲ. ರತನ್‌ಲಾಲ್ ಈಕೆಯನ್ನು ನಾವು ಗುಣಪಡಿಸಲು ಸಾಧ್ಯ ಎಂದು ನಿರ್ಧರಿಸಿದ್ದಾನೆ. ಸಾಧ್ಯವಿಲ್ಲವೆಂದರೆ ಸೋಲನ್ನೊಪ್ಪಿಕೊಂಡಹಾಗಾಗುತ್ತದೆ; ಸಾಧ್ಯವಿದೆಯೆಂದು ಒಪ್ಪಿಕೊಂಡರೆ ಪ್ರಾಣಿಹತ್ಯೆ ಮಾಡಿದಂತಾಗುತ್ತದೆ."

"ನೋಡು ವಾಸು. ಪ್ರಮಿಳಾಳ ಸಹವಾಸದಲ್ಲಿ – ಪೂಜೆ ಪುರಸ್ಕಾರಗಳ ಪ್ರಭಾವದಿಂದ ಈಕೆಗೆ ಸ್ವಲ್ಪ ಗುಣಮುಖವಾಗಬಹುದು. ವೈದ್ಯ ಮಾಡಲಾಗದ ಪವಾಡವನ್ನು ನಂಬಿಕೆ ಮಾಡುತ್ತದೆ."

"ಹೇಗೂ ಸಮುದ್ರದ ದಡದಲ್ಲಿ ನಿಂತಿದ್ದೇವೆ. ಇಳಿದೇ ನೋಡುವ ಎಂದು ಹೇಳುವೆಯೇನು ?"

"ಹುಟ್ಟಾ ಈಜುಗಾರನಾದ ನಿನಗೆ ನಾನು ಹೇಳಿಕೊಡಬೇಕಾದದ್ದು ಏನಿದೆ. ಮೀನಿಗೆ ಯಾರು ಈಜು ಹೇಳಿಕೊಡಬೇಕು."

ರಾಮಸ್ವಾಮಿಯ ವಿಶ್ವಾಸದ ಮಾತು ವಾಸು ಮನಸ್ಸಿಗೆ ಸ್ವಲ್ಪ ಧೈರ್ಯವನ್ನಿತ್ತರೂ, ಅಳುಕನ್ನು ಪೂರ್ಣವಾಗಿ ತೊಡೆದು ಹಾಕಲಾಗಲಿಲ್ಲ. ಅಂದೆಲ್ಲಾ ಅವನಿಗೆ ಅದೇ ಚಿಂತೆಯಾಯಿತು.

ರಾತ್ರಿ ಹಾಲು ಚೆಲ್ಲಿದಂತೆ ಬೆಳದಿಂಗಳು ಹಬ್ಬಿತ್ತು. ಬಂಗಲೆಯ ಕಾಪೌಂಡಿನಲ್ಲಿದ್ದ ವಿಶಾಲ, ನೀಳ ವೃಕ್ಷಗಳ ಮಧ್ಯೆ ಬೆಳದಿಂಗಳು ಹಣಿಕಿಹಾಕಿ ನೆಲದ ಮೇಲೆ ಬಗೆಬಗೆಯ ಆಕಾರಗಳನ್ನು ಮೂಡಿದ್ದವು. ನಿಸರ್ಗ ರಮ್ಯವೂ ಶಾಂತವೂ ಆಗಿತ್ತು. ಸುಶಾಂತಳಾಗಿದ್ದ ಪ್ರಮಿಳಾ ರೇಡಿಯೋದಲ್ಲಿ ಬರುತ್ತಿದ್ದ 'ಮಾರು ಬಿಹಾಗ್' ರಾಗಕ್ಕೆ ತನ್ನ ದನಿಸೇರಿಸಿ ಮೃದುವಾಗಿ ಕುರುಕುತ್ತಿದ್ದಳು. ವಾಸು ಬಂದು ವೆರಾಂಡದಲ್ಲಿದ್ದ ಆರಾಮಾಸನದ ಮೇಲೆ ಕುಳಿತದ್ದು ಅವಳ ಕಣ್ಣಿಗೆ ಬೀಳಲೇ ಇಲ್ಲ.

ಸ್ವಲ್ಪಹೊತ್ತು ಕಳೆಯಿತು. ವಾಸು ಸಿಗರೇಟ್ ಹಚ್ಚಲು, ಪ್ರಮಿಳಾ ರೇಡಿಯೋ ನಿಲ್ಲಿಸಿ ಹೊರಗೆದ್ದು ಬಂದು

"ಯಾವಾಗ ಬಂದಿರಿ ?" ಎಂದಳು

"ಸ್ವಲ್ಪ ಹೊತ್ತಾಯಿತು.?

"ಇಲ್ಲೇಕೆ ಕುಳಿತಿರಿ. ಒಳಗೆ ಬರಬಾರದಾಗಿತ್ತೇ ?"

"ಏನೋ ಯೋಚಿಸುತ್ತಿದ್ದೆ."

"ಏನು ಯೋಚನೆ – ನನಗೆ ಹೇಳಬಾರದುದೇನು ?"

"ನಿನಗೆ ಹೇಳಬಾರದುದು ಯಾವದೂ ಇಲ್ಲ."

"ಇವತ್ತು ಮಧ್ಯಾಹ್ನದಿಂದ ಏನೋ ಒಂದು ಬಗೆಯಾಗಿರುವಿರಿ. ಚಿಂತೆಯೇನು ಹೇಳಿ"

ಎಂದು ಕುರ್ಚಿಯ ಕೈಮೇಲೆ ಕುಳಿತು ವಾಸುವಿನ ಮೊಗಕ್ಕೆ ಮೊಗ ವಿಟ್ಟಳು. ಬೆಳದಿಂಗಳು ಪ್ರಮಿಳೆಯ ಮುಖದ ಮೇಲೆ ಚೆಲ್ಲಾಟವಾಡಿತು. ಆವಳ ಸಹಜ ಸುಂದರ ರೂಪಕ್ಕೆ ಬೆಳದಿಂಗಳು ಕುಂದಣವಿಕ್ಕಿತು. ವಾಸು ಆವಳ ಮುಖವನ್ನು ಕೈಯಲ್ಲಿ ಹಿಡಿದು ಮತ್ತೆ ಮತ್ತೆ ಚುಂಬಿಸಿದ. ಪ್ರಮಿಳಾ ಮೆಲ್ಲನೆ ಸರಿದು ವಾಸು ತೊಡೆಯ ಮೇಲೆ ಕುಳಿತು ಅವನ ಗಲ್ಲಹಿಡಿದು

"ಈಗಲಾದರೂ ಹೇಳಿ – ಏನು ಚಿಂತೆ."

"ರತನ್‌ಲಾಲ್ ನಿನ್ನ ಪರೀಕ್ಷೆ ಒದಗಿಸಿದ್ದಾನೆ."

"ನನ್ನ ಪರೀಕ್ಷೆ!"

ವಾಸು ಬೊಂಬಾಯಿವಾಲನ ಪತ್ನಿಯ ಕಾಹಿಲೆಯ ಸಮಾಚಾರವನ್ನು ಪ್ರಮಿಳೆಗೆ ಹೇಳಿದ. ಪ್ರಮಿಳೆಯ ಮುಖವೂ ಗಂಭೀರವಾಯಿತು.

"ಇದು ಪರೀಕ್ಷೆಯೇ ದಿಟ – ದೇವರೇ ನಮ್ಮನ್ನು ಪಾರುಮಾಡಬೇಕು."

"ಏನು ಮಾಡೋಣ ಪ್ರಮಿ."

"ನಾನೇನು ಹೇಳಲಿ. ನೀವು ಏನು ಮಾಡೆಂದರೂ ಮಾಡಲು ಸಿದ್ಧಳಾಗಿದ್ದೇನೆ."

"ನನ್ನ ಬುದ್ಧಿಗೆ ಸಿಡಿಲುಬಡಿದಂತಾಗಿದೆ."

"ವೃಥಾ ಹೋಚಿಸಿ ಏನು ಪ್ರಯೋಜನ. ಆಕೆಯನ್ನು ಒಮ್ಮೆ ಇಲ್ಲಿಗೆ ಬರಮಾಡಿ. ಆಕೆಯ ಸ್ಥಿತಿಗತಿ ನೋಡಿದ ಮೇಲೆ ಮುಂದಿನ ಮಾರ್ಗ ತಾನೇ ಭಾಸವಾಗುತ್ತದೆ."

"ರಾಮುಸ್ವಾಮಿ ಹೇಳಿದಂತೆ ಫೇತ್ ಕ್ಯೂರ್ (faith cure) ಒಂದೇ ನಮಗಿರುವ ಹಾದಿ. ಆಕೆಯಲ್ಲಿ ನೀನು ಅನ್ಯಾದೃಶ ನಂಬಿಕೆ, ಭಕ್ತಿ, ಗೌರವ ಹುಟ್ಟಿಸಬೇಕು."

"ದೇವರಿದ್ದಾನೆ – ನೀವು ಆಕೆಯನ್ನು ಬರಮಾಡಿ."

"ನಿನ್ನ ಧೈರ್ಯ ನಿಜವಾಗಿ ನನ್ನ ಅಧೈರ್ಯವನ್ನು ಹೋಗಲಾಡಿಸಿತು."

"ಹೋಗಲಾಡಿಸಿತೇ ?—ಬೆಳದಿಂಗಳು ನೋಡಿ ಹೇಗಿದೆ."

"ಆ ಬೆಳದಿಂಗಳಲ್ಲೇನಿದೆ ಪ್ರಮಿಾ – ನಿತ್ಯ, ಶಾಶ್ವತ ಬೆಳದಿಂಗಳು ನಿನ್ನ ಮುಖದ ಮೇಲೆ ಸದಾ ಮೂಡಿರುವಾಗ."

"ಬಿನ್ನಾಣದ ಮಾತು."

"ಇಲ್ಲ ರಾಣಿ – ಇದು ಸತ್ಯ. ನನ್ನ ಜೀವನವೆಲ್ಲಾ ಅಸತ್ಯದ ತವರು. ಅದರಲ್ಲಿ ಏನೂ ಹುರುಳಿಲ್ಲ. ಆದರೆ ನನ್ನ ಪ್ರೇಮ ಮಾತ್ರ ಆ ಪಂಕ್ತಿಗೆ ಸೇರಿದುದಲ್ಲ – ಅದೊಂದೇ ಸತ್ಯ."

"ನಾನು ಬಲ್ಲೆ ದೊರೆ. ಎಂದಿಗೂ ನಿಮ್ಮ ಪ್ರೇಮವನ್ನು ನಾನು ಶಂಕಿಸುವುದಿಲ್ಲ."

"ಪ್ರಮಿಾ – ಯಾವಾಗಲಾದರೂ ನಿನ್ನ ಮನಸ್ಸಿಗೆ ವಿಷಾದವಾಗುವುದೇ ?"

"ಏತಕ್ಕೆ ?"

"ನನ್ನ ಜತೆ ಇಂಥ ಬಾಳು ಬಾಳಬೇಕಲ್ಲಾ ಎಂದು."

"ಆ ಮಾತು ಯಾವಾಗಲಾದರೂ ನಾನು ಆಡಿರುವೆನೇ ?"

"ಇಲ್ಲ. ಹಾಗೆ ಭಾವಿಸಿಯೂ ಇಲ್ಲವೇ ?"

"ಸತ್ಯವಾಗಿಯೂ ಭಾವಿಸಿಲ್ಲ. ನಾನು ಎಷ್ಟು ಸುಖಿಯಾಗಿರುವೆನೆಂಬುದನ್ನು ನೀವು ಕಾಣಿರಿ. ನನ್ನ ಜೀವನ ತುಂಬುಜೀವನ. ಏತರಿಂದ ಬಲ್ಲಿರಾ – ನಿಮ್ಮ ಅಚಲ ಪ್ರೇಮದಿಂದ."

"ಪ್ರಮಿಾ – ಪ್ರಮಿಾ "

ಎಂದು ವಾಸು ಅವಳನ್ನು ಭರದಿಂದ ಅಪ್ಪಿದ. ಅಂದಿನ ರಾತ್ರಿಯ ಬೆಳದಿಂಗಳು ಕಾಡಬೆಳದಿಂಗಳಾಗಲಿಲ್ಲ.

೭

ಮಾರನೆಯ ಬೆಳಿಗ್ಗೆ ವಾಸು ಇಚ್ಛೆಯಂತೆ ರಾಮಸ್ವಾಮಿ ಫೋನ್ ಮಾಡಿ 'ಸಂಜೆಗೆ ಬೊಂಬಾಯಿವಾಲಾ ಅವರನ್ನೂ ಅವರ ಪತ್ನಿಯನ್ನೂ

ಕರೆದುಕೊಂಡು ಬನ್ನಿ. ಯೋಗಿನಿ ಅಮ್ಮನವರು ದರ್ಶನ ಕೊಡಲು ಒಪ್ಪಿದ್ದಾರೆ' ಎಂದು ರತನ್‌ಲಾಲನಿಗೆ ತಿಳಿಸಿದ.

ಅದೇ ಸ್ನಾನಮುಗಿಸಿ ಮಡಿಯುಡುಪು ಧರಿಸುತ್ತಿದ್ದ ವಾಸು ಬಳಿಗೆ ಪ್ರಮೀಳಾ ಬಂದಳು. ಅವಳನ್ನು ಆಪಾದಮಸ್ತಕ ದಿಟ್ಟಿಸಿ ನೋಡಿ ವಾಸು

"ಸ್ನಾನವಾಯಿತೇ ?" ಎಂದು ಕೇಳಿದ.

"ನೋಡಿ – ಹೇಗನ್ನಿಸುತ್ತದೆ.''

"ಇದೇನು ಸಿಸ್ತಾಗಿಬಿಟ್ಟದ್ದೀರಿ."

"ಪೇಟೆ ಕಡೆ ಹೋಗಬೇಕಾದ ಸ್ವಲ್ಪ ಕೆಲಸವಿತ್ತು."

"ಈಗ ಹೋದರೆ ಎಷ್ಟು ಹೊತ್ತಿಗೆ ಹಿಂದಿರುಗುವೆ.''

"ನೀವು ಹಿಂದಕ್ಕೆ ಕರೆದುಕೊಂಡು ಬಂದಾಗ.''

"ನಾನೂ ಜತೆಯಲ್ಲಿ ಬರಬೇಕೆಂದು ಸೂಚನೆಯೋ ?''

"ಬರಬಾರದೇನು ?''

"ಜೇಡವೆಂದವರು ಯಾರು ? ಏನು ಕೆಲಸವಿದೆ ಹೇಳು.''

''ಸ್ವಂತಕ್ಕಾಗಿ ನಾನು ಸ್ವಲ್ಪ ಹಣ ಖರ್ಚುಮಾಡಿಕೊಳ್ಳಬಹುದೇ ?''

"ಈ ಪ್ರಶ್ನೆಕೇಳಿ ನನ್ನ ಅಪಮಾನ ಮಾಡಬೇಕೆಂದು ಉದ್ದೇಶ ವೇನು ?"

"ಛೆ! ಛೆ! ಎಂಥ ಮಾತಾಡುವಿರಿ !"

"ನನ್ನ ಹಣ ಯಾವದು – ನಿನ್ನ ಹಣಯಾವದು – ಇನ್ನೂ ನನಗೆ ಅರ್ಥವಾಗಿಲ್ಲ."

"ಹೋಗಲಿಬಿಡಿ. ಬೇಗ ಸಿದ್ಧರಾಗಿ."

"ಏನು ತೆಗೆದುಕೊಳ್ಳಬೇಕು ಪ್ರಮೀ."

"ನನಗೆ ಒಂದು ಒಳ್ಳೆಯ ಹಾರ್ಮೋನಿಯಂ ಬೇಕು – ಒಂದು ಒಳ್ಳೆಯ ಮೀರಜ್ ತಂಬೂರಿ ಬೇಕು. ಸ್ವಲ್ಪ ಬಟ್ಟೆಬರೆ ಬೇಕು. ನನ್ನ ಸಂಗೀತವೆಲ್ಲಾ ನುಸಿಹಿಡಿದು ಹೋಗುತ್ತಿದೆ. ಸುಮ್ಮನೆ ಕುಳಿತುಕೊಂಡು ಕಾಲವನ್ನೇಕೆ ವ್ಯರ್ಥವಾಗಿ ವ್ಯಯಮಾಡಲಿ. ಕಲಿತ ಸಂಗೀತವನ್ನು ಅಭ್ಯಾಸ ಮಾಡಿಕೊಳ್ಳುತ್ತೇನೆ."

''ತುಂಬ ಸಂತೋಷ. ಇನ್ನೊಂದು ವಿಷಯ ಪ್ರಮೀ........''

"ಹೇಳಿ. ಅದೇನು ?"

"ಶಂಕರನ ಪುಸ್ತಕ ನೋಡಿದೆಯಾ ?"

"ಹಾಳೆ ಮಗುಚಿ ಹಾಕಿದೆ. ಸರಿಯಾಗಿ ಓದಿಲ್ಲ. ವೇದ, ಉಪನಿಷತ್ತು ನನಗೇನು ಅರ್ಥವಾಗುತ್ತದೆ."

"ನಾಳೆಯಿಂದ ನೀನು ಶಂಕರನ ಜತೆ ಕುಳಿತುಕೊಂಡು ಒಂದೆರಡು ಗಂಟೆ ಕಾಲ ಅಭ್ಯಾಸಮಾಡಬೇಕು.

"ವೇದ, ಉಪನಿಷತ್ತುಗಳನ್ನೇ !"

"ವೇದ, ಉಪನಿಷತ್ತು, ಭಗವದ್ಗೀತೆ, ಬೈಬಲ್ಲು ಇತ್ಯಾದಿ ಇತ್ಯಾದಿ."

"ಅಬ್ಬಾ ! ನನ್ನ ಗತಿ. ಇಷ್ಟೊಂದು ತತ್ವಜ್ಞಾನ ನನ್ನ ಬುರುಡೆಯೊಳಗೆ ಇಳಿಯುವುದು ಹೇಗೆ ?"

"ನಿನಗೇನೂ ಕಷ್ಟವಾಗುವುದಿಲ್ಲ ಪ್ರಮಿಾ. ಬೆರಳು ತೋರಿಸಿದರೆ ಹಸ್ತ ನುಂಗುವ ಜಾಣ್ಮೆ ನಿನ್ನಲ್ಲಿದೆ."

"ನಾನಷ್ಟು ಕೆಟ್ಟವಳೇ ?"

"ಕೆಟ್ಟವಳು ಎಂದು ನಾನೆಂದನೇ ? ಜಾಣೆ ಎಂದು ಹೇಳಿದೆ."

"ಇನ್ನೂ ಹತ್ತಿಪ್ಪತ್ತು ವರ್ಷ ಕಳೆದಮೇಲೆ ನಾನು ವೇದಾಭ್ಯಾಸ ಮಾಡಿದರೆ ಒಳ್ಳೆಯದಲ್ಲವೇ ?"

"ನಿನ್ನ ಅಭ್ಯಾಸ ಆಗಬೇಕಾಗಿರುವುದು ನಿನ್ನ ಸಲುವಾಗಿ ಅಲ್ಲ ಪ್ರಮಿಾ – ಲೋಕದ ಸಲುವಾಗಿ – ನಿನ್ನ ಭಕ್ತರ ಸಲುವಾಗಿ. ಇಂದೇ ಸಂಜೆ ಇಬ್ಬರು ಭಕ್ತರು ಬರುತ್ತಾರೆ."

"ಯಾರವರು."

"ಶ್ರೀ ಮತ್ತು ಶ್ರೀಮತಿ ಬೊಂಬಾಯಿವಾಲಾ."

"ನೀವೇ ಹೇಳಿದ್ದೀರಲ್ಲಾ – ಬಂದದ್ದೆಲ್ಲಾ ಬರಲಿ ಭಗವಂತನ ದಯೆಯೊಂದಿರಲಿ."

"ಪ್ರಮಿಾ – ಬೊಂಬಾಯಿ ಬೇಸರಬಂತು. ಊರಿನ ಕಡೆ ಮನಸ್ಸು ಎಳೆಯುತ್ತಿದೆ."

"ಆ ಊರೇನು, ಈ ಊರೇನು, ನಮಗೇನು – ಎಲ್ಲಿದ್ದರೂ ಒಂದೇ."

"ನಿಜ. ಊರಿಗಿಂತ ಇಲ್ಲಿ ಸುಖವಾಗಿಯೇ ಇದೆ. ಆದರೆ ಇಲ್ಲಿ

ಪಾನನಿರೋಧ ನಮ್ಮ ಸುಖದ ಅಸ್ತಿಭಾರವನ್ನೇ ಬಲವಾಗಿ ಹಿಡಿದು ಅಳ್ಳಾಡಿಸಿದೆ.''

''ಈಗ ನೀವು ಧರ್ಮಪ್ರಸಾರಕರು – ಇನ್‌ಷ್ಯೂರೆನ್ಸ್ ಕಂಪೆನಿಯ ಏಜಂಟರಲ್ಲ!"

''ಹೌದು! ದೇವಿಯ ಉಪಾಸಕ. ನೈವೇದ್ಯ ಅರ್ಪಿಸದೆ ದೇವಿಪೂಜೆ ಮಾಡುತ್ತಿದ್ದೇನಲ್ಲಾ ಎಂದು ಮನಸ್ಸಿಗೆ ವಿಷಾದ.''

''ನಿಮ್ಮ ದೇವಿ ನೈವೇದ್ಯವಿಲ್ಲದೆ ಇರಬಲ್ಲಳು.''

''ಭಕ್ತನಿಗೆ ಹಿಂಸೆಯಾಗಬಾರದೆಂದು ಅವಳು ಆ ಮಹಾತ್ಯಾಗಕ್ಕೆ ಸಿದ್ಧಳಾಗಿದ್ದಾಳೆ.''

''ದೇವಿಯನ್ನು ನಿರ್ಮಾಣಮಾಡಿದ ಭಕ್ತ, ತನಗೆ ಪ್ರಿಯವಾದುದನ್ನೇ ತನ್ನ ದೇವಿಗೂ ಅರ್ಪಿಸಿ, ಅಭ್ಯಾಸಮಾಡಿಸುತ್ತ ಬಂದಿದ್ದಾನೆ.''

''ಹುಲುಮನುಜನಿಗೆ ಅಷ್ಟು ಶಕ್ತಿಯೆಲ್ಲಿಂದ ಬಂತು? ಅದೂ ದೇವಿಯ ಪ್ರೇರೇಪಣೆಯೇ?''

''ಭಕ್ತನ ವಾಗ್ವೈಖರಿಗೆ ಬೆರಗಾಗಿ ದೇವಿ ಅರೆಮೂಕಳಾಗಿದ್ದಾಳೆ.''

''ಸರ್ವಜ್ಞೆಯಾದ ದೇವಿ ಸಾಮಾನ್ಯ ಭಕ್ತನ ಹಾಗೆ ಮಾತನಾಡ ಬೇಕಾದ ಕಾರಣವೇ ಇಲ್ಲ. ಅವಳ ಕುಡಿನೋಟದಲ್ಲಿ ವಾಚಾಳಿಯ ಮಾತು ಮೀರಿಸುವ ಮೊನಚಿದೆ.''

''ನಿಮ್ಮ ಮಾತೇ ಮಾತು ದೊರೆ. ಏಳಿ – ಹೊತ್ತಾಯಿತು. ಪೇಟೆ ಕೆಲಸ ಮುಗಿಸಿಕೊಂಡು ಬರೋಣ''

ಎಂದು ವಾಸುವನ್ನು ಹೊರಡಿಸಿದಳು.

ಗಿರಗಾಮಿನಲ್ಲಿದ್ದ ಪ್ರಸಿದ್ಧ ಸಂಗೀತವಾದ್ಯ ನಿರ್ಮಾತೃ ಪಠಾನ್‌ವಾಲಾ ನವಸಾರಿವಾಲನ ಅಂಗಡಿಗೆ ವಾಸು ಕಾರು ಬಿಡಿಸಿದ.

ಪಠಾನ್‌ವಾಲಾ ತನ್ನ ಉದ್ದನೆಯ ಗಡ್ಡ ನೀವಿಕೊಳ್ಳುತ್ತಾ ಬಂದು, ಕಾರಿನಿಂದ ಇಳಿದವರಿಗೆ ಸುಸ್ವಾಗತ ಬಯಸಿದ. ಪ್ರಮೀಳೆ 'ಒಳ್ಳೆಯ ತಂಬೂರಿ ಬೇಕು' ಎಂದು ಕೇಳಿದಳು

ಪಠಾನ್‌ವಾಲಾ ನಾಲ್ಕು ತಂಬೂರಿಗಳನ್ನು ತೆಗೆದು ಅವಳ ಪರಾಂಬರಿಕೆಗೆ ಮುಂದಿಟ್ಟ. ಪ್ರಮೀಳಾ ಅವುಗಳ ಮೇಲೆ ಕೈಆಡಿಸಿ

"ಇವಕ್ಕೂ ಒಳ್ಳೆಯವಿಲ್ಲವೇ ?" ಎಂದು ಕೇಳಿದಳು.

ಪಠಾನ್‌ವಾಲಾ ಮತ್ತೆ ನಾಲ್ಕು ತಂಬೂರಿಗಳನ್ನು ತೆಗೆದು ಅವಳ ಮುಂದಿಟ್ಟ. ಪ್ರಮಿಳಾ ಅವುಗಳನ್ನು ಪರೀಕ್ಷಿಸಿ ಒಂದು ತಂಬೂರಿ ಆರಿಸಿದಳು. ಆರಿಸಿದ ತಂಬೂರಿಯನ್ನು ಶ್ರುತಿ ಮಾಡಿ ನುಡಿಸುತ್ತಿರುವಂತೆ ಅವಳ ಕಣ್ಣು ಒಂದು ಮೂಲೆಯಲ್ಲಿ ಗೌಸು ಹೊದೆದುಕೊಂಡು ನಿಂತಿದ್ದ ವಾದ್ಯದ ಕಡೆ ಹೋಯಿತು.

"ಅದೇನು ?" ಎಂದು ಕೇಳಿದಳು.

"ಅದೂ ಒಂದು ತಂಬೂರಿ."

"ನಾನು ನೋಡಬಹುದೇ ?"

"ಅದು ಹಳೆಯ ವಾದ್ಯ."

"ನನಗೆ ಹಳೆಯ ವಾದ್ಯವೇ ಬೇಕು."

ಪಠಾನ್‌ವಾಲಾ ಮೆಲ್ಲನೆ ತಂಬೂರಿಯನ್ನು ಕೈಗೆತ್ತಿಕೊಂಡು ಅದರ ಮೇಲೆ ಸಂಗ್ರಹವಾಗಿದ್ದ ಧೂಳುಕೊಡವಿ, ತಂಬೂರಿಯನ್ನು ತನ್ನ ಷರಟಿನಿಂದ ಒರಸಿ, ಪ್ರಮಿಳೆಯ ಕೈಗಿತ್ತ.

ಪ್ರಮಿಳೆ ತಂಬೂರಿಯನ್ನು ಶ್ರುತಿ ಮಾಡಿ ನೋಡಿದಳು. ಅದರ ಝೇಂಕಾರ ಮಿಕ್ಕೆಲ್ಲ ತಂಬೂರಿಗಳನ್ನು ಕಡೆಗಾಣಿಸುತ್ತಿತು. ಒಂದೇ ತಂಬೂರಿಯಲ್ಲಿ ನಾಲ್ಕು ವಾದ್ಯಗಳ ನಾದಸೌರಭ ತುಂಬಿ ತುಳುಕುತ್ತಿತ್ತು.

"ಇಂಥ ವಾದ್ಯವಿಟ್ಟುಕೊಂಡು ಯಾವಯಾವದೋ ತೋರಿಸಿದರಲ್ಲಾ."

"ಎಲ್ಲರೂ ಅಗ್ಗದ ವಾದ್ಯಗಳನ್ನು ಬೇಡುತ್ತಾರೆ. ಅದಕ್ಕಾಗಿ ತೋರಿಸಲಿಲ್ಲ. ಅಲ್ಲದೆ ಈ ತಂಬೂರಿ ಮಾರಲು ನಾನು ಅಷ್ಟು ಉತ್ಸುಕನಾಗಿಲ್ಲ."

"ಏಕೆ ? ಇವಕ್ಕೇನಾದರೂ ಇತಿಹಾಸವಿದೆಯೇ ?"

"ಭಾರಿ ಇತಿಹಾಸವಿದೆ. ಖಾನ್‌ಸಾಹೇಬ್ ಅಮಿರ್‌ಖಾನರ ಹೆಸರು ಕೇಳಿರುವಿರಾ ?"

"ಕೇಳಿರಬಹುದು. ನೆನಪಿಲ್ಲ."

"ನೀವು ಯಾವ ಊರಿನವರು."

"ಮೈಸೂರಿನವರು."

"ನಿಮ್ಮ ಬಿಡಾರಂ ಕೃಷ್ಣಪ್ಪನವರನ್ನು ಕೇಳಿ ನೋಡಿ. ಅವರು ಒಂದೆರಡು ಬಾರಿ ಖಾನ್ ಸಾಹೇಬರ ಬೈಟಕ್ಕಿಗೆ ಬಂದಿದ್ದರು."

"ಈ ತಂಬೂರಿ ಅವರದೇ ?"

"ಹೌದು. ತಲೆತಲಾಂತರದಿಂದ ಬಂದದ್ದು."

"ಈಗ ಮಾರಾಟಕ್ಕೇತಕ್ಕೆ ಬಂತು ?"

"ಅವರ ಮಗನಿಗೂ ಸಂಗೀತಕ್ಕೂ ಬದ್ಧದ್ವೇಷ. ತಂದೆ ತೀರಿಕೊಂಡ ಮೇಲೆ ಮಗ ಮಾರಿಬಿಟ್ಟ."

"ಇದರ ಬೆಲೆಯೆಷ್ಟು ?"

"ನಾನು ಬಹಳ ಕೊಟ್ಟಿದ್ದೇನೆ."

"ಹೇಳಿ – ಚಿಂತೆಯಿಲ್ಲ."

"ಆರು ನೂರು ರೂಪಾಯಿಗಳು."

ಪ್ರಮೀಳೆ ವಾಸುವಿನ ಮುಖ ನೋಡಿದಳು.

"ಬೇಕಾದರೆ ತೆಗೆದುಕೊಂಡು ಬಿಡು"

ಎಂದು ವಾಸು ಹೇಳಿದ.

"ಸ್ವಲ್ಪ ವ್ಯಾಪಾರ ಮಾಡಿ ನೋಡಿ – ಬೆಲೆ ಸ್ವಲ್ಪ ಕಡಿಮೆಯಾಗಬಹುದು."

ವಾಸು ಪಠಾನ್‌ವಾಲನನ್ನು ಕುರಿತು

"ನೋಡಿ – ಬೆಲೆ ಸರಿಯಾಗಿ ಹೇಳಿ."

"ಜನಾಬ್, ಬೆಲೆ ದೃಷ್ಟಿಯಿಂದ ತಂಬೂರಿ ಖರೀದಿ ಹೆಚ್ಚು. ಆದರೆ ನಾನು ಖಾನ್ ಸಾಹೇಬರ ಮಗನಿಗೆ ಅಷ್ಟು ಹಣಕೊಟ್ಟಿದ್ದೇನೆ. ನಿಮಗೆ ನೂರೈವತ್ತು, ಇನ್ನೂರು ರೂಪಾಯಿಯಲ್ಲಿ ಹೊಸ ತಂಬೂರಿ ಕೊಡಬಲ್ಲೆ – ಆದರೆ ಇದರ ಧಾರಣೆ ಇಳಿಸಲು ಸಾಧ್ಯವಿಲ್ಲ. ಇಂಥ ವಾದ್ಯ ನಿಮಗೆ ಇನ್ನೆಲ್ಲಿಯೂ ಸಿಕ್ಕುವುದಿಲ್ಲ."

"ಅವನು ಹೇಳುವಷ್ಟು ವಾದ್ಯ ಚೆನ್ನಾಗಿದೆಯೇ ಪ್ರಮೀ."

"ಅದರ ಗುಣದ ಬಗ್ಗೆ ಏನೂ ಸಂದೇಹವಿಲ್ಲ."

ವಾಸು ಮರುಮಾತನಾಡದೆ ಕಿಸೆಯಿಂದ ಹಣ ತೆಗೆದು ನೂರು ರೂಪಾಯಿನ ಆರುನೋಟುಗಳನ್ನು ಪಠಾನ್‌ವಾಲನ ಕೈಯಲ್ಲಿತ್ತ.

ಪಠಾನ್‌ವಾಲಾ ತಂಬೂರಿಯನ್ನು ಮತ್ತೊಮ್ಮೆ ಚೆನ್ನಾಗಿ ಒರಸಿ, ಗೌಸು ಹಾಕಿ ಕಾರಿಗೆ ಕಳಿಸಿಕೊಟ್ಟ.

ನಿರೀಕ್ಷಣೆಗೂ ಮಿಗಿಲಾದ ವಾದ್ಯ ಸಿಕ್ಕಿದ್ದಕ್ಕೆ ಪ್ರಮಿಳಾ ಸಂತೋಷ ಭರಿತಳಾದಳು.

ಗಿರಗಾಮಿನಲ್ಲಿದ್ದ ಶಾಂತಾರಾಮ್ ಬಖಲೆ ಅಂಗಡಿಗೆ ಹೋಗಿ ಒಂದು ಡಬ್ಬಲ್ ರೀಡ್ ಹಾರ್ಮೋನಿಯಂ ವ್ಯಾಪಾರವಾಡಿದ್ದೂ ಆಯಿತು. ಅದಕ್ಕೆ ನಾಲ್ಕು ನೂರೈವತ್ತು ರೂಪಾಯಿಗಳನ್ನು ಕೊಟ್ಟು ವಾಸು

"ಇನ್ನೇನು ಬೇಕಾಗಿತ್ತು"

ಎಂದು ಕೇಳಿದ.

ಪ್ರಮಿಳಾ ಅವನನ್ನು ಒಂದು ಜವಳಿ ಅಂಗಡಿಗೆ ಕರೆದೊಯ್ದು ತನಗೆ ಬೇಕಾದ ನಾಲ್ಕಾರು ಸೀರೆಗಳು, ಕುಪ್ಪಸದ ಅರಿವೆ ತುಂಡುಗಳನ್ನು ಖರೀದಿ ಮಾಡಿದಳು.

ಪೇಟೆ ವ್ಯಾಪಾರ ಮುಗಿಸಿಕೊಂಡು ಪ್ರಮಿಳಾ ವಾಸು ಮನೆ ಸೇರುವ ಹೊತ್ತಿಗೆ ಹನ್ನೆರಡು ಗಂಟೆ ಹೊಡೆದುಹೋಗಿತ್ತು. ಅವರು ಬಂದಕೂಡಲೆ ರಾಮಸ್ವಾಮಿ ಹೇಳಿದ

"ರತನ್‌ಲಾಲ್ ಫೋನ್ ಮಾಡಿದ್ದ. ಬೊಂಬಾಯಿವಾಲಾ, ಅವರ ಪತ್ನಿಯನ್ನು ಸಂಜೆ ಆರುಗಂಟೆಗೆ ಕರೆದುಕೊಂಡು ಬರುತ್ತಾನಂತೆ."

ಊಟ ಮುಗಿಸಿದ ಮೇಲೆ ಪ್ರಮಿಳಾ, ವಾಸು ಅವರಿಗೆ ವಿಶ್ರಾಂತಿ ಪಡೆಯಲು ವೇಳೆ ದೊರೆಯಲಿಲ್ಲ. ದೇವಮಂದಿರವನ್ನು ಅಲಂಕರಿಸಿ, ದೇವರುಗಳ ಮೇಲೆ ಬಗೆಬಗೆಯ ಹೂಗಳನ್ನಿಟ್ಟರು. ತೊಟ್ಟಿಯ ಒಂದೆಡೆ ತಂಬೂರಿ ಶ್ರುತಿಗೊಂಡು ನಿಂತಿತು. ಇನ್ನೊಂದೆಡೆ ಹಾರ್ಮೋನಿಯಂ.

"ನನಗೆ ಗುಡ್‌ಲಕ್ ಹೇಳುವುದಿಲ್ಲವೇ"

ಎಂದು ಪ್ರಮಿಳಾ ಕೇಳಿದಳು.

"ಗುಡ್‌ಲಕ್ ನಿನ್ನ ರಕ್ತಗತವಾಗಿರುವಾಗ ಹೊಸದಾಗಿ ನಾನು ಹೇಳಬೇಕಾದುದೇನು"

ಎಂದು ವಾಸು ಉತ್ತರಿಸಿದ.

"ಇಂದಿನ ಪರೀಕ್ಷೆಯಲ್ಲಿ ನಾನು ಗೆಲ್ಲಲೇಬೇಕೆಂದು ನಿರ್ಧರಿಸಿದ್ದೇನೆ."

"ನೀನು ಗೆಲ್ಲಬೇಕು ಪ್ರಮಿಳಾ. ಇಲ್ಲದಿದ್ದರೆ ನಮ್ಮ ಗತಿ!"

"ನಾನು ಯಾವ ಸೀರೆ ಉಟ್ಟುಕೊಳ್ಳಲಿ."

"ಸೀರೆ ಕುಪ್ಪಸದ ವಿಷಯ ನನಗೇನು ಗೊತ್ತು ಪ್ರಮಿಳಾ. ಯಾವದಾದರೂ ಸೌಮ್ಯವಾದ ಸೀರೆ ಉಟ್ಟುಕೋ. ಜರತಾರಿ ಅಂಚು ಸೆರಗಿನದು ಬೇಡ."

"ಹಳದಿ ಜಾರ್ಜೆಟ್ ಆಗಬಹುದು ತಾನೇ?"

"ಅದು ಸರ್ವೋತ್ಕೃಷ್ಟ – ನೀನು ಬೊಂಬಾಯಿವಾಲಾ ಅವರ ಪತ್ನಿಯ ಹತ್ತಿರ ಹೆಚ್ಚು ಮಾತಿಗೆ ಹೋಗಬೇಡ. ಮಾತೆಲ್ಲಾ ಅವರೇ ಆಡಲಿ. ಮಧ್ಯೆ ಮಧ್ಯೆ ನೀನು ಒಂದೊಂದು ಮಾತನಾಡು. ಅವುಗಳಿಗೆ ವಿಶೇಷಾರ್ಥ ಕಲ್ಪಿಸುವ ಕೆಲಸ ನನಗಿರಲಿ. ಆದಷ್ಟು ವೈರಾಗ್ಯದ ಸಂಬಂಧದ ಮಾತೇ ಆಡು."

"ಇವತ್ತು ನೀವೇ ನೋಡಿ ನಿರ್ಧರಿಸುವಂತೆ. ನಿಮ್ಮ ಪ್ರಮಿಳಾ ಯೋಗ್ಯತೆಯನ್ನು............"

"ಅದನ್ನು ನಾನು ಹೊಸದಾಗಿ ನಿರ್ಧರಿಸಬೇಕೇ?"

ವಾಸು ಇತರರಿಗೆ ಎಷ್ಟು ಧೈರ್ಯ ಹೇಳುತ್ತಿದ್ದನೋ ಅಷ್ಟು ಅಧೈರ್ಯ ತಾನೇ ತಳೆದಿದ್ದ. ಆದರೆ ಅದರ ಸುಳುವನ್ನು ಯಾರಿಗೂ ಬಿಟ್ಟುಕೊಡಲಿಲ್ಲ.

ಆರು ಗಂಟೆಗೆ ಸರಿಯಾಗಿ ಬೊಂಬಾಯಿವಾಲಾ ಅವರ ಕಾರು ಬಂದು ವಾಸು ಮನೆಯ ಪೋರ್ಟಿಕೋದಲ್ಲಿ ನಿಂತಿತು. ವಾಸು, ರಾಮಸ್ವಾಮಿ ಅವರಿಗೆ ಸ್ವಾಗತ ಬಯಸಿದರು. ಕಾರಿನಿಂದ ರತನ್‌ಲಾಲ್, ಬೊಂಬಾಯಿವಾಲಾ, ಅವರ ಪತ್ನಿ ಶಿರೀನ್ ಇಳಿದರು. ಪರಸ್ಪರ ಪರಿಚಯವಾಯಿತು.

ಬೊಂಬಾಯಿವಾಲಾ ಅವರ ವಯಸ್ಸು ಐವತ್ತೈದಕ್ಕೆ ಮಿಕ್ಕಿರಲಾರದು. ಆದರೆ ಮುಖದ ಮೇಲೆ ಸುಕ್ಕು ಕಾಣಿಸಿಕೊಂಡಿತ್ತು. ಅವರ ನೀಳವಾದ ದೇಹವನ್ನು, ಅವರು ಧರಿಸಿದ್ದ ಪಾರ್ಸಿ ಕಾಲರ್ ಕೋಟು, ಇಜಾರ ಮತ್ತಷ್ಟು ನೀಳಮಾಡಿತ್ತು. ಅವರ ಮುಖದ ಮೇಲೆ ದುಃಖ, ಚಿಂತೆ ತಾಂಡವವಾಡುತ್ತಿದ್ದವು.

ಬೊಂಬಾಯಿವಾಲಾ ಅವರೇ ಹೆಂಡತಿಯನ್ನು ಮೆಲ್ಲನೆ ಕೆಳಗಿಳಿಸಿದರು. ಲಕ್ಷಾಧೀಶ್ವರನ ಪತ್ನಿಯಾಗಿದ್ದರೂ ಶಿರೀನ್, 'ಬಿಚ್ಚೋಲೆ ಗೌರಮ್ಮ,' ಇದ್ದ

ಹಾಗಿದ್ದರು. ಅವರ ಮುಖ ಬತ್ತಿಹೋಗಿ ರಕ್ತರಹಿತವಾಗಿ ನೀರಸವಾಗಿತ್ತು. ದೇಹದಲ್ಲಿ ಎಲುಬು, ಚರ್ಮಗಳಷ್ಟೇ ಉಳಿದಿದ್ದವು. ಷಿರೀನ್ ಕೈತೋಳು ಮುಚ್ಚುವ ಜಾಕೀಟು, ಸೀರೆ ಧರಿಸಿದ್ದರು. ಅವರ ಸಾಮ್ಯ ಪ್ರಕೃತಿಗೆ ಸಾಮ್ಯವೇಷ ಗಾಂಭೀರ್ಯ ಹಾಗೂ ನೈಮಲ್ಯವನ್ನಿತ್ತಿದ್ದವು.

ರಾಮಸ್ವಾಮಿಯ ರೂಮಿನಲ್ಲಿ ಎಲ್ಲರೂ ಕುಳಿತ ಮೇಲೆ ವಾಸು ಶಂಕರನನ್ನು ಕರೆತಂದು ಪರಿಚಯ ಮಾಡಿಸಿದ. ರತನ್‌ಲಾಲ್ ಆಶ್ಚರ್ಯದಿಂದ

"ಇವರು ಉಪನಿಷತ್ತುಗಳ ಮೇಲೆ ಒಂದು ದಿವ್ಯಗ್ರಂಥ ಬರೆದಿದ್ದಾರೆ."

ಎಂದು ಬೊಂಬಾಯಿವಾಲನಿಗೆ ಹೇಳಿದ.

ಬೊಂಬಾಯಿವಾಲಾ ಶಿಷ್ಟಸಂಪ್ರದಾಯದಂತೆ ಮುಗುಳ್ನಗೆ ಬೀರಿ

"ಬಹಳ ಸಂತೋಷ. ನಿಮ್ಮ ಗ್ರಂಥ ನನಗೆ ಯಾವಾಗಲಾದರೂ ತೋರಿಸಿ"

ಎಂದು ಹೇಳಿದರು.

ಯೋಗಿನಿ ಅಮ್ಮನವರನ್ನು ಕಾಣುವ ಕುತೂಹಲ ಅವರೆಲ್ಲರ ಮುಖದಲ್ಲಿ ಎದ್ದು ಕಾಣುತ್ತಿತ್ತು. ಅದನ್ನು ಗ್ರಹಿಸಿದ ವಾಸು

"ಶ್ರೀ ಮಾತೆಯವರ ಸಮಯ ನೋಡಿ ಬರುತ್ತೇನೆ"

ಎಂದು ಹೇಳಿ ಮಹಡಿಯ ಮೇಲೆ ಹೋದ.

ಪ್ರಮಿಳೆ ತನ್ನ ಅಲಂಕಾರ ಮುಗಿಸಿ ಅತಿಥಿಗಳನ್ನು ಸ್ವಾಗತಿಸಲು ಸಿದ್ಧಳಾಗಿದ್ದಳು. ವಾಸು ಅವಳಿಗೆ ಒಂದೆರಡು ಸೂಚನೆಗಳನ್ನಿತ್ತು, ತೊಟ್ಟಿಯಲ್ಲಿ ಒಂದು ಸಣ್ಣ ದೀಪ ಹಚ್ಚಿ ಕೆಳಗಿಳಿದು ಬಂದು

"ಬರಬಹುದು" ಎಂದು ಹೇಳಿದ.

ಬೊಂಬಾಯಿವಾಲಾ ಬಹಳ ಪ್ರಯಾಸದಿಂದ ಹೆಂಡತಿಯನ್ನು ಮಹಡಿ ಹತ್ತಿಸಬೇಕಾಯಿತು. ಷಿರೀನ್ ಮಹಡಿಯೇರಿ ಬಂದು ಮೇಲುಸಿರು ಬಿಡುತ್ತ ಕುಳಿತರು.

ಐದಾರು ನಿಮಿಷಗಳು ಕಳೆದವು,

ವಾಸು, ಯೋಗಿನಿ ಅಮ್ಮನವರ ಬಾಗಿಲು ಬಳಿ ಹೋಗಿ

"ಅತಿಥಿಗಳು ತಮ್ಮ ದಾರಿ ನೋಡುತ್ತಿದ್ದಾರೆ"

ಎಂದು ಹೇಳಿದ. ಪೂಜಾ ಮಂದಿರದ ಬಾಗಿಲು ತೆರೆಯಲ್ಪಟ್ಟಿತು. ಯೋಗಿನಿ ಅಮ್ಮನವರು ಹೊರ ಹೊರಟರು. ಕೊಟ್ಟಿಯಲ್ಲಿದ್ದವರೆಲ್ಲರೂ ಎದ್ದು ನಿಂತು ಅವರಿಗೆ ಗೌರವ ಸಲ್ಲಿಸಿದರು.

ಯೋಗಿನಿ ಅಮ್ಮನವರು ಸೋಫಾದ ಮೇಲೆ ಕುಳಿತು ಎಲ್ಲರನ್ನೂ ಕೂಡಲು ಹೇಳಿದರು. ಕಿರುದೀವಿಗೆಯ ಮಂದಪ್ರಕಾಶದಲ್ಲಿ ಯೋಗಿನಿ ಅಮ್ಮನವರ ಆತ್ಮಪ್ರಭೆ ಮತ್ತಷ್ಟು ಪ್ರಕಾಶನಾಗಿ ಬೆಳಗತೊಡಗಿತ್ತು.

ವಾಸು ಎದ್ದು ನಿಂತು ಎಲ್ಲರ ಪರಿಚಯ ಮಾಡಿಕೊಟ್ಟು

"ಈ ತಾಯಿ ತಮ್ಮಲ್ಲಿ ಏನೋ ನಿವೇದಿಸಿಕೊಳ್ಳಬೇಕೆಂದು ಬಂದಿದ್ದಾರೆ"

ಎಂದು ಹೇಳಿದ. ಯೋಗಿನಿ ಅಮ್ಮನವರು ಷಿರೀನರ ಕಡೆ ತಿರುಗಿ ಮಂದಹಾಸ ಬೀರಿದರು. ಬೊಂಬಾಯಿವಾಲಾ ಮುಂದುವರಿದು ತಮ್ಮ ಹೆಂಡತಿಯ ಕಾಹಿಲೆಯ ಕಥೆಯನ್ನು ಸಂಕ್ಷೇಪವಾಗಿ ವರ್ಣಿಸಿದರು.

ಯೋಗಿನಿ ಅಮ್ಮನವರು ಗಂಭೀರವಾಗಿ ಎಲ್ಲವನ್ನೂ ಲಾಲಿಸಿ ಷಿರೀನರ ಕಡೆ ತಿರುಗಿ

"ದೇಹ ತುಂಬ ನಿಶ್ಶಕ್ತವಾಗಿದೆಯೇ ಮಗಳೇ."

ಎಂದು ಕೇಳಿದರು.

ಷಿರೀನ್ ಏನೋ ಹೇಳಬೇಕೆಂದು ಪ್ರಯತ್ನಿಸುತ್ತ ನಾಲ್ಕು ಜನ ರಿದ್ದುದನ್ನು ಕಂಡು ಸುಮ್ಮನಾದರು. ವಾಸು ಅವರ ಸೂಚನೆಯನ್ನು ತಿಳಿದು ಕೊಂಡು

"ನಾವು ಕೆಳಗೆ ಕೂಡೋಣ."

ಎಂದು ಎಲ್ಲರನ್ನೂ ಮತ್ತೆ ರಾಮಸ್ವಾಮಿಯ ರೂಮಿಗೆ ಕರೆತಂದು ಕೂಡಿಸಿದ.

ಯೋಗಿನಿ ಅಮ್ಮನವರು ಷಿರೀನರನ್ನು ಹತ್ತಿರ ಕರೆದು ಪಕ್ಕದಲ್ಲಿ ಕೂಡಿಸಿಕೊಂಡು

"ಈಗ ಯಾರೂ ಇಲ್ಲ. ನಿಸ್ಸಂಕೋಚನಾಗಿ ಎಲ್ಲವನ್ನೂ ತಿಳಿಸು ಮಗಳೇ"

ಎಂದು ಹೇಳಿದರು.

ಷಿರೀನ್ ಯೋಗಿನಿ ಅಮ್ಮನವರನ್ನೊಮ್ಮೆ ಕಣ್ತುಂಬ ನೋಡಿ

"ನನಗೆ ಕ್ಷಯವೆಂದು ಡಾಕ್ಟರು ಸಾರಿದರು. ಯಜಮಾನರು ಎಲ್ಲಾ ಚಿಕಿತ್ಸೆ ಮಾಡಿಸಿದರು. ದೇಶ ವಿದೇಶಗಳ ಡಾಕ್ಟರುಗಳೆಲ್ಲಾ ಚಿಕಿತ್ಸೆ ಮಾಡಿದರು. ಏನೂ ಗುಣಕಾಣಲಿಲ್ಲ. ಹತ್ತು ವರ್ಷಗಳಿಂದ ಒಂದೇ ಸಮನೆ ನರಳುತ್ತಿದ್ದೇನೆ ಈ ಹಾಳು ದೇಹಕ್ಕೆ ಸಾವೂ ಬರಲೊಲ್ಲದು."

"ನಿಮಗೆ ಮಕ್ಕಳೆಷ್ಟು ಮಂದಿ ?"

"ಮಕ್ಕಳೇ ಇಲ್ಲ."

"ಮಕ್ಕಳಿಲ್ಲವೆಂಬ ದುಃಖವೇ ನಿಮ್ಮನ್ನು ಈ ಸ್ಥಿತಿಗೆ ತಂದಿತಲ್ಲವೇ ?"

"ಹೌದು. ನಾನು ಆರೋಗ್ಯವಾಗಿ ದೃಢಕಾಯಳಾಗಿದ್ದೆ. ಮಕ್ಕಳಿಲ್ಲ ವೆಂಬ ಕೊರಗು ಹತ್ತಿತು. ಗರ್ಭಕೋಶದ ದೋಷವೆಂದು ಆಪರೇಷನ್ ಮಾಡಿಸಿಕೊಂಡೆ."

"ಆಪರೇಷನ್ ಆದಮೇಲೆ ಕಾಹಿಲೆ ಪ್ರಬಲಿಸಿತೇ ?"

"ಹಾಗೇ ಇರಬಹುದು. ನನಗೆ ಸರಿಯಾಗಿ ಜ್ಞಾಪಕವಿಲ್ಲ."

"ಈಗ ಮೈಯಲ್ಲಿ ಏನಾಗಿದೆ."

"ಇದ್ದಕ್ಕಿದ್ದಂತೆ ಜ್ವರ ಬರುತ್ತದೆ. ಜ್ವರ ಬಂದು ನಿಂತ ಮೇಲೆ ನಾನು ಇದ್ದವಳೂ ಅಲ್ಲ-ಸತ್ತವಳೂ ಅಲ್ಲ. ಯಜಮಾನರ ದುಃಖ ನೋಡಿ ನನ್ನ ಕರುಳು ಕಿತ್ತುಬರುತ್ತದೆ."

"ಡಾಕ್ಟರು ಏನು ಹೇಳಿದರು."

"ಗುಣವಾಗುವುದು ಸಾಧ್ಯವಿಲ್ಲವೆಂದು ಹೇಳಿದರು."

"ಡಾಕ್ಟರು ನಿಮ್ಮ ದೇಹಕ್ಕೆ ಚಿಕಿತ್ಸೆ ಮಾಡಿದರು. ಅವರಿಗೆ ನಿಮ್ಮ ಕಾಹಿಲೆಯ ರಹಸ್ಯ ಅರ್ಥವಾಗಲಿಲ್ಲ."

"ಸತ್ಯವಾದ ಮಾತು."

"ನಿಮ್ಮ ದೇಹಕ್ಕೆ ಈಗ ಚಿಕಿತ್ಸೆಬೇಕಿಲ್ಲ; ಮನಸ್ಸಿಗೆ ಬೇಕಾಗಿದೆ. ನಿಮ್ಮ ಮನಸ್ಸಿಗೆ ಶಾಂತಿದೊರೆತರೆ ಕಾಹಿಲೆ ತಾನಾಗಿ ಗುಣವಾಗುತ್ತದೆ."

"ಶಾಂತಿ ದೊರಕಿಸುವುದು ಹೇಗೆ ?"

"ಭಗವತಿ ರಾಜರಾಜೇಶ್ವರಿಯನ್ನು ಮರೆಹೋಗುವುದರಿಂದ."

"ನನಗೆ ನೀವು ಉಪದೇಶಮಾಡಿ ಅನುಗ್ರಹಿಸಬೇಕು."

"ದೇವರಲ್ಲಿ ನಿಮಗೆ ನಂಬಿಕೆಯಿದೆಯೇ ?"

"ಇದೆ – ಅಚಲವಾದ ನಂಬಿಕೆಯಿದೆ."

"ದೇವರ ಕೃಪೆಯಿಲ್ಲದೆ ಯಾವದೂ ಸಾಧ್ಯವಿಲ್ಲವೆಂಬುದನ್ನು ಒಪ್ಪುವಿರಾ ?"

"ಒಪ್ಪುತ್ತೇನೆ – ನನ್ನ ಜೀವನವೇ ನನ್ನ ಕಣ್ಣು ಬಿಡಿಸಿದೆ."

"ನಿಮ್ಮ ದೇಹ ನಿಮ್ಮದಲ್ಲ – ಭಗವತಿಯದೆಂದು ನಂಬಿ. ಆಕೆ ತನ್ನ ದೇಹಕ್ಕೆ ಕಾಹಿಲೆಯನ್ನಾದರೂ ಕೊಡಲಿ – ಆರೋಗ್ಯವನ್ನಾದರೂ ಕೊಡಲಿ."

"ಆ ಭಾವನೆ ಬೆಳಸಿಕೊಳ್ಳುವುದು ಹೇಗೆ ?"

"ಸದಾ ಭಗವಧ್ಯಾನದಿಂದ. ಈಗ ನೀವು ಕಾಹಿಲೆ ಬಗ್ಗೆ ಬಹಳ ಯೋಚನೆಮಾಡುತ್ತಿಲ್ಲವೇ ?"

"ಮಾಡುತ್ತಿದ್ದೇನೆ."

"ಆ ಯೋಚನೆಯನ್ನು ಭಗವತಿಯ ಕಡೆ ತಿರುಗಿಸಿ. ಆಕೆಯ ನಿರ್ಮಲ ತೇಜಸ್ಸು, ಅಸದೃಶ ಸೌಂದರ್ಯ, ಸಾಗರಸದೃಶ ಗಾಂಭೀರ್ಯ ಗಳನ್ನು ಕುರಿತು ಯೋಚನೆಮಾಡಿ. ಎದ್ದು ನನ್ನ ಜತೆ ಬನ್ನಿ"

ಎಂದು ಯೋಗಿನಿ ಅಮ್ಮನವರು ಷಿರೀನರನ್ನು ತಮ್ಮ ಪೂಜಾ ಮಂದಿರಕ್ಕೆ ಕರೆದೊಯ್ದು ದೇವರ ಮುಂದೆ ಕೂಡಿಸಿದರು.

ಹೂವಿನಿಂದಲಂಕೃತಳಾಗಿ ಕುಂಕುಮಲೇಪನಗೊಂಡು ಕುಳಿತಿದ್ದ ದೇವಿಯ ಮೂರ್ತಿಯನ್ನು ಷಿರೀನ್ ಎವೆಯಿಕ್ಕದೆ ನೋಡಿದರು. ಅವರ ಮನಸ್ಸಿಗೆ ಅಪೂರ್ವ ಸಂತೋಷವಾಯಿತು.

ಯೋಗಿನಿ ಅಮ್ಮನವರು ಕೈಗೆ ತಂಬೂರಿ ತೆಗೆದುಕೊಂಡು ಒಂದು ದೇವರ ನಾಮ ಹಾಡಿದರು. ಷಿರೀನ್ ಮೈಮರೆತು ಕುಳಿತುಬಿಟ್ಟರು. ಯೋಗಿನಿ ಮತ್ತೊಂದು ಹಾಡು ಹಾಡಿದರು. ಭಕ್ತಿರಸ ಯೋಗಿನಿ ಅಮ್ಮ ನವರ ಗಾನದಿಂದ ಚಿಮ್ಮುತ್ತಿತ್ತು. ಅವರ ಮೃದುಮಧುರ ಶಾರೀರ, ನಯವಾದ ಸ್ವರವಿಸ್ತಾರ, ಸುಸ್ಪಷ್ಟ ಸಾಹಿತ್ಯನಿರೂಪಣೆ ಷಿರೀನರನ್ನು ತದೇಕಚಿತ್ತ ರನ್ನಾಗಿ ಮಾಡಿತು.

ಹೊತ್ತು ಹೋದುದು ಯಾರಿಗೂ ಲಕ್ಷ್ಯವೇ ಇರಲಿಲ್ಲ.

ವಾಸು ಬಂದು ಮಂದಿರ ಬಾಗಿಲ ಹೊರಗಡೆ ನಿಂತ. ಯೋಗಿನಿ ಅಮ್ಮನವರು ಕಣ್ಣುಬಿಟ್ಟು ನೋಡಿ

"ಏಳು. ಮಗಳೇ, ಹೊತ್ತಾಯಿತು"

ಎಂದರು. ಷಿರೀನ್ ಎದ್ದು ತುಂಬಿದ ಹೃದಯದಿಂದ ಯೋಗಿನಿ ಅಮ್ಮನವರ ಪಾದಗಳ ಮೇಲೆ ಬಿದ್ದರು. ಯೋಗಿನಿ ಅಮ್ಮನವರು ತಮ್ಮ ಮಗಳನ್ನು ಬಿಗಿದಪ್ಪಿ ಆಶೀರ್ವದಿಸಿದರು.

ಷಿರೀನ್ ಹೊರಡುವ ಮುನ್ನ, ದೇವರ ಮೇಲಿದ್ದ ಕುಂಕುಮ ತೆಗೆದು ಅವರ ಹಣೆಗೆ ಹಚ್ಚಿ, ಕೈಗೆ ಫಲ ಪುಷ್ಪ ಕೊಟ್ಟರು.

"ಪುನಃ ನಾನು ಯಾವಾಗ ಬರಬಹುದು."

ಎಂದು ಷಿರೀನ್ ಕೇಳಿದರು.

"ಯಾವಾಗ ಬೇಕಾದರೂ ಬರಬಹುದು. ಆದರೆ ಬರುವ ಮುನ್ನ ಹೇಳಿಕಳಿಸಿದರೆ ನನ್ನ ಪೂಜೆ ಮುಗಿಸಿಕೊಂಡಿರುತ್ತೇನೆ."

ಷಿರೀನರನ್ನು ವಾಸು ಕೆಳಗಡೆ ಕರೆದುಕೊಂಡುಬಂದು ಬಿಟ್ಟ.

ಷಿರೀನರ ಕಣ್ಣಲ್ಲಿ ಉಕ್ಕುತ್ತಿದ್ದ ಆನಂದವನ್ನು ಬೊಂಬಾಯಿವಾಲಾ ಗಮನಿಸಿದರು. ಗಂಡನನ್ನು ನೋಡಿದ ಕೂಡಲೆ ಷಿರೀನ್

"ಶ್ರೀಮಾತೆ ಸಾಕ್ಷಾತ್ ರಾಜರಾಜೇಶ್ವರಿಯ ಅವತಾರ"

ಎಂದರು.

ತನ್ನ ಪ್ರಯತ್ನ ಸಫಲವಾದುದಕ್ಕೆ ರತನ್‌ಲಾಲ್ ಪರಮ ಸಂತೋಷ ಗೊಂಡ.

ವಾಸು, ಅತಿಥಿಗಳನ್ನು ಕಾರಿಗೆ ಕಳಿಸಿಕೊಟ್ಟು ಧಾವಿಸಿ ಮಹಡಿಯೇರಿ ಬಂದವನೇ ಪ್ರಮಿಳೆಯನ್ನು ಭರದಿಂದಪ್ಪಿ

"ಡಾರ್ಲಿಂಗ್ (Darling) — You are a Miracle (ನೀನೊಂದು ಪವಾಡ)"

ಎಂದು ಹೇಳಿದ.

ಪ್ರಮಿಳೆಯ ಹೃತ್ಕಮಲ, ಇನಿಯನ ನಲ್ನಾತಿಗೆ ಅರಳಿತು.

ಪ್ರಮಿಳೆ ತನಗೂ, ಷಿರೀನರಿಗೂ ಆದ ಸಂಭಾಷಣೆಯನ್ನು ವಿವರಿಸಿದಳು. ವಾಸು ಆಶ್ಚರ್ಯದಿಂದ

"ಆಕೆಗೆ ಗುಣವಾಗುವುದರಲ್ಲಿ ಸಂದೇಹವಿಲ್ಲ" ಎಂದ.

"ಗುಣವಾಗುವುದೇನು – ಗುಣವಾಗಿಯೇ ಬಿಟ್ಟಿದೆ. ಆಕೆ ಮೆಟ್ಟಿಲು ಇಳಿದುದನ್ನು ನೀವು ಗಮನಿಸಲಿಲ್ಲವೇ ?"

"ನಿನ್ನನ್ನು ಕಂಡರೆ ಈಗ ನನಗೇ ಭಯವಾಗುತ್ತದೆ ಪ್ರಮಿಾ."

"ಏಕೆ ಹಾಗೆನ್ನುವಿರಿ ?"

"ನಿನ್ನಲ್ಲಿ ಯಾವದೋ ಅದ್ಭುತ ದೈವೀಶಕ್ತಿ ಇದೆಯೋ ಏನೋ ?"

"ಇದೆ – ಅದ್ಭುತಶಕ್ತಿ – ನಿಮ್ಮನ್ನು ಹೃತ್ಪೂರ್ವಕ ಪ್ರೇಮಿಸುವ ಶಕ್ತಿ ಇದೆ."

"ಷಿರೀನ್ ನಿನ್ನನ್ನು ಸಾಕ್ಷಾತ್ ರಾಜರಾಜೇಶ್ವರಿ ಎಂದು ನಂಬಿದ್ದಾರೆ."

"ನಂಬಲಿ ಒಳ್ಳೆಯದು. ನಂಬಿಕೆಯೇ ಎಲ್ಲಕ್ಕೂ ಮೂಲವೆಂದು ನೀವೇ ಹೇಳುತ್ತಿದ್ದಿರಲ್ಲಾ. ಅವರ ನಂಬಿಕೆಯೇ ಅವರಿಗೆ ದೇಹಾರೋಗ್ಯ ವನ್ನು ತಂದುಕೊಡುತ್ತದೆ – ಅದಿರಲಿ – ಕೆಳಗೇನಾಯಿತು ? ಬೊಂಬಾಯಿ ವಾಲಾ ಏನು ತನಿಖೆ ನಡೆಸಿದರು."

"ಶಂಕರನ ಪರೀಕ್ಷೆಯಾಯಿತು. ಬೊಂಬಾಯಿವಾಲಾ ಕೇವಲ ದುಡ್ಡಿನ ಡಬ್ಬಿಯಲ್ಲ – ಚೆನ್ನಾಗಿ ಓದಿಕೊಂಡಿದ್ದಾನೆ. ರಸೆಲ್, ವೈಟ್‌ಹೆಡ್, ಎಲ್. ಪಿ. ಜ್ಯಾಕ್ಸ್, ಜೋಡ್, ರಾಧಾಕೃಷ್ಣನ್ ಇವರ ಗ್ರಂಥಗಳಿಂದಲೂ ಪ್ರಾಚೀನ ತತ್ತ್ವಜ್ಞಾನಿಗಳಾದ ಸ್ಪೈನೋಜ್, ಕ್ಯಾಂಟ್, ಲಾಕ್, ಹಿಜಿಲ್, ಪ್ಲೇಟೋ ಇವರ ಗ್ರಂಥಗಳಿಂದಲೂ ಧಾರಾಳವಾಗಿ ಉದ್ಧರಿಸುತ್ತಾನೆ."

"ಅವರದ್ದು ಇರಲಿ. ನಿಮ್ಮ ಸ್ನೇಹಿತರ ವಿಷಯ ಹೇಳಿ."

"ಅವನು ಸೇರಾದರೆ ಶಂಕರ ಸವ್ವಾಸೇರು. ಬೊಂಬಾಯಿವಾಲಾ ಒಂದು ಪಂಕ್ತಿ ಹೇಳಿದರೆ, ಶಂಕರ ಒಂದು ಪುಟ ಹೇಳುತ್ತಿದ್ದ. ಶಂಕರನ ಪಾಂಡಿತ್ಯಕ್ಕೆ ಬೊಂಬಾಯಿವಾಲಾ ಬೆರಗಾಗಿ ಹೋದ. ಕೆಲವು ಅಧ್ಯಾಯ 'ಉಪನಿಷತ್ ಸಾರ' ಗ್ರಂಥವನ್ನು ನೋಡಿ – ತನ್ನ ಕಂಪೆನಿಯಿಂದಲೇ ಪ್ರಕಟಿಸುವುದಾಗಿ ಭರವಸೆಯಿತ್ತ."

"ಇವತ್ತು ನಾವು ಎದ್ದಹೊತ್ತು ಒಳ್ಳೆಯದು."

"ಬೆಳಿಗ್ಗೆ ನಾನು ಯಾರ ಮುಖ ನೋಡಿದೆ ಹೇಳು."

“ನಾನು ಕಾಣೆ.”

“‘ನನ್ನ ಮುಖ’ ಎಂದು ಹೇಳಿಕೊಳ್ಳಲು ಅಷ್ಟು ನಾಚಿಕೆಯೇ ?”

ಎಂದು ಪ್ರಮೀಳೆಯ ಮುಖಾರವಿಂದವನ್ನು ಭೃಂಗದಂತೆ ಹೊಕ್ಕ.

ಪ್ರಮೀಳೆ ವಾಸು ತೊಡೆಯಮೇಲೆ ತಲೆಯಿಟ್ಟುಕೊಂಡು ಮಲಗಿದ್ದಳು. ಅವಳ ಮುಖಕ್ಕೆ ಮನಸ್ಸಿನ ಶಾಂತಿ, ತೃಪ್ತಿ, ಆನಂದ ಹೆಚ್ಚಿನ ಕಳೆಕೊಟ್ಟಿತ್ತು. ವಾಸು ಅವಿಶ್ರಾಂತವಾಗಿ ಅವಳ ಮುಂಗುರುಳು, ತುಟಿ, ಮುಖ ನೇವರಿಸುತ್ತಿದ್ದ.

“ಪ್ರಮೀ – ನೀನು ಇಷ್ಟು ಚೆನ್ನಾಗಿ ಹಾಡಬಲ್ಲೆಯೆಂದು ನನಗೆ ಗೊತ್ತಿರಲಿಲ್ಲ.”

“ಹಿತ್ತಲಗಿಡ ಮದ್ದಲ್ಲ.”

“ಹಾಗಲ್ಲ. ನಾನು ಕೇಳುವ ಅವಕಾಶವೆಲ್ಲಿ ಸಿಕ್ಕಿತ್ತು ಹೇಳು.”

“ಅನೇಕ ತಿಂಗಳು ನನ್ನ ಪಾಠವನ್ನು ಆಲಿಸಿದಿರಿ.”

“ಪಾಠದ ಸಂಗೀತ ಒಂದು ಸಂಗೀತವೇ ?”

“ಇವತ್ತು ಕೇಳುವುದಕ್ಕೆ ತಾನೆ ಅವಕಾಶವೆಲ್ಲಿಂದ ಆಯ್ತು. ನೀವೆಲ್ಲಾ ಮಾತನಾಡುತ್ತ ಕುಳಿತಿದ್ದಿರಲ್ಲವೇ ?”

“ಮಾತು ನಡೆದಿತ್ತು. ಶಂಕರ, ಜೊಂಬಾಯಿವಾಲರಿಗೆ ವಾಕ್ಯಾರ್ಥ ಆರಂಭವಾಯಿತು. ನಾನು ಚಿತ್ತಗೊಟ್ಟು ನಿನ್ನ ಸಂಗೀತ ಕೇಳುತ್ತಿದ್ದೆ. ಒಳ್ಳೆಯ ಸಮಯಕ್ಕೆ ತಂಬೂರಿಕೊಂಡ ಹಾಗಾಯಿತು.”

“ತಂಬೂರಿ ನೋಡಿದರೆ ಹಾಡಬೇಕೆನಿಸುತ್ತದೆ. ಅದರಲ್ಲಿ ನಾದ ಸಮುದ್ರವೇ ಅಡಗಿದೆ.”

“ನೀನು ಸಂಗೀತಜ್ಞಾನ ಬೆಳಸಿಕೊಳ್ಳಬೇಕೆಂದು ನನ್ನ ಇಚ್ಛೆ. ಅದರಿಂದ ಮುಂದೆ ಬಹಳ ಪ್ರಯೋಜನವಾಗುತ್ತದೆ.”

“ಕಛೇರಿ ಮಾಡುವಷ್ಟು ನಾನು ತಜ್ಞಳಲ್ಲ.”

“ನಾನು ಯೋಚನೆಮಾಡುತ್ತಿದ್ದುದು ಕಛೇರಿಯನ್ನಲ್ಲ – ಭಜನೆಯನ್ನು.”

“ಭಜನೆ !”

“ಹೌದು – ನೀನು ಪ್ರತಿ ಶುಕ್ರವಾರ ಭಜನೆಮಾಡಿದರೆ, ನಾಲ್ಕು ಜನ

ಬಂದು ಕೇಳುವುದಕ್ಕಾಗುತ್ತದೆ."

"ಬಹಳ ಜನಗಳ ಮುಂದೆ ಹಾಡಿ ನನಗೆ ರೂಢಿಯಿಲ್ಲ."

"ಬಹಳ ಜನಗಳು ಯಾರು ಇರುತ್ತಾರೆ. ನಾವೇ ಕೆಲವರು, ಬೊಂಬಾಯಿವಾಲಾ, ಷಿರೀನ್, ರತನ್‌ಲಾಲ್."

"ಗುಂಪು ಬೆಳೆಯುತ್ತ ಹೋಗುತ್ತದೆ."

"ಬೆಳೆಯಲಿ – ಆವೇಳೆಗೆ ನಿನ್ನ ಅನುಭವವೂ ಬೆಳೆದಿರುತ್ತದೆ."

"ಭಜನೆ ನಡೆಸಿ ನನಗೆ ಅಭ್ಯಾಸವಿಲ್ಲವಲ್ಲ."

"ಪಂಡರಾಪುರದಲ್ಲಿ ನೋಡಲಿಲ್ಲವೇ ? ಭಜನೆಯಲ್ಲಿ ಜನ ಮೈಮರೆಯುತ್ತಾರೆ. ನೀನು ಮೊದಲು ಕೆಲವು ದೇವರನಾಮ ಹಾಡು. ಕೊನೆಯಲ್ಲಿ 'ರಘುಪತಿ ರಾಘವ ರಾಜಾರಾಮ್' 'ವೈಷ್ಣವ ಜನತೋ' ಇದ್ದೇ ಇದೆ ಜನ ಹಾಡುವುದಕ್ಕೆ. ಮದ್ಯ, ಮಾನಿನಿಯರು ಹೇಗೋ ಹಾಗೆ ಧರ್ಮವೂ ಒಂದು ಅಮಲು. ಮಧ್ಯಪಾನ ಚಮಚದ ಪ್ರಮಾಣದಿಂದ ಆರಂಭವಾಗುತ್ತದೆ – ಬರಬರುತ್ತ ಅದು ಬಾಟಲಿ ಪ್ರಮಾಣಕ್ಕೆ ಏರುತ್ತದೆ – ಕೊನೆಗೆ ಪ್ರಮಾಣ ರಹಿತವಾಗುತ್ತದೆ. ಹಾಗೇ ಧರ್ಮವೂ ಕೂಡ. ಧರ್ಮ ಮದಿರೆ ಕುಡಿದವರ ಮತ್ತು ಇಳಿಯದಂತೆ ನಾವು ನೋಡಿಕೊಳ್ಳಬೇಕು. ನಾವು ನಡೆಸುತ್ತಿರುವುದು ಧರ್ಮದ ಮದ್ಯಗೃಹವೆಂಬುದನ್ನು ಮರೆಯಬೇಡ."

ವಾಸು ಪರಿಹಾಸ್ಯದಲ್ಲಿ ಆಡಿದ ಮಾತಿನೊಳಗೆ ಕಠೋರಸತ್ಯ ಅಡಕವಾಗಿತ್ತು. ಪ್ರಮೀಳೆ ಅವನ ಮಾತಿನ ಮರ್ಮವನ್ನರಿಯಲೆತ್ನಿಸಿದಳು.

ಅವಳ ಚಿತ್ರಫಲಕದ ಮೇಲೆ ಅಂದಿನ ಜೀವನ – ನಾಳಿನ ಜೀವನದ ಚಿತ್ರಗಳು, ಬಿಡಿಬಿಡಿಯಾಗಿ ಮೂಡಿದವು. 'ಇದರ ಪರ್ಯವಸಾನ ಹೇಗಾಗುತ್ತದೆ' ಎಂದು ಯೋಚಿಸುವಳು. ತನ್ನ ಬಾಳನ್ನೂ ಕುರಿತು ದೀರ್ಘವಾಗಿ ಆಳವಾಗಿ ಯೋಚಿಸುವಳು. 'ಸಮಾಜದ ಎಲ್ಲ ನಿಯಮ ನಿಬಂಧನೆಗಳನ್ನೂ ಉಲ್ಲಂಘಿಸಿ, ಅದೇ ಸಮಾಜದ ಉದ್ಧಾರಕ್ಕೆ ಹೊರಟಿರುವೆನಲ್ಲಾ' ಎಂದುಕೊಳ್ಳುವಳು. ಆದರೆ ಇದು ಅನಿವಾರ್ಯವಲ್ಲವೇ ? ಏನೋ – ಎಂದೋ – ಯಾವ ಕಾರಣಕ್ಕೋ ಚನ್ನಕೇಶವಯ್ಯನ ಕೈಹಿಡಿದುದಕ್ಕೆ ಅವನೊಂದಿಗೆ ಇಡಿಯ ಜೀವಮಾನ ಕಳೆಯಬೇಕಾಗಿತ್ತೇ ? ಇದರಿಂದ ಯಾರಿಗೆ ಸುಖ ? ಲೋಕದ ಕಣ್ಣಿಗೆ ನಾವು ಗಂಡ, ಹೆಂಡರು ನಿಜ. ಆದರೆ

ವಿರಸ ದಾಂಪತ್ಯ ಯಾರ ಬಾಳಿಗೆ ಸುಖ, ಶಾಂತಿಗಳನ್ನು ಒದಗಿಸಬಲ್ಲುದು. ಪುರೋಹಿತನ ಮಂತ್ರಗಳಿಂದ ದಾಂಪತ್ಯಕೂಡುತ್ತದೆಯೆಂದು ಭಾವಿಸುವುದು ಎಂಥ ಮೌಢ್ಯ? ಮನಸ್ಸಿಲ್ಲದ ಮೈತ್ರಿಗೂ ದೇಹವಿಕ್ರಯಕ್ಕೂ ಏನು ವ್ಯತ್ಯಾಸ?

'ಲೋಕದ ಕಣ್ಣಲ್ಲಿ ಇಂದು ನಾನು ಮಹಾಪರಾಧಿನಿ – ಕಳಂಕಿನಿ – ವ್ಯಭಿಚಾರಿಣಿ. ಲೋಕ ಹಾಕಿದ ಶೀಲದ ಗೆರೆಯನ್ನು ಅತಿಕ್ರಮಿಸಿದ್ದೇನೆ. ಅಗ್ನಿಸಾಕ್ಷ್ಯವಾಗಿ ವಿವಾಹವಾದ ಪತಿಯನ್ನು ತ್ಯಜಿಸಿ, ಬೇರೆಯೊಬ್ಬನ ಸಂಗಮಾಡಿದ್ದೇನೆ.

'ಆದರೆ ನಾನು ಕಳಂಕಿನಿಯೇ – ವ್ಯಭಿಚಾರಿಣಿಯೇ? ನನ್ನ ಚಿತ್ತವನ್ನು ಹಲವು ಕಡೆಗೆ ಹರಿಯಬಿಡಲಿಲ್ಲ; ಕಂಡ ಕಂಡವರ ಸಂಗ ಬಯಸಲಿಲ್ಲ. ನಾನು ಹೃತ್ಪೂರ್ವಕವಾಗಿ ಪ್ರೇಮಿಸಿದ್ದು ವಾಸುವನ್ನು. ಅವನನ್ನು ಕಂಡ ದಿನವೇ ಅವನಿಗೆ ನನ್ನ ಮನಸ್ಸನ್ನು – ನನ್ನ ಸರ್ವಸ್ವವನ್ನು ಧಾರೆಯೆರೆದು ಬಿಟ್ಟೆ.

'ವಾಸುವಿಗೆ ವಶವಾದ ಮನಸ್ಸನ್ನು ಹೊತ್ತು ಗಂಡನ ಆದರೋಪಚಾರ ಮಾಡಿದ್ದರೆ ಅದು ಶೀಲವಾಗುತ್ತಿತ್ತೇ?'

ಪ್ರಮೀಳಾ ವಾಸುವಿನ ತೊಡೆಬಿಟ್ಟೆದ್ದು ಕುಳಿತಳು. ಅವಳ ಮುಖದ ಮೇಲೆ ದುಗುಡ ಮೂಡಿತ್ತು. ವಾಸುವನ್ನು ದಿಟ್ಟಿಸಿ ನೋಡಿ

"ನಾನು ವ್ಯಭಿಚಾರಿಣಿಯೇ?"

"ಹೀಗೇಕೆ ಕೇಳುವೆ ಪ್ರಮೀ. ಏನಾಯಿತು?"

"ನಾನು ವ್ಯಭಿಚಾರಿಣಿಯೇ ಹೇಳಿ?"

"ನಾನು ವ್ಯಭಿಚಾರಿಯೇ ಹೇಳು?"

"ಇದು ಗಂಡಸರ ಜಗತ್ತು. ನಿಮ್ಮ ನಡೆವಳಿಕೆಯ ಮೇಲೆ ನ್ಯಾಯ ತೀರ್ಪು ಕೊಡುವ ಅಧಿಕಾರ ನಮಗಿಲ್ಲ."

"ನ್ಯಾಯವಾದ ನ್ಯಾಯತೀರ್ಪು ಕೊಡುವ ಅಧಿಕಾರ ಎಲ್ಲರಿಗೂ ಇದೆ."

"ಗಂಡನನ್ನು ಅಡವಿಪಾಲು ಮಾಡಿದಳೆಂದು ಜನ ನನ್ನನ್ನು ಹೀಗಳೆಯುತ್ತಾರೆಯೇ?"

"ಪ್ರಮೀ - ನಾವು ಲೋಕದ ದಾಸರಾಗಿಲ್ಲ, ಅದರ ಗುರುಗಳಾಗಿದ್ದೇವೆ."

"ದಾಸನಾಗಬಲ್ಲವನೇ ಗುರುವಾಗಬಲ್ಲ."

"ಸಾಮಾಜಿಕ ವ್ಯವಸ್ಥೆ ಕಾಲಕಾಲಕ್ಕೆ ಬದಲಾಯಿಸುತ್ತ ಹೋಗಬೇಕು. ಅದೇ ಜೀವಂತ ಸಮಾಜದ ಲಕ್ಷಣ. ಆದರೆ ನಮ್ಮ ಸಮಾಜ ಬೆಳೆಯುತ್ತಿಲ್ಲ. ಕೊಳಚೆ ನೀರಿನಂತೆ ನಿಂತಲ್ಲಿಯೇ ನಿಂತು ನಾರುತ್ತಿದೆ. ಹೆಣ್ಣನ್ನು ಅಜ್ಞಾನಾಂಧಕಾರದಲ್ಲಿ ಗಂಡು ಇಟ್ಟಿರುವ ತನಕ ಅವನ ಸರ್ವಾಧಿಕಾರ, ನಿರಂಕುಶಪ್ರಭುತ್ವ ನಿಷ್ಕಂಟಕವಾಗಿ ಸಾಗುತ್ತಿತ್ತು. ಆದರಿಂದು ಪರಿಸ್ಥಿತಿ ಬದಲಾಯಿಸಿದೆ. ವ್ಯಾಪಾರಕ್ಕೆ ನಮ್ಮ ದೇಶಕ್ಕೆ ಬಂದ ಇಂಗ್ಲಿಷರು ಜತೆಯಲ್ಲಿ ತಮ್ಮ ಭಾಷೆಯನ್ನೂ ತಂದರು. ಇಂಗ್ಲಿಷ್ ಭಾಷೆ ಜಗತ್ತಿನ ಬಹುಮುಖ ವಿಚಾರದ ಮಹಾದ್ವಾರಗಳನ್ನು ನಮಗೆ ತೆರೆದುಕೊಟ್ಟಿತು. ಗಂಡಿನ ಮನಸ್ಸಿನಲ್ಲಿ ವಿಚಾರವಿಪ್ಲವ ಮೂಡಿದಂತೆ ಹೆಣ್ಣಿನ ಮನಸ್ಸಿನಲ್ಲಿಯೂ ಮೂಡಿತು. ಕೈಹಿಡಿದ ಗಂಡ ಅವಿವೇಕಿಯಾಗಿರಲಿ, ಅನಾಮಧೇಯನಾಗಿರಲಿ, ರೋಗಗ್ರಸ್ತನಾಗಿರಲಿ, ನಪುಂಸಕನಾಗಿರಲಿ ಅವನ ಛಾಯಾನುವರ್ತಿನಿಯಾಗಿ ಹೆಣ್ಣು ಬಾಳುವೆ ಮಾಡಬೇಕೆಂಬ ಸನಾತನ ಸಿದ್ಧಾಂತಕ್ಕೆ ಬಲವಾದ ಕೊಡಲಿ ಪೆಟ್ಟು ಬಿತ್ತು. ತನಗೆ ಬೇಕಾದ ಬುದ್ಧಿ ಶಕ್ತಿ, ಸೌಂದರ್ಯ, ಸೇವೆಯನ್ನು ಗಂಡು ನಿರೀಕ್ಷಿಸುವಂತೆ ಹೆಣ್ಣೂ ನಿರೀಕ್ಷಿಸಲಾರಂಭಿಸಿತು. 'ನನಗೆ ಬೇಡದ ಗಂಡನ ಜತೆ ನಾನೇಕೆ ಬಾಳುವೆ ಮಾಡಲಿ' ಎಂದು ಹೆಣ್ಣು ಕೇಳಿತು; ಸಂಪ್ರದಾಯ ಅದಕ್ಕೆ 'ಅದೇ ಸನಾತನ ಪರಂಪರೆ. ಪರಂಪರೆಯನ್ನು ಪ್ರತಿಭಟಿಸುವ ವ್ಯಕ್ತಿ ದೋಷಿಯಾಗುತ್ತಾನೆ' ಎಂದು ಹೇಳಿತು. ಇದು ವಿಚಾರಕ್ಕೊಪ್ಪುವ ಮಾತಲ್ಲ. ಸಂಪ್ರದಾಯದ ದೃಷ್ಟಿಯಲ್ಲಿ ನೀನು, ನಾನು ದೋಷಿಗಳಾಗಬಹುದು. ಆದರೆ ವಿಚಾರದ ಧರ್ಮಸ್ವರೂಪನ ಮುಂದೆ ನಾವು ನಿರ್ದೋಷಿಗಳು."

"ಹೆಣ್ಣನ್ನು ಗಂಡು ಅಜ್ಞಾನಾಂಧಕಾರದಲ್ಲಿಟ್ಟಿದೆಯೆಂದು ನಿಮಗೆ ಯಾರು ಹೇಳಿದರು ?"

"ಯಾರು ಹೇಳಬೇಕಾದ ಅವಶ್ಯಕತೆಯೇನು ? ಕೈಹುಣ್ಣಿಗೆ ಕನ್ನಡಿಯೇಕೆ ?"

"ಯಾರೂ ಯಾರನ್ನೂ ಅಜ್ಞಾನಾಂಧಕಾರದಲ್ಲಿಟ್ಟಿರಲು ಸಾಧ್ಯವಿಲ್ಲ. ನಮ್ಮ ದೇಶಕ್ಕೆ ಬಂದಿರುವ ಹೊಸ ವಿಚಾರಪರಂಪರೆಯನ್ನು ಜೀರ್ಣಿಸಿ ಕೊಳ್ಳಲಾಗದೆ ಹೊರಗಿನವರ ಅಭಿಪ್ರಾಯಗಳನ್ನು ವ್ಯಕ್ತಮಾಡುತ್ತಿದ್ದೇವೆ."

ಈ ಅಭಿಪ್ರಾಯವನ್ನು ಪ್ರಮೀಳಾ ಪರಿಹಾಸ್ಯಕ್ಕೆ ವ್ಯಕ್ತಮಾಡಿದಳೋ ಸಹಜವಾಗಿ ಹೇಳಿದಳೋ ವಾಸುವಿಗೆ ಅರ್ಥವಾಗಲಿಲ್ಲ.

"ನಮ್ಮ ದೇಶದ ಹೆಣ್ಣು ಬಂಧನದಲ್ಲಿದೆ, ಅಜ್ಞಾನಾಂಧಕಾರದಲ್ಲಿದೆ ಎಂದು ಹೇಳಿದವರು ಹೊರಗಿನವರಾಗಿರಬಹುದು. ಆದರೆ ಅವರು ಹೇಳಿರುವುದರಲ್ಲಿ ಅಸತ್ಯವಿಲ್ಲವಲ್ಲ."

"ಅಸತ್ಯವಿಲ್ಲ. ಆದರೆ ಸತ್ಯವನ್ನು ಸರಿಯಾದ ರೀತಿಯಲ್ಲಿ ನೋಡುವ ದೃಷ್ಟಿಯೂ ಇಲ್ಲ. ವಿದೇಶೀಯರ ಹಾಗೆ ನಾವು ಪುರುಷರ ಜತೆ ಸ್ಪರ್ಧೆಗೆ ನಿಂತರೆ ಅದು ಪ್ರಗತಿಯ ಲಕ್ಷಣವೇನು ? ಹೆಂಗಸರೂ ಇಂದು ಪೋಲೀಸಿಗೆ, ಮಿಲ್ಟ್ರಿಗೆ, ಬೇರೆ ಬೇರೆ ಉದ್ಯಮ ಉದ್ಯೋಗಗಳಿಗೆ ಹೋಗುತ್ತಿದ್ದಾರೆ. ಇದು ಅವರ ಜ್ಞಾನೋದಯದ ಲಕ್ಷಣವೇನು ? ತೋಟದ ಮಾಲಿ ತನ್ನ ಕೆಲಸ ಗೌರವದಲ್ಲವೆಂದುಕೊಂಡು ದರ್ಜಿಯಾದರೆ ಅದರಿಂದ ಯಾವ ಪುರುಷಾರ್ಥ ಸಾಧನೆಯಾಗುತ್ತದೆ. ದರ್ಜಿಯನ್ನು ನಿರುದ್ಯೋಗಿ ಮಾಡಿ, ಮಾಲಿ ಕೀಳುದರ್ಜೆಯ ದರ್ಜಿಯಾಗುತ್ತಾನೆ. ಇದರಿಂದ ತೋಟಗಾರಿಕೆ, ದರ್ಜಿತನ ಎರಡಕ್ಕೂ ಅನ್ಯಾಯವಾಗುತ್ತದೆ."

"ಸ್ತ್ರೀ ಅಸ್ವತಂತ್ರಳಾಗಿದ್ದಾಳೆಂಬುದನ್ನು ನೀನು ಒಪ್ಪುವುದಿಲ್ಲವೇ ?"

"ಸುತರಾಂ ಒಪ್ಪುವುದಿಲ್ಲ. ಸ್ವೇಚ್ಛಾವರ್ತನೆಯೇ ಸ್ವಾತಂತ್ರ್ಯದ ಲಕ್ಷಣವಾದರೆ ಈಗಿನ ಪರಿಸ್ಥಿತಿಯಲ್ಲಿ – ಅಂದರೆ ಸನಾತನ ಸಂಪ್ರದಾಯವನ್ನನುಸರಿಸುವ ಮನೆಗಳಲ್ಲಿ – ಸ್ವೇಚ್ಛಾಚಾರಕ್ಕೆ ಅವಕಾಶವಿಲ್ಲ. ಸ್ವಾತಂತ್ರ್ಯವೆಂದರೆ ವ್ಯಕ್ತಿ ತನ್ನ ಮನೆಗೆ – ತನ್ನ ಸಮಾಜಕ್ಕೆ – ತನ್ನ ದೇಶಕ್ಕೆ ಜವಾಬುದಾರ ಎನ್ನುವ ಅರ್ಥದಲ್ಲಿ ಸ್ತ್ರೀಯಷ್ಟೇ ಪುರುಷನೂ ಅಸ್ವತಂತ್ರನಾಗಿದ್ದಾನೆ. ಅವನ ಹೊಣೆಗಾರಿಕೆಗೆ ಅವನು ಅಧೀನ; ಅವಳ ಹೊಣೆಗಾರಿಕೆಗೆ ಅವಳು ಅಧೀನಳು. ಹೊರಗೆಹೋಗಿ ಮೈಮುರಿದು ಸಂಪಾದನೆ ಮಾಡಿ ಮನೆಗೆ ತಂದು ಹಾಕಿ ತನ್ನವರ ಯೋಗಕ್ಷೇಮ

ನೋಡಿಕೊಳ್ಳಬೇಕಾದುದು ಅವನ ಹೊಣೆಗಾರಿಕೆ; ಅವನು ತಂದು ಹಾಕಿದುದನ್ನು ವಿತರಣೆಯಾಗಿ ಬಳಸಿ, ಮನೆಯಲ್ಲಿ ಸತ್ಯ, ಧರ್ಮ, ಪ್ರೇಮ ನೆಲಸುವಂತೆ ಮಾಡಬೇಕಾದುದು ಅವಳ ಹೊಣೆಗಾರಿಕೆ. ಯಾರ ದುಡಿಮೆ ಕಡಿಮೆಯಾಗಲಿ, ಯಾರಲ್ಲಿ ಆಲಸ್ಯಮೂಡಲಿ ಸಂಸಾರದ ಪ್ರಗತಿ ಕುಂಠಿತ ವಾಗುತ್ತದೆ. ಮಂಗಳ ಸೂಸಬೇಕಾದ ಮನೆಯಲ್ಲಿ ನಿತ್ಯ ದುಃಖ, ವೈರ, ವೈಷಮ್ಯ, ಅಸಂತುಷ್ಟಿ ಮೂಡುತ್ತದೆ. ಮನೆ ಮುರಿದು ಬಿತ್ತೆಂದರೆ, ಸಮಾಜ ಮುರಿದು ಬೀಳುತ್ತದೆ; ಸಮಾಜ ಮುರಿದುಬಿದ್ದರೆ ದೇಶ ಮುರಿದು ಬೀಳು ತ್ತದೆ. ಹಕ್ಕಿಗೆ ಹೋರಾಡುವ ಹೆಣ್ಣು ತನ್ನ ಕರ್ತವ್ಯದ ಕಡೆಗೆ ಹೆಚ್ಚು ಲಕ್ಷ್ಯಕೊಡಬೇಕು."

"ಪ್ರಮಿಾ – ನಿಜವಾಗಿ ನಮ್ಮ ತೀರ್ಥಯಾತ್ರೆ ನಿನ್ನ ತಲೆಕೆಡಿಸಿದೆ."

"ಕೆಟ್ಟದ್ದ ತಲೆಯನ್ನು ಸರಿಪಡಿಸಿದೆ ಎಂದು ಹೇಳಿ."

"ಇವುಗಳನ್ನೆಲ್ಲಾ ಯಾವಾಗ ಯೋಚಿಸುವೆ."

"ಸದಾಕಾಲ. ನನ್ನ ಸಮಸ್ತ ವಿಚಾರಗಳನ್ನು, ನಡೆವಳಿಕೆಗಳನ್ನು ನಾನು ತೂಗಿ ನೋಡುತ್ತಲೇ ಇರುತ್ತೇನೆ."

ಸಂಭಾಷಣೆ ತುಂಬ ಗಂಭೀರವಾದುದು ವಾಸು ಮನಸ್ಸಿಗೆ ಬರಲಿಲ್ಲ. ಮಾತು ನಿಲ್ಲಿಸಿ ಅವನು ಮೌನವ್ರತ ಧರಿಸಿ ಕುಳಿತುದನ್ನು ಕಂಡು ಪ್ರಮಿಾಳಾ

"ನಾನು ಆಡಿದುದಕ್ಕೆ ಕೋಪಬಂದಿತೇ ?"

"ಕೋಪ ಬರುವಂತಹುದನ್ನೇನೂ ನೀನು ಆಡಲಿಲ್ಲವಲ್ಲ."

"ನಾನು ತುಂಬ ಹಳೆಯ ಕಾಲದವಳೆಂದು ನಿಮಗನಿಸಿತೇನೋ ?"

"ನೀನು ಯಾವ ಕಾಲದವಳು ಎಂಬುದೇ ನನಗೆ ಸಮಸ್ಯೆಯಾಗಿದೆ."

"ಈ ಸಮಸ್ಯೆಗೆ ನೀವೇ ಪರಿಹಾರ ಕಂಡು ಹಿಡಿಯಬೇಕು."

"ಪ್ರಯತ್ನಿಸುತ್ತೇನೆ."

"ಶಂಕರಯ್ಯನವರ ಜತೆ ಮಾತನಾಡಿದಿರಾ ?"

"ಯಾವ ವಿಷಯ."

"ನನಗೆ ಧರ್ಮಗ್ರಂಥಗಳ ಪಾಠ ಹೇಳುವ ವಿಷಯ."

"ಮಾತಾಡುತ್ತೇನೆ. ಆ ವಿಷಯದಲ್ಲಿ ನನಗಿಂತ ನಿನಗೇ ಹೆಚ್ಚು ಆಸಕ್ತಿ ಇರುವ ಹಾಗೆ ಕಾಣುತ್ತದೆ."

"ಆಸಕ್ತಿ ಹುಟ್ಟಿಸಿದಿರಿ."

"ಹೊತ್ತು ಬಹಳವಾಗಿರಬಹುದು. ಏಳು – ಊಟ ಮುಗಿಸೋಣ"

ಎಂದು ವಾಸು ಹೇಳಿ ಸಿಗರೇಟ್ ಹಚ್ಚಿಕೊಂಡು ಹೊರಗೆಹೋದ.

ಪ್ರಮಿಳಾ ಕುಳಿತ ಸ್ಥಳದಿಂದ ಕದಲಲಿಲ್ಲ. ತಾನು ಆಡಿದ ಮಾತುಗಳನ್ನು ತಾನೇ ಸ್ಮರಿಸಿಕೊಳ್ಳುವುದಕ್ಕಾರಂಭಿಸಿದಳು.

'ನಾನು ಏನು ಏನೋ ಆಡಿಬಿಟ್ಟೆನಲ್ಲಾ. ಅವರಿಗೆ ಅಸಮಾಧಾನವಾಯಿತೋ ಏನೋ? ಅಸಮಾಧಾನವಾಗುವ ಯಾವ ಮಾತನ್ನೂ ನಾನು ಆಡಿಲ್ಲ. ಇಷ್ಟು ಸಣ್ಣ ವಿಷಯಕ್ಕೆ ಅಸಮಾಧಾನ ಮಾಡಿಕೊಳ್ಳುವುದು ಅವರ ಸ್ವಭಾವವೂ ಅಲ್ಲ – ಆದರೆ ಹೋಗುವಾಗ ಮುಖವನ್ನೇಕೆ ಚಿಕ್ಕದು ಮಾಡಿಕೊಂಡು ಹೋದರು?'

ವಾಸು ಕಡೆಗೆ ತಿರುಗಿಸಿದ ವಿಚಾರದ ಬೆಳಕನ್ನು ಪ್ರಮಿಳೆ ತನ್ನ ಕಡೆಗೇ ತಿರುಗಿಸಿಕೊಂಡಳು.

'ವಿಧಿ ನನ್ನನ್ನು ಲೋಕಾಚಾರಕ್ಕೆ ವಿರುದ್ಧವಾದ ಮಾರ್ಗಕ್ಕೆ ಎಳೆತಂದು ಬಿಟ್ಟುಹೋಗಿದೆ. ಇದರಲ್ಲಿಯೇ ನಾನು ಸತ್ಯವನ್ನೇಕೆ ಹುಡುಕಬಾರದು? ಜಾರಿದ ಹೆಜ್ಜೆ ಮತ್ತೆ ಜಾರದಂತೆ ಏಕೆ ಎಚ್ಚರವಾಗಿರಬಾರದು.'

ಆದಷ್ಟು ಬೇಗ ಧರ್ಮವ್ಯಾಸಂಗ ಆರಂಭಿಸುವುದಕ್ಕೆ ಅವಳ ಮನಸ್ಸು ತವಕಗೊಂಡಿತು. ಹಿಂದಿನವರು ಸತ್ಯವನ್ನು ಹೇಗೆ ಹುಡುಕಿದರೆಂದು ತಿಳಿಯಲು ಪ್ರಮಿಳೆ ಕುತೂಹಲಗ್ರಸ್ತಳಾದಳು. ಅವಳ ಮನಸ್ಸಿನಲ್ಲಿ ಶಾಂತಿ ನೆಲಸಿತು – ಮುಖದಲ್ಲಿ ಶಾಂತಿಯ ಬೆಳಕು ಚಿಮ್ಮಿತು.

೮

ಮಾರನೆಯ ಬೆಳಿಗ್ಗೆ ವಾಸೂಗೆ ಎಚ್ಚರವಾಗುವ ಮುನ್ನವೇ ಪ್ರಮಿಳಾ ಎದ್ದು, ತೋಟದಲ್ಲಿ ಹೂಗಳನ್ನಾಯ್ದು, ಸ್ನಾನಮಾಡಿ ಪೂಜೆಗೆ ಕುಳಿತಳು.

ವಾಸು ಕಣ್ಣುಬಿಟ್ಟು ನೋಡಿದ. ಪ್ರಮೀಳಾ ಕಾಣಲಿಲ್ಲ. ಎದ್ದು ಹೊರಗೆ ಹೊರಟಾಗ ಪ್ರಮೀಳೆ ಪೂಜೆಯಲ್ಲಿ ನಿಮಗ್ನಳಾಗಿರುವುದನ್ನು ಕಂಡು ಆಶ್ಚರ್ಯಗೊಂಡ. ಅವನು ಪ್ರಾತರ್ವಿಧಿಗಳನ್ನು ಮುಗಿಸಿ ಸ್ನಾನ ಮಾಡಿಕೊಂಡು ಬರುವಷ್ಟರಲ್ಲಿ ಅವಳ ಪೂಜೆ ಮುಗಿದಿತ್ತು.

ಅಡಿಗೆಯಾಳು ಮಹಡಿಯ ಮೇಲಕ್ಕೆ ಕಾಫಿ, ತಿಂಡಿ ತೆಗೆದುಕೊಂಡು ಬಂದ. ವಾಸು, ಪ್ರಮೀಳೆ ಕಾಫಿ ಸೇವನೆಗೆ ಕುಳಿತರು.

"ಇವತ್ತು ನೀನು ಬಹಳ ಬೇಗ ಎದ್ದಹಾಗೆ ಕಾಣುತ್ತದೆ."

"ಐದು ಗಂಟೆಗೆ ಎದ್ದೆ."

"ರಾತ್ರಿ ಚೆನ್ನಾಗಿ ನಿದ್ದೆಬರಲಿಲ್ಲವೇ ?"

"ಬಂದಿತಲ್ಲ, ಇವತ್ತು ಯಾವವಾರ ಹೇಳಿ."

"ಗುರುವಾರ."

"ನನ್ನ ಪಾಠ ಪ್ರವಚನ ಆರಂಭಿಸುವುದಕ್ಕೆ ಇವತ್ತು ಒಳ್ಳೆಯದಿವಸ."

"ಓಹೋ! ಅದಕ್ಕೋ ಈ ಸಿದ್ಧತೆ. ಈಗ ಅರ್ಥವಾಯಿತು. ನಾನು ಎಂದೋ ಆಡಿದ ಮಾತಿಗೆ ನೀನು ಇಷ್ಟು ಬೆಲೆಕೊಡುವೆಯೆಂದು ನಿರೀಕ್ಷಿಸಿರಲಿಲ್ಲ."

"ನಿಮ್ಮ ಪ್ರತಿಯೊಂದು ಮಾತಿಗೂ ನಾನು ಬೆಲೆಕೊಡುತ್ತೇನೆ."

"ಬಹಳ ಸಂತೋಷ."

"ನಾನು ಪಾಠ ಪ್ರವಚನದ ಬಗ್ಗೆ ತುಂಬ ಉತ್ಸುಕಳಾಗಿದ್ದೇನೆಂದು ಕೋಪವೇ ?"

"ಅದರಲ್ಲಿ ಕೋಪ ಬರಿಸುವ ವಿಷಯವೇನಿದೆ? ನಾವು ಕೈಗೊಂಡಿರುವ ವೃತ್ತಿಗೆ ಪಾಂಡಿತ್ಯದ ನೆರವು ಬೇಕೇಬೇಕು. ನೀನು ಧಾರಾಳವಾಗಿ ಗೀತೆಯಿಂದ, ಉಪನಿಷತ್ತುಗಳಿಂದ ಉದಹರಿಸುವುದನ್ನು ನೋಡಿದರೆ ಜನ ದಂಗಾಗುತ್ತಾರೆ."

ಉಪಾಹಾರ ಮುಗಿಯಲು ಪ್ರಮೀಳಾ

"ಶಂಕರಯ್ಯನವರಿಗೆ ಹೇಳಿ ಕಳುಹಿಸುವಿರಾ ?"

ವಾಸೂ ತಾನೇ ಎದ್ದುಹೋಗಿ ಶಂಕರನನ್ನು ಕೂಗಿ ಕರೆದ. ಶಂಕರ ಬಂದ ಮೇಲೆ

"ಗೀತಾಪಾಠ ಇವತ್ತೇ ಆರಂಭಿಸಬೇಕಪ್ಪ."

ಎಂದು ಹೇಳಿದ. ಶಂಕರ ಅನುಮಾನಿಸುತ್ತ

"ಯಾರಿಗೆ" ಎಂದು ಕೇಳಿದ.

"ನನಗೆ" ಎಂದು ಪ್ರಮಿಳಾ ಉತ್ತರಿಸಿದಳು.

"ನಿಮಗೆ ನಾನು ಹೇಳಿಕೊಡುವುದೇನಿದೆ ತಾಯಿ. ನಿಮ್ಮ ಅನುಭವ ಪಾಂಡಿತ್ಯಕ್ಕೆ ನನ್ನ ಪುಸ್ತಕ ಪಾಂಡಿತ್ಯ ಯಾವ ಸಾಟಿ."

"ನನಗೆ ಪಾಠ ಹೇಳುವುದಕ್ಕೆ ಅಭ್ಯಂತರವಿದೆಯೇ ಶಂಕರಯ್ಯನವರೇ ?"

"ನೀವು ನನ್ನಿಂದ ಪಾಠ ಕಲಿಯುವುದು ನನ್ನ ಪುಣ್ಯವಲ್ಲವೇ – ಅಭ್ಯಂತರದ ಮಾತೆಲ್ಲಿಂದ ಬಂತು."

"ಹಾಗಾದರೆ ಇಂದಿನಿಂದಲೇ ಆರಂಭಿಸೋಣ. ದಿನವೂ ಚೆನ್ನಾಗಿದೆ."

ವಾಸು ಎದ್ದು

"ಪಾಠ ಸಾಗಲಿ. ನಾನು ರತನ್‌ಲಾಲನನ್ನು ನೋಡಿಕೊಂಡು ಬರುತ್ತೇನೆ. ಬೊಂಬಾಯಿವಾಲಾ ಸಿಕ್ಕಿದರೆ ಏನು ಹೇಳಲಿ. ಸಂಜೆಗೆ ಬಾ ಎನ್ನಲೇ ?"

"ಇವತ್ತು ಬೇಡ. ನಾಳೆ ಬರಲಿ. ಹೇಗೂ ಶುಕ್ರವಾರ – ಭಜನೆ ಮಾಡಬೇಕೆಂದು ಯೋಚಿಸಿದ್ದೇನೆ."

"ಅದೇ ಒಳ್ಳೆಯದು"

ಎಂದು ವಾಸು ಬಟ್ಟೆ ಹಾಕಿಕೊಂಡು ಹೊರಗೆಹೊರಟ.

ಪ್ರಮಿಳಾ ಒಳಗೆದ್ದು ಹೋಗಿ ಒಂದು ಪುಸ್ತಕ, ಪೆನ್ ತಂದು ಶಂಕರನ ಮುಂದೆ ಕುಳಿತಳು.

"ಪಾಠ ಎಲ್ಲಿಂದ ಆರಂಭಿಸುತ್ತೀರಿ ?"

"ಅದೇ ಯೋಚನೆ ಮಾಡುತ್ತಿದ್ದೇನೆ. ಗೀತೆಯಿಂದಲೇ ಆರಂಭಿಸಲೋ ಸಂಸ್ಕೃತ ಹೇಳಿಕೊಡಲೋ ?"

"ನನ್ನ ಸಲಹೆಯೊಂದಿದೆ."

"ಹೇಳಿ – ನಿಮಗೆ ಹೇಗೆ ಇಷ್ಟವೋ ಹಾಗೆ ನಾನು ಪಾಠ ನಡೆಸಲು ಸಿದ್ಧನಾಗಿದ್ದೇನೆ."

"ಧರ್ಮ ಗ್ರಂಥಗಳ ವ್ಯಾಸಂಗಕ್ಕೆ ಸಂಸ್ಕೃತಜ್ಞಾನ ಕೇವಲ ಆವಶ್ಯಕ ವಲ್ಲವೇ ?"

"ನಿಸ್ಸಂದೇಹವಾಗಿ."

"ಬೆಳಿಗ್ಗೆ ಒಂದೆರಡು ಗಂಟೆ ಸಂಸ್ಕೃತ ಹೇಳಿಕೊಡಿ. ಮಧ್ಯಾಹ್ನ ಕ್ರಮವಾಗಿ ಗೀತಾಭ್ಯಾಸವಾಗಲಿ."

"ನಿಮಗೆ ತುಂಬ ಶ್ರಮವಾಗುತ್ತದೆ."

"ಕಷ್ಟಪಡದೆ ವಿದ್ಯೆ ಸಂಪಾದಿಸಬೇಕೆಂದರೆ ಹೇಗೆ ಸಾಧ್ಯ ? ಹತ್ತು ರೂಪಾಯಿಗಾಗಿ ನಾವು ಭೂಮಿಯನ್ನೇ ತಲೆಕೆಳಗು ಮಾಡುತ್ತೇವೆ. ಇನ್ನು ಅಪಾರ ಬೆಲೆಯುಳ್ಳ ವಿದ್ಯೆ ಸಂಪಾದಿಸಬೇಕಾದರೆ ಎಷ್ಟು ಕಷ್ಟಪಡ ಬೇಕು."

"ನಿಮ್ಮ ಶ್ರದ್ಧೆ ಉತ್ಸಾಹ ಕಂಡು ನನಗೆ ಬ್ರಹ್ಮಾನಂದವಾಗಿದೆ. ಮಿಕ್ಕವರು ಒಂದು ವರ್ಷದಲ್ಲಿ ಕಲಿಯುವುದನ್ನು ನೀವು ಒಂದೇ ತಿಂಗಳಲ್ಲಿ ಕಲಿಯಬಲ್ಲಿರಿ."

"ಗುರುವಿನ ಅನುಗ್ರಹ."

"ಅಯ್ಯೋ ! ನನ್ನನ್ನೇಕೆ ಗುರುವೆಂದು ಸಂಬೋಧಿಸುವಿರಿ ?"

"ನಿಮ್ಮಿಂದ ನನ್ನ ಅಜ್ಞಾನ ಪರಿಹಾರವಾಗುವುದರಿಂದ."

"ನಿಮಗೆ ಜ್ಞಾನದಾನ ಮಾಡುವಷ್ಟು ನಾನು ಸಮರ್ಥನಲ್ಲ."

"ಈ ವಿನಯ ನಿಮ್ಮ ಯೋಗ್ಯತೆಯನ್ನು ಮತ್ತಷ್ಟು ಹೆಚ್ಚಿಸುವುದೇ ವಿನಾ ಕುಂದಿಸುವುದಿಲ್ಲ."

ಅಕ್ಷರ ಪಾಠದಿಂದ ಶಂಕರ ತನ್ನ ಶಿಕ್ಷಣವನ್ನಾರಂಭಿಸಿದ. ಅಕ್ಷರ ಮಾಲೆಯನ್ನು ತಿದ್ದಿ ಹಾಕಿಕೊಟ್ಟು, ಅವುಗಳನ್ನು ಪ್ರಮೀಳೆಯ ಕೈಯಲ್ಲಿ ಬರೆಸಿ

"ಅಕ್ಷರಗಳು ಬರಲಿ. ಮುಂದೆ ಪಾಠಮಾಡುತ್ತೇನೆ" ಎಂದು ಹೇಳಿದ.

"ಮಧ್ಯಾಹ್ನ ಎಷ್ಟು ಹೊತ್ತಿಗೆ ಕೂಡೋಣ."

"ನಿಮಗೆ ಯಾವಾಗ ಅನುಕೂಲವೋ ಆಗ ಕೂಡೋಣ."

"ಮೂರು ಗಂಟೆಗೆ ಆಗಬಹುದೇ ?"

"ಆಗಬಹುದು."

ಎಂದು ಹೇಳಿದ.

ಊಟದ ವೇಳೆಯವರೆಗೂ ಪ್ರಮೀಳಾ ಅಕ್ಷರಗಳನ್ನು ತಿದ್ದಿದಳು. ವಾಸೂ ಮನೆಗೆ ಬರಲು ಅವನ ಜತೆ ಊಟ ಮುಗಿಸಿದಳು.

"ಪಾಠ ಇವತ್ತು ಹೇಗಾಯಿತು" ಎಂದು ಕೇಳಿದ.

"ಅಕ್ಷರಾಭ್ಯಾಸ ಆರಂಭವಾಯಿತು. ಮಧ್ಯಾಹ್ನ ಮೂರು ಗಂಟೆಗೆ 'ಗೀತಾ' ಪಾಠ ಆರಂಭಿಸುತ್ತಾರೆ."

"ನಿನ್ನ ಈ ಪಾಠ ಪ್ರವಚನಗಳಲ್ಲಿ ನನಗೇನಾದರೂ ಸ್ವಲ್ಪ ವೇಳೆ ವಿನಿಯೋಗಿಸಲು ಸಾಧ್ಯವೋ ?"

"ಅಕ್ಷರಗಳು ಬಂದ ಮೇಲೆ ಮುಂದಿನ ಪಾಠ ಅಷ್ಟು ಕಷ್ಟವಾಗಲಾರದು."

ಎಂದು ಹೇಳಿ ಮತ್ತೆ ಅಕ್ಷರಗಳನ್ನು ತಿದ್ದುವುದಕ್ಕೆ ಕುಳಿತುಕೊಂಡಳು. ವಾಸು ವಿಶ್ರಾಂತಿಗೆ ತೆರಳಿದ.

ಮೂರು ಗಂಟೆ ಹೊಡೆದ ಕೂಡಲೆ ಪ್ರಮೀಳಾ ಶಂಕರನಿಗೆ ಹೇಳಿ ಕಳುಹಿಸಿದಳು. ಶಂಕರ ಕೈಯಲ್ಲಿ ಭಗವದ್ಗೀತೆಯ ಪುಸ್ತಕ ಹಿಡಿದುಬಂದು ಕುಳಿತ. ಪ್ರಮೀಳೆಯ ಲಕ್ಷ್ಯ ಅವನ ಕೈಯಲ್ಲಿದ್ದ ಪುಸ್ತಕದ ಕಡೆ ಹೋಯಿತು. ಶಂಕರ ಅವಳಿಗೆ ಪುಸ್ತಕವನ್ನಿತ್ತ.

"ನಿಮಗೆ ಬೇಕಾಗಬಹುದು."

"ಬೇಡ. ನನಗೆ ಎಲ್ಲ ಶ್ಲೋಕಗಳೂ ಬಾಯಿಗೆ ಬರುತ್ತವೆ."

ಅಂದು ಶಂಕರ ಗೀತೆಯ ಧ್ಯಾನಶ್ಲೋಕಗಳ ಅರ್ಥ ಹೇಳಿ, ಗೀತೆಯ ಜನ್ಮವೃತ್ತಾಂತವನ್ನೂ, ಗೀತೆಯ ಸಾರಸರ್ವಸ್ವವನ್ನು ಸಂಕ್ಷೇಪವಾಗಿ ವಿವರಿಸಿ

"ಭಾರತೀಯ ಅಧ್ಯಾತ್ಮಜ್ಞಾನಕ್ಕೆ ಭಗವದ್ಗೀತೆಯೇ ಬುನಾದಿ. ಗೀತೆಯನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಉಪನಿಷತ್ತುಗಳ ತತ್ತ್ವಾರ್ಥ ಸುಲಭವಾಗಿ ತಿಳಿಯುತ್ತದೆ. ಧ್ಯಾನ ಶ್ಲೋಕದಲ್ಲಿ ಹೇಳಿರುವಂತೆ

'ಸರ್ವೋಪನಿಷದೋ ಗಾವೋ
ದೋಗ್ಧಾ ಗೋಪಾಲನಂದನಃ ।
ಪಾರ್ಥೋ ವತ್ಸಃ ಸುಧೀರ್ಭೋಕ್ತಾ
ದುಗ್ಧಂ ಗೀತಾಮೃತಂ ಮಹತ್ ॥'

[ಎಲ್ಲ ಉಪನಿಷತ್ತುಗಳೂ ಆಕಳುಗಳು; ಶ್ರೀಕೃಷ್ಣನು ಹಾಲು ಕರೆಯುವವನು; ಅರ್ಜುನನು ಕರು; ಕುಡಿಯುವವರು ಪಂಡಿತರು; ಶ್ರೇಷ್ಠವಾದ ಗೀತಾಮೃತವು ಹೀಗೆ ಕರೆದದ್ದಾಗಿರುವುದು.]

ಗೀತೆಯ ದಿವ್ಯ ಮಹತ್ತ್ವವನ್ನು ವರ್ಣಿಸುತ್ತಾ ಶಂಕರನ ಮುಖ ದೇದಿಪ್ಯಮಾನವಾಯಿತು. ಅವನ ನಿಷ್ಕಲ್ಮಷ ಹೃದಯದ ಮೇಲೆ ಗೀತೆಯ ದಿವ್ಯಜ್ಞಾನ ಪ್ರತಿಬಿಂಬಿತವಾಗಿತ್ತು. ಅವನ ಬಾಯಿಂದ ಮಾತು ಅಮೃತ ಧಾರೆಯಂತೆ ಹೊರಟಿತ್ತು. ಪ್ರಮಿಳಾ ಅವನನ್ನೇ ಎವೆಯಿಕ್ಕದೆ ನೋಡು ತ್ತಿದ್ದಳು. ಅವಳ ಮೈ, ಮನವೆಲ್ಲಾ ಕಿವಿಯಾಗಿ ಶಂಕರನ ಉದ್ಬೋಧವನ್ನು ತುಂಬಿಕೊಳ್ಳುತ್ತಿದ್ದವು.

ನಿರ್ಮಲಾಕಾಶದ ಸುಭಗ ಶಾಂತಿಯನ್ನು ಕಪ್ಪುಮೋಡ ಕಬಳಿಸುವಂತೆ ಅವಳ ಮನಸ್ಸಿನ ಮೇಲೆ ಸಂಶಯದ ಮೋಡ ಹಾದುಹೋಯಿತು. ಮುಖ ಕಳಾಹೀನವಾಯಿತು. ಕಣ್ಣುಗಳು ತೇವಗೊಂಡವು. ಶಂಕರ ಅವಳನ್ನು ನೋಡಿ

"ನಿಮ್ಮ ಮನಸ್ಸಿಗೆ ವಿಷಾದವಾದಂತಿದೆ. ಏಕೆ? ನಾನೇನಾದರೂ ತಪ್ಪು ಆಡಿದೆನೇ?"

"ನೀವೇನೂ ತಪ್ಪು ಆಡಿಲ್ಲ. ಮನಸ್ಸಿಗೇನೋ ಹೊಳೆದು ವಿಷಾದ ವಾಯಿತು."

"ಏನು ಹೊಳೆಯಿತೆಂದು ನಾನು ಕೇಳಬಹುದೇ?"

"ಬ್ರಹ್ಮಜ್ಞಾನ ನನ್ನಂಥ ಪಾಮರಳಿಗೆ – ಅಲ್ಪಳಿಗೆ ಲಭಿಸುತ್ತದೆಯೇ?"

"ಪ್ರತಿಯೊಬ್ಬ ಜಿಜ್ಞಾಸುವಿನ ಮನಸ್ಸಿನಲ್ಲಿಯೂ ಈ ಪ್ರಶ್ನೆಯೇಳು ತ್ತದೆ. ಈ ಪ್ರಶ್ನೆಯೇಳುವುದು ಶುಭಚಿನ್ಹೆ. ಫಾರಸೀ ಸಂತನೊಬ್ಬನನ್ನು ಅವನ ಶಿಷ್ಯ ಕೇಳಿದನಂತೆ – ಭಗವಂತನನ್ನು ನಾನು ನೋಡಲು ಸಾಧ್ಯವೇ? ಸಂತ ಅದಕ್ಕೆ ಹೇಳಿದನಂತೆ – ಅವನು ಯಾವಾಗ ನಿನ್ನನ್ನು ನೋಡುತ್ತಾನೆ ಆಗ ನೀನು ಅವನನ್ನು ನೋಡಲು ಸಾಧ್ಯ. ಆಧ್ಯಾತ್ಮಿಕ ವಿಷಯಗಳ ಕಡೆ ಮನಃಪ್ರವೃತ್ತಿ ಹುಟ್ಟುವುದೇ ಭಗವಂತನ ಕಟಾಕ್ಷದ ಕುರುಹು. ಧ್ಯಾನಶ್ಲೋಕಕಾರ ಇದನ್ನೇ ಸುಂದರವಾಗಿ ಹೇಳಿದ್ದಾನೆ

'ಮೂಕಂ ಕರೋತಿ ವಾಚಾಲಂ
ಪಂಗುಂ ಲಂಘಯತೇ ಗಿರಿಮ್ ।
ಯತ್ಕೃಪಾ ತಮಹಂ ವಂದೇ
ಪರಮಾನಂದ ಮಾಧವಮ್ ॥'

[ಯಾರ ಕೃಪೆಯು ಮೂಕನನ್ನು ಮಾತಾಳಿಯನ್ನಾಗಿಯೂ ಕುಂಟನನ್ನು ಪರ್ವತವನ್ನು ಹಾರುವವನನ್ನಾಗಿಯೂ ಮಾಡುವದೋ ಆ ಪರಮಾನಂದ ಸ್ವರೂಪನಾದ ಶ್ರೀಕೃಷ್ಣನನ್ನು ನಮಸ್ಕರಿಸುತ್ತೇನೆ.]

ಯೋಚನೆ ಮಾಡಬೇಡಿ. ಫಲಾಪೇಕ್ಷೆಯಿಲ್ಲದೆ ನೀವು ಮಾಡುವ ಕರ್ಮಕ್ಕೆ ಭಗವಂತನ ಕೃಪೆ ಸ್ವತಃಸ್ಸಿದ್ಧ. ಬ್ರಹ್ಮಜ್ಞಾನ ಯಾರ ಗುತ್ತಿಗೆಯ ಸೊತ್ತೂ ಅಲ್ಲ. ಸೂರ್ಯಪ್ರಕಾಶ ಕೇವಲ ಗಂಗಾನದಿಯ ಮೇಲೆ ಮಾತ್ರ ಬೀಳುವುದಿಲ್ಲ; ಬಚ್ಚಲು ನೀರಿನ ಮೇಲೂ ಅದೇ ಪ್ರಕಾಶ ಬೀಳುತ್ತದೆ. ಬ್ರಹ್ಮಜ್ಞಾನ ಸಾಧನೆಗೆ ಹೊರಟ ನಚಿಕೇತ ಚಿಕ್ಕ ಹುಡುಗ, ಸತ್ಯಕಾಮ ಜಾಬಾಲಿ ವೇಶ್ಯಾಪುತ್ರ, ರೈಕ್ವ ಸಾಮಾನ್ಯರೈತ, ವಿದುರ ದಾಸೀಪುತ್ರ, ನಂದ ಅಸ್ಪೃಶ್ಯ – ಮೈತ್ರೇಯಿ, ಗಾರ್ಗಿಯರು ಹೆಂಗಸರು; ಶಿಸುನಾಳ ಶರೀಫ ಮುಸಲ್ಮಾನ. ಭಗವನ್ಮಂದಿರದಲ್ಲಿ ಭವಮಂದಿರದ ಇತಿಮಿತಿಗಳಿಲ್ಲ. ಅಲ್ಲಿ ಹೋಗಬಯಸುವವರು ಯಾರಿಗೂ ನಿಷೇಧವಿಲ್ಲ."

ಪ್ರಮಿಳೆಯ ಮನಸ್ಸಿನಲ್ಲಿ ಶಂಕರನ ಮಾತುಗಳು ಅಚ್ಚೊತ್ತಿದವು. ಅಸ್ಪಷ್ಟವೂ ಅವ್ಯಕ್ತವೂ ಅನ್ಯಾದೃಶವೂ ಆದ ಆನಂದ ಅವಳ ಅಂತಃಕರಣವನ್ನಾವರಿಸಿತು. ಆ ಆನಂದಾನುಭವದಲ್ಲಿ ತನ್ಮಯಳಾಗಿದ್ದ ಪ್ರಮಿಳೆಯನ್ನು ಬಿಟ್ಟು ಶಂಕರ ಮೆಲ್ಲನೆ ಹೊರಗೆಹೋದ.

ವಾಸುವಿನ ಧ್ವನಿ ಕೇಳಿಬಂದಾಗ ಪ್ರಮಿಳೆಯನ್ನು ಯಾರೋ ಬೆಟ್ಟದ ತಪ್ಪಲಿನಿಂದ ಕೆಳಗೆ ನೂಕಿದಂತಾಯಿತು. ಅವನು ಮೂರು ನಾಲ್ಕು ಸಲ ಮಾತನಾಡಿಸಿದ ಮೇಲೇ ಅವಳಿಗೆ ಎಚ್ಚರ.

"ಯೋಚನೆಯಲ್ಲಿ ಮೈಮರೆತಿದ್ದೆ. ನೀವು ಮಾತನಾಡಿಸಿದುದು ಕೇಳಿ ಬರಲಿಲ್ಲ."

"ಈಗಲಾದರೂ ಎಚ್ಚರವಾಯಿತಷ್ಟೆ. ಜುಹೂ ಕಡೆ ಹೋಗಿ ಬರೋಣವೇ ?"

"ಆಗಬಹುದು"

ಎಂದು ನಿರುತ್ಸಾಹದಿಂದ ಹೇಳಿದಳು.

ಅವಳ ಸ್ವಭಾವದಲ್ಲಿ ಆಗುತ್ತಿದ್ದ ಪರಿವರ್ತನವನ್ನು ವಾಸು ಸೂಕ್ಷ್ಮವಾಗಿ ಗ್ರಹಿಸಿದ.

ಕಾರು ಸಾಂಟಾಕ್ರೂಸ್ ದಾರಿಯಲ್ಲಿ ಹೋಗುತ್ತಿದ್ದಾಗ ವಾಸು ಕೇಳಿದ

"ಇವತ್ತು ಗೀತಾಪಾಠ ಆರಂಭವಾಯಿತಂತೆ!"

"ಆರಂಭವಾಯಿತು. ನನಗೂ ಗೀತೆ ಅರ್ಥವಾಗುತ್ತದೆಂಬ ಭರವಸೆ ಶಂಕರಯ್ಯನವರಿತ್ತಿದ್ದಾರೆ."

"ಬ್ರಹ್ಮವಾದಿನಿಯ ಲಕ್ಷಣ ನಿನ್ನಲ್ಲಿದೆಯೆಂದು ಶಂಕರ ಹೇಳಿದ. ಅವನಂತೂ ನಿನ್ನ ಪರಮಭಕ್ತನಾಗಿದ್ದಾನೆ."

"ಹಾಗನ್ನಬೇಡಿ. ಅವರೇ ನನ್ನ ಗುರುಗಳು. ನನ್ನ ಕಣ್ಣು ತೆರೆಸಿದರು."

"ನೀನು ಕಣ್ಣುಮುಚ್ಚಿಕೊಂಡಿದ್ದೆಯೇನು ?"

"ಕಣ್ಣುಬಿಡುವವರೆಗೆ ಹಾಗನಿಸಿರಲಿಲ್ಲ."

"ಕಣ್ಣುಬಿಟ್ಟು ಏನು ಕಂಡೆ ?"

"ನನಗೇನು ಬೇಕೆಂಬುದನ್ನು ತಿಳಿದುಕೊಂಡೆ."

"ನಿನಗೇನು ಬೇಕು ?"

"ಜ್ಞಾನ – ಜ್ಞಾನ – ಜ್ಞಾನ."

"ನೀನು ಅಜ್ಞಾನಿಯಾಗಿರಲಿಲ್ಲ."

"ನಾನು ಸುಜ್ಞಾನಿ ಎಂದುಕೊಂಡಿದ್ದುದೇ ನನ್ನ ಅಜ್ಞಾನದ ಕುರುಹು."

"ಪ್ರಮಿಾ – ನಿಜವಾಗಿ ನಿನ್ನ ಮಾತುಗಳು ನನಗೆ ಅರ್ಥವಾಗುತ್ತಿಲ್ಲ."

"ನೀವು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದಿಲ್ಲ."

"ಬೀದಿಯಲ್ಲಿ ಹೋಗುವ ಮಾರಮ್ಮನನ್ನು ನಮ್ಮ ಮನೆಗೆ ಬಂದು ಹೋಗಮ್ಮ ಎಂದು ನಾನೇ ಹೇಳಿದ ಹಾಗಾಯಿತು."

"ಏಕೆ ಹಾಗನ್ನುವಿರಿ ?"

"ನಿನ್ನ ಪಾಠ ಪ್ರವಚನ ನಮ್ಮಿಬ್ಬರ ಪ್ರೇಮದ ಶತ್ರುವಾಗುವದೋ ಏನೋ ?"

"ಪ್ರೇಮ ಅಷ್ಟು ಹಗುರವಾದ ವಸ್ತುವಲ್ಲ. ಪ್ರೇಮವಿದ್ದಲ್ಲಿ ಶ್ರದ್ಧೆಯಿರುತ್ತದೆ, ಶ್ರದ್ಧೆಯಿದ್ದಲ್ಲಿ ಭಕ್ತಿಯಿರುತ್ತದೆ. ಒಂದಕ್ಕೊಂದು ಹಾಸುಹೊಕ್ಕಾಗಿ ಹೊಂದಿಕೊಂಡಿರುತ್ತವೆ."

"ಪ್ರಮಿಳಾ............"

ಎಂದನ್ನುತ್ತಾ ವಾಸು ಪ್ರಮಿಳಾಳೆಯ ಕೈಹಿಡಿದ. ಅವನ ಧ್ವನಿ ಗದ್ಗದವಾಯಿತು. ಮಾತು ಹೊರಡಲಿಲ್ಲ. ಪ್ರಮಿಳಾಳೆ ಅವನ ಮುಂಗೈ ಮೇಲೆ ತನ್ನ ಕೈಯಿಟ್ಟು

"ದುಃಖಿಸುವುದೇಕೆ ? ಹೇಳಿ ಮನಸ್ಸಿನಲ್ಲಿ ಏನಿದೆ ?"

"ಪ್ರಮಿಳಾ.............ನಾನು ಸಿನ್ನನ್ನು ಪ್ರೀತಿಸಿದಂತೆ ಯಾರನ್ನೂ ಪ್ರೀತಿಸಲಿಲ್ಲ."

"ಅದನ್ನು ನಾನು ಬಲ್ಲೆ."

"ನೀನು ನನ್ನಿಂದ ಜಾರಿ ದೂರವಾಗುವುದು ನನಗೆ ನರಕಯಾತನೆಯನ್ನುಂಟುಮಾಡುತ್ತದೆ."

"ನಿಮ್ಮಿಂದ ಜಾರಿ ದೂರವಾಗಿಲ್ಲ ದೊರೆ – ಎಂದೆಂದಿಗೂ ದೂರವಾಗುವುದಿಲ್ಲ. ನನ್ನ ಸರ್ವಸ್ವವೂ ನಿಮಗೆ ಮಿಾಸಲು. ಈ ಹೃದಯ ಸಿಂಹಾಸನದಲ್ಲಿ ಮಂಡಿಸಿರುವ ಮೂರ್ತಿ ಯಾವದು ನೋಡಿ. ನಿಮ್ಮ ನನ್ನ ಸಾಮಿಾಪ್ಯ ಹೆಚ್ಚಿಸುವುದರ ಕಡೆಗೇ ನಾನು ಲಕ್ಷ್ಯಕೊಡುತ್ತಿದ್ದೇನೆ. ವಿಧಿ ಕೂಡಿಸಿದ ನಮ್ಮಿಬ್ಬರ ಬಾಳು ಶ್ರೇಯಃಪ್ರದವಾಗಲೆಂದು ಸದಾಕಾಲ ಪ್ರಾರ್ಥಿಸುತ್ತಿದ್ದೇನೆ. ಗೀತೆ ನಮ್ಮ ಸಂಬಂಧಕ್ಕೆ ಒಂದು ವಿಶಾಲವಾದ ವ್ಯಾಪಕವಾದ ಅರ್ಥಕೊಡುತ್ತಿದೆ. ಅದು ನಮ್ಮಿಬ್ಬರ ಸಂಬಂಧವನ್ನು ಮತ್ತಷ್ಟು ಭದ್ರವಾದ ಬುನಾದಿಯ ಮೇಲೆ ನಿಲ್ಲಿಸುವುದೆಂದು ನಾನು ಭರವಸೆ ಕೊಡಬಲ್ಲೆ."

ವಾಸು ಮನಸ್ಸಿಗೆ ಮಹದಾನಂದವಾಯಿತು.

"ಕ್ಷಮಿಸು ಪ್ರಮಿಳಾ. ನಿನ್ನನ್ನು ನಾನು ತಪ್ಪು ತಿಳಿದುಕೊಂಡಿದ್ದೆ"

ಎಂದು ಹೇಳಿದ. ಪ್ರಮಿಳಾ ಅರ್ಥಗರ್ಭಿತವಾದ ಮುಗುಳ್ನಗೆ ನಕ್ಕಳು.

ಜುಹೂ ಸಮುದ್ರ ತೀರದ ಮಳಲುದಂಡೆಯ ಮೇಲೆ ಪ್ರಮಿಳಾ ವಾಸು ಬಂದು ಕುಳಿತರು. ಅಸ್ತಮ ಸೂರ್ಯನ ಕೆಂಗಿರಣ ಆಕಾಶದ ನೀಲಿ ಮತೆಗೂ, ಸಮುದ್ರದ ನೀಲಿಮತೆಗೂ ವಿಶೇಷ ಕಾಂತಿಯನ್ನಿತ್ತಿತ್ತು. ಸಮುದ್ರ ಪ್ರಶಾಂತವಾಗಿ ಬಳುಕುತ್ತಿತ್ತು.

ಮಳಲುದಂಡೆಯ ಮೇಲೆ ಹಲವರು ಅಥವಥ ತಿರುಗುತ್ತಿದ್ದರು. ಕೆಲವು ಮಕ್ಕಳು ಮಳಲಿನಲ್ಲಿ ಗುಬ್ಬಚ್ಚಿಗೂಡು ಕಟ್ಟಿ, ಕೆಡಹಿ ಆಡುತ್ತಿದ್ದವು. ಭೇಲ್ ವ್ಯಾಪಾರಿಯ ಕೈಗಾಡಿಯ ಮುಂದೆ ಕೆಲವು ಜನ ನೆರೆದು ಅವನ ಭೇಲ್, ಪೂರಿ, ಹಣ್ಣಿನ ರಸಾಯನ ತಿನ್ನುತ್ತಿದ್ದರು. ಕಂಕುಳಿಗೆ ಚಾಣದ ಚೀಲ ತಗುಲಿಸಿ ಕೊಂಡು ಚಾಣದವನು ಎಲ್ಲರ ಬಳಿಗೂ ಬಂದು ಕೊಳ್ಳಿರೆಂದು ಪೀಡಿಸುತ್ತಿದ್ದ. ಅಲ್ಲಿ ಇಲ್ಲಿ ಕೆಲವು ವೃದ್ಧರು ಕುಳಿತು ಮಹಾಸಾಗರವನ್ನು ದಿಟ್ಟಿಸಿ ನೋಡುತ್ತ ತಮ್ಮ ಗತಪ್ರಾಯವನ್ನು ನೆನಸಿಕೊಳ್ಳುತ್ತಿದ್ದರು. ಜೀವನ ರೂಪುಹೊತ್ತು ಜುಹೂ ದಡದಲ್ಲಿ ವಿವಿಧ ಭಂಗಿಯಲ್ಲಿ ಮೆರೆದಾಡುತ್ತಿತ್ತು.

ಪ್ರಮಿಳಾ ಪ್ರತಿಯೊಂದನ್ನೂ, ಪ್ರತಿಯೊಬ್ಬರನ್ನೂ ಸೂಕ್ಷ್ಮವಾಗಿ ನೋಡುತ್ತಿದ್ದಳು. ಅವರೆಲ್ಲರ ಮನಸ್ಸಿನಲ್ಲಿ ನಡೆಯುತ್ತಿದ್ದ ವ್ಯಾಪಾರವನ್ನು ಗ್ರಹಿಸಲೆತ್ನಿಸುತ್ತಿದ್ದಳು.

ಸಾಗರದ ವಿವಿಧ ಲೀಲೆ ಅವಳ ಮನಸ್ಸಿಗೆ ಮುದವನ್ನುಂಟುಮಾಡಿತ್ತು. ಮುನ್ನುಗ್ಗಿ ಬಂದ ಅಲೆಯನ್ನು ಅಟ್ಟಬಂದು ಮತ್ತೊಂದು ಅಲೆ ಅದನ್ನು ಬಾಚಿ ತಬ್ಬಿಕೊಂಡು ತನ್ನೊಳಗೆ ಅಡಗಿಸಿಕೊಳ್ಳುತ್ತಿದ್ದ ನೋಟ ಬಹು ರಮ್ಯವಾಗಿತ್ತು. ಸಾಗರದ ಭೋರ್ಗರೆಯ ಹಿಂದಣ ಸಂದೇಶವನ್ನು ಅರ್ಥ ಮಾಡಿಕೊಳ್ಳಲೆತ್ನಿಸುತ್ತಿದ್ದಳು.

ಸೂರ್ಯಾಸ್ತವಾಯಿತು. ಇದ್ದಕ್ಕಿದ್ದಂತೆ ಪ್ರಕೃತಿಯಲ್ಲಿ ಕತ್ತಲೆ ಕಾಣಿಸಿ ಕೊಂಡಿತು. ವಾಸು ಮೆಲ್ಲನೆ

"ಕತ್ತಲಾಯಿತು" ಎಂದು ಹೇಳಿದ.

ಪ್ರಮಿಳಾ ಗಂಭೀರವಾಗಿ

"ಕತ್ತಲೆ ಕವಿದ ಮೇಲೇ ಬೆಳಕು ಬಿತ್ತರಿಸುವುದು"

ಎಂದಳು. ವಾಸು ನಸುನಗುತ್ತಾ

"ಹೌದು, ಪ್ರೇಮದ ಬೆಳಕು"

"ಹೌದು, ಪ್ರೇಮದ ಬೆಳಕು"

ಎಂದು ಪ್ರವಿಲಾಳೆಯೂ ಅವನ ಅಭಿಪ್ರಾಯವನ್ನು ಸಮರ್ಥಿಸಿದಳು. ಆದರೆ ಅವಳ ಧ್ವನಿಯಲ್ಲಿ ಹೊಸ ಶ್ರುತಿಯಿದ್ದಿತು.

ಪ್ರವಿಲಾಳೆಯು ಬಳಿಸಾರಿ ಅವಳನ್ನು ನೇವರಿಸಿ ಮುದ್ದಿಸಬೇಕೆಂಬ ಆಕಾಂಕ್ಷೆ ವಾಸು ಮನಸ್ಸಿನಲ್ಲಿ ಬಲವಾಗಿ ಮೂಡಿತು. ವಾತಾವರಣದ ಪ್ರಶಾಂತತೆ, ನಿಸರ್ಗರಮ್ಯತೆ ಅವನ ಇಚ್ಛೆಗೆ ಇಂಬುಗೊಟ್ಟಿದ್ದವು. ಆದರೆ ಏಕೋ ಏನೋ ಮನಸ್ಸು ಹಿಂದೆಗೆಯಿತು.

ಪ್ರವಿಲಾಳೆಯ ಮುಖದ ಮೇಲೆ ಮಂದಬೆಳಕು ಬಿದ್ದು ಅದಕ್ಕೆ ಮಾರ್ದವತೆಯನ್ನು ಹೆಚ್ಚಿಸಿತ್ತು. ಮಂದಹಾಸ ತುಂಬಿಕೊಂಡು ನಿಂತಿದ್ದ ಅವಳ ತುಟಿಗಳು ವಾಸುವನ್ನು ಕರೆಕರೆದು ಏಡಿಸುತ್ತಿದ್ದವು. ಆಗಾಗ್ಗೆ ಗಾಳಿ ಬಲವಾಗಿ ಬೀಸಿ ಅವಳ ಸೆರಗನ್ನು ಸರಿಸಿ, ತುಂಬಿದ ಕಳಶಗಳಂತಿದ್ದ ಅವಳ ಸ್ತನದ್ವಯಗಳನ್ನು ಕಾಣಿಸುತ್ತಿದ್ದವು.

ವಾಸುವಿನಲ್ಲಿ ಹುಟ್ಟಿದ ಹಸಿವು, ತೃಷೆಯನ್ನು ಪ್ರವಿಲಾಳಾ ಅರಿತು ತಾನೇ ಅವನ ಬಳಿಸಾರಿ, ಮೆಲ್ಲನೆ ಅವನ ಬುಜದ ಮೇಲೆ ತಲೆಯೊರಗಿಸಿದಳು. ರೇಷ್ಮೆಯಂತೆ ಮೃದುವಾದ ಅವಳ ಸುಗಂಧಯುಕ್ತ ಕುರುಳು ಅವನ ಕುತ್ತಿಗೆಯ ಮೇಲೆ ನಲಿದಾಡಿ, ಅವನಿಗೆ ರೋಮಾಂಚವನ್ನುಂಟು ಮಾಡಿತು. ಅವಳನ್ನೂ ಹಾಗೆಯೇ ಅಪ್ಪಿಕೊಂಡ.

"ಮನಸ್ಸಿಗೆ ನೆಮ್ಮದಿಯಾಯಿತೇ ?" ಎಂದು ಕೇಳಿದಳು.

"ಏಕೆ ಹಾಗೆ ಕೇಳುವೆ ಪ್ರವಿಲಾ."

"ನಿಮಗೆ ಅಸಮಾಧಾನವಾಗಿತ್ತು."

"ಇಲ್ಲವೆಂದು ಹೇಳಲಾರೆ."

"ಇಷ್ಟೊಂದು ಮೋಹ ಒಳ್ಳೆಯದೇ ದೊರೆ."

"ನಮ್ಮ ಪ್ರೇಮದ ಪ್ರಮಾಣವನ್ನು ನಾನು ಸೇರಿನಲ್ಲಿ ಅಳೆಯಲಾರೆ."

"ಅಳೆದರೆ ಒಳ್ಳೆಯದಲ್ಲವೇ ?"

"ಪ್ರವಿಲಾ – ನೀನು ಎದುರಿಗಿದ್ದರೆ ನನ್ನ ಬಾಳು ತುಂಬಿದಂತಿರುತ್ತದೆ."

"ನಾನು ಅಮರಳಲ್ಲ. ಈ ದೇಹಕ್ಕೂ ಮುಪ್ಪು ಬರುತ್ತದೆ– ಸಾವು ಬರುತ್ತದೆ."

"ಪ್ರೇಮಕ್ಕೆ ಮುಪ್ಪು, ಸಾವಿನ ಭಯವಿಲ್ಲ. ಅದರ ತಾರುಣ್ಯ ಚಿರಂತನ; ಅದರ ಬಾಳು ಅಮರ."

ಕೇವಲ ವ್ಯಾವಹಾರಿಕ ಜೀವನದಲ್ಲಿ ಹುಟ್ಟಿ, ಬೆಳೆದ ವಾಸುವಿನ ಅಂತರಂಗದಲ್ಲಿ ಹುದುಗಿದ್ದ ಕಾವ್ಯ ದೀಧೀತಿಯನ್ನು ಕಂಡು ಪ್ರಮೀಳೆ ಬೆರಗಾದಳು. ದೈವಿಕ ತೃಪ್ತಿ ಅವಳಲ್ಲಿ ಕಂಡು ಬಂದಿತು.

"ನಾನು ನಿಮ್ಮ ವಿಷಯದಲ್ಲಿ ಒಂದು ಅಪರಾಧಮಾಡಿರುವೆ ದೊರೆ. ಅದಕ್ಕೆ ಕ್ಷಮೆಬೇಡದಿದ್ದರೆ ನನ್ನ ಮನಸ್ಸಿಗೆ ಶಾಂತಿಯಿಲ್ಲ."

"ಅದನ್ನು ನನಗೆ ತಿಳಿಸುವುದರಲ್ಲಿ ನಿನ್ನ ಮನಸ್ಸಿಗೆ ಶಾಂತಿ ಸಿಕ್ಕುವ ಹಾಗಿದ್ದರೆ ಹೇಳು. ನಾನು ತಿಳಿದಿರುವಂತೆ ನಿನ್ನಿಂದ ಯಾವ ಅಪರಾಧವೂ ಆಗಿಲ್ಲ."

"ನೀವು ಕೇವಲ ನನ್ನ ತಾರುಣ್ಯ, ಸೌಂದರ್ಯವನ್ನು ಮಾತ್ರ ಬಯಸುತ್ತೀರೆಂದು ಭಾವಿಸಿದ್ದೆ. ಇದು ಅಪರಾಧವಲ್ಲವೇ ?"

"ರಾಣೀ, ನಿನ್ನ ತಾರುಣ್ಯ, ಸೌಂದರ್ಯದ ಅಮೃತಸರಸ್ಸಿನಲ್ಲಿ ದೇವ ಹಂಸದಂತೆ ನಾನು ವಿಹಾರ ಮಾಡಿದ್ದೇನೆ. ಆದರೆ ಅದಕ್ಕೂ ಶಾಶ್ವತವಾದುದು ನಿನ್ನ ಪರಿಶುದ್ಧ ಪ್ರೇಮವೆಂಬುದನ್ನು ನಾನು ಅರಿತಿಲ್ಲವೆಂದು ಭಾವಿಸಿಕೊಳ್ಳ ಬೇಡ."

"ನಾನು ಎಷ್ಟು ಪುಣ್ಯವಂತಳು."

"ನಿನ್ನ ಪುಣ್ಯದಲ್ಲಿ ನಾನು ಸಮಭಾಗಿ."

"ಅದರಲ್ಲಿ ಭಾಗಕೊಡುವಷ್ಟು ನಾನು ಕೃಪಣಳಲ್ಲ. ನನ್ನ ಪುಣ್ಯವೆಲ್ಲಾ ಎಂದೋ ನಿಮ್ಮ ಪಾದಕ್ಕೆ ಅರ್ಪಿತವಾಗಿದೆ."

ಬಿಸಿಲಿನ ಝಳಕ್ಕೆ ಬೆಂದು ನಿಂತಿದ್ದ ಹುಲ್ಲುಗಾವಲಿನ ಮೇಲೆ ಹೂಮಳೆ ಗರೆದಂತಾಯಿತು ವಾಸು ಹೃದಯಕ್ಕೆ. ಅವಳ ಇನಿಮಾತಿನ ಮಾಧುರ್ಯ ಸವಿಯುತ್ತ ಅವನು ಮೈಮರೆತ.

ಅವರಿಬ್ಬರೂ ಮನೆಗೆ ಹಿಂದಿರುಗುವ ವೇಳೆಗೆ ರಾತ್ರಿ ಹಗಲನ್ನಪ್ಪಲು ಹೊರಟಿತ್ತು.

೯

ಮಾರನೆಯ ಬೆಳಿಗ್ಗೆ ಪ್ರಮೀಳೆ ಪಾಠಕ್ಕೆ ಕುಳಿತಾಗ ವಾಸು ಸಂತೋಷ ವ್ಯಕ್ತಮಾಡಿ ಶಂಕರನಿಗೆ

"ನಿನ್ನ ಶಿಷ್ಯೆ ನಿನ್ನನ್ನು ಮೀರಿಸಿಬಿಡುತ್ತಾಳೆ ಶಂಕರ" ಎಂದ.

"ಗುರುವನ್ನು ಪರಾಜಯಗೊಳಿಸುವ ಶಿಷ್ಯನೇ ನಿಜವಾದ ಶಿಷ್ಯ."

"ಸ್ತ್ರೀ ಶೂದ್ರರಿಗೆ ವೇದ ಹೇಳಬಾರದು ಎಂದು ಹಿಂದೆ ಕಾಯಿದೆ ಮಾಡಿದ್ದರಂತೆ!"

"ಸ್ತ್ರೀ ಶೂದ್ರರೇ ವೇದದ ಅನೇಕ ಭಾಗಗಳನ್ನು ಬರೆದಿದ್ದಾರೆ ವಾಸು. ವೇದ ವಿಶ್ವದ ಸೊತ್ತು. ಅದರ ಮೇಲೆ ಸ್ವಾಮ್ಯಸ್ಥಾಪಿಸಲು ಯಾರಿಗೂ ಅಧಿಕಾರವಿಲ್ಲ."

"ನಿನ್ನ ಮನೋವೈಶಾಲ್ಯ ಕಂಡು ನನಗೆ ಆಶ್ಚರ್ಯವಾಗುತ್ತದೆ ಶಂಕರ. ಸಂಸ್ಕೃತದ ಓದು ಸಂಕುಚಿತ ಮನಸ್ಸಿನ ಪೋಷಕವೆಂದು ನಾನುಭಾವಿಸಿದ್ದೆ."

"ನಿನ್ನ ಭಾವನೆ ತಪ್ಪಲ್ಲ ವಾಸು. ವೇದೋಪನಿಷತ್ತುಗಳ ಶಬ್ದಾರ್ಥಕ್ಕೆ ಹೋರಾಡಿದ ಪಂಡಿತರು ಅದರ ಅಂತರಾತ್ಮವನ್ನು ಮರೆತರು. ಕರಟಕ್ಕೆ ಗಂಟು ಬಿದ್ದು ತಿರುಳನ್ನು ಕೈಬಿಟ್ಟರು. ಭಾರತೀಯ ದರ್ಶನವೆಲ್ಲಾ ಗೀತೆಯ ಒಂದು ಅಭಿಪ್ರಾಯದ ಮೇಲೆ ನಿಂತಿದೆ

'ಸಮೋಹಂ ಸರ್ವಭೂತೇಷು
ನ ಮೇ ದ್ವೇಷ್ಯೋಸ್ತಿ ನ ಪ್ರಿಯಃ ।
ಯೇ ಭಜಂತಿ ತು ಮಾಂ ಭಕ್ತ್ಯಾ
ಮಯಿ ತೇ ತೇಷು ಚಾಪ್ಯಹಮ್ ॥'

[ಎಲ್ಲ ಪ್ರಾಣಿಗಳಲ್ಲಿಯೂ ನಾನು ಒಂದೇ ರೀತಿ ಇರುವೆನು. ನನಗೆ ಬೇಡವಾದವನೂ ಇಲ್ಲ, ಬೇಕಾದವನೂ ಇಲ್ಲ, ಯಾರು ನನ್ನನ್ನು ಪ್ರೇಮ ದಿಂದ ಆಶ್ರಯಿಸುತ್ತಾರೋ ಅವರು (ನನ್ನನ್ನು ತಮ್ಮ ಆತ್ಮವೆಂದು ತಿಳಿದು) ನನ್ನಲ್ಲಿರುತ್ತಾರೆ. ನಾನು ಅವರಲ್ಲಿಯೇ ಇರುವೆನು.]

ಭಗವಂತ ಹೇಗೆ ಎಲ್ಲರನ್ನೂ ಸಮಾನದೃಷ್ಟಿಯಿಂದ ನೋಡುವನೋ ಹಾಗೆಯೇ ಭಗವಂತನ ಪುತ್ರನಾದ ಮಾನವ ಎಲ್ಲರನ್ನೂ ಸಮಾನದೃಷ್ಟಿಯಿಂದ ನೋಡಬೇಕು. ಪಾಂಡಿತ್ಯದ ಪ್ರಯೋಜನ ಪರಭರ್ತ್ಸನೆಯಲ್ಲ- ಪರಕಾಯ ಪ್ರವೇಶ- ಪರಮಾತ್ಮ ಪ್ರವೇಶ.''

''ನಿನ್ನ ಉಪನಿಷತ್ ಸಾರದಲ್ಲಿಯೂ ಇದನ್ನೇ ಪ್ರತಿಪಾದಿಸಿರುವೆ.''

''ಭಾರತ ಜಗತ್ತಿಗೆ ನೀಡುವ ಮಹಾಕಾಣಿಕೆ ಇದು ವಾಸು. ಈ ಭಾವನೆ ಬೆಳಸುವುದರಿಂದಲೇ ನಾವು ಲೋಕಕಲ್ಯಾಣ ಸಾಧನೆ ಮಾಡಿದಂತಾಗುವುದು.''

''ನಿನ್ನ ಪುಸ್ತಕದ ಪ್ರೂಫ್ ಬಂದಿತ್ತೇ ?''

''ಬಂದಿತ್ತಲ್ಲ- ನೋಡಿ ಕಳಿಸಿಕೊಟ್ಟೆ. ಇಂದೋ ನಾಳೆಯೋ ಕೊನೆಯ ಪ್ರೂಫ್ ಬರಬಹುದು.''

''ನೀನು ಗ್ರಂಥರಚನೆ ಮುಂದುವರಿಸಬೇಕು ಶಂಕರ. ಒಂದಕ್ಕೇ ನಿಲ್ಲಿಸಬೇಡ.''

''ಹಾಗೇ ಆಗಲಿ. ಭಗವಂತನಿಗೆ ಇಚ್ಛೆಯಾದರೆ ನನ್ನ ಕೈಯಿಂದ ಹೆಚ್ಚು ಸೇವೆ ಪರಿಗ್ರಹಿಸುತ್ತಾನೆ.''

ಇನ್ನು ಹೆಚ್ಚುಕಾಲ ಮಾತು ಬೆಳಸಿದರೆ ಪಾಠಕ್ಕೆ ಅಡ್ಡಿಯಾಗುತ್ತವೆಂದು ತಿಳಿದು ವಾಸು ಅಲ್ಲಿಂದ ಹೊರಡಲನುವಾಗಿ

''ಸಾಯಂಕಾಲ ಭಜನೆ ಮರೆಯಬೇಡ. ಬಾಂಬೇವಾಲ ಅವರಿಗೆ ನಾನು ಫೋನ್‌ಮಾಡಿ ತಿಳಿಸುತ್ತೇನೆ.''

ಎಂದು ಪ್ರಮೀಳೆಗೆ ಹೇಳಿ ಅಲ್ಲಿಂದ ಹೊರಟ.

ಸಾಯಂಕಾಲದ ಭಜನೆ ಆರೂವರೆ ಗಂಟೆಗೆಂದು ನಿರ್ದಿಷ್ಟವಾಗಿದ್ದರೂ ಭಕ್ತಜನ ಐದು ಗಂಟೆಗೆ ವರ್ಸ್ಸೋವಾಕ್ಕೆ ಬಂದರು. ಬೊಂಬಾಯಿವಾಲಾ ಅವರ ಕಾರಿನ ಜತೆ ಮತ್ತೊಂದು ಕಾರು ಬಂದಿತು. ಗಂಡಸರು ರಾಮಸ್ವಾಮಿಯ ಕೋಣೆಯಲ್ಲಿ ಕೂಡಲು, ಹೆಂಗಸರು ಮಹಡಿ ಹತ್ತಿಹೋದರು.

ಯೋಗಿನಿ ಅಮ್ಮನವರು ಎಲ್ಲರಿಗೂ ಸುಸ್ವಾಗತ ಬಯಸಿದರು. ಷಿರೀನ್ ಯೋಗಿನಿ ಅಮ್ಮನವರ ಪಾದಮುಟ್ಟಿ ನಮಸ್ಕರಿಸಲು ಮಿಕ್ಕ ಹೆಣ್ಣುಮಕ್ಕಳೂ ಅವರ ಮೇಲ್ಪಂಕ್ತಿಯನ್ನನುಸರಿಸಿದರು.

ಷಿರೀನ್ ತಮ್ಮ ಜತೆಯಲ್ಲಿದ್ದ ದಪ್ಪ ಗುಜರಾತಿ ಹೆಣ್ಣುಮಕ್ಕಳ ಪರಿಚಯಮಾಡಿಕೊಡುತ್ತಾ

"ಇವರು ರತನ್‌ಲಾಲ್‌ಜೀಯವರ ಧರ್ಮಪತ್ನಿ ಅನಸೂಯಾಬೆನ್"

ಅನಸೂಯಾಬೆನ್ ಜತೆಯಲ್ಲಿದ್ದ ತರುಣಿಯ ಪರಿಚಯ ಮಾಡಿಕೊಡುತ್ತಾ

"ಇವರು ರತನ್‌ಲಾಲ್‌ಜೀಯವರ ಸೋದರ ಮೋಹನ್‌ಲಾಲರ ಧರ್ಮಪತ್ನಿ ಊರ್ಮಿಳಾಬೆನ್. ನಿಮ್ಮ ಅನುಮತಿ ಪಡೆಯದೆ ಇವರನ್ನು ಕರೆದುಕೊಂಡು ಬಂದುದಕ್ಕೆ ಕ್ಷಮೆಬೇಡುತ್ತೇನೆ."

"ದೇವಮಂದಿರಕ್ಕೆ ಬರಲು ಯಾರ ಅನುಮತಿಯೂ ಬೇಕಿಲ್ಲ ಮಗಳೇ. ನಿಮ್ಮ ಆರೋಗ್ಯ ಹೇಗಿದೆ?"

"ನಿಮ್ಮ ದರ್ಶನ ಮಾತ್ರದಿಂದಲೇ ನನ್ನ ಕಾಹಿಲೆ ಹೋಯಿತು. ನನಗೆ ಜೀವದಾನ ಮಾಡಿದಿರಿ."

"ರಾಜರಾಜೇಶ್ವರಿಯ ಕೃಪೆ. ರಾತ್ರಿ ಚೆನ್ನಾಗಿ ನಿದ್ದೆ ಬರುತ್ತದೆಯೇ?"

"ಚೆನ್ನಾಗಿ ಬರುವುದಿಲ್ಲ. ಮೊದಲಿಗಿಂತ ಮೇಲು. ಪ್ರತಿದಿನ ಸುಮಾರು ಮೂರು ನಾಲ್ಕು ಗಂಟೆ ಚೆನ್ನಾಗಿ ನಿದ್ದೆಬರುತ್ತದೆ."

ಯೋಗಿನಿ ಅಮ್ಮನವರು ಅನಸೂಯಾಬೆನ್ ಕಡೆ ತಿರುಗಿ

"ನಿಮಗೆ ಮಕ್ಕಳೆಷ್ಟು?"

ಅನಸೂಯಾ ಉತ್ತರ ಕೊಡಲಿಲ್ಲ. ತಲೆತಗ್ಗಿಸಿ ಕುಳಿತುಕೊಂಡರು. ಕಣ್ಣಲ್ಲಿ ಸಂಗ್ರಹವಾದ ದುಃಖಬಿಂದು ಹೊರಗೆ ಧುಮುಕಲೋ ಬೇಡವೋ ಎಂದು ಯೋಚಿಸುತ್ತಿತ್ತು.

"ದುಃಖಿಸಬೇಡಿ. ತಾಯಿಯನ್ನು ನಂಬಿದವರು ಯಾರೂ ಕೆಡುವುದಿಲ್ಲ."

"ನನಗೆ ಮಕ್ಕಳೇ ಆಗುವುದಿಲ್ಲವೆಂದು ಡಾಕ್ಟರು ಹೇಳಿದ್ದಾರೆ."

"ಷಿರೀನ್ ಸೋದರಿಗೆ ಗುಣವೇ ಆಗುವುದಿಲ್ಲವೆಂದೂ ಡಾಕ್ಟರು ಹೇಳಿದ್ದರು."

ಎಂದು ಯೋಗಿನಿ ಅಮ್ಮನವರು ಗಹಗಹಿಸಿ ನಕ್ಕು

"ಡಾಕ್ಟರುಗಳು ದೇಹಶಾಸ್ತ್ರ ಮಾತ್ರ ಬಲ್ಲರು. ಅವರಿಗೆ ಮನಃ ಶಾಸ್ತ್ರದ ಪರಿಚಯವಿಲ್ಲ. ದೇಹ ಮನಸ್ಸಿನ ಊಳಿಗದಾಳೆಂಬುದನ್ನು ಮರೆಯಬೇಡಿ."

"ನಾನು ನಿರಾಶೆಗೊಳ್ಳುವ ಕಾರಣವಿಲ್ಲವೇ ?"

"ಯಾರೂ ನಿರಾಶೆಗೊಳ್ಳಬಾರದು. ತಾಯಿ ಎಲ್ಲರನ್ನೂ ಪರೀಕ್ಷಿಸುತ್ತಾಳೆ. ಆದರೆ ಯಾರಿಗೂ ನೋವು ಕೊಡುವುದಿಲ್ಲ. ನಿಮ್ಮ ವಾರಗಿತ್ತಿ ಓದಿದ್ದಾರೆಯೋ ?"

"ಕಾಲೇಜ್ ಬಾಗಿಲು ಮುಟ್ಟಿಬಂದಳು."

-ಯೋಗಿನಿ ಅಮ್ಮನವರು ಊರ್ಮಿಳೆಯ ಕಡೆ ತಿರುಗಿ ವಿಶ್ವಾಸದಿಂದ

"ಮುಂದಕ್ಕೆ ಏಕೆ ಓದಲಿಲ್ಲ ಮಗಳೆ."

"ಮದುವೆಯಾಗಿ ಗಂಡನ ಮನೆಗೆ ಬಂದೆ. ಓದು ಸಾಕೆಂದು ನನ್ನ ಯಜಮಾನರು ಹೇಳಿದರು."

"ಊರ್ಮಿಳಾ ಕಾಲೇಜಿಗೆ ಹೋಗದಿದ್ದರೇನಂತೆ! ಚೆನ್ನಾಗಿ ಹಾಡುತ್ತಾಳೆ ಮಾತಾಜಿ"

ಎಂದು ಅನಸೂಯಾ ಹೇಳಿದರು. ಯೋಗಿನಿ ಅಮ್ಮನವರು ಸಂತೋಷ ವ್ಯಕ್ತಮಾಡುತ್ತ

"ಹಾಗೇನು. ಇವತ್ತು ಭಜನೆ ನೀನೇ ಮಾಡಬೇಕು ಊರ್ಮಿಳಾ."

"ನನಗೆ ಚೆನ್ನಾಗಿ ಹಾಡಲು ಬರುವುದಿಲ್ಲ. ಅಕ್ಕ ಸುಮ್ಮನೆ ನನ್ನನ್ನು ಪ್ರಶಂಸಿಸುತ್ತಾರೆ."

"ಭಕ್ತಿಯಿಂದ ಭಗವಂತನನ್ನು ಹೇಗೆ ಕರೆದರೂ ಅವನಿಗೆ ಪ್ರಿಯವೇ. ಇರುವೆಯ ಕಾಲಸಪ್ಪುಳ ಕೂಡ ಅವನಿಗೆ ಕೇಳಿಸುತ್ತದೆ."

ರಾಮುಸ್ವಾಮಿ ತೊಟ್ಟಿಯಲ್ಲಿ ಭಜನೆಯ ವ್ಯವಸ್ಥೆಮಾಡಿ ಬಂದು ಯೋಗಿನಿ ಅಮ್ಮನವರಿಗೆ

"ಎಲ್ಲಾ ಸಿದ್ಧವಾಗಿದೆ. ಅತಿಥಿಗಳನ್ನು ಕರೆಯಲೇನು ?"

ಎಂದು ಹೇಳಿದ.

"ಯಾರು ಯಾರು ಬಂದಿದ್ದಾರೆ."

"ಬೊಂಬಾಯಿವಾಲಾ, ರತನ್‌ಲಾಲ್‌ಜೀ, ಅವರ ತಮ್ಮ ಮೋಹನ್ ಲಾಲ್‌ಜೀ"

"ಎಲ್ಲರನ್ನೂ ಬರಹೇಳಿ."

ಅತಿಥಿಗಳು ಬರುವಷ್ಟರಲ್ಲಿ ಹೆಣ್ಣುಮಕ್ಕಳು ತೊಟ್ಟಿಯಲ್ಲಿ ಕುಳಿತರು. ಯೋಗಿನಿ ಅಮ್ಮನವರು ಕೈಯಲ್ಲಿ ತಂಬೂರಿ ಹಿಡಿದು ಶ್ರುತಿ ಮಾಡಿಕೊಂಡು ಎದುರಿಗಿದ್ದ ಹಾರ್ಮೋನಿಯಂ ವಾದ್ಯ ತೆಗೆದುಕೊಳ್ಳುವಂತೆ ಊರ್ಮಿಳೆಗೆ ಸೂಚಿಸಿದರು.

"ನೀನೆ ಮೊದಲು ಆರಂಭಿಸು ಊರ್ಮಿಳಾ."

"ಯಾವದು ಹಾಡಲಿ ?"

"ಮೀರಾಬಾಯಿಯ ಭಜನೆ. ಮೇರೇತೋ ಗಿರಿಧರ ಗೋಪಾಲ – ಪಗಘುಂಗರು – ಚಾಕರ ರಾಖೋಜೀ, ನಿನಗೆ ಯಾವದು ಬರುತ್ತದೆ ಅದು."

'ಇವರಿಗೆ ಗೊತ್ತಿಲ್ಲದಿರುವುದು ಯಾವದೂ ಇಲ್ಲವಲ್ಲ' ಎಂದುಕೊಂಡು ಊರ್ಮಿಳಾ ಹಾಡಲು ಮೊದಲುಮಾಡಿದಳು.

ರಾಮಸ್ವಾಮಿಯ ಜತೆ ಅತಿಥಿಗಳು ಬಂದು ನಿಶ್ಯಬ್ದವಾಗಿ ಕುಳಿತರು. ಅತಿಥಿಗಳು ಶಂಕರನಿಗೆ ಗೌರವದಿಂದ ಸ್ಥಳಮಾಡಿಕೊಟ್ಟು ಮುಂದೆ ಕೂಡಿಸಿದರು.

ಊರ್ಮಿಳಾ ಮೂರು ಭಜನೆ ಹಾಡುಗಳನ್ನು ಹಾಡಿದಳು. ಯೋಗಿನಿ ಅಮ್ಮನವರು ಅವಳಿಗೆ ನಿಲ್ಲಿಸೆಂದು ಹೇಳಲಿಲ್ಲ. ಅವಳು ಮತ್ತೊಂದು ಹಾಡು ಆರಂಭಿಸುವಷ್ಟರಲ್ಲಿ ಷಿರೀನ್

"ನೀವು ಹಾಡುವುದಿಲ್ಲವೇ ?"

ಎಂದು ಕೇಳಿದರು.

ಯೋಗಿನಿ ಅಮ್ಮನವರು ತಂಬೂರಿಯನ್ನು ಮತ್ತೆ ಶ್ರುತಿಮಾಡಿಕೊಂಡು ಒಂದು ದೇವರನಾಮ ಹಾಡಿದರು.

ಅವರ ಹಾಡಿಕೆ ಎಲ್ಲರ ಮೇಲೂ ಸಮ್ಮೋಹನಾಸ್ತ್ರ ಬೀರಿತು. ಹೆಣ್ಣು ಮಕ್ಕಳು ಭಿತ್ತಿಚಿತ್ರಗಳಂತೆ ಕುಳಿತರು. ಶಂಕರ ಪದ್ಮಾಸನಾಸೀನನಾಗಿ ಧ್ಯಾನಪರವಶನಾದ. ಬೊಂಬಾಯಿವಾಲಾ, ರತನ್‌ಲಾಲ್ ತಮ್ಮ ಇರುವನ್ನೇ ಮರೆತುಬಿಟ್ಟರು.

ತುಂಬಿದ ಗಂಟಲಿನಿಂದ ತಾನವಿತಾನಗಳು ಮೃದುಮಧುರವಾಗಿ ಹೊರ ಬೀಳುತ್ತಿದ್ದವು. ಯೋಗಿನಿ ಅಮ್ಮನವರ ಕಂಠ ತುಂಬಿದ್ದಷ್ಟೇ ಹೃದಯವೂ ತುಂಬಿತ್ತು.

ದೇವರನಾಮ ಮುಗಿಸಿ ಯೋಗಿನಿ ಅಮ್ಮನವರು ಕಬೀರ ಭಜನೆ ಆರಂಭಿಸಿದರು. 'ಹರೀಸೆ ಕೊಯಿ ನಯಿ ಬಡ, ದಿವಾನೆ; ರಾಮಸೆ ಕೊಯಿ ನಯಿ ಬಡ. ಕ್ಯಂ ಗಫುಲತುಮೆ ಪಡ ದಿವಾನೆ' ಅವರು ಹಾಡಲಾರಂಭಿಸಿದಾಗ ವಾಸು ಒಮ್ಮೆ ಕತ್ತೆತ್ತಿ ಯೋಗಿನಿ ಅಮ್ಮನವರ ಕಡೆನೋಡಿದ.

ಕಬೀರನ ಹಾಡು ಮುಗಿಸಿ ಯೋಗಿನಿ ಅಮ್ಮನವರು ಮೀರಾಬಾಯಿಯ 'ಮೀರಾ ಮನ ಮಂದಿರಮೆ' ಹಾಡು ಆರಂಭಿಸಿದಾಗ ಅವರಿಗೇ ಆವೇಶ ಬಂದಂತಾಗಿತ್ತು.

'ನನ್ನ ಮನಮಂದಿರದಲ್ಲಿ ಹಾಡಿ ಕುಣಿಯುತ್ತಿರುವವನು ಯಾರು?
ಯಶೋದೆಯ ಮಾತೃತ್ವವನ್ನು ಅಮರಗೊಳಿಸಿದ ಗೋಪಾಲನೇನು?
ಕಂಸಾದಿ ಕ್ರೂರ ದೈತ್ಯರನ್ನು ನಿಗ್ರಹಿಸಿದ ಯದುರಾಯನೇನು?
ಬೃಂದಾವನದ ಗೋಪಿಯರೊಂದಿಗೆ ರಾಸಕ್ರೀಡೆಯಾಡಿದ
ಶ್ಯಾಮಸುಂದರನೇನು?
ಪಾರ್ಥನಿಗೆ ಬಿಡುಗಡೆಯ ಮಾರ್ಗ ತೋರಿದ
ಪಾರ್ಥಸಾರಥಿ ನಾರಾಯಣನೇನು?
ಮೀರಾದಾಸಿಯ ಮನದಲ್ಲಿ ಮನೆಮಾಡಿರುವವನು
ಮುರಳೀಧರನೇನು?'

ಹಾಡು ಮುಗಿಯಿತು. ಆದರೆ ಅದರ ನಾದಸೌರಭ ಇನ್ನೂ ಅಲ್ಲೇ ತೊನೆದಾಡುತ್ತಿತ್ತು. ಯೋಗಿನಿ ಅಮ್ಮನವರು ಹಾಡು ಮುಗಿಸಿದ ಮೇಲೂ ತಂಬೂರಿಯನ್ನು ಮೀಟುತ್ತಲೇ ಇದ್ದರು. ಅವರ್ಣನೀಯ ಪ್ರಶಾಂತ ಆನಂದ ಆವರಿಸಿತು.

ಯೋಗಿನಿ ಅಮ್ಮನವರು ಮೆಲ್ಲನೆ ತಂಬೂರಿಯನ್ನು ಕೆಳಗಿಳುಹಿ "ಗುರುಗಳು ಗೀತೆಯನ್ನು ಕುರಿತು ನಾಲ್ಕು ಮಾತು ಹೇಳುತ್ತಾರೆ"

ಎಂದಳು. ಎಲ್ಲರ ಲಕ್ಷ್ಯವೂ ಶಂಕರನ ಕಡೆ ಹೋಯಿತು. ಶಂಕರ ಸಂಕೋಚದಿಂದ

"ನಾನು ಹೇಳಬೇಕಾದುದೇನಿದೆ ತಾಯಿ. ಎಲ್ಲವನ್ನೂ ನಿಮ್ಮ ಹಾಡು ಹೇಳಿ ಮುಗಿಸಿದೆ."

"ಗೀತೆಯ ನಾಲ್ಕು ಶ್ಲೋಕ ನೀವು ಹೇಳಿದರೆ ನನಗೆ ತೃಪಿಯಾಗುತ್ತದೆ"

ಎಂದಳು. ಶಂಕರ ಹೆಚ್ಚು ಉಪಚಾರಕ್ಕೆ ಕಾಯಲಿಲ್ಲ. ತನ್ನ ಸ್ಥಳ ಬಿಟ್ಟೆದ್ದು ಶ್ರಾವಕರ ಎದುರು ಕುಳಿತು ಹದಿನೆಂಟನೆಯ ಅಧ್ಯಾಯದಿಂದ ಕೆಲವು ಶ್ಲೋಕಗಳನ್ನು ಹೇಳಿ, ಕರ್ಮದ ಬಿಡುಗಡೆಗೆ ಗೀತಾಚಾರ್ಯ ಸೂಚಿಸಿರುವ ಮಾರ್ಗವನ್ನು ಸರಳವಾಗಿ, ಸ್ಪಷ್ಟವಾಗಿ ನಿರೂಪಿಸಿದ.

ಅವನ ಪ್ರವಚನ ಮುಗಿಯುವ ವೇಳೆಗೆ ರಾತ್ರಿ ಒಂಭತ್ತು ಗಂಟೆ ಯಾಗಿತ್ತು. ಯೋಗಿನಿ ಅಮ್ಮನವರು ದೇವಿಗೆ ಮಂಗಳಾರತಿ ಮಾಡಿದರು. ರಾಮಸ್ವಾಮಿ ಎಲ್ಲರಿಗೂ ಫೇಡಾ ಹಂಚಿದ.

ಷಿರೀನ್ 'ಅನಸೂಯಾ' ಊರ್ಮಿಳಾ ಯೋಗಿನಿ ಅಮ್ಮನವರಿಗೂ, ಶಂಕರನಿಗೂ ಸಾಷ್ಟಾಂಗ ನಮಸ್ಕಾರ ಮಾಡಿ ಹೊರಟುನಿಂತರು. ಯೋಗಿನಿ ಅಮ್ಮನವರು ಊರ್ಮಿಳೆಯ ಕಡೆ ತಿರುಗಿ

"ಸೊಗಸಾಗಿ ಹಾಡುತ್ತೀ ಮಗಳೇ."

ಎಂದು ಹೇಳಿ ಅನಸೂಯಾಬೆನ್‌ರಿಗೆ

"ಆಗಾಗ್ಗೆ ಬರುತ್ತಿರಿ."

ಎಂದು ಹೇಳಿದರು.

ಬೊಂಬಾಯಿವಾಲಾ ಹೊರಡುವ ಮುನ್ನ ವಾಸುವಿಗೆ

"ಇಂದಿನ ಪ್ರವಚನದಂತಹ ಪ್ರವಚನ ನಾನು ಕೇಳಿಯೇ ಇರಲಿಲ್ಲ. ಇವುಗಳನ್ನು ಬರೆದುಕೊಂಡು ಸಂಗ್ರಹಿಸಬೇಕು."

"ಹಾಗೇ ಮಾಡೋಣ"

ಎಂದು ವಾಸು ಹೇಳಿದ.

ಬೊಂಬಾಯಿವಾಲಾ ತಮ್ಮ ಆಲೋಚನೆಯನ್ನು ಮುಂದುವರಿಸಿ ಶಂಕರನಿಗೆ

"ಸ್ವಾಮಿಜೀ, ಗೀತೆಯನ್ನು ಕುರಿತು ತಾವು ಹಲವು ಪ್ರವಚನಗಳ

ನ್ನೇಕೆ ಮಾಡಬಾರದು. ಮೊದಲಿಂದ ಕೊನೆಯವರೆಗೆ ಗೀತೆ ಕೇಳಿದ ಭಾಗ್ಯ ನಮಗೆ ಲಭಿಸುತ್ತದೆ."

"ಆಗಬಹುದು. ನಾನು ಸಿದ್ಧನಾಗಿದ್ದೇನೆ."

"ಯಾವಾಗ ಆರಂಭಿಸುವಿರಿ?"

"ಸೋಮವಾರದಿಂದ"

ಬೊಂಬಾಯಿವಾಲಾ ವಾಸೂ ಕಡೆ ತಿರುಗಿ

"ನಾನು ಒಬ್ಬ ಷಾರ್ಟ್‌ಹ್ಯಾಂಡ್ ಟೈಪಿಸ್ಟ್ ಕಳಿಸಿಕೊಡುತ್ತೇನೆ. ಅವನು ಎಲ್ಲ ಪ್ರವಚನಗಳ ವರದಿ ಸಿದ್ಧಮಾಡಲಿ."

"ರತನ್‌ಲಾಲ್‌ಜೀ ಒಬ್ಬ ಷಾರ್ಟ್‌ಹ್ಯಾಂಡ್ ಟೈಪಿಸ್ಟ್ ಕಳಿಸಿದ್ದಾರೆ. ಅವನು ನಿತ್ಯ ಬರುತ್ತಿದ್ದಾನೆ."

"ಅವನನ್ನೇ ಬರಹೇಳಿ"

"ಎಷ್ಟು ದಿವಸಗಳಲ್ಲಿ ಮುಗಿಯುತ್ತದೆ"

ಎಂದು ರತನ್‌ಲಾಲ್ ಕೇಳಿದ.

"ಹದಿನೆಂಟು ಅಧ್ಯಾಯಗಳು – ಹದಿನೆಂಟು ದಿವಸಗಳಲ್ಲಿ ಮುಗಿಸುತ್ತೇನೆ. ಇದು ಕೇವಲ ಗೀತಾ ಪ್ರವೇಶ ಮಾತ್ರ. ಗೀತೆಯನ್ನು ವಿಸ್ತಾರವಾಗಿ ಅಭ್ಯಾಸ ಮಾಡಬೇಕೆನ್ನುವವರಿಗೆ ಸಹಾಯಕವಾಗುತ್ತವೆ."

"ನಮಗೆ ಅಂತಹ ಪ್ರವಚನವೇ ಬೇಕು"

ಎಂದು ಬೊಂಬಾಯಿವಾಲಾ ಹೇಳಿದರು.

ರತನ್‌ಲಾಲ್ ವಾಸೂ ಕಡೆ ತಿರುಗಿ

"ಇನ್ನೂ ಕೆಲವರು ಬರಬೇಕೆಂದು ಆಶಿಸುತ್ತಾರೆ. ಕರೆದುಕೊಂಡು ಬರಬಹುದಷ್ಟೇ?"

"ಆಗಬಹುದು. ಆದರೆ ಹೆಚ್ಚು ಜನಗಳಿಗೆ ಹೇಳಬೇಡಿ."

ಗೀತಾ ಪ್ರವಚನದ ವಿಷಯಕೇಳಿ ಎಲ್ಲರಿಗಿಂತ ಹೆಚ್ಚು ಸಂತೋಷಿಸಿದವಳು ಪ್ರಮಿಳಾ. ತನ್ನ ಅಭ್ಯಾಸಕ್ಕೆ ಈ ಪ್ರಾವೇಶಿಕ ಪ್ರವಚನಗಳು ಸಹಾಯವಾಗುವುದೆಂದು ಆವಳು ಹಿಗ್ಗಿದಳು.

ಶಂಕರನಿಗೆ ಸ್ವಲ್ಪವೂ ಬಿಡುವೇ ಇಲ್ಲದಂತಾಯಿತು. ಬೆಳಗ್ಗೆ ಪಾಠ, ಮಧ್ಯಾನ್ಹ ಸ್ವಂತ ಅಭ್ಯಾಸ, ಪುಸ್ತಕದ ತಪ್ಪೋಲೆ ತಿದ್ದುವ ಕೆಲಸ, ಸಂಜೆಗೆ

ಮತ್ತೆ ಪಾಠ, ರಾತ್ರಿ ಸ್ವಂತ ಅಭ್ಯಾಸದ ಜತೆಗೆ ಗೀತಾ ಪ್ರವಚನಗಳ ಸಿದ್ಧತೆ.

ಪ್ರಮಿಳೆ ಶಾಲಾ ಪರೀಕ್ಷೆಗೆ ಹೋಗುವ ವಿದ್ಯಾರ್ಥಿನಿಯಂತೆ ತನ್ನ ಸಂಸ್ಕೃತ, ಗೀತಾಭ್ಯಾಸಗಳ ಕಡೆ ವಿಶೇಷ ಲಕ್ಷ್ಯ ಕೊಡತೊಡಗಿದಳು. ಅವರಿಬ್ಬರ ದುಡಿಮೆ ನೋಡಿ ಒಂದು ದಿನ ವಾಸು ರಾಮಸ್ವಾಮಿಗೆ

"ನಮ್ಮ ಆಶ್ರಮದಲ್ಲಿ ನಾವಿಬ್ಬರೇ ನಿರರ್ಥಕವಾಗಿ ಹೊತ್ತುಗಳೆಯು ವವರು ರಾಮು."

"ಹೊತ್ತೆಲ್ಲಿ ಕಳೆಯುತ್ತಿದ್ದೇವೆ. ನಾವೂ ಆಶ್ರಮದ ಕೆಲಸ ಮಾಡು ತ್ತಿರುವೆವಲ್ಲಾ. ವಾಸೂ, ಹೀಗೆ ನಾವು ಮುಂಬಯಿಯಲ್ಲಿ ಕುಳಿತರೆ ನಮ್ಮ ಗತಿ ?"

"ನಮಗೆ ಯಾವ ಕೊರತೆಯಾಗಿದೆ ?"

"ಯಾವದೂ ಇಲ್ಲ – ಆದರೆ ಮುಂದಿನ ಯೋಚನೆ."

"ಅದರ ಸಿದ್ಧತೆಯಲ್ಲಿಯೇ ಇದ್ದೇನೆ ರಾಮು. ಮುಂಬಯಿಯಲ್ಲಿ ನಾವಿನ್ನೂ ಐದಾರು ತಿಂಗಳು ನಿಲ್ಲಬೇಕಾಗಬಹುದು. ಇಲ್ಲಿ ಅಸ್ತಿಭಾರ ಭದ್ರ ಮಾಡಿಕೊಂಡು ಮುಂದೆ ಬೆಂಗಳೂರಿಗೆ ಹೋಗುವುದು. ಪ್ರಮಿಳೆಗೆ ರಾಮಗಿರಿಯಲ್ಲಿ ಸ್ವಲ್ಪ ಜಮೀನಿದೆ. ಜಾಗ ಪ್ರಶಸ್ತವಾಗಿದೆ. ಅವಳ ಜಮೀನಿನ ಹಿಂದೆ ರಾಮನಬೆಟ್ಟ – ಸ್ವಲ್ಪ ದೂರದಲ್ಲಿ ಒಂದು ಸಣ್ಣನದಿ ಹರಿಯುತ್ತದೆ. ಆಶ್ರಮ ಸ್ಥಾಪಿಸುವುದಕ್ಕೆ ಆದರ್ಶ ಸ್ಥಳ."

"ಬೊಂಬಾಯಿ ಬಿಟ್ಟಮೇಲೆ ತಾನೇ ರಾಮಗಿರಿಯ ಚಿಂತೆ."

"ಕೈತುಂಬ ದುಡ್ಡು ತೆಗೆದುಕೊಂಡು ಅಲ್ಲಿಗೆ ಹೋಗಬೇಕು ರಾಮು. ಕಾಳು ಎರಚಿದ್ದೇನೆ – ಹಕ್ಕಿಗಳು ಹತ್ತಿರ ಬರುತ್ತಿವೆ. ಆದರೆ ಬಲೆ ಬೀಸುವುದಕ್ಕೆ ಇನ್ನೂ ಸಮಯಬಂದಿಲ್ಲ. ಶಂಕರನ ಪುಸ್ತಕ ಹೊರಬಿದ್ದರೆ ಅರ್ಧ ಕೆಲಸವಾಗುತ್ತದೆ. ಆಮೇಲೆ ನಿನಗೆ ಪುರಸತ್ತು ಸ್ವಲ್ಪವೂ ಇರುವುದಿಲ್ಲ."

"ವಾಸೂ – ಶಂಕರನ ಪುಸ್ತಕ ಬೊಂಬಾಯಿವಾಲನ 'ನವಯುಗ್ ಪಬ್ಲಿಕೇಷನ್ಸ್' ಕಂಪೆನಿಯವರು ಪ್ರಕಟಿಸುತ್ತಾರಲ್ಲವೇ ?"

"ಹೌದು."

"ನವಯುಗ್ ಹೆಸರಿನ ಬದಲು ನಮ್ಮ ಆಶ್ರಮದ ಹೆಸರು ಹಾಕಿದರೆ ನಮಗೂ ಪ್ರಯೋಜನವಾಗುತ್ತದೆ. ಅಪ್ರಾರ್ಥಿತವಾಗಿ ಬೇಕಾದಷ್ಟು ಪ್ರಕಟನೆ ಸಿಕ್ಕುತ್ತದೆ."

"ಹೌದು ಹೌದು! ನನಗೆ ಹೊಳೆಯಲೇ ಇಲ್ಲ ನೋಡು. ನಮ್ಮ ಆಶ್ರಮದ ಹೆಸರೇ ಇನ್ನೂ ನಾವು ನಿರ್ಧರಿಸಿಲ್ಲವಲ್ಲ."

"ಗೀತಾಶ್ರಮವೆಂದು ಕರೆದರಾಯಿತು."

"ಅದಕ್ಕೂ ವ್ಯಾಪಕವಾದ ಹೆಸರು ಕೊಡಬೇಕು."

"ಯೋಗಾಶ್ರಮ, ಆನಂದಾಶ್ರಮ, ಭಗವಾನ್ ಆಶ್ರಮ."

"ಅವೆಲ್ಲಾ ರೂಢಿಯಲ್ಲಿರುವ ಹೆಸರುಗಳಾದವು."

"ಋಷಿಧಾಮ – ಮೋಕ್ಷಧಾಮ"

"ಮೋಕ್ಷಧಾಮ – ಮೋಕ್ಷಧಾಮ – ಮೋಕ್ಷಧಾಮ"

ಎಂದು ಮೂರು ನಾಲ್ಕು ಸಾರಿ ವಾಸು ಜಪಿಸಿ

"ಮಂದಿರದಲ್ಲಿ ಋಷಿಯೇ ಇಲ್ಲವಲ್ಲಯ್ಯ."

"ಏಕಿಲ್ಲ. ಭಗವಾನ್ ಶಂಕರಾನಂದ ಮಹರ್ಷಿಗಳಿಲ್ಲವೇನು?"

"ಶಂಕರ ಏನನ್ನುತ್ತಾನೋ?"

"ಏನೂ ಅನ್ನುವ ಹಾಗಿಲ್ಲ. ಅವನೂ ಹೊಳೆಯೊಳಗೆ ಎದೆಮಟ್ಟ ಇಳಿದೇ ಇದ್ದಾನೆ."

"ಅವನು ಇಳಿದಿರುವುದು ಅವನಿಗೆ ಗೊತ್ತಿಲ್ಲ."

"ನೋಡು ವಾಸೂ. ಈ ಸಂದರ್ಭದಲ್ಲಿಯೇ ಯೋಗಿನಿ ಅಮ್ಮನವರ ಪರಿಚಯವನ್ನೂ ಶಂಕರನ ಗ್ರಂಥದ ಓದುಗರಿಗೆ ಮಾಡಿಕೊಡಬೇಕು."

"ಶಂಕರನ ಪುಸ್ತಕದಲ್ಲಿ ಅವಳನ್ನು ಹೇಗಯ್ಯಾ ತರುವುದು?"

"ಅದಕ್ಕೆ ಎರಡು ಮಾರ್ಗಗಳಿವೆ. ಒಂದು ಶಂಕರಾನಂದರ ಗ್ರಂಥಕ್ಕೆ ಯೋಗಿನಿ ಅಮ್ಮನವರು ಮುನ್ನುಡಿ ಬರೆಯುವುದು."

"ಅವನನ್ನು 'ಗುರು ಗುರು' ಎಂದು ಕರೆಯಲಾರಂಭಿಸಿದ್ದಾಳೆ. ಮುನ್ನುಡಿ ಬರೆಯಲೊಪ್ಪುತ್ತಾಳೆಯೇ?

"ಮುನ್ನುಡಿ ಬರೆಯದಿದ್ದರೆ ಚಿಂತೆಯಿಲ್ಲ. ಗ್ರಂಥವನ್ನು ಶಂಕರಾ

ನಂದರು–'ತಮ್ಮ ಜ್ಞಾನ ದೀಪಿಗೆಗೆ ತೈಲವೆರೆದ ಯೋಗಿನಿ ಅಮ್ಮನವರ ಶ್ರೀ ಚರಣಕಮಲಗಳಿಗೆ'–ಅರ್ಪಿಸಿದರಾಯಿತು."

"Capital ರಾಮು You are a genius."

"…………of a scoundrel ಎಂದು ಸೇರಿಸು."

"ಅದನ್ನೇಕೆ ಹೇಳಲಿ. ಗಾಜಿನ ಮನೆಯಲ್ಲಿ ವಾಸಿಸುವವರು ಇತರರ ಮೇಲೆ ಕಲ್ಲೊಗೆಯಬಾರದೆಂದು ಗೊತ್ತಿಲ್ಲವೇ? ಪುಸ್ತಕ ಕೈಗೆ ಬಂದ ಕೂಡಲೆ ನೀನು Publicity Campaign ಆರಂಭಿಸಬೇಕು."

"ಬೊಂಬಾಯಿವಾಲನ 'ಬಾಂಬೆ ಮೆಸೆಂಜರ್'–'ಮುಂಬಯಿ' ಪತ್ರಿಕೆಗಳಿವೆಯಲ್ಲ."

"ಅವುಗಳ ಜತೆಯಲ್ಲಿ ಮುಂಬಯಿಯ ಇತರ ಪತ್ರಿಕೆಗಳನ್ನೂ ಸೇರಿಸಿಕೊಳ್ಳಬೇಕು."

"ಒಂದು ಪ್ರೆಸ್ ಕಾನ್‌ಫರೆನ್ಸ್ ಕರೆದರಾಯಿತು."

"ಪ್ರೆಸ್ ಕೌನ್‌ಫರೆನ್ಸ್ ಈಗಲೇ ಬೇಡ. ಒಳ್ಳೆಯ ವಿಮರ್ಶೆಗಳು ಎಲ್ಲ ಪತ್ರಿಕೆಗಳಲ್ಲಿಯೂ ಪ್ರಕಟವಾಗಲಿ. ಮುಂದಕ್ಕೆ ನೋಡೋಣ."

ತನ್ನ ನಿಯೋಜನೆ ಒಂದು ಖಚಿತರೂಪ ಪಡೆಯುತ್ತಿದ್ದುದನ್ನು ಕಂಡು ವಾಸು ತೃಪ್ತನಾದ.

೧೦

ಮಾರನೆಯ ದಿನ ಬೆಳಿಗ್ಗೆ ಶಂಕರನ ಪುಸ್ತಕದ ತಪ್ಪೋಲೆಗಳನ್ನು ಅಚ್ಚಿನಾಲಯಕ್ಕೆ ತೆಗೆದುಕೊಂಡು ಹೋದ ರಾಮುಸ್ವಾಮಿ ಹನ್ನೆರಡು ಗಂಟೆಯಾದರೂ ಮನೆಗೆ ಹಿಂದಿರುಗಲಿಲ್ಲ. ವಾಸು, ಶಂಕರ ಅವನೂ ಬರಲೆಂದು ಊಟಮಾಡದೆ ಕಾಯುತ್ತಿದ್ದರು.

ರಾಮುಸ್ವಾಮಿ ಮನೆ ಸೇರುವ ವೇಳೆಗೆ ಒಂದು ಗಂಟೆಯಾಗಿತ್ತು. ಮೂವರೂ ಊಟಕ್ಕೆ ಕುಳಿತಾಗ ವಾಸು ಕೇಳಿದ

"ಇದೇನಯ್ಯಾ ಇಷ್ಟು ಹೊತ್ತುಮಾಡಿಬಿಟ್ಟೆ."

"ಪ್ರೆಸ್ ಕೆಲಸ ಮುಗಿಸಿಕೊಂಡು, ಬಾಂಬೆ ಮೆಸೆಂಜರ್, ಮುಂಬಯಿ ಪತ್ರಿಕೆಗಳ ಸಂಪಾದಕರ ಪರಿಚಯ ಮಾಡಿಕೊಂಡು ಬರಲು ಹೊತ್ತಾಯಿತು."

"ಯಾರು ಸಂಪಾದಕರು ?"

"ಇಬ್ಬರೂ ಪಾರ್ಸಿಗಳೇ. ಬಾಂಬೆ ಮೆಸೆಂಜರ್ ಪತ್ರಿಕೆಯ ಸಂಪಾದಕ ಕೂಪರ್, ಬಾಂಬೇವಾಲರಿಗೆ ಏನೋ ಸಂಬಂಧವಂತೆ; ಮುಂಬಯಿ ಪತ್ರಿಕೆಯ ಸಂಪಾದಕ ಮರ್ಜಬಾನ್"

"ಪುಸ್ತಕ ಯಾವಾಗ ಹೊರಬೀಳುವುದಂತೆ."

"ಈ ತಿಂಗಳ ಕೊನೆಯೊಳಗಾಗಿ ಸಿದ್ಧವಾಗಬೇಕೆಂದು ಬೊಂಬಾಯಿವಾಲಾ ಆಜ್ಞೆ ಮಾಡಿದ್ದಾರಂತೆ."

"The old fellow seems to be rather serious."

"Rather – ಇನ್ನೊಂದು ವಿಷಯ ವಾಸು. ನಾನು ಬಾಂಬೆ ಮೆಸೆಂಜರ್ ಕಛೇರಿಯಿಂದ ಹೊರಬಿದ್ದಾಗ ನನಗೆ ಯಾರು ಸಿಕ್ಕಿರಬಹುದು ಊಹಿಸು."

"ಯಾರು ಹೇಳು ?"

"ರಾಮನಾಥಯ್ಯ."

"ರಾಮನಾಥಯ್ಯ. ಅವನೇಕೆ ಇಲ್ಲಿಗೆ ಬಂದಿದ್ದಾನೆ."

"ಏನೋ ಸ್ವಂತ ಕೆಲಸದ ಮೇಲೆ ಬಂದಿದ್ದಾನಂತೆ."

"ನನ್ನ ವಿಷಯ ಕೇಳಿದನೇ ?"

"ಕೇಳಿದ. ಇಷ್ಟುದಿನ ಇಲ್ಲಿಯೇ ಇದ್ದರು. ಈಗ ಕಲ್ಕತ್ತೆಗೆ ಹೋಗಿದ್ದಾರೆ ಎಂದು ಹೇಳಿದೆ."

"ನಿನ್ನ ವಿಷಯ ಕೇಳಲಿಲ್ಲವೇ ?"

"ಕೇಳದೆ ಇರುತ್ತಾನೆಯೇ. ಆಗ ಬಂದವನು ಇಲ್ಲೇ ಇದ್ದೇನೆ. ಬಾಂಬೆ ಮೆಸೆಂಜರ್ ಪತ್ರಿಕಾ ಕಛೇರಿಯಲ್ಲಿ ಉಪಸಂಪಾದಕನಾಗಿದ್ದೇನೆಂದು ಹೇಳಿದೆ."

"ಅವನ ಹಣ ಕಳಿಸಿಬಿಡಬೇಕು ರಾಮು."

"ಅವನು ಹಣದ ವಿಷಯ ಪ್ರಸ್ತಾಪಮಾಡಲಿಲ್ಲ."

"ಅವನು ಕೇಳುವುದಕ್ಕೆ ಮುಂಚೆ ಕಳಿಸುವುದು ಗೌರವ. ಕೇಳಿದ ಕೂಡಲೆ ಹಿಂದೆ ಮುಂದೆ ನೋಡದೆ ಹಣಕೊಟ್ಟ. ಮುಂದಕ್ಕಾದರೂ ಅವನ ಸಹಾಯ ನಮಗೆ ಬೇಕಾಗುತ್ತದೆ."

"ಅವನು ಇನ್ನೊಂದು ವಿಷಯ ಹೇಳಿದನಯ್ಯ. ಬಹಳ ಸ್ವಾರಸ್ಯವಾದ ವಿಷಯ."

"ಏನಪ್ಪಾ ಅದು."

"ಇಲ್ಲಿ ಜೋಗೇಶ್ವರಿ ಎಂತಾ ಒಂದು ಸಬರ್ಬ್ ಇದೆಯಲ್ಲಾ."

"ಇದೆ."

"ಅಲ್ಲಿ ಒಬ್ಬ ಸಾಧು ಇದ್ದಾನಂತೆ. ಅವನು ಒಂದು ಹುಲಿ ಸಾಕಿಕೊಂಡಿದ್ದಾನಂತೆ. ಅದು ಸಾಕಿದ ನಾಯಿಯ ಹಾಗೆ ಅವನ ಮಾತು ಕೇಳುತ್ತದಂತೆ. ಅವನು ಹುಲಿಯನ್ನು ಕಟ್ಟಿಕೂಡ ಹಾಕಿರುವುದಿಲ್ಲವಂತೆ."

ಇದುವರೆಗೆ ಸುಮ್ಮನಿದ್ದ ಶಂಕರ ಕುತೂಹಲಗ್ರಸ್ತನಾಗಿ

"ಹುಲಿಯನ್ನು ಮಂತ್ರಶಕ್ತಿಯಿಂದ ವಶಪಡಿಸಿಕೊಂಡಿರಬೇಕು."

"ನೋಡಿಕೊಂಡು ಬರಬೇಕು ವಾಸು."

"ನೋಡಬೇಕಾದ ವಿಷಯವೇ. ಯಾವಾಗ ಹೋಗೋಣ"

"ನಾಳೆ ಭಾನುವಾರ. ಅವರೂ ಇವರೂ ಜನ ಬರುತ್ತಾರೆ. ಸೋಮವಾರದಿಂದ ಶಂಕರನ ಪ್ರವಚನ – ಪುರಸತ್ತೇ ಆಗುವುದಿಲ್ಲ. ಹೋದರೆ ಇವತ್ತೇ ಹೋಗಬೇಕು."

"ಸಂಜೆ ಎಲ್ಲರೂ ಹೋಗಿಬರೋಣ."

"ಬೇಗ ಹೊರಡುವುದೊಳ್ಳೆಯದು."

"ನಾಲ್ಕು ಗಂಟೆಗೇ ಹೊರಡೋಣ."

"ನಾನೂ ಅಷ್ಟುಹೊತ್ತಿಗೆ ಪಾಠ ಮುಗಿಸುತ್ತೇನೆ"

ಎಂದು ಶಂಕರ ಹೇಳಿದ.

ಸಂಜೆ ಎಲ್ಲರೂ ಮನೆಬಿಟ್ಟು ಜೋಗೇಶ್ವರಿಗೆ ಹೊರಡುವುದಕ್ಕೆ ಐದು ಗಂಟೆಯಾಯಿತು. ಪ್ರಮಿಳೆಯೂ ಅವರ ಜತೆ ಹೊರಟಳು.

ರಸ್ತೆಯ ಮಗ್ಗುಲಲ್ಲಿ ಕಾರು ನಿಲ್ಲಿಸಿ ಎಲ್ಲರೂ ಜೋಗೇಶ್ವರಿ ಗುಹೆಯ ಬಳಿಗೆ ನಡೆದುಹೋದರು. ದಾರಿಯುದ್ದಕ್ಕೂ ಭಿಕ್ಷುಕರು, ಜೋಗಿಗಳು,

ಬಾವಾಜಿಗಳು ಕುಳಿತಿದ್ದರು. ಅಲ್ಲಿದ್ದ ಸಣ್ಣ ಸಣ್ಣ ಗುಹೆಗಳಲ್ಲಿ ಕೆಲವು ಜೋಗಿಗಳು ನೆಲಸಿದ್ದರು. ಒಬ್ಬ ರಾಮರಸ ಅರೆಯುತ್ತಿದ್ದ– ಇನ್ನೊಬ್ಬ ಭಂಗಿ ಸೇದುತ್ತಿದ್ದ– ಮತ್ತೊಬ್ಬ ಮುಂದೆ ಬೆಂಕಿ ಹಾಕಿಕೊಂಡು ಅದನ್ನು ಕಾಯಿಸಿಕೊಳ್ಳುತ್ತಿದ್ದ. ಸುತ್ತಮುತ್ತಲಿನ ವಾತಾವರಣ ಸ್ವಲ್ಪ ಭಯಾನಕ ವಾಗಿಯೇ ಇತ್ತು.

"ಎಲ್ಲಯ್ಯಾ ನಿನ್ನ ಹುಲಿಯ ಬಾವಾಜಿ"

ಎಂದು ವಾಸು ರಾಮಸ್ವಾಮಿಯನ್ನು ಕೇಳಿದ.

"ಇಲ್ಲಿಯೇ ಎಲ್ಲೋ ಇರಬೇಕು"

ಎಂದು ರಾಮಸ್ವಾಮಿ ತಮ್ಮಂತೆಯೇ ಜೋಗೇಶ್ವರಿ ನೋಡಲು ಬಂದಿದ್ದವರನ್ನು ಕೇಳಿದ. ಅವರು ಗುಹೆಗಳ ಆಚೆಯಿದ್ದ ಒಂದು ಸಣ್ಣ ಉಪದ್ವೀಪ ತೋರಿಸಿ ಬಾವಾಜಿ ಅಲ್ಲಿದ್ದಾನೆಂದು ಹೇಳಿದರು

ದೇವಾಲಯ ನೋಡಿಕೊಂಡು ಬಾವಾಜಿಯ ದರ್ಶನಕ್ಕೆ ಹೋಗುವು ದೆಂದು ವಾಸೂ ಮತ್ತು ಅವನ ಪರಿವಾರ ನಿಶ್ಚಯಿಸಿತು.

ಗುಹೆಯನ್ನೇ ಕೊರೆದು, ಅದರಲ್ಲಿ ಪರಮೇಶ್ವರನ ಲೀಲಾವಿಲಾಸವನ್ನು ಬಿಡಿಸಿದ ಶಿಲ್ಪಿಗಳ ಚಮತ್ಕಾರ ಎಲ್ಲರಿಗೂ ಅತ್ಯಾಶ್ಚರ್ಯವನ್ನುಂಟು ಮಾಡಿತು.

ಶಂಕರ ಒಂದು ದ್ವಾರದ ಮೇಲಿದ್ದ ಚಿತ್ರದ ಸಾಲನ್ನು ನೋಡುತ್ತ ಪರವಶನಾಗಿದ್ದ. ವಾಸೂ ಅವನ ಸಮೀಪಕ್ಕೆ ಬಂದು, ಅದನ್ನೆ ತಾನೂ ದಿಟ್ಟಿಸಿನೋಡಿ

"ಅದು ಏನು ಶಂಕರ" ಎಂದು ಕೇಳಿದ.

"ಶಿವ ಪಾರ್ವತಿ ಕಲ್ಯಾಣ. ದೇವಾದಿದೇವತೆಗಳನ್ನು ಶಿವಗಣಗಳನ್ನು ಅಕ್ಕಪಕ್ಕದಲ್ಲಿ ಶಿಲ್ಪಿ ಬಿಡಿಸಿದ್ದಾನೆ. ಪರಮೇಷ್ಠಿಯ ಮುಖದಲ್ಲಿ ಕಾಣಬರು ತ್ತಿರುವ ಶಾಂತಿ, ಪರಮೇಶ್ವರಿಯ ಮುಖದಲ್ಲಿ ವಿರಾಜಿಸುತ್ತಿರುವ ಸ್ನಿಗ್ಧ ಸೌಂದರ್ಯ ನೋಡು ವಾಸು. ಎಷ್ಟು ಮನೋಹರವಾಗಿದೆ."

ವಾಸು ದೃಷ್ಟಿ ಸುತ್ತಮುತ್ತಲಿದ್ದ ಇತರ ಶಿಲ್ಪಿಗಳ ಕಡೆ ಹೋಯಿತು. ಪ್ರಮೀಳಾ ಪಾರ್ವತಿ ಪರಮೇಶ್ವರರನ್ನು ಎವೆಯಿಕ್ಕದೆ ನೋಡಿದಳು.

ದೇವಾಲಯದಲ್ಲಿದ್ದ ದ್ವಾರಪಾಲಕರು, ಗಣಪತಿ, ಲಿಂಗಗಳನ್ನು ನೋಡಿ ಕೊಂಡು ಎಲ್ಲರೂ ಸಾವಕಾಶವಾಗಿ ಉಪದ್ವೀಪದ ಕಡೆ ನಡೆದರು.

ಪ್ರಮಿಳಾ ದೇವಾಲಯವನ್ನೇ ಕುರಿತು ಧ್ಯಾನಿಸುತ್ತ ಶಂಕರನನ್ನು

"ಇದು ಯಾವ ಕಾಲದ್ದಿರಬಹುದು ?" ಎಂದಳು

"ಎಂಟನೆಯ ಶತಮಾನದ್ದಿರಬಹುದು."

"ಹೀಗೆ ಬೆಟ್ಟಗಳಲ್ಲಿ – ನಿರ್ಜನ ಪ್ರದೇಶದಲ್ಲಿ ದೇವಾಲಯಗಳನ್ನು ಕಡೆಯುವ ಉದ್ದೇಶವೇನು ?"

"ಸಾಧಕರು ನಿರ್ಬಾಧಿತರಾಗಿ ಕುಳಿತು ಧ್ಯಾನಾಸಕ್ತರಾಗಲಿ ಎಂದೇ ಇರಬೇಕು. ಕಾಲಕಾಲಕ್ಕೆ ಈ ದೇವಾಲಯಗಳು ಬೆಳೆದು ದೊಡ್ಡ ವಿಶ್ವವಿದ್ಯಾ ನಿಲಯಗಳಾದವು."

"ಈ ವಾತಾವರಣ ತುಂಬ ಚೆನ್ನಾಗಿದೆ. ಧ್ಯಾನಕ್ಕೆ ಹೇಳಿ ಮಾಡಿಸಿದ ಹಾಗಿದೆ."

"ಸದ್ಯ ನೀವು ಎಲ್ಲಾದರೂ ಇಲ್ಲೇ ತಪಸ್ಸಿಗೆ ಕುಳಿತುಬಿಟ್ಟೀರಾ!"

ಎಂದು ವಾಸು ನುಡಿದು ಎಲ್ಲರೊಡನೆ ಬಾವಾಜಿಯ ಉಪದ್ವೀಪದ ಬಳಿಗೆಬಂದ.

ಬಾವಾಜಿ ಸೊಗಸಾದ ತೋಟ ಮಾಡಿಕೊಂಡಿದ್ದ. ತೋಟದ ಮಧ್ಯೆ ಒಂದು ಸಣ್ಣ ಪರ್ಣಕುಟಿ. ಪರ್ಣಕುಟಿಯ ಮುಂಭಾಗದ ವೆರಾಂಡ ಬಾವಾಜಿಯ ಅತಿಥಿಗೃಹವಾಗಿತ್ತು.

ವೆರಾಂಡದಲ್ಲಿದ್ದ ಒಂದು ಹೊರಸಿನ ಮೇಲೆ ಬಾವಾಜಿ ಕುಳಿತಿದ್ದ. ಅವನ ಬಲಗಡೆ ಹುಲಿ ಮಲಗಿತ್ತು. ಬಾವಾಜಿ ಆಗಾಗ್ಗೆ ಅದರ ಬೆನ್ನಿನ ಮೇಲೆ ಕೈಯಾಡಿಸುತ್ತಿದ್ದ. ಬಾವಾಜಿಯ ಎಡಗಡೆ ಕುಳಿತಿದ್ದ ಸೇವಕ ಚಿಲ್ಲಂ ತಯಾರುಮಾಡಿ, ಬಾವಾಜಿಗೆ ಕೊಡುತ್ತಿದ್ದ. ಬಾವಾಜಿ ಚಿಲ್ಲಂ ಸೇದಿ 'ಹರೇ ರಾಂ, ಹರೇ ರಾಂ' ಎಂದು ಉದ್ಗಾರವೆಳೆಯುತ್ತಿದ್ದ.

ಎದುರಿಗೆ ಬಂದ ಅತಿಥಿಗಳು ಸ್ವಾಗತಿಸಿ ಬಾವಾಜಿ, ಎದುರಿಗಿದ್ದ ಜಿಂಕೆಯ ಚರ್ಮ ತೋರಿಸಿದ. ಎಲ್ಲರೂ ಬಾವಾಜಿಗೆ ನಮಸ್ಕಾರ ಮಾಡಿಕುಳಿತರು.

"ನಿಮ್ಮದು ಯಾವೂರು ?"

"ಮೈಸೂರು."

"ಮುಂಬಯಿ ನೋಡುವುದಕ್ಕೆ ಬಂದಿದ್ದಿರಾ ?"

"ಹೌದು."

"ಜೋಗೇಶ್ವರಿ ನೋಡಿದಿರಾ ?"

"ಈಗ ಜೋಗೇಶ್ವರಿಯಲ್ಲಿ ನೋಡಬೇಕಾದುದು ನೋಡಿದ ಹಾಗಾಯಿತು."

"ನನ್ನ ಹುಲಿಯನ್ನಲ್ಲವೇ ?"

ಎಂದು ಬಾವಾಜಿ ಹುಲಿಯ ಮೈದಡವಿ

'ಕೇಳಿದೆಯಾ ವ್ಯಾಘ್ರರಾಜ್. ಬರುವವರೆಲ್ಲಾ ನನ್ನನ್ನು ನೋಡಲು ಬರುತ್ತಾರೆಂದು ನಾನು ಭ್ರಮಿಷ್ಠನಾಗಿದ್ದೆ'

ಎಂದು ಕಿಲಕಿಲನೆ ನಕ್ಕ.

ಶಂಕರ ಧೈರ್ಯಮಾಡಿಕೊಂಡು ಬಾವಾಜಿಗೆ

"ಗುರು ಮಹಾರಾಜ್, ನಾನು ಒಂದು ಪ್ರಶ್ನೆ ಕೇಳಬಹುದೇ ?"

"ಕೇಳು ಭೇಟಾ."

"ಹುಲಿ ಹಿಂಸ್ರಪಶುಗಳಲ್ಲಿ ಅಗ್ರಸ್ಥಾನ ಪಡೆದಿದೆ. ಅದನ್ನು ನೀವು ಹೇಗೆ ಪಳಗಿಸಿದಿರಿ."

"ಈ ದೇಹದಲ್ಲಿ ನನ್ನ ವ್ಯಾಘ್ರರಾಜನಿಗಿಂತಲೂ ಘೋರವಾದ ಹುಲಿಗಳಿವೆ. ಅವುಗಳಿಗೆ ಹೋಲಿಸಿದರೆ ನನ್ನ ವ್ಯಾಘ್ರರಾಜ ಹುಲ್ಲೆಮರಿಯಷ್ಟು ಸಾಧು. ಸಾಧನೆಯಿಂದ ಮನುಷ್ಯ ತನ್ನೊಳಗಿರುವ ಹುಲಿಗಳನ್ನು ದಮನಿಸಲು ಸಮರ್ಥನಾಗುವಾಗ ಒಂದು ವ್ಯಾಘ್ರವನ್ನು ಪಳಗಿಸುವುದು ದೊಡ್ಡ ವಿಷಯವೇ ?"

"ಒಪ್ಪಿದೆ ಗುರುಮಹಾರಾಜ್. ಆದರೆ ಈ ಹುಲಿಯನ್ನು ತಾವು ಹೇಗೆ ಪಳಗಿಸಿದಿರಿ ತಿಳಿಯಲು ಉತ್ಸುಕನಾಗಿದ್ದೇನೆ."

"ಬ್ರಹ್ಮಾಂಡದಲ್ಲಿ ಜ್ಞಾನ, ಶಕ್ತಿ, ಪ್ರೇಮಗಳೆಂಬ ಮಹಾಶಕ್ತಿಗಳಿವೆ. ಅವುಗಳ ಅನುಸಂಧಾನ ಮಾಡುವವನಿಗೆ ಅವುಗಳ ರಹಸ್ಯ ಅರ್ಥವಾಗುತ್ತದೆ. ಪ್ರೇಮದ ಪ್ರಭಾವ ಸಾಧಾರಣವಾದುದಲ್ಲ. ಅದರ ಮಹಾಶಕ್ತಿಯ ಆವಿರ್ಭಾವವಾದರೆ ಹಿಂಸ್ರ ಪಶುಗಳು ಕೂಡ ಅಣ್ಣತಮ್ಮಂದಿರಂತೆ ಪ್ರೇಮಮಯವಾಗುತ್ತವೆ. ಮನುಷ್ಯ ಹೇಗೆ ಹುಲಿ ತನ್ನ ಶತ್ರು ಎಂದು ತಿಳಿದು

ಕೊಂಡಿದ್ದಾನೆಯೋ – ಹಾಗೆಯೇ ಹುಲಿಯೂ ಕೂಡ ಮನುಷ್ಯ ತನ್ನ ಶತ್ರು ಎಂದು ತಿಳಿದುಕೊಂಡಿದೆ. ಮನುಷ್ಯ ತಾನು ಶತ್ರುವಲ್ಲ ಮಿತ್ರ ಎಂದು ತೋರಿಸಿಕೊಂಡರೆ ಹುಲಿಯೂ ಸ್ನೇಹಹಸ್ತ ನೀಡುತ್ತದೆ."

ಬಾವಾಜಿ ಮಾಡಿದ ಜೀವನವ್ಯಾಖ್ಯೆ ಕೇಳಿ ಶಂಕರ ವಿಸ್ಮಯಗೊಂಡ. ಹುಲಿಯನ್ನು ನೋಡಬಂದವರು ಬಾವಾಜಿಯನ್ನು ನೋಡುತ್ತ ಕುಳಿತರು.

ಬಾವಾಜಿ ತನ್ನ ಪಕ್ಕದಲ್ಲಿದ್ದ ಆಳಿನ ಕಡೆ ತಿರುಗಿ

"ದೋಂಡೂ – ಅತಿಥಿಗಳಿಗೆ ಪರಬತ್ ತಂದುಕೊಡು"

ಎಂದು ಹೇಳಿದ.

ದೋಂಡೂ ತಂದಿತ್ತ ಪರಬತ್ತು ಎಲ್ಲರೂ ಸೇವಿಸಿ ಬಾವಾಜಿಯ ಅಪ್ಪಣೆ ಪಡೆದು ಹೊರಟರು.

ವಾಸೂ ಮತ್ತು ಅವನ ಪರಿವಾರ ಕಾರಿನ ಬಳಿಗೆ ಬಂದ ಮಾರ್ಗದಲ್ಲಿಯೇ ಹೋಗಬೇಕಾಗಿತ್ತು. ಜೋಗಿಗಳು ತಮ್ಮ ತಮ್ಮ ಕೆಲಸ ಕಾರ್ಯಗಳಲ್ಲಿ ಆಸಕ್ತರಾಗಿದ್ದರು. ಆದರೆ ಒಬ್ಬ ಗೋಸಾವಿ ಇವರನ್ನೇ ದಿಟ್ಟಿಸಿ ನೋಡುತ್ತಿದ್ದ. ಪ್ರಮಿಳಾ ಮೆಲ್ಲನೆ ವಾಸುವಿಗೆ

"ಆ ಗೋಸಾವಿ ನೋಡಿ, ನಾವು ಬರುವಾಗಲೂ ಹೀಗೇ ದಿಟ್ಟಿಸಿ ನೋಡುತ್ತಿದ್ದ. ಈಗಲೂ ನಮ್ಮನ್ನೇ ನೋಡುತ್ತಿದ್ದಾನೆ."

"ಯಾವನೋ ಪಟಿಂಗ ಇರಬಹುದು."

ಎಂದು ಉತ್ತರಿಸಿ ಕಾರಿನ ಬಳಿಗೆ ಬಂದ.

ಎಲ್ಲರೂ ಮನೆಸೇರುವ ವೇಳೆಗೆ ರಾತ್ರಿ ಎಂಟು ಗಂಟೆಯಾಗಿತ್ತು. ಅಡಿಗೆಯವನು ತಟ್ಟೆಗಳನ್ನು ಹಾಕಿ ಊಟಕ್ಕೆ ನೀಡಲು ಸಿದ್ಧನಾಗಿದ್ದ.

ಊಟಕ್ಕೆ ಕುಳಿತಾಗ ಪ್ರಮಿಳಾ

"ಆ ಗೋಸಾವಿಯ ಮುಖ ಏಕೋ ನನ್ನ ಕಣ್ಣಿಗೆ ಕಟ್ಟಿದ ಹಾಗಿದೆ"

ಎಂದಳು.

"ಅವನ ವಿಷಯ ಏನು ಯೋಚನೆ ಮಾಡುತ್ತೀರಿ ಬಿಡಿ. ಯಾವನೋ ಶುದ್ಧ ಅಪಾಪೋಲಿ."

"ಅವನು ಅಪಾಪೋಲಿ ಎಂದು ನನ್ನ ಮನಸ್ಸಿಗೆ ತೋರುವುದಿಲ್ಲ."

"ಏಕೆ ?"

"ಕೆಲಕೆಲವು ಸ್ಥಳಗಳಲ್ಲಿ ವಿಚಿತ್ರ ಯೋಗಶಕ್ತಿ ಇರುವುದೆಂದು ಕೇಳಿದ್ದೇನೆ. ಗೋಸಾವಿ ನಿಜವಾದ ಯೋಗಿಯಾಗಿರಬಹುದೇ ?"

"ಆ ವಿಷಯ ನನಗೇನು ಗೊತ್ತು. ಶಂಕರನನ್ನು ಕೇಳಿದರೆ ನಿನಗೆ ಸಮಾಧಾನ ಹೇಳುತ್ತಾನೆ."

ಪ್ರಮಿಳಾ ಆ ವಿಷಯವನ್ನು ಶಂಕರನಲ್ಲಿ ಪ್ರಸ್ತಾಪ ಮಾಡಲಿಲ್ಲ. ಆದರೆ ಗೋಸಾವಿಯ ಇರಿಯುವ ಕಣ್ಣುಗಳು ಅವಳ ಸ್ಮೃತಿಪಟಲದಿಂದ ಮರೆಯಾಗಲಿಲ್ಲ. ಅವನ ಕಣ್ಣುಗಳು ಏನೋ ಹೇಳುತ್ತಿದ್ದವು ಎಂದು ಅವಳಿಗೆ ಭಾಸವಾಗಿತ್ತು, 'ಏನು ಹೇಳುತ್ತಿದ್ದವು – ಯಾರಿಗೆ ಹೇಳುತ್ತಿದ್ದವು' ಎಂದು ಅವಳು ನಿರ್ದೇಶಿಸಲು ಸಾಧ್ಯವಾಗಲಿಲ್ಲ. ವಾಸೂ ಹೇಳಿದಂತೆ 'ಅವನು ಪಟಿಂಗನಿರಬಹುದು' ಎಂದು ಮನಸ್ಸಿಗೆ ಸಮಾಧಾನ ಮಾಡಿಕೊಳ್ಳಲೆತ್ನಿಸಿದಳು. ಗೋಸಾವಿ ಪಟಿಂಗನೆಂಬ ಮಾತನ್ನು ಪ್ರಮಿಳೆಯ ಮನಸ್ಸು ಒಪ್ಪಲು ಸುತರಾಂ ಸಿದ್ಧವಾಗಿರಲಿಲ್ಲ.

೧೧

ಸೋಮವಾರದಿಂದ ಶಂಕರನ 'ಗೀತಾ ಪ್ರವಚನ' ಆರಂಭವಾಯಿತು. ಬೊಂಬಾಯಿವಾಲಾ, ಶಿರೀನ್, ರತನ್‌ಲಾಲ್, ಮೋಹನ್‌ಲಾಲ್ ಅವರ ಕುಟುಂಬಗಳ ಜತೆಗೆ ರತನ್‌ಲಾಲನ ಕೆಲವು ಗೆಳೆಯರೂ ಅವರ ಕುಟುಂಬದವರೂ ಬಂದಿದ್ದರು.

ಶಂಕರನಿಗೊಂದು ವೇದಿಕೆ ಸಿದ್ಧಪಡಿಸಲಾಗಿತ್ತು. ವೇದಿಕೆಗೆ ಸ್ವಲ್ಪ ದೂರದಲ್ಲಿ ಉನ್ನತಾಸನದಲ್ಲಿ ಯೋಗಿನಿ ಅಮ್ಮನವರು ಕೂಡಲು ವ್ಯವಸ್ಥೆ ಮಾಡಲಾಗಿತ್ತು. ಭಕ್ತಕೋಟಿ ನೆಲದಮೇಲೆ ಹಾಸಿದ್ದ ರತ್ನಗಂಬಳಿಗಳ ಮೇಲೆ ಕೂಡಲು ಅನುಕೂಲ ಮಾಡಲಾಗಿತ್ತು.

ಹೊಸದಾಗಿ ಬಂದಿದ್ದ ತನ್ನ ಗೆಳೆಯರನ್ನೂ ಅವರ ಕುಟುಂಬದವರನ್ನೂ ರತನ್‌ಲಾಲ್ ಪರಿಚಯ ಮಾಡಿಕೊಟ್ಟ.

"ಇವರು ನನ್ನ ಪರಮ ಮಿತ್ರರು ಅಂಬಾಲಾಲ್ ತ್ರಿವೇದಿ. ದೊಡ್ಡ ಸ್ಟೇಷನರಿ ವ್ಯಾಪಾರಿಗಳು. ತುಂಬಾ ಧರ್ಮಾತ್ಮರು. ಲಕ್ಷಾಂತರ

ರೂಪಾಯಿಗಳನ್ನು ಅನಾಥಾಶ್ರಮಗಳಿಗೂ ಅಶಕ್ತಪೋಷಕ ಸಭೆಗಳಿಗೂ ಕೊಟ್ಟಿದ್ದಾರೆ.

"ಇವರು ನನ್ನ ಮಿತ್ರರು ಮತ್ತು ಬಂಧುಗಳು ಹರಿಭಾಯ್. ಮುಂಬಯಿ ಸ್ಟಾಕ್ ಮಾರ್ಕೆಟ್ಟಿನ ಸರ್ವಾಧಿಕಾರಿಗಳು. ಧರ್ಮದಲ್ಲಿ ತುಂಬ ಆಸಕ್ತರು.

"ಇವರು ನನ್ನ ಇನ್ನೊಬ್ಬ ಮಿತ್ರರು ಅಯೋಧ್ಯಾಪ್ರಸಾದ್. ಅನೇಕ ದೊಡ್ಡ ದೊಡ್ಡ ಮಿಲ್ಲುಗಳ ಏಜಂಟರು. ಇವರ ಹಿರಿಯರು ಕಾಶಿ, ಪ್ರಯಾಗ, ಹರಿದ್ವಾರ್, ಮಥುರಾ, ಗಯಾ ಕ್ಷೇತ್ರಗಳಲ್ಲಿ ಸ್ಥಾಪಿಸಿದ ಅನ್ನ ಛತ್ರಗಳನ್ನು ಇಂದಿಗೂ ನಡೆಸುತ್ತಿದ್ದಾರೆ. ಪ್ರಾಣಿದಯಾ ಸಂಘದ ಅಧ್ಯಕ್ಷರು. ಹಿಂದೂ ಧರ್ಮ ತತ್ತ್ವಗಳ ಪ್ರಸಾರದ ಬಗ್ಗೆ ತುಂಬ ಆಸಕ್ತರು."

ವಾಸೂ ಅರ್ಥಗರ್ಭಿತವಾದ ನೋಟವೊಂದನ್ನು ರಾಮುಸ್ವಾಮಿ ಕಡೆ ಬೀರಿದ. ರಾಮುಸ್ವಾಮಿ ಆ ನೋಟಕ್ಕೆ ಉತ್ತರವನ್ನು ತನ್ನ ಮರುನೋಟದಿಂದ ವ್ಯಕ್ತಮಾಡಿದ.

ಬಂದಿದ್ದ ಅತಿಥಿಗಳು ಬರಿಗೈಯಲ್ಲಿ ಬಂದಿರಲಿಲ್ಲ. ತಟ್ಟೆ ತಟ್ಟೆ ಹೂವು, ಹಣ್ಣು, ಬಾದಾಮಿ, ಕಲ್ಲುಸಕ್ಕರೆ, ಖರ್ಜೂರ, ದ್ರಾಕ್ಷಿತಂದು ಶಂಕರನ ಮುಂದೆ ಯೋಗಿನಿ ಅಮ್ಮನವರ ಮುಂದಿಟ್ಟು ನಮಸ್ಕಾರ ಮಾಡಿದರು.

ಸೋಮವಾರ ಸಂಧ್ಯಾಕಾಲ ಶುಭಮುಹೂರ್ತದಲ್ಲಿ ಆರಂಭವಾದ ಶಂಕರನ 'ಗೀತಾ ಪ್ರವಚನ' ಸತತವಾಗಿ ಹದಿನೆಂಟು ದಿನ ನಡೆಯಿತು. ಅಂದಂದಿನ ಪ್ರವಚನವನ್ನು ಸ್ಟೆನೋಟೈಪಿಸ್ಟ್ ಶೀಘ್ರಲಿಪಿಯಲ್ಲಿ ಬರೆದುಕೊಂಡು ಮಾರನೆಯ ದಿನ ಪ್ರಚಲಿತ ಲಿಪಿಗೆ ಪರಿವರ್ತಿಸಿ ಶಂಕರನ ಕೈಯಲ್ಲಿಡುತ್ತಿದ್ದ.

ಪ್ರವಚನ ಮುಗಿಯುವ ವೇಳೆಗೆ ಎಲ್ಲ ದಿನಗಳ ವರದಿಯೂ ಸಿದ್ಧವಾಯಿತು.

ಹದಿನೆಂಟನೆಯ ದಿವಸವೇ ಕೊನೆಯ ದಿವಸ. ಅಂದು ಗುರುವಾರ. ಆ ದಿವಸದ ಕಾರ್ಯಕ್ರಮವನ್ನು ವಾಸು, ರಾಮುಸ್ವಾಮಿ, ಪ್ರಮೀಳೆಯೊಂದಿಗೆ ಚರ್ಚೆಮಾಡಿ ನಿರ್ಧರಿಸಿದ್ದ. ಬೆಳಿಗ್ಗೆ ಬೊಂಬಾಯಿವಾಲಾ

ಅವರಿಗೆ ಫೋನ್ ಮಾಡಬೇಕೆಂದಿರುವಷ್ಟರಲ್ಲಿಯೇ ಅವರಿಂದಲೇ ಫೋನ್ ಕಾಲ ಬಂದಿತು.

"ಹೆಲೋ – ವಾಸುದೇವ್‌ರಾವ್‌ಜೀಯೇನು ?"

"ಹೌದು. ನಾನೇ ನಿಮಗೆ ಫೋನ್ ಮಾಡಬೇಕೆಂದಿದ್ದೆ. ಅಷ್ಟರಲ್ಲಿ ನೀವೇ ಕಾಲ್ ಮಾಡಿದಿರಿ. ಒಳ್ಳೆಯದಾಯಿತು. ಏನು ವಿಶೇಷ ?"

"ಸ್ವಾಮಿಜಿಯವರ ಪುಸ್ತಕ ಸಿದ್ಧವಾಗಿದೆ. ಸಂಜೆಗೆ ಬರುವಾಗ ಕೆಲವು ಪ್ರತಿಗಳನ್ನು ಸಂಗಡ ತರುತ್ತೇನೆ."

"ತುಂಬ ಸಂತೋಷ. ಇಂದಿಗೆ ಪ್ರವಚನ ಮುಗಿಯುತ್ತದೆ. ರಾತ್ರಿ ಎಲ್ಲರೂ ಇಲ್ಲೇ ಪ್ರಸಾದ ಸ್ವೀಕರಿಸಬೇಕೆಂದು ಸ್ವಾಮಿಜಿ ತಿಳಿಸಲು ಹೇಳಿದರು. ರತನ್‌ಲಾಲರಿಗೂ ಫೋನ್ ಮಾಡಿ ತಿಳಿಸುತ್ತೇನೆ."

"ಆಗಬಹುದು. ಗೀತಾ ಪ್ರವಚನದ ಪ್ರಕಟನೆಗೂ ವ್ಯವಸ್ಥೆ ಮಾಡಿದ್ದೇನೆ. ನಾಳೆ ಹಸ್ತಪ್ರತಿ ಮುಗಿಸಿಕೊಟ್ಟರೆ ಅಚ್ಚಿಗೆ ಕಳಿಸುತ್ತೇನೆ."

"ಸ್ವಾಮಿಜಿಯವರಿಗೆ ತಿಳಿಸುತ್ತೇನೆ."

ವಾಸು ಕೂಡಲೆ ರತನ್‌ಲಾಲರಿಗೆ ಫೋನ್ ಮಾಡಿ ರಾತ್ರಿ ಪ್ರವಚನವಾದ ಮೇಲೆ ಅವರೂ, ಅವರ ಕುಟುಂಬ, ಗೆಳೆಯರು ಎಲ್ಲರೂ ಆಶ್ರಮದಲ್ಲಿಯೇ ಪ್ರಸಾದ ಸ್ವೀಕರಿಸಬೇಕೆಂದು ತಿಳಿಸಿದ.

ಸಂಜೆ ಪ್ರವಚನದ ವ್ಯವಸ್ಥೆ ಮಹಡಿ ಮೇಲೆ ಆಯಿತು. ಕೆಳಗಣ ತೊಟ್ಟಿಯಲ್ಲಿ ಎಲ್ಲರ ಪ್ರಸಾದ ವ್ಯವಸ್ಥೆಯಾಯಿತು.

ರತನ್‌ಲಾಲ್ ಅವನ ಪರಿವಾರ ಆಶ್ರಮಕ್ಕೆ ಬರುವ ಮೊದಲೇ – ನಾಲ್ಕು ಗಂಟೆಯ ವೇಳೆಗೆ – ಬೊಂಬಾಯಿವಾಲಾ, ಷಿರೀನ್ ಬಂದರು. ಅವರ ಡ್ರೈವರು ಕಾರಿನಲ್ಲಿದ್ದ ಪುಸ್ತಕದ ಕಟ್ಟನ್ನು ತಂದು ರಾಮಸ್ವಾಮಿ ರೂಮಿನಲ್ಲಿಟ್ಟ.

ಷಿರೀನ್ ಕೈಯಲ್ಲಿ ಪುಸ್ತಕದ ಒಂದು ಪ್ರತಿ ಹಿಡಿದು ಯೋಗಿನಿ ಅಮ್ಮನವರನ್ನು ಕಾಣಲು ಮೇಲಕ್ಕೆ ಹೋದರು.

ಬೊಂಬಾಯಿವಾಲಾ ಪುಸ್ತಕದ ಕಟ್ಟುಬಿಚ್ಚಿ "Immortal Message of the Forest Dwellers" ಗ್ರಂಥದ ಪ್ರತಿಗಳನ್ನು ಎಲ್ಲರ ಕೈಗೂ ಕೊಟ್ಟು

"ಸ್ವಾಮೀಜಿ, ಪುಸ್ತಕ ನಿಮಗೆ ತೃಪ್ತಿಕರವಾಗಿ ಆಗಿದೆಯೇ?" ಎಂದು ಕೇಳಿದರು.

ತನ್ನ ಕೈಯಲ್ಲಿದ್ದ ಸೊಗಸಾಗಿ ಅಚ್ಚಾಗಿ, ಬೈಂಡಾಗಿದ್ದ ಬೃಹತ್ ಗ್ರಂಥವನ್ನು ಸ್ಥೂಲವಾಗಿ ನೋಡಿ ಶಂಕರ

"ಬೊಂಬಾಯಿವಾಲಾಜೀ, ಇಂದು ನನಗೆ ಹೆಚ್ಚಿನ ಸಂತೋಷ ವನ್ನುಂಟುಮಾಡಿದಿರಿ. ನನ್ನ ಗ್ರಂಥ ನಾಲ್ಕು ಜನಕ್ಕಾದರೂ ಶಾಂತಿ, ತೃಪ್ತಿ ಸಿಕ್ಕಿದರೆ ನಾನು ಧನ್ಯ."

"ನನ್ನ ಎರಡು ಪತ್ರಿಕೆಗಳ ಸಂಪಾದಕರೂ ತಮ್ಮ ಗ್ರಂಥ ಓದಿ ತುಂಬ ಸಂತೋಷ ವ್ಯಕ್ತಮಾಡಿದರು. ಮರ್ಜಬಾನ್ ಬಂದು ತಮ್ಮನ್ನು ಸಂದರ್ಶಿಸಿ ಕೆಲವು ಲೇಖನಗಳನ್ನು ಬರೆಯಬೇಕೆಂದಿದ್ದಾರೆ."

"ಅವಶ್ಯಕವಾಗಿ ಬರಲಿ."

ಸ್ವಲ್ಪ ಹೊತ್ತಿನೊಳಗಾಗಿ ರತನಾಲಾಲ್ ತಮ್ಮ ಮನೆಯವರು, ಗೆಳೆಯರೊಂದಿಗೆ ಬಂದರು. ಅವರು ತಂದಿದ್ದ ಹೂವು, ಹಣ್ಣಿನ ಕಾಣಿಕೆ ಯನ್ನು ಆಳು ತೆಗೆದುಕೊಂಡು ಹೋಗಿ ಮಹಡಿಯ ಮೇಲಿಟ್ಟು ಬಂದ.

ಎಲ್ಲರೂ ಮಹಡಿ ಹತ್ತಿಹೋಗಿ ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತರು. ಪ್ರವಚನ ಆರಂಭಿಸುವ ಮುನ್ನ ಶಂಕರ ಊರ್ಮಿಳೆಯ ಕಡೆ ತಿರುಗಿ

"ಸೋದರಿ, ನಿಮ್ಮ ಪ್ರಾರ್ಥನಾ ಗೀತೆಯೊಂದಿಗೇ ಇಂದಿನ ಕಾರ್ಯ ಕ್ರಮ ಆರಂಭವಾಗಬೇಕು"

ಎಂದು ಹೇಳಿದ. ಊರ್ಮಿಳಾ ಕೈಗೆ ತಂಬೂರಿ ತೆಗೆದುಕೊಂಡು ಶ್ರುತಿಮಾಡಿ ಮೀರಾಬಾಯಿಯ 'ಮೇರೇತೋ ಗಿರಿಧರ ಗೋಪಾಲ' ಗೀತೆ ಯನ್ನೂ ನರಸೀ ಮೇಥನ 'ವೈಷ್ಣವ ಜನತೋ' ಗೀತೆಯನ್ನೂ ಆಡಿದಳು.

ಭಗವದ್ಗೀತೆಯ ಕೊನೆಯ ಅಧ್ಯಾಯ 'ಮೋಕ್ಷ ಸನ್ಯಾಸಯೋಗ'ದ ಮೇಲೆ ಎರಡು ಗಂಟೆಗಳ ಕಾಲ ಶಂಕರನ ಪ್ರವಚನವಾಯಿತು. ಪ್ರವಚನ ಮುಗಿದ ಮೇಲೆ ಶಂಕರ ಗೀತಾಗ್ರಂಥವನ್ನು ಕಣ್ಣಿಗೊತ್ತಿಕೊಂಡು ಪಕ್ಕದಲ್ಲಿಟ್ಟ.

ಬೊಂಬಾಯಿವಾಲಾ ಅವರು ವಾಸೂ ಕಿವಿಯಲ್ಲಿ ಏನೋ ಹೇಳಿದರು. ಅವನು ತಲೆದೂಗಿದ. ಬೊಂಬಾಯಿವಾಲಾ ಅಯೋಧ್ಯಾಪ್ರಸಾದರ ಕಡೆ ತಿರುಗಿ ಕಣ್ಣುಸಂಜ್ಞೆಮಾಡಿದರು.

ಪ್ರಸಾದರು ಎದ್ದುನಿಂತು ಗಂಭೀರವಾಗಿ

"ಧರ್ಮ ಬಂಧುಗಳೇ, ಸೋದರಿಯರೇ,

"ಶ್ರೀಗುರು ಸ್ವಾಮಿ ಶಂಕರಾನಂದಜೀಯವರು ಈಗ್ಗೆ ಹದಿನೆಂಟು ದಿವಸಗಳ ಕೆಳಗೆ ಆರಂಭಿಸಿದ 'ಗೀತಾ ಪ್ರವಚನ' ಇಂದು ಮುಕ್ತಾಯ ವಾಯಿತು. ಅವರ ಪ್ರವಚನ ಕೇಳುವ ಸೌಭಾಗ್ಯ ತಂದುಕೊಟ್ಟ ನನ್ನ ಮಿತ್ರರಾದ ಬೊಂಬಾಯಿವಾಲಾ ಅವರಿಗೂ ರತನ್‌ಲಾಲರಿಗೂ ನಿಮ್ಮೆಲ್ಲರ ಪರವಾಗಿ ನಾನು ಧನ್ಯವಾದ ಅರ್ಪಿಸುತ್ತೇನೆ. ಶ್ರೀಗುರುಗಳ ಪ್ರವಚನ ಲಾಭ ಶ್ರೀಮಾತೆಯರ ದರ್ಶನಲಾಭ ಒದಗಿಸಿದ ಬಂಧು ವಾಸುದೇವ ರಾವ್‌ಜೀಯವರಿಗೆ ನಾವೆಲ್ಲ ತಂಬ ಋಣಿಗಳಾಗಿದ್ದೇವೆ.

ಭಗವದ್ಗೀತೆ ಭಾರತೀಯ ಸಂಸ್ಕೃತಿಯ ಬುನಾದಿಯಾಗಿದೆ - ವರಾಹ ಪುರಾಣಕಾರ ಹೇಳಿರುವಂತೆ 'ಬೇರೆ ಶಾಸ್ತ್ರಗಳನ್ನು ಎಷ್ಟು ಓದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು.' ಗೀತೆ ನಮ್ಮ ಆಧ್ಯಾತ್ಮಿಕ ಸಂಪತ್ತಿನ ವಜ್ರದಗಣಿಯಾಗಿದೆ. ಗೀತೆ ಭಾರತದ ಕಲ್ಯಾಣವನ್ನು ಮಾತ್ರವೇ ಅಲ್ಲ - ಜಗತ್ತಿನ ಕಲ್ಯಾಣವನ್ನು ಸಾಧಿಸುವ ಮಹಾ ಗ್ರಂಥವಾಗಿದೆ. ಗೀತೆಯನ್ನು ಸಮನ್ವಯ ಸಿದ್ಧಾಂತವೆಂದು ಸ್ಥಾಪಿಸಿರುವ ಶ್ರೀ ಸ್ವಾಮಿಜಿಯವರ ಅದ್ಭುತ ಮೇಧಾಶಕ್ತಿ, ಪಾಂಡಿತ್ಯ, ಆಧ್ಯಾತ್ಮಿಕ ಸಿದ್ಧಿಗಳನ್ನು ವರ್ಣಿಸಲು ಅಲ್ಪನಾದ ನನಗೆ ಸಾಧ್ಯವಿಲ್ಲ. ಅಖಂಡ ಬ್ರಹ್ಮಾಂಡವನ್ನೇ ತನ್ನ ವಿರಾಟ್‌ಗರ್ಭದಲ್ಲಿ ಅಡಗಿಸಿಕೊಂಡಿರುವ ಭಗವಂತ ಎಲ್ಲ ಜೀವರುಗಳ ಹಿತವನ್ನು ಕುರಿತು ಚಿಂತಿಸುತ್ತಾನೆಂಬುದು ಗೀತೆಯ ಮಹಾವಾಕ್ಯ. ಹಾಗೆಯೇ ಜೀವನೂ ದೇವನನ್ನು ಕುರಿತು ಚಿಂತೆಮಾಡಬೇಕು. ಆ ಚಿಂತೆಯ ಮಾರ್ಗ ಎಂಥದು ಎಂದು ಗೀತೆ ಸವಿಸ್ತಾರವಾಗಿ ಹೇಳುತ್ತದೆ. ಆಧ್ಯಾತ್ಮಿಕ ಸಾಧನೆಗೆ ಯೋಗ ಪಂಚಕಗಳ ನೆರವನ್ನು ವಿವರಿಸುತ್ತಾ ಶ್ರೀಗುರುಗಳು ಅವುಗಳ ಇತಿಮಿತಿಯು ಕಡೆಗೂ ನಮ್ಮ ಲಕ್ಷ್ಯವೆಳೆದಿದ್ದಾರೆ.

"ಗೀತೆಯನ್ನು ಸಾಮಾನ್ಯವಾಗಿ ಹಸುವಿಗೆ ಹೋಲಿಸುವುದುಂಟು. ಆ ಹಸುವಿನ ಹಾಲನ್ನು ಕರೆದು ಶ್ರೀಗುರುಗಳು ನಮ್ಮೆಲ್ಲರಿಗೂ ಉಣಬಡಿಸಿ ನಮ್ಮನ್ನು ಧನ್ಯರನ್ನಾಗಿ ಮಾಡಿದ್ದಾರೆ.

"ನಮ್ಮ ಭಕ್ತಿದ್ಯೋತಕವಾಗಿ ಶ್ರೀಗುರುಗಳು ನಾವು ಅರ್ಪಿಸುವ ಈ ಅಲ್ಪಸೇವೆಯನ್ನು ಸ್ವೀಕರಿಸಿ ಅದನ್ನು ತಮಗೆ ಸೂಕ್ತಕಂಡ ರೀತಿಯಲ್ಲಿ ಭಗವಂತನ ಸೇವೆಗೆ ಉಪಯೋಗಿಸಬೇಕೆಂದು ಪ್ರಾರ್ಥಿಸುತ್ತೇನೆ"

ಎಂದು ಹೇಳಿಮುಗಿಸಿದ ಕೂಡಲೆ ರತನ್‌ಲಾಲರು ಅವರ ಕೈಗೆ ಹೂವಿನಹಾರ, ಹಣ್ಣುತುಂಬಿದ ತಟ್ಟೆಯನ್ನು ತಂದಿತ್ತರು. ಅಯೋಧ್ಯಾ ಪ್ರಸಾದರು ತಟ್ಟೆಯಲ್ಲಿ ಒಂದು ಲಕೋಟೆಯನ್ನೂ ಇಟ್ಟು ಸ್ವಾಮಿ ಶಂಕರಾ ನಂದರಿಗೆ ಅರ್ಪಿಸಿ ನಮಸ್ಕರಿಸಿದರು.

ಅದೇ ರೀತಿಯಲ್ಲಿ ಷಿರೀನ್ ಯೋಗಿನಿ ಅಮ್ಮನವರಿಗೆ ಫಲ, ಪುಷ್ಪ ಗಳನ್ನು ಅರ್ಪಿಸಿದರು.

ವಾಸೂ ಸೂಚನೆಯಂತೆ ರಾಮಸ್ವಾಮಿ 'ಉಪನಿಷತ್‌ಸಾರ'ದ ಪ್ರತಿ ಗಳನ್ನು ತಂದು ಶಂಕರನ ಕೈಯಲ್ಲಿತ್ತ. ಶಂಕರ ಸಹಿಮಾಡಿ ಎಲ್ಲರಿಗೂ ಒಂದೊಂದು ಪ್ರತಿಯನ್ನು ದಾನಮಾಡಿದ.

ಮಹಾಮಂಗಳಾರತಿ ಆದಮೇಲೆ ಅಂದಿನ ಪ್ರವಚನ ಸಭೆ ಮುಕ್ತಾಯ ಗೊಂಡಿತು. ಅತಿಥಿಗಳೆಲ್ಲಾ ಪ್ರಸಾದ ಸ್ವೀಕರಿಸಲು ಕೆಳಗಿಳಿದು ಬಂದರು. ವಾಸು ತಟ್ಟೆಯಲ್ಲಿಟ್ಟ ಲಕೋಟೆಯನ್ನು ತೆಗೆದು ನೋಡಿದ – ಇಪ್ಪತ್ತು ಸಾವಿರ ರೂಪಾಯಿಗಳಿಗೆ ಒಂದು ಚೆಕ್ಕು ಅದರಲ್ಲಿತ್ತು – ಸದ್ದುಮಾಡದೆ ಚೆಕ್ಕನ್ನು ಕಿಸೆಗೆ ಸೇರಿಸಿ ಅತಿಥಿಗಳನ್ನು ಬಂದು ಸೇರಿದ.

ಸ್ವಾಮಿಜಿ, ಯೋಗಿನಿ ಅಮ್ಮನವರ ಪಂಕ್ತಿಯಲ್ಲಿಯೇ ಎಲ್ಲರಿಗೂ ಪ್ರಸಾದ ವಿನಿಯೋಗವಾಯಿತು. ಅತಿಥಿಗಳು ರಾತ್ರಿ ಸುಮಾರು ಹತ್ತು ಗಂಟೆಗೆ ಅಪ್ಪಣೆಪಡೆದು ಮನೆಗಳಿಗೆ ಹೊರಟರು.

ವಾಸು ಮಹಡಿ ಮೇಲಕ್ಕೆ ಬಂದಾಗ ಪ್ರಮಿಳಾ 'ಉಪನಿಷತ್‌ಸಾರ' ದಲ್ಲಿ ತಲ್ಲೀನಳಾಗಿದ್ದಳು. ಅವಳ ಗಮನ ಸೆಳೆಯಲು ವಾಸು ಒಂದೆರಡು ಸಾರಿ ಕೆಮ್ಮಿ,

"ಶಂಕರನ ಪುಸ್ತಕ ಅಷ್ಟು ಚೆನ್ನಾಗಿದೆಯೇನು ?"

ಎಂದು ಕೇಳಿದ. ಪ್ರಮಿಳೆ ಪುಸ್ತಕದ ಹಾಳೆಗಳನ್ನು ತಿರುವಿ ಹಾಕಿ

"ಈ ಗ್ರಂಥದ ನಿವೇದನಕ್ಕೆ ಯಾರು ಹೊಣೆಗಾರರು ?"

"ಏಕೆ ?"

"ನನ್ನಂಥ ಯಃಕಶ್ಚಿತ ಪ್ರಾಣಿಗೆ ಇಷ್ಟು ಗೌರವ ಸಲ್ಲಿಸುವುದು ತರವಲ್ಲ."

"ಶಂಕರನ ಮನಸ್ಸಿನಲ್ಲಿ ಗೌರವ ಸಲ್ಲಿಸಬೇಕೆನಿಸಿತು, ಸಲ್ಲಿಸಿದ್ದಾನೆ. ನೀನು ಅವನನ್ನೇ ಆಕ್ಷೇಪಿಸಬೇಕು."

"ಇವೆಲ್ಲಾ ನಿಮ್ಮ ಕಿತಾಪತಿ ಎಂದು ನನಗೆ ಚೆನ್ನಾಗಿ ಗೊತ್ತು."

ವಾಸು ಅವಳ ಮಾತಿಗೆ ಕಿಲಕಿಲನೆ ನಕ್ಕ.

"ಅವರ ಕೈಯಲ್ಲಿ ನನಗೇಕೆ ನಮಸ್ಕಾರಮಾಡಿಸಿದಿರಿ. ಗುರು ಶಿಷ್ಯಳಿಗೆ ಗೌರವ ತೋರಿಸುವುದೇ ?"

"ಪ್ರಮಿಾ – ಇಲ್ಲಿ ಗುರುಯಾರು, ಶಿಷ್ಯಯಾರು ಇನ್ನೂ ನಿಶ್ಚಯವಾಗಿಲ್ಲ. ಸದ್ಯಕ್ಕೆ 'ಉಭಯಕುಶಲೋಪರಿ. ಸಾಂಪ್ರತ'...........ಶಂಕರನನ್ನು ನೀನು ಗುರುವೆನ್ನುತ್ತೀ – ನಿನ್ನನ್ನು ಅವನು ಗುರುವೆನ್ನುತ್ತಾನೆ. ನೀವಿಬ್ಬರೂ ನಮಗೆ ಗುರುಗಳು."

"ಹಾಗಲ್ಲ. ನೀವು ಎಲ್ಲರಿಗೂ ಮಹಾಗುರುಗಳು – ಗುರುಗಳ ಗುರುಗಳು."

"ಅಯೋಧ್ಯಾಪ್ರಸಾದ್ ಶಂಕರನಿಗೆ ಕೊಟ್ಟ ಲಕೋಟೆಯಲ್ಲೇನಿತ್ತು ಬಲ್ಲೆಯಾ ?"

"ಏನಿತ್ತು."

"ಇಪ್ಪತ್ತು ಸಾವಿರ ರೂಪಾಯಿಗಳಿಗೆ ಒಂದು ಚೆಕ್ಕು."

"ಪ್ರಸಾದರು ಪಂಡಿತರಾಗಿರುವಷ್ಟೇ ಉದಾರಿಗಳೂ ಆಗಿದ್ದಾರೆ."

"ಮೊದಲು ರಾಮನಾಥಯ್ಯನ ಋಣ ಬಗೆಹರಿಸಿಬಿಡುತ್ತೇನೆ. ಉಳಿದ ಹಣ ನಮ್ಮ 'ಋಷಿಧಾಮ'ದ ನಿರ್ಮಾಣಕ್ಕೆ ಮಾಸಲು. ನಾವು ಆದಷ್ಟು ಬೇಗ ರಾಮಸ್ವಾಮಿಯನ್ನು ರಾಮಗಿರಿಗೆ ಕಳಿಸಿಕೊಡಬೇಕಾಗುತ್ತದೆ."

"ನಾವು ಅಲ್ಲಿಗೆ ಹೋಗುವಷ್ಟರಲ್ಲಿ ಕಟ್ಟಡಗಳಾಗಬೇಕು. ಆದರೆ ನಿಮ್ಮ ಕೈಯಲ್ಲಿರುವ ಹಣ ಯಾವ ಮೂಲೆಗೆ ಸಾಕು. ಬೆಂಗಳೂರಿನಲ್ಲಿರುವ ನನ್ನ ಮನೆ ಬೇಕಾದರೆ ಮಾರಿಬಿಡಿ."

"ಆ ಮನೆ ಮಾರುವ ಮಾತು ಹೇಳಬೇಡ. ನಾವು ಸದಾಕಾಲ ರಾಮಗಿರಿಯಲ್ಲಿ ಸಾಯುವುದಕ್ಕಾಗುವುದಿಲ್ಲ. ಬೆಂಗಳೂರಿಗೆ ಬಂದು ಹೋಗಿ ಮಾಡುತ್ತಿರಬೇಕು. ಆಶ್ರಮಕ್ಕೆ ಹಣ ಒದಗಿಸುವ ಭಾರ ನನಗಿರಲಿ. ನೀನೊಂದು ಕೆಲಸಮಾಡಿದರೆ ಸಹಾಯವಾಗುತ್ತದೆ ನೋಡು."

"ಏನು ಮಾಡಬೇಕು ಹೇಳಿ."

"ನಮ್ಮ ಆಶ್ರಮದ ನಿಯೋಜನೆಯನ್ನು ಷಿರೀನರ ಮುಂದೆ ಒಂದು ಸಲ ಹೇಳಿ, ನಾವು ಅಲ್ಲಿಗೇ ಹೋಗಬೇಕೆಂದಿರುವ ವಿಷಯ ತಿಳಿಸಿದರೆ ಸಾಕು. ಬೊಂಬಾಯಿವಾಲಾ ಅವರನ್ನು ನಾನು ವಿಚಾರಿಸಿಕೊಳ್ಳುತ್ತೇನೆ."

"ನಾನು ಷಿರೀನರಲ್ಲಿ ಆ ವಿಷಯ ಪ್ರಸ್ತಾಪಿಸುವುದು ತಪ್ಪಾಗದಿದ್ದರೆ ಪ್ರಸ್ತಾಪಿಸುತ್ತೇನೆ."

"ಅದರಲ್ಲಿ ತಪ್ಪೇನಿದೆ? ನಮ್ಮ ಆಶ್ರಮ ನೂರಾರು ಜನ ಸಾಧಕರಿಗೆ, ಪಂಡಿತರಿಗೆ, ದುಃಖಿಗಳಿಗೆ ಆಶ್ರಯಸ್ಥಾನವಾಗುತ್ತದೆ. ಸುತ್ತಮುತ್ತಲಿನ ಹಳ್ಳಿಯವರಿಗೆ ವೈದ್ಯಸಹಾಯ ಮಾಡಬೇಕೆಂದು ನನ್ನ ಇಚ್ಛೆ. ಆಶ್ರಮ ಬೆಳೆದಂತೆ ಅದರ ಕಾರ್ಯಕ್ಷೇತ್ರ ವಿಸ್ತರಿಸಿ ಅನಾಥ ಬಾಲಿಕಾಶ್ರಮ, ಪಿಂಜರಾ ಪೋಲ್, ಉಚಿತ ಪುಸ್ತಕ ಭಂಡಾರ, ಮುದ್ರಣಾಲಯ, ವ್ಯಾಯಮಶಾಲೆ ಗಳನ್ನು ಏರ್ಪಡಿಸಬಹುದು."

ಆಶ್ರಮದ ಉಪಯುಕ್ತತೆಯ ಚಿತ್ರ ಪ್ರಮೀಳೆಯ ಕಣ್ಣಿಗೆ ಕಟ್ಟಿ ದಂತಾಯಿತು.

"ಷಿರೀನರಿಗೆ ಖಂಡಿತ ಹೇಳುತ್ತೇನೆ"

ಎಂದಳು.

"ನಾನು ಆಶ್ರಮದ ಒಂದು ಪ್ಲ್ಯಾನ್ ತಯಾರುಮಾಡಿಸುತ್ತೇನೆ. ನೀನು ನಿನ್ನ ರೈತನಿಗೆ ಒಂದು ಕಾಗದ ಬರೆದು, ರಾಮಸ್ವಾಮಿ ಬಂದರೆ ಅವನಿಗೆ ಎಲ್ಲಸಹಾಯ ನೀಡುವಂತೆ ತಿಳಿಸು."

"ಹಾಗೇ ಆಗಲಿ"

ಎಂದು ಪ್ರಮೀಳಾ ಒಪ್ಪಿಕೊಂಡಳು.

೧೨

ಆಶ್ರಮದಲ್ಲಿ ಎಲ್ಲರಿಗೂ ಕೈತುಂಬ ಕೆಲಸವಾಯಿತು. ಶಂಕರನಿಗೆ ತನ್ನ 'ಗೀತಾಪ್ರವಚನ'ಗಳ ಮುದ್ರಣ, ತಪ್ಪೋಲೆ ತಿದ್ದುವ ಕೆಲಸದ ಜತೆಗೆ ಪ್ರಮೀಳೆಗೆ ಪಾಠ ಹೇಳುವ ಕೆಲಸ; ಪ್ರಮೀಳೆಗೆ ಪಾಠದ ಜತೆಗೆ

ಮೇಲಿಂದ ಮೇಲೆ ಬರುತ್ತಿದ್ದ ಷಿರೀನ್, ಅನಸೂಯಾ, ಊರ್ಮಿಳಾ ಮತ್ತು ಇತರ ಹೆಣ್ಣುಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವ ಕೆಲಸ; ವಾಸುವಿಗೆ ರಾಮಗಿರಿ ಆಶ್ರಮದ ಪ್ಲ್ಯಾನುಗಳನ್ನು ಸಿದ್ಧಗೊಳಿಸುವ ಕೆಲಸ; ರಾಮಸ್ವಾಮಿಗೆ 'ಉಪನಿಷತ್‌ಸಾರ'ದ ಪ್ರಸಾರಕಾರ್ಯ.

ವಿಶ್ವದ ಎಲ್ಲಾ ಪ್ರಸಿದ್ಧ ದೇಶೀಯ, ವಿದೇಶೀಯ ಪಂಡಿತರಿಗೂ, ವಿಶ್ವವಿದ್ಯಾನಿಲಯಗಳಿಗೂ, ಗಣ್ಯಮಹನೀಯರಿಗೂ, ಪತ್ರಿಕೆಗಳಿಗೂ 'ಉಪನಿಷತ್‌ಸಾರ' ಅಭಿಪ್ರಾಯಕ್ಕಾಗಿ ಕಳುಹಿಸಲ್ಪಟ್ಟಿತು. ರಾಮಸ್ವಾಮಿ ಹಲವು ಹೆಸರುಗಳಲ್ಲಿ ಗ್ರಂಥದ ಬಗ್ಗೆ ವಿಸ್ತೃತ ವಿಮರ್ಶೆ ಬರೆದು ಮುಂಬಯಿ, ಕಲ್ಕತ್ತ, ಮದರಾಸು, ದೆಹಲಿ ಪತ್ರಿಕೆಗಳಲ್ಲಿ ಪ್ರಕಟಮಾಡಿಸಿದ್ದ. ಓದುಗರಿಂದ ಗ್ರಂಥಕ್ಕೆ ಸುಸ್ವಾಗತ ದೊರೆಯಿತು. ವಿದ್ವಜ್ಜನರಿಂದ ಸದಭಿಪ್ರಾಯಗಳು ಬರತೊಡಗಿದವು.

ಪ್ರತಿನಿತ್ಯ ಆಶ್ರಮಕ್ಕೆ ನೂರಾರು ಪತ್ರಗಳು ಬರತೊಡಗಿದವು. ಕೆಲವು ದೇಶಾವರದ ಕಾಗದಗಳು; ಕೆಲವು ದರ್ಶನಾಕಾಂಕ್ಷಿಗಳ ಪತ್ರಗಳು; ಕೆಲವು ಜಿಜ್ಞಾಸುಗಳ ಮುಮುಕ್ಷುಗಳ ಪತ್ರಗಳು. ಪ್ರತಿಪತ್ರಕ್ಕೂ ನಾಲ್ಕು ಪಂಕ್ತಿಯಾದರೂ ಉತ್ತರ ಬರೆಯಲೇಬೇಕೆಂದು ವಾಸು ನಿರೂಪ ಹೊರಡಿಸಿದ್ದ.

ರಾಮಸ್ವಾಮಿಯ ಕಛೇರಿಯಲ್ಲಿ ರತನ್‌ಲಾಲ್ ಕಳಿಸಿದ್ದ ಸ್ಟೆನೋ ಟೈಪಿಸ್ಟ್ ಅಲ್ಲದೆ ಇನ್ನಿಬ್ಬರು ಗುಮಾಸ್ತೆಯರಿಗೆ ಎಡೆಯಾಯಿತು. ಬೆಳಿಗ್ಗೆಯಿಂದ ಸಂಜೆಯವರೆಗೆ ಮೂರು ಟೈಪ್‌ರೈಟಿಂಗ್ ಯಂತ್ರಗಳು ಸತತವಾಗಿ ದುಡಿಯುತ್ತಿದ್ದವು. ವಾಸುವಿನ ಸಲಹೆಕೇಳಿ ರಾಮಸ್ವಾಮಿ ಎಲ್ಲಾ ಕಾಗದಗಳಿಗೂ ತಾನೇ ಉತ್ತರ ಬರೆಯುತ್ತಿದ್ದ. ಕೆಲವು ಕಾಗದಗಳಲ್ಲಿ ದಾರ್ಶನಿಕ ವಿಷಯಗಳು ಪ್ರಸ್ತಾಪಿಸಲ್ಪಡುತ್ತಿದ್ದುದರಿಂದ ಅವುಗಳಿಗೆ ಶಂಕರನ ಉತ್ತರ ತಿಳಿದುಕೊಂಡು ಬರೆಯುತ್ತಿದ್ದ. ಪತ್ರವ್ಯವಹಾರದ ಫೈಲುಗಳು ಕಛೇರಿಯಲ್ಲಿ ಬೆಳೆಯತೊಡಗಿದವು.

ಮುಂಬಯಿಯ ಚರ್ಚ್‌ಗೇಟ್ ರಿಕ್ಲಮೇಷನ್ನಿನ ವಿಳಾಸದಿಂದ ಬಂದ ಪತ್ರವೊಂದು ರಾಮಸ್ವಾಮಿಗೆ ಅತ್ಯಾಶ್ಚರ್ಯವನ್ನುಂಟುಮಾಡಿತು.

ಆದಕ್ಕೇ ತಾನೇ ಉತ್ತರಬರೆಯಲು ಧೈರ್ಯಮಾಡಲಾಗದೆ ವಾಸು ಕೈಯಲ್ಲಿ ಕೊಟ್ಟ.

ಕೊಠಾರಿ ಮ್ಯಾನ್‌ಷನ್ಸ್
ಚರ್ಚಗೇಟ್ ರಿಕ್ಲಮೇಷನ್.

ಪೂಜ್ಯಸ್ವಾಮಿಜಿ,

ನಿಮಗೆ ಇಂಥ ನೂರಾರು ಕಾಗದಗಳು ಬರುತ್ತಿರಬಹುದು. ನನ್ನೀ ಕಾಗದದಲ್ಲಿ ನಾನು ಸಂಕ್ಷೇಪವಾಗಿ ತಿಳಿಸುವ ಆತ್ಮಕಥೆಯನ್ನು ನೀವು ಸಾವಧಾನವಾಗಿ ಅವಲೋಕಿಸಿ ನನಗೊಂದು ಮಾರುತ್ತರ ಬರೆದರೆ ಕೃತಾರ್ಥ ನಾಗುತ್ತೇನೆ.

ಭಾರತಕ್ಕೂ ನನಗೂ ಯಾವ ಋಣಾನುಬಂಧವೋ ನಾನು ಕಾಣೆ. ಮೊದಲಿನಿಂದ ಭಾರತೀಯ ತತ್ತ್ವಜ್ಞಾನ, ಸಾಹಿತ್ಯ, ಕಲೆಗಳು ಎಂದರೆ ನನಗೆ ತುಂಬ ಪ್ರೀತಿ. ಲಂಡನ್ನಿನಲ್ಲಿರುವ 'ಇಂಡೋ ಬ್ರಿಟಿಷ್ ಸೊಸೈಟಿ'ಯ ಸ್ಥಾಪಕರಲ್ಲಿ ನಾನು ಒಬ್ಬ. ನನಗೆ ಸಂಸ್ಕೃತವಾಗಲಿ, ಮತ್ತೆ ಯಾವ ಭಾರತೀಯ ಭಾಷೆಯಾಗಲಿ ಬರುವುದಿಲ್ಲ. ಫ್ರೆಂಚ್ ಮತ್ತು ಜರ್ಮನ್ ಭಾಷೆಗಳು ಚೆನ್ನಾಗಿ ಬರುತ್ತವೆ. ಗ್ರೀಕ್, ಲ್ಯಾಟಿನ್ ಮತ್ತು ಇಟಾಲಿಯನ್ ಭಾಷೆಗಳ ಪರಿಚಯವಿದೆ. ಇಂಗ್ಲಿಷ್, ಫ್ರೆಂಚ್ ಮತ್ತು ಜರ್ಮನ್ ಭಾಷೆಗಳಲ್ಲಿ ಪ್ರಕಟವಾಗಿರುವ ಹಿಂದೂ ದರ್ಶನ, ಸಾಹಿತ್ಯ, ಕಲಾ ಸಂಬಂಧ ವಾದ ಅನೇಕ ಗ್ರಂಥಗಳನ್ನು ಓದಿದ್ದೇನೆ.

ಮೊದಲನೆಯ ಮಹಾಯುದ್ಧಕ್ಕೆ ಮುಂಚೆ ಸೈನ್ಯಾಧಿಕಾರಿಯಾಗಿ ನಾನು ಭಾರತಕ್ಕೆ ಬಂದೆ. ಆಗ ಭಾರತದ ನಿಕಟಪರಿಚಯ ಬೆಳಸಿಕೊಳ್ಳಲು ಪ್ರಯತ್ನಿಸಿದೆ. ನನ್ನ ದೌರ್ಭಾಗ್ಯದಿಂದ ನನಗೆ ಸರಿಯಾದ ಮಾರ್ಗದರ್ಶಕರು ಯಾರೂ ಸಿಕ್ಕಲಿಲ್ಲ. ನಮ್ಮ ಬಳಿ ಬರುತ್ತಿದ್ದ ಭಾರತೀಯರು ಆಶೆಬುರುಕರು. ಅವರು ನಮ್ಮನ್ನೇ ಹೊಗಳಿ ಕಾಲತಳ್ಳುತ್ತಿದ್ದರು. ದೇಶದ ನಿಜವಾದ ಜನ ನಮ್ಮನ್ನು ಹತ್ತಿರ ಸೇರಿಸುತ್ತಿರಲಿಲ್ಲ. ಒಂದು ವರ್ಷ ಕಳೆಯುವುದ ರೊಳಗಾಗಿ ಯುದ್ಧದ ಜ್ವಾಲೆ ಜಗತ್ತನ್ನೇ ವ್ಯಾಪಿಸಿತು. ನಾನು ಫೀಲ್ಡ್ ಸರ್ವೀಸಿಗೆ ಫ್ರಾನ್ಸಿಗೆ ಹೋಗಬೇಕಾಗಿ ಬಂತು. ನಾನು ರಣರಂಗದಲ್ಲಿರು ವಾಗಲೇ ನನ್ನ ಏಕಮಾತ್ರ ಪುತ್ರ ಜರ್ಮನರ ಗುಂಡಿನೇಟಿಗೆ ತುತ್ತಾದ

ಸುದ್ದಿಬಂತು. ನನ್ನ ಬಾಳು ನಿಸ್ಸಾರ್ಥಕವೆನಿಸಿತು. ಕೆಲವೇ ತಿಂಗಳು ಗಳಲ್ಲಿ ನನಗೂ ಷೆಲ್ ಬಡಿಯಿತು. ಸ್ವದೇಶಕ್ಕೆ ನನ್ನನ್ನು ಸಾಗಿಸಿದರು. ಚಿಕಿತ್ಸೆಯಾಯಿತು. ನನ್ನ ಬಲಗಾಲನ್ನು ಕಡಿದುಹಾಕಿ ಪ್ರಾಣ ಉಳಿಸಿದರು.

ನಾನು ಬಯಸಿ ಬಯಸಿ ಒಬ್ಬ ಸುಂದರಿಯನ್ನು ಮದುವೆಯಾಗಿದ್ದೆ. ಹೆಂಡತಿ – ಮಗ ಇಬ್ಬರೂ ನನ್ನ ಎರಡು ಕಣ್ಣುಗಳಾಗಿದ್ದರು. ನಾನು ಫ್ರಾನ್ಸಿನಿಂದ ಹಿಂದಿರುಗಿದ ಕೂಡಲೆ ನನ್ನ ಹೆಂಡತಿಯಲ್ಲಿ ವಿಶೇಷ ವ್ಯತ್ಯಾಸ ವಾಗಿದ್ದುದನ್ನು ಕಂಡುಕೊಂಡೆ. ಮಗನ ಸಾವಿಗಾಗಿ ಅವಳು ದುಃಖಿಸು ತ್ತಿರಬಹುದು ಎಂದು ಭಾವಿಸಿಕೊಂಡು ಅವಳನ್ನು ಸಂತೈಸಲು ಪ್ರಯತ್ನಿಸಿದೆ. ಆದರೆ ನಿಜಸ್ಥಿತಿಗೂ ನನ್ನ ಭಾವನೆಗೂ ಕೋಟಿಯೋಜನ ಅಂತರ ವೇರ್ಪಟ್ಟಿತ್ತು. ನಾನು ಫ್ರಾನ್ಸಿನಲ್ಲಿದ್ದಾಗಲೇ ನನ್ನ ಹೆಂಡತಿ ಬೇರೆ ಸ್ನೇಹ – ಸಂಬಂಧ ಬೆಳಸಿದ್ದಳು. ನನಗೆ ವಿಷಯಗೊತ್ತಾದ ಕೂಡಲೆ ಅವಳನ್ನು ಕೇಳಿದೆ. ಹೌದೆಂದು ಒಪ್ಪಿಕೊಂಡಳು. ಒಲ್ಲದ, ಒಲವಿಲ್ಲದ ಹೆಂಡತಿಯೊಡನೆ ಸಂಸಾರಮಾಡುವುದಕ್ಕಿಂತ ನಾನು ಏಕಾಂಗಿಯಾಗಿ ಎಲ್ಲಿಯಾದರೂ ತಲೆಮರಸಿಕೊಂಡು ಹೋಗುವುದೇ ನ್ಯಾಯವೆನಿಸಿತು. ಅವಳಿಗೆ ನನ್ನ ಆಸ್ತಿಯ ಅರ್ಧಪಾಲು ಕೊಟ್ಟು, ದಾಂಪತ್ಯ ವಿಚ್ಛೇದನ (Divorce) ಮಾಡಿಕೊಂಡು, ಉಳಿದ ನನ್ನ ಸಮಸ್ತ ಸ್ಥಿರಚರಸ್ವತ್ತು ಗಳನ್ನು ಮಾರಿ ಭಾರತಕ್ಕೆ ಬಂದು ಮುಂಬಯಿಯಲ್ಲಿ ನೆಲಸಿದೆ. ಸಂಸಾರ ಜೀವನ ನನಗೆ ಕೊಡದಿದ್ದ ತೃಪ್ತಿ, ಶಾಂತಿಯನ್ನು ಭಾರತ ಮತ್ತು ಅದರ ಆಧ್ಯಾತ್ಮಿಕ ವಿಚಾರಧಾರೆ ಕೊಟ್ಟಿತೆಂದು ಧಾರಾಳವಾಗಿ ಸಂತೋಷ ದಿಂದ ಒಪ್ಪಿಕೊಳ್ಳುತ್ತೇನೆ.

ಈಗ್ಗೆ ಕೆಲವು ದಿವಸಗಳ ಹಿಂದೆ ಪ್ರಕಟವಾದ ನಿಮ್ಮ 'ಉಪನಿಷತ್ ಸಾರ' ಗ್ರಂಥವನ್ನು ಓದಿದೆ. ನನ್ನ ಮನಸ್ಸಿಗಾದ ಆನಂದವನ್ನು ನೀರಸವಾದ ಮಾತುಗಳಿಂದ ಹೇಗೆ ವರ್ಣಿಸಲಿ? ನನ್ನ ಮನಸ್ಸು ಯಾವ ಬೆಳಕಿಗಾಗಿ ಧಾವಿಸುತ್ತಿತ್ತೋ ಅದು ಲಭಿಸಿದಂತಾಯಿತು.

ಮೊದಲನೆಯ ಮಹಾಯುದ್ಧ ಯೂರೋಪಿನ ಚೇತನದ ಮೇಲೆ ಆಡಿದ ರುದ್ರನಾಟ್ಯ ನೋಡಿ ಮಾನ್ಸೂರ್ ಡಿಸುಸಿರೋಲಾ ಅವರು

'ಯೂರೋಪು ವ್ಯಾಧಿಗ್ರಸ್ತವಾಗಿದೆ' ಎಂದು ಹೇಳಿದರು. ಎರಡನೆಯ ಮಹಾಯುದ್ಧ ವಿಶ್ವವನ್ನೇ ನಾಶಮಾಡಲು ಹೊರಟಿದೆ. ಮಾನವ ತನ್ನ ತಿಳಿವನ್ನು ಲೋಕನಾಶಕ್ಕೆ ಉಪಯೋಗಿಸುತ್ತಿದ್ದಾನೆ. ಹೀರೋಷೀಮಾ ಅದರ ಪೂರ್ವಚಿನ್ಹೆ. ಇದರ ಕೊನೆಯೆಲ್ಲಿ? ಈ ಘರ್ಷಣೆಯ ಮುಕ್ತಾಯ ವೆಂದಿಗೆ? ಎನ್ನುವ ಪ್ರಶ್ನೆ ಇಂದು ಯೂರೋಪಿನ ವಿಚಾರಪರರನ್ನು ಕಾಡುತ್ತಿದೆ. ಯೂರೋಪಿನ ಅಶಾಂತಿನಿವಾರಣೆಗೆ ಭಾರತೀಯ ತತ್ತ್ವ ಜ್ಞಾನವೇ ಪರಮಮಂತ್ರ ಎಂದು ಮಾನ್ಸ್ಟರ್ ರೋಲಾ ಅವರು ಹೇಳಿದಾಗ, ಶ್ರೀರಾಮಕೃಷ್ಣ, ವಿವೇಕಾನಂದ, ಗಾಂಧೀಜಿಯವರ ಆದರ್ಶವನ್ನು ಹಿಡಿದೆತ್ತಿ ದಾಗ ಯೂರೋಪು ರೋಲಾ ಅವರನ್ನು ಪರಿಹಾಸ್ಯಮಾಡಿತು. ಆದರಿಂದು ರೋಲಾ ಅವರ ಮಾತಿನ ಸತ್ಯ ಆ ಕುಹಕಿಗಳಿಗೇ ಅರ್ಥವಾಗುತ್ತಿದೆ. ಸ್ವಾಮಿ ಶಂಕರಾನಂದರಂತಹ ಮಹನೀಯರು ಯೂರೋಪಿಗೆ ಭಾರತದ ಜ್ಞಾನದೀವಿಗೆ ಹಿಡಿದು ಹೋಗಬೇಕು. ಗಾಡಾಂಧಕಾರದಲ್ಲಿ ಬಿದ್ದು ತೊಳಲುತ್ತಿರುವ ಯೂರೋಪಿನಲ್ಲಿ ಬೆಳಕಿನ ಸಸಿನೆಟ್ಟು ಬರಬೇಕು.

ಈ ಮಹತ್ಕಾರ್ಯ ಸಾಧನೆಗೆ ನನ್ನಿಂದ ಏನು ಸೇವೆಯಾಗಬಹುದೋ ಆದನ್ನು ಮಾಡಲು ಸಿದ್ಧನಾಗಿದ್ದೇನೆ. ನನಗೆ ತಾವು ದರ್ಶನಲಾಭವನ್ನಿತ್ತು ಕೃತಾರ್ಥನನ್ನಾಗಿ ಮಾಡಬೇಕು.

"ಇಂತು ತಮ್ಮ ದೀನಸೇವಕ ಸ್ಕಿನ್ನರ್."

ವಾಸು ಕಾಗದವನ್ನು ಕೂಲಂಕಷವಾಗಿ ಓದಿಕೊಂಡು ರಾಮುಸ್ವಾಮಿಗೆ

"ಶಂಕರಪ್ಪಿಗೆ ವಿಲಾಯಿತಿ ಯಾತ್ರೆ ಕಾದಿರುವ ಹಾಗಿದೆಯಪ್ಪಾ"

ಎಂದ. ರಾಮುಸ್ವಾಮಿ ಯೋಚಿಸುತ್ತಾ

"ಮೇಜರ್ ಸ್ಕಿನ್ನರ್ ಅವರನ್ನು ಹತ್ತಿರ ಬಿಟ್ಟುಕೊಳ್ಳುವುದು ಒಳ್ಳೆಯದೇ?

"ನಮಗೇನು ಭಯ ರಾಮು. ಶಂಕರನ ಗ್ರಂಥ ಓದಿ ಸ್ಕಿನ್ನರ್ ಮುಗ್ಧ ನಾಗಿದ್ದಾನೆಂಬುದಂತೂ ಖಂಡಿತ. ಅವನ ಜ್ಞಾನಪಿಪಾಸೆಯನ್ನು ಶಂಕರ ಪೂರೈಸುವ ವಿಷಯದಲ್ಲಿ ಅನುಮಾನವೇ ಇಲ್ಲ. ಯೂರೋಪ್, ಅಮೇರಿಕಾ ದೇಶಗಳಲ್ಲಿ ನಮ್ಮ ಆಶ್ರಮದ ಖ್ಯಾತಿ ಹಬ್ಬಿಸುವುದಕ್ಕೆ ಸ್ಕಿನ್ನರ್ ಪ್ರಯೋ

ಜನಕ್ಕೆ ಬರುತ್ತಾನೆ. ಭಾರತೀಯ ತತ್ತ್ವಜ್ಞಾನಕ್ಕೆ ಅಮೇರಿಕಾದಲ್ಲಿ ಒಳ್ಳೆಯ ಮಾರ್ಕೆಟ್ ಇದೆಯಂತೆ."

"ನೋಡು ವಾಸು. ಇದು ಸ್ವಲ್ಪ ಯೋಚನೆಮಾಡಿ ನಿರ್ಧರಿಸಬೇಕಾದ ವಿಷಯ. ಹೊರಗಿನವರ ಸಹವಾಸ, ಒಂದು ಹೋಗಿ ಒಂದು ಆದೀತು ?"

"ಒಳಗಿನವರ ಸಹವಾಸಕ್ಕಿಂತಲೂ ಹೊರಗಿನವರು ಸಹವಾಸವೇ ಒಳ್ಳೆಯದಯ್ಯಾ. ಈ ಐರೋಪ್ಯರು ಒಣ ಕಾರುಬಾರು ಮಾಡುವುದಕ್ಕೆ ಬರುವುದಿಲ್ಲ. ತಾವಾಯಿತು ತಮ್ಮ ಕೆಲಸವಾಯಿತು."

"ಸ್ಕಿನ್ನರ್ ಸರಿಯಾಗಿ ನಮ್ಮನ್ನು ಕಚ್ಚಿಕೊಂಡಿದ್ದರೆ ಬಹಳ ಕೆಲಸ ವಾಗುತ್ತದೆ ವಾಸು. ಈಗ ವಿಲ್ ಡ್ಯುರಾಂಟ್, ಆಲ್‌ಡ್ಯೂಸ್ ಹಕ್ಸ್‌ಲೀ, ಕ್ರಿಸ್ಟೋಫರ್ ಈಷರ್‌ವುಡ್, ಜೆರಾಲ್ಡ್ ಹರ್ಡ್, ಸಾಮರ್‌ಸೆಟ್ ಮಾಮ್ ಭಾರತೀಯ ತತ್ತ್ವಜ್ಞಾನದ ಬಗ್ಗೆ ಬೋಧಪ್ರದವಾದ ಗ್ರಂಥಗಳನ್ನು ಬರೆಯು ತ್ತಿದ್ದಾರೆ. ನಮಗೆ ಬೇಕಾದ ವಾತಾವರಣವನ್ನು ಅವರು ಯೂರೋಪ್, ಅಮೇರಿಕಾಗಳಲ್ಲಿ ನಿರ್ಮಾಣಮಾಡಿದ್ದಾರೆ. ಸ್ಕಿನ್ನರ್ ಸಹಾಯದಿಂದ ನಾವು ನಮ್ಮ ಖ್ಯಾತಿ ಬೆಳಸಬಹುದು. ಸ್ಕಿನ್ನರಿಗೆ ಫ್ರೆಂಚ್, ಜರ್ಮನ್, ಇಟಾಲಿಯನ್ ಭಾಷೆಗಳು ಬರುವುದು ನಮ್ಮ ಭಾಗ್ಯವೆಂದೇ ಹೇಳ ಬೇಕಲ್ಲವೆ ?"

"ಅವನಿಗೆ ಭಾಷಾಭಾಗ್ಯವಲ್ಲದೆ ಹಣಕಾಸಿನ ಭಾಗ್ಯವೂ ಇದೆ ರಾಮ ಸ್ವಾಮಿ. 'ಸರ್ವಂ ಶ್ರೀಕೃಷ್ಣಾರ್ಪಣಮಸ್ತು' ಆಗಬೇಕು. ಇನ್ನೊಂದು ವಿಷಯ, ನೀನು ಹೇಳಿದೆಯಲ್ಲಾ ಡ್ಯೂರಾಂಟ್, ಹಕ್ಸ್‌ಲೀ ಮತ್ತಿತರ ವಿದ್ವಾಂಸರು – ಅವರಿಗೆಲ್ಲಾ ಶಂಕರನ ಪುಸ್ತಕ ಅಭಿಪ್ರಾಯಕ್ಕೆ ಕಳುಹಿಸುವ ವ್ಯವಸ್ಥೆಮಾಡು. ಹೊರಗಿನವರು ನಮ್ಮನ್ನು ಹೊಗಳಿದ ಮೇಲೇ ನಮಗೆ ಬೆಲೆ ಬರುವುದು."

"ಪುಸ್ತಕಗಳನ್ನು ಕಳಿಸುವ ಏರ್ಪಾಟುಮಾಡುತ್ತೇನೆ – ಸ್ಕಿನ್ನರಿಗೆ ಏನು ಉತ್ತರ ಬರೆಯಲಿ ?—ಶಂಕರನಿಗೆ ಕಾಗದ ತೋರಿಸಿ ಉತ್ತರ ಬರೆಯುವುದು ಒಳ್ಳೆಯದು."

"ಹಾಗೇ ಮಾಡೋಣ. ಶಂಕರನನ್ನು ಇಲ್ಲಿಗೇ ಕರಿ "

ಎಂದು ಹೇಳಿದ. ಶಂಕರ ಬಂದಕೂಡಲೆ ರಾಮಸ್ವಾಮಿ ಅವನ ಕೈಗೆ ಕಾಗದವನ್ನಿತ್ತ.

ಶಂಕರ ಕಾಗದವನ್ನೋದಿಕೊಂಡು ಗಂಭೀರವದನನಾಗಿ

"ಲೋಕದಲ್ಲಿ ಎಷ್ಟು ದುಃಖವಿದೆ – ಎಷ್ಟು ದುಃಖಿಗಳಿದ್ದಾರೆ. ದುಃಖೋಪಶಮನ ಮಾಡಿಕೊಳ್ಳುವ ಮಾರ್ಗ ಯಾವದೆಂದು ಅವರೆಷ್ಟು ತೊಳಲಾಡುತ್ತಿದ್ದಾರೆ. ನಮ್ಮ ದರ್ಶನಗಳು ಮಾರ್ಗನಿರ್ದೇಶನಮಾಡಿವೆ. ಅದರ ಬೆಳಕನ್ನು ಎಲ್ಲೆಡೆಗೆ ಪಸರಿಸುವುದು ನಮ್ಮ ಕರ್ತವ್ಯ."

"ಆ ಕರ್ತವ್ಯ ನಾವು ನಿರ್ವಹಿಸುತ್ತಲೇ ಇರುವೆವಲ್ಲಾ, ನಿನ್ನ ಉಪನಿಷತ್‌ಸಾರ ನಾವಿಟ್ಟಿರುವ ದೊಡ್ಡ ಹೆಜ್ಜೆ. ಅದರ ಜತೆಗೆ ನಿನ್ನ ಗೀತಾ ಪ್ರವಚನಗಳೂ ಬಂದರೆ ನಮ್ಮಿಂದ ಸ್ವಲ್ಪ ಕೆಲಸವಾದ ಹಾಗಾಗುತ್ತದೆ. ನಿನ್ನ ಕೀರ್ತಿಯೂ ದಿಗಂತ ವಿಖ್ಯಾತವಾಗುತ್ತಿದೆ."

"ನಾನು ನಿಜವಾಗಿ ಕೀರ್ತಿ ಬಯಸುವುದಿಲ್ಲ ವಾಸು. ಈ ಪುಣ್ಯಾತ್ಮ ನಂಥ ಹತ್ತು ಜನಕ್ಕೆ ನನ್ನ ಗ್ರಂಥ ಸ್ವಲ್ಪ ಮನಃಶಾಂತಿಯನ್ನು ಕೊಟ್ಟರೆ ನನ್ನ ಶ್ರಮೆ ಸಾರ್ಥಕವಾಗುತ್ತದೆ. ಸ್ಕಿನ್ನರ್‌ನಂಥವರಿಗೆ ಎಲ್ಲ ನೆರವು ನೀಡಬೇಕಾದುದು ನಮ್ಮ ಧರ್ಮ."

"ಇದರಲ್ಲಿ ಅಂಥ ಧರ್ಮಸೂಕ್ಷ್ಮವೇನು ಅಡಗಿದೆ ?"

"ಅಡಗಿದೆ. ನಮ್ಮ ಅಹಂಕಾರಕ್ಕೆ ಸ್ಕಿನ್ನರ್‌ನಂಥವರೇ ಮದ್ದು. ಆಧ್ಯಾತ್ಮಿಕ ಪ್ರಗತಿ, ಸಾಧನೆ ಕೇವಲ ನಮ್ಮ ಸ್ವಂತಸೊತ್ತು ಎಂದು ನಾವು ಭಾವಿಸಿಕೊಂಡು, ಅದನ್ನು ಮುಚ್ಚಿಟ್ಟು ಬಚ್ಚಿಟ್ಟು ಲೋಕಕ್ಕೆ ಅನ್ಯಾಯ ಮಾಡುತ್ತಿದ್ದೇವೆ. ಪಾಶ್ಚಾತ್ಯರಲ್ಲಿಯೂ ಆಧ್ಯಾತ್ಮಿಕ ಜೀವಿಗಳಿದ್ದಾರೆ – ಅವರೂ ನಮ್ಮ ಹಾಗೆ ಈಶ್ವರ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುತ್ತಿದ್ದಾರೆ ಎಂದು ನಮ್ಮ ಜನ ತಿಳಿದುಕೊಳ್ಳಬೇಕಾದುದವಶ್ಯಕ."

"ಪಾಶ್ಚಾತ್ಯರಲ್ಲಿ ಸ್ಕಿನ್ನರ್‌ನಂಥವರು ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಭೋಗಪ್ರಿಯರೂ, ಭೌತಿಕ ಜ್ಞಾನಾಸಕ್ತರೂ ಆದ ಅವರ ದಾರಿ ನಮ್ಮದಾರಿ ಕೂಡುವುದು ಹೇಗೆ ?"

"ಕೂಡುತ್ತದೆ ವಾಸು. ಕೂಡಿಯೇ ಇದೆ. ಆರ್ಕಿಮೀಡೀಸ್, ಕೋಪರ್ನಿಕಸ್, ಗೆಲಿಲಿಯೋ, ಮ್ಯಾಡ್ಯಾಂಕ್ಯೂರಿ, ಜೀನ್ಸ್, ಈಡಿಂಗ್‌ಟನ್

ಇವರೆಲ್ಲಾ ಪ್ರಸಿದ್ಧ ವೈಜ್ಞಾನಿಕರು – ನೀನು ಹೇಳುವಂತೆ ಭೌತಿಕಜ್ಞಾನಾಸಕ್ತರು. ಅವರು ಕಂಡು ಹಿಡಿದುದೇನು ? ವಿಚಾರವಮಾಡಿದುದೇನು ? ಖಗೋಳದ ಹಿಂದೆ ಏನಿದೆ ?—ಅಣುಶಕ್ತಿಯ ಮಹತ್ತ್ವವೇನು ?—ಸೂರ್ಯ, ಚಂದ್ರ, ಪೃಥುವಿಗಳ ಚಲನವಲನ ಹೇಗೆ ? ಬೆಳಕಿನ ರಹಸ್ಯಶಕ್ತಿ ಎಂಥದು ಎನ್ನುವ ಪ್ರಕೃತಿರಹಸ್ಯಗಳನ್ನು ಭೇದಿಸಿದರು. ಅವರು ಹೊರಗಿನ – ಭೌತ ಪ್ರಪಂಚದಿಂದ ಒಳಗಿನ – ಅಧ್ಯಾತ್ಮ ಪ್ರಪಂಚಕ್ಕೆ ಹೋಗುತ್ತಿದ್ದಾರೆ; ನಾವು ಒಳಗಿನ – ಅಧ್ಯಾತ್ಮ ಪ್ರಪಂಚದಿಂದ ಹೊರಗಿನ ಪ್ರಪಂಚಕ್ಕೆ ಹೋಗುತ್ತಿದ್ದೇವೆ. ಒಂದು ಬೆಳಕಿನ ಕಿರಣದ ಪ್ರಭಾವ ತಿಳಿದುಕೊಂಡ ಪಾಶ್ಚಾತ್ಯ, ಅದರ ಕೇಂದ್ರೀಕೃತ ಸ್ವರೂಪ ಯಾವ ಶಕ್ತಿಯನ್ನು ಅಡಕವಮಾಡಿಕೊಂಡಿದೆಯೆಂದು ಶೋಧಿಸಲು ಹೊರಡುತ್ತಾನೆ. ನಾವು ಆ ಕೇಂದ್ರಿಕೃತ ಸ್ವರೂಪವನ್ನು ಅರ್ಥಮಾಡಿಕೊಂಡು ಅದರ ಭಿನ್ನಭಿನ್ನ ಸ್ವರೂಪದ ವ್ಯಾಪ್ತಿಯನ್ನು ಶೋಧಿಸಲು ಹೊರಡುತ್ತೇವೆ. ಒಂದು ಪರಾಗ್ರೂಪ, ಇನ್ನೊಂದು ಪ್ರತ್ಯಗ್ರೂಪ. ಆದರೆ ಎರಡೂ ಹೊರಡುವುದೇ ಒಂದೇ ಮನೋಭಾವನೆಯಿಂದ – ಒಂದೇ ತೆರನ ಕುತೂಹಲದಿಂದ. ಈಯೆರಡು ದೃಷ್ಟಿಗಳ ಸಂಗಮವೆಲ್ಲಿದೆ ಎಂದು ನಾನು ಹುಡುಕುತ್ತಿದ್ದೇನೆ."

ವಾಸು, ರಾಮುಸ್ವಾಮಿ ಇಬ್ಬರಿಗೂ ಶಂಕರನ ವಿಚಾರಲಹರಿ ಅರ್ಥವಾಗಲಿಲ್ಲವೆಂಬುದು ಸ್ಪಷ್ಟವಾಗಿ ಒಡೆದು ಅವರ ಮುಖದಲ್ಲಿ ಕಾಣಿಸುತ್ತಿತ್ತು. ಶಂಕರ ಅದನ್ನರಿತುಕೊಂಡೇ ಅವರಿಗೆ ಮನಃಕ್ಲೇಶವಾಗದಂತೆ

"ಸ್ಕಿನ್ನರಿಗೆ ಉತ್ತರ ಬರೆಯಬೇಕಲ್ಲವೇ ?"

"ಏನು ಬರೆಯಬೇಕೆಂದು ನೀನು ಹೇಳಿದರೆ ನಾನು ಬರೆಯುತ್ತೇನೆ"

ಎಂದು ರಾಮುಸ್ವಾಮಿ ಹೇಳಿದ.

"ಆಗಬಹುದು"

ಎಂದು ಶಂಕರ ಹೇಳಿ ಮಾರುತ್ತರ ಬರೆಸಿದ

"ಪ್ರಿಯಆತ್ಮಾ,

ನಿಮ್ಮ ಕಾಗದ ಕೈಸೇರಿತು.

ಆಧ್ಯಾತ್ಮಿಕ ವಿಷಯಗಳನ್ನು ಕುರಿತು ನೀವು ಮಾಡುತ್ತಿರುವ ಚಿಂತನೆ ಕಂಡು ನನ್ನ ಮನಸ್ಸಿಗೆ ತುಂಬ ಸಂತೋಷವಾಯಿತು.

ನಿಮ್ಮ ಜೀವನದಲ್ಲಿ ಬಂದೊದಗಿದ ಮಹಾಸಮಸ್ಯೆಯನ್ನು ನೀವು ಪರಿಹರಿಸಿಕೊಂಡಿರುವ ಬಗೆ ನಿಮ್ಮ ಅಧ್ಯಾತ್ಮಸಾಧನೆಯ ಪ್ರಗತಿಯನ್ನು ಸೂಚಿಸುತ್ತದೆ. ಸಾವಿರ ಮಾತನಾಡುವುದು ಸುಲಭ ಒಂದು ಕೃತಿ ಮಾಡುವುದು ಕಷ್ಟ.

ಎಲ್ಲಿ ಶ್ರದ್ಧೆಯಿದೆ ಅಲ್ಲಿ ಜಯವಿದೆ. ನೀವು ಸಾಧನೆಯಲ್ಲಿ ತೋರುತ್ತಿರುವ ಶ್ರದ್ಧೆಯೇ ನಿಮಗೆ ಯೋಗ್ಯಸಿದ್ಧಿಯನ್ನು ದೊರಕಿಸಿಕೊಡುತ್ತದೆಂದು ನಾನು ನಂಬಿದ್ದೇನೆ.

ನನ್ನ ಗ್ರಂಥವನ್ನು ಕುರಿತು ಬಹಳ ಒಳ್ಳೆಯ ಮಾತುಗಳನ್ನಾಡಿದ್ದೀರಿ. ಅದರಿಂದ ನಿಮಗೆ ಬೆಳಕು ಸಿಕ್ಕಿತೆಂದು ಬರೆದಿದ್ದೀರಿ. ನಿಮಗೆ ಅದರಿಂದ ಪ್ರಯೋಜನವಾಗಿದ್ದರೆ ನನ್ನ ಪುಣ್ಯವೆಂದು ಭಾವಿಸುತ್ತೇನೆ.

ನಾನೂ ನಿಮ್ಮ ಹಾಗೇ ಒಬ್ಬ ಸಾಧಕ. ಅನಂತಕೋಟಿ ಸೂರ್ಯಪ್ರಕಾಶನೂ, ಸರ್ವಾಂತರ್ಯಾಮಿಯೂ, ಸತ್ಯ ಶಕ್ತಿ ಪ್ರೇಮಪೂರ್ಣನೂ ಆದ ಪರಮನನ್ನು ಕಾಣಬೇಕಾದರೆ ನಾವು ನಮ್ಮ ಚೇತನಗಳನ್ನು ಎಷ್ಟು ಬಲಪಡಿಸಿಕೊಳ್ಳಬೇಕು ವಿಚಾರಮಾಡಿ. ಆಧ್ಯಾತ್ಮಿಕ ಸಾಧನೆಗೆ ಕೊನೆಯೆಂಬುದಿದೆಯೇ ? ನಾವು ಮುನ್ನಡೆದಷ್ಟು ದಾರಿಯ ವ್ಯಾಪ್ತಿಯೇ ಗೋಚರಿಸುತ್ತ ಹೋಗುತ್ತದೆ.

ನನ್ನ ಬಳಿಗೆ ಬರಲು ಅಪ್ಪಣೆ ಕೇಳಿದ್ದೀರಿ. ಅವಶ್ಯಕವಾಗಿ ಬನ್ನಿ. ಕೆಲವು ಮಿತ್ರರ ಇಚ್ಛೆಯಂತೆ ಇದೇ ಗೀತಾಪ್ರವಚನ ಮುಗಿಸಿದ್ದೇನೆ. ಉಪನಿಷತ್ ದರ್ಶನದ ಬಗ್ಗೆಯೂ ಹೀಗೇ ಪ್ರವಚನ ನಡೆಸಬೇಕೆಂಬ ಸಲಹೆ ಬಂದಿದೆ. ಅದನ್ನಾರಂಭಿಸುವ ದಿನ ತಿಳಿಸುತ್ತೇನೆ, ಬನ್ನಿ.

ಇಂತು ನಿಮ್ಮ ಆತ್ಮಕಲ್ಯಾಣದಲ್ಲಿ ಆಸಕ್ತನಾದ
ಶಂಕರಾನಂದ."

ಪತ್ರದ ಧಾಟಿಯನ್ನು ಕೇಳಿ ವಾಸು
"ಕಾಗದ ಬಹಳ ಸೌಮ್ಯವಾಯಿತಲ್ಲವೆ ?"
"ಹಾಗೆಂದರೆ ?"
"ವಿನಯ ಅತಿಯಾಯಿತೇನೋ ಎಂದು ಯೋಚಿಸುತ್ತಿದ್ದೇನೆ."

"ಶ್ರದ್ಧೆ ವೃಕ್ಷ– ವಿನಯ ಬೀಜ. ಸ್ಕಿನ್ನರ್ ಮನಸ್ಸಿನಲ್ಲಿ ಇಲ್ಲದ ನಿರೀಕ್ಷೆ ಹುಟ್ಟಿಸುವುದೇತಕ್ಕೆ ?"

"ಕಾಗದ ಸರಿಯಾಗಿ ಬರೆದು ಶಂಕರನ ಕೈಯಲ್ಲಿ ಸಹಿಮಾಡಿಸಿ ಪೋಸ್ಟಿಗೆ ಹಾಕಪ್ಪಾ"

ಎಂದು ವಾಸು ರಾಮಸ್ವಾಮಿಗೆ ತಿಳಿಸಿದ.

೧೩

ಆಶ್ರಮದ ಕಛೇರಿಗೆ ಸ್ವಲ್ಪವೂ ಬಿಡುವಿಲ್ಲದಂತಾಯಿತು. ಭಾರತದ ಎಲ್ಲಾ ಕಡೆಗಳಿಂದಲೂ ಕಾಗದಗಳು ಬರಲಾರಂಭವಾದವು. ಮದರಾಸಿನ ಕೆಲವು ಭಕ್ತರು ಸಾಮೂಹಿಕವಾಗಿ ಪತ್ರಬರೆದು ಸ್ವಾಮಿಗಳು ಮದರಾಸಿಗೆ ದಯೆಮಾಡಿಸಬೇಕೆಂದು ಕೋರಿದ್ದರು. ಆಶ್ರಮದಲ್ಲಿ ಬಂದು ನೆಲಸುವ ಇಚ್ಛೆಯನ್ನು ವ್ಯಕ್ತಪಡಿಸಿ ಕೆಲವರು ಪತ್ರಗಳನ್ನು ಬರೆದಿದ್ದರು. ಸ್ವಾಮಿ ಶಂಕರಾನಂದರ ಗ್ರಂಥವನ್ನೋದಿ ಸ್ಫೂರ್ತಿಗೊಂಡ ಕಲ್ಕತ್ತೆಯ ಕಾಲೇಜ್ ಪ್ರೊಫೆಸರೊಬ್ಬರು ತಮ್ಮ ಕೆಲಸಕ್ಕೆ ಶರಣುಹೊಡೆದು ಸನ್ಯಾಸ ಸ್ವೀಕರಿಸುವ ಆಶೆಯನ್ನು ವ್ಯಕ್ತಪಡಿಸಿದ್ದರು.

ಆಶ್ರಮದ ಕೀರ್ತಿ ವಿಸ್ತರಿಸುತ್ತ ಹೋದಂತೆ ಅದರ ಜವಾಬ್ದಾರಿಯೂ ಹೆಚ್ಚುತ್ತ ಹೋಯಿತು. ಜಿಜ್ಞಾಸುಗಳ, ಭಕ್ತರ, ಜ್ಞಾನಪಿಪಾಸುಗಳ ಕೋರಿಕೆಗಳನ್ನು ಪೂರಯಿಸುವ ಹೊಣೆಗಾರಿಕೆ ಆಶ್ರಮದ ಮೇಲೆ ಬಿತ್ತು.

ಶುಕ್ರವಾರದ ಭಜನೆಗೆ, ಪ್ರವಚನ ಗೋಷ್ಠಿಗೆ ಬರುವವರ ಸಂಖ್ಯೆ ಹೆಚ್ಚುತ್ತ ಬಂತು. ಸಭೆಗಳಿಗೆ ಮಹಡಿಯ ಮೇಲಣ ತೊಟ್ಟಿ ಸಾಲದಾಗಿ, ತೋಟದಲ್ಲಿ ಸಭೆಗಳನ್ನು ಏರ್ಪಡಿಸಬೇಕಾಯಿತು.

ಗ್ರಂಥದ ಮೂಲಕ ಸ್ವಾಮಿ ಶಂಕರಾನಂದರ ಪರಿಚಯ ಮಾಡಿ ಕೊಂಡಿದ್ದ ಸ್ಕಿನ್ನರ್‌ಗೆ ಅವರನ್ನು ಎದುರಿಗೆ ಕಂಡಾಗ ನಿರಾಶೆಯಾಗಲಿಲ್ಲ. ಶಂಕರಾನಂದರಿಗೆ ಅವಕಾಶವಿದ್ದಾಗಲೆಲ್ಲಾ ಸ್ಕಿನ್ನರ್ ಬಂದು, ಅವರೊಂದಿಗೆ ವಿವಿಧ ವಿಷಯಗಳನ್ನು ಚರ್ಚಿಸುತ್ತಿದ್ದರು.

ಒಂದು ದಿನ ಸ್ಕಿನ್ನರ್ ಸ್ವಾಮಿಜಿಯವರನ್ನು ಕಾಣಲು ಬಂದಿದ್ದಾಗ

"ಸ್ವಾಮಿಜಿ, ಒಂದು ಸಂಜೆ ನೀವು ಪುರಸತ್ತು ಮಾಡಿಕೊಂಡು ನಮ್ಮ ಅಥಿತಿಗಳಾಗಲು ಸಾಧ್ಯವೇ?"

"ನಾನು ಎಲ್ಲಿಗೆ ಬರಬೇಕು."

"ನಾನು ಮತ್ತು ಕೆಲವು ಐರೋಪ್ಯ, ಅಮೇರಿಕನ್, ಫ್ರೆಂಚ್ ಮಿತ್ರರು ಕೂಡಿ ಒಂದು ಸಾಧಕರ ಸಂಘ (Seekers Club) ಮಾಡಿಕೊಂಡಿದ್ದೇವೆ. ವಾರಕ್ಕೊಮ್ಮೆ ಸರದಿಯ ಮೇಲೆ ಒಬ್ಬೊಬ್ಬರ ಮನೆಯಲ್ಲಿ ಕೂಡಿ ಆಧ್ಯಾತ್ಮಿಕ ವಿಷಯಗಳನ್ನು ಚರ್ಚಿಸುತ್ತೇವೆ. ನೀವು ಆಗಾಗ್ಗೆ ನಮ್ಮಲ್ಲಿಗೆ ಬಂದು ನಮ್ಮ ಸಂಶಯ ಪರಿಹರಿಸಿದರೆ ನಾವು ಋಣಿಗಳಾಗಿರುತ್ತೇವೆ."

"ಆಗಬಹುದು. ವಾಸುದೇವರಾಯರನ್ನು ಕೇಳಿ ನಿಶ್ಚಯ ಮಾಡಿಕೊಳ್ಳಿ. ನಿಮ್ಮ 'ಸಾಧಕರ ಸಂಘ'ದಲ್ಲಿ ಯಾರು ಯಾರಿದ್ದಾರೆ."

"ನಾವು ಅದನ್ನು ಒಂದು ವ್ಯವಸ್ಥಿತ ಸಂಘದ ರೀತಿ ಏರ್ಪಡಿಸಿಲ್ಲ. ಅದು ಹೆಚ್ಚುಕಡಿಮೆ ಮಿತ್ರಗೋಷ್ಠಿಯಾಗಿದೆ. ಮಿಸ್. ಎಮಿಲಿ ರಾಬಿನ್ಸ್‌ನ್ ಆದರ ವ್ಯವಸ್ಥಾಪಿಕೆ. ರಾಬಿನ್ಸ್‌ನ್ ಸುಮಾರು ಹನ್ನೊಂದುವರ್ಷ ಜಪಾನಿನಲ್ಲಿ ಮಿಷನರಿ ಕೆಲಸ ಮಾಡುತ್ತಿದ್ದರು. ಅಲ್ಲಿ ಸೊಗಸಾದ ಆಸ್ಪತ್ರೆ ನಡೆಸಿ ಜನರಿಗೆ ವೈದ್ಯಕೀಯ ಸಹಾಯವನ್ನೊದಗಿಸುತ್ತಿದ್ದರು. ಜಪಾನ್ ಆಕ್ಸಿಸ್ ರಾಷ್ಟ್ರಗಳನ್ನು ಸೇರಿದ್ದರಿಂದ ಅವರು ಜಪಾನ್ ಬಿಟ್ಟು ಭಾರತಕ್ಕೆ ಬಂದು ನೆಲಸಿದರು. ಆಂದ್ರೆ ಫ್ರಾನ್ಸ್ ದೇಶೀಯರು. ದೊಡ್ಡ ವಿಜ್ಞಾನಿ. ಸೊಗಸಾಗಿ ಪಿಟೀಲು ನುಡಿಸುತ್ತಾರೆ. ಡಿಗಾಲೆ ಸರ್ವಾಧಿಕಾರ ಸ್ಥಾಪನೆಯಾದ ಮೇಲೆ ಫ್ರಾನ್ಸ್ ಬಿಟ್ಟು ಭಾರತಕ್ಕೆ ಬಂದಿದ್ದಾರೆ. ಸಂಸ್ಕೃತ ಅಭ್ಯಾಸಮಾಡಿಕೊಂಡಿದ್ದಾರೆ. ಹೆನ್ರಿ ಮಿಚ್ಚಲ್ ಇಂಗ್ಲೀಷ್ ಕವಿ. ಅವರ ಕವನ ಸಂಗ್ರಹಗಳು, ಕಾದಂಬರಿಗಳು, ಕತಾಸಂಗ್ರಹಗಳು, ಪ್ರಬಂಧಗಳು ಪ್ರಕಟವಾಗಿವೆ. ಹೆನ್ರಿ ನೈರಾಶ್ಯವಾದಿ. ಈಲಿಯಟ್ ಸಂಪ್ರದಾಯದ ಕವಿಗಳಲ್ಲಿ ಅಗ್ರಗಣ್ಯ. ವಾನ್ ಚಿಸಲ್‌ಹೋಮ್ ಡಚ್ ಚಿತ್ರಗಾರರು. ತಮ್ಮದೇ ಆದ ವಿಲಕ್ಷಣ ಸಂಪ್ರದಾಯ ಅನುಸರಿಸುತ್ತಾರೆ–ಅಜಂತೆಯ ಚಿತ್ರಕಲೆಯನ್ನು ಕೂಲಂಕಷವಾಗಿ ಅಭ್ಯಾಸಮಾಡಿದ್ದಾರೆ. ಅಜಂತೆಯ ಮೇಲೆ ಒಂದು ಬೃಹದ್ಗ್ರಂಥ ಬರೆಯುತ್ತಿದ್ದಾರೆ. ಇವರಲ್ಲದೆ ಇನ್ನೂ ಕೆಲವರಿದ್ದಾರೆ. ಎಲ್ಲರೂ ಒಂದಲ್ಲ

ಒಂದು ಬಗೆಯಲ್ಲಿ ಜೀವನದಲ್ಲಿ ಜಿಹಾಸೆಹೊಂದಿ 'ಮುಂದೇನು' ಎಂದು ಕೇಳುತ್ತಿರುವವರೇ ಆಗಿದ್ದಾರೆ."

"ಮುಂಬಯಿಯಲ್ಲಿಯೂ ಇಂಥ ಜನರಿದ್ದಾರೆಂದು ನಾನು ಭಾವಿಸಿರಲಿಲ್ಲ."

"ಇದ್ದಾರೆ ಸ್ವಾಮಿಜಿ. ಒಂದು ಕಾಲದಲ್ಲಿ ಇಂಗ್ಲಿಷರು, ಫ್ರೆಂಚರು, ಡಚ್ಚರು, ಪೋರ್ಚುಗೀಸರು ಭಾರತದ ಲೌಕಿಕ ಸಂಪತ್ತನ್ನು ಸೂರೆ ಹೊಡೆಯಲು ಬರುತ್ತಿದ್ದರು; ಈಗ ಭಾರತದ ಆಧ್ಯಾತ್ಮಿಕ ಸಂಪತ್ತನ್ನು ಸೂರೆಹೊಡೆಯಲು ಬರುತ್ತಿದ್ದಾರೆ."

"ಈ ಸಂಪತ್ತು ಬತ್ತಲಾರದ ಒರತೆ ಸ್ಕಿನ್ನರ್. ನೀವು ಮತ್ತು ನಿಮ್ಮ ಮಿತ್ರರಂಥ ಲಕ್ಷಜನ ಬಂದರೂ ಅವರಿಗೆ ಭಾರತ ಸ್ವಾಗತನೀಡಲು ಸಿದ್ಧವಾಗಿದೆ. ಇಡಿಯ ವಿಶ್ವವನ್ನು ಒಂದು ಕುಟುಂಬವೆಂದು ಭಾವಿಸುವುದು ಭಾರತದ ಪರಂಪರೆ."

ಸ್ವಾಮಿ ಶಂಕರಾನಂದರು ತಮ್ಮ ಆಹ್ವಾನವನ್ನು ಸ್ವೀಕರಿಸಿದುದು ಸ್ಕಿನ್ನರ್‌ಗೆ ತುಂಬ ಸಂತೋಷವನ್ನುಂಟುಮಾಡಿತು.

"ಸ್ವಾಮಿಜಿ, ಇನ್ನೊಂದು ವಿಷಯ ಕೇಳಲು ಆತುರನಾಗಿದ್ದೇನೆ."

"ಕೇಳಿ."

"ನಿಮಗೂ ನನಗೂ ಆಗಿರುವ ಸಂಭಾಷಣೆಗಳನ್ನು ಗುರುತುಹಾಕಿದ್ದೇನೆ. ನೀವು ಅಪ್ಪಣೆಕೊಡುವುದಾದರೆ ಅವುಗಳನ್ನು ಒಂದು ರೂಪಕ್ಕೆ ತಂದು ಪ್ರಕಟಿಸಲು ಬಯಸುತ್ತೇನೆ. ನನ್ನಹಾಗೆ ವಿಚಾರಮಾಡಿ, ಸಂಶಯ ತಳೆದಿರುವವರಿಗೆ ಈ ಗ್ರಂಥದಿಂದ ಸಹಾಯವಾಗಬಹುದು."

"ಲೋಕೋಪಕಾರಕ್ಕೆ ನೆರವಾಗುವ ಯಾವ ಕೆಲಸ ನೀವು ಮಾಡುವುದಕ್ಕೂ ನನ್ನ ಅಭ್ಯಂತರವಿಲ್ಲ. ಆದರೆ ಈ ವಿಷಯವನ್ನೂ ವಾಸುದೇವರಾಯರಿಗೆ ತಿಳಿಸಿ."

ವಾಸುವಿನಿಂದ ಅಪ್ಪಣೆ ದೊರಕಿಸಲು ತಡವಾಗಲಿಲ್ಲ.

ರಾಮಗಿರಿ ಆಶ್ರಮ ನಿರ್ಮಾಣದ ಕಡೆಗೆ ವಾಸು ಪೂರ್ಣ ಲಕ್ಷ್ಯಕೊಡ ತೊಡಗಿದ. ಅವನು ಸ್ಥೂಲವಾಗಿ ರಚಿಸಿದ ಆಶ್ರಮದ ಕಟ್ಟಡದ ನಕ್ಷೆಯನ್ನು ಬೊಂಬಾಯಿವಾಲಾ ನೋಡಿ ಒಂದು ಪ್ರಸಿದ್ಧ ಇಂಜಿನಿಯರಿಂಗ್ ಕಂಪೆನಿಗೆ

ವಹಿಸಿದ. 'ಹಾರ್ಟ್ ಮತ್ತು ಜೆಂಚಲೀ' ಕಂಪೆನಿಯವರು ಆಶ್ರಮದ ನಕ್ಷೆಯನ್ನು ಸಿದ್ಧಗೊಳಿಸಿದರು. ಆಶ್ರಮದ ಕಟ್ಟಡಗಳೆಲ್ಲಾ ಮುಗಿಯುವುದಕ್ಕೆ ನಾಲ್ಕು ಲಕ್ಷ ರೂಪಾಯಿಗಳು ಬೇಕಾಗಬಹುದೆಂದು ಅಂದಾಜುಮಾಡ ಲಾಯಿತು. ಆಶ್ರಮಕ್ಕೆ ಒಂದು ನಿಧಿಕೂಡಿಸಿಕೊಡಬೇಕೆಂದು ಷಿರೀನ್ ತಮ್ಮ ಪತಿಗೆ ಸಲಹೆಯಿತ್ತಿದ್ದರು. ಅದನ್ನವರು ದೀರ್ಘವಾಗಿ ಆಲೋಚನೆ ಮಾಡು ತ್ತಿದ್ದರು.

ಸದ್ಯಕ್ಕೆ ಕೈಯಲ್ಲಿರುವ ಹಣದಿಂದ ಆಶ್ರಮದ ಕೆಲಸ ಆರಂಭಿಸಿ ಕಾಲ ಕ್ರಮೇಣ ಬೆಳಸಿಕೊಂಡು ಹೋಗುವುದು ಸೂಕ್ತವೆಂದು ವಾಸುವಿಗೆ ತೋರಿತು.

'ಸಾಧಕರ ಸಂಘ'ದಲ್ಲಿ ಶಂಕರನ ಪ್ರಭಾವ ಹೇಗೆ ಬೆಳೆಯುವುದು ನೋಡಿ ಮುಂದಿನ ಕಾರ್ಯಕ್ರಮ ನಿಶ್ಚಯಿಸುವುದೆಂದು ವಾಸು ನಿರ್ಧರಿಸಿದ.

'ಸಾಧಕರ ಸಂಘ'ದ ಅಧಿವೇಶನಕ್ಕೆ ಬೊಂಬಾಯಿವಾಲಾ, ಷಿರೀನ್, ರತನ್‌ಲಾಲ್ ಮತ್ತು ಗೆಳೆಯರು – ಅವರ ಕುಟುಂಬಗಳಿಗೆ ಆಹ್ವಾನಗಳನ್ನು ಕಳುಹಿಸುವಂತೆ ವಾಸು ಸ್ಕಿನ್ನರಿಗೆ ಸೂಚಿಸಿದ.

ಅಧಿವೇಶನ ಸ್ಕಿನ್ನರ್ ಮನೆಯ ಬಿಸಿಲು ಮಾಳಿಗೆಯ ಮೇಲೆ ಸೇರುವು ದೆಂದು ನಿಶ್ಚಯವಾಯಿತು. ಕಾರ್ಯಕ್ರಮ ಆರುಗಂಟೆಗೆ ಆರಂಭವಾಗುವು ದಿದ್ದರೂ ಎಲ್ಲರೂ ಐದು ಗಂಟೆಗೇ ಬರಬೇಕೆಂದು ಸ್ಕಿನ್ನರ್ ಪ್ರಾರ್ಥಿಸಿ ಕೊಂಡಿದ್ದರು.

ಐದು ಗಂಟೆಗೆ ಬಂದ ಅತಿಥಿಗಳಿಗೆ ಸಾಧಕರ ಸಂಘ'ದ ಸದಸ್ಯರ ಪಚರಿಯ ಸ್ಕಿನ್ನರ್ ಮಾಡಿಸಿಕೊಟ್ಟರು. ಮಹಿಳೆಯರನ್ನು ಮಿಸ್. ರಾಬಿನ್ಸ್‌ನ್ ಹಾರ್ದಿಕವಾಗಿ ಸ್ವಾಗತಿಸಿದರು.

"ನಿಮ್ಮ ಮಿತ್ರರ ಪರಿಚಯವನ್ನು ಅವರ ಕೃತಿಗಳ ಮೂಲಕ ಮಾಡಿ ಕೊಡಬೇಕು ಸ್ಕಿನ್ನರ್"

ಎಂದು ಶಂಕರ ಸೂಚಿಸಲು, ಸ್ಕಿನ್ನರ್ ಎಲ್ಲರನ್ನೂ ತಮ್ಮ ಡ್ರಾಯಿಂಗ್ ರೂಮಿಗೆ ಕರೆದೊಯ್ದು, ಅಲ್ಲಿ ತೂಗುಹಾಕಿದ್ದ ವಾನ್ ಚಿಸಲ್‌ಹೋಮನ ಚಿತ್ರಗಳನ್ನು ತೋರಿದರು.

ರತನ್‌ಲಾಲ್ ಮತ್ತು ಅವನ ಗೆಳೆಯರಿಗೆ ಚಿತ್ರಗಳನ್ನು ನೋಡಿ ಗಹಗಹಿಸಿ ನಗಬೇಕೆನ್ನಿಸಿತು. ಬೊಂಬಾಯಿವಾಲಾ ಅವುಗಳನ್ನು ಬಹಳ ಶ್ರದ್ಧೆಯಿಂದ ನೋಡುತ್ತಿದ್ದುದನ್ನು ಕಂಡು ರತನ್‌ಲಾಲ್ ತನ್ನ ಚಾಪಲ್ಯವನ್ನು ಬಿಗಿಹಿಡಿಯಬೇಕಾಯಿತು.

'ಕೋಳೀವಾಡದ ಮತ್ಸ್ಯಗಂಧಿಯವರು' ಚಿತ್ರವನ್ನು ಮೆಚ್ಚುತ್ತಾ ಬೊಂಬಾಯಿವಾಲಾ ವಾನ್ ಚಿಸಲ್‌ಹೋಮನನ್ನು ಕುರಿತು

"ನೀವು ವಾನ್‌ಗೋ ಸಂಪ್ರದಾಯಕ್ಕೆ ಸೇರಿದವರೇನು ?"

ಎಂದು ಕೇಳಿದರು.

ಭಾರತೀಯನ ಬಾಯಿಂದ ಬಂದ ಈ ಪ್ರಶ್ನೆ ಕೇಳಿ ಚಿಸಲ್ ಹೋಮನಿಗೆ ಆಶ್ಚರ್ಯವಾಯಿತು.

"ನನ್ನ ವರ್ಣಸಮ್ಮಿಶ್ರಣ ನಿಮಗೆ ವಾನ್‌ಗೋನ ನೆನಪು ತರುತ್ತಿದೆ ಯಲ್ಲವೇ ?"

"ವರ್ಣಸಮ್ಮಿಶ್ರಣದ ತಾದ್ರೂಪ್ಯದ ಜತೆಗೆ ಜೀವನದೃಷ್ಟಿಯೂ ತಾದ್ರೂಪ್ಯ ಪಡೆದಿದೆ."

"ನಿಮ್ಮ ಅಭಿಪ್ರಾಯ ಸ್ವಲ್ಪ ವಿವರಿಸುವಿರಾ ?"

ಬೊಂಬಾಯಿವಾಲಾ ಶಂಕರನ ಕಡೆ ತಿರುಗಿ

"ವಾನ್‌ಗೋ ತಮ್ಮ ಮಾತಿನಲ್ಲಿ ಹೇಳಬೇಕಾದರೆ ಸ್ವಾಮಿಜಿ – ಶುದ್ಧ ಅದ್ವೈತಿ. ಬ್ರಹ್ಮಾಂಡದ ಪ್ರತಿಯೊಂದು ಕಣವೂ ಈಶ್ವರ ಸಂಕೇತವೆಂದು ಅವನ ಭಾವನೆ. ಚಿಸಲ್‌ಹೋಮರ 'ಮತ್ಸ್ಯಗಂಧಿ'ಯರ ಚಿತ್ರದಲ್ಲಿಯೂ ಆ ದೃಷ್ಟಿ ಮೂಡಿರುವುದು ಕಂಡುಬರುತ್ತದೆ. ಕೋಳೀವಾಡದ ಸುಂದರ ಕಾರ್ಮಿಕ ಸ್ತ್ರೀಯರ ಚಿತ್ರಗಳನ್ನು ನಮ್ಮ ಚಿತ್ರಗಾರರೂ ತೆಗೆದಿದ್ದಾರೆ. ಆದರೆ ಅವರ ಕೃತಿಗಳಿಗೂ ಈ ಕೃತಿಗೂ ಇರುವ ವ್ಯತ್ಯಾಸವಿಷ್ಟೇ ? ಅವರು ಹೆಣ್ಣಿನ ಹೊರಗಿದ್ದ ಸೌಂದರ್ಯ, ದೇಹಾಂಗಗಳ ಸೌಷ್ಠವದ ಕಡೆಗೆ ಲಕ್ಷ್ಯ ಕೊಟ್ಟಿದ್ದಾರೆ. ಚಿಸಲ್‌ಹೋಮ್ ಅವರ ಅಂತರಂಗವನ್ನು ಪ್ರವೇಶಿಸ ಲೆತ್ನಿಸಿದ್ದಾರೆ. ಮೀನಿನ ಕಾಯಕಮಾಡುವ ಈ ಹೆಣ್ಣುಮಕ್ಕಳ ಮನಸ್ಸಿನ ತೃಪ್ತಿ, ಶುಚಿತ್ವ ಚಿಸಲ್‌ಹೋಮರ ಕೃತಿಯಲ್ಲಿ ಎದ್ದು ಕಾಣುತ್ತಿದೆ. ಕಾಯಕ ಗಳಲ್ಲಿ ಇದು ದೊಡ್ಡದು, ಇದು ಚಿಕ್ಕದು ; ಇದು ಶ್ರೇಷ್ಠ, ಇದು ಕನಿಷ್ಠ ಎಂಬ

ಭಾವನೆ ತಪ್ಪೆಂದು ಚಿತ್ರ ಸಾರುತ್ತಿದೆ. ಶ್ರದ್ಧೆಯಿಂದ ನಿರ್ವಹಿಸಿದ ಪ್ರತಿಯೊಂದು ಕಾಯಕವೂ ಶ್ರೇಷ್ಠವಾದುದೆಂದು ಮತ್ಸ್ಯಗಂಧಿಯರು ಸೂಚಿಸುತ್ತಿದ್ದಾರೆ."

"ಗೀತಾಚಾರ್ಯ ಹೇಳಿರುವ 'ಯೋಗಃ ಕರ್ಮಸುಕೌಶಲಂ' ಮಹಾವಾಕ್ಯದ ಅರ್ಥವೇ ಅದು"

ಎಂದು ಶಂಕರ ಹೇಳಿದ.

ಬೊಂಬಾಯಿವಾಲಾ ಅವರ ವ್ಯಾಖ್ಯಾನ ಚಿಸಲ್‌ಹೋಮನನ್ನು ಅಚ್ಚರಿಗೊಳಿಸಿದಂತೆ ರತನ್‌ಲಾಲನನ್ನೂ ಅಚ್ಚರಿಗೊಳಿಸಿತು. ಡ್ರಾಯಿಂಗ್ ರೂಮಿನಲ್ಲಿದ್ದ ಉಳಿದ ಚಿತ್ರಗಳನ್ನು ನೋಡುವಾಗ ರತನ್‌ಲಾಲನಿಗೆ ನಗಬೇಕೆನಿಸಲಿಲ್ಲ.

"ನನ್ನ ಕಲೆ ನೋಡಿ ಫ್ರಾನ್ಸ್ ಗಹಗಹಿಸಿ ನಕ್ಕಿತು. ಇಂಗ್ಲೆಂಡಿನಲ್ಲಿ ನನ್ನ ಚಿತ್ರಗಳನ್ನು ಪ್ರದರ್ಶಿಸುವುದಕ್ಕೆ ಅವಕಾಶ ಸಿಗಲಿಲ್ಲ. ಇಂಗ್ಲೆಂಡ್, ಫ್ರಾನ್ಸಿಗೆ ಬೇಡವಾದ ಚಿತ್ರಕಲೆ ಇನ್ನು ಅಮೇರಿಕಾಕ್ಕೆ ಬೇಕಾಗುವುದೇ ಎಂದು ನಾನು ಅಲ್ಲಿಗೆ ನನ್ನ ಚಿತ್ರಗಳನ್ನು ಕಳಿಸಿಕೊಡಲಿಲ್ಲ. ಆದರೆ ಭಾರತದಲ್ಲಿ ನನ್ನನ್ನು ತಿಳಿಯಬಲ್ಲವರಿದ್ದಾರೆ ಎಂದು ಮನಸ್ಸು ಹೇಳಿತು. ನನ್ನ ಭಾವನೆ ತಪ್ಪಾಗಲಿಲ್ಲ."

"ಇಲ್ಲಿ ನಿಮ್ಮ ಚಿತ್ರಗಳ ಪ್ರದರ್ಶನ ಏರ್ಪಡಿಸಿದ್ದಿರಾ ?"

ಎಂದು ಬೊಂಬಾಯಿವಾಲಾ ಕೇಳಿದರು.

"ಇಲ್ಲ. ನನ್ನ ಕೃತಿಗಳು ಪಕ್ವವಾಗಲೆಂದು ನಾನೇ ತಡೆದಿದ್ದೇನೆ. ಆ ಬಗ್ಗೆ ನನಗೂ ಮೇಜರ್ ಸ್ಕಿನ್ನರ್ ಅವರಿಗೂ ಹಲವು ಸಲ ಬಿಸಿಬಿಸಿ ಮಾತುಗಳೂ ನಡೆದುಹೋಗಿವೆ."

"ನಾನು ಉತ್ಪ್ರೇಕ್ಷೆ ಮಾಡಿ ನಿಮ್ಮ ಮುಖಸ್ತುತಿ ಮಾಡಲಿಚ್ಛಿಸುವುದಿಲ್ಲ ಮಿಸ್ಟರ್ ಚಿಸಲ್‌ಹೋಮ್. ನಿಮ್ಮ ಚಿತ್ರಗಳಲ್ಲಿ ದೈವಪ್ರಭೆಯ ಕಿಡಿಗಳಿವೆ. ಸ್ವಾಮಿಜಿಯವರು ಏನು ಹೇಳುತ್ತಾರೆ ಕೇಳಿ ?"

"ಬೊಂಬಾಯಿವಾಲಾ ಅವರ ಅಭಿಪ್ರಾಯ ಅಕ್ಷರಶಃ ಸತ್ಯವಾದುದು. ಆಧ್ಯಾತ್ಮಿಕ ತತ್ತ್ವಗಳನ್ನು ಚಿತ್ರಗಳಲ್ಲಿ ತೋರಿಸುವುದು ಸಾಧ್ಯವೇ ಎಂದು ನಾನು ವಿಚಾರಮಾಡುತ್ತಿದ್ದೆ. ದೃಷ್ಟಾಂತಕ್ಕೆ ಈ ಚಿತ್ರ ತೆಗೆದುಕೊಳ್ಳಿ.

ಹಿಂಬದಿಯಲ್ಲಿ ಅಚ್ಚಕಪ್ಪು ಬಳಿದಿದ್ದೀರಿ – ಕಪ್ಪಿನ ಮುಂದೆ ನೀಲಿ ವಿರಾಜಿಸುತ್ತಿದೆ – ನೀಲಿಯನ್ನು ಭೇದಿಸಿಕೊಂಡು ಶ್ವೇತಕಾಂತಿ ಕಂಗೊಳಿಸುತ್ತಿದೆ. ಸತ್ತ್ವ, ರಜ, ತಮೋಗುಣಗಳನ್ನು ನೀವು ಚಿತ್ರದಲ್ಲಿ ತೋರಿಸಿದ್ದೀರಿ. ಮುಂಬಯಿವಾಲಾ ಅವರು ಹೇಳಿದಂತೆ ನಿಮ್ಮ ಚಿತ್ರಗಳಲ್ಲಿ ದೈವಪ್ರಭೆಯ ಕಿಡಿಗಳಿವೆ. May God bless you. (ದೇವರು ನಿಮ್ಮನ್ನು ಆಶೀರ್ವದಿಸಲಿ)"

ಎಂದು ಶಂಕರ ಮನಃಪೂರ್ವಕವಾಗಿ ನುಡಿದ. ಚಿಸಲ್‌ಹೋಮಿನ ಹೃದಯ ಕೃತಜ್ಞತೆಯಿಂದ ತುಂಬಿತು.

ಬಿಸಿಲುಮಾಳಿಗೆಯ ಮೇಲೆ ಸಿದ್ಧಗೊಳಿಸಿದ್ದ ಉಪಹಾರವೆಡೆಗೆ ಸ್ಕಿನ್ನರ್ ಎಲ್ಲರನ್ನೂ ಕರೆದೊಯ್ದರು. ಹಣ್ಣುಗಳು, ಬಿಸ್ಕತ್ತು, ತಂಪಾದ ಹಣ್ಣಿನ ಪಾನೀಯಗಳ ಉಪಾಹಾರವನ್ನು ಅತಿಥಿಗಳು ಸ್ವೀಕರಿಸಿದರು.

ಶಂಕರ ಮಿಚ್ಚೆಲ್ ಕಡೆ ತಿರುಗಿ

"ನಿಮ್ಮ ಕವನಗಳ ಪರಿಚಯ ಮಾಡಿಕೊಡುವುದಿಲ್ಲವೇ ?"

ಎಂದು ಕೇಳಿದ. ಮಿಚ್ಚೆಲ್ ಸಂಕೋಚದಿಂದ

"ಹೊಸದಾಗಿ ನಾನು ಏನನ್ನೂ ಬರೆದಿಲ್ಲ."

"ಚಿಂತೆಯಿಲ್ಲ. ಹಳೆಯ ಸಂಗ್ರಹದಿಂದಲೇ ಒಂದೆರಡು ಪದ್ಯಹೇಳಿ."

ಮಿಚ್ಚೆಲ್ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ನಿಂತು ತನ್ನ ಅಂಗಿಯ ಚುಂಗನ್ನು ನೀವುತ್ತಾ

"ಈಗ ನಾನು ಹೇಳುವ ಪದ್ಯ 'ಯೋಧರು' ನನ್ನ 'ಪ್ರವಾದಿಗಳು' (Prophets) ಎಂಬ ಕಾವ್ಯಸಂಗ್ರಹದಲ್ಲಿ ಪ್ರಕಟವಾಗಿದೆ. ಎರಡನೆಯ ಮಹಾಯುದ್ಧ ಅತ್ಯುಗ್ರವಾಗಿ ನಡೆಯುತ್ತಿದ್ದಾಗ ನನ್ನ ಮನಸ್ಸಿಗೆ ಬಂದ ಭಾವನೆಗಳು ಈ ಪದ್ಯದಲ್ಲಿ ಸೂಚಿತವಾಗಿವೆ.

'ಅಡೋಲ್ಫ್ ಹಿಟ್ಲರ್ – ನೋಡುಬಾ ನಿನ್ನ ರಣಕೇಳಿಯನ್ನು.

ನಿನ್ನ ನರಮೇಧಕ್ಕೆ ಫ್ರಾನ್ಸ್, ಇಂಗ್ಲೆಂಡ್, ಜರ್ಮನಿ, ಜಪಾನ್, ಇಟಲಿ, ಅಮೇರಿಕಾ – ಇಡಿಯ ವಿಶ್ವವೇ ಯಜ್ಞಕುಂಡ.

ಇವನ ರಕ್ತ ಅವನು, ಅವನ ರಕ್ತ ಇವನು ಚೆಲ್ಲುತ್ತಿದ್ದಾರೆ.

ಜರ್ಮನಿಯ ಫ್ರಾ ತನ್ನ ಗಂಡನ ಸಾವಿಗೆ ಹಲುಬುತ್ತಿದ್ದಾಳೆ.

ಇಂಗ್ಲೆಂಡಿನ ಮಿಸಸ್ ತನ್ನ ಪತಿಯ ಮೃತಿಗೆ ಮರುಗುತ್ತಿದ್ದಾಳೆ.
ರಕ್ತ – ರಕ್ತ – ರಕ್ತ – ಎಲ್ಲಿನೋಡಿದರೂ ರಕ್ತ.
ಭೂಮಿಯ ವಿರಾಟ್‌ಗರ್ಭದೊಳಗೆ ಎಲ್ಲ ರಕ್ತವೂ ಪ್ರವಹಿಸುತ್ತಿದೆ.
ಜರ್ಮನರ ರಕ್ತ, ಇಂಗ್ಲಿಷಿನವರ ರಕ್ತ, ಫ್ರಾನ್ಸಿನವರ ರಕ್ತ;
ಚೀನಾ, ಜಪಾನ್, ಭಾರತೀಯರ ರಕ್ತ;
ಕಪ್ಪು, ಬಿಳುಪು, ಕೆಂಪು, ಹಳದಿ ಜನಾಂಗದವರ ರಕ್ತ.
ಬಿಳಿಯ ಇಂಗ್ಲಿಷಿನವರ ರಕ್ತ ಬೆಳ್ಳಗಿಲ್ಲ;
ಕರಿಯ ನೀಗ್ರೋ ರಕ್ತ ಕಪ್ಪಗಿಲ್ಲ.
ಎಲ್ಲವೂ ಕೆಂಪು – ಕೆಂಪು – ಕೆಂಪು.
ಎಲ್ಲವೂ ಸೇರುವುದು ಒಂದೇ ಎಡೆಯಲ್ಲಿ.

ವರ್ಣ, ಜನಾಂಗ, ಹವಾಮಾನ, ಸಂಸ್ಕೃತಿಗಳ ಭಿನ್ನಭಿನ್ನತೆ ಮರೆತು ರಕ್ತಗಳು ಒಂದುಗೂಡುತ್ತಿವೆ.

ಹಿಟ್ಲರ್ – ಈ ಐಕ್ಯತೆಯನ್ನು ನಿನ್ನ ಸ್ಟಾರಂ ಟ್ರೂಪರ್ಸ್, ನಿನ್ನ ಗೆಸ್ಟಾಪೋ, ನಿನ್ನ ಅಸೀಮ ರಾಕ್ಷಸೀಬಲ ಮುರಿಯಲಾರದು.

ಮಾನವ್ಯದ ಮಹಾಶಕ್ತಿಯ ಮುಂದೆ ನೀನೊಂದು ಹುಲುಕೀಟ.
ಹಿಟ್ಲರ್ – ನೀನು ಏಕಮೇವಾದ್ವಿತೀಯನಲ್ಲ.
ನಿನ್ನಂಥವರು ನೂರಾರು ಮಂದಿ ಆಗಿಹೋದರು.
ಇಂದು ಲೋಕ ತಲೆಬಾಗಿಸುವುದು ಅವರಿಗಲ್ಲ—
ನಾಳೆ ಲೋಕ ತಲೆಬಾಗಿಸುವುದು ನಿನಗಲ್ಲ.

ಬುದ್ಧ, ಯೇಸು, ಫ್ರಾನ್ಸಿಸ್, ರಾಮಕೃಷ್ಣ, ಗಾಂಧಿ ಪ್ರೇತವನವನ್ನು ನಂದನವನ್ನಾಗಿ ಮಾರ್ಪಡಿಸಿರುವರು.

ಮಾನವ ಪ್ರೇಮವೆಂಬ ಪಾರಿಜಾತ ವಿಕಸಿಸಿ ಚಿರಕಾಲ ಪರಿಮಳಿಸುವುದು."

ಮಿಚ್ಚೆಲ್ ಪದ್ಯಪೂರೈಸಲು ಎಲ್ಲರೂ ಕರತಾಡನ ಮಾಡಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಶಂಕರ ಅವನನ್ನು

"ಇನ್ನೊಂದು ಪದ್ಯ ಹೇಳಿ" ಎಂದ.

ಮಿಚ್ಚೆಲ್ ತನ್ನ ಪದ್ಯಗಳನ್ನು ಜ್ಞಾಪಿಸಿಕೊಳ್ಳುತ್ತಾ

"ಈಗ ನಾನು ಹೇಳುವುದು 'ದುಃಖಸೇತು' ಎನ್ನುವ ನನ್ನ ಕಾವ್ಯ ಸಂಗ್ರಹದಿಂದ ಒಂದು ಪದ್ಯ

"ಬೇಕು ಬೇಕು ಎಂದು ಬಯಸುವ ಬಾಳು,
ಬಯಸಿದಷ್ಟು ದೊರೆತರೂ ಸಾಲದೆನ್ನುವ ಬಾಳು,
ದೊರೆಯದುದಕ್ಕೆ ಮರುಗುವ ಬಾಳು,
ನನ್ನದು – ನಿನ್ನದು – ಲೋಕದ್ದು.
ಮಹಡಿಯ ಮೇಲೆ ಮಹಡಿ ಕಟ್ಟಿ,
ಕಾರಿನ ಜತೆಗೆ ಕಾರುಕೊಂಡು,
ಭೋಗ, ಭೋಗ, ಭೋಗದಲ್ಲಿ
ನಾನು – ನೀನು – ಲೋಕವೇ ಲೀನ.
ಸಮುದ್ರದ ತಡಿಯಲ್ಲಿ,
ಮಗುಕಟ್ಟಿದ ಮಳಲು ಮನೆಯನ್ನು
ಮಂದಮಾರುತ ಬೀಸಿ ನೆಲಕ್ಕೊರಗಿಸುವಂತೆ
ಸಾವು – ಸಾವು – ಸಾವು ಬಂದು
ನಿನ್ನ – ನನ್ನ – ಲೋಕದ
ಭೋಗದ ಭಾಗ್ಯದ ಮನೆಯನ್ನು ನೆಲಕ್ಕೊರಗಿಸುತ್ತದೆ.
ಭೋಗಬೇಕೇ – ಭಾಗ್ಯಬೇಕೇ – ಶಾಂತಿಬೇಕೇ ?
ಮೃತ್ಯುವನ್ನು ಗೆಲಿದಲ್ಲದೆ ಭೋಗ, ಭಾಗ್ಯ, ಶಾಂತಿ
ಮಳಲಿನಲ್ಲಿ ಕಟ್ಟಿದ ಮನೆಗಳಂತೆ ಕ್ಷಣಭಂಗುರ ಗೆಳೆಯಾ."

ಪುನಃ ಎಲ್ಲರೂ ಕರತಾಡನಮಾಡಿ ತಮ್ಮ ಸಂತೋಷ ವ್ಯಕ್ತಪಡಿಸಿದರು.

ಶಂಕರಾನಂದರು ಭಾಷಣವನ್ನಾರಂಭಿಸುವ ಮುಂಚೆ ಸ್ಕಿನ್ನರ್ ಕೋರಿಕೆಯಂತೆ ಮಾನ್ಸರ್ ಆಂದ್ರೆ ಚೊಪಿನ್ನನ 'ಸಂಜೆ' ಗೀತೆಯನ್ನು ಪಿಟೀಲಿನಲ್ಲಿ ನುಡಿಸಿದರು. ವಾತಾವರಣ ಗಂಭೀರವಾಗಿ ಶಂಕರಾನಂದರ ಭಾಷಣಕ್ಕೆ ಭವ್ಯವಾದ ಹಿನ್ನೆಲೆಯನ್ನು ಸೃಷ್ಟಿಸಿಕೊಟ್ಟಿತು.

ಶಂಕರಾನಂದರು ನಿಂತುಕೊಂಡು ಕೆಲವು ಪ್ರಾರ್ಥನಾ ಶ್ಲೋಕಗಳನ್ನು ಹೇಳಿ

"ಸೋದರಿಯರೇ, ಸೋದರರೇ, ಮುಮುಕ್ಷುಗಳೇ, ಸಾಧಕರೇ,

ಸೋದರ ಸ್ಕಿನ್ನರ್ ಅವರು ನಮ್ಮನ್ನಿಲ್ಲಿ ಬರಮಾಡಿಕೊಂಡು ನಿಮ್ಮ ಪರಿಚಯ ಲಾಭ ಮತ್ತು ಪ್ರತಿಭೆಯದರ್ಶನ ಮಾಡಿಸಿದ್ದಾರೆ. ಸಂಗೀತ, ಸಾಹಿತ್ಯ, ಚಿತ್ರಕಲೆಯ ದಾರಿ ಹಿಡಿದು ಪರತತ್ತ್ವದರ್ಶನಕ್ಕೆ ಹೊರಟಿರುವ ಸಾಧಕರನ್ನು ಕಂಡು ನನಗೆ ಅತ್ಯಾನಂದವಾಯಿತು. ಐಹಿಕ ಜೀವನದ ಸುಳಿಗೆ ಸಿಕ್ಕಿ ಮಾನವ್ಯ ಮತಿಗೆಟ್ಟಿರುವಾಗ ಪಾರಮಾರ್ಥಿಕ ಜೀವನದ ಕಡೆ ಮನಸ್ಸು ಕೊಡುವ ಕೆಲವರಾದರೂ ಇದ್ದಾರೆಂದು ತಿಳಿಯುವುದು ಮನಸ್ಸಿಗೆ ನೆಮ್ಮದಿಯನ್ನುಂಟುಮಾಡಿರುವ ವಿಷಯ.

ಇಂದಿನ ಸಭೆ ಮುಂದಿನ ಜಗತ್ತಿನ ಸಂಕೇತವೆಂದು ನಾನು ಭಾವಿಸುತ್ತೇನೆ- ಹಲವು ದೇಶದವರು, ಹಲವು ಭಾಷೆ ಮಾತನಾಡುವವರು, ಹಲವು ಕಾಯಕದವರು, ಹಲವು ವರ್ಣದವರು ಇಲ್ಲಿ ಸೇರಿದ್ದೇವೆ. ಆದರೆ ನಮ್ಮೆಲ್ಲರನ್ನೂ ಒಂದುಗೂಡಿಸುವ ತಂತು ನಮ್ಮ ಆಧ್ಯಾತ್ಮಿಕ ಪಿಪಾಸೆ. ಈ ಆದರ್ಶ ನಮ್ಮನ್ನು ಗುರಿಮುಟ್ಟಿಸಬೇಕಲ್ಲದೆ, ನಮ್ಮಿಂದ ವಿಶ್ವದ ಐಕ್ಯತೆಯನ್ನೂ ಸಾಧಿಸಿ ಮಾನವ್ಯವನ್ನು ಅಮರಗೊಳಿಸಬೇಕು.

ನಿಮ್ಮ ಸಾಧನಯೋಗಕ್ಕೆ ನೆರವಾಗುವ ಮಾತುಗಳನ್ನು ನೀವು ನನ್ನಿಂದ ನಿರೀಕ್ಷಿಸುತ್ತಿರುವಿರೆಂಬುದನ್ನು ಬಲ್ಲೆ. ಕಠೋಪನಿಷತ್ತಿನ ಕೆಲವು ಶ್ಲೋಕಗಳನ್ನು ಆಧಾರವಾಗಿಟ್ಟುಕೊಂಡು ಕೆಲವು ಮಾತುಗಳನ್ನಾಡುತ್ತೇನೆ. ನಾನು ಆಡುವ ಮಾತುಗಳೆಲ್ಲಾ ಹಳೆಯವೇ. ಆದರೆ ಹಳೆಯ ಮಾತುಗಳಿಗೆ ಹೊಸ ಅರ್ಥ – ಹೊಸ ಅನುಭವದ ಕುಂದಣ ದೊರೆತಾಗ ಅವು ಹೊಸದಾಗುತ್ತವೆ.

ಸಂಪತ್ತು, ಅಧಿಕಾರ, ಆಯುಷ್ಯಗಳೆಲ್ಲವನ್ನೂ ಕೊಡುತ್ತೇನೆಂದು ಹೇಳಿದ ಧರ್ಮಸ್ವರೂಪನಾದ ಯಮನಿಗೆ ನಚಿಕೇತ 'ಸ್ವಾಮಿ, ಅವುಗಳನ್ನು ತೆಗೆದುಕೊಂಡು ನಾನೇನು ಮಾಡಲಿ. ಅವುಗಳೆಲ್ಲಾ ಮೃತ್ಯುವಿಗೆ ಅಧೀನವಲ್ಲವೇ? ಜೀವ ಸಾವುಗಳ ರಹಸ್ಯವನ್ನು ನನಗೆ ತಿಳಿಸು, ಸತ್ತ ಮೇಲೆ ನಮ್ಮಗತಿ ಏನಾಗುತ್ತದೆಂದು ತಿಳಿಯಲು ನಾನು ಕಾತುರನಾಗಿದ್ದೇನೆ.

ಅದನ್ನು ತಿಳಿಸು' ಎಂದು ಪ್ರಾರ್ಥಿಸುತ್ತಾನೆ. ಅವನ ಭಕ್ತಿಗೆ ಮಾರುಹೋದ ಧರ್ಮಸ್ವರೂಪ ಅವನಿಗೆ ಅಕ್ಷರಯೋಗವನ್ನು ಬೋಧಿಸುತ್ತಾನೆ.

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು ।
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ ॥

[ಈ ಶರೀರವು ಒಂದು ರಥವೆಂದೂ ಆತ್ಮನು ಅದರಲ್ಲಿಯ ರಥಿಯೆಂದೂ ತಿಳಿದುಕೋ. ಬುದ್ಧಿಯು ಸಾರಥಿಯೆಂದೂ ಮನಸ್ಸು ಕಡಿವಾಣವೆಂದೂ ಅರಿತುಕೋ.]

ಇಂದ್ರಿಯಾಣಿ ಹಯಾನಾಹುರ್ವಿಷಯಾಂಸ್ತೇಷು
ಗೋಚರಾನ್ ।
ಆತ್ಮೇಂದ್ರಿಯ ಮನೋಯುಕ್ತಃ ಭೋಕ್ತೇ
ತ್ಯಾಹುರ್ಮನೀಷಿಣಃ ॥

[ಇಂದ್ರಿಯಗಳು ಕುದುರೆಗಳೆಂದೂ ತದ್ವಿಷಯಗಳು ಅವು ಸಾಗುವ ಮಾರ್ಗವೆಂದೂ ಅನ್ನುವರು. ಇಂದ್ರಿಯ ಹಾಗೂ ಮನಸ್ಸು ಇವುಗಳಿಂದ ಯುಕ್ತನಾದ ಆತ್ಮನು ಸುಖದುಃಖಗಳ ಭೋಕ್ತೃವೆಂದು ಜಾಣರು ಹೇಳುವರು.]

ಯಸ್ತು ವಿಜ್ಞಾನವಾನ್ಭವತ್ಯಯುಕ್ತೇನ ಮನಸಾ ಸದಾ ।
ತಸ್ಯೇಂದ್ರಿಯಾಣ್ಯವಶ್ಯಾನಿ ದುಷ್ಟಾಶ್ವಾ ಇವ ಸಾರಥೇಃ ॥

[ಮನಸ್ಸು ಯಾವಾಗಲೂ ಚಂಚಲವಿರುವದರಿಂದ ಶುದ್ಧ ಜ್ಞಾನವಿಲ್ಲದವನ ಇಂದ್ರಿಯಗಳು, ದುಷ್ಟ ಕುದುರೆಗಳು ಸಾರಥಿಯ ವಶಕ್ಕೆ ಬಾರದಂತೆ ಅವನ ವಶಕ್ಕೆ ಬಾರವು.]

ಯಸ್ತು ವಿಜ್ಞಾನವಾನ್ಭವತಿ ಯುಕ್ತೇನ ಮನಸಾ ಸದಾ ।
ತಸ್ಯೇಂದ್ರಿಯಾಣಿ ವಶ್ಯಾನಿ ಸದಶ್ವಾ ಇವ ಸಾರಥೇಃ ॥

[ಮನಸ್ಸು ಸರ್ವದಾ ಯೋಗಯುಕ್ತವಿರುವುದರಿಂದ ವಿಜ್ಞಾನವಂತ ನಾಗಿರುವವನ ಇಂದ್ರಿಯಗಳು, ಒಳ್ಳೇ ಕುದುರೆಗಳು ಸಾರಥಿಯ ವಶದಲ್ಲಿರು ವಂತೆ ಅವನ ವಶದಲ್ಲಿಯೇ ಇರುತ್ತವೆ.]

ಯಸ್ತ್ವವಿಜ್ಞಾನವಾನ್ಭವತ್ಯಮನಸಃ ಸದಾಶುಚಿಃ।
ನ ಸ ತತ್ಪದಮಾಪ್ನೋತಿ ಸಂಸಾರಂ ಚಾಧಿಗಚ್ಛತಿ॥

[ಯಾವನು ವಿಜ್ಞಾನರಹಿತನೋ ಚಂಚಲ ಚಿತ್ತವುಳ್ಳವನೋ ಸದಾ ಅಪವಿತ್ರನೋ ಅವನಿಗೆ ಆ ಪದವು ದೊರೆಯಲಾರದು. ಅವನಿಗೆ ಪುನಃ ಸಂಸಾರವು ಪ್ರಾಪ್ತವಾಗುವುದು.]

ಯಸ್ತು ವಿಜ್ಞಾನವಾನ್ಭವತಿ ಸಮನಸ್ಕಃ ಸದಾಶುಚಿಃ।
ಸ ತು ತತ್ಪದಮಾಪ್ನೋತಿ ಯಸ್ಮಾದ್ಭೂಯೋ ನ ಜಾಯತೇ॥

[ವಿಜ್ಞಾನವಂತನೂ ಸ್ಥಿರಚಿತ್ತವುಳ್ಳವನೂ ಸರ್ವದಾ ಪವಿತ್ರನೂ ಆ ಪದವನ್ನು ಪಡೆಯುವನು. ಅಲ್ಲಿಂದ ಅವನಿಗೆ ಪುನಃ ಹುಟ್ಟು ಎಂಬುದೇ ಇಲ್ಲ.]

ವಿಜ್ಞಾನಸಾರಥಿರ್ಯಸ್ತು ಮನಃಪ್ರಗ್ರಹವಾನ್ನರಃ।
ಸೋಽಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ
ಪರಮಂ ಪದಮ್॥

[ಯಾವ ಮನುಷ್ಯನು ವಿಜ್ಞಾನವನ್ನೇ ಸಾರಥಿಯನ್ನಾಗಿಟ್ಟುಕೊಂಡು ಮನಸ್ಸನ್ನು ಸಂಯಮಿಸುವನೋ ಅವನು ಈ ಸಂಸಾರವನ್ನು ದಾಟಿ ಹೋಗುವನು. ಇದೇ ಸರ್ವವ್ಯಾಪಿಯ ಶ್ರೇಷ್ಠಪದವು.]

ಏಷಸರ್ವೇಷು ಭೂತೇಷು ಗೂಢೋತ್ಮಾ ನ ಪ್ರಕಾಶತೇ।
ದೃಶ್ಯತೇ ತ್ವಗ್ರಯಾ ಬುದ್ಧ್ಯಾ ಸೂಕ್ಷ್ಮಯಾ
ಸೂಕ್ಷ್ಮದರ್ಶಿಭಿಃ॥

[ಸಕಲ ಭೂತಗಳಲ್ಲಿಯೂ ಗೂಢವಾಗಿರುವ ಆ ಆತ್ಮನು ಪ್ರಕಟನಾಗುವುದಿಲ್ಲ. ಆದರೆ ಅವನು ಸೂಕ್ಷ್ಮದರ್ಶಿಗಳ ಸೂಕ್ಷ್ಮ ಹಾಗೂ ತೀಕ್ಷ್ಣ ಬುದ್ಧಿಗೆ ದೃಗ್ಗೋಚರನಾಗುವನು.]

ಉತ್ತಿಷ್ಠತ ಜಾಗ್ರತ ಪ್ರಾಪ್ಯ ವರಾನ್ನಿಬೋಧತ।
ಕ್ಷುರಸ್ಯಧಾರಾ ನಿಶಿತಾ ದುರತ್ಯಯಾ ದುರ್ಗಂ
ಪಥಸ್ತತ್ಕವಯೋ ವದಂತಿ॥

[ಏಳಿರಿ. ಜಾಗ್ರತರಾಗಿರಿ. ಶ್ರೇಷ್ಠರ ಕಡೆಗೆ ಹೋಗಿ ಅರಿತುಕೊಳ್ಳಿರಿ. ಈ ಮಾರ್ಗದಿಂದ ನಡೆಯುವುದು ಕತ್ತಿನ ಮೊನೆಯ ಮೇಲಿನ ನಡೆಯಷ್ಟು ಕಠಿಣವೆಂದು ಕವಿಗಳು ಹೇಳುವರು.]

ಅಶಬ್ದಮಸ್ಪರ್ಶಮರೂಪಮವ್ಯಯಂ ತಥಾರಸಂ
ನಿತ್ಯಮಗಂಧವಚ್ಚ ಯತ್।
ಅನಾದ್ಯನಂತಂ ಮಹತಃಪರಂ ಧ್ರುವಂ ನಿಚಾಯ್ಯ
ತನ್ಮೃತ್ಯುಮುಖಾತ್ಪ್ರಮುಚ್ಯತೇ॥

[ಅದು (ಆತ್ಮವು) ಶಬ್ದರಹಿತವು, ಸ್ಪರ್ಶರಹಿತವು, ಅವ್ಯಯವು, ರೂಪರಹಿತವು. ಅದೇ ರೀತಿಯಲ್ಲಿ ಅದು ರಸರಹಿತವು, ನಿತ್ಯವು, ಗಂಧರಹಿತವು, ಅನಾದಿಯು, ಅನಂತವು. ಮಹತ್ತತ್ವದಾಚೆಗೆ ಅಂದರೆ ವಿರಾಟದಾಚೆಗೆ ಇರುವಂತಹದು, ಸತ್ಯವು. ಅದನ್ನರಿತವನು ಮೃತ್ಯುಮುಖದಿಂದ ಮುಕ್ತನಾಗುವನು.]

ಜ್ಞಾನಾಜ್ಞಾನಗಳಿರುವ ಅಂತರವನ್ನು ಶ್ರುತಿಕಾರ ಕಠೋಪನಿಷತ್ತಿನಲ್ಲಿ ಸೊಗಸಾಗಿ ಬಿಡಿಸಿ ತೋರಿಸಿದ್ದಾನೆ. ಶರೀರ ರಥ, ಆತ್ಮ ರಥಿ, ಬುದ್ಧಿ ಸಾರಥಿ, ಮನಸ್ಸು ಕಡಿವಾಣ. ಸಾರಥಿಯ ಕೈಯಿಂದ ಕಡಿವಾಣ ಕಳಚಿದರೆ ಕುದುರೆಗಳು ತುಂಟಾಟವಾಡಿ ರಥವನ್ನೊಯ್ದು ಎಲ್ಲಿಯೋ ಕೆಡವಿಬಿಡುತ್ತವೆ.

ಸರ್ವಸಿದ್ಧಿಗೂ ಮೂಲ ಮನಸ್ಸೆಂದು ಶೃತಿಕಾರ ಒತ್ತಿಯೊತ್ತಿ ಹೇಳುತ್ತಾನೆ. ಸಂಯಮಶೀಲನ ಮನಸ್ಸು ಇಂದ್ರಿಯಾದಿ ವಿಷಯಗಳನ್ನು ತೊರೆದು ಭಗವಂತ ನೆಡೆಗೆ ಧಾವಿಸುತ್ತದೆ. ಆದರೆ ಇದು ಸುಲಭಸಾಧ್ಯವಾದ ಮಾರ್ಗವಲ್ಲ. ಕತ್ತಿಯ ಮೊನೆಯ ಮೇಲೆ ನಡೆದಷ್ಟು ಕಷ್ಟತರವಾದುದು. ಆದರೆ ಕಷ್ಟವನ್ನು ಲೆಕ್ಕಿಸದೆ ದೃಢಚಿತ್ತದಿಂದ ಮುನ್ನಡೆಯುವವನು ಮೃತ್ಯುವನ್ನು ಗೆಲ್ಲಲು ಸಮರ್ಥನಾಗುತ್ತಾನೆ."

ಎಂದು ಹಲವು ದೃಷ್ಟಾಂತಗಳನ್ನು ಕೊಟ್ಟು ಸ್ವಾಮಿಜಿ ಶ್ರುತಿವಾಕ್ಯಗಳನ್ನು ವಿವರಿಸಿದರು.

ಸಭೆ ಸ್ತಬ್ಧವಾಗಿತ್ತು. ಭಾವಿಕರಾದ ಶ್ರೋತೃಗಳು ಸ್ವಾಮಿಜಿಯವರ ಜ್ಞಾನಸರಸ್ಸಿನಲ್ಲಿ ಮುಳುಗಿದ್ದರು.

ಸ್ವಾಮಿಜಿ ಶಾಂತಿಮಂತ್ರ ಹೇಳಿದ ಮೇಲೆ ಎಲ್ಲರಿಗೂ ಎಚ್ಚರವಾಯಿತು.

ವಂದನಾರ್ಪಣೆ ಹೊಣೆಹೊತ್ತಿದ್ದ ಎಮಿಲಿ ರಾಬಿನ್ಸನ್ನರಿಗೆ ಬಹಳ ಕಷ್ಟಕ್ಕಿಟ್ಟುಕೊಂಡಿತು. ನಾಲ್ಕು ಮಾತು ಹೇಳದಿದ್ದರೆ ಕರ್ತವ್ಯ ಲೋಪವಾದೀತೆಂದು ಹೆದರಿ

"ಒಂದು ಕಾಲದಲ್ಲಿ ಪ್ರಾಚ್ಯದೇಶಗಳಿಂದ ದಿವ್ಯಜ್ಞಾನ ಪಾಶ್ಚಾತ್ಯ ದೇಶಗಳಿಗೆ ಹೋಗಿ ಅಲ್ಲಿನ ಅಜ್ಞಾನವನ್ನು ಹೋಗಲಾಡಿಸಿತು. ಐಹಿಕ ಭೋಗ ಭಾಗ್ಯವೇ ಸರ್ವಸ್ವವೆಂದು ನಂಬಿದ್ದ ಜನರನ್ನು ಎಚ್ಚರಿಸಿ, ಅವಕ್ಕಿಂತಲೂ ಶ್ರೇಯಃಪ್ರದವಾದುದೂ ಶಾಶ್ವತವಾದುದೂ ಇವೆಯೆಂದು ತೋರಿಸಿಕೊಟ್ಟಿತು. ಇಂದೂ ಆ ಕೆಲಸ ಹೆಚ್ಚಿನ ಪ್ರಮಾಣದಲ್ಲಿ ಆಗಬೇಕಾಗಿದೆ. ಸ್ವಾಮಿ ಶಂಕರಾನಂದರಂತಹ ದಿವ್ಯಜ್ಞಾನಿಗಳು, ವಿಶ್ವ ಕುಟುಂಬಿಗಳು ಆ ಕೆಲಸ ನಿರ್ವಹಿಸಬೇಕಾಗಿದೆ. ನಮ್ಮ ಸಾಧಕರ ಸಂಘ ಆ ಕೆಲಸದಲ್ಲಿ ಅವರಿಗೆ ಎಲ್ಲ ಸಹಕಾರ ನೀಡಲು ಸಿದ್ಧವಾಗಿದೆಯೆಂದು ತಿಳಿಸಲು ಸಂತೋಷಪಡುತ್ತೇನೆ. ಸ್ವಾಮಿಜಿಯವರು ಮೇಲಿಂದ ಮೇಲೆ ನಮ್ಮ ಸಂಘಕ್ಕೆ ಬಂದು ನಮ್ಮನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸುತ್ತೇನೆ"

ಎಂದು ಹೇಳಿದರು.

ವಾಸು ಸಂಘದ ಸದಸ್ಯರೆಲ್ಲರಿಗೂ ಆಶ್ರಮಕ್ಕೆ ಬರಲು ಆಮಂತ್ರಣ ವಿತ್ತ.

ಅಂದಿನ ಸಭೆ ಅಷ್ಟು ಯಶಸ್ವಿಯಾಗಿ ನಡೆದುದಕ್ಕೆ ಸ್ಕಿನ್ನರ್ ತುಂಬ ಸಂತೋಷಪಟ್ಟುಗೊಂಡರು. ವಾಸು ಮನಸ್ಸಿನಲ್ಲಿ ನೂರೆಂಟು ಲೆಕ್ಕಾಚಾರ ಹಾಕಿಕೊಂಡು ಸಂತೋಷಪಟ್ಟುಕೊಂಡ.

೧೪

ರಾಮಸ್ವಾಮಿಯ ಪ್ರಚಾರ ಪ್ರಾವೀಣ್ಯತೆಯಿಂದ ಶಂಕರನಿಗೆ 'ಮಹರ್ಷಿ' ಪಟ್ಟ ದೊರೆತಿತ್ತು. ಮುಂಬಯಿಯ ಇಂಗ್ಲಿಷ್ ಮತ್ತು ದೇಶ ಭಾಷಾ ಪತ್ರಿಕೆಗಳಲ್ಲಿ ಮಹರ್ಷಿಗಳ ಮತ್ತು ಯೋಗಿನಿ ಅಮ್ಮನವರ ಅದ್ಭುತ ಜೀವನಚಿತ್ರಗಳು ಪ್ರಕಟವಾಗುತ್ತಿದ್ದವು. ಅವರಿಬ್ಬರ ದರ್ಶನ ಮಾಡಿಸೆಂದು ಪತ್ರಿಕಾ ಪ್ರತಿನಿಧಿಗಳು ರಾಮಸ್ವಾಮಿಯನ್ನು ಕಾಡತೊಡಗಿದರು. 'ಸದ್ಯಕ್ಕೆ ಪತ್ರಿಕಾಪ್ರತಿನಿಧಿಗಳನ್ನು ಒಳಗೆ ಸೇರಿಸಬೇಡ' ಎಂದು ವಾಸು ಕಟ್ಟಾಜ್ಞೆ ವಿಧಿಸಿದ್ದ.

ಕಾಲ ಸಾಗುತ್ತಿತ್ತು. ಶಂಕರ ಮಹರ್ಷಿ, ಯೋಗಿನಿ ಅಮ್ಮನವರ ಕೀರ್ತಿ ಕಸ್ತೂರಿಯ ಪರಿಮಳ ಹರಡುತ್ತಿತ್ತು. ಆದರೆ ತನ್ನ ಕೆಲಸ ಮುಂದುವರಿಯಲಿಲ್ಲವೆಂಬ ಅಸಮಾಧಾನ ವಾಸುವನ್ನು ಹಿಂಸಿಸುತ್ತಿತ್ತು. ಬೊಂಬಾಯಿವಾಲಾ, ರತನ್‌ಲಾಲ್, ಸ್ಕಿನ್ನರ್ ಇವರ ಭಕ್ತಿಯಲ್ಲಿ ಯಾವ ಲೋಪವೂ ಇರಲಿಲ್ಲ. ಆದರೆ ಒಬ್ಬರೂ ಹಣದ ಮಾತನ್ನೇ ಎತ್ತುತ್ತಿರಲಿಲ್ಲ.

ವಾಸುವಿಗೆ ಸ್ವಲ್ಪವಾದರೂ ಹರ್ಷವಾಗಲಿ ಎಂದು ರಾಮಸ್ವಾಮಿ ಒಂದು ವ್ಯಾಪಾರ ಕುದುರಿಸಿಕೊಂಡು, ವೈವಾಯ್ಸ್ ಕಂಪೆನಿಯ ಮ್ಯಾನೇಜರಾದ ಕೇತ್ಕರನ್ನು ಜತೆಯಲ್ಲಿ ಕರೆದುಕೊಂಡು ಬಂದ.

"ಯೋಗಿನಿ ಅಮ್ಮನವರು ಸೊಗಸಾಗಿ ಹಾಡುತ್ತಾರಂತಲ್ಲಾ"

ಎಂದು ಕೇತ್ಕರ್ ಕೇಳಿದ.

"ನಿಮಗೆ ಹೇಗೆ ಗೊತ್ತಾಯಿತು?"

"ಮುಂಬಯಿ ಪತ್ರಿಕೆಗಳಿಲ್ಲಾ ಸಾರುತ್ತಿವೆ. ನಿಮ್ಮ ಮ್ಯಾನೇಜರೂ ಆ ಬಗ್ಗೆ ಬೇಕಾದಷ್ಟು ಹೇಳಿದ್ದಾರೆ."

"ನಮ್ಮಿಂದೇನಾಗಬೇಕಾಗಿದೆ."

"ಯೋಗಿನಿ ಅಮ್ಮನವರು ಕೆಲವು ಭಜನೆ ಹಾಡುಗಳನ್ನು ರಿಕಾರ್ಡ್‌ಗೆ ಕೊಡುವುದು ಸಾಧ್ಯವೇ?"

"ಅವರನ್ನು ಕೇಳಿ ನೋಡಬೇಕು."

"ಸಾಧ್ಯವಿಲ್ಲವೆಂದು ನೀವು ಹೇಳಕೂಡದು."

"ಎಷ್ಟು ರಿಕಾರ್ಡುಗಳಿಗೆ ಹಾಡುಗಳು ಬೇಕು."

"ಆರು ರಿಕಾರ್ಡುಗಳು – ಹನ್ನೆರಡು ಹಾಡುಗಳು."

"ಗೌರವಧನ ಏನು ಕೊಡುತ್ತೀರಿ?"

"ಮಾರಾಟದ ಮೇಲೆ ರಿಕಾರ್ಡಿಗೆ ಎರಡಾಣೆಯಂತೆ ಕೊಡುವುದು ವಾಡಿಕೆ."

"ನಿಮ್ಮ ಲೆಕ್ಕಪತ್ರ ನಾವೆಲ್ಲಿ ನೋಡೋಣ. ಮೊತ್ತದ ಹಣ ಹೇಳಿದರೆ ಮುಂದೆ ವಿಚಾರಮಾಡಬಹುದು."

"ನೀವೇ ಹೇಳಿ."

"ನಾವೇ ನಮ್ಮ ಆಶ್ರಮದ ಪರವಾಗಿ ಅವರ ರಿಕಾರ್ಡುಗಳನ್ನು ಮಾಡಿಸಬೇಕೆಂದಿದ್ದೇವೆ. ಅವರ ಸಾವಿರಾರು ಭಕ್ತರು ಆ ಬಗ್ಗೆ ಬೇಡಿಕೆಯ ಪತ್ರಗಳನ್ನು ಬರೆಯುತ್ತಿದ್ದಾರೆ."

"ಅವರ ರಿಕಾರ್ಡುಗಳು ಜನಪ್ರಿಯವಾಗುವುದೆಂದು ನನಗೂ ನಂಬಿಕೆಯಿದೆ. ರಿಕಾರ್ಡಿಗೆ ರೂ ೫೦೦ ರೂಪಾಯಿಯಂತೆ ಗೌರವಧನ ಕೊಡಲು ನಾನು ಸಿದ್ಧನಾಗಿದ್ದೇನೆ."

"ಆರು ರಿಕಾರ್ಡುಗಳಿಗೆ ಮೂರು ಸಾವಿರ ರೂಪಾಯಿ. ಬಹಳ ಸ್ವಲ್ಪವಾಯಿತು. ನಮ್ಮ ಆಶ್ರಮದ ಕಟ್ಟಡಕ್ಕೇ ನಾವೀಗ ಲಕ್ಷಾಂತರ ರೂಪಾಯಿ ಖರ್ಚುಮಾಡಬೇಕಾಗಿದೆ."

"ಏನು ಕೊಡಬೇಕೆಂಬುದನ್ನು ನೀವೇ ತಿಳಿಸಿ."

"ಆರು ಸಾವಿರ ರೂಪಾಯಿ ಕೊಟ್ಟರೆ ಆಗಬಹುದು."

ಕೇತ್ಕರ್ ಯೋಚನೆಮಾಡಲಾರಂಭಿಸಿದ. ಯೋಗಿನಿ ಅಮ್ಮನವರ ಕೀರ್ತಿಯೇ ಸಾವಿರಾರು ರಿಕಾರ್ಡುಗಳನ್ನು ಖರ್ಚುಮಾಡಿಸುವುದೆಂದು ಅವನಿಗೆ ಗೊತ್ತಿತ್ತು. ಆದರೆ ತನ್ನ ನಿರೀಕ್ಷಣೆಗೆ ಇಮ್ಮಡಿಯಾದ ಗೌರವ ಧನ ಸಲ್ಲಿಸಬೇಕಲ್ಲಾ ಎಂಬ ಸಂಕಟ.

"ಹೋಗಲಿ ನಾಲ್ಕುಸಾವಿರದೈನೂರು ಮಾಡಿಕೊಳ್ಳಿ."

"ಸಾಧ್ಯವಿಲ್ಲ."

ಎಂದು ಅಲ್ಲಿಂದ ಎದ್ದೇಬಿಟ್ಟ. ಎಲ್ಲಿ ವ್ಯವಹಾರ ಮುರಿದೇ ಹೋಗುತ್ತದೋ ಎಂಬ ಭಯದಿಂದ ಕೇತ್ಕರ್

"ಆಗಲಿ ಸರ್. ಆರು ಸಾವಿರಕ್ಕೇ ಒಪ್ಪಿದ್ದೇನೆ. ಕರಾರಿನ ಅಚ್ಚಾದ ಪ್ರತಿ ತಂದಿದ್ದೇನೆ. ಸಹಿಮಾಡಿದರೆ ಮುಂಗಡ ಹಣಕೊಡುತ್ತೇನೆ."

ಎರಡು ಸಾವಿರ ರೂಪಾಯಿ ಮುಂಗಡವಾಗಿ ಕೊಟ್ಟು ಕೇತ್ಕರ್ ಕರಾರಿಗೆ ವಾಸು ಸಹಿಯನ್ನು ಯೋಗಿನಿ ಅಮ್ಮನವರ ಪರವಾಗಿ ಹಾಕಿಸಿಕೊಂಡ.

"ರಿಕಾರ್ಡಿಂಗ್ ಯಾವಾಗ ಇಟ್ಟುಕೊಳ್ಳುವಿರಿ?",

"ಮುಂದಿನ ವಾರ ಅವರಿಗೆ ಅನುಕೂಲವಾಗಬಹುದೋ"

"ಆಗುತ್ತದೆ. ಮುಂದಿನ ವಾರವೇ ಇಟ್ಟುಕೊಳ್ಳಿ."

"ರಿಕಾರ್ಡಿಂಗ್ ಆದಕೂಡಲೆ ಉಳಿದ ಹಣ ಪಾವತಿಮಾಡುತ್ತೇನೆ."

"ಆಗಬಹುದು"

ಎಂದು ವಾಸು ಒಪ್ಪಿಕೊಂಡ. ಕೇತ್ಕರ್ ಹೋಗಲು ರಾಮುಸ್ವಾಮಿ ವಾಸುವಿಗೆ

"ಇನ್ನೇನಯ್ಯಾ ಗುನಗು. ಅನಾಯಾಸವಾಗಿ ಆರುಸಾವಿರ ಗಿಟ್ಟಿದೆ."

"ನಮಗೆ ಬೇಕಾಗಿರುವುದು ಸಮುದ್ರ ರಾಮು – ಸಿಕ್ಕಿರುವುದು ಒಂದು ಸಣ್ಣ ಕುಂಟೆ."

"ಹನಿಕೂಡಿದರೆ ಹಳ್ಳ, ತೆನೆಗೂಡಿದರೆ ಭತ್ತ."

"ಹೀಗೆ ಹನಿಹನಿ ಕೂಡಿಸಿಕೊಂಡು ಹೋದರೆ ನಮ್ಮ ಕೆಲಸವಾಗುವುದು ಯಾವ ಜನ್ಮಾಂತರಕ್ಕೆ."

"ಪ್ಲ್ಯಾನ್ ಸಿದ್ಧಮಾಡಿಸುವುದಕ್ಕೆ ಅಷ್ಟು ಉತ್ಸಾಹ ತೋರಿದ ಬೊಂಬಾಯಿವಾಲಾ ಕೂಡ ತಟಸ್ಥರಾಗಿರುವರಲ್ಲಾ."

"ನನಗೂ ಅದೇ ಆಶ್ಚರ್ಯ. ಪ್ಲ್ಯಾನಿನ ಪ್ರತಿಯೊಂದನ್ನು ತಮ್ಮಲ್ಲಿಯೇ ಇಟ್ಟುಕೊಂಡಿದ್ದಾರೆ. ಪ್ರವಿಣಾಳೆಯೂ ಷಿರೀನ್ ಮೂಲಕ ಪ್ರಸ್ತಾಪಮಾಡಿಸಿದ್ದಾಳೆ. ಈ ಶ್ರೀಮಂತರ ಮರ್ಜಿಕಾಯುವುದು ಬಹಳ ಕಷ್ಟ."

"ಶಂಕರನ ಉಪನಿಷತ್‌ಸಾರದ ಗೌರವಧನವೂ ಬಂದಿಲ್ಲ."

"ಅದಕ್ಕೆಷ್ಟು ಬರಬಹುದು ರಾಮು."

"ಎರಡು ಮೂರು ಸಾವಿರ ಬಂದರೆ ಹೆಚ್ಚು."

"ಗೀತಾ ಪ್ರವಚನಗಳೂ ಬರಲಿ ಎಂದು ಕಾಯುತ್ತಿರಬಹುದು. ಎರಡರ ಹಣವೂ ಒಟ್ಟಿಗೆ ಬರುತ್ತದೆಂದು ಕಾಣುತ್ತದೆ."

"ನಾನು ಆಶ್ರಮದ ಕಟ್ಟಡದ ವಿಷಯ ಸೂಕ್ಷ್ಮವಾಗಿ ಸ್ಕಿನ್ನರ್ ಹತ್ತಿರ ಪ್ರಸ್ತಾಪಿಸಲೇ."

"ಪ್ರಸ್ತಾಪಿಸಿ ನೋಡು."

ಎಂದು ಹೇಳಿದ.

ಮಾರನೆಯ ದಿವಸ ರಾಮುಸ್ವಾಮಿ ಸ್ಕಿನ್ನರ್ ಅವರನ್ನು ಕಂಡು ವಿಷಯ ಪ್ರಸ್ತಾಪಿಸಿದಾಗ ಅವನಿಗೆ ದೊರೆತ ಉತ್ತರ ವಾಸುವಿಗೆ ತಿಳಿಸಲು ಧಾವಿಸಿಬಂದ.

"ಸ್ಕಿನ್ನರ್ ಏನು ಹೇಳಿದರು ಗೊತ್ತೇ ವಾಸು ?"

"ಏನು ಹೇಳಿದರಪ್ಪ."

"ಆ ವಿಷಯ ನೀವು ಯಾವ ಯೋಚನೆಯನ್ನೂ ಮಾಡಬೇಡಿ–ನಾನೂ ಬೊಂಬಾಯಿವಾಲಾ ಎಲ್ಲಾ ವ್ಯವಸ್ಥೆಮಾಡುತ್ತೇವೆ ಎಂದು ಹೇಳಿದರು."

"ಬೊಂಬಾಯಿವಾಲಾ ಏನೋ ಎಂದಿದ್ದೆ. ಆತ ತುಂಬ ದೊಡ್ಡ ಮನುಷ್ಯನಯ್ಯ"

ಎಂದು ವಾಸು ಹಿರಿಹಿರಿ ಹಿಗ್ಗಿದ.

ಕೆಲವು ದಿವಸಗಳ ತರುವಾಯ ಒಂದು ಬೆಳಿಗ್ಗೆ ಬೊಂಬಾಯಿವಾಲಾ ಸ್ವಾಮಿ ಶಂಕರಾನಂದರ 'ಗೀತಾ ಉಪನ್ಯಾಸಗಳು' ಗ್ರಂಥದ ಪ್ರತಿಗಳನ್ನು ತೆಗೆಸಿಕೊಂಡು ಬಂದರು. ಗೀತೆಯ ಪ್ರತಿಗಳನ್ನು ವಾಸು, ರಾಮಸ್ವಾಮಿ ಕೈಗಿತ್ತು

"ಈ ಎರಡು ಗ್ರಂಥಗಳ ಗೌರವಧನವೂ ಪಾವತಿಯಾಗಿಲ್ಲ. ಅದನ್ನು ನಾನು ಬೇರೆ ಕೆಲಸಕ್ಕೆ ಮುಡಿಪಾಗಿ ಇಟ್ಟಿದ್ದೇನೆ"

ಎಂದು ಹೇಳಿದರು.

ವಾಸು ಯೋಚನೆಮಾಡುತ್ತಾ

"ಬೊಂಬಾಯಿವಾಲಾಜಿ, ನಾವಿನ್ನು ರಾಮಗಿರಿಗೆ ಹಿಂದಿರುಗಬೇಕು. ಇಲ್ಲಿ ಜನಸಂದಣಿ ಹೆಚ್ಚಾಯಿತು – ಏಕಾಂತಸ್ಥಳಕ್ಕೆ ಹೋಗಬೇಕೆಂದು ಯೋಗಿನಿ ಅಮ್ಮನವರು ಒಂದೆರಡು ಸಾರಿ ವ್ಯಕ್ತಪಡಿಸಿದರು. ಷಿರೀನ್ ಅವರ ಹತ್ತಿರ ತಾವೇ ಹೇಳಿದರಂತೆ."

"ಹೌದು. ನಿಮ್ಮ ಆಶ್ರಮ ಸಿದ್ಧವಾಗದೆ ಅಲ್ಲಿ ಹೋಗಿ ಹೇಗೆ ನಿಲ್ಲುವಿರಿ ?"

"ಕೈಯಲ್ಲಿ ಸ್ವಲ್ಪ ಹಣವಿದೆ. ಈ ಹಣಕ್ಕೆ ಸಾಧ್ಯವಾಗುವಷ್ಟು ಕಟ್ಟಡವನ್ನು ಸದ್ಯಕ್ಕೆ ಕಟ್ಟಿಕೊಂಡು ಅಲ್ಲಿಗೆ ಹೋಗುವುದು. ಮುಂದೆ ಹಣ ಒದಗಿದಂತೆ ವಿಸ್ತರಿಸಿಕೊಂಡು ಹೋಗುವುದು."

"ನನ್ನದೊಂದು ಸಲಹೆಯಿದೆ. ಕೇಳುವಿರಾ ?"

"ಹೇಳಿ."

"ನೀವು ಕಾರ್ಪಣ್ಯಪಟ್ಟುಕೊಳ್ಳಬೇಡಿ. ಯಾವಾಗ ಬೇಕೋ ಆಗ ನೀವು ಹೋಗಿ ಆಶ್ರಮದ ಕಟ್ಟಡದ ವ್ಯವಸ್ಥೆಮಾಡಿಬನ್ನಿ. ಆರಂಭಕ್ಕೆ ಎಷ್ಟು ಹಣಬೇಕು ಹೇಳಿ ಒದಗಿಸುತ್ತೇನೆ. ಮುಂದೆ ಕಟ್ಟಡದ ಕೆಲಸ ಮುಂದುವರಿದಂತೆ ಹಣ ಒದಗಿಸುವ ಭಾರ ನನಗಿರಲಿ."

"ಒಂದಲ್ಲ ಎರಡಲ್ಲ – ನಾಲ್ಕು ಲಕ್ಷ ರೂಪಾಯಿಗಳನ್ನು ನಿಮ್ಮಿಂದ ನಾನು ಹೇಗೆ ಸುಲಿಯುವುದು ಬೊಂಬಾಯಿವಾಲಾಜೀ."

"ಎಲ್ಲಾ ನಾನೊಬ್ಬನೇ ಕೊಡುತ್ತಿದ್ದೇನೆಂದು ಭಾವಿಸಬೇಡಿ. ಈಗ ಮೂರು ದಿವಸಗಳ ಮುಂಚೆ ನನ್ನ ಮನೆಯಲ್ಲಿ ನಾವೇ ಕೆಲವರು ಸಭೆ ಸೇರಿ

ಈ ವಿಷಯ ಚರ್ಚೆಮಾಡಿದೆವು – ಯೋಗಿನಿ ಅಮ್ಮನವರು, ಸ್ವಾಮಿಜಿ, ನೀವು ಇರುವ ಪ್ರಧಾನ ಕಟ್ಟಡ, ಕಛೇರಿಯ ಖರ್ಚು ನಾನು ವಹಿಸಿಕೊಂಡೆ; ಅಡಿಗೆಯ ಮನೆ, ಸ್ನಾನ ಗೃಹದ ಕಟ್ಟಡದ ಖರ್ಚು ರತನ್‌ಲಾಲ್ ವಹಿಸಿಕೊಂಡರು; ಸಾಮಾನ್ಯ ಅತಿಥಿಗೃಹದ ಖರ್ಚನ್ನು ಅಯೋಧ್ಯಾ ಪ್ರಸಾದರು ವಹಿಸಿಕೊಂಡರು; ವಿಶೇಷ ಅತಿಥಿಗೃಹದ ಖರ್ಚನ್ನು ಹರಿಭಾಯ್ ಒಪ್ಪಿಕೊಂಡರು."

"ಮುಖ್ಯವಾಗಿರುವುದು ಸಭಾಗೃಹ."

"ಮೊದಲು ಆಶ್ರಮದ ಮುಖ್ಯ ಕಟ್ಟಡಗಳಾಗಲಿ. ಅವು ಮುಗಿಯುವ ವೇಳೆಗೆ ಸಭಾಗೃಹದ ವಿಷಯ ಏನಾದರೂ ವ್ಯವಸ್ಥೆ ಮಾಡುತ್ತೇವೆ. ನನ್ನ ಪುಸ್ತಕಗಳು, ಮತ್ತು ಮೇಜರ್ ಸ್ಕಿನ್ನರ್ ಅವರ ಪುಸ್ತಕಗಳಿಂದ ಸದ್ಯಕ್ಕೆ ಆಶ್ರಮದ ಪುಸ್ತಕಭಂಡಾರ ಆರಂಭಮಾಡಿ. ಮುಂದಕ್ಕೆ ಬೇಕಾಗುವ ಗ್ರಂಥಗಳನ್ನು ಕೊಂಡುಕೊಳ್ಳೋಣ."

"ಎಲ್ಲಾ ವ್ಯವಸ್ಥೆ ಅಚ್ಚುಗಟ್ಟಾಯಿತು. ಆದರೆ ಆಶ್ರಮದ ದೇವಾಲಯವನ್ನೇ ಮರೆತಿರಲ್ಲ ಬೊಂಬಾಯಿವಾಲಾಜೀ"

ಎಂದು ರಾಮುಸ್ವಾಮಿ ಕೇಳಿದ.

"ಮರೆತಿಲ್ಲ. ಅದರ ವಿಷಯ ಸಾವಕಾಶವಾಗಿ ಯೋಚನೆಮಾಡೋಣ."

"ಆಗಬಹುದು"

ಎಂದು ವಾಸು ತನ್ನ ಒಪ್ಪಿಗೆ ಸೂಚಿಸಿದ.

"ಆಶ್ರಮರಚನೆಗೆ ಅವಶ್ಯಕವಾದ ಎಲ್ಲಾ ವ್ಯವಸ್ಥೆ ಮಾಡಿಬರಲು ರಾಮುಸ್ವಾಮಿ, ನಾನೂ, ಯೋಗಿನಿ ಅಮ್ಮನವರೂ ಕೆಲವು ದಿನ ರಾಮುಗಿರಿಗೆ ಹೋಗಿಬರಬೇಕಾಗುತ್ತದೆ."

"ನಿಮಗೆ ಯಾವಾಗ ಅನುಕೂಲವೋ ಆಗ ಹೋಗಿ ಬನ್ನಿ. ಹೊರಡುವ ದಿನ ತಿಳಿಸಿದರೆ ನಾನು ಹಣ ಹೊಂದಿಸಿರುತ್ತೇನೆ. ಆದರೆ ಇಲ್ಲಿ ಸ್ವಾಮಿಜಿ ಒಬ್ಬರೇ ಆಗುತ್ತಾರಲ್ಲಾ."

"ನೀವೆಲ್ಲಾ ಇಲ್ಲವೇ ?"

ಎಂದು ವಾಸು ಕೇಳಿದ.

ಬೊಂಬಾಯಿವಾಲಾ ಹೊರಡುವುದನ್ನೇ ವಾಸು ಕಾಯುತ್ತಿದ್ದ. ಈ ಸಂತೋಷದ ಸುದ್ದಿ ಪ್ರಮೀಳೆಗೆ ತಿಳಿಸುವವರೆಗೆ ಅವನಿಗೆ ಮನಸ್ಸಮಾಧಾನವಿಲ್ಲ.

ಪ್ರಮೀಳೆ ತನ್ನ ಪಾಠದಲ್ಲಿ ನಿಮಗ್ನಳಾಗಿದ್ದುದನ್ನು ಕಂಡು ವಾಸುವಿಗೆ ಸ್ವಲ್ಪ ಬೇಸರವೇ ಆಯಿತು.

"ಸದ್ಯ ಸಲ್ಪ ಹೊತ್ತಾದರೂ ನಿನ್ನ ಪಾಠ ಸಾಕುಮಾಡಬಾರದೇ ?"

ಪ್ರಮೀಳೆ ಪುಸ್ತಕ ಮುಚ್ಚಿಟ್ಟು ನಸುನಗುತ್ತಾ ವಾಸು ಕಡೆ ತಿರುಗಿ

"ರಾಜಾಜ್ಞೆ ಪರಿಪಾಲಿಸಿದ್ದೇನೆ–ಸೇವಕಳಿಂದ ಏನು ಆಗಬೇಕು ಹೇಳಿ."

"ನೀನೇಕೆ ಸೇವಕಳಾದೀಯೇ. ನಾನು ಸೇವಕ–ನೀನು ಮಹಾರಾಣಿ."

"ನನ್ನನ್ನು ಮಹಾರಾಣಿಯನ್ನಾಗಿ ಮಾಡಿದ ನೀವು ಅದಕ್ಕಾಗಿ ವಿಷಾದ ಪಡುತ್ತೀರಾ ?"

"ಅದಕ್ಕಲ್ಲ ಪ್ರಮೀ. ನೀನು ಮಹಾರಾಣಿ ಮಾತ್ರವೇ ಅಲ್ಲ–ಚಕ್ರವರ್ತಿನಿ ಆಗಬೇಕೆಂದು ನನ್ನ ಆಸೆ. ಆದರೆ ನನ್ನನ್ನು ನೀನು ಉಪೇಕ್ಷೆ ಮಾಡುವುದು ಸಹ್ಯವಾಗುವುದಿಲ್ಲ."

"ಉಪೇಕ್ಷೆಮಾಡುತ್ತಿಲ್ಲ ದೊರೆ. ಹಾಗೆಂದಿಗೂ ಭಾವಿಸಬೇಡಿ. ನನ್ನ ಮನಸ್ಸಿನಲ್ಲಿ ದೊಡ್ಡಯುದ್ಧ ಆರಂಭವಾಗಿದೆ. ಅದು ಆಗಾಗ ನನ್ನನ್ನು ವಿಷಣ್ಣಳನ್ನಾಗಿ ಮಾಡುತ್ತದೆ."

"ಯಾವ ರೀತಿಯ ಯುದ್ಧ. ಅರ್ಜುನನ ಮನಸ್ಸಿನಲ್ಲಿ ಆರಂಭವಾಯಿತಲ್ಲಾ ಅಂಥ ಯುದ್ಧವೋ ?"

ಪ್ರಮೀಳಾ ಆಶ್ಚರ್ಯಚಕಿತಳಾಗಿ ವಾಸುವನ್ನು ಅರೆಕ್ಷಣ ನೋಡಿ

"ಎಷ್ಟು ಚೆನ್ನಾಗಿ ಹೇಳಿದಿರಿ. ನನ್ನ ವಿಷಯ ಹಾಗಿರಲಿ–ನೀವು ಏನೋ ಹೇಳಲು ಉತ್ಸಾಹಗೊಂಡಿರುವಂತಿದೆ."

"ನನ್ನ ಉತ್ಸಾಹದಲ್ಲಿ ನೀನು ಭಾಗಿಯಾದರೆ ತಾನೆ ನನಗೆ ತೃಪ್ತಿ.

"ಖಂಡಿತವಾಗಿಯೂ ಭಾಗಿಯಾಗಿದ್ದೇನೆ. ಹೇಳಿ."

ವಾಸು, ಬೊಂಬಾಯಿವಾಲಾ ಹೇಳಿದ ಆಶ್ರಮ ನಿಯೋಜನೆಯನ್ನು ಪ್ರಮೀಳೆಗೆ ವಿವರಿಸಿದ. ಆನಂದದಿಂದ ಅವಳ ಮುಖಕಮಲ ಅರಳಿತು.

"ನಿಜವಾಗಿ!"

"ಸುಳ್ಳು ಹೇಳಿ ನನಗಾಗಬೇಕಾದುದೇನು. ನಾಳೆ ನಾಡಿದ್ದರಲ್ಲಿ ನಾವು ಪ್ರಯಾಣ ಮಾಡಬೇಕಾಗುತ್ತದೆ."

"ಹಾಡುಗಳ ರಿಕಾರ್ಡಿಂಗ್ ಇದೆಯಲ್ಲಾ."

"ಅದನ್ನು ಮುಗಿಸಿಕೊಂಡೇ ಹೊರಡುವುದು. ಇಲ್ಲಿಂದ ಕಾರಿನಲ್ಲಿಯೇ ಹೋಗೋಣ. ಬೆಂಗಳೂರಿನಲ್ಲಿ ಓಡಿಯಾಡುವುದಕ್ಕೆ ಕಾರುಬೇಕಾಗುತ್ತದೆ."

"ಈಗ ನಾವು ಬೆಂಗಳೂರಿಗೆ ಹೋದರೆ ಹಿಂತಿರುಗುವ ಸಂಭವವಿದೆಯೆ ?"

"ಖಂಡಿತವಾಗಿ. ಅಲ್ಲಿ ಕಟ್ಟಡದ ವ್ಯವಸ್ಥೆಮಾಡಿ, ಆಶ್ರಮ ಸ್ಥಾಪನೆಗೆ ಬೇಕಾದ ಎಲ್ಲಾ ಏರ್ಪಾಟು ಮಾಡಿ ನಾವು ಹಿಂದಿರುಗೋಣ. ರಾಮಸ್ವಾಮಿ ಅಲ್ಲಿಯೇ ಇದ್ದುಕೊಂಡು ಮುಂದಿನ ಕೆಲಸಕಾರ್ಯ ನೋಡಿಕೊಳ್ಳುತಾನೆ."

"ವೇಣಕ್ಕನವರಿಗೆ ಒಂದು ಕಾಗದ ಬರೆಯಬೇಕಾಗಿತ್ತು."

"ಇವತ್ತೇ ಬರೆದು ಹಾಕುತ್ತೇನೆ. ನಾವು ಹೊರಡುವ ದಿವಸ ಒಂದು ವೈರ್‌ಕೊಟ್ಟರಾಯಿತು. ಈಗ ನಿನ್ನ ಮನಸ್ಸಿಗೆ ಸಂತೋಷವಾಯಿತೇ ?"

"ಆಗದಿರುತ್ತದೆಯೇ. ನಾವು ಉದ್ದೇಶಪಟ್ಟ ಕೆಲಸ ಕೈಗೂಡುತ್ತದೆ. ನಮ್ಮ ಆಶ್ರಮ ಇನ್ನು ಕೆಲವು ತಿಂಗಳಲ್ಲಿಯೇ ಆರಂಭವಾಗುತ್ತದೆ. 'ಮೋಕ್ಷ ಧಾಮ'ವನ್ನು ನಿಜವಾಗಿಯೂ 'ಮೋಕ್ಷಧಾಮ' ಮಾಡಬೇಕು. ದೀನರು, ದಲಿತರು ದುಃಖಿಗಳು ನಮ್ಮ ಆಶ್ರಮಕ್ಕೆ ಬಂದು ಅಲ್ಲಿ ಶಾಂತಿ ಪಡೆಯಬೇಕು. ವೈದ್ಯಾಲಯವನ್ನು ಸರಿಯಾಗಿ ನಡೆಸಿಕೊಂಡು ಹೋಗಬಲ್ಲ ಒಬ್ಬರನ್ನು ಈಗಿನಿಂದಲೇ ಹುಡುಕಿ. ದೇಹ, ಮನಸ್ಸು ಎರಡಕ್ಕೂ ಮೋಕ್ಷಧಾಮದಲ್ಲಿ ಯೋಗ್ಯ ಚಿಕಿತ್ಸೆ ದೊರೆಯಬೇಕು."

"ವೈದ್ಯಾಲಯದ ವಿಷಯ ನಾನೂ ಯೋಚಿಸುತ್ತಿದ್ದೇನೆ, ಎಮಿಲಿ ರಾಬಿನ್ಸ್‌ನ್ ಅನೇಕ ವರ್ಷ ಜಪಾನಿನಲ್ಲಿ ವೈದ್ಯಕೀಯ ಸೇವೆಮಾಡಿದ್ದಾರಂತೆ. ಅವರನ್ನೇಕೆ ಕರೆಯಬಾರದು ?"

"ಅವರು ಒಪ್ಪಿಕೊಂಡು ಬಂದರೆ ಬಹಳ ಚೆನ್ನಾಗಿರುತ್ತದೆ. ಆ ಜನಗಳ ಕಾರ್ಯದಕ್ಷತೆ, ಸಿಸ್ತು ನಾವೂ ಕಲಿಯಬಹುದು."

"ನೀನು ಎಮಿಲಿಯವರ ಜತೆ ಮಾತನಾಡಿ ಅವರ ಅಭಿಪ್ರಾಯ ತಿಳಿದುಕೋ. ಆಮೇಲೆ ನಾನು ಸ್ಕಿನ್ನರ್ ಜತೆ ಮಾತನಾಡುತ್ತೇನೆ."

"ಆಗಬಹುದು. ಸಾಧಕರ ಸಂಘ ರಾಮಗಿರಿಗೇ ಬರಬೇಕಾಗುತ್ತದೋ ಏನೋ?"

"ಬಹಳ ಸಂತೋಷ. ನಮ್ಮ 'ಮೋಕ್ಷಧಾಮ' ಅಂತರ-ರಾಷ್ಟ್ರೀಯ ಸಂಸ್ಥೆಯಾಗುತ್ತದೆ. ನೀನು ಹೇಳುವಂತೆ ಪ್ರಮಿಾ, ನಮ್ಮ ಪ್ರಯತ್ನಕ್ಕೆ ದೈವಸಹಾಯವಿದೆಯೆಂದು ಕಾಣುತ್ತದೆ. ಬೊಂಬಾಯಿವಾಲಾ, ಸ್ಕಿನ್ನರ್, ರಾಬಿನ್ಸ್‌ನ್, ಆಂದ್ರೆ ಇವರೆಲ್ಲರ ಪರಿಚಯವಾಗುವುದೆಂದು ಯಾರು ಕನಸು ಕಂಡಿದ್ದರು."

"ದೈವವೇ ನಮಗೆ ಈ ಸತ್ಸಂಗವನ್ನೊದಗಿಸಿದೆ. ಇದನ್ನು ಸರಿಯಾಗಿ ಉಪಯೋಗಿಸಿಕೊಳ್ಳದಿದ್ದರೆ ನಾವು ದೋಷಿಗಳಾಗುತ್ತೇವೆ."

"ಪ್ರಮಿಾ—ನನಗೆ ಎಲ್ಲಕ್ಕಿಂತಲೂ ಮಿಗಲಾದುದು ನಿನ್ನ ಮನಸ್ಸಂತೋಷ. ಇಡಿಯ ಜಗತ್ತಿನ ಸರ್ವಮಾನ್ಯಕ್ಕಿಂತಲೂ ನಿನ್ನ ಪ್ರೇಮಕ್ಕೆ ನಾನು ಹೆಚ್ಚು ಬೆಲೆಕೊಡುತ್ತೇನೆ. ನಿನಗೆ ಹೇಗೆ ಸೂಕ್ತ ತೋರುವುದೋ ಹಾಗೆ ಆಶ್ರಮವನ್ನು ನಡೆಸು. ನಾನು ಆಶ್ರಮದ ವಿನಮ್ರಸೇವಕನಂತೆ ದುಡಿಯಲು ಸಿದ್ಧನಾಗಿದ್ದೇನೆ. ಆಶ್ರಮ ಸ್ಥಾಪನೆ ಬೇಡವಾದರೆ ಹೇಳು. ಈಗಲೂ ನಾನು ತಟಸ್ಥನಾಗಲು ಸಿದ್ಧನಾಗಿದ್ದೇನೆ."

"ಛೆ! ಛೆ! ಎಲ್ಲಿಯಾದರೂ ಉಂಟೇ? ದೊಡ್ಡ ಕೆಲಸಕ್ಕೆ ಕೈಹಾಕಿ ಅದನ್ನು ಅರ್ಧಮರ್ಧ ಮಾಡಿ ಬಿಟ್ಟುಹೋಗುವುದು ಹೇಡಿತನವಾಗುತ್ತದೆ. ಆಶ್ರಮ ಸ್ಥಾಪನೆಯಾಗಲಿ—ಬೆಳೆಯಲಿ—ದೊಡ್ಡ ಸಂಸ್ಥೆಯಾಗಲಿ. ನೂರಾರು—ಸಹಸ್ರಾರು ಜನಗಳಿಗೆ ಆಶ್ರಯಕೊಡಲಿ—ಇದೇ ನನ್ನ ಹಾರೈಕೆ. ನನಗೆ ಅದರಲ್ಲಿ ಸ್ಥಾನಮಾನ ಬೇಕಿಲ್ಲ. ನಿಮ್ಮ ಹಾಗೆ ನಾನೂ ಆಶ್ರಮದ ಅಭ್ಯುದಯಕ್ಕೆ ದುಡಿಯಲು ಸಿದ್ಧಳಾಗಿದ್ದೇನೆ."

"ನಿನಗೆ ಸ್ಥಾನಮಾನ ಕೊಡಲೇ ಬೇಕು ಪ್ರಮಿಾ. ನಿನಗಾಗಿಯಲ್ಲದಿದ್ದರೂ ಲೋಕಕ್ಕಾಗಿ. ಜಗತ್ತಿನಲ್ಲಿ ಎಷ್ಟು ದುಃಖ, ಎಷ್ಟು ನೋವು, ಎಷ್ಟು ವಿರಸ ತುಂಬಿದೆ ನೋಡು. ತನ್ನ ಕ್ಲೇಶಮಯ ವಾತಾವರಣವನ್ನು ಮನುಷ್ಯ ಕ್ಷಣಕಾಲವಾದರೂ ಮರೆತು, ಮೇಲಕ್ಕೆ ಕತ್ತೆತ್ತಿ ನೋಡಬೇಕು.

ತನ್ನ ದುಃಖಕ್ಕೆ ಅನುಕಂಪ ತೋರಿಸುವ, ತನ್ನ ನೋವನ್ನು ನೀಗಿಸುವ, ತನ್ನ ವಿರಸವನ್ನು ಸಮರಸಮಾಡುವ ಒಂದು ಶಕ್ತಿಯಿದೆಯೆಂಬ ಅರಿವು ಆವನಿಗಾದರೆ ಅವನ ಬಾಳು ಸಹ್ಯವಾಗುತ್ತದೆ. ಅಗೋಚರವಾದ ಶಕ್ತಿಯ ಇರುವನ್ನು ಸಾಮಾನ್ಯ ಮನುಷ್ಯ ಗ್ರಹಿಸುವುದು ಕಷ್ಟಸಾಧ್ಯ. ಶಕ್ತಿ ವ್ಯಕ್ತಿಯಲ್ಲಿ ರೂಪುಗೊಂಡಾಗ ಮಾತ್ರ ಅವನು ಗ್ರಹಿಸಬಲ್ಲ. ಅಂಥ ವ್ಯಕ್ತಿಯ ಪ್ರಭಾವ ದಿಂದಲೇ ಒಂದು ಸಂಸ್ಥೆ ರೂಪುಗೊಳ್ಳುವುದು. ನಮ್ಮ ಆಶ್ರಮದಲ್ಲಿ ನೀನು ಅಂಥ ವ್ಯಕ್ತಿ, ನಿನ್ನ ನಾಲ್ಕು ಒಳ್ಳೆಯ ಮಾತು ಷಿರೀನರ ಮೇಲೆ ಎಂಥ ವಿದ್ಯುತ್ ಪ್ರಭಾವ ಮೂಡಿತು ನೋಡು. ಅವರಂತೆ ದುಃಖಿಗಳಾದ ಹಲವರು ನಿನ್ನಿಂದ ಉದ್ಧಾರವಾಗಬೇಕೆಂಬುದು ನನ್ನ ಬಯಕೆ."

"ಇತರರನ್ನು ಉದ್ಧಾರಮಾಡುವುದಕ್ಕೆ ನಾನು ಯಾರು ?"

"ಆ ಪ್ರಶ್ನೆ ನನ್ನನ್ನು ಕೇಳಬೇಡ – ಷಿರೀನರನ್ನು ಕೇಳು."

ಪ್ರಮಿಳೆ ವಾಸುವಿನ ಮಾತನ್ನು ಮನನಮಾಡಿಕೊಳ್ಳುತ್ತ ಕುಳಿತಳು. ಅವನ ದೃಷ್ಟಿಯಲ್ಲಿ ಮೂಡಿದ್ದ ಲೋಕಸೇವಾಕಾಂಕ್ಷೆ ಅವಳಿಗೆ ಸಂತಸ ವನ್ನುಂಟುಮಾಡಿತ್ತು. ಅವನ ನಿರ್ವಿಕಲ್ಪ ಪ್ರೇಮದಲ್ಲಿ ಅವಳಿಗೆ ಹೊಸ ನಂಬಿಕೆ ಹುಟ್ಟಿತು.

ವಾಸುವಿನ ಕಡೆ ಪ್ರೇಮ, ಕಾರುಣ್ಯತುಂಬಿದ ನೋಟ ಬೀರಿ

"ನಿಮ್ಮ ಮನಸ್ಸು ಅಪರಂಜಿ ಬಂಗಾರವೆಂಬುದನ್ನು ಬಲ್ಲೆ ದೊರೆ. ನಿಮ್ಮ ಪ್ರೇಮವನ್ನು ನಾನೆಂದಿಗೂ ಶಂಕಿಸಲಿಲ್ಲ"

ಎಂದಳು.

ವಾಸುವಿಗೆ ಅವರ್ಣನೀಯ ಆನಂದವಾಯಿತು. ತುಂಬು ತೃಪ್ತಿ ಅವನ ಮುಖದಲ್ಲಿ ಮೆರೆದಾಡಿತು.

೧೫

ಸ್ಕಿನ್ನರ್ ತಮಗೂ ಸ್ವಾಮಿ ಶಂಕರಾನಂದರಿಗೂ ಆದ ಸಂಭಾಷಣೆ ಗಳನ್ನು ಸಂಗ್ರಹಿಸಿ ಒಂದು ಗ್ರಂಥ ಸಿದ್ಧಗೊಳಿಸಿದರು. ಅದಕ್ಕೊಂದು ಮುನ್ನುಡಿ ಸೇರಿಸಿ ಪ್ರಕಟಿಸಲು ಉತ್ಸುಕರಾದರು.

ಹಸ್ತಪ್ರತಿಯನ್ನೋದುತ್ತಾ ಶಂಕರ ತಾನೇ ಬೆರಗಾದ. ವಾಸುವಿಗೆ ಕೆಲವು ಭಾಗ ಓದಿ ತೋರಿಸಿ

"ನೋಡು ಇವರ ಕೆಲಸ ಎಷ್ಟು ಅಚ್ಚುಗಟ್ಟು. ನನ್ನ ಅಭಿಪ್ರಾಯ ಗಳನ್ನು ಎಷ್ಟು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ಕೆಲವೆಡೆ ತಮ್ಮ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದರೂ ಎಷ್ಟು ಗಂಭೀರವಾಗಿ ವ್ಯಕ್ತ ಪಡಿಸಿದ್ದಾರೆ."

"ಇದನ್ನೂ ಬೊಂಬಾಯಿವಾಲಾ ಪ್ರಕಟಿಸುತ್ತಾರೆಯೇ?"

"ವಿಲಾಯಿತಿಯಲ್ಲಿ ಪ್ರಕಟಿಸಬೇಕೆಂದು ಸ್ಕಿನ್ನರ್ ಅವರ ಅಭಿಪ್ರಾಯ ವಿರುವ ಹಾಗೆ ಕಾಣುತ್ತದೆ."

"ಬಹಳ ಒಳ್ಳೆಯದು."

"ತಮ್ಮ ಪುಸ್ತಕದ ವಿಷಯ ನಿನ್ನಲ್ಲಿ ಏನೋ ಮಾತನಾಡಬೇಕೆಂದಿದ್ದರು ವಾಸು. ಅವರಿಗೆ ಫೋನ್‌ಮಾಡಿ ನೋಡು."

"ಫೋನ್‌ಮಾಡಿ ನಾನೇ ಅವರಲ್ಲಿಗೆ ಹೋಗಿಬರುತ್ತೇನೆ. ಅವರ ಸಹಕಾರಕ್ಕೆ ಕೃತಜ್ಞತೆ ಅರ್ಪಿಸಬೇಕಾದುದು ನನ್ನ ಕರ್ತವ್ಯ."

ಎಂದು ಫೋನ್‌ಮಾಡಿ ತಾನು ಬರುವುದನ್ನು ತಿಳಿಸಿ ವಾಸು ಸ್ಕಿನ್ನರ್ ಮನೆಗೆ ಹೋದ.

ಸ್ಕಿನ್ನರ್ ಒಬ್ಬರೇ ಕುಳಿತುಕೊಂಡು ತಮ್ಮ ಗ್ರಂಥದ ಹಸ್ತಪ್ರತಿಯನ್ನು ಪುನರಾವಲೋಕಿಸುತ್ತಿದ್ದರು.

"ನೀವು ಬಂದದ್ದು ಬಹಳ ಒಳ್ಳೆಯದಾಯಿತು. ನಾನೇ ಬಂದು ನಿಮ್ಮನ್ನು ಕಾಣಬೇಕೆಂದಿದ್ದೆ. ಸ್ವಾಮಿಜಿ ನನ್ನ ಗ್ರಂಥ ಓದಿದರೇ?"

"ಅದನ್ನೇ ಹಿಡಿದು ಕುಳಿತಿದ್ದರು. ಅವರ ಅಭಿಪ್ರಾಯಗಳನ್ನು ಬಹಳ ಚೆನ್ನಾಗಿ ನಿರೂಪಿಸಿರುವಿರೆಂದು ಹೇಳಿದರು."

"ನನ್ನ ಶ್ರಮ ಸಾರ್ಥಕವಾಯಿತು."

"ನಮಗಾಗಿ ಎಷ್ಟು ತೊಂದರೆ ತೆಗೆದುಕೊಳ್ಳುತ್ತಿರುವಿರಿ ಮೇಜರ್."

"ನನಗೆ ವಂದನೆ ಅರ್ಪಿಸುತ್ತಿರುವಿರಾ?"

"ಅರ್ಪಿಸಬಾರದೇನು?"

"ಖಂಡಿತವಾಗಿ ಕೂಡದು. ಇದೆಲ್ಲವನ್ನೂ ನಾನು ನನ್ನ ಸ್ವಾರ್ಥಕ್ಕಾಗಿ ಮಾಡುತ್ತಿದ್ದೇನೆ. ಇಂಗ್ಲಿಷ್ ಜನಾಂಗ ಹುಟ್ಟು ವ್ಯಾಪಾರಿಗಳೆಂದು ನಿಮಗೆ ತಿಳಿಯದೇ? ನಾವು ಏನು ಮಾಡಿದರೂ ನಮ್ಮ ಸ್ವಾರ್ಥಸಾಧಿಸುವುದಕ್ಕೇ ಮಾಡುವುದು."

"ನಿಸ್ವಾರ್ಥಿಗಳಾದ ಇಂಗ್ಲಿಷಿನವರು ನಮ್ಮ ದೇಶಕ್ಕೆ ಬಂದಿದ್ದಾರೆ. ಈ ದೇಶವನ್ನೇ ಸ್ವದೇಶವೆಂದು ಭಾವಿಸಿ ಉತ್ಕೃಷ್ಟ ಸೇವೆ ಮಾಡಿದ್ದಾರೆ. ಸಿ. ಎಫ್. ಆಂಡ್ರೂಸ್, ಡಬ್ಲ್ಯು. ಡಬ್ಲ್ಯು. ಪಿಯರ್‌ಸನ್, ಸೋದರಿ ನಿವೇದಿತಾ, ಇ. ಬಿ. ಹ್ಯಾವಲ್, ಸರ್‌ಜಾನ್ ವುಡ್‌ರಾಫ್, ಲಯನಲ್ ಫೀಲ್ಡೆನ್, ರೆಜಿನಾಲ್ಡ್ ರೇನಾಲ್ಡ್ಸ್ ಮೊದಲಾದವರನ್ನು ನಾವು ಹೇಗೆ ಮರೆಯಲು ಸಾಧ್ಯ? ಅವರ ಪಂಕ್ತಿಗೆ ಸೇರಿದವರು ನೀವು."

"ಅವರ ವಿಷಯ ನನಗೆ ಹೆಚ್ಚಾಗಿ ಗೊತ್ತಿಲ್ಲ ಮಿಸ್ಟರ್ ವಾಸುದೇವ ರಾವ್. ನನ್ನ ಮಟ್ಟಿಗೆ ಹೇಳಬೇಕಾದರೆ ನಾನು ಸ್ವಾರ್ಥಿ. ನನ್ನ ಆತ್ಮ ಕಲ್ಯಾಣ ಸಾಧನೆಯ ಚಿಂತೆ ಮಾಡುತ್ತಿರುವೆನು."

"ಇಂಥ ಸ್ವಾರ್ಥ ಹೆಚ್ಚಲಿ ಎಂದು ಹಾರೈಸುತ್ತೇನೆ. ಬೊಂಬಾಯಿ ವಾಲಾ ಎಲ್ಲಾ ಹೇಳಿದರು. ಆಶ್ರಮದ ವಿಷಯ ನೀವು ಮನಸ್ಸಿನ ಮೇಲೆ ತಂದುಕೊಂಡುದು ನನ್ನ ಭಾರ ಇಳುಹಿದಂತಾಗಿದೆ."

"ನಾನು ನಿಮ್ಮನ್ನು ನೋಡಬೇಕೆಂದಿದ್ದುದು ನನ್ನ ಗ್ರಂಥ ಪ್ರಕಟಿಸುವ ವಿಚಾರ ಕೇಳುವುದಕ್ಕೆ. ಅದನ್ನು ನಾನು ಪ್ರಕಟಿಸಬಹುದಷ್ಟೇ?"

"ಅವಶ್ಯಕವಾಗಿ. ಅದರಲ್ಲಿ ಅಭ್ಯಂತರವೇನಿದೆ?"

"ಇಂಗ್ಲೆಂಡಿನ ಪ್ರಕಾಶಕರು ಆಲನ್ ಅನ್‌ವಿನ್ ಪ್ರಕಟಿಸಲು ಒಪ್ಪಿಕೊಂಡಿದ್ದಾರೆ. ಗ್ರಂಥವನ್ನು ಶ್ರೀಮಾತೆಯವರಿಗೆ ಅರ್ಪಿಸಬೇಕೆಂದಿದ್ದೇನೆ.

"ಬಹಳ ಸಂತೋಷ. ಅವರಿಗೆ ಈ ವಿಷಯ ತಿಳಿಸುತ್ತೇನೆ."

"ಗ್ರಂಥದಲ್ಲಿ ಸ್ವಾಮಿಜಿಯವರ ಮತ್ತು ಶ್ರೀಮಾತೆಯವರ ಭಾವಚಿತ್ರ ಪ್ರಕಟಿಸಬೇಕೆಂದು ನನ್ನ ಇಚ್ಛೆ. ಭಾವಚಿತ್ರಗಳು ಅವಶ್ಯಕವೆಂದು ಪ್ರಕಾಶಕರೂ ತಿಳಿಸಿದ್ದಾರೆ."

"ಅವರ ಭಾವಚಿತ್ರಗಳನ್ನು ನಾವು ತೆಗೆಸಿಲ್ಲ."

"ನಾನು ಏರ್ಪಾಟುಮಾಡುತ್ತೇನೆ. 'ರೆಂಬ್ರ್ಯಾಂಟ್ ಸ್ಟೂಡಿಯೋ' ದವರು ಉತ್ತಮ ಕಲಾವಿದರು – ಈ ಗ್ರಂಥದಿಂದ ಬರುವ ಗೌರವಧನ ವನ್ನು ಆಶ್ರಮಕ್ಕೆ ನನ್ನ ಕಾಣಿಕೆಯಾಗಿ ಸ್ವೀಕರಿಸಬೇಕು."

"ನಿಮ್ಮನ್ನೆಷ್ಟು ಸುಲಿಯುವುದು ಮೇಜರ್."

"ನಾವು ನಿಮ್ಮನ್ನು ಸುಲಿದಿರುವುದರಲ್ಲಿ ಒಂದಂಶವೂ ಇಲ್ಲ. ರೆಂಬ್ರ್ಯಾಂಟ್ ಸ್ಟೂಡಿಯೋದವರ ಸಂಗಡ ನಾನು ಕಾಲಗೊತ್ತು ಮಾಡಿ (appointment) ತಿಳಿಸುತ್ತೇನೆ."

"ಹಾಗೇ ಆಗಲಿ."

"ನೀವು ಬೆಂಗಳೂರಿಗೆ ಪ್ರಯಾಣ ಮಾಡುವುದು ಯಾವಾಗ?"

"ಈ ವಾರ ಕಳೆದ ಕೂಡಲೆ. ಶ್ರೀಮಾತೆಯವರು ಕೆಲವು ಭಜನೆ ಹಾಡುಗಳನ್ನು ರಿಕಾರ್ಡಿಗೆ ಕೊಡುವವರಿದ್ದಾರೆ. ಅದು ಮುಗಿದ ಕೂಡಲೆ ಹೊರಡಬಹುದು."

"ಅವರಿಗೂ ಸ್ವಾಮಿಜಿಯವರಿಗೂ ಯಾವಾಗ ಅನುಕೂಲವಾಗುತ್ತದೆ ನೀವು ತಿಳಿಸಿದರೆ ರೆಂಬ್ರ್ಯಾಂಟ್ ಸ್ಟೂಡಿಯೋದವರ ಸಂಗಡ ಕಾಲಗೊತ್ತು ಮಾಡಲು ಅನುಕೂಲವಾಗುತ್ತದೆ. ಸ್ಟೂಡಿಯೋಕ್ಕೆ ಕರೆದುಕೊಂಡು ಬರಲು ನಾನು ಮಿಸ್. ರಾಬಿನ್ಸ್‌ಸನ್ ಅವರನ್ನು ಪ್ರಾರ್ಥಿಸುತ್ತೇನೆ."

"ಆಗಬಹುದು. ಆದರೆ ಫೋಟೊಗಳನ್ನು ಪ್ರಕಟಿಸುವುದು ಅಗತ್ಯವೇ?"

"ಪಾಶ್ಚಾತ್ಯರು ತುಂಬ ಕುತೂಹಲಿಗಳು ಮಿ. ವಾಸುದೇವರಾವ್. ಶ್ರೀಮಾತೆಯವರ ಮತ್ತು ಸ್ವಾಮಿಜಿಯವರ ಸ್ಥೂಲ ಪರಿಚಯದಿಂದ ಅವರ ಹಸಿವು ಹಿಂಗುವುದಿಲ್ಲ. ಅವರ ಜೀವನ, ಕೃತಿ, ಮಾತುಕತೆ ಪ್ರತಿ ಯೊಂದರ ವಿವರಬೇಕೆಂದು ಬಯಸುತ್ತಾರೆ. ಒಮ್ಮೊಮ್ಮೆ ಅವರ ಕುತೂಹಲ ಅಸಹ್ಯವಾಗುವುದೂ ಉಂಟು. ಭಾವಚಿತ್ರ ಪ್ರಕಟಿಸುವುದರಿಂದ ಬಾಧಕ ವೇನೂ ನನಗೆ ಕಂಡುಬರುವುದಿಲ್ಲ."

"ನಿಮ್ಮ ಮಾತಿಗೆ ಪ್ರತಿಯಿಲ್ಲ ಮೇಜರ್"

ಎಂದು ವಾಸು ಹೇಳಿದ.

ಶಂಕರನ ಸಂಬಂಧವಾದ ಪುಸ್ತಕದಲ್ಲಿ ತನ್ನ ಭಾವಚಿತ್ರ ಏಕೆಂದು ಪ್ರವಿಣಾಳಾ ಆಕ್ಷೇಪಣೆಯೆತ್ತಿದಳು.

“ಇದು ಆಶ್ರಮಕ್ಕೆ ಸಂಬಂಧಪಟ್ಟ ವಿಷಯ. ನೀನೇ ಆಶ್ರಮದ ಜೀವದುಸಿರು. ಸ್ಕಿನ್ನರ್ ಪುಸ್ತಕದಲ್ಲಿ ನಿನ್ನ ಭಾವಚಿತ್ರವಿರುವುದು ಸಮಂಜಸವಾಗಿದೆ. ಆಶ್ರಮದ ಪ್ರಚಾರದೃಷ್ಟಿಯಿಂದ ಇದು ಬಹಳ ಸಹಾಯಕವಾಗುತ್ತದೆ”

ಎಂದು ಸಮಾಧಾನ ಹೇಳಿದ. ಬುಧವಾರ, ಗುರುವಾರ ರಿಕಾರ್ಡಿಂಗೆ ಹೋಗುವುದೆಂದು ನಿಶ್ಚಯವಾಗಿತ್ತು. ಶುಕ್ರವಾರ ನಾಲ್ಕು ಗಂಟೆಗೇ ಸ್ಟುಡಿಯೋಕ್ಕೆ ಹೋಗಿ ಛಾಯಾ ಚಿತ್ರಗ್ರಹಣದ ಕೆಲಸ ಮುಗಿಸಿಕೊಂಡು ಭಜನೆಯ ವೇಳೆಗೆ ಆಶ್ರಮಕ್ಕೆ ಹಿಂದಿರುಗುವುದೆಂದು ನಿಶ್ಚಯವಾಯಿತು. ಸ್ಕಿನ್ನರಿಗೂ ಅದೇ ವಿಷಯ ಸಕಾಲದಲ್ಲಿ ತಿಳಿಸಿದ್ದೂ ಆಯಿತು.

ಬುಧವಾರವೆಲ್ಲಾ ‘ವೈವಾಯ್ಸ್ ಗ್ರಾಮಫೋನ್ ಕಂಪೆನಿ’ಯಲ್ಲಿ ಯೋಗಿನಿ ಅಮ್ಮನವರ ಭಜನೆ ರಿಹರ್ಸಲ್ ಆಯಿತು. ಮಾರನೆಯ ದಿವಸ ರಿಕಾರ್ಡಿಂಗ್ ಕೆಲಸ ಮುಗಿಯಿತು. ಕೇತ್ಕರ್ ಯೋಗಿನಿ ಅಮ್ಮನವರ ಕೈಗೆ ಅಡ್ವಾನ್ಸ್ ಕಳೆದು ಉಳಿದ ನಾಲ್ಕು ಸಾವಿರ ರೂಪಾಯಿಗೆ ಒಂದು ಚೆಕ್‌ಕೊಟ್ಟು

“ನಮ್ಮ ಪ್ರಸಾರ ಕೆಲಸಕ್ಕೆ (publicity) ನಿಮ್ಮ ಫೋಟೋ ಬೇಕಾಗಿತ್ತು”

ಎಂದು ಹೇಳಿದ. ವಾಸು ಅವನಿಗೆ

“ನಾಳೆ ಶ್ರೀಮಾತೆಯವರ ಫೋಟೋ ಬೇರೆ ಕೆಲಸಕ್ಕೆ ತೆಗೆಸುತ್ತೇವೆ. ಅದರಲ್ಲಿ ನಿಮಗೊಂದು ಪ್ರತಿ ಕೊಡುತ್ತೇವೆ. ಪ್ರಸಾರ ಕೆಲಸಕ್ಕೆ ನೀವು ಉಪಯೋಗಿಸಿಕೊಳ್ಳಬಹುದು”

ಎಂದು ಹೇಳಿದ.

ಮಿಸ್. ರಾಬಿನ್ಸನ್, ಸ್ಕಿನ್ನರ್ ಅವರ ಸಲಹೆಯಂತೆ ಶ್ರೀಮಾತೆ ಮತ್ತು ಸ್ವಾಮಿಜಿಯವರನ್ನು ಕರೆದುಕೊಂಡು ಹೋಗುವುದಕ್ಕೆ ಎರಡು ಗಂಟೆಗೇ ಬಂದರು. ಲೋಕಾಭಿರಾಮದ ಮಾತುಕತೆಯಾದ ಮೇಲೆ ಶ್ರೀಮಾತೆಯವರು ಮಿಸ್. ರಾಬಿನ್ಸನ್ನರಿಗೆ

"ಮೇಜರ್ ಅವರ ಹತ್ತಿರ ವಾಸುದೇವರಾಯರು ಒಂದು ವಿಷಯ ಪ್ರಸ್ತಾಪಿಸಿದರು. ಅವರು ನಿಮಗೇನಾದರೂ ಹೇಳಿದರೇ?"

"ಸೂಕ್ಷ್ಮವಾಗಿ ಹೇಳಿದರು. ವಿವರವಾಗಿ ಏನೂ ತಿಳಿಸಲಿಲ್ಲ."

"ರಾಮಗಿರಿಯಲ್ಲಿ ನಮ್ಮ 'ಋಷಿಧಾಮ' ಸ್ಥಾಪಿಸುವ ವಿಷಯ ನಡೆದಿದೆ. ಬೊಂಬಾಯಿವಾಲಾ ಅವರೂ ಮೇಜರ್ ಅವರೂ ಈ ಬಗ್ಗೆ ತುಂಬ ಕೆಲಸ ಮಾಡುತ್ತಿದ್ದಾರೆ."

"ಅದನ್ನು ನಾನು ಬಲ್ಲೆ."

"ರಾಮಗಿರಿಯ ಸುತ್ತಮುತ್ತ ಅನೇಕ ಹಳ್ಳಿಗಳಿವೆ. ಜನ ತುಂಬ ಒಳ್ಳೆಯವರು, ಸುಸಂಸ್ಕೃತರು ಆದರೆ ನಾಗರಿಕತೆಯನ್ನರಿಯರು. ಶುಚಿಯೆಂಬುದನ್ನೇ ಕಾಣರು. ವರ್ಷದಲ್ಲಿ ಹನ್ನೆರಡು ತಿಂಗಳೂ ಒಂದಲ್ಲ ಒಂದು ಕಾಹಿಲೆಯಿಂದ ನರಳುತ್ತಾರೆ. ಮಲೇರಿಯಾ ವರ್ಷೇ ವರ್ಷೇ ಅನೇಕ ಕುಟುಂಬಗಳ ಆಹುತಿ ತೆಗೆದುಕೊಳ್ಳುತ್ತಿದೆ. ಆಶ್ರಮದಲ್ಲಿ ಮುಖ್ಯವಾಗಿ ವೈದ್ಯಕೀಯ ಸಹಾಯವೊದಗಿಸಿ ಈ ಜನಗಳ ಸೇವೆ ಮಾಡಬೇಕೆಂಬುದು ನಮ್ಮ ಮುಖ್ಯೋದ್ದೇಶ."

"ಉದ್ದೇಶ ಘನವಾಗಿದೆ. ಭಾರತದಲ್ಲಿ ಈ ಬಗೆಯ ಸೇವೆ ಅಖಂಡವಾಗಿ ಅವ್ಯಾಹತವಾಗಿ ನಡೆಯಬೇಕು."

"ಒಂದು ಆಸ್ಪತ್ರೆ ಸ್ಥಾಪಿಸುವುದು ಸುಲಭ. ಅದಕ್ಕೆ ಬೇಕಾದ ಸಲಕರಣೆಗಳು, ಔಷಧ ಸಾಮಗ್ರಿ ಹೇಗೋ ಒದಗಿಸಬಹುದು. ಆದರೆ ದಕ್ಷತೆಯಿಂದ ನಿರ್ವಹಿಸುವುದಕ್ಕೆ ಒಬ್ಬರು ಬೇಕಲ್ಲ."

"ನಾನು ಆ ಜವಾಬ್ದಾರಿ ಹೊರಲು ಸಾಧ್ಯವೇ ಎಂದು ಮೇಜರ್ ಕೇಳಿದರು."

"ಅದಕ್ಕೆ ನೀವೇನು ಹೇಳಿದಿರಿ?"

ಮಿಸ್. ರಾಬಿನ್ಸನ್ ಮುಖ ಸ್ವಲ್ಪ ಗಂಭೀರವಾಯಿತು. ಯಾವದೋ ನೆನಪು ಬಂದು ಅವರನ್ನು ಮುತ್ತಿತು. ಕಣ್ಣುತುಂಬಿ ಬಂದ ಹನಿ ಕೆನ್ನೆಯ ಮೇಲೆ ಇಳಿಯದೆ ರೆಪ್ಪೆಗಳ ಮೇಲೆ ಕುಳಿತವು.

"ರೋಗಿ ಬಯಸಿದುದನ್ನೇ ವೈದ್ಯ ಹೇಳಿದರೆ ರೋಗಿಗೆ ಸಂತೋಷವಾಗುವುದಿಲ್ಲವೇ?"

"ಹಾಗಾದರೆ ಅಲ್ಲಿಗೆ ಬರಲು ನೀವು ಒಪ್ಪುವಿರಿ?"

"ಧಾರಾಳವಾಗಿ. ಈ ನಾಡಿನ ಸೇವೆ ಮಾಡಿ ನನ್ನ ಋಣ ಪರಿಹಾರ ಮಾಡಿಕೊಳ್ಳಬೇಕಾಗಿದೆ. ನನ್ನ ಕಥೆ ನಿಮ್ಮಲ್ಲಿ ಹೇಳಿಕೊಳ್ಳಬೇಕೆಂದು ಬಹಳ ದಿವಸಗಳಿಂದ ಮನಸ್ಸು ಧಾವಿಸುತ್ತಿದೆ."

"ನಿಮಗೆ ಹಿಂಸೆಯಾಗದಿದ್ದರೆ ಹೇಳಿ."

"ನಾಲ್ಕು ಗಂಟೆಗೆ ಸ್ಟುಡಿಯೋಕ್ಕೆ ಹೋಗಬೇಕಲ್ಲವೇ?"

"ಈಗಿನ್ನೂ ಎರಡೂವರೆ – ಕಾಲು ಗಂಟೆಯಲ್ಲಿ ಸ್ಟುಡಿಯೋ ಮುಟ್ಟಬಹುದು."

ಮಿಸ್. ರಾಬಿನ್ಸನ್ ಮನೆಯ ಸೂರಿನ ಕಡೆ ದೃಷ್ಟಿಯಿಟ್ಟು ಸಾವಕಾಶವಾಗಿ ಆರಂಭಿಸಿದರು

"ನಾನು ಹುಟ್ಟಿ ಬೆಳೆದುದು ನ್ಯೂಯಾರ್ಕ್‌ನಗರದಲ್ಲಿ. ಜಗತ್ತಿನ ಅತ್ಯಂತ ಶ್ರೀಮಂತ ನಗರಗಳಲ್ಲಿ ನ್ಯೂಯಾರ್ಕ್ ಒಂದು. ಸಂಪದ್ಭರಿತವಾದ ಅಮೇರಿಕೆಯಲ್ಲಿ ಎಲ್ಲರೂ ಶ್ರೀಮಂತರೂ ಎಲ್ಲರೂ ಸುಖಿಗಳು ಎಂದು ಜನರ ಭಾವನೆ. ಗಾರ್ಕಿ ಅಮೇರಿಕೆಯನ್ನು ಪೀತ ಪಿಶಾಚಿಯ ನಗರ (City of the yellow devil) ಎಂದು ಕರೆದಿದ್ದಾರೆ. ಅಮೇರಿಕಾದಲ್ಲಿ ಬೇಕಾದಷ್ಟು ಸಂಪತ್ತಿದೆ. ಜಗತ್ತನ್ನು ಕಬಳಿಸಿ, ಜಗತ್ತನ್ನು ದಾಸ್ಯದಲ್ಲಿ ಕೆಡಹಲು ಆ ಸಂಪತ್ತು ವಿನಿಯೋಗವಾಗುತ್ತಿದೆ. ಆದರೆ ಅದೇ ಅಮೇರಿಕೆಯಲ್ಲಿ ಲಕ್ಷಾಂತರ ಜನ ಹೊಟ್ಟೆಗೆ ಸಾಲದೆ, ಬಟ್ಟೆಗೆ ಸಾಲದೆ ಕೊರಗುತ್ತಿದ್ದಾರೆ. ಚಳಿಗಾಲದಲ್ಲಿ ಅಲ್ಲಿನ ಬಡಜನರ ಪಾಡು ಬೇಡ. ಭಾರತದಲ್ಲಿಯೂ ಬಡತನ ತುಂಬಿ ತುಳುಕುತ್ತಿದೆ. ಆದರೆ ಅಮೇರಿಕೆಯ ಬಡತನಕ್ಕೆ ಹೋಲಿಸಿದರೆ ಭಾರತೀಯರ ಬಡತನ ಲಕ್ಷಪಾಲು ಮೇಲು. ಇಲ್ಲಿ ಪ್ರಕೃತಿ ನಿಮ್ಮ ನೆರವಿಗೆ ಬಂದಿದ್ದಾಳೆ. ಮನೆಯಿಲ್ಲದಿದ್ದರೆ ಮರದ ಕೆಳಗೆ ಜನ ವಾಸಮಾಡಬಹುದು; ಅಮೇರಿಕೆಯಲ್ಲಿ ಒಂದು ದಿನ ಹಾಗೆ ಮಾಡಿದರೆ ಜನರ ರಕ್ತ ಹೆಪ್ಪುಗಟ್ಟುತ್ತದೆ. ಬಡವರ ಅಮೇರಿಕೆಯಲ್ಲಿ ನಾನು ಹುಟ್ಟಿದೆ. ನನ್ನ ತಂದೆ ಒಂದು ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ತಾಯಿ ಲಗ್ನವಾಗುವುದಕ್ಕೆ ಮುಂಚೆ ವಾಡವಿಲ್‌ಷೋಗಳಲ್ಲಿ ಅಭಿನಯಿಸುತ್ತಿದ್ದರು. ಹೇಗೋ ಅವರಿಬ್ಬರ ಪರಿಚಯವಾಗಿ, ವಿಶ್ವಾಸ ಬೆಳೆದು ವಿವಾಹ

ವಾಯಿತು. ನಮ್ಮ ಮನೆಗೆ ಹೆಚ್ಚಾಗಿ ಬರುತ್ತಿದ್ದವರು ನನ್ನ ತಂದೆಯ ಬಾಲ್ಯಸ್ನೇಹಿತರಾದ ಫಾದರ್ ಓಕೀಫ್. ನನ್ನ ವಿದ್ಯಾಭ್ಯಾಸವೆಲ್ಲಾ ಅವರಲ್ಲಿ ಮತ್ತು ನನ್ನ ತಾಯಿಯ ಬಳಿ ಆಯಿತು. ಶಾಲೆಗೆ ನನ್ನನ್ನು ಕಳಿಸುವಷ್ಟು ನನ್ನ ತಾಯಿತಂದೆ ಅನುಕೂಲಸ್ಥರಾಗಿರಲಿಲ್ಲ. ಬಡತನದ ಸಂಸಾರ ನಿರ್ವಹಿಸುವುದಕ್ಕೆ ನನ್ನ ತಂದೆಯ ಆದಾಯ ಸಾಕಾಗಿತ್ತು. ಮದುವೆಯಾದ ಮೇಲೆ ವಾಡವಿಲ್‌ಷೋ ನನ್ನ ತಾಯಿ ಬಿಟ್ಟುಬಿಟ್ಟದ್ದರಿಂದ ನಮ್ಮ ಜೀವನವೆಲ್ಲಾ ತಂದೆಯ ವರಮಾನದ ಮೇಲೇ ಸಾಗಬೇಕಾಗಿತ್ತು. ನನ್ನ ತಂದೆ ಚಿನ್ನದಂಥ ಮನುಷ್ಯ. ಆತನದು ಮಗುವಿನಂಥ ಹೃದಯ. ಆದರೆ ಒಂದು ಭಯಂಕರ ಚಟ ಆತನಿಗೆ ಗಂಟುಬಿದ್ದಿತ್ತು. ವಾರದ ಸಂಬಳ ಕೈಸೇರಿದ ಕೂಡಲೆ ಕಳ್ಳಂಗಡಿಗೆ ಹೋಗಿ ಕೈಬರಿದು ಮಾಡಿಕೊಂಡು ಮನೆಗೆ ಬರುತ್ತಿದ್ದರು. ಮೊದಲು ಪರಿಸ್ಥಿತಿ ಹೀಗಿರಲಿಲ್ಲವಂತೆ. ನಾನು ಹುಟ್ಟಿದ ಮೇಲೆ – ಅಂದರೆ ನನ್ನ ಮಾತಾಪಿತೃಗಳ ವಿವಾಹವಾದ ನಾಲ್ಕು ವರ್ಷದ ಮೇಲೆ ತಂದೆಯ ಚಟ ಉಲ್ಬಣಾವಸ್ಥೆಗೇರಿತು. ಸಂಬಳ ಬಟವಾಡೆಯ ದಿನ ನನ್ನ ತಾಯಿ ಫ್ಯಾಕ್ಟರಿಗೇ ಹೋಗಿ ತಂದೆಯ ಸಂಬಳ ಕಸುಗೊಳ್ಳುವುದ ಕ್ಕಾರಂಭಿಸಿದರು. ಅದರಿಂದ ಅವರಿಬ್ಬರಿಗೂ ಹಣಾಹಣಿ ಜಗಳವಾಗುತ್ತಿತ್ತು. ಸೋತು ನನ್ನ ತಾಯಿ ಅರ್ಧ ಸಂಬಳ ತಂದೆಯ ಕೈಯಲ್ಲಿ ಹಾಕುತ್ತಿದ್ದರು. ಉಳಿದರ್ಧದಲ್ಲಿ ಸಂಸಾರ ಸಾಗುತ್ತಿರಲಿಲ್ಲ. ಆಕೆ ನೆರೆಹೊರೆಯವರ ಬಟ್ಟೆ ತಂದು ಚಲುವೆ ಮಾಡಿ, ಅದರಿಂದ ಬರುತ್ತಿದ್ದ ಅಲ್ಪ ಆದಾಯದಲ್ಲಿ ಸಂಸಾರ ಸಾಗಿಸುತ್ತಿದ್ದಳು.

ಏಕೋ, ನಿಮ್ಮನ್ನು ನೋಡಿದಾಗಲೆಲ್ಲಾ ನನಗೆ ತಾಯಿಯ ನೆನಪಾಗುತ್ತದೆ. ಅತಿ ದುಡಿಮೆ, ಸಂಸಾರ ತಾಪತ್ರಯ ಆಕೆಯನ್ನು ಹಿಂಡಿ ಹಿಪ್ಪೆಮಾಡಿತು. ಆದರೂ ಆಕೆಯ ಕಣ್ಣಿನ ತೇಜಸ್ಸು ಅಳಿದಿರಲಿಲ್ಲ. ಆ ಹಸನ್ಮುಖ ಕಳೆಗುಂದಲಿಲ್ಲ. ತಾಯಿಯ ಕಷ್ಟ ನೋಡಿ ತಂದೆ ಮರುಗು ತ್ತಿದ್ದರು. ತಮ್ಮ ದೌರ್ಬಲ್ಯವನ್ನು ಶಪಿಸುತ್ತಿದ್ದರು. ತಾಯಿಯ ಕೈಹಿಡಿದು 'ಮೇರೀ, ನಾನು ಪಾಪಿ – ನೀನು ಪುಣ್ಯದೇವತೆ. ನನ್ನನ್ನು ಕ್ಷಮಿಸುವೆಯಾ' ಎನ್ನುತ್ತಿದ್ದರು; ತಾಯಿ ಅವರನ್ನಪ್ಪಿಕೊಂಡು ಕಣ್ಣೀರುತೊಡೆದು 'ಎಮಿಲಿ ಗೋಸ್ಕರವಾದರೂ ಕುಡಿಯುವುದನ್ನು ಬಿಟ್ಟುಬಿಡಿ. ನಮಗೆ ಇರುವುದೊಂದು

ಮಗು. ಅದನ್ನು ಸುಖವಾಗಿಡಬೇಕಾದುದು ನಮ್ಮ ಕರ್ತವ್ಯವಲ್ಲವೇ?' ಇನ್ನು ಅನಿಷ್ಟ ಮದ್ಯ ಮುಟ್ಟುವುದಿಲ್ಲವೆಂದು ತಂದೆ ಪ್ರಮಾಣ ಮಾಡು ತ್ತಿದ್ದರು – ಆದರೆ ವಿಷಗಳಿಗೆ ಬಂದ ಕೂಡಲೆ ಹುಚ್ಚರಂತೆ ಕಳ್ಳಂಗಡಿಗೆ ಓಡುತ್ತಿದ್ದರು. ಫಾದರ್ ಓಕೀಫ್ ಅವರ ಚಟ ಬಿಡಿಸುವುದಕ್ಕೆ ಸರ್ವ ಪ್ರಯತ್ನಮಾಡಿ ವಿಫಲರಾದರು. ಹೀಗೆ ವರ್ಷಸಾಗಿತು. ತಾಯಿಯ ತಲೆಗೂದಲೆಲ್ಲಾ ಬೆಳ್ಳಗಾಯಿತು – ಹಲ್ಲುಗಳು ಉದುರಿದವು – ಮುಖ ಸುಕ್ಕು ಸುಕ್ಕಾಯಿತು. ಅಕಾಲಿಕ ವೃದ್ಧಾಪ್ಯ ಮತ್ತು ಅಸಹನೀಯ ವ್ಯಾಧಿ ಅವರನ್ನು ದಿನದಿನಕ್ಕೆ ಸವೆಸುತ್ತ ಬಂದವು. ಕೊನೆಗೊಂದು ದಿನ ತಾಯಿ ಸ್ವಾಮಿಪಾದ ಸೇರಿಬಿಟ್ಟಳು. ನನಗಾಗ ಹದಿನಾರು ವಯಸ್ಸು. ನಾನು ಮಗುವೂ ಅಲ್ಲ, ಹೆಂಗಸೂ ಅಲ್ಲ. ತಾಯಿಯ ಪಾಳಿ ನನ್ನದಾಯಿತು. ತಂದೆಯ ಕೈಯಲ್ಲಿರುತ್ತಿದ್ದ ಪುಡಿಕಾಸಿನ ಜತೆಗೆ ನಾನೂ ಬಟ್ಟೆಯೊಗೆದು ಸಂಪಾದಿಸಿ ಸಂಸಾರ ಸಾಗಿಸುತ್ತಿದ್ದೆ. ಹೀಗೆ ನಾಲ್ಕು ವರ್ಷ ತಳ್ಳಿದ್ದಾಯಿತು. ಒಂದು ದಿನ ನನ್ನ ತಂದೆ ಕಳ್ಳಂಗಡಿಯಲ್ಲಿ ಕುಳಿತೇ ಪ್ರಾಣಬಿಟ್ಟರು. ನನ್ನ ಗತಿಯೇನು? ತಲೆಯ ಮೇಲೆ ನಾನು ಕೈಹೊತ್ತು ಕುಳಿತಾಗ ಫಾದರ್ ಓಕೀಫ್ ಬಂದು

'ಎಮಿಲಿ – ಮುಂದೇನು ಮಾಡುತ್ತೀ ಮಗೂ' ಎಂದು ಕೇಳಿದರು.

ನನಗೆ ದುಃಖವುಕ್ಕಿ ಬಂತು. ಅವರನ್ನೇ ದಿಟ್ಟಿಸಿ ನೋಡಿ ತಬ್ಬಲಿ ಗರುವಿನಂತೆ

'ಏನು ಮಾಡಲಿ ತಂದೆ. ನೀವು ಏನು ಹೇಳಿದರೂ ಮಾಡುತ್ತೇನೆ.'

'ನ್ಯೂಯಾರ್ಕ್ ಬಿಟ್ಟುಹೋಗಲು ಸಿದ್ಧಳಾಗಿರುವೆಯಾ?'

'ನೂಯಾರ್ಕ್‌ನಲ್ಲಿ ಯಾವ ಸೌಭಾಗ್ಯ ನನಗೆ ಕಾದಿದೆಯೆಂದು ನಾನು ದುಃಖಪಡಬೇಕು.'

'ಬಹಳ ದೂರ ಹೋಗಬೇಕಾಗುತ್ತದೆ. ಹೊಸದೇಶ, ಹೊಸ ಜನ, ಹೊಸ ಆಚಾರವಿಚಾರಗಳು. ಅಲ್ಲಿ ನಿನ್ನ ಭಾಷೆಯನ್ನು ಕೂಡ ಮಾತನಾಡು ವುದಿಲ್ಲ.'

'ನನಗೆ ಅನ್ನಕೊಟ್ಟು ಕಾಪಾಡುವ ದೇಶವೇ ನನ್ನ ದೇಶ. ಪ್ರೀತಿ

ಯಿಂದ ನನ್ನನ್ನು ಕಾಣುವ ಜನರೇ ನನ್ನ ಜನ – ಅವರ ಭಾಷೆಯೇ ನನ್ನ ಭಾಷೆ. ಯಾವ ದೇಶಕ್ಕೆ ಹೋಗಬೇಕು ಹೇಳಿ.'

'ಜಪಾನಿಗೆ.'

'ಅಲ್ಲಿ ಯಾರು ನನ್ನನ್ನು ರಕ್ಷಿಸುತ್ತಾರೆ.'

'ಇಲ್ಲಿಂದ ಒಂದು ಮಿಷನ್ ಮೆಡಿಕಲ್ ಯೂನಿಟ್ (Mission medical unit) ಡಾಕ್ಟರ್ ಮಿಸ್ ಹ್ಯಾರಿಯಟ್ ಜತೆ ಹೊರಡುತ್ತದೆ. ನೀನು ಜಪಾನಿಗೆ ಹೊರಡಲೊಪ್ಪುವೆಯಾದರೆ ಕಳಿಸಿಕೊಡುತ್ತೇನೆ.'

ನನಗೆ ಬೇರೆ ಮಾರ್ಗವೇ ಇರಲಿಲ್ಲ. ಡಾಕ್ಟರ್ ಮಿಸ್ ಹ್ಯಾರಿಯಟ್ ಜತೆಗೆ ಟೋಕಿಯೋ ನಗರಕ್ಕೆ ಹೋದೆ. ಅಲ್ಲಿ ಮಿಷನ್ ಆಸ್ಪತ್ರೆಯಲ್ಲಿ ಹನ್ನೊಂದು ವರ್ಷ ಕಳೆದು ಭಾರತಕ್ಕೆ ಬಂದೆ.

"ನಿಮಗೀಗ ಇಪ್ಪತ್ತೇಳೇ ವಯಸ್ಸು. ಮದುವೆ ಯೋಜನೆ ಮಾಡಲಿಲ್ಲವೇ ?"

ಎಂದು ಶ್ರೀಮಾತೆ ಕೇಳಿದರು. ಮಿಸ್. ರಾಬಿನ್ಸ್‌ನ್ ಮುಖ ಮತ್ತಷ್ಟು ಗಂಭೀರವಾಯಿತು. ತಾವು ಆ ಪ್ರಶ್ನೆ ಕೇಳಬಾರದಾಗಿತ್ತೇನೊ ಎಂದು ಶ್ರೀಮಾತೆಯವರಿಗೆ ವ್ಯಥೆಯಾಯಿತು.

"ನಿಮ್ಮಲ್ಲಿ ನಾನು ಯಾವದನ್ನೂ ಮುಚ್ಚುಮರೆಮಾಡುವುದಿಲ್ಲ. ಅದನ್ನೂ ಹೇಳಿಬಿಡುತ್ತೇನೆ."

"ನಿಮಗೆ ದುಃಖವಾಗುವ ಹಾಗಿದ್ದರೆ ಹೇಳಬೇಡಿ. ನಿಮ್ಮ ಒಳ ಜೀವನವನ್ನು ಅರಿಯಬೇಕೆಂಬ ಕೆಟ್ಟ ಕುತೂಹಲ ನನಗಿಲ್ಲ."

"ನಿಮ್ಮಲ್ಲಿ ಹೇಳಿಕೊಂಡರೆ ನನ್ನ ಮನಸ್ಸು ಹಗುರವಾಗುತ್ತದೆ."

"ಹಾಗಾದರೆ ಅವಶ್ಯಕವಾಗಿ ಹೇಳಿ. ಸಂತೋಷವಾಗಿ ಕೇಳುತ್ತೇನೆ."

"ಟೋಕಿಯೋ ನಗರದಲ್ಲಿ ಒಂದು ಅಂತರ ರಾಷ್ಟ್ರೀಯ ಸಾಂಸ್ಕೃತಿಕ ಸಂಸ್ಥೆಯಿತ್ತು. ನಾನು ಅದರ ಸದಸ್ಯೆಯಾಗಿದ್ದೆ. ಆ ಸಂಸ್ಥೆಯ ಕಾರ್ಯಕಲಾಪಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದೆ. ಅಲ್ಲಿ ನನಗೆ ಭಾರತೀಯರೊಬ್ಬರ ಪರಿಚಯವಾಯಿತು. ಆತ ಮಾತಾಳಿಯಲ್ಲ. ಮಿತಭಾಷಿ. ಆದರೆ ಬಾಯಿಬಿಟ್ಟರೆ ಮುತ್ತಿನಂತೆ ಮಾತುಗಳು ಬರುತ್ತಿದ್ದವು. ಆತನ ಜ್ಞಾನದ ಮಟ್ಟ ಬಹಳ ಉನ್ನತವಾದುದು. ಭಾರತದ ಸಮಸ್ತ ವಿಷಯಗಳ ಮೇಲೂ

ಆತ ಒಂದು ಪ್ರಮಾಣ ಗ್ರಂಥ – ಒಂದು ವಿಶ್ವಕೋಶ. ನಮ್ಮಿಬ್ಬರ ಪರಿಚಯ ಸ್ನೇಹವಾಗಿ ಮಾರ್ಪಟ್ಟಿತು.''

"ಅವರ ವಯಸ್ಸೆಷ್ಟು ?''

"ನನಗೆ ಪರಿಚಯವಾದಾಗ ಸುಮಾರು ನಲವತ್ತಿರಬಹುದು. ಆತನ ನಡತೆಯಲ್ಲಿ ಏನೋ ರಹಸ್ಯವಿದೆಯೆಂದು ನನಗೆ ಭಾಸವಾಗಿತ್ತು. ನನ್ನನ್ನು ಒಳ್ಳೆಯ ಸಿನೀಮಾ, ನಾಟಕಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಆಗಾಗ್ಗೆ ಊಟಕ್ಕೆ ಹೊಟೇಲಿಗೆ ಕರೆದುಕೊಂಡು ಹೋಗುತ್ತಿದ್ದರು........ಆದರೆ ಒಂದು ದಿನವೂ ತಮ್ಮ ಮನೆಗೆ ಕರೆದುಕೊಂಡು ಹೋಗಲಿಲ್ಲ. ನಮ್ಮ ಸ್ನೇಹ ಬೆಳೆದಂತೆ ನಾನು ಅವರಲ್ಲಿ ಅನುರಕ್ತಳಾದೆ. ಎಂದಿಗೆ ನನ್ನನ್ನು ಸ್ವೀಕರಿಸುವರೋ ಎಂದು ಕಾತರಿಸುತ್ತಿದ್ದೆ. ಒಂದು ದಿನವೂ ಪ್ರೇಮದ ಒಂದು ಶಬ್ದವನ್ನೂ ಆಡಲಿಲ್ಲ. ಸೊಗಸಾದ ಹೂದೋಟಗಳಲ್ಲಿ ಗಂಟೆ ಗಂಟೆಗಳು ಕೂಡುತ್ತಿದ್ದೆವು – ರಾತ್ರಿ ಬಹಳ ಹೊತ್ತಿನವರೆಗೆ ಮಾತನಾಡುತ್ತ ಜತೆಯಲ್ಲಿಯೇ ಇರುತ್ತಿದ್ದೆವು. ನನ್ನನ್ನು ಕರೆತಂದು ಮಿಷನ್ನಿನಲ್ಲಿ ಬಿಟ್ಟು ಹೋಗುತ್ತಿದ್ದರು.

ಹೀಗೆ ನಾಲ್ಕು ವರ್ಷ ಕಳೆಯಿತು. ಪವಿತ್ರ ಸ್ನೇಹದ ಮೇರೆಯನ್ನು ಅವರೆಂದೂ ದಾಟಲಿಲ್ಲ. ನನಗೆ ತಡೆಯದಾಯಿತು – ವಸಂತ ಸಮಯ. ತೋಟದಲ್ಲಿ ಹೂಗಳು ಅರಳಿ ಕಣ್ಮನಗಳಿಗೆ ಹಬ್ಬವನ್ನುಂಟುಮಾಡುತ್ತಿದ್ದವು. ವಿರಕ್ತರನ್ನೂ ಅನುರಕ್ತರನ್ನಾಗಿ ಮಾಡುವ ಸುಂದರ ವಾತಾವರಣ. ನಾವಿಬ್ಬರೂ ಒಂದು ದಿನ ತೋಟದಲ್ಲಿ ಕುಳಿತಿದ್ದಾಗ ನಾನು ಮಾತು ತೆಗೆದೆ

'ನೀವೇಕೆ ಇಷ್ಟು ರಹಸ್ಯಜೀವಿಗಳಾಗಿದ್ದೀರಿ. ನಮ್ಮ ಸ್ನೇಹವಾಗಿ ನಾಲ್ಕು ವರ್ಷಗಳಾದವು. ಇನ್ನಿದುವರೆಗೆ ನೀವು ಯಾರು – ನಿಮ್ಮ ವೃತ್ತಿಯೇನು – ಇಲ್ಲಿ ಏನು ಮಾಡುತ್ತಿರುವಿರಿ – ನಿಮಗೆ ವಿವಾಹ ವಾಗಿದೆಯೇ ?—ನಿಮ್ಮ ಮನೆಯೆಲ್ಲಿದೆ ಒಂದೂ ನನಗೆ ಗೊತ್ತಿಲ್ಲವಲ್ಲ. ನಿಮ್ಮ ವಿಶ್ವಾಸಕ್ಕೆ ನಾನು ಅರ್ಹಳಲ್ಲವೇ ?'

'ಎಮಿಲಿ – ಎಮಿಲಿ ಹಾಗೆ ಹೇಳಬೇಡ. ನನ್ನ ದುರಂತ ಬಾಳಿನ ಬೆಳದಿಂಗಳು ನೀನು. ಅದನ್ನೆಲ್ಲಾ ತಿಳಿಸಿ ನಿನ್ನ ಮನಸ್ಸಿಗೇಕೆ ಕ್ಲೇಶ

ವನ್ನುಂಟುಮಾಡಲಿ ಎಂದು ಸುಮ್ಮನಿದ್ದೆ. ನೀನು ಕೇಳಲು ಇಚ್ಛಿಪಡುವು ದಾದರೆ ಹೇಳುತ್ತೇನೆ.'

'ಅಭ್ಯಂತರವಿಲ್ಲದಿದ್ದರೆ ಹೇಳಿ. ನಿಮ್ಮ ಜೀವನವೃತ್ತಾಂತದ ಮೇಲೆ ನನ್ನ ಭವಿಷ್ಯ ನಿಂತಿದೆ-'

'ನಾನು ಡಾಕಾದವನು. ಕಾಲೇಜಿನ ಓದು ಮುಗಿಸಿ ಎಂ. ಎ. ಡಿಗ್ರಿ ಸಂಪಾದಿಸಿಕೊಂಡಿದ್ದೆ. ನಮ್ಮ ದೇಶ ಆಂಗ್ಲರ ಬೂಡ್ಸಿನ ತುಳಿತಕ್ಕೆ ಸಿಕ್ಕಿ ನರಕಯಾತನೆ ಅನುಭವಿಸುತ್ತಿತ್ತು. ಕ್ರಾಂತಿಕಾರರ ಒಂದು ಬಳಗಕ್ಕೆ ನಾನು ಸೇರಿದೆ. ನಾವೆಲ್ಲರೂ ಜೀವಾವಧಿ ಬ್ರಹ್ಮಚರ್ಯವ್ರತ ಪರಿಪಾಲಿಸಬೇಕೆಂದೂ, ದೇಶಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಬೇಕೆಂದೂ ಶಪಥಮಾಡಿದೆವು.

ದೇಶವನ್ನು ಬಂಧವಿಮೋಚನೆ ಮಾಡಬೇಕಾದರೆ ಆಳರಸರಾದ ಬಿಳಿಯರನ್ನು ಧ್ವಂಸಮಾಡುವುದೊಂದೇ ಮಾರ್ಗವೆಂದು ನಾವು ನಿಶ್ಚಯಿಸಿದೆವು. ಒಂದು ದಿನ ಗೊತ್ತುಮಾಡಿಕೊಂಡು ಆದಿನ ದೊಡ್ಡ ದೊಡ್ಡ ಆಂಗ್ಲ ಅಧಿಕಾರಿಗಳ ಮಾರಣಹೋಮ ಮಾಡಬೇಕೆಂದು ನಿಶ್ಚಯಿಸಿದೆವು. ನನ್ನ ಪಾಲಿಗೆ ಕಲೆಕ್ಟರನ್ನು ಮುಗಿಸುವ ಕೆಲಸಬಿತ್ತು. ನಿಶ್ಚಯವಾದ ದಿನ ನನ್ನ ಕೆಲಸ ಸಾಂಗವಾಗಿ ನೆರವೇರಿಸಿಬಿಟ್ಟೆ. ಇನ್ನು ನನಗೆ ಭಾರತದಲ್ಲಿ ಉಳಿಗಾಲವೆಲ್ಲಿ ? ನಮ್ಮ ಬಳಗದವರೆಲ್ಲರೂ ವಿದೇಶಗಳಿಗೆ ತೆರಳಿದರು. ಅಮೇರಿಕಾಕ್ಕೆ ಇಬ್ಬರು ಹೋದರು; ಸ್ವಿಟ್ಜರ್ಲೆಂಡಿಗೆ ಇಬ್ಬರು ಹೋದರು; ರಷ್ಯಾಕ್ಕೆ ಒಬ್ಬ ಹೋದ - ನಾನು ಜಪಾನಿಗೆ ಬಂದೆ. ಬರುವಾಗ ಊರಿನಿಂದ ಸಾಕಷ್ಟು ಹಣ ತಂದಿದ್ದೆ. ಗುಪ್ತಮಾರ್ಗದಿಂದ ನನಗೆ ಬೇಕಾದಾಗ ಹಣ ತರಿಸಿಕೊಂಡು ಇಲ್ಲಿ ಕಾಲತಳ್ಳುತ್ತ ಬಂದೆ. ನಮ್ಮ ಪಾರ್ಟಿ ಭಾರತದ ಬೇರೆ ಬೇರೆ ಕಡೆ ತನ್ನ ಕಾರ್ಯಕ್ರಮ ಕೈಗೊಳ್ಳುತ್ತಿತ್ತು. ನಾನು ಅವರಿಗೆ ಕ್ರಮವಾಗಿ ಇಲ್ಲಿಂದ ಯುದ್ಧಸಾಮಗ್ರಿಗಳನ್ನು ಒದಗಿಸುತ್ತಿದ್ದೆ. ನನ್ನ ಮತ್ತು ನನ್ನ ಪಾರ್ಟಿಯ ಸಂಬಂಧ ಚಿರಕಾಲ ಉಳಿಯಲಿಲ್ಲ.'

'ನಿಮ್ಮಿಬ್ಬರ ಮಧ್ಯೆ ಏನು ಬಂತು ?'

'ಗಾಂಧೀಜಿ ಬಂದರು. ಭಯೋತ್ಪಾದನೆ ಮತ್ತು ಹಿಂಸಾತ್ಮಕ ಚಳುವಳಿಯ ಮೂಲಕ ನಾವು ಭಾರತದ ಸೇವೆ ಮಾಡುತ್ತಿದ್ದೇವೆಂದು ಭಾವಿಸಿದ್ದೆವು. ರಕ್ತಪಾತವಾಗದೆ ಯಾವ ದೇಶಕ್ಕೂ ಸ್ವಾತಂತ್ರ್ಯ

ಲಭಿಸಿದುದನ್ನೂ ನಾವು ಕಂಡಿರಲಿಲ್ಲ. ಗಾಂಧೀಜಿ ತಮ್ಮ ರಚನಾತ್ಮಕ ಚಳುವಳಿ ಆರಂಭಿಸಿದಾಗ ಕಿಡಿಕಿಡಿಯಾದವರಲ್ಲಿ ನಾನೊಬ್ಬ. ಭಾರತದ ವೀರ ತರುಣರ ಬಿಸಿರಕ್ತವನ್ನು ಗಾಂಧೀಜಿ ತಣ್ಣಗೆ ಮಾಡುತ್ತಿದ್ದಾರೆಂದು ಅವರನ್ನು ಶಪಿಸಿದೆ. ಅವರ ಶಾಂತಿ ಮಂತ್ರ, ಪ್ರೇಮಪಾಠ, ಕ್ರಿಸ್ತಜೀವನ ವಿಜ್ಞಾನಯುಗದ ನಮಗೆ ಹಾಸ್ಯಾಸ್ಪದವಾಗಿತ್ತು. ಆದರೆ ನಿಃಶಸ್ತ್ರನಾಗಿದ್ದ ಈ ಬ್ಯಾರಿಸ್ಟರ್ ಗಾಂಧಿ ಸಾಧಿಸುತ್ತಿದ್ದುದನ್ನು ನಿರಾಕರಿಸಲು ಸಾಧ್ಯವಾಗಲಿಲ್ಲ. ಅಜೇಯ್ಯವಾಗಿದ್ದ ಸಾರ್ವಭೌಮ ಸರ್ಕಾರ ಈತನನ್ನು ಸಂಧಾನಕ್ಕೆ ಕರೆದಾಗ ಗಾಂಧೀಜಿಯ ಅಪಾರಶಕ್ತಿಯ ಅರಿವು ನನಗಾಯಿತು. ತಿರಸ್ಕಾರ ಪುರಸ್ಕಾರವಾಯಿತು; ವಿದ್ವೇಷ ಭಕ್ತಿಯಾಯಿತು. ಗಾಂಧೀಜಿಯ ವಿಚಾರ ವಿಕಾಸವನ್ನೂ, ಕಾರ್ಯಕ್ರಮದ ರೀತಿ ನೀತಿಗಳನ್ನು ಗಮನಿಸುತ್ತ ಅವರ ಮಾರ್ಗವೇ ಸರಿಯೆನಿಸಿತು. ನನ್ನ ಅವಿವೇಕಕ್ಕೆ ಪಶ್ಚಾತ್ತಾಪವಾಯಿತು. ಇಂಗ್ಲಿಷಿನವನನ್ನು ಕೊಂದ ಮಹಾಪಾಪ ದಳ್ಳುರಿಯಂತೆ ನನ್ನನ್ನು ಸುಡಲಾರಂಭಿಸಿತು. ಇದೇ ಸಮಯಕ್ಕೆ ನನ್ನ ಮನಸ್ಸು ಆಧ್ಯಾತ್ಮಿಕ ವಿಷಯಗಳ ಕಡೆ ತಿರುಗಿತು. ಚಿಂತಾತಪದಲ್ಲಿ ನನ್ನ ಆತ್ಮವನ್ನು ಪರಿಶುದ್ಧ ಮಾಡುತ್ತ ಬಂದೆ. ಗಾಂಧೀಜಿಯ ಮಹಾತಪಸ್ಸಿನ ಲಾಭ ನನ್ನ ಮಾತೃ ಭೂಮಿಗಾಗುತ್ತಿದೆ. ನಾವು ಅನುಸರಿಸುತ್ತಿದ್ದ ಹಿಂಸಾತ್ಮಕ ಕಾರ್ಯ ವಿಧಾನಕ್ಕೆ ಅಪಜಯವಾಗಿ, ಗಾಂಧೀಜಿಯ ರಚನಾತ್ಮಕ ಕಾರ್ಯವಿಧಾನಕ್ಕೆ ಪೂರ್ಣಜಯ ದೊರೆಯುತ್ತಿರುವುದಕ್ಕೆ ನಾನು ಸಂತೋಷಪಡುತ್ತಿದ್ದೇನೆ.'

'ನಿಮ್ಮ ಆದರ್ಶ ಸಾಧಿಸಿತಲ್ಲ. ಇನ್ನು ಭಾರತಕ್ಕೆ ಹಿಂದಿರುಗಲೇನು ಅಡ್ಡಿ. ಇಷ್ಟು ವರ್ಷಗಳ ತರುವಾಯ ನಿಮ್ಮನ್ನಾರು ಗುರುತಿಸುತ್ತಾರೆ.'

'ಸರ್ಕಾರ ನನ್ನನ್ನು ಗುರುತಿಸುವುದಿಲ್ಲವೆಂದು ನಾನು ಸುಳ್ಳು ಬಾಳು ನಡೆಸುವುದು ನ್ಯಾಯವೇ? ನಾನು ಆಚರಿಸಿದ ಅಕೃತ್ಯ ಕೇವಲ ರಾಜಕೀಯಕ್ಕೆ ಸಂಬಂಧಿಸಿದುದಲ್ಲ – ಭಾರತೀಯ ಸಂಸ್ಕೃತಿಗೇ ನಾನು ಮಹಾಪರಾಧಮಾಡಿದ್ದೇನೆ.'

'ನಿಮ್ಮ ವಾದಸರಣಿ ನನಗೆ ಅರ್ಥವಾಗಲಿಲ್ಲ.'

'ನೋಡು ಎಮಿಲಿ. ಭಾರತದ ಇತಿಹಾಸ, ಅದರ ಪರಂಪರೆ ಜಗತ್ತಿನ ಇತರ ರಾಷ್ಟ್ರಗಳ, ಪರಂಪರೆಗಳಂತಲ್ಲ. ಈ ರಾಷ್ಟ್ರವನ್ನು ಕಟ್ಟಿದವರು

ರಾಜಕಾರಣಿಗಳಲ್ಲ, ಯುದ್ಧವಿದ್ಯಾ ನಿಪುಣರಾದ ಮಹಾಯೋಧರಲ್ಲ. ಬುದ್ಧ, ಅಶೋಕ, ಚಾಣಿಕ್ಯ, ವಿದ್ಯಾರಣ್ಯ, ರಾಮದಾಸ್, ರಾಮಕೃಷ್ಣ ಪರಮಹಂಸ – ಈಗ ಗಾಂಧೀಜಿ ಇವರನ್ನು ಭಾರತ ಚರಿತ್ರೆಯ ಹೆಗ್ಗುರುತುಗಳೆಂದು ನಾವು ಭಾವಿಸಬೇಕು. ಎಂದಿನವರೆಗೆ ಅವರ ದಾರಿಯಲ್ಲಿ ಭಾರತೀಯರು ಹೋಗುತ್ತಾರೋ ಅಂದಿನವರೆಗೆ ಭಾರತವನ್ನು ಯಾರೂ ಅಲುಗಾಡಿಸಲಾರರು. ನಮ್ಮ ಪರಂಪರೆಗೆ ತಿಲಾಂಜಲಿ ಕೊಟ್ಟು ನಾವು ಯಾವಾಗ ಪಾಶ್ಚಾತ್ಯರ ರೂಕ್ಷಮಾರ್ಗಾನುಸರಣೆಗೆ ಹೊರಡುತ್ತೇವೆಯೋ ಆಗ ನಮ್ಮ ಪತನ ಕಟ್ಟಿಟ್ಟ ಮುಡಿಪು. ರಕ್ತಪಾತ ಮಾಡಿ ನಾನು ಭಾರತದ ಆದರ್ಶಕ್ಕೆ ಪ್ರಬಲ ಅವಹೇಳನ ಮಾಡಿದ್ದೇನೆ. ಯಾವ ಮುಖಹೊತ್ತು ಭಾರತಕ್ಕೆ ಹಿಂದಿರುಗಲಿ.'

'ಭಾರತಕ್ಕೆ ಮತ್ತೆ ಕಾಲಿಡುವುದಿಲ್ಲವೆಂದು ನಿರ್ಧರಿಸಿರುವಿರಾ?'

'ನಿರ್ಧರಿಸಿದ್ದೇನೆ.'

'ಇಲ್ಲೇ ಒಬ್ಬಂಟಿಗರಾಗಿ ಕಾಲತಳ್ಳಬೇಕೆಂದು ಸಂಕಲ್ಪವೇ?'

'ಇಲ್ಲಿಂದಲೇ ಭಾರತದ ಸೇವೆ ಮಾಡುತ್ತೇನೆ. ಗಾಂಧಿ ತತ್ತ್ವದಿಂದ ಭಾರತದ ಕಲ್ಯಾಣ ಮಾತ್ರವೇ ಅಲ್ಲದೆ ಜಗತ್ತಿನ ಕಲ್ಯಾಣವೂ ಸಾಧಿಸುವುದೆಂದು ನನ್ನ ಅಂತರಾತ್ಮ ಹೇಳುತ್ತಿದೆ. ಪಾಶ್ಚಾತ್ಯಾನುಕರಣೆಯಿಂದ ಪತನದ ಹಾದಿ ಹಿಡಿದಿರುವ ಜಪಾನಿಗೆ ಗಾಂಧೀಮಂತ್ರದ ರಕ್ಷೆ ಬೇಕಾಗಿದೆ. ಜಪಾನಿನ ಗಾಂಧಿ, ಕಗಾವಾ ಅದೇ ಮಾತನ್ನು ಹೇಳುತ್ತಿರುವುದನ್ನು ನೀನು ಕೇಳಿಲ್ಲವೇ?'

'ನಿಮ್ಮ ಜೀವನ ರಚನೆಯಲ್ಲಿ ನನಗೇನೂ ಸ್ಥಾನವಿಲ್ಲವೇ?'

'ಏಕಿಲ್ಲ. ನೀನು ಕ್ರಿಸ್ತನ ನಿಜವಾದ ಭಕ್ತಳು. ಆತನ ಸತ್ಯಮಾರ್ಗದಲ್ಲಿ ನಡೆದುಹೋಗುತ್ತಿರುವೆ. ನಾನು ಗಾಂಧೀಭಕ್ತ. ಕ್ರಿಸ್ತ, ಗಾಂಧಿ ಬೇರೆ ಬೇರೆ ಕಾಲಗಳಲ್ಲಿ, ದೇಶಗಳಲ್ಲಿ ಹುಟ್ಟಿದ ಒಂದೇ ಶಕ್ತಿ, ಆ ಶಕ್ತಿಯ ಆರಾಧಕರಾದ ನಾವಿಬ್ಬರೂ ಸೋದರ ಸೋದರಿಯರಲ್ಲವೇ?'

ಸೋದರ ಸೋದರಿ ಶಬ್ದ ನನ್ನ ಕಿವಿಯಮೇಲೆ ಬಿದ್ದೊಡನೆಯೆ ಸಿಡಿಲು ಬಡಿದಂತಾಯಿತು.

'ಎಷ್ಟುಸುಲಭವಾಗಿ ಸೋದರ ಸೋದರಿ ಎಂದುಬಿಡುವಿರಿ'

ಎನ್ನುತ್ತಾ ಅವರ ತೊಡೆಯ ಮೇಲೆ ತಲೆಯಿಟ್ಟು ಗೋಳಾಡಿದೆ. ನನ್ನ ತಲೆಯನ್ನು ಮೃದುವಾಗಿ ನೇವರಿಸಿ, ನನ್ನನ್ನೆಬ್ಬಿಸಿ, ಪರಮ ಪ್ರೀತಿಯಿಂದ

'ಎಮಿಲಿ ಡಾರ್ಲಿಂಗ್'

ಎಂದರು. ನನ್ನ ಮನಸ್ಸಿನಲ್ಲಿ ಆಶಾಂಕುರವಾಯಿತು. ನನ್ನ ಆರಾಧ್ಯ ದೇವತೆ ನನ್ನ ಕೈಹಿಡಿಯುತ್ತದೆ ಎಂದು ನಿರೀಕ್ಷಿಸಿದೆ. ಅವರೆಂದೂ ನನ್ನ 'ಡಾರ್ಲಿಂಗ್' ಎಂದು ಕರೆದಿರಲಿಲ್ಲ.

'ಎಮಿಲಿ ಡಾರ್ಲಿಂಗ್ – ಒಮ್ಮೆ ಮೀಸಲಾದ ಮನಸ್ಸನ್ನು, ಮತ್ತೆ ಹತ್ತು ಕಡೆಗೆ ಹರಿಹಾಯಿಸುವವನನ್ನು ಏನನ್ನುತ್ತಾರೆ ಬಲ್ಲೆಯಾ?'

'ವ್ಯಭಿಚಾರಿಯೆನ್ನುತ್ತಾರೆ. ನಿಮ್ಮ ಮನಸ್ಸು ಈಗಾಗಲೇ ಯಾರಿಗಾದರೂ ಅರ್ಪಿತವಾಗಿದೆಯೇ?'

'ಆಗಿದೆ. ನನ್ನ ಮಾತೃಭೂಮಿಗೆ ಅರ್ಪಿತವಾಗಿದೆ.'

'ಆದರೆ ಅದೊಂದು ಭಾವನೆ.'

'ಎಲ್ಲ ಉದಾತ್ತ ವಿಚಾರಗಳೂ, ಸಂಬಂಧಗಳೂ ಭಾವನೆಗಳೇ. ಕ್ರಿಯೆ ಭಾವನೆಯ ಊಳಿಗದಾಳು.'

'ನನ್ನ ಅಪೂರ್ಣಜೀವನವನ್ನು ಪೂರ್ಣಗೊಳಿಸುವುದಿಲ್ಲವೇ?'

'ಅಪೂರ್ಣಕ್ಕೆ ಅಪೂರ್ಣ ಸೇರಿಸಿದರೆ ಅದು ಪೂರ್ಣವಾಗುವುದಿಲ್ಲ. ನೀನು ಯಾವ ಪ್ರತಿಸ್ಪಂದನವನ್ನು ನನ್ನಿಂದ ನಿರೀಕ್ಷಿಸುವೆಯೋ ಅದನ್ನು ನಾನು ಕೊಡಲು ಅಸಮರ್ಥನಾಗಿದ್ದೇನೆ. ಈ ಜನ್ಮದಲ್ಲಿ ನನಗೆ ಎಲ್ಲ ಸ್ತ್ರೀಯರೂ ಸೋದರಿ, ಮಾತೃಸ್ವರೂಪರು.'

ಅವರ ಮನವೊಲಿಸುವುದು ನನಗೆ ದುಸ್ಸಾಧ್ಯವಾಯಿತು. ಅವರ ಮಾನಸಿಕ ಸ್ವಾತಂತ್ರ್ಯವನ್ನು ನನ್ನ ಅಲ್ಪ ಆಶೆಯ ಪೂರೈಕೆಗಾಗಿ ತ್ಯಾಗ ಮಾಡಿರೆಂದು ಕೇಳುವುದು ನನ್ನ ಸ್ವಾರ್ಥದ ಕುರುಹೆಂದು ಕಂಡು ಬಂದಿತು.

'ನನಗೆ ಮಾರ್ಗದರ್ಶನ ಮಾಡಿ. ನಿಮ್ಮ ಭಾವನೆಗೆ ನೀವು ಸರ್ವಸ್ವವನ್ನೂ ತ್ಯಾಗಮಾಡಿರುವಂತೆ ನನ್ನ ಭಾವನೆಗೆ ನಾನೂ ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧಳಾಗಿದ್ದೇನೆ.'

'ನಿನ್ನ ಭಾವನೆ ಯಾವದೆಂದು ಕೇಳಬಹುದೇ?'

'ನನ್ನ ಅಂತಃಕರಣ ನಿಮ್ಮನ್ನು ಪತಿಯೆಂದು ಅಪ್ಪಿಕೊಂಡಿತು. ನನ್ನನ್ನು ಸ್ವೀಕರಿಸುವುದು ಬಿಡುವುದು ನಿಮಗೆ ಸೇರಿದ ವಿಷಯ. ನನ್ನ ಭಾವನೆಯ ರಸಪ್ರಪಂಚದಲ್ಲಿರಲು ಅಡ್ಡಿಯೇನು?—ನನಗೊಂದು ಉಪಕಾರ ಮಾಡಿ.'

'ಹೇಳು. ಅವಶ್ಯಕವಾಗಿ ಮಾಡುತ್ತೇನೆ.'

'ನಾನು ಯಾವ ಕೆಲಸ ಕೈಗೊಂಡರೆ ನಿಮಗೆ ಪ್ರಿಯವಾಗುವುದು ತಿಳಿಸಿ. ನಾನು ಕೈಗೊಳ್ಳುವ ಕೆಲಸದಲ್ಲಿ ನೀವಿರುತ್ತೀರೆಂಬ ತೃಪ್ತಿಯೇ ನನ್ನ ಕೊರತೆಯನ್ನು ನೀಗುತ್ತದೆ.'

'ನೀನು ಕೈಗೊಂಡಿರುವ ಕೆಲಸ ನನಗೆ ಪ್ರಿಯವಾದ ಕೆಲಸವೇ, ನಿನ್ನ ಮಿಷನ್ ಅಪ್ಪಣೆಕೊಟ್ಟರೆ ಭಾರತಕ್ಕೆ ಹೋಗು. ನಾನು ಮಾಡದಿರುವ ಭಾರತಸೇವೆಯನ್ನು ನೀನು ಮಾಡು'

ಎಂದು ಹೇಳಿದರು. ಮಿಷನ್ನಿನವರ ಜತೆ ನಾನು ಹನ್ನೆರಡು ವರ್ಷಗಳು ಇರುವುದೆಂದು ಕರಾರಾಗಿತ್ತು. ನನ್ನ ಕರಾರು ಮುಗಿಯುವುದಕ್ಕೆ ಎರಡು ವರ್ಷ ಉಳಿದಿತ್ತು. ಕರಾರಿನ ಕಾಲಾವಧಿ ಮುಗಿದೊಡನೆಯೇ ಭಾರತಕ್ಕೆ ಬಂದೆ. ಏನು ಕೆಲಸ ಕೈಗೊಳ್ಳುವುದೆಂದು ಯೋಚಿಸುತ್ತಿರುವಲ್ಲಿ ಮೇಜರ್ ಸ್ಕಿನ್ನರ್ ಅವರ ಪರಿಚಯವಾಯಿತು. ನಾವಿಬ್ಬರೂ ಸಾಧಕರ ಸಂಘ (Seekers Club) ಸ್ಥಾಪಿಸಿ ನಡೆಸಿಕೊಂಡು ಬರುತ್ತಿದ್ದೇವೆ.

"ಇದು ತಾಯಿ, ನನ್ನ ದುರಂತಕಥೆ."

ಶ್ರೀಮಾತೆಯವರ ಅಂತಃಕರಣ ಕಲಕಿತು. ಎಮಿಲಿಯವರನ್ನು ಬಿಗಿದಪ್ಪಿ ನೇವರಿಸುತ್ತಾ

"ನಿನ್ನದು ದುರಂತ ಕಥೆಯಲ್ಲ ಮಗಳೇ - ಪವಿತ್ರ ಪ್ರೇಮದ ಅಮರಕಥೆ."

ಎಂದರು. ಅವರ ಮಮತೆಯ ನುಡಿ ಎಮಿಲಿಯವರಿಗೆ ಚಿತ್ತಸ್ವಾಸ್ಥ್ಯ ವನ್ನುಂಟುಮಾಡಿತು.

"ರಾಮಗಿರಿ ಆಶ್ರಮಕ್ಕೆ ಬರುತ್ತೇನೆ. ನೀವು ಸೂಚಿಸಿದಂತೆ ಅಲ್ಲಿನ ಆಸ್ಪತ್ರೆಯ ವ್ಯವಸ್ಥೆ ಕೈಗೊಳ್ಳುತ್ತೇನೆ. ನನ್ನ ಗುರು - ನನ್ನ ಸ್ವಾಮಿಯ

ಸೇವೆಯನ್ನು ಅಲ್ಲಿಂದಲೇ ಮಾಡುತ್ತೇನೆ – ನನಗೆ ನಿಮ್ಮ ಭಾಷೆ ಬರುವುದಿಲ್ಲ. ಜನರ ನಿಕಟಸಂಬಂಧಕ್ಕೆ ಭಾಷಾಜ್ಞಾನ ಅವಶ್ಯಕ."

"ನಮ್ಮ ಭಾಷೆ ಜಗತ್ತಿನ ಅತ್ಯಂತ ಸುಂದರ ಭಾಷೆಗಳಲ್ಲಿ ಒಂದು. ಅದನ್ನು ಕಲಿಯಲು ನಿನಗೆ ಕಷ್ಟವಾಗುವುದಿಲ್ಲ. ನಾನು ಅಕ್ಷರಾಭ್ಯಾಸ ಮಾಡಿಸುತ್ತೇನೆ. ಬೆಂಗಳೂರಿಗೆ ನಾವು ಹೋಗಿ ಬರುವವರೆಗೆ ಸ್ವಾಮಿಜಿಯವರಲ್ಲಿ ನಿನ್ನ ಶಿಕ್ಷಣ ಮುಂದುವರಿಯಲಿ. ಹಿಂದಿರುಗಿದ ಮೇಲೆ ನಾನು ಶಿಕ್ಷಣ ಕೈಗೊಳ್ಳುತ್ತೇನೆ. ಬೆಂಗಳೂರಿನಿಂದ ಬಾಲಬೋಧೆ, ರೀಡರುಗಳನ್ನು ಕಳಿಸಿಕೊಡುತ್ತೇನೆ."

"ಆಗಬಹುದು. ಗಂಟೆ ಮೂರೂಕಾಲಾಯಿತು. ಇನ್ನು ನಾವು ಹೊರಡಬೇಕು."

ಯೋಗಿನಿ ಅಮ್ಮನವರು ಹತ್ತು ನಿಮಿಷಗಳಲ್ಲಿ ಸಿದ್ಧರಾದರು. ವಾಸೂ ಸ್ವಾಮಿಜಿ ಹೊರಡಲು ಸಿದ್ಧರಾಗಿದ್ದರು.

ಕಾರಿನಲ್ಲಿ ಕುಳಿತ ವಾಸು ಜ್ಞಾಪಿಸಿಕೊಂಡು ರಾಮುಸ್ವಾಮಿ ಕೈಯಲ್ಲಿ ಯೋಗಿನಿ ಅಮ್ಮನವರ ತಂಬೂರಿ ತರಿಸಿಕೊಂಡ.

ನಾಲ್ವರೂ ಹಾರ್ನ್ಬೀ ರಸ್ತೆಯಲ್ಲಿದ್ದ 'ರೆಂಬ್ರ್ಯಾಂಟ್ ಸ್ಟೂಡಿಯೋ' ಬಳಿಗೆ ಬಂದರು. ಸ್ಕಿನ್ನರ್ ಅವರು ಛಾಯಾಚಿತ್ರಗ್ರಾಹಕನೊಡನೆ ದಾರಿ ನೋಡುತ್ತಿದ್ದರು.

"ಮಿಸ್ಟರ್ ಡೇವಿಸ್. ಒಳ್ಳೆಯ ಛಾಯಾಚಿತ್ರಗ್ರಾಹಕರು ಮಾತ್ರವೇ ಅಲ್ಲ – ಉತ್ತಮ ಚಿತ್ರಗಾರರೂ ಆಗಿದ್ದಾರೆ"

ಎಂದು ಸ್ಕಿನ್ನರ್ ಛಾಯಾಚಿತ್ರಗ್ರಾಹಕನ ಪರಿಚಯ ಮಾಡಿ ಕೊಟ್ಟರು.

ಡೇವಿಸ್ ಮೊದಲು ಸ್ವಾಮಿಜಿಯವರನ್ನು ಕರೆದು ಹಿನ್ನೆಲೆಯ ತೆರೆಯ ಮುಂದೆ ಕೂಡಿಸಿ, ಅವರ ಮುಖದ ಮೇಲೆ ವಿವಿಧ ಕೋಣಗಳಿಂದ ಬೆಳಕುಚೆಲ್ಲಿ ಮುಖಮುದ್ರೆಯನ್ನು ಪರೀಕ್ಷಿಸಿದ. ಸ್ವಾಮಿಜಿ ಓದುತ್ತಿರುವಂತೆ, ಸ್ವಾಮಿಜಿ ಧ್ಯಾನಾಸಕ್ತರಾಗಿರುವುದು, ಸ್ವಾಮಿಜಿ ವಿಶ್ರಾಂತಿ ಪಡೆಯುತ್ತಿರುವುದು, ಸ್ವಾಮಿಜಿ ಭಾಷಣ ಮಾಡುತ್ತಿರುವುದು ಮೊದಲಾದ ಭಂಗಿಗಳಲ್ಲಿ ಡೇವಿಸ್

ಚಿತ್ರ ತೆಗೆದ. ವಾಷೂ ಸಲಹೆಯಂತೆ ಸ್ಕಿನ್ನರ್ ಮತ್ತು ಸ್ವಾಮಿಜಿ ಇರುವ ಒಂದು ಚಿತ್ರ ತೆಗೆಯಲಾಯಿತು.

ಯೋಗಿನಿ ಅಮ್ಮನವರ ಮುಖಮುದ್ರೆ, ಮುಖಲಕ್ಷಣವನ್ನೂ ಡೇವಿಸ್ ಪರೀಕ್ಷಿಸಿ ಅವರು ಅಭ್ಯಾಸಮಾಡುತ್ತಿರುವಂತೆ, ಜಪಮಾಡುತ್ತಿರುವಂತೆ, ತಂಬೂರಿ ಹಿಡಿದು ಭಜನೆ ಮಾಡುತ್ತಿರುವಂತೆ ಕೆಲವು ಚಿತ್ರಗಳನ್ನು ತೆಗೆದ. ಎಮಿಲಿಯ ಕೋರಿಕೆಯಂತೆ ಯೋಗಿನಿ ಅಮ್ಮನವರು ಮತ್ತು ಎಮಿಲಿ ಜತೆಯಲ್ಲಿರುವ ಒಂದು ಚಿತ್ರ ತೆಗೆಯಲಾಯಿತು.

ಛಾಯಾಚಿತ್ರರಂಗ ಬಿಟ್ಟು ಹೊರಗೆ ಬಂದಕೂಡಲೆ ಯೋಗಿನಿ ಅಮ್ಮನವರು ಮೆಲ್ಲನೆ ಎಮಿಲಿಯವರಿಗೆ

"ಜಪಾನಿಗೆ ಕಳಿಸುವುದಕ್ಕೋ ?"

ಎಂದು ಕೇಳಿದರು. ಎಮಿಲಿ ಮುಗುಳ್ನಗೆ ನಕ್ಕರು.

ಛಾಯಾಚಿತ್ರಗ್ರಹಣದ ಕೆಲಸ ಮುಗಿಯಲು ಒಂದು ಗಂಟೆ ಹಿಡಿಯಿತು. ಭಜನೆಗೆ ವೇಳೆಯಾಯಿತೆಂದು ಯೋಗಿನಿ ಅಮ್ಮನವರು ಸೂಚಿಸಿದರು. ಡೇವಿಸ್ ಎಲ್ಲರೂ ಸ್ವಲ್ಪ ಚಹ ಸ್ವೀಕರಿಸಬೇಕೆಂದು ಆಗ್ರಹಮಾಡಿದ.

ಡೇವಿಸ್ ಆತಿಥ್ಯ ಮುಗಿಸಿಕೊಂಡು ಭಜನೆಯ ವೇಳೆಗೆ ಸರಿಯಾಗಿ ಎಲ್ಲರೂ ಆಶ್ರಮ ಮುಟ್ಟಿದರು.

ಅವರು ಬರುವವೇಳೆಗೆ ರತನ್‌ಲಾಲ್ ಮತ್ತು ಅವನ ಪರಿವಾರ ಬಂದು ಕಾದಿತ್ತು.

ಅಂದು ಯೋಗಿನಿ ಅಮ್ಮನವರ ಭಜನೆಯ ಧ್ವನಿಯೇ ವ್ಯತ್ಯಸ್ತವಾಗಿತ್ತು. ಅವರ ಆತ್ಮ ಭಗವಂತನಲ್ಲಿ ಮೊರೆಯಿಡುತ್ತಿತ್ತು. ಆ ಮೊರೆಯ ಅರ್ಥ ಅಲ್ಪಸ್ವಲ್ಪ ಎಮಿಲಿಗೆ ಮಾತ್ರ ತಿಳಿಯಿತು.

೧೬

ಮುಂಬಯಿ ಕೆಲಸ ಸದ್ಯಕ್ಕೆ ಮುಗಿದಂತಾಗಿತ್ತು. ಉಳಿದಿದ್ದುದು ಆಶ್ರಮನಿರ್ಮಾಣದ ದೊಡ್ಡ ಕೆಲಸ. ವಾಸು, ಪ್ರಮೀಳೆ, ರಾಮಸ್ವಾಮಿ ಕಾರಿನಲ್ಲಿ ಬೆಂಗಳೂರಿಗೆ ಹೋಗುವುದು ನಿಶ್ಚಯವಾಯಿತು.

ಸೋಮವಾರ ಪ್ರಯಾಣಕ್ಕೆ ದಿನ ಚೆನ್ನಾಗಿದ್ದುದರಿಂದ ಅಂದೇ ಪ್ರಾತಃ ಕಾಲ ಹೊರಡುವುದೆಂದು ಇತ್ಯರ್ಥವಾಯಿತು.

ಭಾನುವಾರ ಸಂಜೆಯೇ ಬೀಳ್ಕೊಡುವ ಸಮಾರಂಭವಾಯಿತು. ಪ್ರಯಾಣಕ್ಕೆ ಬೇಕಾದ ಸಮಸ್ತ ಏರ್ಪಾಡನ್ನೂ ಬೊಂಬಾಯಿವಾಲಾ, ರತನ್‌ಲಾಲ್, ಮಾಡಿದ್ದರು. ಷಿರೀನ್, ಅನಸೂಯಾ, ಊರ್ಮಿಳಾ ಯೋಗಿನಿ ಅಮ್ಮನವರ ಆಶೀರ್ವಾದ ಪಡೆದುಕೊಂಡರು.

ಬೊಂಬಾಯಿವಾಲಾ ಸರ್ವರ ಸಮ್ಮುಖದಲ್ಲಿ ವಾಸು ಕೈಗೆ 'ರಿಸರ್ವ್ ಬ್ಯಾಂಕಿ'ನ ಮೇಲೆ ಒಂದು ಲಕ್ಷ ರೂಪಾಯಿಗಳಿಗೆ ಒಂದು ಚೆಕ್ಕನ್ನಿತ್ತು

"ಆಶ್ರಮದ ಕೆಲಸ ವ್ಯವಸ್ಥೆಮಾಡಿ. ಕಾಲಕಾಲಕ್ಕೆ ಹಣ ಒದಗಿಸುತ್ತ ಹೋಗುತ್ತೇವೆ"

ಎಂದು ಹೇಳಿದರು.

ಯೋಗಿನಿ ಅಮ್ಮನವರು ಮರೆಯದೆ ಎಮಿಲಿಗೆ ಅಕ್ಷರಾಭ್ಯಾಸ ಮಾಡಿಸಿದರು. ಅವರು ಹಿಂದಿರುಗುವವರೆಗೆ ಸ್ವಾಮಿಜಿ ಪಾಠ ಮುಂದು ವರಿಸುವುದೆಂದು ಗೊತ್ತಾಯಿತು. ಬೊಂಬಾಯಿ ಆಶ್ರಮದ ವ್ಯವಸ್ಥೆ ಬೊಂಬಾಯಿವಾಲಾ ಮತ್ತು ರತನ್‌ಲಾಲರ ಮೇಲೆ ಬಿತ್ತು. ಸ್ಕಿನ್ನರ್ ಅವರ ಪುಸ್ತಕದ ಕೆಲಸ ಇನ್ನೂ ಸ್ವಲ್ಪ ಉಳಿದಿದ್ದುದರಿಂದ, ಅವರು ಸ್ವಾಮಿಜಿ ಜತೆಯಲ್ಲಿ ತಮ್ಮ ಹೆಚ್ಚಿನಕಾಲ ಕಳೆಯುವುದಾಗಿ ವಾಗ್ದಾನ ಮಾಡಿದರು.

ಸೋಮವಾರ ಬೆಳಿಗ್ಗೆ ಎಲ್ಲರ ಅಪ್ಪಣೆಪಡೆದು ಪ್ರಮಿಳಾ, ರಾಮ ಸ್ವಾಮಿ, ವಾಸು ಹೊರಟುನಿಂತರು. ಸ್ವಾಮಿಜಿ ವಾಸುವನ್ನು ಸ್ವಲ್ಪ ದೂರ ಕರೆದುಕೊಂಡು ಹೋಗಿ

"ವಾಸೂ – ದೊಡ್ಡ ಕೆಲಸಕ್ಕೆ ಕೈಹಾಕಿರುವೆಯಪ್ಪಾ. ದೇವರು ಒಳ್ಳೆಯದು ಮಾಡಲಿ. ನಮ್ಮನ್ನು ನಂಬಿದವರು ವಿಷಾದಪಡದಂತೆ ಕೆಲಸ ಕಾರ್ಯಗಳು ಸಾಗಲಿ."

ಎಂದು ಹೇಳಿದರು. ಸ್ವಾಮಿಜಿಯ ಸಂದೇಶ ವಾಸುವಿಗೆ ಸ್ವಲ್ಪ ಬೇಸರವನ್ನುಂಟುಮಾಡಿತು.

"ನಾನು ಈ ದುಡ್ಡು ನುಂಗುವುದಿಲ್ಲ ಶಂಕರ. ಭಯಪಡಬೇಡ."

"ನೀನು ನುಂಗುವುದಿಲ್ಲವೆನ್ನುವುದನ್ನು ನಾನು ಚೆನ್ನಾಗಿ ಬಲ್ಲೆ ವಾಸು. ನನ್ನ ಮಾತು ತಪ್ಪು ತಿಳಿದುಕೊಳ್ಳಬೇಡ. ಕಂಡವರ ದುಡ್ಡು ವಿಷಸಮಾನ. ಅದನ್ನು ಬಹಳ ಜೋಕೆಯಾಗಿ ಬಳಸಬೇಕು. ಖರ್ಚಾಗುವ ಪ್ರತಿ ಕಾಸಿಗೂ ಲೆಕ್ಕವಿಟ್ಟು ದಾತೃಗಳಿಗೆ ಒಪ್ಪಿಸಬೇಕು. ನಾವು ಕೈಗೊಂಡಿರುವ ಕೆಲಸ ಶುಭಪ್ರದವಾದುದೆಂದೂ, ಇದರಿಂದ ಲೋಕ ಕಲ್ಯಾಣವಾಗುತ್ತದೆಂದೂ ನನ್ನ ಅಂತರಾತ್ಮ ಹೇಳುತ್ತಿದೆ. ನಿನ್ನ ಉದ್ಯಮಕ್ಕೆ ನಾನು ಮನಃಪೂರ್ವಕ ವಾಗಿ ಯಶಸ್ಸು ಕೋರುತ್ತೇನೆ."

ಎಂದು ಹೇಳಿದ.

ಭಕ್ತಕೋಟಿಯ ಜಯಜಯಕಾರದೊಂದಿಗೆ ಯೋಗಿನಿ ಅಮ್ಮನವರ ಕಾರು ಪುಣೆಯದಾರಿ ಹಿಡಿಯಿತು.

ಮಧ್ಯಾಹ್ನ ಅವರ ಕಾರು ಪುಣೆ ತಲುಪಿತು. ಡೆಕ್ಕನ್ ಜಮಖಾನಾ ದಲ್ಲಿದ್ದ ಶ್ರೇಷ್ಠ ತರಗತಿಯ 'ವಸಂತ ಭವನ' ಹೋಟೆಲಿನಲ್ಲಿ ತಂಗಿದರು. ಅನಸೂಯಾಬೆನ್ ಮಾಡಿ ತಂದುಕೊಟ್ಟಿದ್ದ ತಿಂಡಿ ತಿನಿಸುಗಳೂ, ಬೊಂಬಾಯಿ ವಾಲಾ ಸ್ಕಿನ್ನರ್ ತಂದುಕೊಟ್ಟಿದ್ದ ಹಣ್ಣಿನ ಬುಟ್ಟಿಗಳೂ ಇದ್ದವು. ಅಂದು ಪುಣೆಯಲ್ಲಿಯೇ ಇದ್ದು ಮಾರನೆಯ ಬೆಳಿಗ್ಗೆ ಮುಂದಕ್ಕೆ ಪ್ರಯಾಣ ಬೆಳಸುವು ದೆಂದು ಪ್ರವಾಸಿಗರು ನಿಶ್ಚಯಿಸಿದರು.

ಹೊರಡುವ ಗಡಿಬಿಡಿಯಲ್ಲಿ ವೇಣಕ್ಕನಿಗೆ ತಾರುಕೊಡುವ ವಿಷಯವನ್ನು ಎಲ್ಲರೂ ಮರೆತುಬಿಟ್ಟಿದ್ದರು. ಪ್ರಮೀಳಾ ಜ್ಞಾಪಿಸಲು ವಾಸು ತಾರು ಕಳಿಸಿ ಕೊಟ್ಟ.

ಹೋಟೆಲಿನಲ್ಲಿ ಊಟೋಪಚಾರ ಮುಗಿಸಿಕೊಂಡು ಸಂಜೆಗೆ ಊರು ನೋಡಲು ಹೊರಟರು. ಭಂಡಾರ್ಕರ್ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್, ಫರ್ಗ್ಯೂಸನ್ ಕಾಲೇಜ್, ಕರ್ವೆಯವರ ಮಹಿಳಾ ವಿಶ್ವವಿದ್ಯಾನಿಲಯ, ಶ್ರೀರಾಮ ಮಂದಿರ, ಬಂಡ್ ಗಾರ್ಡನ್, ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ನೋಡಿಕೊಂಡು ಪಾರ್ವತಿ ಬೆಟ್ಟದಲ್ಲಿ ಪಾರ್ವತಿ ದೇವಾಲಯ ನೋಡಿಕೊಂಡು ಹೋಟೆಲ್ ಸೇರಬೇಕಾದರೆ ರಾತ್ರಿಯಾಗಿತ್ತು. ಮಾರನೆಯ ಬೆಳಿಗ್ಗೆ ಪ್ರಯಾಣ ಮುಂದುವರಿಸಲ್ಪಟ್ಟಿತು. ಮಧ್ಯಾಹ್ನ

ವಿರಾಜಿನಲ್ಲಿ ಊಟ, ವಿಶ್ರಾಂತಿ ಮುಗಿಸಿಕೊಂಡು ಸಂಜೆಗೆ ಪ್ರವಾಸಿಗರು ಹುಬ್ಬಳ್ಳಿ ಸೇರಿದರು.

"ಊಟ ಮುಗಿಸಿಕೊಂಡು ಈಗಲೇ ಹೊರಟುಬಿಡೋಣ. ಬೆಳಗಾಗುವ ವೇಳೆಗೆ ಬೆಂಗಳೂರು ಸೇರುತ್ತೇವೆ"

ಎಂದು ರಾಮಸ್ವಾಮಿ ಸೂಚಿಸಿದ. ವಾಸು ಅದಕ್ಕೆ

"ಬೇಡ. ಇನ್ನೊಂದು ದಿವಸದಲ್ಲಿ ಆಗುವದೇನು. ಎಲ್ಲರಿಗೂ ಆಯಾಸ ವಾಗಿದೆ. ರಾತ್ರಿ ಇಲ್ಲಿಯೇ ಕಳೆದು ಬೆಳಿಗ್ಗೆ ಹೊರಟರಾಯಿತು. ಒಂದೇ ಸಮನಾಗಿ ಕಾರ್ ಓಡಿಸಿಕೊಂಡು ಬಂದಿರುವ ಜಾನ್ ಗತಿಯೇನು? ಅವನು ಮಲಗಿಬಿಟ್ಟರೆ ನಮ್ಮ ಕೆಲಸವೆಲ್ಲಾ ಅತಂತ್ರವಾಗುತ್ತದೆ"

ಎಂದು ಹೇಳಿದ.

ಮಾರನೆಯ ಬೆಳಿಗ್ಗೆ ಪ್ರವಾಸಿಗರು ಹುಬ್ಬಳ್ಳಿ ಬಿಟ್ಟು ಹೊರಟು ಮಧ್ಯಾನ್ಹ ಅರಸೀಕೆರೆಯಲ್ಲಿ ಊಟ ವಿಶ್ರಾಂತಿ ತೀರಿಸಿಕೊಂಡು ರಾತ್ರಿ ಎಂಟು ಗಂಟೆಯ ಸುಮಾರಿಗೆ ಬೆಂಗಳೂರು ಸೇರಿದರು.

ವೇಣಕ್ಕ ವಾಸುವನ್ನೂ ಪ್ರಮಿಳೆಯನ್ನೂ ಆದರದಿಂದ ಸ್ವಾಗತಿಸಿದಳು. ಸ್ನಾನಕ್ಕೆ ಬಿಸಿನೀರು ಸಿದ್ಧವಾಗಿತ್ತು. ಎಲ್ಲರೂ ಸ್ನಾನ ಮುಗಿಸಿ ಊಟ ಮಾಡಿದರು. ಜಾನ್ ಧಣಿಯ ಅಪ್ಪಣೆಪಡೆದು ಮನೆಗೆ ಹೋಗಿ ಬೆಳಿಗ್ಗೆ ಬರುವುದಾಗಿ ಹೇಳಿ ಹೋದ.

ಧಣಿಯನ್ನು ಕಂಡ ಹನುಮನ ಸಂತೋಷಕ್ಕೆ ಪಾರವೇ ಇಲ್ಲ.

"ಯಾಕ್ರಾ ಬುದ್ಧಿ – ನಮ್ಮನ್ನ ಮರ್ತೇ ಬುಟ್ರಿ"

ಎಂದು ಕೇಳಿದ.

"ಮರ್ತಿದ್ರೆ ಇಲ್ಲಿಗೆ ಹಿಂದಕ್ಕೆ ಬರುತ್ತಿದ್ದನೇನೋ ಮಂಕು ಮುಂಡೇದೆ. ಚೆನ್ನಾಗಿದ್ದೀಯಾ, ನಿನ್ನ ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರೆಯೇ?"

"ನಿಮ್ದಯದಿಂದ ಎಲ್ಲರೂ ಚಂದಾಕವ್ರೆ ನನ್ನೊಡೆಯಾ? ಇನ್ನೇನು ಓಗಾಕಿಲ್ವಾ ಬುದ್ಧಿ?"

"ಹೋಗಬೇಕಪ್ಪಾ. ಮುಂದಿನವಾರ ಹೋಗಲೇ ಬೇಕಾಗಿದೆ."

ಹನುಮನ ಮುಖ ಸಪ್ಪೆಯಾದುದನ್ನು ಕಂಡು

"ಈ ಸಾರೆ ಸ್ವಲ್ಪ ದಿವಸ ಮಾತ್ರ ಹೋಗಿ ಹಿಂದಕ್ಕೆ ಬಂದು ಬಿಡುತ್ತೇನೆ ಹನುಮಾ. ಆ ಮೇಲೆ ಎಲ್ಲಿಗೂ ಹೋಗುವುದಿಲ್ಲ."

ವೇಣಕ್ಕ ಪ್ರಮಿಳೆಯ ಬಾಯಿಂದ ಮುಂಬಯಿಯ ವಿದ್ಯಮಾನಗಳನ್ನೆಲ್ಲಾ ಕೇಳಿ ಆಶ್ಚರ್ಯಚಕಿತಳಾದಳು.

"ನನಗೆ ವಾಸು ಇಷ್ಟಿಷ್ಟೊಂದು ದುಡ್ಡು ಕಳಿಸುತ್ತಾ ಇದ್ದ. ಎಲ್ಲಿಂದ ಬಂತು ಎಂದು ಆಶ್ಚರ್ಯಪಡುತ್ತಿದ್ದೆ. ಈಗ ಅರ್ಥವಾಯಿತು."

"ನಿಮ್ಮ ತಮ್ಮಂದಿರು ಬಹಳ ದೊಡ್ಡ ಯೋಜನೆ ಹೂಡಿದ್ದಾರೆ ವೇಣಕ್ಕ. ಲಕ್ಷಾಂತರ ರೂಪಾಯಿಗಳ ವಿಚಾರ."

"ಅಯ್ಯೋ ರಾಮ! ಅಷ್ಟು ದುಡ್ಡು ಎಲ್ಲಿಂದ ತರುತ್ತಾನೆಯೋ ತಾಯೀ· ಸಾಲ ಸೋಲ ಮಾಡಿಕೊಂಡು ಪುನಃ ತರಲೇಗೆ ಸಿಕ್ಕಿಕೊಳ್ಳುತ್ತಾನೋ ಏನೋ! ಹನುಮಂತನ ಹಾಗೆ ಸಮುದ್ರ ಲಂಘಿಸುವುದಕ್ಕೇ ಪ್ರಯತ್ನ."

"ಈ ಸಲ ನೀವು ಹೇಳಿದ ಹಾಗೆ ಸಮುದ್ರ ಲಂಘಿಸುವ ಪ್ರಯತ್ನವನ್ನೇ ಮಾಡಿದರು – ಸಫಲರೂ ಆದರು. ತರಲೇಗೆ ಸಿಕ್ಕಿಕೊಳ್ಳುವ ಪ್ರಮೇಯವಿಲ್ಲ."

"ಹಾಗಂದರೆ ವಾಸೂಗೆ ಚಿನ್ನದ ಗಣಿ ಸಿಕ್ಕಿದೆಯೇ ?"

"ಸಿಕ್ಕಿದೆಯೆಂದೇ ಹೇಳಬೇಕು. ಮುಂಬಯಿಯಲ್ಲಿ ಕೆಲವು ಗುಜರಾತಿಗಳು, ಪಾರ್ಸಿಗಳು, ಐರೋಪ್ಯರ ಪರಿಚಯವಾಗಿದೆ. ಅವರು ಆಶ್ರಮ ಕಟ್ಟುವುದಕ್ಕೆ ಸಹಾಯಮಾಡಲು ಮುಂದೆ ಬಂದಿದ್ದಾರೆ."

"ಆಶ್ರಮಕ್ಕೂ ದನತಿನ್ನುವ ಪರಂಗಿಯವರಿಗೂ ಏನೇ ಅಮ್ಮ ಸಂಬಂಧ."

ವೇಣಕ್ಕನ ಮೂಢ ತಿಳುವಳಿಕೆಯನ್ನು ನೋಡಿ ಪ್ರಮಿಳಾ ಮೃದುವಾಗಿ ನಕ್ಕು,

"ಪರಂಗಿಯವರೆಲ್ಲಾ ದನ ತಿನ್ನುವವರಲ್ಲ ವೇಣಕ್ಕ. ಅವರಲ್ಲಿಯೂ ಒಳ್ಳೆಯ ಬ್ರಾಹ್ಮಣರಿದ್ದಾರೆ. ಅವರೂ ಶುಚಿರ್ಭೂತರಾಗಿರುತ್ತಾರೆ. ನಮ್ಮ ಹಾಗೇ ದೇವರು ದಿಂಡಿರು ಎಂದರೆ ಭಕ್ತಿ ತಳೆದಿರುತ್ತಾರೆ."

"ಪ್ರಪಂಚವೇ ತಲೆಕೆಳಕಾಗುತ್ತಿದೆಯಮ್ಮ. ಹಿಂದಿನವರು ಹೇಳಿದ ಮಾತು ಸುಳ್ಳಲ್ಲ. ಕಲಿ ಪ್ರವೇಶಮಾಡಿದರೆ ಧರ್ಮ ಅಧರ್ಮವಾಗುತ್ತದೆ, ಅಧರ್ಮ ಧರ್ಮವಾಗುತ್ತದೆ. ಆಚಾರ ಅನಾಚಾರವಾಗುತ್ತದೆ ಅನಾಚಾರ

ಆಚಾರವಾಗುತ್ತದೆ. ಹರಿ ಪ್ರಸಾದ ತಿನ್ನುವವರು ದನ ತಿನ್ನುತ್ತಾರೆ, ದನ ತಿನ್ನುವವರು ಹರಿ ಪ್ರಸಾದ ತಿನ್ನುತ್ತಾರೆ. ಇನ್ನೂ ಈ ಹಾಳು ಕಣ್ಣುಗಳಿಂದ ಏನೇನು ನೋಡಬೇಕಾಗಿದೆಯೋ ?"

"ಈಗ ಸುಮಾರು ನಲವತ್ತು ವರ್ಷಗಳ ಕೆಳಗೆ ಇಂಗ್ಲೆಂಡ್, ಫ್ರಾನ್ಸ್, ಅಮೇರಿಕಾ ಮೊದಲಾದ ಪರಂಗಿಯವರ ದೇಶಗಳಿಗೆ ನಮ್ಮ ದೇಶದಿಂದ ಸ್ವಾಮಿ ವಿವೇಕಾನಂದರೆಂಬ ಒಬ್ಬ ಸನ್ಯಾಸಿ ಹೋದರು."

"ದನದ ಮಾಂಸದ ರುಚಿ ಸನ್ಯಾಸಿ ನಾಲಗೆಗೆ ಅಂಟಿತ್ತೇನೋ ?"

"ಅವರು ಅಂಥ ಸನ್ಯಾಸಿಗಳಲ್ಲ ವೇಣಕ್ಕ. ಮಂತ್ರಾಲಯದ ಶ್ರೀ ರಾಘವೇಂದ್ರ ಗುರುಗಳು ಹೇಗೋ ಹಾಗೆ."

"ಸರಿ, ಆ ಸನ್ಯಾಸಿ ಏನುಮಾಡಿದ ?"

"ಅವರು ಪರಂಗಿಯವರಿಗೆ ಧರ್ಮಬೋಧೆ ಮಾಡಿದರು. ಗೀತೆ, ಉಪನಿಷತ್ತುಗಳನ್ನು ವಿವರಿಸಿ ಅವರನ್ನು ಭೋಗಮಾರ್ಗದಿಂದ ತ್ಯಾಗ ಮಾರ್ಗದ ಕಡೆಗೆ ತಿರುಗಿಸಲೆತ್ನಿಸಿದರು."

"ಹೊಲೆಯರ ಕಿವಿಯ ಮೇಲೆ ಗೀತೆ, ಉಪನಿಷತ್ತು ಏಕೆ ಹಾಕಿದ ನಮ್ಮ ಆ ಸನ್ಯಾಸಿ."

"ಮಾಂಸ ಮಾರುತ್ತಿದ್ದ ಧರ್ಮ ವ್ಯಾಧನನ್ನು ಬ್ರಹ್ಮಜ್ಞಾನಿಯೆಂದು ಮಹಾಭಾರತವೇ ಒಪ್ಪಿಕೊಂಡಿಲ್ಲವೇ ? ಆವನು ತನ್ನ ಮಗಳು ಅರ್ಜುನಿಕಿ ಯನ್ನು ಮತಂಗಮುನಿಯ ಮಗನಾದ ಪ್ರಸನ್ನನಿಗೆ ಕೊಟ್ಟು ಮದುವೆ ಮಾಡಿದ್ದನಂತೆ. ಒಂದು ದಿನ ಮತಂಗಮುನಿಯ ಹೆಂಡತಿ ಸೊಸೆಯ ಮೇಲೆ ಕೋಪಿಸಿಕೊಂಡು, 'ನೀನು ಮಾಂಸ ಮಾರುವವನ ಮಗಳು' ಎಂದು ನಿಂದಿಸಿದಳಂತೆ. ಮಗಳು ತಂದೆಗೆ ಈ ಸುದ್ದಿ ಮುಟ್ಟಿಸಿದಳು. ಧರ್ಮವ್ಯಾಧ ಮತಂಗಮುನಿಯ ಆಶ್ರಮಕ್ಕೆ ಬಂದ. ಅವನನ್ನು ಊಟಕ್ಕೆಬ್ಬಿಸಿದರು. ವ್ಯಾಧ ಕೇಳಿದನಂತೆ 'ನೀವು ನನಗೆ ನೀಡುವ ಅನ್ನ ಯಾವದು' ಎಂದು. ಮತಂಗಮುನಿಯ ಹೆಂಡತಿ ಒಂದು ಮೊರದಲ್ಲಿ ಅಕ್ಕಿ, ಗೋಧಿ, ತೊಗರಿ ತಂದು ತೋರಿಸಿದಳಂತೆ. ಧರ್ಮವ್ಯಾಧ ಕೋಪಿಸಿಕೊಂಡು 'ನಾನು ವಾರ ಕ್ಕೊಂದು ಪ್ರಾಣಿಯನ್ನು ಕೊಂದು, ಅದರ ಮಾಂಸ ಮಾರಿ ಹೊಟ್ಟೆ ಹೊರೆಯುತ್ತೇನೆ. ನೀವು ನಿತ್ಯ ಸಾವಿರಾರು ಪ್ರಾಣಿಗಳನ್ನು ಕೊಂದು

ತಿನ್ನುತ್ತಿರುವಿರಿ' ಎಂದು ತಿರಸ್ಕರಿಸಿ ಹೊರಟುಹೋದನಂತೆ. ತನ್ನ ತಪ್ಪನ್ನು ತಿಳಿದುಕೊಂಡ ಮತಂಗಮುನಿ ಪತ್ನಿ ಅಂದಿನಿಂದ ಸೊಸೆಯನ್ನು ನಿಂದಿಸು ವುದನ್ನು ಬಿಟ್ಟುಬಿಟ್ಟಳಂತೆ. ಹಾಗೆ ಅನೇಕ ಸಲ ಆಚಾರ ವಿಚಾರಗಳ ಸ್ವರೂಪ ಬದಲಾಯಿಸುವುದುಂಟು ವೇಣಕ್ಕ. ಪರಂಗಿಯವರ ದೇಶ ಬಹಳ ಚಳಿಯ ದೇಶ. ಅವರು ಮಾಂಸಾಹಾರ ಮಾಡದಿದ್ದರೆ ಅನೇಕ ರೋಗಗಳಿ ಗೀಡಾಗಿ ಸತ್ತು ಹೋಗುತ್ತಾರೆ – ನಮ್ಮದು ಬಿಸಿಲು ದೇಶ. ನಮಗೆ ಮಾಂಸಾ ಹಾರದ ಅಗತ್ಯವಿಲ್ಲ."

"ನೀನು ಹೇಳಿದ ಸ್ವಾಮಿ ಅಲ್ಲಿಗೆ ಹೋಗಿ ಅವರಿಗೆಲ್ಲಾ ಜನಿವಾರ ಹಾಕಿಸಿ ಬಂದನೋ?"

"ಜನಿವಾರ ಹಾಕಿಸಲಿಲ್ಲ. ಜನಿವಾರದ ಮಹತ್ವ – ಅಂದರೆ ಬ್ರಹ್ಮ ಜ್ಞಾನದ ಮಹತ್ವ ತಿಳಿಸಿಬಂದರು. ಅವರ ಸದ್ಪ್ರಯತ್ನದ ಫಲವಾಗಿ ಅನೇಕ ಐರೋಪ್ಯರು ನಮ್ಮ ದೇಶಕ್ಕೆ ಜ್ಞಾನಾರ್ಥಿಗಳಾಗಿ ಬಂದರು. ಇಲ್ಲಿಯೇ ಕೆಲವರು ನೆಲಸಿ ಬ್ರಹ್ಮೋಪಾಸಕರಾದರು. ಹಾಗೆ ಬಂದು ನೆಲಸಿರುವ ಮಿಸ್. ರಾಬಿನ್ಸನ್, ಮೇಜರ್ ಸ್ಕಿನ್ನರ್ ನಮ್ಮ ಆಶ್ರಮಸ್ಥಾಪನೆಗೆ ಕೈತುಂಬ ಸಹಾಯಮಾಡಿದ್ದಾರೆ."

"ಇವೇನೋಮ್ಮ. ನನಗೊಂದು ಅರ್ಥವಾಗುವುದಿಲ್ಲ. ಪರಂಗಿ ಯವರೆಲ್ಲಾ ಸನ್ಯಾಸ ತೆಗೆದುಕೊಳ್ಳುವುದು ಎಂದರೆ ಕಲಿಮಹಿಮೆ ಹೆಚ್ಚಿ ತೂಂತಾಲೇ ಅರ್ಥ. ಎಷ್ಟಾದರೂ ನಾನು ಹಳೆಯ ಕಾಲದವಳು. ತೀರ ವರ್ಣಸಂಕರವಾಗಿ ಹೊಲೆ ಹದಿನೆಂಟು ಜಾತಿಗಳೂ ಒಂದಾಗುವ ಕಾಲ ದೊಳಗಾಗಿ ಶ್ರೀಹರಿ ನನ್ನ ಕಣ್ಣುಮುಚ್ಚಿಸಿದರೆ ಸಾಕು."

ಹೊತ್ತು ಬಹಳವಾಗಿತ್ತು. ಪ್ರಮೀಳಾ ಆಕಳಿಸುತ್ತಿದ್ದುದನ್ನು ಕಂಡು ವೇಣಕ್ಕ

"ಮಲಗಿಕೋ ಹೋಗಮ್ಮ. ದಿನವೂ ಪ್ರಯಾಣ ಮಾಡಿ ಬಳಲಿದ್ದೀ"

ಎಂದು ಹೇಳಿದಳು.

ಗಾಢನಿದ್ರೆ ವಾಸು ಆಯಾಸವನ್ನು ಪರಿಹರಿಸಿತ್ತು. ನಿದ್ರಾರಮಣಿಯ ಮೋಹಜಾಲದಲ್ಲಿ ಸಿಕ್ಕು ನಲಿಯುತ್ತಿದ್ದ ತನ್ನ ರಮಣನನ್ನು ಪ್ರಮೀಳಾ ಉತ್ಕಂಠವಾದ ಹೃದಯದಿಂದ ನೋಡಿದಳು.

ಪ್ರವಿಶಾಳಾ ದಿಂಬಿನ ಮೇಲೆ ತಲೆಯಿಟ್ಟಕೂಡಲೆ ಅವಳಿಗೂ ಗಾಢವಾದ ನಿದ್ರೆಹತ್ತಿತು.

ಮಾರನೆಯ ಬೆಳಿಗ್ಗೆ ಸ್ನಾನ, ಉಪಾಹಾರ ಮುಗಿದ ಕೂಡಲೆ ವಾಸು, ರಾಮನಾಥಯ್ಯನನ್ನು ಕರೆದುಕೊಂಡು ಬರುವಂತೆ ರಾಮಸ್ವಾಮಿಗೆ ತಿಳಿಸಿದ.

ವಾಸುವನ್ನು ಕಂಡು ರಾಮನಾಥಯ್ಯನಿಗೆ ಆಶ್ಚರ್ಯ, ಸಂತೋಷ ಗಳೆರಡೂ ಒಮ್ಮೆಲೇ ಆದವು. ಕ್ಷೇಮ ಸಮಾಚಾರ ಮುಗಿದ ಮೇಲೆ ರಾಮನಾಥಯ್ಯ

"ಅಷ್ಟು ಬೇಗ ಹಣಕಳಿಸುವುದಕ್ಕೆ ಏನವಸರವಾಗಿತ್ತು ವಾಸುದೇವ ರಾಯರೇ."

"ಆಗ ಕೈಯಲ್ಲಿ ಹಣವಿತ್ತು ಕಳಿಸಿಬಿಟ್ಟೆ. ಎಲ್ಲಾ ಕಳೆದುಕೊಂಡು, ನಾನು ನಿರ್ವಿಣ್ಣನಾಗಿ ತಲೆಯ ಮೇಲೆ ಕೈಹೊತ್ತು ಕುಳಿತಾಗ ನೀವು ಮಾಡಿದ ಉಪಕಾರ ಹೇಗೆ ಮರೆಯಬಲ್ಲೆ ರಾಮನಾಥಯ್ಯ. ನೀವು ಒಳ್ಳೆಯ ಹೊತ್ತಿನಲ್ಲಿ – ಒಳ್ಳೆಯ ಮನಸ್ಸಿನಿಂದ ಹಣಕೊಟ್ಟಿರಿ. ಈಗ ನೋಡಿ"

ಎಂದು ತನ್ನ ಕಿಸೆಯಲ್ಲಿದ್ದ ಒಂದು ಲಕ್ಷ ರೂಪಾಯಿಗಳ ಚೆಕ್ ತೋರಿಸಿದ. ರಾಮನಾಥಯ್ಯನಿಗೆ ಇದೇನು ಸತ್ಯವೋ, ಕನಸೋ ಎನಿಸಿತು.

"ನಿಮ್ಮಿಂದ ನನಗೊಂದು ಉಪಕಾರವಾಗಬೇಕಾಗಿದೆ ರಾಮನಾಥಯ್ಯ."

"ಹೇಳಿ ಸ್ವಾಮಿ."

"ರಾಮಗಿರಿಯಲ್ಲಿ ನಮ್ಮದು ಸ್ವಲ್ಪ ಭೂಮಿಯಿದೆ. ಅಲ್ಲಿ ಒಂದು ಆಶ್ರಮ ಸ್ಥಾಪಿಸಲು ನಿರ್ಧರಿಸಲಾಗಿದೆ. ಆಶ್ರಮದ ಕಟ್ಟಡವಾಗಬೇಕು. ನೀವು ಒಳ್ಳೆಯ ಇಂಜಿನಿಯರ್ ಪರಿಚಯಮಾಡಿಸಿ ಅವರಿಗೆ ಈ ಕೆಲಸವಹಿಸಿ ಕೊಟ್ಟು, ನೀವೂ ಉಸ್ತುವಾರಿ ನೋಡಿಕೊಳ್ಳಬೇಕು. ನಾನು ಪುನಃ– ಕೆಲವು ದಿವಸ ಮುಂಬಯಿಗೆ ಹೋಗಬೇಕಾಗಿದೆ. ರಾಮಸ್ವಾಮಿ ಇಲ್ಲೇ ಇರುತ್ತಾನೆ. ಕಟ್ಟಡ ಸಿದ್ಧವಾದ ಕೂಡಲೆ ನಾನೂ ಬಂದು ಬಿಡುತ್ತೇನೆ."

"ಅದಕ್ಕೆ ಪ್ಲ್ಯಾನ್ ಮಾಡಿಸಬೇಕು."

"ಪ್ಲ್ಯಾನೂ ಎಸ್ಟಿಮೇಟೂ ಎಲ್ಲಾ ಸಿದ್ಧವಾಗಿದೆ. ಮುಂಬಯಿಯ ಪ್ರಸಿದ್ಧ 'ಹಾರ್ಸ್ಟ್ ಮತ್ತು ಬೆಂಚಲೀ' ಕಂಪೆನಿಯವರು ಸಿದ್ಧಗೊಳಿಸಿದ್ದಾರೆ.'

ವಾಸುಕೊಟ್ಟ ಪ್ಲ್ಯಾನನ್ನು ರಾಮನಾಥಯ್ಯ ಸಾವಕಾಶವಾಗಿ ಪರಾಮರ್ಶಿಸಿ

"ಬಹಳ ದೊಡ್ಡ ಯೋಜನೆ. ಮೂರು ನಾಲ್ಕು ಲಕ್ಷ ರೂಪಾಯಿ ಗಳಾದರೂ ಬೇಕಾಗಬಹುದು"

"ದುಡ್ಡಿನ ವಿಷಯ ಯೋಚನೆ ಮಾಡಬೇಕಾಗಿಲ್ಲ. ಅದಕ್ಕೆ ದೇವರು ದಾರಿ ತೋರಿಸಿದ್ದಾನೆ. ಮೊದಲು ನಾವು ವಾಸಿಸುವ ಕಟ್ಟಡ, ಅದರ ಪಕ್ಕದಲ್ಲಿ ಅಡಿಗೆಯ ಮನೆ, ಸ್ನಾನ ಗೃಹ, ಭೋಜನ ಗೃಹ; ಸಾಧಾರಣ ಅತಿಥಿ ಗೃಹ ಮತ್ತು ಯೂರೋಪಿಯನ್ ಅತಿಥಿ ಗೃಹ ಆದರೆ ನಾವು ವಾಸಕ್ಕೆ ಹೋಗಿಬಿಡಬಹುದು. ಮುಂದೆ ಅಲ್ಲಿಯೇ ಇದ್ದುಕೊಂಡು ಉಳಿದ ಕಟ್ಟಡ ಗಳನ್ನು ಕಟ್ಟಿಸಿಕೊಂಡರೆ ಆಯಿತು."

"ಬಿಲ್ಡಿಂಗ್ ಕಂಟ್ರ್ಯಾಕ್ಟರ್ ಬೈರಪ್ಪ ನಿಮಗೆ ಗುರುತೇನು ?"

"ಕೇಳಿದ್ದೇನೆ. ವ್ಯಕ್ತಿ ಪರಿಚಯವಿಲ್ಲ. ಬಹಳ ದೊಡ್ಡ ಕಂಟ್ರ್ಯಾಕ್ಟ್ ಗಳನ್ನು ಮಾಡಿದ್ದಾರೆಂದು ಮಾತ್ರ ಗೊತ್ತು."

"ವ್ಯಕ್ತಿ ಬಹಳ ಒಳ್ಳೆಯವನು. ಕೇವಲ ಬಡತನದಿಂದ ಮುಂದಕ್ಕೆ ಬಂದಿರುವುದರಿಂದ ದುರಾಶೆಯಿಲ್ಲ. ಇಪ್ಪತ್ತು ವರ್ಷಗಳ ಕೆಳಗೆ ಬೈರಪ್ಪ ದಿನಕ್ಕೆ ಒಂದೂವರೆ ರೂಪಾಯಿ ಕೂಲಿ ತೆಗೆದುಕೊಂಡು ಗಾರೆ ಕೆಲಸ ಮಾಡುತ್ತಿದ್ದ. ಇವತ್ತು ನೋಡಿ ಐದಾರು ಲಕ್ಷ ರೂಪಾಯಿ ಸ್ಥಿತಿವಂತ; ಒಂದು ಲಕ್ಷದ ವರೆಗೆ ದಾನ ಧರ್ಮ ಮಾಡಿದ್ದಾನೆ. ದೇಹಿ ಎನ್ನುವವರಿಗೆ ನಾಸ್ತಿ ಎನ್ನುವುದಿಲ್ಲ."

"ನೀವು ಒಪ್ಪಿ ಆಗಬಹುದೆಂದರೆ ನನಗೇನೂ ಅಭ್ಯಂತರವಿಲ್ಲ. ಆದರೆ ಕೆಲಸ ಮಾತ್ರ ಬಹಳ ಜೇಗ ಆಗಬೇಕಾಯಿತು. ನಾವು ಆದಷ್ಟು ಬೇಗ ವಾಸಕ್ಕೆ ಬಂದು ಆಶ್ರಮದ ಕೆಲಸ ಆರಂಭಿಸಬೇಕಾಗಿದೆ."

"ಬನ್ನಿ – ಅವನನ್ನೇ ಕಂಡು ಎಲ್ಲಾ ಮಾತನಾಡಿಕೊಂಡು ಬರೋಣ."

ನರಸಿಂಹರಾಜಾ ರಸ್ತೆಯಲ್ಲಿದ್ದ ಬೈರಪ್ಪನ ಕಛೇರಿಗೆ ವಾಸು, ರಾಮನಾಥಯ್ಯ, ರಾಮಸ್ವಾಮಿ ಆಶ್ರಮದ ಪ್ಲಾನಿನೊಂದಿಗೆ ಹೋದರು. ಬೈರಪ್ಪ ಎಲ್ಲವನ್ನೂ ಪರಿಶೀಲಿಸಿ

"ಸ್ಥಳ ನೋಡಿಬರುವುದು ಒಳ್ಳೆಯದು ಸರ್. ಅಲ್ಲಿನ ಸ್ಥಿತಿಗತಿ ನೋಡಿದ ಮೇಲೆ ನಿರ್ಧರಿಸುವುದು ಸೂಕ್ತ"

"ಮಧ್ಯಾಹ್ನ ಮೂರು ಗಂಟೆಗೆ ಹೋಗೋಣವೇ ?"

"ಆಗಬಹುದು"

ಎಂದು ಬೈರಪ್ಪ ಒಪ್ಪಿಕೊಂಡ.

ಮೂರು ಗಂಟೆಯ ಹೊತ್ತಿಗೆ ರಾಮನಾಥಯ್ಯ ಬೈರಪ್ಪನನ್ನು ಪ್ರಮೀಳನ ಮನೆಗೆ ಕರೆದುಕೊಂಡು ಬರುವುದೆಂದೂ ಅಲ್ಲಿಂದ ಎಲ್ಲರೂ ಕೂಡಿ ರಾಮಗಿರಿಗೆ ಹೋಗುವುದೆಂದು ನಿಶ್ಚಯವಾಯಿತು.

ಮೂರು ಗಂಟೆಯ ಸಮಯಕ್ಕೆ ವಾಸೂ, ಪ್ರಮೀಳಾ, ರಾಮಸ್ವಾಮಿ ಹೊರಡಲು ಸಿದ್ಧರಾದರು.

ರಾಮನಾಥಯ್ಯ, ಬೈರಪ್ಪ, ರಾಮಸ್ವಾಮಿ ಬೈರಪ್ಪನ ಕಾರಿನಲ್ಲಿ ಹೊರಟರು ; ವಾಸೂ ಪ್ರಮೀಳೆ ತಮ್ಮ ಕಾರಿನಲ್ಲಿ ಹೊರಟರು.

ರಾಮಗಿರಿ ತಲುಪಿದೊಡನೆಯೇ ತನ್ನ ರೈತ – ಹೊನ್ನೇಗೌಡನನ್ನು ಹುಡುಕಿ ಕರೆದುಕೊಂಡು ಬರುವಂತೆ ಪ್ರಮೀಳೆ ಜಾನ್‌ಗೆ ಹೇಳಿದಳು.

ಜಮೀನಿನ ಬಳಿ ಹೋಗುವುದಕ್ಕೆ ಮುಂಚೆ ಬೈರಪ್ಪನಿಗೆ ಪ್ರಮೀಳೆ ಸ್ಥಳ ಪರಿಚಯ ಮಾಡಿಕೊಟ್ಟಳು.

ಬೆಂಗಳೂರು – ಮೈಸೂರು ರಾಜಮಾರ್ಗದಲ್ಲಿಯೇ ರಾಮಗಿರಿ ಇದ್ದಿತು. ರೈಲ್ವೆ ಸ್ಟೇಷನ್ನಿನ ಹಿಂಬದಿಯಲ್ಲಿ ರಾಜಮಾರ್ಗ. ರಾಜಮಾರ್ಗಕ್ಕೆ ಹೊಂದಿಕೊಂಡೇ ರಾಮಗಿರಿ ಊರು. ಸ್ಟೇಷನ್ನಿನಿಂದ ಎರಡು ಮೈಲಿ ಮೇಲಕ್ಕೆ ಹೋದರೆ ಎಡಕ್ಕೆ ಒಂದು ಸೀಳುದಾರಿ ಒಡೆಯುತ್ತಿತ್ತು. ಆ ಸ್ಥಳಕ್ಕೆ ಸುಮಾರು ಒಂದು ಮೈಲಿ ದೂರದಲ್ಲಿ ಪ್ರಮೀಳೆಯ ಜಮೀನಿತ್ತು. ಸೀಳು ದಾರಿಯ ಬಲಭಾಗದಲ್ಲಿ ರಾಮಕುಂಡವೆಂಬ ಕೆರೆ. ಸುತ್ತಮುತ್ತಲಿನ ಗದ್ದೆಗಳಿಗೆ ರಾಮಕುಂಡದ ನೀರೇ ಆಧಾರ. ಸೀತಾರಾಮರು ವನವಾಸ ಕಾಲದಲ್ಲಿ

ರಾಮಕುಂಡದಲ್ಲಿ ಸ್ನಾನ ಮಾಡಿದರೆಂದೂ, ರಾಮಗಿರಿಯಲ್ಲಿ ವಾಸಮಾಡಿದ ರೆಂದೂ ಸ್ಥಳ ಪುರಾಣ ಹೇಳುತ್ತಿತ್ತು.

ಸ್ಥಳವನ್ನು ಸೂಕ್ಷ್ಮವಾಗಿ ಅವಲೋಕಿಸಿ ಬೈರಪ್ಪ.

"ಎಲೆಕ್ಟ್ರಿಕ್ ಮೇನ್‌ಲೈನು ರಾಜಮಾರ್ಗದಲ್ಲಿದೆ. ಅಲ್ಲಿಂದ ನಿಮ್ಮ ಸ್ಥಳಕ್ಕೆ ಒಂದು ಮೈಲಿಯಾಗುತ್ತದೆ. ಈ ಒಂದು ಮೈಲಿಯುದ್ದಕ್ಕೂ ಎಲೆಕ್ಟ್ರಿಕ್ ಲೈನು ಎಳೆದು ಕೊಡುವಂತೆ ಸರ್ಕಾರವನ್ನು ಪ್ರಾರ್ಥಿಸಬೇಕು."

"ನಾನು ಮುಂಬಯಿಗೆ ಹೊರಡುವುದಕ್ಕೆ ಮುಂಚೆ ಮಂತ್ರಿಗಳನ್ನೂ ಚೀಫ್ ಎಲೆಕ್ಟ್ರಿಕ್ ಸೂಪರಿಂಟೆಂಡೆಂಟರನ್ನೂ ಕಂಡು ಹೋಗುತ್ತೇನೆ. ಉಳಿದ ಕೆಲಸ ನೀವೂ ರಾಮಸ್ವಾಮಿ ಮಾಡಬೇಕು."

"ಲೈನ್ ಹಾಕುವ ಪೂರ್ಣ ಖರ್ಚನ್ನೂ ಸರ್ಕಾರ ವಹಿಸುತ್ತದೋ ಇಲ್ಲವೋ ?"

"ಅವರು ವಹಿಸಿಕೊಳ್ಳದಿದ್ದರೆ ನಾವು ವಹಿಸಿಕೊಳ್ಳೋಣ."

"ಜಮೀನಿನಲ್ಲಿ ಭಾವಿಯಿದೆಯೇ ?"

"ಸೊಗಸಾದ ಸಿಹಿ ನೀರು ಭಾವಿ ಇದೆ."

"ಒಂದು ಟ್ಯಾಂಕ್ ಕಟ್ಟಿ ನೀರಿನ ಸರಪರಾಜು ಮಾಡಿಕೊಳ್ಳಬೇಕು."

"ನೀರಿನದು ಬಹಳ ಮುಖ್ಯ ವಿಷಯ ಬೈರಪ್ಪನವರೇ. ಆಶ್ರಮಕ್ಕೆ ನೂರಾರು ಜನ ಬರುತ್ತಾರೆ. ಅವರ ಅನುಕೂಲ್ಯ ನೋಡಿಕೊಳ್ಳಬೇಕಾದುದು ನಮ್ಮ ಕರ್ತವ್ಯ."

"ಮೊದಲು ಇಟ್ಟಿಗೆ ಗೂಡು ಹಾಕಿಸಬೇಕು. ನಿಮ್ಮ ಕಟ್ಟಡದ ಕೆಲಸ ಮುಗಿಯುವವರೆಗೆ ನಾನು ಇಲ್ಲಿಯೇ ಬೀಡು ಮಾಡಬೇಕಾಗುತ್ತದೆ."

"ನೀನು ಏನಾದರೂ ಮಾಡು ಬೈರೂ. ಅವರ ಕಟ್ಟಡ ಬೇಗ ಕಟ್ಟಿಸಿ, ದೀಪ, ನೀರು ವ್ಯವಸ್ಥೆಮಾಡುವುದು ನಿನ್ನ ಜವಾಬುದಾರಿ"

ಎಂದು ರಾಮನಾಥಯ್ಯ ಹೇಳಿದರು.

ಜಾನ್ ಜತೆಯಲ್ಲಿ ಬಂದ ಹೊನ್ನೇಗೌಡ, ಅಮ್ಮವರಿಗೆ ಅಡ್ಡಬಿದ್ದು ಅವರ ಯೋಗಕ್ಷೇಮ ವಿಚಾರಿಸಿದ. ಪ್ರಮೀಳಾ ಸೂಕ್ಷ್ಮವಾಗಿ ಆಶ್ರಮದ ವಿಷಯ ಅವನಿಗೆ ತಿಳಿಸಿ, ಜಮೀನು ತೋರಿಸುವಂತೆ ಹೇಳಿದಳು.

ಹೊನ್ನೇಗೌಡನನ್ನೂ ಕಾರಿನಲ್ಲಿ ಕೂಡಿಸಿಕೊಂಡು ಎಲ್ಲರೂ ಜಮೀನಿನ ಬಳಿ ಹೊರಟರು.

ಕಾರಿನಿಂದಿಳಿದೊಡನೆಯೇ ವಾಸು, ಬೈರಪ್ಪನಿಗೆ

"ಈ ರಸ್ತೆ ಸೊಗಸಾಗಿ ಮಾಡಿಸಬೇಕು ಬೈರಪ್ಪನವರೇ – ಸೀಮೆಂಟ್ ಹಾಕಿಸಿ, ರಸ್ತೆಯುದ್ದಕ್ಕೂ ದೀಪಸ್ತಂಭಗಳನ್ನಿಡಿಸಬೇಕು."

ಪ್ರಮೀಳೆಯ ಜಮೀನಿನ ಚಕ್ಕುಬಂದಿಯನ್ನು ಹೊನ್ನೇಗೌಡ ವಿವರಿಸಿದ.

ಬೈರಪ್ಪ ಕೈಗೆ ಒಂದು ಒಣಗಿದ ರೆಂಬೆ ತೆಗೆದುಕೊಂಡು, ಪ್ಲ್ಯಾನಿನಂತೆ ವಾಸದ ಮನೆ, ಕಛೇರಿ, ಪಾಕಶಾಲೆ, ಸ್ನಾನಗೃಹ, ಭೋಜನಶಾಲೆ, ಅತಿಥಿ ಗೃಹಗಳ ನಕ್ಷೆಯನ್ನು ಗುರುತಿಸಿದ.

"ಒಟ್ಟು ಕಟ್ಟಡಕ್ಕೆ ಬೇಕಾಗುವಷ್ಟು ಸ್ಥಳ ನಿರ್ದೆಶಿಸಿಕೊಂಡು ಮೊದಲು ಕಾಂಪೌಂಡು ಹಾಕಿಸಬೇಕು. ಗೇಟಿಗೆ ಭವ್ಯವಾದ ಕಂಬಗಳನ್ನು ಮಾಡಿಸಿ, ಅಂದವಾದ ಕಬ್ಬಿಣದ ಬಾಗಿಲು ಮಾಡಿಸಬೇಕು."

"ಆಗಬಹುದು."

"ನಮ್ಮ ವಾಸಗೃಹಕ್ಕೂ ಮತ್ತು ಪಾಕಶಾಲೆಗೂ ಮಧ್ಯೆ ಸ್ವಲ್ಪ ಸ್ಥಳ ಬಿಟ್ಟು – ಅಲ್ಲಿ ಒಂದು ಕದ ಹಾಕಿಸಬೇಕು."

ಬೈರಪ್ಪ-ಕಟ್ಟಡದ ಅಂದಾಜುಮಾಡುತ್ತಾ

"ಕಟ್ಟಡ ನೇರವಾಗಿ ರಸ್ತೆಗೆದುರಾಗಿರಬೇಕೋ – ಪಕ್ಕದಲ್ಲಿರಲೋ ?"

"ಎದುರಿಗೇ ಇರಲಿ! ಬೈರಪ್ಪನವರೇ, ಬೆಂಗಳೂರು, ಮೈಸೂರು ರಾಜ ಮಾರ್ಗಕ್ಕೆ. ನೀವು ಹೇಗೂ ಸಿಮೆಂಟ್ ಕಾನ್‌ಕ್ರೀಟ್ ರೋಡ್ ಮಾಡಿಸುತ್ತೀರಿ. ಅಲ್ಲಿ ನಿಂತುಕೊಂಡರೆ ಆಶ್ರಮಕಾಣಬೇಕು. ಮುಂದಕ್ಕೆ ಗೇಟಿಗೆದುರಾಗಿ ದೇವಸ್ಥಾನ ಬರುವುದರಿಂದ, ರಸ್ತೆಯಲ್ಲಿ ಹೋಗುವವರಿಗೂ ದೇವರ ದರ್ಶನವಾಗುತ್ತದೆ."

"ಹೌದು. ಕಟ್ಟಡಕ್ಕೂ ಒಳ್ಳೆಯ ನೋಟ ಸಿಕ್ಕುತ್ತದೆ."

"ಎಲ್ಲಾ ಕಟ್ಟಡಗಳಿಗೂ ತಾರಸಿಮಾಡಿಸಿ. ಮುಂದಕ್ಕೆ ನಾವು ಮಹಡಿ ಕಟ್ಟುವುದಕ್ಕೆ ಅನುಕೂಲವಾಗುತ್ತದೆ."

ಬೈರಪ್ಪನಿಗೆ ಹೊನ್ನೇಗೌಡನ ಪರಿಚಯ ಮಾಡಿಕೊಡುತ್ತಾ ಪ್ರಮೀಳೆ

"ಇವರು ಇಲ್ಲೇ ಬಂದು ನಿಂತುಕೊಂಡು ಕಟ್ಟಡ ಕಟ್ಟಿಸುತ್ತಾರಪ್ಪಾ. ನೀವೆಲ್ಲಾ ಅವರಿಗೆ ಬೇಕಾದ ಸಹಾಯಮಾಡಿ."

ಎಂದಳು. ಬೈರಪ್ಪ ಗೌಡನನ್ನು ಕುರಿತು,

"ಕೂಲಿ ಮಾಡುತ್ತೀರೇನಯ್ಯಾ."

"ಮಾಡ್ತೀವಿ ಬುದ್ದಿ."

"ಎಷ್ಟು ಜನ ಇದ್ದೀರಿ."

"ಐವತ್ತು ಅರವತ್ತು ಆಳು ಮಣ್ಕೆಲಸಕ್ಕೆ ಬತ್ತೀವಿ ಬುದ್ದಿ"

ಎಂದು ಹೇಳಿದ.

ಒಳ್ಳೆಯ ದಿನ ನೋಡಿ ಗುದ್ದಲಿ ಪೂಜೆ ಮಾಡುವುದೆಂದು ನಿಶ್ಚಯಿಸಿಕೊಂಡು ಎಲ್ಲರಿಗೂ ಹಿಂದಿರುಗಿದರು.

ಬೈರಪ್ಪ ಹೊರಡುವುದಕ್ಕೆ ಮೊದಲು ವಾಸು

"ಮರೆತಿದ್ದೆ ಬೈರಪ್ಪನವರೇ – ಆಶ್ರಮದ ಒಂದು ಪಕ್ಕಕ್ಕೆ ದನದ ಕೊಟ್ಟಿಗೆ ಮತ್ತು ಐದು ಕಾರುಗಳಿಗೆ ಆಗುವ ಗ್ಯಾರೇಜ್ ಹಾಕಬೇಕು."

ಎಂದು ಸೂಚಿಸಿದ.

ಮಾರನೆಯ ದಿನ ಲಾಯರ ಸಮ್ಮುಖದಲ್ಲಿ ವಾಸುವಿಗೂ, ಬೈರಪ್ಪನಿಗೂ ಕರಾರಾಯಿತು. ವಾಸು 'ಮೈಸೂರು ಬ್ಯಾಂಕಿ'ನಲ್ಲಿ ಅಕೌಂಟ್ ತೆಗೆದು ಬೈರಪ್ಪನಿಗೆ ಮುಂಗಡವಾಗಿ ಇಪ್ಪತ್ತೈದು ಸಾವಿರ ರೂಪಾಯಿಗಳನ್ನಿತ್ತ. ಅಂದೇ ಆಶ್ರಮದ ಹೆಸರಿನಲ್ಲಿ ಮತ್ತೊಂದು ಅಕೌಂಟ್ ತೆಗೆದು, ಇಪ್ಪತ್ತೈದು ಸಾವಿರ ರೂಪಾಯಿಗಳ ಠೇವಣಿ ಇಟ್ಟು, ಅದನ್ನು ವ್ಯವಹರಿಸುವ ಅಧಿಕಾರವನ್ನು ರಾಮಸ್ವಾಮಿಗೆ ಕೊಟ್ಟ.

ಬೈರಪ್ಪ ಕೂಡಲೆ ಕೆಲಸವನ್ನಾರಂಭಿಸಿದ. ಮಂತ್ರಿಗಳ ಬಳಿಗೆ ವಾಸುವನ್ನು ಕರೆದುಕೊಂಡು ಹೋದ. ಆಶ್ರಮದ ಪವಿತ್ರ ಉದ್ದೇಶಗಳನ್ನು ಕೇಳಿದ ಮಾನ್ಯ ಮಂತ್ರಿಗಳು ಸರ್ಕಾರದ ಖರ್ಚಿನಲ್ಲಿಯೇ ಪವರ್ ಲೈನ್ ಎಳೆಸಿಕೊಡುವುದಾಗಿ ವಾಗ್ದಾನಮಾಡಿದರು.

ವಾಸು ಬೆಂಗಳೂರಿಗೆ ಬಂದ ಕೆಲಸ ಮುಗಿದಂತೆ ಆಗಿತ್ತು. ಗುದ್ದಲಿ ಪೂಜೆಗೆ ಮೂರು ದಿವಸಗಳವರೆಗೆ ಯೋಗ್ಯ ಲಗ್ನವಿರಲಿಲ್ಲ.

ಲಗ್ನಕೂಡಿದ ದಿವಸ ಎಲ್ಲರೂ ರಾಮಗಿರಿಗೆ ಹೋಗಿ ಗುದ್ದಲಿಪೂಜೆ ಮುಗಿಸಿದರು. ಅಂದು ಒಕ್ಕಲುಮಕ್ಕಳಿಗೆ ಸೊಗಸಾದ ಔತಣದ ಏರ್ಪಾಟಾಗಿತ್ತು.

ಅಂದು ಮನೆಗೆ ಹಿಂದಿರುಗಲು ವಾಸು ಪ್ರಮೀಳೆಯನ್ನು

"ನಾವು ಸಾಡಿದ್ದು ಹೊರಟುಬಿಡೋಣ. ಇಲ್ಲಿ ನಾವಿದ್ದು ಏನೂ ಮಾಡಬೇಕಾಗಿಲ್ಲ."

"ಹೊರಡಬಹುದು. ನನಗೆ ಕೆಲವು ಪುಸ್ತಕಗಳು ಬೇಕಾಗಿವೆ."

"ಬೆಳಿಗ್ಗೆ ಏನು ಬೇಕೋ ತೆಗೆದುಕೋ."

"ನಿಮ್ಮಕ್ಕ ಏನು ಹೇಳುತ್ತಿದ್ದರು ಕೇಳಿದಿರಾ ?"

"ಏನು ಹೇಳುತ್ತಿದ್ದಳು ?"

"ಅವರು ಉಡುಪಿ, ಮಂತ್ರಾಲಯ, ಕಾಶಿಯಾತ್ರೆ ಮಾಡಿಬರಬೇಕಂತೆ."

"ಈಗ ಅವಳು ಹೊರಟುಹೋದರೆ ಮನೆಕಡೆ ಯಾರು ?"

"ಹನುಮನನ್ನು ರಾಮಗಿರಿಗೆ ಕಳುಹಿಸಿ, ಮನೆ ಬಾಡಿಗೆಗೆ ಕೊಡಬೇಕಾಗುತ್ತದೆ."

"ಸದ್ಯಕ್ಕೆ ಇಲ್ಲಿಯೇ ಇದ್ದು ನಾವು ಆಶ್ರಮಕ್ಕೆ ಬಂದಕೂಡಲೆ ಹೋಗುವುದಕ್ಕಾಗುವುದಿಲ್ಲವಂತೇನು ?"

"ಅವರಿಗೇನೋ ಕನಸಾಯಿತಂತೆ. ಆದಷ್ಟು ಬೇಗ ಹೊರಟರೆ ಒಳ್ಳೆಯದೆಂದು ಹೇಳುತ್ತಿದ್ದಾರೆ."

"ಕನಸು ಕಾಣುವುದಕ್ಕೆ ಒಳ್ಳೆಯ ಸಮಯ ಹುಡುಕಿದಳು."

"ಬೇಸರಪಟ್ಟುಕೊಂಡರೇನು ಸಾರ್ಥಕ. ಅವರೊಬ್ಬರೇ ಇಲ್ಲಿದ್ದು ಮಾಡುವುದಾದರೂ ಏನು ? ನಾವು ಬರುವಷ್ಟರಲ್ಲಿ ಅವರೂ ತೀರ್ಥಯಾತ್ರೆ ಮುಗಿಸಿಕೊಂಡು ಬರುತ್ತಾರೆ."

"ನಿನ್ನ ಇಷ್ಟ. ರಾಮಸ್ವಾಮಿಗೆ ಹೇಳಿ ಹೋಗೋಣ. ಅವಳೆಷ್ಟು ದುಡ್ಡು ಕೇಳುತ್ತಾಳೋ ಕೊಟ್ಟು ಕಳುಹಿಸಿಕೊಡಲಿ."

ಎಂದು ಹೇಳಿದ.

೧೭

ವಾಸು, ಯೋಗಿನಿ ಅಮ್ಮನವರ ಗೈರುಹಾಜರಿಯಲ್ಲಿ ಮುಂಬಯಿ ಆಶ್ರಮದ ಕಾರ್ಯಕಲಾಪಗಳು ಯಥಾಕ್ರಮದಂತೆ ಸಾಗಿದ್ದವು. ಶುಕ್ರವಾರದ ಭಜನೆ ಷಿರೀನ್ ಮತ್ತು ಎಮಿಲಿಯವರ ನೇತೃತ್ವದಲ್ಲಿ ನಡೆಯುತ್ತಿತ್ತು. ಹಾಡಿಕೆಯ ಹೊಣೆ ಊರ್ವಶಿಯ ಮೇಲೆ ಬಿದ್ದಿತ್ತು.

ಸ್ಕಿನ್ನರ್ ಗ್ರಂಥ 'ಸ್ವಾಮಿ ಶಿಷ್ಯ ಸಂವಾದ' (Conversations between Master and Disciple) ಸ್ವಾಮಿಜಿಯವರಿಂದ ಪರಿಷ್ಕರಿಸಲ್ಪಟ್ಟು ಇಂಗ್ಲೆಂಡಿಗೆ ಹೋಗಿತ್ತು. ಸ್ಕಿನ್ನರ್ ತಪ್ಪದೆ ಯೋಗಿನಿ ಅಮ್ಮನವರ ಮತ್ತು ಸ್ವಾಮಿಜಿಯವರ ಭಾವಚಿತ್ರಗಳ ಎಲ್ಲಾ ಪ್ರತಿಗಳನ್ನು ತನ್ನ ಪ್ರಕಾಶಕರಿಗೆ ಕಳುಹಿಸಿಕೊಟ್ಟಿದ್ದರು.

ವೈವಾಯ್ಸ್ ಕಂಪೆನಿಯವರು ಯೋಗಿನಿ ಅಮ್ಮನವರ ಎರಡು ರಿಕಾರ್ಡಗಳನ್ನು ಪ್ರಕಟಿಸಿದ್ದರು. ಮುಂಬಯಿ ಪತ್ರಿಕೆಗಳಲ್ಲಿಯಲ್ಲದೆ, ಕನ್ನಡ ನಾಡಿನ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲಿಯೂ ರಿಕಾರ್ಡಿನ ಪ್ರಕಟನೆ ಯೋಗಿನಿ ಅಮ್ಮನವರ ಭಾವಚಿತ್ರದೊಂದಿಗೆ ಪ್ರಕಟವಾಗಿತ್ತು. ಆಶ್ರಮದ ಕಛೇರಿಯಲ್ಲಿ ಹೊರೆ ಹೊರೆ ಕಾಗದಗಳು ಮಾರುತ್ತರದ ದಾರಿ ನೋಡುತ್ತ ಕುಳಿತಿದ್ದವು.

ಯೋಗಿನಿ ಅಮ್ಮನವರ ಪುನರಾಗಮನ ಭಕ್ತಕೋಟಿಗೆ ಮಹೋತ್ಸವದ ದಿನವಾಯಿತು. ನೂರೆಂಟು ಕೆಲಸಗಳ ಗಡಿಬಿಡಿಯಲ್ಲಿಯೂ ನೆನಪಿಟ್ಟು ಕೊಂಡು ಕನ್ನಡ ಬಾಲಬೋಧೆ, ರೀಡರುಗಳನ್ನು ತಂದ ಯೋಗಿನಿ ಅಮ್ಮನವರನ್ನು ಮಿಸ್. ಎಮಿಲಿ ಮನಸಾರೆ ವಂದಿಸಿದರು.

ವಾಸು ಮಾಡಿದ್ದ ಏರ್ಪಾಟು ಕೇಳಿ ಬೊಂಬಾಯಿವಾಲಾ, ಸ್ಕಿನ್ನರ್ ಸಂತೋಷಪಟ್ಟುಕೊಂಡರು.

"ಹಗಲೂ ರಾತ್ರಿ ಕೆಲಸ ಮಾಡಿಸಲು ಬೈರಪ್ಪನವರು ಒಪ್ಪಿ ಕೊಂಡಿದ್ದಾರೆ. ಪ್ರಾಯಶಃ ಮೂರು ನಾಲ್ಕು ತಿಂಗಳಲ್ಲಿ ಆಶ್ರಮದ ಕಟ್ಟಡಗಳು ಸಿದ್ಧವಾಗಬಹುದು."

ಎಂದು ವಾಸು ಹೇಳಿದ.

ಯೋಗಿನಿ ಅಮ್ಮನವರ ಭಜನೆ ರಿಕಾರ್ಡುಗಳು ಆಶ್ರಮಕ್ಕೆ ನೂರಾರು ಭಕ್ತರನ್ನು ತಂದಿತು. ಕೂಪರ್, ಮರ್ಜಬಾನ್ ಸ್ವಾಮಿಜಿಯವರನ್ನೂ ಯೋಗಿನಿ ಅಮ್ಮನವರನ್ನೂ ಸಂದರ್ಶಿಸಿ ಲೇಖನಗಳನ್ನು ಬರೆದರು.

ಯೂರೋಪ್, ಅಮೇರಿಕಾ, ಫ್ರಾನ್ಸ್, ಜರ್ಮನಿಯ ವಿದ್ವಾಂಸರು ಸ್ವಾಮಿಜಿಯ ಗ್ರಂಥಗಳ ಬಗ್ಗೆ ಪ್ರಶಂಸಾತ್ಮಕ ಪತ್ರಗಳನ್ನು ಬರೆದರು. ಟೈಮ್ಸ್ ಲಿಟರಲಿ ಸಪ್ಲಿಮೆಂಟ್, ಏಷ್ಯಾ, ಮರ್‌ಕ್ಯೂರ್ ಡಿ ಫ್ರಾನ್ಸ್, ಹಿಬ್ಬರ್ಟ್ ಜರ್ನಲ್, ಅಮೆರಿಕನ ಮರ್‌ಕ್ಯುರಿ, ರೆವ್ಯೂ ಆಫ್ ಲಿಚರೇಚರ್ ಪತ್ರಿಕೆಗಳಲ್ಲಿ ವಿಮರ್ಶೆಗಳು ಬಂದವು. ಆಶ್ರಮದ ವಿಷಯ ಯೋಗಿನಿ ಅಮ್ಮನವರ ವಿಷಯ, ಸ್ವಾಮಿಜಿ ವಿಷಯ ತಿಳಿಸುವುದಕ್ಕೆ ದೇಶೀಯ ವಿದೇಶೀಯ ಪತ್ರಿಕೆಗಳು ಮೇಲಾಟಕ್ಕೆ ನಿಂತವು.

ಸ್ಕಿನ್ನರ್ 'ಏಷ್ಯಾ' ಪತ್ರಿಕೆಯಲ್ಲಿ ಬರೆದ ಲೇಖನ ವಿಶೇಷ ಪ್ರಭಾವ ಮೂಡಿತು. ಕಂಡು, ಕೇಳರಿಯದ ದೇಶಗಳಿಂದ ಜಿಜ್ಞಾಸುಗಳು ಪತ್ರ ಬರೆದು, ಹೆಚ್ಚಿನ ಸುದ್ದಿ ಬೇಡುತ್ತಿದ್ದರು.

ಸ್ವಾಮಿಜಿ ವರ್ಸ್ರೋವಾದಲ್ಲಿ ಕೆಲವೇ ಭಕ್ತಜನರ ಬಯಕೆ ಪೂರೈಸುತ್ತಾ ಕೂಡುವುದು ದುಸ್ಸಾಧ್ಯವಾಯಿತು. ಮದರಾಸಿನಿಂದ ಬಂದಿದ್ದ ವಿಚಾರಾರ್ಹ ವಾದ ಪತ್ರವನ್ನು ಚರ್ಚಿಸಲು ವಾಸು ಒಂದು ಅಂತರಂಗ ಗೋಷ್ಠಿ ಕರೆದು, ಅದಕ್ಕೆ ಬೊಂಬಾಯಿವಾಲಾ, ಸ್ಕಿನ್ನರ್, ಮಿಸ್ ಎಮಿಲಿ, ಸ್ವಾಮಿಜಿ, ಯೋಗಿನಿ ಅಮ್ಮನವರನ್ನು ಆಹ್ವಾನಿಸಿದ್ದ.

ಜಸ್ಟಿಸ್ ರಾಘವ ಅಯ್ಯರ್ ಅವರ ಕಾಗದವನ್ನು ವಾಸು ಓದಿದ :

ಮೈಲಾಪುರ
ಮದರಾಸು.

ಎನ್. ರಾಘವ ಅಯ್ಯರ್. ಎಂ.ಎ.,ಎಂ.ಎಲ್.,
ನಿವೃತ್ತ ನ್ಯಾಯಾಧೀಶರು
'ಮದರಾಸ್ ಹೈಕೋರ್ಟು'

ಪರಮಪೂಜ್ಯ ಸ್ವಾಮಿಜಿ,

ಉಪನಿಷತ್ತುಗಳು ಮತ್ತು ಭಗವದ್ಗೀತೆಯನ್ನು ಕುರಿತು ತಾವು ಬರೆದಿರುವ ಗ್ರಂಥಗಳನ್ನೂ ಮೇಜರ್ ಸ್ಕಿನ್ನರ್ ಅವರು 'ಏಷ್ಯ' ಪತ್ರಿಕೆ

ಯಲ್ಲಿ ಬರೆದಿರುವ ಲೇಖನವನ್ನೂ, ಪತ್ರಿಕೆಗಳಲ್ಲಿ ಬರುತ್ತಿರುವ ಇತರ ಲೇಖನಗಳನ್ನೂ ನಾನೂ, ನನ್ನ ಮಿತ್ರರೂ ಭಕ್ತಿಪುರಸ್ಸರವಾಗಿ ಓದಿ ನೋಡಿದೆವು. ನಮ್ಮ ಮನಸ್ಸಿಗಾದ ಆನಂದ ಅವರ್ಣನೀಯ. ಮಿತ್ರರಾದ ಜಸ್ಟಿಸ್ ರಾಮುನಿ ಮೆನನ್ ಅವರು ಹೇಳಿದಂತೆ 'ಸ್ವಾಮಿವಿವೇಕಾನಂದ'ರ ಪುನರಾವತಾರವಾಗಿದೆಯೆನ್ನುವುದರಲ್ಲಿ ಏನೂ ಸಂದೇಹವಿಲ್ಲ. ಭಾರತ ಮತ್ತು ಜಗತ್ತು ತಮ್ಮಂತಹ ಮಹಾಪುರುಷರ ಬರುವನ್ನು ಎದುರು ನೋಡುತ್ತಿತ್ತು. ತಮ್ಮ ಉದ್ಬೋಧದಿಂದ ಜಗತ್ತಿನ ಕಲ್ಯಾಣವಾಗುತ್ತದೆಂದು ನನ್ನ ಅಂತರಾತ್ಮ ಹೇಳುತ್ತಿದೆ.

ವಾರಕ್ಕೊಮ್ಮೆ ನಾನೂ ನನ್ನ ಮಿತ್ರರೂ ನನ್ನ ಮನೆಯಲ್ಲಿ ಸೇರಿ ಆಧ್ಯಾತ್ಮಿಕ ವಿಷಯಗಳನ್ನು ಚರ್ಚಿಸುತ್ತೇವೆ. ಈ ಮಿತ್ರಗೋಷ್ಠಿಯನ್ನೇ ಬೆಳಸಿ ಒಂದು 'ಋಷಿಧಾಮ ಸಂಘ'ವನ್ನು ಸ್ಥಾಪಿಸಿ ತಮ್ಮ ದಿವ್ಯಗೆಲಸಕ್ಕೆ ನೆರವಾಗಬೇಕು ಎನ್ನುವ ಸಲಹೆ ಬಂದಿದೆ. ಮಿತ್ರರಾದ ರಾಮುನಿ ಮೆನನ್ ಅವರೂ, ಅರುಣಗಿರಿ ಮೊದಲಿಯಾರರೂ, ಜಸ್ಟಿಸ್ ಸೂರ್ಯಪ್ರಕಾಶ ರಾಯರೂ, ಚಿಕ್ಕಾರಿ ಚಿಟ್ಟಿಯಾರರೂ ಈ ಬಗ್ಗೆ ಬಹಳ ಉತ್ಸುಕರಾಗಿದ್ದಾರೆ. ತಾವು ಒಪ್ಪುವುದಾದರೆ 'ಋಷಿಧಾಮ ಸೊಸೈಟಿ' ಸ್ಥಾಪಿಸುತ್ತೇವೆ. ತಾವು ಇಲ್ಲಿಗೆ ದಯೆಮಾಡಿಸಿ ಉದ್ಘಾಟನೆ ಸಮಾರಂಭ ನಡೆಸಿಕೊಟ್ಟು ನಮ್ಮೊಂದಿಗೆ ಕೆಲದಿನವಿದ್ದು, ನಮ್ಮನ್ನು ಕೃತಾರ್ಥರನ್ನಾಗಿಮಾಡಬೇಕು.

ನಮ್ಮ ಕರೆಯನ್ನು ದೊಡ್ಡವರಾದ ತಾವು ನಿರಾಕರಿಸಲಾರಿರೆಂದು ದೃಢ ವಿಶ್ವಾಸ ತಳೆದಿರುವ

ತಮ್ಮ ದೀನಸೇವಕ
ರಾಘವ ಅಯ್ಯರ್."

ಕಾಗದ ಓದಿ ಮುಗಿಸಿ ಅಭಿಪ್ರಾಯಕ್ಕೆ ವಾಸು ಎಲ್ಲರ ಮುಖನೋಡಿದ. ಯೋಗಿನಿ ಅಮ್ಮನವರು, ಸ್ವಾಮಿಜಿ ಯೋಚನೆ ಮಾಡುತ್ತಿದ್ದರು. ಸ್ಕಿನ್ನರ್

"ಸ್ವಾಮಿಜಿ, ಈ ಆಹ್ವಾನ ನೀವು ಸ್ವೀಕರಿಸಿ ಮದರಾಸಿಗೆ ಹೋಗಿಬರಬೇಕು. ಸಾಧಕರು ಯಾರು ಎಲ್ಲೇ ಇರಲಿ ಅವರಿಗೆ ನಿಮ್ಮ ತಪಸ್ಸಿನ ಲಾಭ ಸಿಕ್ಕಬೇಕು."

"ಇಲ್ಲಿಯ ಭಕ್ತರ ಬೇಡಿಕೆ ಬಹಳ ಹೆಚ್ಚಾಗಿದೆ ಮೇಜರ್ ಸ್ಕಿನ್ನರ್ ಅವರೇ. ಸಾರ್ವಜನಿಕವಾಗಿ ಸ್ವಾಮಿಜಿಯವರ ಒಂದು ವ್ಯಾಖ್ಯಾನಮಾಲೆಯನ್ನು ವ್ಯವಸ್ಥೆಮಾಡಬೇಕೆಂದಿದ್ದೇನೆ."

"ಆಗಬಹುದು ಬೊಂಬಾಯಿವಾಲಾಜಿ, ನಿಮ್ಮ ವ್ಯಾಖ್ಯಾನಮಾಲೆಯನ್ನು ಮುಗಿಸಿಕೊಂಡು ಸ್ವಾಮಿಜಿ ಮದರಾಸಿಗೆ ಹೋಗಿರಬಹುದು. ನಿಮ್ಮ ಅಭಿಪ್ರಾಯವೇನು ಮಿ. ವಾಸುದೇವರಾವ್ ?"

"ರಾಮಗಿರಿಯ ಆಶ್ರಮಕ್ಕೆ ನಾವು ಹೋದ ಮೇಲೆ ಸ್ವಾಮಿಜಿ ಪ್ರವಾಸ ಕೈಗೊಳ್ಳುವುದು ನನಗೆ ಸೂಕ್ತವಾಗಿ ಕಾಣುತ್ತದೆ. ಅವರ ಪ್ರವಾಸಕಾಲದಲ್ಲಿ ನಾವು ಯಾರಾದರೂ ಜತೆಯಲ್ಲಿರಬೇಕು. ಈಗ, ನೀವು ಕಂಡಂತೆ ರಾಮ ಸ್ವಾಮಿ ಕಟ್ಟಡದ ಕೆಲಸದಲ್ಲಿ ಉದ್ಯುಕ್ತರಾಗಿದ್ದಾರೆ."

ಮಿಸ್. ಎಮಿಲಿ ವಾಸುವಿನ ಅಭಿಪ್ರಾಯವನ್ನೇ ಸಮರ್ಥಿಸಿದರು.

"ಮದರಾಸಿನಲ್ಲಿ ಜಸ್ಟಿಸ್ ರಾಘವ ಅಯ್ಯರ್ ಅವರು 'ಋಷಿಧಾಮ ಸಂಘ'ವನ್ನು ಏರ್ಪಡಿಸಿ ನಡೆಸಿಕೊಂಡು ಬರುತ್ತಿರಲಿ. ಇನ್ನು ಮೂರು ನಾಲ್ಕು ತಿಂಗಳ ಮಾತು – ಜಸ್ಟಿಸ್ ರಾಘವ ಅಯ್ಯರ್ ಅವರಿಗೂ ವ್ಯವಸ್ಥೆ ಮಾಡುವುದಕ್ಕೆ ಕಾಲಾವಕಾಶ ಸಿಕ್ಕುತ್ತದೆ."

"ಹಾಗೇ ಮಾಡಬಹುದು"

ಎಂದು ಸ್ಕಿನ್ನರ್ ಒಪ್ಪಿಕೊಂಡರು.

ಅಂದೇ ಸ್ವಾಮಿಜಿಯ ಹೆಸರಿನಲ್ಲಿ ಜಸ್ಟಿಸ್ ರಾಘವಅಯ್ಯರ್ ಅವರಿಗೆ ಪತ್ರ ಹೋಯಿತು.

ಬೊಂಬಾಯಿವಾಲಾ ಮತ್ತು ಸ್ಕಿನ್ನರ್ ಇವರ ಸಲಹೆಯಂತೆ ಸ್ವಾಮಿಜಿ 'ಭಾರತದ ಆಧ್ಯಾತ್ಮಿಕ ಪರಂಪರೆ' (Spiritual Heritage of India) ಯನ್ನು ಕುರಿತು ಸಾರ್ವಜನಿಕವಾಗಿ ಏಳು ಉಪನ್ಯಾಸಗಳನ್ನು ಕೊಡಲೊಪ್ಪಿ ಕೊಂಡರು. ರಾಜಕೀಯ, ವ್ಯಾಪಾರ, ವಾಣಿಜ್ಯ, ವಿಶ್ವವಿದ್ಯಾನಿಲಯ, ಸಾಮಾಜಿಕ ರಂಗಗಳ ಮುಖಂಡರಾಗಿದ್ದವರೊಬ್ಬೊಬ್ಬರನ್ನು ಪ್ರತಿ ದಿನ ಅಧ್ಯಕ್ಷತೆಗೆ ಆಹ್ವಾನಿಸುವುದೆಂದು ನಿಶ್ಚಯವಾಯಿತು.

ಸುಂದರಾಬಾಯಿ ಸಭಾಭವನದಲ್ಲಿ ಮೊದಲನೆಯ ದಿನದ ಉಪನ್ಯಾಸ ಜಸ್ಟಿಸ್ ಜಯಕರರ ಅಧ್ಯಕ್ಷತೆಯಲ್ಲಿ ಆರಂಭವಾಯಿತು.

ಏಳು ದಿನಗಳ ಭಾಷಣಗಳ ವರದಿಮಾಡಲು ಬೊಂಬಾಯಿವಾಲಾ ಶೀಘ್ರಲಿಪಿಕಾರರನ್ನು ಗೊತ್ತು ಮಾಡಿದ್ದರು.

ಕೊನೆಯ ದಿವಸ ಜಸ್ಟಿಸ್ ಚಗ್ಲಾ ಅವರ ಅಧ್ಯಕ್ಷತೆಯಲ್ಲಿ ಸ್ವಾಮಿಜಿಯವರ ವ್ಯಾಖ್ಯಾನಮಾಲೆಯ ಮುಕ್ತಾಯವಾಯಿತು. ಇಡಿಯ ಮುಂಬಯಿ ಸ್ವಾಮಿಜಿಯವರ ಘನವಿದ್ವತ್ತು, ಅನ್ಯಾದೃಶ ತಪಸ್ಸು, ಪಂಡಿತ ಪಾಮರ ರಂಜಕವಾದ ಭಾಷಣ ಶೈಲಿಯನ್ನು ಕೊಂಡಾಡಿತು. ಅಭಿಮಾನಿಗಳ, ಭಕ್ತರ ಪ್ರಶಂಸಾತ್ಮಕ ಕಾಗದಗಳಲ್ಲದೆ ಸಣ್ಣ ದೊಡ್ಡ ಚೆಕ್ಕುಗಳೂ, ಕಾಣಿಕೆಗಳೂ ಆಶ್ರಮಕ್ಕೆ ಬರಲಾರಂಭವಾದವು.

ದಿನ ಬಿಟ್ಟು ದಿನ ರಾಮಗಿರಿ ಆಶ್ರಮದ ಪ್ರಗತಿಯ ಬಗ್ಗೆ ರಾಮಸ್ವಾಮಿಯಿಂದ ಕಾಗದಗಳು ಬರುತ್ತಿದ್ದವು. ಬೈರಪ್ಪ ಕೊಡುತ್ತಿದ್ದ ಲೆಕ್ಕದ ಪ್ರತಿಯನ್ನು ರಾಮಸ್ವಾಮಿ ತಪ್ಪದೆ ಕಳುಹಿಸುತ್ತಿದ್ದ.

ಒಂದು ತಿಂಗಳಲ್ಲಿ ಆಶ್ರಮದ ಪಾಯದ ಕೆಲಸ ಮುಗಿದಿತ್ತು. ರಾಜಮಾರ್ಗದಿಂದ ಆಶ್ರಮಕ್ಕೆ ಹೋಗುವುದಕ್ಕೆ ಸಿಮೆಂಟ್ ರಸ್ತೆಯ ಕೆಲಸವೂ ಆಗಿತ್ತು. ಎಲೆಕ್ಟ್ರಿಕ್ ಡಿಪಾರ್ಟಮೆಂಟಿನವರು ವೈರು ಎಳೆಯುವುದಕ್ಕೆ ಆರಂಭಿಸಿದ್ದರು. ಇನ್ನು ಎರಡು ಮೂರು ತಿಂಗಳಲ್ಲಿ ಕಟ್ಟಡ ಪೂರೈಸುವುದಾಗಿ ಬೈರಪ್ಪನವರು ಆಶ್ವಾಸನ ಕೊಟ್ಟಿದ್ದಾರೆಂದು ರಾಮಸ್ವಾಮಿ ತಿಳಿಸಿ, ಹಣ ಕಳುಹಿಸಬೇಕೆಂದು ಕೋರಿದ್ದ.

ಬೊಂಬಾಯಿವಾಲಾ ಎರಡನೆಯ ಲಕ್ಷ ರೂಪಾಯಿಗೆ ವಾಸು ಕೈಗೆ ಚೆಕ್ಕಿತ್ತರೂ ಆ ಹಣವನ್ನು ವಾಸು ತನ್ನ ಬ್ಯಾಂಕಿಗೆ ಕಟ್ಟಿಕೊಂಡು, ಐವತ್ತು ಸಾವಿರ ರೂಪಾಯಿಗಳಿಗೆ ರಾಮಸ್ವಾಮಿಗೆ ಒಂದು ಚೆಕ್ ಕಳುಹಿಸಿದ.

ಪ್ರಮೀಳೆಯ ಸಂಸ್ಕೃತ ಪಾಠ ಮುಂದುವರಿದಿತ್ತು, ಸುಲಭ ಸಂಸ್ಕೃತ ಪುಸ್ತಕಗಳನ್ನು ಅವಳು ಓದಲು ಸಮರ್ಥಳಾಗಿದ್ದಳು. ಎಮಿಲಿಯವರ ಕನ್ನಡ ಪಾಠವೂ ಸಾಗಿತ್ತು, ಎಮಿಲಿ ತಿದ್ದಿ ತಿದ್ದಿ ಕನ್ನಡ ಮಾತಾಡುವುದಕ್ಕಾರಂಭಿಸಿದ್ದರು.

ವಾಸು ಹಗಲಿನ ಮೇಲೆ ಅವನ ಕೆಲಸಗಳಲ್ಲದೆ ರಾಮಸ್ವಾಮಿಯ ಕೆಲಸವೂ ಬಿದ್ದಿತ್ತು. ಪ್ರತಿದಿನವೂ ಅವನು ನೂರಾರು ಪತ್ರಗಳಿಗೆ ಉತ್ತರ ಕೊಡಬೇಕಾಗಿತ್ತು.

ಎರಡನೆಯ ತಿಂಗಳಲ್ಲಿ ರಾಮಗಿರಿ ಆಶ್ರಮದ ಗೋಡೆಗಳು ಮೇಲ ಕ್ಕೆದ್ದವು. ಆಶ್ರಮದ ಆವರಣದ ಗೋಡೆ (Compound wall) ಸಿದ್ಧ ವಾಯಿತು. ಅದಕ್ಕೆ ಹೊಂದುವ ಕಬ್ಬಿಣದ ಗೇಟುಗಳನ್ನು ಮಾಡುವುದಕ್ಕೆ ಬೈರಪ್ಪ ಏರ್ಪಾಟುಮಾಡಿದ್ದರು. ನೀರಿನ ಟ್ಯಾಂಕ್ ಸಿದ್ಧವಾಯಿತು.

ಮೂರನೆಯ ತಿಂಗಳು ಮುಗಿಯುವ ವೇಳೆಗೆ ಆಶ್ರಮದ ಕಟ್ಟಡದ ತಾರಸೀ ಕೆಲಸ ಮುಗಿದು, ಗಿಲಾವು ಮಾಡುವುದು ಬಾಕಿ ಉಳಿದಿತ್ತು. ಎಲೆಕ್ಟ್ರಿಕ್ ಡಿಪಾರ್ಟಮೆಂಟಿನವರು ದೀಪ ಕೊಟ್ಟಿದ್ದರು.

ಕಟ್ಟಡದ ಮುಗಿದ ಸಂತೋಷದ ಸುದ್ದಿ ತಿಳಿಸುತ್ತಾ ವೇಣಕ್ಕ ಉಡುಪಿ, ಮಂತ್ರಾಲಯ, ಕಾಶಿ ಕ್ಷೇತ್ರಗಳಿಗೆ ಯಾತ್ರೆ ಹೋದ ಸುದ್ದಿಯನ್ನೂ ರಾಮಸ್ವಾಮಿ ತಿಳಿಸಿದ್ದ.

ವಾಸು, ರಾಮಸ್ವಾಮಿಗೆ ಮತ್ತೊಂದು ಚೆಕ್ ಕಳಿಸಿಕೊಟ್ಟು ಆಶ್ರಮದ ಅತಿಥಿಮಂದಿರಕ್ಕೆ ಬೇಕಾಗುವ ಫರ್ನೀಚರು ಪ್ರಮೀಳಾ, ಶಂಕರ ಮತ್ತು ತನ್ನ ರೂಮಿಗೆ ಬೇಕಾಗುವ ಫರ್ನೀಚರ್ ಕೊಳ್ಳಲು ತಿಳಿಸಿದ್ದ.

ಇದ್ದಕ್ಕಿದ್ದಂತೆ ವಾಸು ತಲೆಯಲ್ಲಿ ಒಂದು ವಿಚಾರ ಹೊಳೆಯಿತು. ಪ್ರಮೀಳೆಗೆ ಆಶ್ರಮದ ಪ್ರಗತಿ, ಮುಂದಿನ ಕಾರ್ಯಕಲಾಪಗಳನ್ನು ವಿವರಿಸುತ್ತಾ

"ಇನ್ನು ಹದಿನೈದು, ಇಪ್ಪತ್ತು, ದಿವಸಗಳಲ್ಲಿ ನಮಗೆ ಬೇಕಾಗುವಷ್ಟು ಭಾಗ ಆಶ್ರಮದ ಕಟ್ಟಡ ತಯಾರಾಗಿರುತ್ತದೆ."

"ಹಾಗಾದರೆ ನಾವು ಪ್ರಯಾಣ ಮಾಡಬಹುದು."

"ಸ್ವಲ್ಪ ತಡೆದು ಹೋಗುವುದು ಒಳ್ಳೆಯದೆಂದು ನಿಶ್ಚಯಿಸಿದ್ದೇನೆ."

"ಏಕೆ ?"

"ನೋಡು ಪ್ರಮೀ – ನಮ್ಮ ವಾಸಕ್ಕೆ ಮನೆ, ಅತಿಥಿಗಳಿಗೆ ಮನೆ ಸದ್ಯಕ್ಕೆ ಸಿದ್ಧವಾಗಿದೆ. ಹೊರಗಿನಿಂದ ಬಂದವರು ಇದನ್ನು ನೋಡಿ 'ಎಲ್ಲಾ ಸ್ವಂತಕ್ಕೆ ಬೇಕಾದ ಅನುಕೂಲ ಮಾಡಿಕೊಂಡಿದ್ದಾರೆ' ಎಂದು ಭಾವಿಸ ಬಹುದು. ಆ ಅಭಿಪ್ರಾಯ ಬರುವುದಕ್ಕೆ ನಾವು ಅವಕಾಶಕೊಟ್ಟರೆ ಕೆಲಸ ಕೆಟ್ಟು ಹೋಗುತ್ತದೆ."

"ಏನು ಮಾಡಬೇಕೆಂದು ನಿಮ್ಮ ಆಲೋಚನೆ."

"ಈಗ ಆಶ್ರಮದ ಗೇಟನಿಂದ ಒಳಗೆ ಬಂದ ಕೂಡಲೆ ಎಲ್ಲರಿಗೂ ಕಾಣುವುದು ನಮ್ಮ ಕಛೇರಿ. ಕಛೇರಿಯ ಹಿಂದೆಯೇ ನಮ್ಮ ವಾಸಗೃಹ. ಮೊದಲು ಸಭಾಮಂದಿರ ರಚನೆಯಾಗಬೇಕು. ಆಗ ಬಂದವರಿಗೆ ಸಭಾ ಮಂದಿರ ಕಾಣುತ್ತದೆಯೇ ವಿನಾ ನಮ್ಮ ವಾಸಗೃಹ ಕಾಣುವುದಿಲ್ಲ."

"ಸಭಾಮಂದಿರದ ಕೆಲಸ ಈಗ ಆರಂಭಿಸಿದರೆ ತಡವಾಗುತ್ತದೆ. ಪಾಯ ಬೇರೆ ಹಾಕಬೇಕೇನೋ ?"

"ಪಾಯ, ಬೇಸ್‌ಮೆಂಟ್ ಆಗಿದೆ – ಕಟ್ಟಡ ಆಗಬೇಕಷ್ಟೆ."

"ಹಾಗೇಮಾಡಿ. ರಾಮಸ್ವಾಮಿಗೆ ಕೂಡಲೆ ತಿಳಿಸಿ."

ವಾಸು ತಡಮಾಡದೆ ರಾಮಸ್ವಾಮಿಗೆ ವಿಶದವಾಗಿ ತಾರುಕೊಟ್ಟು ತಿಳಿಸಿ, ಸಭಾಮಂದಿರದ ನಿರ್ಮಾಣಕ್ಕೆ ಮತ್ತೆ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಒಂದು ಚೆಕ್ ಕಳಿಸಿದ.

ಯೋಗಿನಿ ಅಮ್ಮನವರ ಎರಡು ರಿಕಾರ್ಡುಗಳು ಸಿನೀಮಾ ರಿಕಾರ್ಡು ಗಳೊಂದಿಗೆ ಸ್ಪರ್ಧೆಗೆ ನಿಂತವು. ಯಾವ ಥಿಯೇಟರ್, ಹೋಟೆಲ್, ಸಾರ್ವ ಜನಿಕ ಸಮಾರಂಭದಲ್ಲಿ ನೋಡಿದರೂ ಆ ರಿಕಾರ್ಡುಗಳು ವಿಜೃಂಭಿಸ ತೊಡಗಿದವು. ಕೇತ್ಕರ್ ಸಮಯ ನೋಡಿ ರಾಮನವಮಿ ಹಬ್ಬದ ನೆನಪಿನಲ್ಲಿ ಮತ್ತೆ ಎರಡು ರಿಕಾರ್ಡುಗಳನ್ನು ಪ್ರಕಟಿಸಿದ.

ಒಂದು ದಿನ ಸ್ಕಿನ್ನರ್, ವಾಸು, ಯೋಗಿನಿ ಅಮ್ಮ ಮತ್ತು ಸ್ವಾಮಿಜಿ ಯವರನ್ನು ತನ್ನ ಮನೆಗೆ ಕರೆದೊಯ್ದು ವಾನ್ ಚಿಸಲ್‌ಹೋಮ್ ಹೊಸದಾಗಿ ರಚಿಸಿದ್ದ ಕೆಲವು ತೈಲವರ್ಣ ಚಿತ್ರಗಳನ್ನು (Oil Paintings) ತೋರಿಸಿದರು. ಚಿಸಲ್‌ಹೋಮನ ಕಲಾನೈಪುಣ್ಯ ಚಿತ್ರಗಳಲ್ಲಿ ವೈವೆತ್ತಿ ನಿಂತಿದ್ದವು. ಅವನ ಹಿಂದಿನ ಕೃತಿಗಳಿಗೂ ಈ ಕೃತಿಗಳಿಗೂ ಇದ್ದ ವಿಶೇಷ ಅಂತರವನ್ನೂ ಎಲ್ಲರೂ ಗಮನಿಸಿದರು. ವಾಸು ತನ್ನ ಮೆಚ್ಚುಗೆ ವ್ಯಕ್ತ ಪಡಿಸುತ್ತಾ

"ನಿಮ್ಮ ಚಿತ್ರಕಲೆ ಮಹಾಕ್ರಾಂತಿಗೊಳಗಾಗಿದೆ" ಎಂದ.

"ನಿಸ್ಸಂದೇಹವಾಗಿ. ನನ್ನ ಜೀವನದಲ್ಲಾಗಿರುವ ಮಹಾಕ್ರಾಂತಿ ಯನ್ನೇ ನನ್ನ ಚಿತ್ರಗಳು ಪ್ರತಿಬಿಂಬಿಸುತ್ತಿವೆ."

"ಕೆಲವು ಚಿತ್ರಗಳಲ್ಲಿ ಅಜಂತೆಯ ಛಾಯೆ ಕಂಡುಬರುತ್ತದೆ"

ಎಂದು ಸ್ವಾಮಿಜಿ ಹೇಳಿದರು.

"ಹೌದು ಸ್ವಾಮಿಜಿ. ಅಜಂತೆಯ ಸಮರಸಭಾವನೆ ನನ್ನ ಕಲೆಯ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡಿದೆ."

ಯೋಗಿನಿ ಅಮ್ಮನವರು ಒಂದು ಚಿತ್ರವನ್ನು ಎವೆಯಿಕ್ಕದೆ ನೋಡುತ್ತಾ

"ತಾಳ ಹಿಡಿದು ನರ್ತಿಸುತ್ತಿರುವ ಈಕೆಯಾರು ?"

"ಮಹಾಭಕ್ತೆ ಮೀರಾ."

ವಾಸು, ಯೋಗಿನಿ ಅಮ್ಮ, ಸ್ವಾಮಿಜಿ ಚಿತ್ರಗಳನ್ನು ನೋಡುತ್ತ ಮೈಮರೆತಿದ್ದಾಗ ಸ್ಕಿನ್ನರ್

"ಚಿಸಲ್‌ಹೋಮ್ ಏನೋ ಹೇಳಬೇಕೆಂದಿದ್ದಾರೆ" ಎಂದರು.

"ಏನು! ಹೇಳಲಿ" ಎಂದು ಸ್ವಾಮಿಜಿ ನುಡಿಯಲು

ಚಿಸಲ್‌ಹೋಮ್ ದೈನ್ಯದಿಂದ

"ಸ್ವಾಮಿಜಿ, ಶ್ರೀಮಾತೆಯವರೇ – ಈ ಚಿತ್ರಗಳನ್ನು ನಾನು ರಚಿಸಿದ್ದು ನಿಮ್ಮ ಸ್ಫೂರ್ತಿಯ ಪ್ರಭಾವದಿಂದ. ನಿಮ್ಮ ಆಶ್ರಮಕ್ಕೆ ನನ್ನ ಅಲ್ಪಕಾಣಿಕೆ ಯೆಂದು ಇವುಗಳನ್ನು ಸ್ವೀಕರಿಸಬೇಕು"

ಎಂದು ಹೇಳಿದ. ಯೋಗಿನಿ ಅಮ್ಮ, ಸ್ವಾಮಿಜಿ ಅವಾಕ್ಕಾದರು. ವಾಸು ಅವರ ಪರವಾಗಿ

"ಮಿ. ಚಿಸಲ್‌ಹೋಮರೇ, ಈ ಚಿತ್ರಗಳು ತುಂಬ ಬೆಲೆಬಾಳುವಂಥವು. ಇವುಗಳನ್ನು ನಾವು ಸೂರೆಹೊಡೆಯುವುದು ನ್ಯಾಯವಲ್ಲ."

"ಮಿ. ರಾವ್, ಇವುಗಳಿಗೆ ಯುಕ್ತ ಪ್ರತಿಫಲ ಈಗಾಗಲೇ ನನಗೆ ಸಿಕ್ಕಿದೆ. ಚಿತ್ರಕಲೆಯಲ್ಲಿ ನಾನು ಸ್ವಲ್ಪದೂರ ನಡೆದು, ದಾರಿಗಾಣದೆ ತೊಳಲಾಡುತ್ತಿದ್ದೆ. ನನ್ನ ಕೈಹಿಡಿದು ಸ್ವಾಮಿಜಿ ದಾರಿ ತೋರಿದರು. ಇನ್ನು ಇಂತಹ – ಇವಕ್ಕೂ ಮಿಗಿಲಾದ ನೂರಾರು ಚಿತ್ರಗಳನ್ನು ಮಾಡುವ ಶಕ್ತಿ ನನಗೆ ಬಂದಿದೆ. ದಯೆಯಿಟ್ಟು ಇವುಗಳನ್ನು ಸ್ವೀಕರಿಸಲು ನನ್ನ ಪರವಾಗಿ ನೀವು ಸ್ವಾಮಿಜಿಯವರನ್ನೂ, ಶ್ರೀಮಾತೆಯವರನ್ನೂ ಪ್ರಾರ್ಥಿಸಿ."

ವಾಸು ಸ್ವಾಮಿಜಿಯವರ ಮುಖ ನೋಡಿದ.

ಸ್ವಾಮಿಜಿ ನಿರ್ವಾಹವಿಲ್ಲದೆ ಚಿಸಲ್‌ಹೋಮರ ಗುರುಭಕ್ತಿ ಕಾಣಿಕೆಯನ್ನು ಸ್ವೀಕರಿಸಬೇಕಾಯಿತು.

೧೮

ಆಶ್ರಮದ ಸಭಾಮಂದಿರದ ಕೆಲಸವನ್ನೂ ಬೈರಪ್ಪನವರು ಚುರುಕಾಗಿ ಮುಗಿಸಿದರು. ಗಿಲಾವ್ ಮುಗಿದು, ಲೈಟ್ ಹಾಕುವ ಕೆಲಸ ನಡೆದಿತ್ತು.

ಮುಂಬಯಿಯಲ್ಲಿ ಬೀಳ್ಕೊಡುವ ಸಮಾರಂಭಗಳಾದವು. ರತನ್‌ಲಾಲ್, ಅಯೋಧ್ಯಾಪ್ರಸಾದ್, ಹರಿಭಾಯ್, ತ್ರಿವೇದಿ ಸೊಗಸಾದ ಭೋಜನ ಕೂಟಗಳನ್ನೇರ್ಪಡಿಸಿದರು. ಕೇತ್ಕರ್ ತನ್ನ ಕಛೇರಿಗೆ ಎಲ್ಲರನ್ನೂ ಬರಮಾಡಿಕೊಂಡು ಸತ್ಕರಿಸಿದ. ಸಾಧಕರ ಸಂಘದಲ್ಲಿ ಚಹಾಪಾರ್ಟಿಯಾಯಿತು.

ತಮ್ಮ ಮನೆಗೆ ಎಲ್ಲರನ್ನೂ ಕರೆಯುವುದಕ್ಕೆ ಸಾಧ್ಯವಿಲ್ಲವಾಯಿತಲ್ಲಾ ಎಂದು ಬೊಂಬಾಯಿವಾಲಾ ವಿಷಾದಿಸಿದರು.

ಶುಕ್ರವಾರದ ಭಜನೆಗೆ ಬೊಂಬಾಯಿವಾಲಾ ಮತ್ತು ಷಿರೀನ್ ಬರಲಿಲ್ಲ. ಭಜನೆ ಮುಗಿದ ಮೇಲೆ ಯೋಗಿನಿ ಅಮ್ಮನವರು ಅನಸೂಯಾಬೆನ್ ಅವರನ್ನು ಹತ್ತಿರ ಕರೆದು

"ಷಿರೀನ್ ಏಕೆ ಬರಲಿಲ್ಲ" ಎಂದು ಕೇಳಿದರು.

"ಅವರಿಗೆ ಜ್ವರ ಬಂದಿದೆ. ಮಲಗಿ ಬಿಟ್ಟಿದ್ದಾರೆ"

"ಹಾ! ಜ್ವರವೇ"

ಎಂದು ಯೋಗಿನಿ ಅಮ್ಮನವರು ಗಾಬರಿಯಾಗಿ ಪಕ್ಕದಲ್ಲಿದ್ದ ಮಿಸ್. ಎಮಿಲಿಯವರಿಗೆ

"ಜತೆಯಲ್ಲಿ ಬರುವಿರಾ – ಷಿರೀನ್‌ರನ್ನು ನೋಡಿಕೊಂಡು ಬರೋಣ"

ಎಂದು ಹೇಳಿದರು.

ವಾಸೂಗೆ ತಿಳಿಸಲು ಯೋಗಿನಿ ಅಮ್ಮನವರು ಕೆಳಗೆ ಇಳಿದುಬಂದರು. ಅವರು ಹೊರಟಿದ್ದ ಉದ್ದೇಶವನ್ನರಿತ ವಾಸೂ.

"ಈಗಲೇ ಬಹಳ ಹೊತ್ತಾಗಿದೆ. ಬೆಳಿಗ್ಗೆ ಹೋದರೆ ಆಗದೇ?"

"ಷಿರೀನ್‌ಗೆ ಜ್ವರ ಬಂದಿರುವುದು ಕೇಳಿ ನನ್ನ ಮನಸ್ಸಿಗೆ ತಳಮಳ ವಾಗಿದೆ. ನಾನು ಹೋಗಿ ನೋಡಿಬಂದ ಹೊರತೂ ಸಮಾಧಾನವಾಗು ವುದಿಲ್ಲ."

ಯೋಗಿನಿ ಅಮ್ಮನವರ ಧ್ವನಿಯಲ್ಲಿ ಮೂಡಿದ್ದ ನಿರ್ಧಾರ ನೋಡಿ ವಾಸುವಿಗೆ ಆಶ್ಚರ್ಯವಾಯಿತು. ಅವರ ಮಾತಿಗೆ ಪ್ರತಿ ಹೇಳದೆ ಜಾನನನ್ನು ಕರೆದು ಕಾರು ತೆಗೆದುಕೊಂಡು ಬರಲು ಹೇಳಿದ.

ಬೊಂಬಾಯಿವಾಲಾ ಅವರ ಮನೆಯ ಕರೆಗಂಟೆಯ ಶಬ್ದಕ್ಕೆ ಸೇವಕ ಬಂದು ಬಾಗಿಲ ತೆಗೆದು, ಯೋಗಿನಿ ಅಮ್ಮನವರನ್ನೂ ಮಿಸ್. ಎಮಿಲಿಯವ ರನ್ನೂ ಹಜಾರದಲ್ಲಿ ಕೂಡಿಸಿ ಧಣಿಗೆ ಸುದ್ದಿಮುಟ್ಟಿಸಿದ.

ಬೊಂಬಾಯಿವಾಲಾ ಧಾವಿಸಿಬಂದು ಯೋಗಿನಿ ಅಮ್ಮನವರನ್ನೂ ಮಿಸ್. ಎಮಿಲಿಯವರನ್ನೂ ಸ್ವಾಗತಿಸಿ

"ಇಷ್ಟೇಕೆ ತೊಂದರೆ ತೆಗೆದುಕೊಂಡಿರಿ."

"ಷಿರೀನ್ ಹೇಗಿದ್ದಾರೆ."

"ನೀವೇ ನೋಡಬನ್ನಿ."

ಎಂದು ಮಹಡಿಯ ಮೇಲಕ್ಕೆ ಕರೆದೊಯ್ದರು.

ಸೊಗಸಾಗಿ ಅಲಂಕೃತವಾದ ಕೋಣೆ. ಮೇಜಿನ ಮೇಲಿದ್ದ ಟೇಬಲ್ ಲ್ಯಾಂಪ್ ಮಾತ್ರ ಉರಿಯುತ್ತಿತ್ತು. ಭವ್ಯವಾದ ಮಂಚದಮೇಲೆ ಷಿರೀನ್ ಮಲಗಿದ್ದರು. ಯಾರೋ ಬಂದ ಸಪ್ಪಳವಾಗಲು ಷಿರೀನ್ ಕ್ಷೀಣ ಸ್ವರದಲ್ಲಿ 'ಯಾರು' ಎಂದರು. ಬೊಂಬಾಯಿವಾಲಾ ಹೆಂಡತಿಯ ಸಮೀಪಕ್ಕೆ ಹೋಗಿ ಮೆಲ್ಲನೆ

"ಶ್ರೀಮಾತೆ ಬಂದಿದ್ದಾರೆ" ಎಂದರು.

"ನನ್ನನ್ನು ಎಬ್ಬಿಸಿ ಕೂಡಿಸಿ"

ಬೊಂಬಾಯಿವಾಲಾ ಅವರನ್ನು ಎಬ್ಬಿಸಿ ಕೂಡಿಸಲು ದಿಂಬುಗಳನ್ನು ಒಂದೆಡೆ ಸೇರಲಾರಂಭಿಸಿದರು. ಯೋಗಿನಿ ಅಮ್ಮನವರು ಅದನ್ನು ಕಂಡು ಕೂಡಲೆ ಮಂಚದ ಬಳಿ ಹೋಗಿ

"ಬೇಡಿ ಬೇಡಿ – ಅವರಿಗೆ ಶ್ರಮಕೊಡಬೇಡಿ."

ಎಂದು ಮಂಚದ ಮೇಲೆ ಕುಳಿತು ಮೃದುವಾಗಿ ಷಿರೀನ್ ಅವರ ಹಣೆ ನೇವರಿಸಿದರು. ಷಿರೀನ್ ಕಣ್ಣಲ್ಲಿ ನೀರು ತುಂಬಿತು.

"ಬಂದಿರಾ – ನಾನು ನಿಮ್ಮನ್ನೇ ಧ್ಯಾನಿಸುತ್ತಿದ್ದೆ."

"ಮೈಗೆ ಇಷ್ಟು ಅಲಸಿಕೆಯಾಗಿದೆಯೆಂದೇಕೆ ತಿಳಿಸಲಿಲ್ಲ."

"ಇವತ್ತು ಭಜನೆಯಲ್ಲವೇ ?"

"ಮೈಯಲ್ಲಿ ಜ್ವರವಿದೆ."

"ಬಹಳವಿಲ್ಲ. ಈ ಸಣ್ಣ ಜ್ವರ ನನ್ನನ್ನು ಬಹಳ ನಿಶ್ಶಕ್ತಿಗೊಳಿಸುತ್ತದೆ."

"ಜ್ವರ ಇಳಿಯುತ್ತಿರುವ ಹಾಗಿದೆ. ಹಣೆಯಮೇಲೆ ಬೆವರು ನಿಂತಿದೆ. ಬೆಚ್ಚಗೆ ಹೊದೆದುಕೊಂಡು ಮಲಗಿಕೋ ಮಗಳೇ."

ಎಂದು ಷಿರೀನ್ ಹೊದೆದುಕೊಂಡಿದ್ದ ರಗ್ಗಿನಮೇಲೆ ಇನ್ನೊಂದು ರಗ್ ಎಳೆದು, ಮಿಸ್. ಎಮಿಲಿಯ ಕಡೆ ತಿರುಗಿ

"ನಾನು ರಾತ್ರಿ ಇಲ್ಲಿಯೇ ಇರುತ್ತೇನೆಂದು ಆಶ್ರಮದಲ್ಲಿ ತಿಳಿಸಿ."

ಮಿಸ್. ಎಮಿಲಿ ಮಾತನಾಡದೆ ಬೊಂಬಾಯಿವಾಲಾ ಅವರ ಅಪ್ಪಣೆ ಪಡೆದು ಹೊರಟುಹೋದರು.

ಮನಸ್ಸಿನಲ್ಲಿ ತುಂಬಿದ್ದ ಭಾವನೆಯನ್ನು ಬೊಂಬಾಯಿವಾಲಾ ಮತ್ತು ಷಿರೀನ್ ಕಣ್ಣೋಟದಿಂದ ವಿನಿಮಯಮಾಡಿಕೊಂಡರು. ಷಿರೀನ್ ಯೋಗಿನಿ ಅಮ್ಮನವರ ಕೈಹಿಡಿದು

"ನನಗಾಗಿ ಎಷ್ಟು ತೊಂದರೆ!"

"ಮಗಳನ್ನು ಆದರಿಸುವುದು ತಾಯಿಯ ಕರ್ತವ್ಯ. ನೀನು ಹೆಚ್ಚು ಮಾತನಾಡಿ ಆಯಾಸಮಾಡಿಕೊಳ್ಳಬಾರದು. ಆಹಾರವೇನು ತೆಗೆದುಕೊಳ್ಳುವೆ."

"ಹಾಲು ಮತ್ತು ಟೋಸ್ಟ್ ಕೊಡಬಹುದೆಂದು ಡಾಕ್ಟರು ಹೇಳಿದ್ದಾರೆ."

"ನನಗೇನೂ ಬೇಡ – ಶ್ರೀಮಾತೆಯವರಿಗೆ ಉಪಾಹಾರ ತಂದುಕೊಡಿ."

ಎಂದು ಷಿರೀನ್ ಹೇಳಿದರು.

ಬೊಂಬಾಯಿವಾಲಾ ಅವರ ಸೇವಕ ಷಿರೀನರಿಗೆ ಹಾಲು, ಟೋಸ್ಟ್

ಮತ್ತು ಯೋಗಿನಿ ಅಮ್ಮನವರಿಗೆ ಹಾಲು, ಹಣ್ಣು, ಕೆಲವು ಸಿಹಿ ತಿನಿಸುಗಳು, ಟೋಸ್ಟ್ ತಂದಿತ್ತ.

ಯೋಗಿನಿ ಅಮ್ಮನವರು ಉಪಚರಿಸಿ ಷಿರೀನರಿಗೆ ಹಾಲು, ಟೋಸ್ಟ್ ತಿನ್ನಿಸಿದರು. ಲಘುವಾಗಿ ಅವರ ಉಪಾಹಾರವೂ ಮುಗಿಯಿತು.

ಯೋಗಿನಿ ಅಮ್ಮನವರ ವಿಶ್ರಾಂತಿಗೆ ಕೋಣೆಯ ಮತ್ತೊಂದು ಬದಿಯಲ್ಲಿದ್ದ ಮಂಚದ ಮೇಲೆ ಹೊಸ ಹಾಸಿಗೆಯನ್ನು ಆಳು ಹಾಸಿಹೋದ.

ಯೋಗಿನಿ ಅಮ್ಮನವರು ಷಿರೀನರ ಪಕ್ಕ ಬಿಟ್ಟೇಳಲಿಲ್ಲ.

"ನಿದ್ರೆ ಬರುವಂತಿಲ್ಲವೇ ಮಗಳೇ" ಎಂದು ಕೇಳಿದರು.

"ಬರುತ್ತದೆ. ನೀವು ವಿಶ್ರಾಂತಿಗೆ ತೆರಳಿ."

"ನಿನಗೆ ನಿದ್ರೆ ಹತ್ತಿದ ಮೇಲೆ ನಾನು ಹೋಗಿ ಮಲಗಿಕೊಳ್ಳುತ್ತೇನೆ."

"ನಿಮ್ಮ ಸೇವೆ ನಾನು ಮಾಡಬೇಕು – ಎಂಥ ವಿಪರ್ಯಾಸ – ನಿಮ್ಮಿಂದ ನಾನು ಆರೈಕೆಮಾಡಿಸಿಕೊಳ್ಳುತ್ತಿದ್ದೇನೆ."

"ಚಿಂತೆಯಿಲ್ಲ."

"ಮಾತಾಜೀ, ನೀವು ಸರ್ವಸಂಗ ಪರಿತ್ಯಾಗ ಮಾಡಿದವರು. ನನ್ನ ಮೇಲೇಕೆ ಇಷ್ಟು ವಿಶ್ವಾಸವಿಟ್ಟುಕೊಂಡಿರುವಿರಿ. ಈ ವಿಶ್ವಾಸ ಮಾಯೆಯಲ್ಲವೇ – ಇದರಿಂದ ನಿಮ್ಮ ಸಾಧನಯೋಗಕ್ಕೆ ಭಂಗಬರುವುದಿಲ್ಲವೇ ?"

"ನಿಷ್ಕಲ್ಮಷಪ್ರೇಮ ಮಾಯೆಯಿಂದ ದೂರವಾಗಿರುತ್ತದೆ ಮಗಳೇ. ಲೋಕ ಪರಿತ್ಯಾಗವೆಂದರೆ ಸುಖದ ಪರಿತ್ಯಾಗವೇ ವಿನಾ ದುಃಖದ ಪರಿತ್ಯಾಗವಲ್ಲ. ಲೋಕದ ದುಃಖೋಪಶಮನವನ್ನೇ – ದುಃಖ ನಿರ್ಮೂಲನವನ್ನೇ ಗುರಿಯಾಗಿಟ್ಟುಕೊಂಡಲ್ಲವೇ ಎಲ್ಲ ಧರ್ಮ, ಮತಗಳೂ ಹೊರಟಿರುವುದು."

"ಲೋಕದ ಎಲ್ಲ ದುಃಖವನ್ನೂ ತನ್ನ ಮೇಲೆ ಹಾಕಿಕೊಳ್ಳುವ ವ್ಯಕ್ತಿ ಅತಿ ದುಃಖಿಯಾಗುವುದಿಲ್ಲವೇ ?"

"ಆಗುತ್ತಾನೆ. ಕ್ರಿಸ್ತ, ಬುದ್ಧ, ಬಾಪೂ ಅತಿದುಃಖಿಗಳು – ಆದರೆ ದುಃಖಾತೀತರು. ಅವರನ್ನೇ ಭಗವಂತ 'ಸ್ಥಿತಪ್ರಜ್ಞ'ರೆಂದು ಗೀತೆಯಲ್ಲಿ ಕರೆಯುವುದು. ಲೋಕದ ದುಃಖ ತನ್ನದೆಂದು ಭಾವಿಸುವ ಜೀವಿಗೆ ಅವಶ್ಯಕವಾದ ಶಕ್ತಿಯನ್ನು ಭಗವಂತ ಕರುಣಿಸುತ್ತಾನೆ."

"ತಾಯೀ, ನಾನಿಂದು ಪರಮಸುಖಿ."

"ನೀನು ನಿತ್ಯಸುಖಿಯಾಗಿರಬೇಕೆಂದು ನಿನ್ನ ತಾಯಿ ಬಯಸುತ್ತಾಳೆ – ನಿದ್ರೆಬರುವ ಹಾಗಿಲ್ಲವೇ ?"

"ಬರುತ್ತದೆ."

"ನಾನು ಒಂದು ಹಾಡು ಹೇಳುತ್ತೇನೆ. ಕೇಳುತ್ತ ನಿದ್ರೆ ಮಾಡು."

ಎಂದು ಕನಕದಾಸರ 'ತನು ನಿನ್ನದು ಜೀವ ನಿನ್ನದು' ದೇವರನಾಮ ಹಾಡಿದರು. ಹಾಡು ಕೇಳುತ್ತ ಕೇಳುತ್ತ ಷಿರೀನರಿಗೆ ಕಣ್ಣುಹತ್ತಿತು. ಯೋಗಿನಿ ಅಮ್ಮನವರು ಮೆಲ್ಲನೆದ್ದು, ಮಂಚದ ಮೇಲಣ ಫರದೆಯನ್ನು ಕೆಳಗೆ ಇಳಿಬಿಟ್ಟು, ಮೇಜಿನ ಮೇಲಿದ್ದ ದೊಡ್ಡ ದೀಪ ಆರಿಸಿ, ಸಣ್ಣ ದೀಪವೊಂದನ್ನು ಹಚ್ಚಿದರು.

ಷಿರೀನ್ ಸುಖವಾದ ನಿದ್ರೆಯಲ್ಲಿ ಮೈಮರೆತರು.

ಯೋಗಿನಿ ಅಮ್ಮನವರಿಗೆ ನಿದ್ರೆ ಬರಲಿಲ್ಲ. ಮೆಲ್ಲನೆ ಕಿಟಕಿಯ ಬಳಿ ಸಾರಿ ಎದುರಿಗಿದ್ದ ಮಜಗಾಂವ್ ತೋಟದ ಕಡೆ ದೃಷ್ಟಿನೆಟ್ಟರು. ತಾಯಿಯ ಅಸೀಮ ಕರುಣೆಯಂತೆ ಚಂದ್ರಪ್ರಕಾಶ ಬೆಳಗಿತ್ತು. ತೋಟದಲ್ಲಿ ಅಲ್ಲಲ್ಲಿ ಕೆಲವು ದಂಪತಿಗಳು ಕುಳಿತಿದ್ದರು. ಆಗಾಗ್ಗೆ 'ನಿಷಾರಾಣಿ'ಯ ಸೌಗಂಧ ಹೊತ್ತು ತಂಗಾಳಿ ತೀಡುತ್ತಿತ್ತು.

ಅತ್ತ ಪ್ರಕೃತಿ ಬೆಳಕುಚೆಲ್ಲಿ, ಒಲವುಸೂಸಿ ಜೀವನದ ಅನಂತ ವಾಹಿನಿಯನ್ನು ಮುಂದುವರಿಸುತ್ತಿತ್ತು; ಇತ್ತ ಅದೇ ಪ್ರಕೃತಿ ಷಿರೀನರನ್ನು ಅರೆದುಕೊರೆದು ಬೆಂಡುಮಾಡುತ್ತಿತ್ತು. ಒಂದೆಡೆ ಜೀವನ, ಮತ್ತೊಂದೆಡೆ ಸಾವು. ಸೃಷ್ಟಿ, ಮರಣಗಳ ಮಧ್ಯೆ ಮನುಷ್ಯಜೀವನ ತೂಗಾಡುತ್ತಿತ್ತು.

ಯೋಗಿನಿ ಅಮ್ಮನವರ ಹೃದಯ ಭಾವನೆಯ ಮಡುವಾಯಿತು. 'ಈ ಷಿರೀನ್ – ಹಿಂದೆ ಯಾವದೋ ಜನ್ಮದಲ್ಲಿ ನನ್ನ ಮಗಳೇ ಆಗಿದ್ದಿರ ಬಹುದೇ. ಏಕೆ ಮಮತೆ ಹೀಗೆ ನನ್ನನ್ನು ಬಾಧಿಸುತ್ತಿದೆ' ಎಂದು ಪ್ರಶ್ನಿಸಿ ಕೊಂಡರು. ಪ್ರಶ್ನೆಗೆ ಉತ್ತರ ದೊರೆಯಲಿಲ್ಲ.

ಯೋಗಿನಿ ಅಮ್ಮನವರ ಹೃದಯದ ಬುನಾದಿಯನ್ನು ಛೇದಿಸಿಕೊಂಡು ಒಂದು ಉತ್ಕಟ ಪ್ರಾರ್ಥನೆ ಹೊರಹೊಮ್ಮಿತು.

"ಭಗವಂತಾ ! ಈ ನನ್ನ ಮಗಳ ಪ್ರಾಣ ಉಳಿಸು.

ಈಕೆ ಪರಿಶುದ್ಧೆ, ಪ್ರೇಮಮಯಿ – ಜೀವನ್ಮುಕ್ತೆ.

ಪ್ರಾಣಕ್ಕೆ ಪ್ರಾಣ ಬೇಕಾದಲ್ಲಿ ನನ್ನ ನಿರುಪಯುಕ್ತ ಜೀವ ಸ್ವೀಕರಿಸು."

ಇಡಿಯ ರಾತ್ರಿ ಯೋಗಿನಿ ಅಮ್ಮನವರು ಪ್ರಾರ್ಥನೆಯಲ್ಲಿ ಕಳೆದರು.

ಬೆಳಗಾಯಿತು. ತಮ್ಮ ಮಂಚದೆದುರಿಗಿದ್ದ ಆರಾಮ ಕುರ್ಚಿಯ ಮೇಲೆ ಯೋಗಿನಿ ಅಮ್ಮನವರು ಮಲಗಿದ್ದುದನ್ನು ಷಿರೀನ್ ಕಂಡರು. ಅವರು ಕಣ್ಣು ಎದುರಿಗಿದ್ದ ಮಂಚದ ಕಡೆಹೋಯಿತು. ಹಾಸಿದ ಹಾಸಿಗೆ ಹಾಸಿದಂತೆಯೇ ಇತ್ತು.

ಷಿರೀನ್ ಮೆಲ್ಲನೆ 'ಅಮ್ಮಾ' ಎಂದರು.

ಯೋಗಿನಿ ಅಮ್ಮನವರು ಎದ್ದುಬಂದು ಷಿರೀನರ ಮಂಚದ ತೆರೆತೆಗೆದು "ಕರೆದೆಯಾ ಮಗಳೇ" ಎಂದರು.

"ರಾತ್ರಿ ನೀವು ಮಲಗಲೇ ಇಲ್ಲ."

"ಆರಾಮಕುರ್ಚಿಯ ಮೇಲೆ ಮಲಗಿದ್ದೆ. ರಾತ್ರಿ ನಿದ್ರೆಬಂದಿತೇ ?"

"ಇಂಥ ನಿದ್ರೆ ನಾನು ಮಾಡಿ ಬಹಳ ದಿವಸವಾಗಿತ್ತು. ನನ್ನ ಮೈ ಇಂದು ಬಹಳ ಹಗುರವಾಗಿದೆ."

"ಮಗಳೇ, ನಾನು ಸ್ನಾನ ಮಾಡಬೇಕು. ನನಗೊಂದು ಸೀರೆ, ಟವಲು ಕೊಡುವೆಯಾ"

ಎಂದು ಕೇಳಿದರು. ಷಿರೀನ್ ತಮ್ಮ ಬೀಗದಕೈ ಗೊಂಚಲನ್ನು ಯೋಗಿನಿ ಅಮ್ಮನವರ ಕೈಗಿತ್ತು

"ಆ ಆಲ್ಮೀರಾದಲ್ಲಿ ಬಟ್ಟೆಗಳಿವೆ. ನಿಮಗೆ ಬೇಕಾದದ್ದು ತೆಗೆದುಕೊಳ್ಳಿ"

ಎಂದು ಹೇಳಿ, ಮಂಚದ ಬದಿಯಲ್ಲಿದ್ದ ಕರೆಗಂಟೆಯ ಗುಂಡಿಯನ್ನೊತ್ತಿದರು.

ಆಳು ಬಂದು ಯೋಗಿನಿ ಅಮ್ಮನವರ ಸ್ನಾನಕ್ಕೆ ಪಕ್ಕದಲ್ಲಿದ್ದ ಸ್ನಾನ ಗೃಹಕ್ಕೆ ನೀರು ತಂದುಕೊಟ್ಟ.

ಯೋಗಿನಿ ಅಮ್ಮನವರು ಸ್ನಾನ ಮುಗಿಸಿ ಬರುವಷ್ಟರಲ್ಲಿ ಚಹಾ ಬಂದಿತ್ತು. ಅದೇ ಬಂದಿದ್ದ ವಾಸುವನ್ನು ಕರೆದುಕೊಂಡು ಬೊಂಬಾಯಿವಾಲಾ ಮಹಡಿಯ ಮೇಲೆ ಬಂದರು.

ಚಹಾ ಮುಗಿದ ಮೇಲೆ ಯೋಗಿನಿ ಅಮ್ಮನವರು ಹೊರಟುನಿಂತರು. ಷಿರೀನ್ ಗಂಡನ ಕಡೆ ತಿರುಗಿ

"ರಾತ್ರಿಯೆಲ್ಲಾ ಮಾತಾಜಿ ನನಗಾಗಿ ಪ್ರಾರ್ಥನೆ ಸಲ್ಲಿಷಿದರು"

ಎಂದು ಹೇಳಿದರು.

ಯೋಗಿನಿ ಅಮ್ಮನವರ ತನು ಸೋತಿತ್ತು, ಆದರೆ ಮನಸ್ಸು ಪ್ರಫುಲ್ಲ ವಾಗಿತ್ತು.

ರಾಮಗಿರಿ ಆಶ್ರಮದ ಸಭಾಮಂದಿರ ಸಿದ್ಧವಾಗಿದೆಯೆಂದು ರಾಮಸ್ವಾಮಿ ಯಿಂದ ಕಾಗದ ಬರಲು ಬಹಳ ದಿನ ತಡವಾಗಲಿಲ್ಲ. ವಾಸು ಹೊರಡಲು ಆತುರನಾದ.

ಮುಂಬಯಿ ಬಿಟ್ಟುಹೋಗಲು ಪ್ರಮಿಳೆಯ ಮನಸ್ಸು ಹಿಂದೆಗೆಯ ತೊಡಗಿತು. ಷಿರೀನರ ಆರೋಗ್ಯದ ಚಿಂತೆ ಅವಳನ್ನು ಬಹುವಾಗಿ ಬಾಧಿಸ ತೊಡಗಿತು.

ವಾಸು, ಆಶ್ರಮದ ಹಿತೈಷಿಗಳಾದ ಬೊಂಬಾಯಿವಾಲಾ, ರತನ್ ಲಾಲ್, ಸ್ಕಿನ್ನರ್, ಮಿಸ್ ಎಮಿಲಿ, ಅಯೋಧ್ಯಾಪ್ರಸಾದ್ ಇವರ ಸಭೆ ಕರೆದು ಆಶ್ರಮದ ಕಾರ್ಯವಿಧಾನ ಚರ್ಚಿಸಿ ತಮ್ಮ ಪ್ರಯಾಣದ ಸುದ್ದಿ ತಿಳಿಸಿದ. ವಾಸೂ ಹೋಗಿ ಬಂದ ಮೇಲೆ ಮಿಸ್ ಎಮಿಲಿ ಮತ್ತು ಸ್ಕಿನ್ನರ್ ಆಶ್ರಮಕ್ಕೆ ಹೊರಡುವುದೆಂದು ನಿಶ್ಚಯವಾಯಿತು.

"ಆಶ್ರಮದ ಕೆಲಸ ಕಾರ್ಯ ಒಂದು ವ್ಯವಸ್ಥಿತ ರೀತಿಯಲ್ಲಿ ನಡೆ ಯುವುದಕ್ಕೆ ಒಂದು ಸಮಿತಿ ರಚಿಸುವುದು ಒಳ್ಳೆಯದೆಂದು ನನಗೆ ತೋರುತ್ತದೆ."

ಎಂದು ವಾಸೂ ಸೂಚಿಸಿದ.

"ಸಮಿತಿಯೇತಕ್ಕೆ? ನೀವು ಶ್ರೀ ರಾಮಸ್ವಾಮಿ ಎಲ್ಲಾ ಕೆಲಸ ಕಾರ್ಯ ಗಳನ್ನೂ ನೋಡಿಕೊಂಡು ಹೋಗುತ್ತಿರುವಿರಲ್ಲಾ"

ಎಂದು ಬೊಂಬಾಯಿವಾಲಾ ಹೇಳಿದರು.

"ನೋಡಿ ಬೊಂಬಾಯಿವಾಲಾಜಿ, ಆಶ್ರಮ ಸಾರ್ವಜನಿಕ ಸಂಸ್ಥೆ. ಅದರ ಸ್ಥಾಪನೆಗೇ ಲಕ್ಷಾಂತರ ರೂಪಾಯಿಗಳ ಚಂದಾ ಬಂದಿದೆ. ಹಣ ಬರುತ್ತಿದೆ. ಇಷ್ಟೆಲ್ಲ ಅಧಿಕಾರ ಒಬ್ಬ ವ್ಯಕ್ತಿಯ ಕೈಯಲ್ಲಿ ಕೇಂದ್ರೀಕೃತವಾಗ

ಬಾರದು. ಸತ್ಕಾರ್ಯಗಳಲ್ಲಿ ಹಣ ಕೊಡುವವರ ಮನಸ್ಸಿಗೆ ತಮ್ಮ ಹಣ ಅಪವ್ಯಯವಾಗುತ್ತಿಲ್ಲವೆಂಬ ನಂಬಿಕೆ ಬರುವುದು ಸಂಸ್ಥೆಯ ಹಿತದೃಷ್ಟಿಯಿಂದಲೇ ಒಳ್ಳೆಯದು. ಒಂದು ತಾತ್ಕಾಲಿಕ ಸಮಿತಿಯನ್ನು ರಚಿಸೋಣ. ಮುಂದೆ ಸಮಿತಿಯು ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಬಹುದು.''

"ಮಿ. ವಾಸುದೇವರಾಯರ ಸಲಹೆಯನ್ನು ನಾನು ಅನುಮೋದಿಸುತ್ತೇನೆ. ಈಚೆಗೆ ಪತ್ರಿಕೆಗಳ ತುಂಬ ಸಾರ್ವಜನಿಕ ಹಣದ ದುರುಪಯೋಗದ ಸುದ್ದಿಯೇ ತುಂಬಿದೆ. ಈ ಸಂಸ್ಥೆಯಲ್ಲಿ ಹಾಗಾಗುವ ಸಂಭವವಿಲ್ಲದಿದ್ದರೂ, ಜನರ ಮನಸ್ಸಿನಲ್ಲಿ ಅಪನಂಬಿಕೆ ಬಾರದಂತೆ ಎಚ್ಚರವಾಗಿರುವುದು ಅವಶ್ಯಕ. ಈ ಸಮಿತಿಗೆ ಮಿ. ಬೊಂಬಾಯಿವಾಲಾ ಅಧ್ಯಕ್ಷರಾಗಿರಬೇಕೆಂದು ನಾನು ಸೂಚಿಸುತ್ತೇನೆ.''

ಮೇಜರ್ ಸ್ಕಿನ್ನರ್ ಅವರ ಸೂಚನೆಯನ್ನು ಎಲ್ಲರೂ ಸಂತೋಷದಿಂದ ಒಪ್ಪಿಕೊಂಡರು.

"ನಾನು ಮುಂಬಯಿಯಲ್ಲಿ ಇರುವವನು. ಆಶ್ರಮದಲ್ಲಿಯೇ ಇದ್ದು ಅದರ ದೈನಂದಿನ ಚಟುವಟಿಕೆ ಸಾಗಿಸುವವರು ವಾಸುದೇವರಾಯರು. ಅವರು ಕಾರ್ಯಾಧ್ಯಕ್ಷರಾಗಿರಬೇಕೆಂದು ನನ್ನ ಸಲಹೆ."

ಬೊಂಬಾಯಿವಾಲಾ ಅವರ ಸಲಹೆಯೂ ಸ್ವೀಕೃತವಾಯಿತು.

ರತನ್‌ಲಾಲ್ ಮತ್ತು ಮೇಜರ್ ಸ್ಕಿನ್ನರ್ ಉಪಾಧ್ಯಕ್ಷರಾಗಿರುವುದೆಂದೂ, ಮಿಸ್. ಎಮಿಲಿ ಮತ್ತು ರಾಮಸ್ವಾಮಿ ಕಾರ್ಯದರ್ಶಿಗಳಾಗಿರುವುದೆಂದೂ, ಅಯೋಧ್ಯಾಪ್ರಸಾದ್, ಹರಿಭಾಯ್ ಮತ್ತು ತ್ರಿವೇದಿ ಕಾರ್ಯ ಸಮಿತಿಯ ಸದಸ್ಯರಾಗಿರುವುದೆಂದು ನಿರ್ಣಯವಾಯಿತು. ಮುಂದೆ ರಾಘವ ಅಯ್ಯರ್ ಅವರನ್ನೂ ಇತರರನ್ನೂ ಸಮಿತಿಗೆ ಸೇರಿಸಿಕೊಳ್ಳುವ ಅಧಿಕಾರ ಸಮಿತಿಗೆ ವಹಿಸಲ್ಪಟ್ಟಿತು.

ವಾಸು, ಯೋಗಿನಿ ಅಮ್ಮನವರು, ಸ್ವಾಮಿಜಿ ಪ್ರಯಾಣ ಮಾಡುವುದಕ್ಕೆ ಬೇಕಾದ ಸೌಕರ್ಯಗಳು ಚರ್ಚಿಸಲ್ಪಟ್ಟವು. ಪ್ರಯಾಣ ರೈಲಿನಲ್ಲಿ ಮಾಡಬೇಕೋ ಕಾರಿನಲ್ಲಿ ಮಾಡಬೇಕೋ ಎಂಬ ವಿಷಯ ತಲೆಯೆತ್ತಿತು.

"ಈಗ ಆಶ್ರಮ ಉಪಯೋಗಿಸುತ್ತಿರುವ ನನ್ನ ಕಾರು ಆಶ್ರಮಕ್ಕೇ ಸೇರಬೇಕೆಂದು ನಾನು ನಿಶ್ಚಯಿಸಿದ್ದೇನೆ"

ಎಂದು ಬೊಂಬಾಯಿವಾಲಾ ಹೇಳಿದರು.

"ಸಾಮಾನು ಬಹಳ ಇದೆ. ಕಾರಿನಲ್ಲಿ ಅವುಗಳನ್ನು ಸಾಗಿಸುವುದು ಹೇಗೆ ?"

ಎಂದು ರತನ್‌ಲಾಲ್ ಕೇಳಿದ.

"ನಾನೂ ಕಾರಿನ ವಿಷಯ ಯೋಚಿಸುತ್ತಿದ್ದೆ. ಬೊಂಬಾಯಿವಾಲಾ ಅವರು ಆ ಸಮಸ್ಯೆ ಪರಿಹರಿಸಿದ್ದಾರೆ. ನನ್ನ ಮಿತ್ರರು ಮಾನ್ಸಾರ್ ಆಂದ್ರೆ ಫಾವರ್ ಆಶ್ರಮಕ್ಕೆ ತಮ್ಮ ಕಾಣಿಕೆಯಾಗಿ ಒಂದು ಕಾರು ತೆಗೆದುಕೊಡ ಬೇಕೆಂದಿದ್ದರು. ನಿಮ್ಮ ಅಭ್ಯಂತರವಿಲ್ಲದಿದ್ದರೆ ಒಂದು ಚೆವ್‌ರಲೇ ವ್ಯಾನನ್ನು ಕೊಂಡುಕೊಡಲು ಹೇಳುತ್ತೇನೆ. ಆಶ್ರಮದ ಕೆಲಸ ಕಾರ್ಯಕ್ಕೆ ಎಂದಿದ್ದರೂ ವ್ಯಾನ್ ಬೇಕಾಗುತ್ತದೆ."

ಎಂದು ಮೇಜರ್ ಸ್ಕಿನ್ನರ್ ತಿಳಿಸಿದರು.

ಸ್ಕಿನ್ನರ್ ಸೂಚನೆ ಸರ್ವಾನುಮತದಿಂದ ಅಂಗೀಕಾರವಾಯಿತು. ವ್ಯಾನ್ ತೆಗೆದುಕೊಂಡು ಹೋಗಿ ಬಿಟ್ಟು ಬರುವುದಕ್ಕೆ ತಮ್ಮ ಡ್ರೈವರನ್ನೇ ಕೊಡುವುದಾಗಿ ಬೊಂಬಾಯಿವಾಲಾ ಹೇಳಿದರು.

ಗುರುವಾರ ಬೆಳಿಗ್ಗೆ ವಾಸು, ಯೋಗಿನಿ ಅಮ್ಮನವರು, ಸ್ವಾಮಿಜಿ ಹೊರಡುವುದೆಂದು ಇತ್ಯರ್ಥವಾಯಿತು.

ಬೆಳಿಗ್ಗೆ ಐದು ಗಂಟೆಗೇ ಸಾಧಕ ಸಂಘದ ಸದಸ್ಯರು, ರತನ್‌ಲಾಲ್ ಮತ್ತು ಗೆಳೆಯರು, ಕುಟುಂಬವರ್ಗ, ಇತರ ಅಭಿಮಾನಿಗಳು ಬಂದು ಆಶ್ರಮದಲ್ಲಿ ನೆರೆದರು. ಎಲ್ಲರ ಕಣ್ಣಲ್ಲಿಯೂ ಕೋಡಿ ಹರಿದಿತ್ತು. ಪರ್ಸೋವಾ ಮನೆ 'ಬಿಕೋ' ಎನ್ನುವುದಕ್ಕೆ ಆರಂಭಿಸಿತ್ತು.

ವಾಸುವನ್ನು ಒಂದು ಪಕ್ಕಕ್ಕೆ ಕರೆದು ಬೊಂಬಾಯಿವಾಲಾ ಮೂರನೆಯ ಕಂತಿನ ಐವತ್ತು ಸಾವಿರ ರೂಪಾಯಿಗಳ ಒಂದು ಚೆಕ್ ಇತ್ತರು.

ಯೋಗಿನಿ ಅಮ್ಮನವರನ್ನು ಅಪ್ಪಿಕೊಂಡು ಷಿರೀನ್ ಗೋಳಾಡಿದರು. ಯೋಗಿನಿ ಅಮ್ಮನವರು, ಬೊಂಬಾಯಿವಾಲಾ ಅವರ ಕಡೆ ತಿರುಗಿ

"ನನ್ನ ಮಗಳನ್ನು ಚೆನ್ನಾಗಿ ನೋಡಿಕೊಳ್ಳಿ. ಅವರ ಆರೋಗ್ಯದ ಬಗ್ಗೆ ಪ್ರತಿನಿತ್ಯವೂ ಬರೆಯುತ್ತಿರಿ. ಅವರ ಆರೋಗ್ಯ ಚಿಂತಾಜನಕವಾದರೆ

ಕೂಡಲೆ ನನಗೆ ತಾರುಮಾಡಿ ತಿಳಿಸಿ. ಮಾರನೆಯ ದಿನವೇ ನಾನು ಪ್ಲೇನ್ ಹತ್ತಿಬರುತ್ತೇನೆ"

ಎಂದು ಹೇಳಿದರು.

ಸ್ವಾಮಿಜಿ ಎಲ್ಲರನ್ನೂ ಸಂತೈಸುತ್ತಾ

"ಎಲ್ಲರನ್ನೂ ಬೇಗ ಆಶ್ರಮಕ್ಕೆ ಬರಮಾಡಿಕೊಳ್ಳುತ್ತೇವೆ."

ಎಂದು ಹೇಳಿದರು.

ಸ್ಕಿನ್ನರ್ ಒಬ್ಬರನ್ನುಳಿದು ಎಲ್ಲರೂ ಯೋಗಿನಿ ಅಮ್ಮನವರಿಗೂ, ಸ್ವಾಮಿಜಿಯವರಿಗೂ ದೀರ್ಘದಂಡ ಪ್ರಣಾಮಮಾಡಿದರು.

"ಹೊತ್ತು ಮೀರುತ್ತಿದೆ. ಬಿಸಿಲು ಏರಿದರೆ ಪ್ರಯಾಣಕ್ಕೆ ತೊಂದರೆಯಾಗುತ್ತದೆ"

ಎಂದು ಸ್ಕಿನ್ನರ್ ಎಚ್ಚರಕೊಡಲು, ವಾಸು, ಯೋಗಿನಿ ಅಮ್ಮನವರು, ಸ್ವಾಮಿಜಿ ಕಾರಿನಲ್ಲಿ ಕುಳಿತರು.

ವಾಸು ಮನಸ್ಸಿನಲ್ಲಿ ಕುತೂಹಲ ಕೊರೆಯುತ್ತಿತ್ತು. 'ಒಂದು ಅಧ್ಯಾಯ ಮುಗಿದಂತಾಯಿತು. ಮುಂದಿನ ಅಧ್ಯಾಯ ಕೂಡಲೆ ಆರಂಭಿಸಬೇಕಾಗಿದೆ' ಎಂದು ಅವನು ಅಂದುಕೊಂಡ.

'ಎಂತಹ ಜನ – ಎಂತಹ ಹೃದಯ. ಇವರ ಸದ್ಭಾವನೆಗಳನ್ನು ನಾವು ಅಣಕವಾಡುತ್ತಿಲ್ಲವೇ' ಎಂದು ಯೋಚಿಸುತ್ತಾ ಯೋಗಿನಿ ಅಮ್ಮನವರು ಕಂಬನಿಗರೆಯುತ್ತಿದ್ದರು.

'ಮಾಯೆಯ ತೆರೆಯನ್ನು ಹರಿದೊಗೆದು ಸ್ವತಂತ್ರನಾಗಬೇಕೆಂದು ಬಯಸುವ ಜೀವನಿಗೆ ಹೊಸ ಹೊಸ ಮಾಯಾ ತೆರೆಗಳೇಕೆ ಮುಸುಕುತ್ತವೆ' ಎಂದು ಸ್ವಾಮಿಜಿ ವಿಚಾರಮಾಡುತ್ತಿದ್ದರು.

ವಾಸು ತಾರು ನೋಡಿಕೊಂಡ ರಾಮುಸ್ವಾಮಿ ಬೆಂಗಳೂರು ಮನೆಯಲ್ಲಿ ಸ್ನಾನ, ಅಡಿಗೆಯ ವ್ಯವಸ್ಥೆಮಾಡಿದ. ಆಶ್ರಮಕ್ಕೆ ಗೊತ್ತು ಮಾಡಲ್ಪಟ್ಟಿದ್ದ ಅಡಿಗೆ ಸೀತಾರಾಮು ಸೊಗಸಾದ ಊಟ ಸಿದ್ಧಮಾಡಿದ್ದ.

ಮುಂಬಯಿ ಬಿಟ್ಟ ಐವತ್ತು ಗಂಟೆಗಳ ತರುವಾಯ ವಾಸು, ಯೋಗಿನಿ ಅಮ್ಮನವರು, ಸ್ವಾಮಿಜಿ ಬೆಂಗಳೂರು ತಲುಪಿದರು.

೧೯

ಮಾರನೆಯ ಬೆಳಿಗ್ಗೆ ಉಪಾಹಾರ ಮುಗಿಸಿಕೊಂಡು ವಾಸು, ಪ್ರಮೀಳೆ, ಶಂಕರ – ರಾಮಸ್ವಾಮಿಯೊಂದಿಗೆ ಆಶ್ರಮಕ್ಕೆ ಹೊರಟರು. ರಾಮನಾಥಯ್ಯ ನವರೂ ಅವರ ಜತೆಗೆ ಬಂದರು.

ಆಶ್ರಮ ನಿರ್ಮಾಣದ ಬಗ್ಗೆ ತಾನು ಕೊಟ್ಟಿದ್ದ ಸಲಹೆ, ಸೂಚನೆಗಳನ್ನು ರಾಮಸ್ವಾಮಿ ಚಾಚೂ ತಪ್ಪದೆ ನಿರ್ವಹಿಸಿದ್ದುದನ್ನು ನೋಡಿ ವಾಸುವಿಗೆ ಪರಮಸಂತೋಷವಾಯಿತು.

ಆಶ್ರಮದ ಗೇಟಿನ ಬಳಿ ಬೈರಪ್ಪ ಬಂದು ಎಲ್ಲರನ್ನೂ ಎದುರುಗೊಂಡ.

ಕಾಡಿನಂತಿದ್ದ ರಾಮಗಿರಿ ನವನೂತನ ನಗರವಾಗಿದ್ದುದನ್ನು ಕಂಡು ಪ್ರಮೀಳೆಗೆ ಮೈಪುಳಕಿತವಾಯಿತು.

ಗೇಟಿಗೆ ಭವ್ಯವಾದ ಕಬ್ಬಿಣದ ಬಾಗಿಲು ಹಾಕಿಸಲ್ಪಟ್ಟು, ಮೇಲುಗಡೆ ದಪ್ಪ ಅಕ್ಷರಗಳಲ್ಲಿ 'ಋಷಿಧಾಮ' ಎಂಬ ಹೆಸರಿನ ಹಲಗೆ ತೂಗುಹಾಕ ಲ್ಪಟ್ಟಿತ್ತು. ತೂಗು ಹಲಗೆಯ ತಲೆಯ ಮೇಲೆ ಭವ್ಯಪ್ರಕಾಶದಿಂದ ಬೆಳಗುವ ಫ್ಲಾರಸ್ಯಾಂಟ್ ದೀಪ ಮೆರೆಯುತ್ತಿತ್ತು.

ಆಶ್ರಮ ಪ್ರವೇಶಿಸಿದ ಕೂಡಲೆ ಮೊದಲು ಸಿಕ್ಕುತ್ತಿದ್ದುದು ಸಭಾ ಮಂದಿರ. ಸುಮಾರು ೩೦೦ ಜನರು ಕೂಡುವಷ್ಟು ವಿಸ್ತಾರವಾಗಿದ್ದ ಮಂದಿರದ ಎದುರಿಗೆ ಮತ್ತು ಒಂದು ಪಕ್ಕದಲ್ಲಿ ಬಾಗಿಲಿತ್ತು. ಬಾಗಿಲುಗಳಿದ್ದ ಕಡೆ ಗಳಲ್ಲಿಯೇ ವಿಶಾಲವಾದ ಕಿಟಕಿಗಳೂ ಇದ್ದವು. ಸಭಾಮಂದಿರದಲ್ಲಿ ಒಂದು ಭಾಗದ ದೇವಮಂದಿರಕ್ಕೆ ಒಂದು ಬಾಗಿಲುವಾಡ ಬಿಡಿಸಲ್ಪಟ್ಟಿತ್ತು, ಮಂದಿರದಲ್ಲಿ ಒಂದೆಡೆ ಮತ್ತು ಅದರ ಅಕ್ಕಪಕ್ಕದಲ್ಲಿ ಪುಸ್ತಕ ಭಂಡಾರಕ್ಕೆ, ಗಾಜುಹಾಕಿದ ಬೀರುಗಳು ಇಡಲ್ಪಟ್ಟಿದ್ದವು. ಮೂರು ಎಲೆಕ್ಟ್ರಿಕ್ ಫ್ಯಾನುಗಳು ಮಂದಿರ ವನ್ನಲಂಕರಿಸಿದ್ದವು.

ಬಲಗಡೆ ಇದ್ದ ಮೊದಲನೆಯ ಕಟ್ಟಡವೇ ವಿಶೇಷ ಅತಿಥಿಗೃಹವಾಗಿತ್ತು. ಅತಿಥಿಗೃಹದಲ್ಲಿ ತೊಟ್ಟಿ, ಆರು ಕೋಣೆಗಳಿದ್ದವು. ಪ್ರತಿಕೋಣೆಗೂ ಪ್ರತ್ಯೇಕ ಶೌಚ, ಸ್ನಾನಗೃಹಗಳು ಜೋಡಿಸಲ್ಪಟ್ಟಿದ್ದವು.

"ನಮ್ಮ ಐರೋಪ್ಯ ಅತಿಥಿಗೃಹ ಸಿದ್ಧವಾಗುವವರೆಗೆ ಮಿಸ್. ರಾಬಿನ್ಸನ್ ಮತ್ತು ಮೇಜರ್ ಸ್ಕಿನ್ನರ್ ಇಲ್ಲಿಯೇ ಇರಬೇಕಾಗುತ್ತದೆ"

ಎಂದು ವಾಸು ಹೇಳಿದ. ವಿಶೇಷ ಅತಿಥಿಗೃಹದ ತೊಟ್ಟಿ ದಿವಾನ ಖಾನೆಯಾಗಿತ್ತು. ಅಲ್ಲಿ ಎರಡು ಸೋಫಾ ಸೆಟ್ಟುಗಳೂ, ಟೀಪಾಯ್‌ಗಳೂ ಜೋಡಿಸಲ್ಪಟ್ಟು ನೆಲಕ್ಕೆ ರತ್ನಗಂಬಳಿ ಹಾಸಲಾಗಿತ್ತು. ಪ್ರತಿ ರೂಮನ್ನೂ ಮಂಚ, ಎರಡು ಕುರ್ಚಿಗಳು, ಒಂದು ಮೇಜು, ಒಂದು ವಾರ್ಡ್ರೋಬ್ ಅಲಂಕರಿಸಿದ್ದವು.

"ಆರು ಜನ ಐರೋಪ್ಯ ಅತಿಥಿಗಳಿಗೆ ಅನುಕೂಲವಾಗಿದೆ"

ಎಂದು ವಾಸು ಹೇಳಿದ.

"ಹೆಚ್ಚು ಜನ ಬಂದರೆ ?"

ಎಂದು ಪ್ರಮೀಳಾ ಕೇಳಲು ವಾಸು

"ಸದ್ಯಕ್ಕೆ ಹಾಗೆಯೇ ಹೊಂದಿಸಿಕೊಂಡು, ಮುಂದಕ್ಕೆ ಐರೋಪ್ಯ ಅತಿಥಿಗೃಹ ಕಟ್ಟಿಕೊಳ್ಳಬೇಕು."

ಎಂದು ಉತ್ತರಿಸಿದ.

ವಿಶೇಷ ಅತಿಥಿಗೃಹದ ಪಕ್ಕದಲ್ಲಿ ಸಾಮಾನ್ಯ ಅತಿಥಿಗೃಹವಿತ್ತು. ಅದರಲ್ಲಿ ಯಾವ ಫರ್ನೀಚರೂ ಇರಲಿಲ್ಲ. ಉದ್ದಕ್ಕೆ ಒಂದು ಹಜಾರ.

ಅದರ ಪಕ್ಕದಲ್ಲಿಯೇ ಪಾಕಶಾಲೆ, ಭೋಜನ ಶಾಲೆಗಳಿದ್ದವು.

"ಪಾತ್ರೆಪದಾರ್ಥ ಏನುಬೇಕೋ ನನಗೆ ಗೊತ್ತಾಗಲಿಲ್ಲ. ಅವುಗಳನ್ನು ಶ್ರೀಮಾತೆಯವರು ತರಿಸಬೇಕು"

ಎಂದು ರಾಮಸ್ವಾಮಿ ಹೇಳಿದ.

"ಸದ್ಯಕ್ಕೆ ನಮ್ಮಲ್ಲಿರುವ ಪಾತ್ರೆಗಳು ಸಾಕು – ಮುಂದಕ್ಕೆ ದೊಡ್ಡ ದೊಡ್ಡ ತಪ್ಪಲೆ, ಕೊಡ, ಕಡಾಯಿ, ಬಾಣಲೆ ಬೇಕಾಗುತ್ತವೆ."

"ಅವುಗಳನ್ನು ಈಗಲೇ ಹೊಂದಿಸಿಕೊಳ್ಳುವುದು ಮೇಲು. ಆರಂಭೋತ್ಸವಕ್ಕೆ ಅತಿಥಿಗಳು ಹೆಚ್ಚಾಗಿ ಬರಬಹುದು."

"ಸೀತಾರಾಮು ಎಲ್ಲವನ್ನೂ ನಿಭಾಯಿಸಬಲ್ಲನೇ ?"

ಎಂದು ಪ್ರಮೀಳೆ ಕೇಳಿದಳು.

"ಸದ್ಯಕ್ಕೆ ನಿಭಾಯಿಸಬಲ್ಲ. ಮುಂದಕ್ಕೆ ಅವನೇ ಒಬ್ಬಿಬ್ಬರನ್ನು ಸಹಾಯಕ್ಕೆ ಕರೆದುಕೊಂಡು ಬರುತ್ತಾನೆ."

ಪಾಕಶಾಲೆಯ ಮುಂದುಗಡೆ ಸ್ವಲ್ಪ ಸ್ಥಳ ಬಿಡಲ್ಪಟ್ಟು, ಬೆಟ್ಟಕ್ಕೆ ಹೋಗುವುದಕ್ಕೆ ದಾರಿ ಮಾಡಲಾಗಿತ್ತು. ಅಲ್ಲಿದ್ದ ಸಣ್ಣ ಗೇಟನ್ನು ತೆಗೆದು ಕೊಂಡೇ ಬೆಟ್ಟಕ್ಕೆ ಹೋಗಬೇಕಾಗಿತ್ತು.

"ಈ ಗೇಟಿನ ಬೀಗದಕೈ ಶಂಕರನ ಕೈಗೆ ಕೊಟ್ಟುಬಿಡು ರಾಮು ಸ್ವಾಮಿ"

ಎಂದು ವಾಸು ಹೇಳಿದ.

ಅಲ್ಲಿಂದ ಮುಂದಿದ್ದುದೇ ವಾಸು, ಪ್ರಮಿಳೆ ಮತ್ತು ಶಂಕರನ ವಾಸಗೃಹ.

ವಾಸಗೃಹದ ಪ್ರವೇಶದಲ್ಲಿಯೇ ಕಛೇರಿ ಇದ್ದಿತು. ಕಛೇರಿಗೆ ಬೇಕಾದ ಫರ್ನೀಚರು, ಫೈಲುಗಳನ್ನು ಜೋಡಿಸುವ ರ್‍ಯಾಕುಗಳೂ (rack) ಅಣಿ ಮಾಡಲ್ಪಟ್ಟದ್ದವು. ಗುಮಾಸ್ತರು, ಟೈಪಿಸ್ಟುಗಳು ಕುಳಿತು ಕೆಲಸ ಮಾಡು ವುದಕ್ಕೆ ಪ್ರತ್ಯೇಕ ಸ್ಥಾನಗಳು ನಿರ್ದೇಶಿಸಲ್ಪಟ್ಟಿದ್ದವು.

ಕಛೇರಿಯ ಹಿಂದೆ ಉದ್ದಕ್ಕೆ ಒಂದು ವೆರಾಂಡ ರಚನೆಯಾಗಿತ್ತು. ಕಛೇರಿಯ ಹಿಂದಿದ್ದುದೇ ವಾಸು ಕೋಣೆ, ಅದರ ಬಲಕ್ಕೆ ಶಂಕರನ ಕೋಣೆ, ಎಡಕ್ಕೆ ಪ್ರಮಿಳೆಯ ಕೋಣೆ – ಮೂರು ಕೋಣೆಗಳನ್ನೂ ಮಂಚ, ಕುರ್ಚಿ, ಮೇಜು, ವಾರ್ಡ್‌ರೋಬ್ ಅಲಂಕರಿಸಿದ್ದವು. ಒಂದು ಕೋಣೆಯಿಂದ ಮತ್ತೊಂದಕ್ಕೆ ಹೋಗಲನುಕೂಲಿಸುವಂತೆ ಬಾಗಿಲುಗಳಿದ್ದವು. ಮೂರು ಕೋಣೆಗಳಿಗೂ ಪ್ರತ್ಯೇಕ ಶೌಚಗೃಹ, ಸ್ನಾನಗೃಹಗಳಿದ್ದವು.

ಆಶ್ರಮದ ಪಕ್ಕದಲ್ಲಿದ ಭಾವಿಗೆ ಎಲೆಕ್ಟ್ರಿಕ್ ಪಂಪು ಹಾಕಿ, ಭೋಜನ ಶಾಲೆ, ಪಾಕಶಾಲೆ, ಸ್ನಾನಗೃಹಗಳು, ಶೌಚಗೃಹಗಳಿಗೆ ನೀರು ಹಾಯಲು ನಲ್ಲಿಗಳು (ನಳಗಳು) ಇಡಲ್ಪಟ್ಟದ್ದವು.

ಎಡಗಡೆ ಇದ್ದ ನಿವೇಶನದಲ್ಲಿ ಸದ್ಯಕ್ಕೆ ಒಂದು ಸಣ್ಣ ಹೂದೋಟ ಮಾಡಲಾಗಿತ್ತು. ಅಲ್ಲಿಯೊಂದು ನೀರಿನ ಕಟ್ಟೆಯಿದ್ದು ನಲ್ಲಿಯಿತ್ತು.

"ಇಲ್ಲೇಕೆ ನಲ್ಲಿ ರಾಮು" ಎಂದು ವಾಸು ಕೇಳಿದ.

“ಸಭಾಮಂದಿರಕ್ಕೆ ಬರುವವರು ಕಾಲುತೊಳೆದುಕೊಂಡು ಒಳಕ್ಕೆ ಬರುವುದೊಳ್ಳೆಯದಲ್ಲವೇ ?’’

ಪ್ರಮಿಾಳೆಯ ಮತ್ತು ಶಂಕರನ ಕೋಣೆಗಳ ಮುಂದೆ ಎತ್ತರದ ಕಾಂಪೌಂಡು ಹಾಕಲ್ಪಟ್ಟಿತು. ಒಳಕ್ಕೆ ಗೇಟು ಮೂಲಕವೇ ಪ್ರವೇಶ ಏರ್ಪಡಿಸಲಾಗಿತ್ತು.

ವಾಸು ಹೃತ್ಪೂರ್ವಕವಾಗಿ ರಾಮಸ್ವಾಮಿ, ರಾಮನಾಥಯ್ಯ, ಬೈರಪ್ಪ ನವರಿಗೆ ತನ್ನ ಕೃತಜ್ಞತೆ ಅರ್ಪಿಸಿದ.

‘‘ಇನ್ನು ಸ್ವಲ್ಪ ದಿವಸಗಳಲ್ಲಿಯೇ ಆಸ್ಪತ್ರೆ ಕಟ್ಟಡ, ಯೂರೋಪಿಯನ್ ಅತಿಥಿಗೃಹ ಮತ್ತು ದೇವಮಂದಿರಗಳಾಗಬೇಕು. ಅವುಗಳನ್ನೂ ನೀವೇ ನಿಂತುಕೊಂಡು ಕಟ್ಟಿಸಿಕೊಡಬೇಕು ಬೈರಪ್ಪನವರೇ.”

ಎಂದು ವಾಸು ತಿಳಿಸಿದ.

ಅಂದು ಮನೆಗೆ ಹಿಂದಿರುಗಿ ಹೋಗಿ ಅಲ್ಲಿಯೇ ಊಟ ತೀರಿಸಿಕೊಂಡು ಸಾಮಾನು ತೆಗೆಸಿಕೊಂಡು ಆಶ್ರಮಕ್ಕೆ ಬರುವುದೆಂದೂ, ರಾತ್ರಿ ಅಡಿಗೆ ಊಟ ಆಶ್ರಮದಲ್ಲಿಯೇ ಆಗತಕ್ಕದೆಂದು ನಿಶ್ಚಯವಾಯಿತು.

ಮಧ್ಯಾಹ್ನ ಊಟ ಮುಗಿದ ಕೂಡಲೆ ವಾಸು ಸಾಮಾನು ಸಮೇತ ಶಂಕರ, ರಾಮಸ್ವಾಮಿಯನ್ನು ಆಶ್ರಮಕ್ಕೆ ಕಳಿಸಿಕೊಟ್ಟ. ಸೀತಾರಾಮು ಅಡಿಗೆಯ ಸಾಮಾನುಗಳನ್ನು ತೆಗೆದುಕೊಂಡು ರಾಮಸ್ವಾಮಿ ಜತೆಯಲ್ಲಿ ಹೊರಟ.

ವಾಸು, ಪ್ರಮಿಾಳೆ ಮೂರು ಗಂಟೆಯ ವೇಳೆಗೆ ಆಶ್ರಮ ಮುಟ್ಟಿದರು. ಮುಂಬಯಿಯಿಂದ ತಂದಿದ್ದ ಸಾಮಾನುಗಳೂ, ಬೆಂಗಳೂರು ಮನೆಯ ಸಾಮಾನುಗಳೂ ಆಶ್ರಮದ ಸಭಾಮಂದಿರದಲ್ಲಿ ಅಡಕಲ್ಪಟ್ಟಿದ್ದವು. ಪುಸ್ತಕ ಭಂಡಾರದ ಪುಸ್ತಕಗಳನ್ನು ಕಪಾಟುಗಳಲ್ಲಿ ಜೋಡಿಸಿ, ಆಂದ್ರೆಯ ಚಿತ್ರ ಗಳನ್ನು ಆಶ್ರಮದ ಬೇರೆಬೇರೆ ಭಾಗಗಳಲ್ಲಿ ತೂಗುಹಾಕುವ ವೇಳೆಗೆ ರಾತ್ರಿ ಯಾಯಿತು. ಪ್ರಮಿಾಳೆ ತನ್ನ ರೂಮು ಸೇರಿ, ತನ್ನ ಬಟ್ಟೆಬರೆಗಳನ್ನು ಜೋಡಿಸಿಕೊಂಡು, ವಾಸು ರೂಮಿನಲ್ಲಿ ಅವನ ಬಟ್ಟೆಬರೆಗಳನ್ನೂ ಜೋಡಿಸಿಟ್ಟಳು.

ಸೀತಾರಾಮು ಎಲ್ಲರನ್ನೂ ಊಟಕ್ಕೆಬ್ಬಿಸಿ ಬಡಿಸಿದ. ಊಟ ಮಾಡುತ್ತಿದ್ದಾಗ ರಾಮಸ್ವಾಮಿ

"ನಾನು ಎಲ್ಲಿರುವುದು ವಾಸು"

"ಸದ್ಯಕ್ಕೆ ವಿಶೇಷ ಆತಿಥಿಗೃಹದಲ್ಲಿರು. ಮುಂದಕ್ಕೆ ನೋಡಿ ಕೊಳ್ಳೋಣ"

ಎಂದು ಹೇಳಿದ.

"ನಾಳೆ ರಾತ್ರೀಗೇ ಬೊಂಬಾಯಿವಾಲಾ ಅವರ ಡ್ರೈವರನ್ನೂ ಊರಿಗೆ ಕಳಿಸಿಕೊಟ್ಟುಬಿಡು ರಾಮಸ್ವಾಮಿ"

"ಏನವಸರ. ಒಂದೆರಡು ದಿನ ಅವನೂ ಇರಲಿ."

"ಬೇಡಬೇಡ. ಹಿರೀನರಿಗೆ ಮೈಯಲ್ಲಿ ಸರಿಯಿಲ್ಲ. ಬೊಂಬಾಯಿವಾಲಾ ಅವರಿಗೆ ತೊಂದರೆಯಾಗಬಾರದು."

"ಹಾಗೇ ಆಗಲಿ."

"ಆಶ್ರಮಕ್ಕೆ ಒಂದು ಪೋಸ್ಟ್‌ಆಫೀಸ್ ಬೇಕೆಂದು ಅರ್ಜಿಹಾಕ ಬೇಕಾಗಿತ್ತು."

"ಹಾಕಿದ್ದೇನೆ."

"ಪೋಸ್ಟ್ ಆಫೀಸ್ ಬಂದರೆ ಅದಕ್ಕೊಬ್ಬ ನಂಬಿಕೆಯಾದ ಆಸಾಮಿ ಬೇಕು. ಆಶ್ರಮದ ಕೆಲಸಕ್ಕೆ ಮೂರು ಜನ ಸೇವಕರು ಬೇಕು. ಬೆಂಗಳೂರು ಮನೆಯ ವ್ಯವಸ್ಥೆ ಮಾಡಿ ಹನುಮನನ್ನು ಇಲ್ಲಿಗೆ ಕರೆಸಿಕೊಳ್ಳಬೇಕು. ಆಫೀಸ್ ಕೆಲಸಕ್ಕೆ ಷಾರ್ಟ್‌ಹ್ಯಾಂಡ್ ಬಲ್ಲ ಇಬ್ಬರು ಟೈಪಿಸ್ಟ್‌ಗಳು ಬೇಕು. ಮೊದಲೇ ಸ್ವಲ್ಪ ವಿಚಾರಮಾಡಿ ಯೋಗ್ಯರನ್ನು ತೆಗೆದುಕೊಳ್ಳುವುದು ಒಳ್ಳೆಯದು"

"ರಾಮನಾಥಯ್ಯನವರು ಒಳ್ಳೆಯ ಜನಗಳನ್ನು ಆರಿಸಿಕೊಡುವುದಾಗಿ ಹೇಳಿದ್ದಾರೆ."

ಆಶ್ರಮ ಸಮಿತಿ ರಚನೆಯಾದ ವಿಷಯವನ್ನೂ ಮದರಾಸಿನಿಂದ ಜಸ್ಟಿಸ್ ರಾಘವಅಯ್ಯರ್ ಬರೆದಿದ್ದ ವಿಷಯವನ್ನೂ ವಾಸು ಕೂಲಂಕಷವಾಗಿ ರಾಮಸ್ವಾಮಿಗೆ ವಿವರಿಸಿದ.

"ಆಶ್ರಮದ ಆರಂಭೋತ್ಸವ ಯಾವಾಗ ಇಟ್ಟುಕೊಳ್ಳೋಣ ವಾಸು."

"ಬೇಗನೆ ಇಟ್ಟುಕೊಳ್ಳಬೇಕು. ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಈಗಿನಿಂದಲೇ ಆರಂಭಿಸಿ ಉತ್ಸವವನ್ನು ಈ ತಿಂಗಳಲ್ಲಿಯೇ ಮುಗಿಸಬೇಕು. ಪ್ರಾಯಶಃ ಬೊಂಬಾಯಿ ಅಭಿಮಾನಿಗಳು, ಮದರಾಸಿನ ಅಭಿಮಾನಿಗಳು ಬರುತ್ತಾರೆ. ಅವರ ಆತಿಥ್ಯಕ್ಕೆ ತಕ್ಕ ವ್ಯವಸ್ಥೆಯಾಗಬೇಕು."

"ಸಾಮಾನ್ಯ ಅತಿಥಿಗೃಹ ಸಾಕಷ್ಟು ವಿಶಾಲವಾಗಿದೆ. ನೂರು ಜನ ಬಂದರೂ ಸಾಕಾಗುತ್ತದೆ. ಬೊಂಬಾಯಿ ಅಭಿಮಾನಿಗಳಿಗೆ ವಿಶೇಷ ಅತಿಥಿ ಗೃಹ ಸಾಲುತ್ತದೆ."

"ಈ ಸಮಯದಲ್ಲಿ ವೇಣಕ್ಕ ಇದ್ದಿದ್ದರೆ ಚೆನ್ನಾಗಿತ್ತು. ಊಟ ತಿಂಡಿ ವ್ಯವಸ್ಥೆ ಅವಳು ನೋಡಿಕೊಂಡು ಹೋಗಬಹುದಾಗಿತ್ತು. ಅವಳಿಗೆ ತೀರ್ಥ ಯಾತ್ರೆ ಹೋಗುವ ಹುಚ್ಚು ಈಗಲೇ ಹಿಡಿಯಬೇಕೇ?"

"ನೀವು ಯೋಚನೆ ಮಾಡಬೇಡಿ. ಅಡಿಗೆಯ ಮನೆಯ ವ್ಯವಸ್ಥೆ ನಾನು ನೋಡಿಕೊಳ್ಳುತ್ತೇನೆ."

ಎಂದು ಪ್ರಮಿಳಾ ಧೈರ್ಯಹೇಳಿದಳು.

ಆಶ್ರಮದ ಪೂರ್ವವ್ಯವಸ್ಥೆ. ಬೇಕಾದ ಸಾಮಾನುಗಳನ್ನು ಒದಗಿಸಿ ಕೊಳ್ಳುವುದು, ವಿವಿಧ ಕೆಲಸ ಕಾರ್ಯಗಳಿಗೆ ಯೋಗ್ಯ ಜನರನ್ನು ನಿಯಮಿಸು ವುದು ಮೊದಲಾದ ಚಟುವಟಿಕೆಗಳು ವಾಸುವಿಗೆ ಸ್ವಲ್ಪವೂ ಬಿಡುವು ಕೊಡಲಿಲ್ಲ. ಪ್ರಮಿಳಾ ತಪ್ಪದೆ ಷಿರೀನರಿಗೆ ಪತ್ರ ಬರೆದು ಅವರ ಆರೋಗ್ಯದ ವಿಷಯ ತಿಳಿದುಕೊಳ್ಳುತ್ತಿದ್ದಳು.

ವಾಸು, ರಾಮಸ್ವಾಮಿ, ಪ್ರಮಿಳಾ, ಶಂಕರ ಕುಳಿತುಕೊಂಡು ಆರಂಭೋತ್ಸವದ ಕಾರ್ಯಕ್ರಮವನ್ನು ಚರ್ಚೆಮಾಡಿದರು. ಆರಂಭೋತ್ಸವದ ದಿನ ಆಮಂತ್ರಿತರಾಗಿ ಬರುವ ಎಲ್ಲ ಅತಿಥಿಗಳಿಗೂ ರಾತ್ರಿ ಸೊಗಸಾದ ಔತಣ ಮಾಡಿಸಬೇಕೆಂದು ನಿರ್ಧರಿಸಲಾಯಿತು.

ಉತ್ಸವಕ್ಕೆ ಎರಡು ವಾರಗಳ ಮುಂಚೆ ಆಹ್ವಾನಪತ್ರ ಆಶ್ರಮದ ಅಧ್ಯಕ್ಷರಾದ ಬೊಂಬಾಯಿವಾಲಾ ಅವರ ಹೆಸರಿನಲ್ಲಿ ಸಿದ್ಧವಾಯಿತು. ಸ್ಥಳೀಯ, ಪರಸ್ಥಳೀಯ; ದೇಶೀಯ ವಿದೇಶೀಯ ನಾಮಾಂಕಿತರೆಲ್ಲರಿಗೂ ಆಹ್ವಾನ ಪತ್ರಗಳು ಹೋದವು.

ಆಹ್ವಾನ ಪತ್ರಗಳನ್ನು ಕಳುಹಿಸುತ್ತಿದ್ದಂತೆ ರಾಮಸ್ವಾಮಿ ಮನಸ್ಸಿನಲ್ಲಿ ಒಂದು ಸಂದೇಹವುತ್ಪನ್ನವಾಯಿತು.

"ಈಗ ನಾವು ಕಳುಹಿಸುತ್ತಿರುವ ಆಹ್ವಾನಪತ್ರಿಕೆಗಳಿಗೆ ಎಷ್ಟು ಜನ ಮನ್ನಣೆಗೊಟ್ಟು ಇಲ್ಲಿಗೆ ಬರಬಹುದು ವಾಸು."

"ನೋಡಬೇಕು. ಸಾವಿರ ಜನಗಳಿಗೆ ನಾವು ವ್ಯವಸ್ಥೆಮಾಡೋಣ."

"ಸಾವಿರಾರು ಜನಗಳ ಊಟೋಪಚಾರ ನೋಡಿಕೊಳ್ಳುವುದಕ್ಕೆ ಖರ್ಚೆಷ್ಟು ಬರುವುದು ವಿಚಾರಮಾಡು."

"ಖರ್ಚುಮಾಡದೆ ಹಣಬರುತ್ತದೇನಯ್ಯಾ? 'ಕೊಟ್ಟದ್ದು ತನಗೆ ಬೈಚಿಟ್ಟದ್ದು ಪರರಿಗೆ.'—ಆಹ್ವಾನಿತರಾಗಿ ಬಂದವರು ಏನೂ ಕೊಡದೆ ಹಿಂದಿರುಗಲಾರರು."

"ಅವರನ್ನು ನಾವು ಕೇಳುವುದು ಹೇಗೆ?"

"ಕೇಳಲೇ ಬಾರದು. ಇದಕ್ಕೊಂದು ಕೆಲಸ ಮಾಡೋಣ. ಕಛೇರಿ ಯಲ್ಲಿ ಒಂದು ದೊಡ್ಡ ಹುಂಡಿಯನ್ನಿಟ್ಟು, ಬಂದವರಿಗೆ ಅದನ್ನು ತೋರಿ ಸೋಣ. ಅವರು ತಮಗೆ ತೋರಿದ್ದನ್ನು ಅದರಲ್ಲಿ ಹಾಕಿ ಹೋಗುತ್ತಾರೆ. ಬೇರೆ ಒಂದು ಆಶ್ರಮದಲ್ಲಿ ಹೀಗೆ ಮಾಡಿರುವುದನ್ನು ನಾನು ನೋಡಿದ್ದೇನೆ. ಇದರಿಂದ ಬಹಳ ಕೆಲಸವಾಗುತ್ತದೆ."

"ಆಹ್ವಾನಿತರಿಗೆ ಸ್ಥಳ ಸಾಲದೆ ಬರಬಹುದೆಂದು ನನಗೆ ಅನುಮಾನ ವಾಗಿದೆ."

"ಬೈರಪ್ಪನವರಿಗೆ ಹೇಳಿ ಕೆಲವು ಹಂಗಾಮಿ ಗುಡಿಸಲುಗಳನ್ನು ಹಾಕಿಸು. ಹೇಗೂ ಆಶ್ರಮ. ಗುಡಿಸಲಿನಲ್ಲಿ ವಾಸಮಾಡುವ ನಾವೀನ್ಯವೇ ನಮ್ಮ ಮಾನ್ಯ ಅತಿಥಿಗಳಿಗೆ ಸಂತೋಷವನ್ನುಂಟುಮಾಡುತ್ತದೆ."

"ಸಭಾಮಂದಿರ ಸಾಲದೆ ಬರಬಹುದು. ವಿಶಾಲಚಪ್ಪರ ಹಾಕಿಸಿ, ಧ್ವನಿವರ್ಧಕಯಂತ್ರದ ವ್ಯವಸ್ಥೆಮಾಡುತ್ತೇನೆ."

"ಒಳ್ಳೆಯ ಧ್ವನಿವರ್ಧಕ ಯಂತ್ರ, ಒಂದು ರೇಡಿಯೋ ಕೊಂಡೇ ಬಿಡು ರಾಮು – ಮುಂದಾದರೂ ಅವು ನಮಗೆ ಬೇಕಾಗುತ್ತವೆ."

"ನಮ್ಮ ಕಟ್ಟಡಗಳ ಕೆಲಸ ಮಾಡಿದ ಕೂಲಿಯವರಿಗೆ ಅನ್ನಹಾಕಿಲ್ಲ – ಅನ್ನಶಾಂತಿಯಾಗಬೇಕು."

"ಉತ್ಸವದ ದಿನ ಬೇರೆ ಅಡಿಗೆ ಮಾಡಿಸಿ ಕೂಲಿಯವರಿಗೆ, ಸುತ್ತ ಮುತ್ತಲಿನ ಹಳ್ಳಿಯವರಿಗೆ ಊಟ ಹಾಕಿಸು. ಇನ್ನೊಂದು ಮುಖ್ಯವಿಷಯ – ಉತ್ಸವದ ದಿನದ ಕಾರ್ಯಕ್ರಮದಲ್ಲಿ ಬೈರಪ್ಪನವರಿಗೂ, ರಾಮನಾಥಯ್ಯ ನವರಿಗೂ ಸನ್ಮಾನ ಸಮಾರಂಭವನ್ನೂ ಏರ್ಪಡಿಸಬೇಕು. ಮುಂದಕ್ಕೆ ಬೈರಪ್ಪನವರಿಂದ ನಮಗೆ ಬಹಳ ಕೆಲಸವಾಗಬೇಕಾಗಿದೆ."

ಆಶ್ರಮದ ಪ್ರಕೃತಾವಶ್ಯಕತೆ ಹಾಗೂ ಭವಿಷ್ಯಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ಸೂಕ್ಷ್ಮವಾಗಿ ವಿವೇಚಿಸುತ್ತಿದ್ದ ವಾಸುವಿನ ದೂರದರ್ಶಿಕತೆ ರಾಮಸ್ವಾಮಿಗೆ ಬೆರಗನ್ನುಂಟುಮಾಡಿತು.

ಆರಂಭೋತ್ಸವದ ವ್ಯವಸ್ಥೆಯಲ್ಲಿ ಪ್ರಮೀಳೆ ಭಾಗವಹಿಸುತ್ತಿದ್ದರೂ ಶಂಕರ ಭಾಗವಹಿಸುತ್ತಿರಲಿಲ್ಲ. ವ್ಯಾಸಂಗ, ಲೇಖನಗಳಲ್ಲಿ ಅವನ ಸಮಸ್ತ ಕಾಲವೂ ವಿನಿಯೋಗವಾಗುತ್ತಿತ್ತು.

ಆಶ್ರಮದಲ್ಲಿ ಎಲ್ಲರಿಗಿಂತ ಮೊದಲು ಏಳುತ್ತಿದ್ದವನು ಶಂಕರ. ಉಷಃ ಕಾಲಕ್ಕೆ ಮುನ್ನವೇ ಎದ್ದು ಅವನು ಬೆಟ್ಟದ ಕಡೆ ಹೊರಟುಹೋಗುತ್ತಿದ್ದ. ಅವನು ಬೆಟ್ಟದಿಂದ ಹಿಂದಿರುಗಿದ ಮೇಲೆ ವಾಸು ಮತ್ತಿತರು ಅವನೊಂದಿಗೆ ಉಪಾಹಾರ ಸ್ವೀಕರಿಸುತ್ತಿದ್ದರು. ಕೆಲವು ದಿವಸಗಳು ಕಳೆದ ಮೇಲೆ ಶಂಕರ ಸಂಜೆಗೂ ಬೆಟ್ಟದ ಕಡೆ ಏಕಾಂಗಿಯಾಗಿ ಹೋಗುವುದನ್ನು ಅಭ್ಯಾಸ ಮಾಡಿಕೊಂಡ.

"ದಿನವೂ ಎರಡೆರಡು ಸಾರಿ ಹೋಗುವೆಯಲ್ಲಾ – ಬೆಟ್ಟದ ಮೇಲೆ ಏನಿದೆ ಶಂಕರ. ಅಲ್ಲಿರುವ ಹಾಳುಗುಡಿಯ ಮೇಲೆ ಅಷ್ಟು ಮೋಹವೇ ?"

ಎಂದು ವಾಸು ಒಂದು ದಿನ ಶಂಕರನನ್ನು ಪ್ರಶ್ನಿಸಿದ.

"ಬೆಟ್ಟದ ಮೇಲೆ ಏನೂ ಇಲ್ಲ ವಾಸು. ಅಲ್ಲಿಗೆ ನಾನು ನಿತ್ಯ ಹೋಗುವುದಕ್ಕೆ ಅದೇಕಾರಣ. ಒಂದೊಂದು ದಿನ ಜಾಡುತಪ್ಪಿದ ಹಸುವಿನ ಕರುವೋ, ಮೇಕೆ ಮರಿಯೋ ಅಲ್ಲಿಗೆ ಬರುತ್ತದೆ. ಅವು ಹುಲ್ಲನ್ನರಸಿ ಕೊಂಡು ಪ್ರಾಯಶಃ ಬೆಟ್ಟದ ಮೇಲೆ ಬರಲಾರವು. ಮೂಕಜೀವ – ಅವುಗಳ ಮನಸ್ಸಿನಲ್ಲಾಗುವುದನ್ನು ಹೇಳಲಾರವು. ವಾಕ್‌ಶಕ್ತಿ ಪಡೆಯದ ಮೂಕಜೀವಗಳನ್ನು ನೋಡಿದಾಗ, ಹೃದಯ ಭೇದಿಸುವಂತೆ ಅವುಗಳು ಚೀರುವುದನ್ನು ಕೇಳಿದಾಗ, ವಾಕ್‌ಶಕ್ತಿಯಿರುವ ಮನುಷ್ಯನ ಹೃದಯವೂ

ಹಾಗೆಯೇ ಜೀರುತ್ತಿಲ್ಲವೇ ಎಂದೆನಿಸುತ್ತದೆ. ಕೋಟಿ ಮಾತನಾಡುವ ಮನುಷ್ಯ ತನ್ನ ಅಂತರಂಗದ ಉಮ್ಮಳಕ್ಕೆ ಉಚ್ಚಾರಣೆ ಕೊಡಲು ಅಸಮರ್ಥ ನಾಗಿದ್ದಾನೆ."

"ಅದು ಶಾಂತಿಯ ಲಕ್ಷಣವಾಗಿರಬಹುದು."

"ಶಾಂತಿಗೆ ಎರಡು ಮುಖಗಳಿಗೆ – ಒಂದು ನಿಷೇಧಾತ್ಮಕ, ಇನ್ನೊಂದು ಕ್ರಿಯಾತ್ಮಕ. ದಡ್ಡನೂ ಶಾಂತನಾಗಿರುತ್ತಾನೆ, ಮಹಾಜ್ಞಾನಿಯೂ ಶಾಂತ ನಾಗಿರುತ್ತಾನೆ. ಒಬ್ಬ ತಿಳುವಳಿಕೆಯಿಲ್ಲದೆ ಮೌನಿ, ಇನ್ನೊಬ್ಬ ತಿಳುವಳಿಕೆ ತುಂಬಿದ ಮೌನಿ."

"ಈಯೆರಡು ಅವಸ್ಥೆಗಳ ಸೇತುವೆಯಾವುದು ?"

"ಉಪನಿಷತ್ತು ಹೇಳುವಂತೆ ಅವಿದ್ಯೆಯ ಪರಿಹಾರ."

"ಅವಿದ್ಯೆಯ ಪರಿಹಾರವಾಗುವುದು ಹೇಗೆ ?"

"ಧ್ಯಾನ ಮತ್ತು ಕ್ರಿಯೆಯಿಂದ. ಸಾಧಕ ತನ್ನ ಸಮಸ್ತ ಚೇತನ ಗಳನ್ನೂ ಕೇಂದ್ರೀಕರಿಸಿಕೊಂಡು, ಅವುಗಳ ಪ್ರಕಾಶವನ್ನು ಕ್ರಿಯೆಯಿಂದ ಸಾಧಿಸಬೇಕು."

ಧ್ಯಾನ, ಮೌನದ ಮೇಲೆ ಶಂಕರ ಮಾಡಿದ ವಿವರಣೆ ವಾಸು ಮನಸ್ಸಿನಲ್ಲಿ ಹೊಸ ವಿಚಾರವೊಂದನ್ನು ನೆಟ್ಟಿತು. ವಿಚಾರವನ್ನು ಕಾರ್ಯ ರೂಪಕ್ಕೆ ತರುವ ದಾರಿಯನ್ನು ಅವನು ಹುಡುಕತೊಡಗಿದ.

೨೦

ಮುಂಬಯಿಯಿಂದ ಆರಂಭೋತ್ಸವಕ್ಕೆ ರತನ್‌ಲಾಲ್, ಮುಂಬಯಿ ವಾಲಾ, ಸ್ಕಿನ್ನರ್ ಅವರ ಪರಿವಾರ, ಗೆಳೆಯರು ಬಂದಿಳಿದರು. ಷಿರೀನ್, ಅನಸೂಯಾ, ಊರ್ಮಿಳಾ ಬಂದಿದ್ದುದನ್ನು ಕಂಡು ಪ್ರಮೀಳಾ ಹಿರಿಹಿರಿ ಹಿಗ್ಗಿದಳು. ಹೆಣ್ಣುಮಕ್ಕಳಿಗೆ ಯೋಗಿನಿ ಅಮ್ಮನವರ ಕೋಣೆ, ವಾಸು ಕೋಣೆಯಲ್ಲಿ ಬಿಡಾರವಾಯಿತು. ಉಳಿದವರು ವಿಶೇಷ ಅತಿಥಿಗೃಹದಲ್ಲಿ ಬಿಡಾರಮಾಡಿದರು. ಮದರಾಸಿನಿಂದ ರಾಘವಅಯ್ಯರ್ ತಮ್ಮ ಗೆಳೆಯ ರೊಂದಿಗೆ ಬಂದರು.

ಮಿಸ್. ಎಮಿಲಿ ತಮ್ಮ ಕರ್ತವ್ಯಭಾಗವನ್ನು ಸಂತೋಷವಾಗಿ ವಹಿಸಿಕೊಂಡು ಉತ್ಸವದ ವ್ಯವಸ್ಥೆಯಲ್ಲಿ ತಲ್ಲೀನರಾದರು. ಹೊರಗಿನಿಂದ ಬಂದ ಅತಿಥಿಗಳಿಗೆ ಹಂಗಾಮಿ ಗುಡಿಸಲುಗಳಲ್ಲಿ ಬಿಡಾರವಾಯಿತು.

ಉತ್ಸವದ ಬೆಳಿಗ್ಗೆ ಆಶ್ರಮದ ದೇವಮಂದಿರದಲ್ಲಿ ಸ್ವಾಮಿಜಿ ಮತ್ತು ಯೋಗಿನಿ ಅಮ್ಮನವರ ಸಾನಿಧ್ಯದಲ್ಲಿ ಪೂಜೆ, ಶಾಂತಿ ವಿಧಿಗಳಾದವು. ಮಧ್ಯಾನ್ಹ ಎಲ್ಲರಿಗೂ ಸುಗ್ರಾಸ ಭೋಜನ.

ಸಂಜೆಗೆ ಆರಂಭೋತ್ಸವದ ಸಾರ್ವಜನಿಕ ಸಭೆ ಆರಂಭವಾಯಿತು. ಜಸ್ಟಿಸ್ ರಾಘವಅಯ್ಯರ್ ಅವರು ಅಧ್ಯಕ್ಷತೆ ಸ್ವೀಕರಿಸಬೇಕೆಂದು ಆಶ್ರಮವಾಸಿಗಳು ಕೇಳಿಕೊಂಡರು.

ಸಭೆ ಊರ್ಮಿಳೆಯ ಪ್ರಾರ್ಥನಾ ಗೀತೆಯೊಂದಿಗೆ ಆರಂಭವಾಯಿತು. ಆಶ್ರಮದ ಅಧ್ಯಕ್ಷರಾದ ಬೊಂಬಾಯಿವಾಲಾ ಎಲ್ಲರಿಗೂ ಸ್ವಾಗತ ಬಯಸಿದರು. ತರುವಾಯ ಕಾರ್ಯದರ್ಶಿ ರಾಮಸ್ವಾಮಿ ಆಶ್ರಮದ ವರದಿ ಒಪ್ಪಿಸಿ ಎಲ್ಲ ದಾತೃಗಳನ್ನೂ ವಂದಿಸಿದ.

ಸ್ವಾಮಿಜಿ ತಮ್ಮ ಸಂದೇಶ ಸಾರಬೇಕೆಂದು ಅಧ್ಯಕ್ಷರು ವಿನಯದಿಂದ ಬೇಡಿಕೊಂಡರು.

ಸ್ವಾಮಿಜಿ ಎದ್ದುನಿಂತು ಕಣ್ಣುಮುಚ್ಚಿ ಕೆಲವು ನಿಮಿಷಗಳು ಧ್ಯಾನ ಪರವಶರಾಗಿ

"ಸಹ ನಾವವತು ಸಹ ನೌ ಭುನಕ್ತು
ಸಹ ವೀರ್ಯಂ ಕರವಾವಹೈ ।
ತೇಜಸ್ವಿ ನಾವಧೀತಮಸ್ತು ಮಾ ವಿದ್ವಿಷಾವಹೈ
ಓಂ ಶಾಂತಿಃ ಶಾಂತಿಃ ಶಾಂತಿಃ ॥"

[ನಮ್ಮಿಬ್ಬರನ್ನೂ ಜೊತೆಯಲ್ಲಿ ಕಾಪಾಡಲಿ! ನಮ್ಮಿಬ್ಬರನ್ನೂ ಜೊತೆಯಲ್ಲಿ ಪೋಷಿಸುವಂತಾಗಲಿ? (ನಾವಿಬ್ಬರೂ) ಜೊತೆಯಲ್ಲಿ ವೀರ್ಯವನ್ನುಂಟುಮಾಡುವಂತಾಗಲಿ! ನಾವು ಅಧ್ಯಯನ ಮಾಡಿದ್ದು ತೇಜಸ್ವಿಯಾಗಲಿ! (ಒಬ್ಬರನ್ನೊಬ್ಬರು) ದ್ವೇಷಮಾಡದೆ ಇರುವಂತಾಗಲಿ! ಓಂ ಶಾಂತಿ, ಶಾಂತಿ, ಶಾಂತಿ!]

"ಸಂ ಗಚ್ಛಧ್ವಂ ಸಂ ವದಧ್ವಂ ಸ ವೋ
ಮನಾಂಸಿ ಜಾನತಾಂ ।
ದೇವಾ ಭಾಗಂ ಯಥಾಪೂರ್ವೇ
ಸಂಜಾನಾನಾ ಉಪಾಸತೇ ॥"

[ಒಟ್ಟಿಗೆ (ಹೋಗಿ) ಸೇರಿ, ಒಟ್ಟಿಗೆ (ಕಲೆತು) ಮಾತನಾಡಿ, ನಿಮ್ಮೆಲ್ಲರ ಮನಸ್ಸಿನ ಇಂಗಿತವೂ – ಹಿಂದೆ ದೇವತೆಗಳು ಎಲ್ಲರೂ ಒಪ್ಪಿ ತಮ್ಮ ತಮ್ಮ ಹವಿರ್ಭಾಗಗಳನ್ನು ಪಡೆಯುತ್ತಿದ್ದಂತೆ – ಒಂದೇ ಆಗಲಿ.]

"ಸಮಾನೋ ಮನ್ತ್ರಃ ಸಮಿತಿಃ ಸಮಾನೀ
ಸಮಾನಂ ಮನಃ ಸಹ ಚಿತ್ತಮೇಷಾಂ ।
ಸಮಾನಂ ಮನ್ತ್ರಮಭಿ ಮನ್ತ್ರಯೇ ವಃ
ಸಮಾನೇನ ವೋ ಹವಿಷಾ ಜುಹೋಮಿ ॥"

[ಇಲ್ಲಿ ಸಮಿತಿಯಲ್ಲಿ ಸೇರಿರುವವರ ಸ್ತೋತ್ರ ಒಂದೇ ಆಗಲಿ, ಎಲ್ಲರ ಮನಸ್ಸೂ ಒಂದೇ ಆಗಲಿ, ಎಲ್ಲರ ಚಿತ್ತವೂ ಒಂದೇ ಆಗಲಿ, ಎಲ್ಲರ ಪರವಾಗಿಯೂ ಒಂದೇ ಮಂತ್ರವನ್ನು ಹೇಳಿ ಒಂದೇ ಹವಿಸ್ಸನ್ನು ಅರ್ಪಿಸುತ್ತೇನೆ.]

"ಸಮಾನೀ ವ ಆಕೂತಿಃ ಸಮಾನಾ ಹೃದಯಾನಿ ವಃ
ಸಮಾನಮಸ್ತು ವೋ ಮನೋಯಥಾ ವಃ ಸುಸಹಾಸತಿ ॥"

[ನಿಮ್ಮ ಉದ್ದೇಶ ಒಂದೇ ಆಗಿರಲಿ, ನಿಮ್ಮ ಹೃದಯದ ಬಯಕೆ ಒಂದೇ ಆಗಿರಲಿ, ನಿಮ್ಮಲ್ಲಿ ಪೂರ್ಣವಾದ ಒಗ್ಗಟ್ಟು ಇರುವಂತೆ ನಿಮ್ಮ ಆಲೋಚನೆಗಳೆಲ್ಲ ಒಂದೇ ಆಗಿರಲಿ.]

ಪ್ರಿಯ ಆತ್ಮಗಳಿರಾ,

ಈಗ ನಾನು ಹೇಳಿರುವ ನಾಲ್ಕು ಶ್ರುತಿಶ್ಲೋಕಗಳಲ್ಲಿ 'ಸಮಾನ' ಶಬ್ದವನ್ನು ಆರ್ಯಋಷಿಗಳು ಮೇಲಿಂದ ಮೇಲೆ ಬಳಸಿರುವುದು ಕಂಡು

ಬರುತ್ತದೆ. ವೇದಾಂತದ ಅಸ್ತಿಭಾರ ಸಮಾನತೆಯಾಗಿದೆಯೆಂಬುದು ಇದರಿಂದ ನಿಮಗೆ ವೇದ್ಯವಾಗುತ್ತದೆ. ಜಾತಿ, ಮತ, ಪಂಥ, ವಿಚಾರ, ಆಚಾರ, ಭಾಷೆಗಳ ಹೆಸರಿನಲ್ಲಿ ಲೋಕ ಒಡೆದೊಡೆದು ಭಿನ್ನಭಿನ್ನವಾಗುತ್ತಿರುವಾಗ ಸಮಾನತೆ, ಸಮರಸ, ಸಮನ್ವಯ ಭಾವನೆಗಳು ವಿಯುತಾರ್ಥಕವಾಗುತ್ತದೆ. ಲೋಕದಲ್ಲಿ ಅನೈಕ್ಯ, ವಿರಸ, ಅಸಮಾನತೆಗಳು ಪ್ರಬಲವಾಗಿದೆಯೆಂದು ನಾವು ನಿರ್ವಿಣ್ಣರಾಗುವುದು ಯೋಗ್ಯವಲ್ಲ. ಈ ದುರ್ಬಲ ಮನೋಭಾವನೆಯಿಂದ ನಾವು ನಮ್ಮ ಪರಂಪರೆಗೆ ಅಪಮಾನ ಬಗೆಯುವುದು ಮಾತ್ರವೇ ಅಲ್ಲ, ನಮ್ಮ ಆತ್ಮಕ್ಕೇ ದ್ರೋಹವೆಸಗುತ್ತೇವೆ. ಮಾನವನ ಆತ್ಮ ಭಗವಂತನ ಭದ್ರಪೀಠ ಎಂಬ ನಂಬಿಕೆ ನನ್ನದು. ನನ್ನ ಹಾಗೆ ಭಾವಿಸುವವರು, ಅನುಭವಿಸುವವರು ಲೋಕದಲ್ಲಿ ಹಲವರಿದ್ದಾರೆ. ಅವರ ಮನಸ್ಸನ್ನು ಈಗ ಒಂದು ಬಲಿಷ್ಠ ಸಂಶಯ ಪಿಶಾಚಿ ಕಾಡುತ್ತಿದೆ. ಮಾನವ ಭಗವಂತನ ಪ್ರತೀಕವಾಗಿದ್ದಲ್ಲಿ ಅವನಲ್ಲಿ ಏಕೆ ರಾಕ್ಷಸಪ್ರವೃತ್ತಿ ಮೂಡಬೇಕು. ಲೋಭ, ಮೋಹ, ಕಾಮುಗಳಿಗೆ ಪಕ್ಕಾಗಿ ಅವನು ಇತರ ಮಾನವರ ರಕ್ತೋಪಜೀವಿಯಾಗಬೇಕು. ವ್ಯಕ್ತಿ ವ್ಯಕ್ತಿಯ ನಾಶಕ್ಕೆ, ಸಮಾಜ ಸಮಾಜದ ನಾಶಕ್ಕೆ, ರಾಷ್ಟ್ರ ರಾಷ್ಟ್ರದ ನಾಶಕ್ಕೆ ಏತಕ್ಕೆ ತೊಡಗಬೇಕು? ಜಿಜ್ಞಾಸು ಕೇಳುವ ಈ ಪ್ರಶ್ನೆ ನಮ್ಮ ನಂಬಿಕೆಯ ಬುಡವನ್ನೇ ಹಿಡಿದಲುಗಿಸುತ್ತಿದೆ. ಯುದ್ಧಸಂಬಂಧವಾದ ಒಂದು ಕಾದಂಬರಿಯನ್ನು ಹಿಂದೆ ನಾನು ಓದಿದ್ದು ನೆನಪಿಗೆ ಬರುತ್ತಿದೆ. ಶತ್ರುಪಕ್ಷದ ಹತ್ತಾರು ಸೈನಿಕರನ್ನು ಸಂಹಾರ ಮಾಡಲು ಹಿಂದೆಗೆಯದಿದ್ದ ಒಬ್ಬ ಸೈನಿಕ ರಣರಂಗದಲ್ಲಿ ಒಂದು ಚಿಟ್ಟೆಹುಳು ಹಲ್ಲಿಯ ಬಾಯಿಗೆ ಸಿಕ್ಕಿಬೀಳುತ್ತಿದ್ದುದನ್ನು ಕಂಡು, ಅದನ್ನು ಸಂರಕ್ಷಿಸಲು ಕೈಚಾಚಿದನಂತೆ. ಚಿಟ್ಟೆಹುಳುವನ್ನು ರಕ್ಷಿಸ ಹೋದವನು ಶತ್ರುಗಳ ಗುಂಡಿನೇಟಿಗೆ ತುತ್ತಾಗಿ ಪ್ರಾಣ ಒಪ್ಪಿಸಿದನಂತೆ. ನೋವಿಗೆ ಸಿಕ್ಕಿದ್ದ ಒಂದು ಹುಲುಕೀಟವನ್ನು ಕೂಡ ರಕ್ಷಿಸಹೋಗುವ ಸ್ವಭಾವ ಅವನ ದೈವತ್ತ್ವದ ಕುರುಹು. ಶತ್ರುಗಳೆನಿಸಿಕೊಂಡಿದ್ದ ಎದುರು ಪಕ್ಷದವರನ್ನು ಕೊಲ್ಲಲೆಳಸುವ ಅವನ ಪ್ರವೃತ್ತಿ ಅವಿದ್ಯೆಯ ಚಿಹ್ನೆ. ಮಾನವನ ಅಂತರಂಗದಲ್ಲಿ ಸತತವಾಗಿ ಈ ದೇವಾಸುರ ಯುದ್ಧ ನಡೆಯುತ್ತಲೇ ಇರುತ್ತದೆ. ಜಯಮಾಲೆಯನ್ನು ದೇವತೆಗಳ ಕೊರಳಿಗೆ ಹಾಕಬೇಕೋ ಅಸುರರ ಕೊರಳಿಗೆ

ಹಾಕಬೇಕೋ ಎಂಬುದನ್ನು ಮಾನವ ನಿರ್ಧರಿಸಿಕೊಳ್ಳಬೇಕು. ಮಾನವನ 'ಮಾನವತ್ವ' ಉಳಿಯಬೇಕಾದರೆ ಅವನ ಪ್ರವೃತ್ತಿ, ವೃತ್ತಿ, ಭಾವನೆ ಮತ್ತು ಕ್ರಿಯೆ ದೈವತ್ವದ ಮಾರ್ಗ ಹಿಡಿಯಬೇಕು. ಕ್ರಿಯಾವಾದಿಗಳು ಭಾವನೆಯನ್ನು ತೆಗಳುತ್ತಾರೆ. ಕ್ರಿಯೆಗೆ ಭಾವನೆಯೇ ಕ್ರತುಶಕ್ತಿಯಲ್ಲವೇ ? ಭಾವನೆ ರೂಪುಗೊಂಡ ಹೊರತೂ ಕ್ರಿಯೆಗೆ ಚೇತನವೆಲ್ಲಿಂದ ಬರಬೇಕು ? ಸೂಕ್ಷ್ಮ ದರ್ಶಕ ಯಂತ್ರಕ್ಕೂ ಕಾಣದುದಷ್ಟು ಅಣುಶಕ್ತಿ ಸಣ್ಣದು. ಅದರ ಪ್ರಮಾಣ ಕೂದಲೆಳೆಯ ಕೋಟಿಯಂಶಕ್ಕಿಂತಲೂ ಚಿಕ್ಕದು. ಆದರೆ ಆ ಅಲ್ಪ ಪ್ರಮಾಣದ ಅಣುಶಕ್ತಿಯ ಸ್ಫೋಟನವಾದರೆ ಜಗತ್ತೇ ಧ್ವಂಸವಾಗಬಲ್ಲುದು. ಆ ಅಣುಶಕ್ತಿಯ ಸದುಪಯೋಗ ಮಾಡಿಕೊಂಡರೆ ಜಗತ್ತು ಉದ್ಧಾರವಾಗಲೂ ಬಲ್ಲುದು. ಇಂಥ ಅಣುಶಕ್ತಿಯ ಭಂಡಾರ ಮಾನವನ ಅಂತರಂಗ. ಅವನಿಂದ ಹೊರಡುವ ಪ್ರತಿವಿಚಾರ, ಭಾವನೆ, ಚಿಂತನೆಗಳೂ ಅಣುಶಕ್ತಿಯಷ್ಟೇ ಪ್ರಬಲವಾದವು. ತನ್ನ ವಿಚಾರ, ಭಾವನೆ, ಚಿಂತನೆಗಳನ್ನು ಹೊರಗೆಡಹುವ ಮಾನವ – ಇದರಿಂದ ಲೋಕ ಕಲ್ಯಾಣವಾಗುತ್ತದೆಯೋ ನಾಶವಾಗುತ್ತದೆಯೋ ಎಂದು ಆಲೋಚಿಸಬೇಕು. ಆಡುವ ಮಾತು, ಮಾಡುವ ಕೆಲಸ ಎರಡೂ ಮಾನವ ಕಲ್ಯಾಣ ಸಾಧನೆಯನ್ನೇ ಗುರಿಯಾಗಿಟ್ಟುಕೊಳ್ಳಬೇಕು. ಇದೇ ಭಗವಂತನ ಸೇವೆ. ಈ ದೃಷ್ಟಿಯಲ್ಲಿ ವಿಚಾರ ಮಾಡುವವನೇ ಸಂತ, ಭಕ್ತ, ಋಷಿ, ಶರಣ, ಪೀರ್, ತೀರ್ಥಂಕರ, ಬುದ್ಧಘೋಷ.

ಶ್ರುತಿ ಸಾರಿದ 'ಸಮತೆ'ಯನ್ನು ಸಾಧಿಸುವುದರ ಸಲುವಾಗಿಯೇ 'ಋಷಿಧಾಮ' ಸ್ಥಾಪಿಸಲ್ಪಟ್ಟಿದೆ. ಈ ವೇದಿಕೆಯ ಮೇಲೆ ನೀವು ವೈವಿಧ್ಯಾಂತರ್ಗತವಾದ ಐಕ್ಯತೆ (Unity in diversity) ಯನ್ನು ಕಾಣುತ್ತಿರುವಿರಿ. ಬೇರೆ ಬೇರೆ ಧರ್ಮ ಮತ್ತು ಸಂಪ್ರದಾಯಗಳಿಗೆ ಸೇರಿದ, ಬೇರೆ ಬೇರೆ ಭಾಷೆ ಮಾತನಾಡುವ, ಬೇರೆ ಬೇರೆ ದೇಶದ ಜನ ಬಂದು ಸೇರಿದ್ದಾರೆ. ಆದರೆ ಎಲ್ಲರ ಮನಸ್ಸಿನಲ್ಲಿ ಮೂಡಿರುವ ಈಶ್ವರಚಿಂತನೆಯೇ ಈ ಒಗ್ಗೂಟದ ತಂತು. 'ಋಷಿಧಾಮ'ಕ್ಕೆ ಎಲ್ಲರಿಗೂ ಸ್ವಾಗತವಿದೆ. ನಿಸರ್ಗ ಮಾತೆಯ ತೂಗುತೊಟ್ಟಿಲಿನಂತಿರುವ ಈ ಋಷಿಧಾಮ ಶಾಂತಿ, ಪ್ರೇಮ, ಜ್ಞಾನ ಬಯಸುವ ಎಲ್ಲರ ತವರುಮನೆಯಾಗಬೇಕೆಂಬ ನನ್ನ ಆಶಯ – ನಿಮ್ಮ

ಆಶಯವೂ ಅದೇ ಆಗಲಿ. 'ಋಷಿಧಾಮ'ವನ್ನು ನಿಮ್ಮದು ಮಾಡಿಕೊಳ್ಳಿ. ನಮ್ಮೆಲ್ಲರ ತಪಸ್ಸನ್ನು ಇಲ್ಲಿ ಕೂಡಿಟ್ಟು ಜಗತ್ತಿಗೆ ಹಂಚೋಣ. ನಮ್ಮ ಪವಿತ್ರ ಉದ್ದೇಶ ನಮ್ಮನ್ನು

"ಅಸತ್ಯನಿಂದ ಸತ್ಯಕ್ಕೆ
ಕತ್ತಲೆಯಿಂದ ಬೆಳಕಿಗೆ
ಮರಣದಿಂಡ ಅಮರತ್ತ್ವಕ್ಕೆ ಒಯ್ಯಲಿ."

**[ಅಸತೋ ಮಾ ಸದ್ಗಮಯ ತಮಸೋ
ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂಗಮಯ.]**

ಎಂದು ಹೇಳಿ ಪೀಠಸ್ಥರಾದರು. ಸಭೆ ಅವಾಕ್ಕಾಗಿತ್ತು. ಸ್ವಾಮಿಜಿಯವರ ಉಪದೇಶಕ್ಕೆ ಕರತಾಡನದ ಮೂಲಕ ಮೆಚ್ಚುಗೆ ವ್ಯಕ್ತಗೊಳಿಸಿದರೆ ಎಲ್ಲಿ ಶಾಂತಿಭಂಗವಾಗುವುದೋ ಎಂದು ಜನ ಸ್ತಬ್ಧರಾಗಿದ್ದರು.

ಅಧ್ಯಕ್ಷರು ಸಮಾರೋಪ ಭಾಷಣಮಾಡುವ ಮುನ್ನ ರಾಮಸ್ವಾಮಿ, ಬೈರಪ್ಪ ಮತ್ತು ರಾಮನಾಥಯ್ಯನವರನ್ನು ವೇದಿಕೆಯ ಮೇಲೆ ಕರೆತಂದು, ಅವರ ಸೇವೆಯನ್ನು ಪ್ರಶಂಸಿಸಿ, ಅವರಿಗೆ ಹಾರ ತುರಾಯಿ ಅರ್ಪಿಸಿ, ಅಧ್ಯಕ್ಷರ ಕೈಯ್ಯಿಂದ ಅವರಿಗೆ ಶಾಲುಜೋಡಿ ಒಪ್ಪಿಸಿದ.

ಅಧ್ಯಕ್ಷರು ಎದ್ದು ನಿಂತು

"ಪೂಜ್ಯ ಸ್ವಾಮಿಜಿಯವರೇ, ಶ್ರೀಮಾತೆಯವರೇ, ಸೋದರಿಯರೇ, ಸೋದರರೇ,

ಪೂಜ್ಯ ಶ್ರೀಸ್ವಾಮಿಗಳವರ ಉಪದೇಶವಾಣಿ ಮೊಳಗಿದ ಮೇಲೆ ನಾನು ಮಾತನಾಡುವುದು ಅನುಚಿತ ಹಾಗೂ ಅನವಶ್ಯಕ. ಆದರೆ ಸಭಾ ಸಂಪ್ರದಾಯವನ್ನು ಉಲ್ಲಂಘಿಸಲಾರದೆ ನಾಲ್ಕು ಮಾತುಗಳನ್ನಾಡಲು ನಿಂತಿದ್ದೇನೆ.

ಉಪನಿಷತ್ತು ಮತ್ತು ಗೀತೆಯಮೇಲೆ ಶ್ರೀಗಳವರು ಬರೆದಿರುವ ಎರಡು ಗ್ರಂಥಗಳನ್ನು ನಾನು ಓದಿದ ಮೇಲೆ ನನ್ನ ವಿಚಾರದಲ್ಲಿ ಮಹಾ

ಕ್ರಾಂತಿಯಾಯಿತು. ಆ ದಿವ್ಯಗ್ರಂಥಗಳು ಕೇವಲ ಹಿಂದುಗಳ ಸೊತ್ತೆಂದು ಭಾವಿಸಿದ್ದ ನನ್ನ ಅಜ್ಞಾನ ದೂರವಾಯಿತು. ಜ್ಞಾನ ಭಂಡಾರದ ಮೇಲೆ ಮತದ ಮುದ್ರೆಯೊತ್ತುವುದು ಅಜ್ಞಾನದ ಕುರುಹೆಂಬುದು ಮನಸ್ಸಿಗೆ ಖಚಿತವಾಯಿತು.

ಶ್ರೀ ಸ್ವಾಮಿಗಳಗರಲ್ಲಿ ನಾವು ನೋಡುತ್ತಿರುವುದು ವಾಗದ್ವೈತವಲ್ಲ - ಜೀವಂತ ಅದ್ವೈತ. ಗುರುವಿನ ಬಳಿಗೆ ಭಕ್ತನಾಗಿ, ಜಿಜ್ಞಾಸುವಾಗಿ, ವಿನಮ್ರನಾಗಿ ಹೋಗುವ ಶಿಷ್ಯನನ್ನು ಗುರು ಅಪ್ಪಿಕೊಂಡು ನನ್ನ - ಹೃದಯ ಕನ್ನಡಿಯಲ್ಲಿ ಕಾಣುತ್ತಿರುವ ಭಗವಂತನ ರೂಪ, ನಿನ್ನ ಹೃದಯದಲ್ಲಿ ಕಾಣುತ್ತಿರುವ ಭಗವಂತನ ರೂಪ, ಒಂದೇ ಆಗಿದೆ. ನಾನೂ ನೀನೂ ಒಂದೇ, ಎಂದು ಹೇಳುವ ಔದಾರ್ಯ ಎಷ್ಟು ಜನರಲ್ಲಿದೆ. ಕೃಷ್ಣ, ಬುದ್ಧ, ರಾಮಕೃಷ್ಣ, ಗಾಂಧಿ ಈ ಮಾತನ್ನು ಹೇಳಿದರು. ಇಂದು ಶ್ರೀ ಶ್ರೀಗಳು ಇದೇ ಮಾತನ್ನು ಹೇಳುತ್ತಿದ್ದಾರೆ. ನಮ್ಮ ಚಿತ್ತದಾಸ್ಯಕ್ಕೆ ಇದಕ್ಕಿಂತಲೂ ಹೆಚ್ಚಿನ ಅಮೃತೋಪಚಾರಬೇಕೇ ?

ಶ್ರೀ ಶ್ರೀಗಳವರ ನಾಯಕತ್ವದಲ್ಲಿ ಋಷಿಧಾಮದಿಂದ ಅಧ್ಯಾತ್ಮ ಸೈನ್ಯ ವೊಂದು ಹೊರಟಿದೆ. ನಾವು ಆ ಸೈನ್ಯ ಸೇರಿ ಲೋಕದ ರಾಕ್ಷಸೀಶಕ್ತಿಗಳ ನ್ನೆದುರಿಸೋಣ. ಅಜ್ಞಾನದೊಂದಿಗೆ, ಅಸಹನೆಯೊಂದಿಗೆ, ಅಸಮತೆ ಯೊಂದಿಗೆ ಸತತವಾಗಿ ಹೋರಾಟ ನಡೆಸೋಣ. ಪ್ರತಿಯೊಂದು ಮನವೂ, ಮನೆಯೂ, ರಾಷ್ಟ್ರವೂ 'ಋಷಿಧಾಮ'ವಾಗಲಿ. 'ಋಷಿಧಾಮ'ದ ಕೆಲಸ ಶ್ರೀಗುರುವಿನ ತಪಃಪ್ರಭಾವದಿಂದ ಸತತವಾಗಿ, ಇತೋಽಪ್ಯತಿಶಯವಾಗಿ, ಶಾಶ್ವತವಾಗಿ ಸಾಗಲಿ. ಇದೇ ನನ್ನ ಪ್ರಾರ್ಥನೆ"

ಎಂದು ಹೇಳಿ ಕುಳಿತರು.

ಕಾರ್ಯಕ್ರಮದ ಕೊನೆಯಂಶ ಯೋಗಿನಿ ಅಮ್ಮನವರ ಭಜನೆ ಯಾಗಿತ್ತು. ಅವರು ಭಜನೆಗೆ ಸಿದ್ಧವಾಗುತ್ತಿರುವಂತೆ ಆಶ್ರಮದ ಕಾರ್ಯ ದರ್ಶಿಯಾದ ಮಿಸ್. ಎಮಿಲಿ ಅಧ್ಯಕ್ಷರಿಗೂ, ಅತಿಥಿಗಳಿಗೂ ವಂದನಾರ್ಪಣೆ ಮಾಡಿದರು.

ಯೋಗಿನಿ ಅಮ್ಮನವರು ತಂಬೂರಿ ಶ್ರುತಿಮಾಡಿಕೊಂಡು ಊರ್ಮಿಳೆಗೆ ಮೊದಲು ಹಾಡಲು ಹೇಳಿದರು. ಊರ್ಮಿಳೆ ಮೀರಾದೇವಿಯ ಎರಡು

ಭಜನೆ ಗೀತೆಗಳನ್ನು ಹಾಡಿದ ಮೇಲೆ ಯೋಗಿನಿ ಅಮ್ಮನವರು ಕೆಲವು ದೇವರುನಾಮಗಳನ್ನು ಹಾಡಿ 'ರಘುಪತಿ ರಾಘವ ರಾಜಾರಾಮ್, ಪತಿತ ಪಾವನ ಸೀತಾರಾಮ್' ಭಜನೆ ಆರಂಭಿಸಿದರು. ಶ್ರೋತೃವೃಂದವೂ ಭಜನೆಯಲ್ಲಿ ಸೇರಿಕೊಂಡಿತು.

ಉತ್ಸವ ಮುಗಿದಮೇಲೆ ಸಭಿಕರೆಲ್ಲರಿಗೂ ಪ್ರಸಾದ ವಿನಿಯೋಗ ವಾಯಿತು. ಉತ್ಸವಕ್ಕೆ ಬಂದಿದ್ದವರನ್ನು ರಾಮಸ್ವಾಮಿ ಆಶ್ರಮದ ಸುತ್ತ ಕರೆದೊಯ್ದು ಎಲ್ಲವನ್ನೂ ತೋರಿಸಿದ. ಹುಂಡಿಯ ಪೆಟ್ಟಿಗೆಗೆ ಸಾಕಷ್ಟು ಕಾಣಿಕೆಯೂ ಬಿತ್ತು.

ಕಾರುಗಳಲ್ಲಿ ಬಂದಿದ್ದವರು ಹಿಂದಿರುಗಿದರು. ಮೈಸೂರು ಕಡೆಯಿಂದ ಬಂದಿದ್ದವರು ರೈಲಿಗೆ ಹೊರಟರು.

ಉಳಿದಿದ್ದವರಿಗೆ ಆಶ್ರಮದಲ್ಲಿ ಭೋಜನವಾಯಿತು. ಆರಂಭೋತ್ಸವದ ಕಾರ್ಯಕ್ರಮ ಯಶಸ್ವಿಯಾಗಿ ಕೊನೆಗಂಡುದಕ್ಕೆ ಎಲ್ಲರಿಗೂ ತೃಪ್ತಿ ಯಾಗಿತ್ತು.

ಎಲ್ಲರೂ ವಿಶ್ರಾಂತಿಗೆ ತೆರಳಿದಮೇಲೆ ಶಂಕರ ಬೆಟ್ಟದ ಕಡೆಗೆ ಮೆಲ್ಲನೆ ನಡೆದ.

೨೧

ಆರಂಭೋತ್ಸವಕ್ಕೆ ಬಂದಿದ್ದ ಮಾನ್ಯ ಅತಿಥಿಗಳು ಊರಿಗೆ ಹಿಂದಿರುಗುವ ಮುನ್ನ ವಾಸು ಕಾರ್ಯಸಮಿತಿ ಸಭೆ ಕರೆದು, ಅವರೆಲ್ಲರನ್ನೂ ಆಹ್ವಾನಿಸಿದ.

ಕಾರ್ಯದರ್ಶಿ ರಾಮಸ್ವಾಮಿ ಲೆಕ್ಕಪತ್ರಗಳನ್ನೊಪ್ಪಿಸಿದ. ವಾಸು

"ಸದ್ಯದ ಕಾರ್ಯಸಮಿತಿ ವಿಸ್ತರಿಸಿ ನಮ್ಮ ಮದರಾಸು ಮಿತ್ರರನ್ನೂ ಸೇರಿಸಿಕೊಳ್ಳಬೇಕೆಂದು ನನ್ನ ಸಲಹೆ"

ಎಂದು ಹೇಳಿದ. ಸಲಹೆ ಅಂಗೀಕೃತವಾಯಿತು. ಜಸ್ಟಿಸ್ ರಾಘವ ಅಯ್ಯರ್, ಜಸ್ಟಿಸ್ ರಾಮುನಿ ಮೆನನ್, ಜಸ್ಟಿಸ್ ಸೂರ್ಯಪ್ರಕಾಶರಾವ್ ಉಪಾಧ್ಯಕ್ಷರಾಗಿರಬೇಕೆಂದೂ, ಅರುಣಗಿರಿ ಮೊದಲಿಯಾರರೂ, ಚೆಕ್ಕಾರಿ

ಚೆಟ್ಟಿಯಾರರೂ ಕಾರ್ಯಸಮಿತಿ ಸದಸ್ಯರಾಗಿರಬೇಕೆಂದೂ ನಿರ್ಣಯ ವಾಯಿತು.

ರಾಘವ ಅಯ್ಯರ್ ಅವರು ತಮ್ಮ ಪರವಾಗಿ ಮತ್ತು ತಮ್ಮ ಮಿತ್ರರ ಪರವಾಗಿ ಕೃತಜ್ಞತೆ ಅರ್ಪಿಸುತ್ತಾ

"ಶ್ರೀ ಸ್ವಾಮಿಗಳು ಮದರಾಸಿಗೆ ದಯೆಮಾಡಿಸಿ ಅಲ್ಲಿ ಉಪನ್ಯಾಸ ಸಪ್ತಾಹ ನಡೆಸಬೇಕೆಂದು ಪ್ರಾರ್ಥಿಸುತ್ತೇನೆ. ಈಗಲೇ ಒಂದು ತಾರೀಕು ನಿಶ್ಚಯಿಸಿದರೆ ಮುಂದಿನ ವ್ಯವಸ್ಥೆಮಾಡಲು ಅನುಕೂಲವಾಗುತ್ತದೆ."

"ಮದರಾಸಿನ ಆಹ್ವಾನ ಅಂಗೀಕರಿಸಬೇಕೆಂದು ನಾನೂ ಸ್ವಾಮೀಜಿ ಯವರನ್ನು ಪ್ರಾರ್ಥಿಸುತ್ತೇನೆ"

ಎಂದು ಬೊಂಬಾಯಿವಾಲಾ ಹೇಳಿದರು.

"ಆಶ್ರಮದ ಕೆಲಸ ಈಗ ತಾನೇ ಆರಂಭವಾಗಿದೆ. ಇನ್ನು ಎರಡು ತಿಂಗಳು ಕಳೆದಮೇಲೆ ತಾವು ವ್ಯವಸ್ಥೆಮಾಡಲು ಅಡ್ಡಿಯಿಲ್ಲ"

ಎಂದು ವಾಸೂ ಹೇಳಿದ.

"ಈಗ ಆಶ್ರಮದಲ್ಲಿ ಮೊದಲು ಆಸ್ಪತ್ರೆ ಕಟ್ಟಡ, ಅದಕ್ಕೆ ಬೇಕಾದ ಸಲಕರಣೆಗಳು ಸಿದ್ಧವಾಗಬೇಕಲ್ಲವೇ ? ವೈದ್ಯಸಹಾಯ ಆಶ್ರಮದ ಒಂದು ಮುಖ್ಯ ಕೆಲಸದ ಭಾಗ"

ಎಂದು ಸ್ಕಿನ್ನರ್ ಸೂಚಿಸಲು

"ಆಸ್ಪತ್ರೆ, ಯೂರೋಪಿಯನ್ ಅತಿಥಿಗೃಹ ಮತ್ತು ದೇವಮಂದಿರಗಳು ಆಗಬೇಕಾಗಿವೆ. ಇದುವರೆಗಿನ ಎಲ್ಲ ಖರ್ಚನ್ನೂ ನಮ್ಮ ಮುಂಬಯಿ ಮಿತ್ರರು ಹೊತ್ತಿದ್ದಾರೆ. ಎಲ್ಲದಕ್ಕೂ ಅವರನ್ನೇ ಪೀಡಿಸುವುದು ನ್ಯಾಯ ವೆಂದು ನನಗೆ ತೋರುವುದಿಲ್ಲ."

"ನಮ್ಮ ವಾಗ್ದಾನದಂತೆ ನಾವಿನ್ನೂ ಒಂದೂವರೆ ಲಕ್ಷ ಕೊಡಬೇಕು. ಆ ಹಣ ಸ್ಕಿನ್ನರ್ ಅವರ ಬಳಿಯಿದೆ. ಅದರಿಂದ ನೀವು ಆಸ್ಪತ್ರೆ ಕೆಲಸ ಆರಂಭಿಸಬಹುದು"

ಎಂದು ಬೊಂಬಾಯಿವಾಲಾ ಹೇಳಿದರು.

ಜಸ್ಟಿಸ್ ರಾಘವ ಅಯ್ಯರ್ ಎದ್ದುನಿಂತು

"ಈ ಮಹತ್ಕಾರ್ಯದಲ್ಲಿ ನಮಗೂ ಸ್ವಲ್ಪ ಭಾಗ ಕೊಡಿ" ಎಂದರು.

ಅರುಣಗಿರಿ ಮೊದಲಿಯಾರರು ಮುಂದೆಬಂದು ದೇವಮಂದಿರದ ಖರ್ಚನ್ನು ತಾವು ಹೊರುವುದಾಗಿಯೂ, ಯೂರೋಪಿಯನ್ ಅತಿಥಿಗೃಹದ ಖರ್ಚನ್ನು ತಮ್ಮ ಮಿತ್ರರಾದ ಚಿಕ್ಕಾರಿ ಚೆಟ್ಟಿಯಾರರು ಹೊರುವುದಾಗಿಯೂ ತಿಳಿಸಿದರು. ರಾಘವ ಅಯ್ಯರ್ ಅವರು ಆಶ್ರಮದ ಸ್ಥಾಯೀನಿಧಿಗೆ ಐವತ್ತು ಸಾವಿರ, ರಾಮನಿಮೆನನ್ ಇಪ್ಪತ್ತೈದು ಸಾವಿರ, ಸೂರ್ಯಪ್ರಕಾಶರಾಯರು ಇಪ್ಪತ್ತೈದು ಸಾವಿರ ಕೊಡಲು ವಾಗ್ದಾನಮಾಡಿದರು.

ರಾಮಸ್ವಾಮಿ ಇನ್ನೊಂದು ಮುಖ್ಯ ವಿಷಯವನ್ನು ಸಮಿತಿಯ ಮುಂದಿಟ್ಟ

"ಸ್ವಾಮಿಜಿಯವರ ಪುಸ್ತಕಗಳಿಗೆ ತುಂಬ ಬೇಡಿಕೆಗಳು ಬರುತ್ತಿವೆ. ಅವುಗಳನ್ನು ದೇಶಭಾಷೆಗಳಿಗೆ ಅನುವಾದಮಾಡಿಸಿ ಪ್ರಕಟಿಸುವ ಕೆಲಸ ಆಶ್ರಮ ಕೂಡಲೆ ಕೈಗೊಳ್ಳಬೇಕಾಗಿದೆ."

"ಅದು ಅಗತ್ಯವಾಗಿ ಆಗಬೇಕಾದ ಕೆಲಸ. ತೆಲುಗು, ತಮಿಳು ಮಲೆಯಾಳ ಭಾಷೆಗಳಿಗೆ ಅನುವಾದಮಾಡಿಸಿ ಪ್ರಕಟಿಸುವ ಕೆಲಸ ನನಗಿರಲಿ"

ಎಂದು ರಾಘವ ಅಯ್ಯರ್ ಹೇಳಿದರು.

"ಮುಂಬಯಿಯಲ್ಲಿ ನಾನು ಮರಾಟಿ, ಗುಜರಾತಿ ಮತ್ತು ಹಿಂದಿ ಭಾಷೆಗಳಿಗೆ ಅನುವಾದ ಮಾಡಿಸುತ್ತೇನೆ."

"ನಿಮ್ಮ ಗ್ರಂಥ ಯಾವಾಗ ಪ್ರಕಟವಾಗುತ್ತದೆ ಮೇಜರ್"

"ಇನ್ನು ಒಂದೆರಡು ತಿಂಗಳಲ್ಲಿ. ಮುಂಬಯಿಗೆ ಪ್ರೂಫ್ ಬಂದಿತ್ತು."

"ಅದನ್ನೂ ಅನುವಾದ ಮಾಡಿಸಬಹುದಷ್ಟೇ?"

"ಅವಶ್ಯಕವಾಗಿ. ಗ್ರಂಥ ಆಶ್ರಮದ ಸೊತ್ತು."

"ಸ್ವಾಮಿಜಿಯವರು ಮದರಾಸಿಗೆ ಬರುವಮೊದಲು ನೀವು ತೆಲುಗು, ತಮಿಳು, ಮಲೆಯಾಳ ಭಾಷಾನುವಾದಗಳನ್ನು ಪ್ರಕಟಿಸಿದರೆ ಸ್ವಾಮಿಜಿಯವರ ಕೆಲಸ ಹಗುರವಾಗುತ್ತದೆ. ಶ್ರಾವಕರು ಅವರ ಅಭಿಪ್ರಾಯಗಳನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಅನುಕೂಲವಾಗುತ್ತದೆ."

ಎಂದು ವಾಸೂ ಸಲಹೆಯಿತ್ತ.

''ಅತ್ಯವಶ್ಯಕವಾಗಿ ಆಗಲಿ. ನಾನು ಮದರಾಸಿಗೆ ಹೋದಕೂಡಲೆ ಕೆಲಸ ಆರಂಭಮಾಡುತ್ತೇನೆ.”

ಎಂದು ರಾಘವ ಅಯ್ಯರ್ ಆಶ್ವಾಸನವಿತ್ತರು.

ಕಾರ್ಯಸಮಿತಿ ಕೆಲಸವನ್ನು ಆಗುಮಾಡಿಕೊಟ್ಟ ಎಲ್ಲರಿಗೂ ರಾಮು ಸ್ವಾಮಿ ವಂದನೆಯರ್ಪಿಸಿದ.

ಅತಿಥಿಗಳು ಹೊರಡುವ ಮುನ್ನ ವಾಸು ಅವರೆಲ್ಲರಿಗೂ ಔತಣ ಏರ್ಪಡಿಸಿದ.

ಊಟ ಮುಗಿದ ಮೇಲೆ ಯೋಗಿನಿ ಅಮ್ಮನವರು ಷಿರೀನರನ್ನು ಜತೆಯಲ್ಲಿ ಕರೆದುಕೊಂಡು ಹೊರಟರು. ಆಶ್ರಮಕ್ಕೆ ಸ್ವಲ್ಪ ದೂರದಲ್ಲಿದ್ದ ಕೆರೆಯ ಕಟ್ಟೆಯಮೇಲೆ ಕುಳಿತು ಇಬ್ಬರೂ, ನೀರಿನಲ್ಲಿ ಪ್ರತಿಬಿಂಬಿಸಿದ್ದ ಚಂದ್ರಬಿಂಬವನ್ನು ನೋಡತೊಡಗಿದರು.

ಸ್ವಲ್ಪಹೊತ್ತು ಕಳೆಯಲು ಯೋಗಿನಿ ಅಮ್ಮನವರು ಒಂದು ಸಣ್ಣ ಕಲ್ಲನ್ನು ಪ್ರತಿಬಿಂಬದ ಮೇಲೆ ಎಸೆದರು. ಚಂದ್ರಬಿಂಬ ಮಾಯವಾಗಿ ನೀರಿನಲ್ಲಿ ತರಂಗಗಳೆದ್ದವು.

''ಜೀವನ ಇಷ್ಟೇ ಅಲ್ಲವೇ ಮಗಳೇ ?”

“ಏಕೆ ಹಾಗೆನ್ನುವಿರಿ ?”

“ಚಂದ್ರಬಿಂಬದ ಸೊಗಸು ಶಾಶ್ವತವೆಂದು ನಾವು ಭಾವಿಸಿಕೊಂಡಿದ್ದೆವು. ಒಂದು ಸಣ್ಣ ಕಲ್ಲು ಆ ಸೊಗಸನ್ನು ಹೋಗಲಾಡಿಸಿತು.”

“ನೋಡಿ. ನೀರು ಮತ್ತೆ ಶಾಂತಸ್ಥಿತಿಗೆ ಬಂದು ಚಂದ್ರಬಿಂಬ ಕಾಣ ತೊಡಗಿದೆ.”

“ಆದರದೂ ನೆಳಲಲ್ಲವೇ ?”

“ನಿಜ! ಆದರೆ ಆ ನೆಳಲೂ ಎಷ್ಟು ಸುಂದರ!”

''ಜೀವನದಲ್ಲಿ ಸುಖ ಶಾಶ್ವತವೆಂಬ ಭಾವನೆ ಮನುಷ್ಯನಿಗೇಕೆ ಬಂದಿ ತೆಂಬುದು ನನಗಿನ್ನೂ ಅರ್ಥವಾಗಿಲ್ಲ.”

''ಮನುಷ್ಯ ಸುಖ ಶಾಶ್ವತವೆಂದು ನಂಬಲಾರ. ಆದರೆ ಅವನು ಅನುಭವಿಸಿದ ಕ್ಷಣಿಕ ಸುಖದ ನೆನಪನ್ನು ಶಾಶ್ವತಮಾಡಿಕೊಂಡು ಸುಖವೇ ಶಾಶ್ವತ ಎಂದು ತನ್ನನ್ನು ತಾನು ಮೋಸಗೊಳಿಸಿಕೊಳ್ಳುತ್ತಾನೆ.”

"ನಿತ್ಯಾನಿತ್ಯಗಳ ಸಹಜ ಸ್ವರೂಪ ಮನುಷ್ಯನಿಗೆ ಅರ್ಥವಾಗುವುದಿಲ್ಲ."

"ಜಗತ್ತಿನಲ್ಲಿ ಎಲ್ಲವೂ ಅಶಾಶ್ವತವೇ – ಎಲ್ಲವೂ ಅನಿತ್ಯವೇ ?"

"ಮಗಳೇ – ಈ ಪ್ರಶ್ನೆಗೆ ನಾನು ಹೇಗೆ ಉತ್ತರ ಹೇಳಲಿ. ನಚಿಕೇತ ಧರ್ಮಾವತಾರನನ್ನು ಕೇಳಿದ ಪ್ರಶ್ನೆಯೇ ಇದು."

"ನಿಮ್ಮ ಅನುಭವ ಏನು ಹೇಳುತ್ತದೆ."

"ಎಲ್ಲ ಅನಿತ್ಯವಲ್ಲ ಎನಿಸುತ್ತದೆ. ನಾನೂ ನೀನೂ ಅನಿತ್ಯ. ನಮ್ಮ ಪಾರ್ಥಿವ ಶರೀರ ಒಂದಲ್ಲ ಒಂದು ದಿನ ಮಣ್ಣಾಗೂಡಲೇಬೇಕು. ಆದರೆ ನಮ್ಮ ವಿಶ್ವಾಸ – ಭಾವಮೈತ್ರಿ ನಿತ್ಯ – ಅಮರ. ಮನುಷ್ಯನ ಸದ್ಗುಣ ಸಚ್ಛೀಲ, ಸದಾಚಾರ ನಿತ್ಯ."

"ಈ ಭಾವನೆ ಬಲಗೊಂಡರೆ ಮನುಷ್ಯ ಮರಣಕ್ಕೆ ಅಂಜುವುದಿಲ್ಲ."

"ಮರಣ ಜೀವನದ ಹರಿಕಾರನೆಂದು ನಮ್ಮ ದರ್ಶನಗಳು ಸಾರುತ್ತಿವೆ – ನೀನು ಮರಣಕ್ಕಂಜುವೆಯಾ ?"

"ಮಕ್ಕಳು ಕವಡೆಯಾಡುವಂತೆ ಮರಣದೊಂದಿಗೆ ನಾನು ಚೆಲ್ಲಾಟ ವಾಡುತ್ತಿದ್ದೇನೆ. ಒಂದೊಂದು ಸಲ ನಾನು ಹಾಸಿಗೆ ಹಿಡಿದು ಮಲಗಿದಾಗ ನನ್ನ ಅವಸ್ಥೆ ಮುಗಿಯಿತೆಂದು ಡಾಕ್ಟರು ಹೇಳುತಾರೆ. ಆದರೆ ಅವರು ಹೇಳು ವುದು ಸುಳ್ಳು ಎಂದು ನನಗನ್ನಿಸುತ್ತದೆ. ನಾನು ಮರಣಕ್ಕಂಜುವುದಿಲ್ಲ – ಆದರೆ ಅದನ್ನು ಸ್ವಾಗತಿಸುವುದಕ್ಕೂ ಸಿದ್ಧಳಾಗಿಲ್ಲ. ನನ್ನ ಸ್ವಾಮಿಯ ಮನಸ್ಸಿಗೆ ವ್ಯಥೆಯಾಗುವುದೆಂದು ಮರಣದ ಪರಮಶಾಂತಿಯನ್ನೂ ನಾನು ನಿರಾಕರಿಸಿದ್ದೇನೆ. ನಿಮ್ಮ ವಿಶ್ವಾಸ ದೊರೆಯುವ ಮುನ್ನ ಮರಣವೆಂದರೆ ಭಯಪಡುತ್ತಿದ್ದೆ. ಆದರೀಗ ಭಯ ಮಾಯವಾಗಿದೆ."

"ಮಗಳೇ, ನೀನು ನಿಜವಾದ ವೇದಾಂತಿ."

"ಅಮ್ಮಾ – ಮತ್ತೆ ಮುಂಬಯಿಗೆ ಯಾವಾಗ ಬರುವಿರಿ ?"

"ಏಕೆ ಮಗಳೇ ?"

"ನಾನು ಕಣ್ಣುಮುಚ್ಚುವ ಮುನ್ನ – ಇನ್ನೊಮ್ಮೆ ನನ್ನ ಮನೆ – ನಿಮ್ಮ ಪಾದಧೂಳಿಯಿಂದ ಪವಿತ್ರವಾಗಬೇಕು. ನನ್ನ ಸ್ವಾಮಿಗೆ ನೀವು ಧೈರ್ಯ ಕೊಟ್ಟು ಅವರ ಬಾಳು ದುಃಖದಲ್ಲಿ ಕೊನೆಯಾಗದಂತೆ ಮಾಡಬೇಕು."

"ಷಿರೀನ್ – ಈ ನಿನ್ನ ತಾಯಿ ಎಲ್ಲಿದ್ದರೂ ನಿನಗಾಗಿ, ನಿನ್ನ ಸ್ವಾಮಿಗಾಗಿ – ನಿಮ್ಮಿಬ್ಬರ ಶ್ರೇಯಸ್ಸಿಗಾಗಿ ಭಗವಂತನಲ್ಲಿ ಮೊರೆಯಿಡುತ್ತಾಳೆಂಬುದನ್ನು ಅರಿಯೆಯಾ ?"

"ಬಲ್ಲೆ – ಚೆನ್ನಾಗಿ ಬಲ್ಲೆ. ಆ ರಾತ್ರಿ ನೀವು ಮೃತ್ಯುವಿನೊಂದಿಗೆ ಹೋರಾಡಿ ನನ್ನನ್ನು ಉಳಿಸಿಕೊಂಡಿರಿ."

"ಕಣ್ಣುಮುಚ್ಚಿಕೊಳ್ಳುವ ಯೋಚನೆ ಬಿಟ್ಟು ನಿರಾತಂಕವಾಗಿರು – ಭಗವಂತ ಗೀತೆಯಲ್ಲಿ ಒಂದು ಮಾತು ಹೇಳಿದ್ದಾನೆ. 'ಸರ್ವಧರ್ಮಾನ್ಪರಿತ್ಯಜ್ಯ ಮಾಮೇಕಂ ಶರಣಂವ್ರಜ!'—ಎಲ್ಲಾ ಧರ್ಮಗಳನ್ನು ಪರಿತ್ಯಜಿಸಿ ನನ್ನೊಬ್ಬನನ್ನೇ ಶರಣುಹೊಂದು. ಭಗವಂತನ ಕೈಗೆ ನಿನ್ನ ಆತ್ಮನನ್ನೊಪ್ಪಿಸಿ 'ಇದು ನಿನ್ನದು – ನಿನಗೆ ಹೇಗೆ ಸೂಕ್ತವೋ ಹಾಗೆ ಮಾಡು' ಎಂದು ಹೇಳಿಬಿಡುವುದಷ್ಟೇ ನಮ್ಮ ಕರ್ತವ್ಯಭಾಗ."

"ಆ ಕೆಲಸ ನಾನೆಂದೋ ಮಾಡಿದ್ದೇನೆ ಅಮ್ಮ. ನಿಮ್ಮ ಕೈಗೆ ನನ್ನ ಆತ್ಮನನ್ನು ಒಪ್ಪಿಸಿದ್ದೇನೆ."

ಯೋಗಿನಿ ಅಮ್ಮನವರ ಬಾಯಲ್ಲಿ ಹೆಚ್ಚುಮಾತು ಹೊರಡಲಿಲ್ಲ. ತಮ್ಮ ಮೇಲೆ ಬಿದ್ದಿದ್ದ ಗುರುತರ ಜವಾಬ್ದಾರಿಯ ಪೂರ್ಣ ಅರಿವು ಅವರಿಗಾಗಿತ್ತು. 'ಭಗವಂತಾ, ಈ ಹೊರೆ ಹೊರುವ ಶಕ್ತಿಕೊಡು' ಎಂದು ಅವರ ಮನಸ್ಸು ಮೊರೆಯಿತು.

ಮಾರನೆಯ ದಿನ ಅತಿಥಿಗಳು ಪ್ರಯಾಣಸನ್ನದ್ಧರಾದರು. ಮೇಜರ್ ಸ್ಕಿನ್ನರ್ ಮತ್ತು ಮಿಸ್ ಎಮಿಲಿ ಆಶ್ರಮದಲ್ಲಿಯೇ ಉಳಿದುಕೊಂಡರು. ಷಿರೀನರ ನಿಷ್ಕ್ರಮಣ ಯೋಗಿನಿ ಅಮ್ಮನವರ ಮನಸ್ಸನ್ನು ಭಾರಗೊಳಿಸಿತು.

ತಮ್ಮ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಮಾಡಿಕೊಡುವ ಕೆಲಸವನ್ನು ಸ್ವಾಮಿಜಿ ತಾವೇ ವಹಿಸಿಕೊಂಡರು.

ಭೈರಪ್ಪ ತಡಮಾಡದೆ ಆಸ್ಪತ್ರೆ ಕಟ್ಟಡ ಮತ್ತು ಯುರೋಪಿಯನ್ ಅತಿಥಿ ಗೃಹದ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಆರಂಭಿಸಿದರು. ಸಕಾಲಕ್ಕೆ ಮದರಾಸಿನಿಂದ ಹಣಸಹಾಯವೂ ಒದಗಿತು.

"ದೇವಮಂದಿರವನ್ನು ಕಲ್ಪಿಸುವುದನ್ನಂತೂ ನಿಶ್ಚಯಿಸಿದೆವು. ಮಂದಿರ ದಲ್ಲಿ ಯಾವ ದೇವರನ್ನು ಪ್ರತಿಷ್ಠಾಪಿಸಬೇಕೆಂಬುದನ್ನೇ ನಿರ್ಧರಿಸಿಲ್ಲವಲ್ಲ."

ಎಂದು ವಾಸು ಶಂಕರನನ್ನು ಕೇಳಿದ.

"ಸ್ಕಿನ್ನರ್ ಅವರನ್ನು ಕೇಳಿನೋಡು. ಅವರ ಅಭಿಪ್ರಾಯ ತಿಳಿದು ಕೊಳ್ಳುವುದು ಒಳ್ಳೆಯದು."

"ಆ ವಿಷಯವನ್ನು ಎಲ್ಲರೂ ನಿನಗೇ ಬಿಟ್ಟುಬಿಟ್ಟಿದ್ದಾರೆ ಶಂಕರ."

"ನಿಮ್ಮ ಅಭಿಪ್ರಾಯವೇನು ?"

ಎಂದು ಶಂಕರ ಪ್ರಮೀಳೆಯನ್ನು ಕೇಳಿದ.

"ವೇಣುಗೋಪಾಲಸ್ವಾಮಿಯನ್ನೇಕೆ ಪ್ರತಿಷ್ಠೆಮಾಡಬಾರದು ?"

"ನನ್ನ ಅಭ್ಯಂತರವಿಲ್ಲ. ಆದರೆ ಆಶ್ರಮದ ಅಭಿಮಾನಿಗಳಲ್ಲಿ ಶೈವರಿದ್ದಾರೆ, ಕ್ರೈಸ್ತರಿದ್ದಾರೆ – ನಾಳೆ ಮುಸಲ್ಮಾನರೂ ಬರಬಹುದು. ಅವರು ಅಸಮಾಧಾನಗೊಳ್ಳಬಾರದು."

ಎಂದು ವಾಸು ಸೂಚಿಸಿದ.

"ಶ್ರೀಕೃಷ್ಣ ಒಂದು ವ್ಯಕ್ತಿಯಲ್ಲ – ಶಕ್ತಿ. ಪ್ರೇಮ, ಜ್ಞಾನ, ವೈರಾಗ್ಯ ಗಳ ಋಜುಸ್ವರೂಪ. ಕೃಷ್ಣ ಬೇಡವೆನ್ನುವವರಿಗೆ ಗೀತೆಯೂ ಬೇಡ; ಗೀತೆ ಬೇಡವೆನ್ನುವವರಿಗೆ ಅಧ್ಯಾತ್ಮಜ್ಞಾನವೂ ಬೇಡ. ಶ್ರೀಕೃಷ್ಣ ನನ್ನ ದೃಷ್ಟಿಯಲ್ಲಿ ಮಾನವತ್ವದ ಮಾರ್ಗದಲ್ಲಿ ದೈವತ್ವಕ್ಕೆ ಹೋದ ಪುರುಷಪುಂಗವ. ಇಂದಿನ ಜಗತ್ತಿಗೆ ಅವನ ಆದರ್ಶ – ಅವನ ಸಂದೇಶ ಅವಶ್ಯಕವಾಗಿಬೇಕು. ಸಂಪತ್ತಿನ ಸಾಗರದಲ್ಲಿದ್ದರೂ ಸಂಪತ್ತಿನ ಲೇಪ ಅಂಟಿಸಿಕೊಳ್ಳದೆ, ಯುದ್ಧ ರಂಗದಲ್ಲಿದ್ದರೂ ಶಸ್ತ್ರಸನ್ಯಾಸಿಯಾಗಿ, ಸ್ತ್ರೀಸಮೂಹದಲ್ಲಿದ್ದರೂ ವೀರ ಬ್ರಹ್ಮ ಚಾರಿಯಾಗಿ ಬಾಳುವೆ ನಡೆಸಿದ ಪುರುಷೋತ್ತಮ. ಅವನ ದಿವ್ಯ ಮಂದ ಹಾಸ ಹಲವು ದರ್ಶನಗಳಿಗಿಂತಲೂ ಮಿಗಿಲಾದದ್ದು. ಅವನ ಅಮೃತ ವಾಣಿಯೇ ಪ್ರಣವ. ಜಗತ್ತಿನ ದುಃಖವನ್ನೆಲ್ಲಾ ತಾನು ಹೊತ್ತುಕೊಂಡು 'ನಾನಿದ್ದೇನೆ ಹೆದರಬೇಡ' ಎಂದು ಆಶ್ವಾಸನಕೊಡುವ ಪ್ರಭುವಿನ ಕಟಾಕ್ಷ ಎಲ್ಲರ ಮೇಲೂ ಬೀಳಬೇಕು. ಕೃಷ್ಣ ಕೆಲವರಿಗೆ ಬೇಡವಾಗಬಹುದು. ಶಂಕರ, ಅಲ್ಲಾ, ತಂದೆ, ಅಹುರ್‌ಮಜ್ದಾ ಬೇರೆ ಕೃಷ್ಣ ಬೇರೆ ಎನ್ನುವ ಭಾವನೆ ಕೆಲವರಲ್ಲಿ ಇರಬಹುದು. ಆದರೆ ಕೃಷ್ಣನಿಗೆ ಎಲ್ಲರೂ ಬೇಕು."

"ಕೃಷ್ಣಮಂದಿರ ಹೇಗಿರಬೇಕು."

"ಆ ಬಗ್ಗೆ ನಾನು ವಿಚಾರಮಾಡಿದ್ದೇನೆ. ಈ ಒಂದು ವಿಷಯ ಮಾತ್ರ ನನ್ನ ಮನಸ್ಸಿನಂತಾಗಲಿ."

"ನಿನ್ನ ಮನಸ್ಸಿಗೆ ವಿರುದ್ಧವಾದುದೇನನ್ನೂ ನಾನು ಮಾಡಿಲ್ಲವಲ್ಲಾ !"

"ಮಂದಿರಕ್ಕೆ ಎಂಟು ಕಂಬಗಳಿರಬೇಕು – ನಾಲ್ಕು ಕಡೆಯಲ್ಲಿಯೂ ಪ್ರವೇಶದ್ವಾರ. ನಾಲ್ಕು ಮೂಲೆಗಳಲ್ಲಿಯೂ ವಿಶಾಲವಾದ ಕಿಟಿಕಿಗಳು. ಕರಿಯ ಶಿಲೆಯ ಮೇಲೆ ಸ್ವಾಮಿ ನಿಂತಿರಬೇಕು – ಸ್ವಾಮಿಯ ಮೂರ್ತಿ ಬಿಳಿ ಅಮೃತಶಿಲೆ ಕಲ್ಲಿನದಾಗಿರಬೇಕು."

"ಇದರ ಸಂಕೇತವೇನು ?"

"ಭಗವನ್ಮಂದಿರಕ್ಕೆ ಬಾಗಿಲುಗಳಿರಬಾರದು. ಬೇಕಾದವರು ಬೇಕಾದ ಕಡೆಯಿಂದ ಭಗವದ್ದರ್ಶನಕ್ಕೆ ಬರಬಹುದು. ಬೆಳಕು ಎಲ್ಲಾ ಕಡೆಗಳಿಂದಲೂ ಬರಬೇಕು. ಎಂಟು ಕಂಬಗಳು ಅಷ್ಟಮದಗಳ ಸಂಕೇತ. ಮಾನವನನ್ನು ಅಷ್ಟಮದಗಳು ಕಟ್ಟಿಹಾಕಿರುತ್ತವೆ. ಅವಿದ್ಯೆಯ ಕರಾಳಕತ್ತಲೆ ಅವನನ್ನು ಆವರಿಸುತ್ತದೆ. ಅವಿದ್ಯೆಯ ಸಂಕೇತವೇ ಕರಿಯ ಶಿಲಾಪೀಠ. ಅದನ್ನು ತುಳಿದುಕೊಂಡು ಸ್ವಾಮಿಯ ಶ್ವೇತಮೂರ್ತಿ ನಿಂತಿರಬೇಕು. ಭಗವಂತನ ಮುಖ ಮಂದಹಾಸಯುತವಾಗಿರಬೇಕು.

"ಕಟ್ಟಡದ ಕೆಲಸ ಇಲ್ಲಿ ಮಾಡಿಸಬಹುದು. ಅಮೃತಶಿಲಾ ಪ್ರತಿಮೆಯನ್ನು ಮುಂಬಯಿಯಲ್ಲಿ ಮಾಡಿಸಬೇಕಾಗುತ್ತದೆ."

"ಅಯೋಧ್ಯಾಪ್ರಸಾದರು ಆ ಕೆಲಸ ಯಾರ ಕೈಯಲ್ಲಾದರೂ ಮಾಡಿಸಿ ಕೊಡುತ್ತಾರೆ."

"ನೀನು ಹೇಳಿದ ಹಾಗೇ ಮಾಡಿಸುತ್ತೇನಪ್ಪಾ. ಚಾಚೂ ತಪ್ಪುವುದಿಲ್ಲ."

ಎಂದು ವಾಸು ಕೊಟ್ಟ ಆಶ್ವಾಸನ ಶಂಕರನ ಮನಸ್ಸಿಗೆ ತೃಪ್ತಿಯನ್ನುಂಟುಮಾಡಿತು.

"ಹಾಗಾದರೆ ದೇವಮಂದಿರದ ಕೆಲಸ ಮುಗಿಯುವವೇಳೆಗೆ ನೀನು ಮದರಾಸಿಗೆ ಹೋಗಿಬರಬೇಕು."

"ನಾನಿದ್ದು ಮಾಡಬೇಕಾದದ್ದೇನಿದೆ. ಮದರಾಸಿನ ಪ್ರವಾಸ ಮುಗಿಸಿಕೊಂಡು ಬಂದುಬಿಟ್ಟರೆ ನನಗೆ ಸ್ವಲ್ಪ ವಿರಾಮಸಿಕ್ಕುತ್ತದೆ. ರಾಮಾಯಣದ ಮೇಲೆ ಒಂದು ಗ್ರಂಥ ಬರೆಯಬೇಕೆಂದು ಭಗವದಾಜ್ಞೆ ಆಗಿದೆ."

"ಬಹಳ ಸಂತೋಷ. ನೀನು ಅನುವಾದ ಮಾಡಿಕೊಡುವುದು ಯಾವಾಗ ?"

"ನಾನು ಮದರಾಸಿಗೆ ಹೊರಡುವ ವೇಳೆಗೆ 'ಗೀತಾ ಉಪನ್ಯಾಸಗಳು' ಮುಗಿಸಿಕೊಡುತ್ತೇನೆ. ಉಪನಿಷತ್‌ಸಾರ ಅಲ್ಲಿಯೇ ಮುಗಿಸಿ ತರುತ್ತೇನೆ."

"ನಿನ್ನ ಜತೆಗೆ ಯಾರನ್ನು ಕರೆದುಕೊಂಡು ಹೋಗುತ್ತೀ ?"

"ರಾಮಸ್ವಾಮಿಗೆ ಪುರಸತ್ತಿಲ್ಲ. ಮಿಸ್. ಎಮಿಲಿಯವರು ಆಸ್ಪತ್ರೆ ವ್ಯವಸ್ಥೆ ನೋಡಿಕೊಳ್ಳಬೇಕಾಗುತ್ತದೆ. ಮೇಜರ್ ಸ್ಕಿನ್ನರ್ ಅವರಿಗೆ ಪುರಸತ್ತಿದ್ದರೆ ಬರಲಿ.

"ಸೊಗಸಾದ ಯೋಜನೆ. ಮದರಾಸಿನಲ್ಲಿ ಯಾವ ವಿಷಯ ಕುರಿತು ಮಾತನಾಡುತ್ತಿ ಶಂಕರ."

"ರಾಮಾಯಣದ ಮೇಲೆ ಗ್ರಂಥ ಬರೆಯುವ ಯೋಜನೆಮಾಡುತ್ತಿದ್ದೇನೆ. ಆ ವಿಷಯವನ್ನೇ ಕುರಿತು ಮಾತನಾಡಿದರೆ ನನ್ನ ಮುಂದಿನ ಕೆಲಸಕ್ಕೆ ಅನುಕೂಲವಾಗುತ್ತದೆ."

"ಮದರಾಸಿನ ರಾಮಾಯಣ ಸಪ್ತಾಹ ಮುಗಿಸಿಕೊಂಡು ಬಂದಮೇಲೆ ಇಲ್ಲಿ ಮಹಾಭಾರತ ಸಪ್ತಾಹ ಮಾಡಬೇಕು ಶಂಕರ"

ಎಂದು ವಾಸು ಸೂಚಿಸಿದ.

ಆಶ್ರಮ ವಿವಿಧ ಚಟುವಟಿಕೆಗಳಿಂದ ತುಂಬಿ ತುಳುಕುತ್ತಿತ್ತು. ಬೈರಪ್ಪನವರಿಗೆ ನೆರವಾಗಿ ಆಸ್ಪತ್ರೆ, ಯೂರೋಪಿಯನ್ ಅತಿಥಿಗೃಹ ನಿರ್ಮಾಣದಲ್ಲಿ ರಾಮಸ್ವಾಮಿ ಉದ್ಯುಕ್ತನಾಗಿದ್ದ. ಆಗಾಗ್ಗೆ ಅವನು ಬೆಂಗಳೂರಿಗೆ ಹೋಗಿ ಬರಬೇಕಾಗಿದ್ದುದರಿಂದ ಆಶ್ರಮದ ಒಳಾಡಳಿತವೆಲ್ಲಾ ಮಿಸ್. ಎಮಿಲಿ ಮತ್ತು ಸ್ಕಿನ್ನರ್ ಅವರ ಮೇಲೆ ಬಿತ್ತು.

ಆಶ್ರಮಕ್ಕೆ ಬಂದು ನೆಲಸಿದ ಕೂಡಲೆ ಸ್ಕಿನ್ನರ್ ತಮ್ಮ ಐರೋಪ್ಯ ಉಡುಗೆ ತೊಡುಗೆಗಳನ್ನು ಬಹಿಷ್ಕರಿಸಿದರು. ಖಾದಿಯ ಒಂದು ತುಂಡು, ಜುಬ್ಬ, ಹೊದೆಯಲು ಒಂದು ಟವಲು, ಕಾಲಿಗೆ ಚಪ್ಪಲಿ ಅವರ ನಿತ್ಯ ಉಡು

ಪಾಯಿತು. ದಿನಕ್ಕೆ ಎರಡುಗಂಟೆಕಾಲ ತಪ್ಪದೆ ಸ್ಕಿನ್ನರ್ ಸ್ವಾಮಿಜಿಯವರ ಜತೆ ಕಳೆಯುತ್ತಿದ್ದರು. ಅನೇಕ ಆಧ್ಯಾತ್ಮಿಕ ಸಮಸ್ಯೆಗಳನ್ನು ಚರ್ಚಿಸಿ ತಮ್ಮ ಬಿಡಾರಕ್ಕೆ ಬಂದಕೂಡಲೆ ತಮ್ಮ ಚರ್ಚೆಯನ್ನು ಟೈಪುಮಾಡಿ ಸ್ವಾಮಿಜಿಯವರಿಗೆ ತೋರಿಸುತ್ತಿದ್ದರು. ಉಳಿದ ವೇಳೆಯಲ್ಲಿ ಆಶ್ರಮದ ಪುಸ್ತಕಭಂಡಾರವನ್ನು ವ್ಯವಸ್ಥೆಗೊಳಿಸಿ, ಹೊಸ ಹೊಸ ಧಾರ್ಮಿಕ ಗ್ರಂಥಗಳನ್ನು ಬೇರೆ ಬೇರೆ ಕಡೆಗಳಿಂದ ತರಿಸುತ್ತಿದ್ದರು.

ಆಶ್ರಮದ ವಾತಾವರಣಕ್ಕೂ ತಮ್ಮ ಐರೋಪ್ಯ ಉಡುಪಿಗೂ ತಾಳಮೇಳವಿಲ್ಲವೆಂದು ತಿಳಿದು ಮಿಸ್. ಎಮಿಲಿ, ಯೋಗಿನಿ ಅಮ್ಮನವರ ನೆರವಿನಿಂದ ಸೀರೆ ಉಡುವುದನ್ನು ಕಲಿತರು. ಮೊದಮೊದಲು ಸೀರೆ ಏನೋ ವಿಚಿತ್ರವಾಗಿ ಕಾಣುತ್ತಿತ್ತು. ನಾಲ್ಕಾರು ದಿನಗಳಲ್ಲಿ ರೂಢಿಯಾಗಿ, ಅದೇ ಅವರ ನಿತ್ಯ ಉಡುಪಾಯಿತು.

ಆಶ್ರಮದ ಕಛೇರಿಯ ಪತ್ರವ್ಯವಹಾರ ನೋಡಿಕೊಂಡು, ಯೋಗಿನಿ ಅಮ್ಮನವರ ಬಳಿ ತಮ್ಮ ಕನ್ನಡ ಪಾಠ ಮುಗಿಸಿಕೊಂಡು ಮಿಸ್. ಎಮಿಲಿ ಸುತ್ತಮುತ್ತಲಿನ ಹಳ್ಳಿಗಳಿಗೆ ಹೋಗಿ ಬರುತ್ತಿದ್ದರು.

ತಮ್ಮ ಹಳ್ಳಿಗೆ – ತಮ್ಮ ಮನೆಗೆ ಬಂದು ಸ್ನೇಹದಿಂದ ವರ್ತಿಸಿ, ಹಾರ್ದಿಕ ಪ್ರಶ್ನೆಗಳನ್ನು ಕೇಳುತ್ತಿದ್ದ ಈ ವಿಲಾಯಿತಿ ಹೆಣ್ಣುಮಗಳನ್ನು ನೋಡಿ ಹಳ್ಳಿಗರು ನಗೆಯಾಡುತ್ತಿದ್ದರು. ಮಿಸ್. ಎಮಿಲಿಯ ತಿದ್ದಿದ ಪಾದ್ರಿ ಕನ್ನಡ ಹಳ್ಳಿಗರ ವಿನೋದಕ್ಕೆ ಉತ್ತಮ ಗ್ರಾಸವಾಗಿತ್ತು. ದಿನಗಳೆದಂತೆ ಪರಿಹಾಸ್ಯ ನಿಂತುಹೋಯಿತು. ಮಿಸ್. ಎಮಿಲಿಯ ವಿಚಿತ್ರ ಉಡುಪೂ ಹಳ್ಳಿಗರಿಗೆ ಸರ್ವಸಾಧಾರಣವಾಯಿತು.

ಮೂಗುತಿಹಳ್ಳಿ ರಾಮಗಿರಿಗೆ ಒಂದೂವರೆ ಮೈಲಿ ದೂರದಲ್ಲಿತ್ತು. ಸುಮಾರು ಮುನ್ನೂರು ಪ್ರಜಾಸಂಖ್ಯೆಯುಳ್ಳ ಆ ಹಳ್ಳಿಯಲ್ಲಿ ಅಕ್ಷರಸ್ಥರು ಒಬ್ಬರೂ ಇರಲಿಲ್ಲ. ಎಲ್ಲ ಹಳ್ಳಿಗಳಂತೆ ಮೂಗುತಿಹಳ್ಳಿಯೂ ಕೊಳಕು, ಅನಾರೋಗ್ಯ, ಬಡತನಕ್ಕೆ ಪ್ರಸಿದ್ಧವಾಗಿತ್ತು. ತಮ್ಮ ಊರಿನ ಐತಿಹ್ಯದ ಬಗ್ಗೆ ಮೂಗುತಿಹಳ್ಳಿಯವರು ತುಂಬ ಅಭಿಮಾನ ತಾಳಿದ್ದರು. ರಾವಣ ಸೀತಾಪಹರಣ ಮಾಡಿಕೊಂಡು ಹೋಗುತ್ತಿದ್ದಾಗ, ತಮ್ಮ ಜಾಡು ಗೊತ್ತಾಗಲೆಂದು ಸೀತಾದೇವಿ ಧರಿಸಿದ್ದ ಆಭರಣಗಳನ್ನು ದಾರಿಯಲ್ಲಿ ಚೆಲ್ಲುತ್ತ ಹೋದಳು.

ಆಕೆ ಚೆಲ್ಲಿದ ಮೂಗುತಿ ಈ ಹಳ್ಳಿಯಲ್ಲಿ ಬಿಸ್ದುದರಿಂದ ಮೂಗುತಿಹಳ್ಳಿ ಎಂಬ ಹೆಸರು ಬಂದಿತೆಂದು ಊರಿನ ಹಿರಿಯರು ಹೇಳುತ್ತಿದ್ದರು. ಮೂಗುತಿ ಬಿದ್ದ ಸ್ಥಳದಲ್ಲಿ ರಾಮದೇವಾಲಯವಿತ್ತು. ದೇವಾಲಯದಲ್ಲಿ ಸೀತಾದೇವಿಯ ಮೂಗುತಿ ಇನ್ನೂ ಇದೆಯೆಂದೂ ಅಲ್ಲಿಂದ ಆಗಾಗ್ಗೆ ಸೀತಾದೇವಿಯ ರೋದನದ ಧ್ವನಿ ಕೇಳಬರುವುದೆಂದೂ ಹಳ್ಳಿಗರು ದೃಢವಾಗಿ ನಂಬಿದ್ದರು.

ಹಳ್ಳಿಗಳ ಆರೋಗ್ಯದ ಸ್ಥಿತಿಗತಿ (Health Survey) ಗಳನ್ನರಿಯಲು ಹೊರಟಿದ್ದ ಮಿಸ್. ಎಮಿಲಿ ಮೂಗುತಿಹಳ್ಳಿಗೆ ಬಂದರು. ಹಳ್ಳಿಯ ಅವಸ್ಥೆ ನೋಡಿ ಅವರ ಮನಸ್ಸಿಗೆ ತುಂಬ ದುಃಖವಾಯಿತು. ಎಲ್ಲಿ ನೋಡಿದರೂ ತಿಪ್ಪೆ – ಎಲ್ಲಿ ನೋಡಿದರೂ ಶೌಚಕೂಪ – ಎಲ್ಲಿ ನೋಡಿದರೂ ಕಸಕಡ್ಡಿ. ಪ್ರತಿಯೊಂದು ಮನೆಯ ಮುಂದೆಯೂ ಕೊಳೆತ ನೀರಿನ ಕಟ್ಟೆ. ಅನೇಕ ಮನೆಗಳ ಕೊಳಕುನೀರು ಭಾವಿಗೆ ಹರಿಯುತ್ತಿತ್ತು. ಅದೇ ಭಾವಿಯ ನೀರನ್ನು ಜನ ಕುಡಿಯುವುದಕ್ಕೆ ಬಳಸುತ್ತಿದ್ದರು. ಮಿಸ್. ಎಮಿಲಿ ಹಳ್ಳಿಗರಿಗೆ ಒಂದು ದಿನ ಶುಭ್ರತೆಯ ಆವಶ್ಯಕತೆಯನ್ನು ವಿವರಿಸಿ, ಹಳ್ಳಿಯನ್ನು ಸುಧಾರಿಸುವ ಬಗೆಯನ್ನು ಸೂಚಿಸಿದರು. ಅವರ ಮಾತಿಗೆ ಪ್ರತಿಹೇಳಲಾಗದೆ ಹಳ್ಳಿಗರು ಎಲ್ಲವನ್ನೂ ಸರಿಪಡಿಸಲು ವಾಗ್ದಾನ ಮಾಡಿದರು.

ಬೇರೆ ಬೇರೆ ಹಳ್ಳಿಗಳಲ್ಲಿ ಸಂಚಾರಮಾಡುತ್ತಿದ್ದ ಮಿಸ್. ಎಮಿಲಿ ಮೂಗುತಿಹಳ್ಳಿಗೆ ಎಂಟು ದಿವಸ ಹೋಗಲು ಸಾಧ್ಯವಾಗಲಿಲ್ಲ. ತಮ್ಮ ಸಲಹೆಯಂತೆ ಹಳ್ಳಿಗರು ಮೂಗುತಿಹಳ್ಳಿಯನ್ನು ಶುಚಿಗೊಳಿಸಿರುತ್ತಾರೆಂದು ಎಮಿಲಿ ನಂಬಿಕೊಂಡು ಮೂಗುತಿಹಳ್ಳಿಗೆ ಕಾಲಿಟ್ಟರು. ಹಳ್ಳಿಗರು ಒಂದು ಕಡ್ಡಿಯನ್ನೂ ಅಲುಗಾಡಿಸಿರಲಿಲ್ಲ. ಹಿಂದಿದ್ದ ಕೊಳಕಿನ ಜತೆಗೆ ಮತ್ತೆ ಎಂಟು ದಿವಸಗಳ ಕೊಳಕೂ ಸೇರಿಕೊಂಡಿತ್ತು.

ಹಳ್ಳಿಗರ ಆಲಸ್ಯ ಕಂಡು ಮಿಸ್. ಎಮಿಲಿಯವರಿಗೆ ತುಂಬ ನೋವಾಯಿತು. ಮರುಮಾತಾಡದೆ ಸೆರಗನ್ನು ಸೊಂಟಕ್ಕೆ ಬಿಗಿದು ಯಾರದೋ ಮನೆಯಮುಂದೆ ಬಿದ್ದಿದ ಹುಣಿಸೇಬರಲನ್ನೆತ್ತಿಕೊಂಡು ಬೀದಿ ಗುಡಿಸುವುದಕ್ಕಾರಂಭಿಸಿದರು. ಸಮೀಪದಲ್ಲಿದ್ದ ಹೆಣ್ಣುಮಕ್ಕಳು ಕಕ್ಕಾಬಿಕ್ಕಿ

ಯಾದರು. ಒಬ್ಬಿಬ್ಬ ಹಿರಿಯ ಹೆಣ್ಣುಮಕ್ಕಳು ಎಮಿಲಿಯ ಬಳಿಗೆ ಬಂದು

"ಬಿಡ್ರವ್ವಾ – ನೀವ್ಯಾಕ ಗುಡಿಸ್ಬೇಕು."

ಎಂದು ಅವರ ಕೈಯಲ್ಲಿದ್ದ ಬರಲನ್ನು ಕಸಿದುಕೊಳ್ಳಲೆತ್ನಿಸಿದರು. ಎಮಿಲಿ ಸೋಲದೆ

"ನಿಮಗೆ ಬೇಕಾದರೆ ನೀವೂ ಒಂದೊಂದು ಪರಕೆ ತೆಗೆದುಕೊಂಡು ಗುಡಿಸಿ"

ಎಂದರು. ಹಿರಿಯ ಹೆಣ್ಣುಮಕ್ಕಳು, ತಮ್ಮ ಮಕ್ಕಳು, ಸೊಸೆಯರನ್ನು ಕೂಗಿಕರೆದರು. ಆಡುತ್ತಿದ್ದ ಮಕ್ಕಳು ಓಡಿಹೋಗಿ ಹೊಲದ ಕೆಲಸ ಮಾಡುತ್ತಿದ್ದ ಹಿರಿಯ ಗಂಡಾಳುಗಳನ್ನು ಕರೆತಂದರು. ಎಲ್ಲರ ಕೈಗೂ ಪರಕೆ, ಮೊರಗಳು ಬಂದವು. ಎಮಿಲಿ ತಮ್ಮ ಬರಲನ್ನು ಬಿಡಲಿಲ್ಲ.

ಎಮಿಲಿ ನಾಲ್ಕು ಗಂಡಾಳುಗಳನ್ನು ಕರೆದು ಸಂಜ್ಞೆಯಿಂದ ಶನಿಕೆ, ಪಿಕಾಸಿ ತನ್ನಿರೆಂದು ಹೇಳಿದರು. ಆಳುಗಳು ಶನಿಕೆ, ಪಿಕಾಸಿ ತರಲು. ಭಾವಿಯ ಕಡೆ ಹೋಗುತ್ತಿದ್ದ ಹೊಲಸು ನೀರಿಗೆ ಬೇರೆ ಮಾರ್ಗ ನಿರ್ದೇಶಿಸಿದರು.

ಪ್ರತಿ ಮನೆಯ ಹಿಂದೆಯೂ ಸಂಗ್ರಹವಾಗಿದ್ದ ತಿಪ್ಪೆಯನ್ನು ಊರ ಹೊರಗೆ ಸಾಗಿಸಲು ಹೇಳಿದರು.

ಮಧ್ಯಾಹ್ನದ ಉರಿಬಿಸಿಲು ನೆತ್ತಿ ಸುಡುತ್ತಿತ್ತು. ಎಮಿಲಿಗಾಗಲಿ ಹಳ್ಳಿಗರಿಗಾಗಲಿ ಕಾಲದ ಪರಿವೆಯೇ ಇಲ್ಲ. ಹಳ್ಳಿಯ ಶುದ್ಧೀಕರಣ ಮುಗಿಯಲು ಸಿದ್ದನ ತಾಯಿ ಗಂಗವ್ವ ಒಂದು ಗಡಿಗೆಯಲ್ಲಿ ಶುಭ್ರವಾದ ನೀರುತಂದು ಎಮಿಲಿ ಕೈಕಾಲು ಮುಖ ತೊಳೆದುಕೊಳ್ಳುವುದಕ್ಕೆ ಕೊಟ್ಟಳು. ಎಮಿಲಿ ಸಿದ್ಧವಾಗುವುದರೊಳಗೆ ತನ್ನ ಮನೆಯ ಜಗುಲಿಯ ಮೇಲೆ ಒಂದು ಗೋಣೀಚೀಲ ಹಾಸಿ ಎಮಿಲಿಯನ್ನು ಕೂಡಲು ಹೇಳಿ, ಒಳಗಿನಿಂದ ಒಂದು ಸಣ್ಣ ತಂಬಿಗೆಯಲ್ಲಿ ಹಾಲು ತಂದಿಟ್ಟು ಭಕ್ತಿಯಿಂದ ಕೈಮುಗಿದು ಕೊಂಡು

"ತೊಗೋ ನನ್ನವ್ವಾ"

ಎಂದಳು. ಹಳ್ಳಿಯವರು ಎಮಿಲಿಯ ಸುತ್ತಮುತ್ತಿಕೊಂಡು ಅವರನ್ನೇ ಕುತೂಹಲದಿಂದ ನೋಡುತ್ತ ನಿಂತಿದ್ದರು. ಎಮಿಲಿ ಸ್ವಲ್ಪ ಹಾಲುಕುಡಿದು ತಂಬಿಗೆಯನ್ನು ಕೆಳಗಿಟ್ಟರು. ಗಂಗವ್ವ, ಎಮಿಲಿಯ ಸಮೀಪಕ್ಕೆ ಬಂದು

"ನೀನ್ಯಾಕವ್ವಾ, ಮೈಕೈಯೆಲ್ಲಾ ರಾಡಿಮಾಡ್ಕೊಂಡೆ."

"ಹಳ್ಳಿ ಕೊಳಕಾಗಿರಬಾರದು – ತಿಪ್ಪೆ, ಕೊಚ್ಚೆ ಇದ್ದರೆ ಸೊಳ್ಳೆಗಳು ಹುಟ್ಟುತ್ತವೆ. ಅದರಿಂದ ಮಲೇರಿಯಾ ಜ್ವರ ಬರುತ್ತದೆ – ಹೊಟ್ಟೆಯಲ್ಲಿ ಗೆಡ್ಡೆ ಬರುತ್ತದೆ – ಜನ ಸಾಯುತ್ತಾರೆ."

ಎಮಿಲಿಯ ಮಾತನ್ನು ಸಮರ್ಥಿಸಿ, ಹಳ್ಳಿಯಲ್ಲಿ ಜ್ವರದಿಂದ ಸತ್ತವರ ಕಥೆಗಳನ್ನು ಗಂಗವ್ವ ಹೇಳುತ್ತಾ

"ಯಾವ ಊರವ್ವಾ ನಿನ್ನದು."

"ಇಲ್ಲಿಂದ ಬಹಳ ದೂರ – ಸಾವಿರಾರು ಮೈಲಿಗಳಾಚೆ – ಸಮುದ್ರದ ಅತ್ತ ಕಡೆಗೆ."

"ನಿಮ್ಮೂರು ಬುಟ್ಟುಬುಟ್ಟು ಇಲ್ಲ್ಯಾಕೆ ಬಂದೆಯವ್ವಾ ?"

"ಇಲ್ಲಿ ನನ್ನ ಗುರು ಇದ್ದಾರೆ."

"ನಿನ್ನ ಎಸರೇನವ್ವಾ ?"

"ಎಮಿಲಿ."

"ಮಿಲಿಮಿಲಿ – ಎಂತಾ ಇಚಿತ್ರ ಎಸರವ್ವಾ ?"

ಹಳ್ಳಿಯವರು ಗಂಗವ್ವನ ಮಾತಿಗೆ ನಕ್ಕರು. ಎಮಿಲಿಯೂ ಅವರೊಂದಿಗೆ ನಕ್ಕರು.

"ನಿನ್ನ ಜನ, ಮನೆ, ದೇಸ ಬುಟ್ಟು ಏಟುದೂರ ಬಂದೆಯವ್ವಾ ?"

"ನೀವೂ ನನ್ನ ಜನರೇ. ಈ ದೇಶವೂ ನನ್ನ ದೇಶವೇ"

"ನಾವು ಅರಿದೋರು – ಅಗ್ನಾನಿಗಳು. ನಿನ್ನ ಮಾತು ಕೇಳ್ದೆ ನಿನ್ನ ಕೈಗೆ ಬರಲು ಕೊಟ್ಟು ತಪ್ಪುಮಾಡಿದೆವು – ಕ್ಸಮಿಸು ಮಿಲಮಿಲವ್ವಾ"

"ಮುಂದಾದರೂ ನೀವು ನಿಮ್ಮ ಹಳ್ಳಿಯನ್ನು ಶುಭ್ರವಾಗಿಟ್ಟುಕೊಂಡರೆ ನನಗೆ ಸಂತೋಷವಾಗುತ್ತದೆ."

"ರಾಮಪ್ನ ಆಣೇಗೂ ಇಟ್ಟುಕೊಂತೀವಿ. ಯಾರೂ ಕಸ ಹೊಡೀದಿದ್ರೆ ನಾನೇ ಹೊಡೀತಿನಿ ನಮ್ಮವ್ವಾ"

35

ಎಂದು ಗಂಗವ್ವ ಅಭಿವಚನವನ್ನಿತ್ತಳು.

ಆಶ್ರಮಕ್ಕೆ ಎಮಿಲಿ ಬರುವ ವೇಳೆಗೆ ಮೂರು ಗಂಟೆಹೊಡೆದಿತ್ತು. ಎಲ್ಲರೂ ಊಟ ಮುಗಿಸಿದ್ದರು. ಯೋಗಿನಿ ಅಮ್ಮನವರು ಮಾತ್ರ ಎಮಿಲಿಗಾಗಿ ಕಾದುಕೊಂಡಿದ್ದರು.

ಎಮಿಲಿಯ ಅವಸ್ಥೆ ನೋಡಿ ಯೋಗಿನಿ ಅಮ್ಮನವರಿಗೆ ಸ್ವಲ್ಪ ಗಾಬರಿಯಾಯಿತು.

"ಇವೇನು ಮಿಸ್. ರಾಬಿನ್ಸನ್. ಬಟ್ಟೆಬರೆಯೆಲ್ಲಾ ಇಷ್ಟು ಹೊಲಸಾಗಿದೆ."

ಎಮಿಲಿ ಮೂಗುತಿಹಳ್ಳಿಯಲ್ಲಿ ನಡೆದುದನ್ನು ವಿವರಿಸಿದರು. ಯೋಗಿನಿ ಅಮ್ಮನವರು ತಾವೇ ಎಮಿಲಿಗೆ ಸ್ನಾನಕ್ಕೆ ನೀರೆರೆದು, ತಲೆ ಒರಸಿ ಜತೆಯಲ್ಲಿ ಊಟಕ್ಕೆ ಕರೆದೊಯ್ದರು.

೨೨

ಆಶ್ರಮಕ್ಕೆ ತಂಡತಂಡವಾಗಿ ಜನ ಬರತೊಡಗಿದರು. ಮೈಸೂರಿನಿಂದ ಬೆಂಗಳೂರಿಗೆ ಹೋಗುವವರು, ಒಂದು ರೈಲಿನಲ್ಲಿ ಬಂದಿಳಿದು, ಆಶ್ರಮ ನೋಡಿಕೊಂಡು ಮರುರೈಲಿಗೆ ಹೋಗುವುದು ಸ್ವಾಭಾವಿಕವಾಯಿತು. ಶುಕ್ರವಾರದ ಭಜನೆಗೆ ಸಾವಿರಾರು ಜನ ಬರುತ್ತಿದ್ದರು.

ಧರ್ಮಪ್ರಸಾರಕ್ಕೆ ಅನ್ನದಾನದ ಆವಶ್ಯಕತೆಯನ್ನು ಚೆನ್ನಾಗಿ ಮನಗಂಡಿದ್ದ ವಾಸು, ಊಟದ ವೇಳೆಗೆ ಯಾರು ಬಂದರೂ ಊಟಕ್ಕೆ ಎಬ್ಬಿಸುತ್ತಿದ್ದ. ಮೊದಲೇ ತಿಳಿಸಿ ಯಾರುಬೇಕಾದರೂ ಆಶ್ರಮದಲ್ಲಿ ಮೂರು ದಿನ ಇರಬಹುದಾಗಿತ್ತು. ಆ ಕಾಲದಲ್ಲಿ ಅವರಿಗೆ ಬೆಳಿಗ್ಗೆ ಕಾಫಿ ತಿಂಡಿ, ಮಧ್ಯಾಹ್ನ ಊಟ, ಸಂಜೆಗೆ ಕಾಫಿ, ರಾತ್ರಿಗೆ ಊಟ ಉಚಿತವಾಗಿ ದೊರೆಯುತ್ತಿತ್ತು. ಆಶ್ರಮದ ಊಟ ತಿಂಡಿಯ ಅಚ್ಚುಗಟ್ಟುತನಕ್ಕೆ ಮಾರುಹೋದ ಅನೇಕರು ಊಟ ತಿಂಡಿಯ ಸಲುವಾಗಿಯೇ ಆಶ್ರಮಕ್ಕೆ ಬರುತ್ತಿದ್ದರು. ತಮಗೆ ಅನುಕೂಲವಾದಾಗ ಬರುತ್ತಿದ್ದ ಭಕ್ತರು ಎಲ್ಲ ವೇಳೆಗಳಲ್ಲಿಯೂ ಸ್ವಾಮಿಜಿಯವರ, ಯೋಗಿನಿ ಅಮ್ಮನವರ ದರ್ಶನ ಬಯಸುತ್ತಿದ್ದರು. ಪ್ರೇಕ್ಷಕರ ತಂಡ

ಬೆಳೆದಂತೆ ಸ್ವಾಮಿಜಿಯವರ ಮತ್ತು ಯೋಗಿನಿ ಅಮ್ಮನವರ ಸ್ವಂತ ಕೆಲಸ ಕಾರ್ಯಗಳಿಗೆ ಅಡಚಣೆಯಾಗತೊಡಗಿತು.

"ಒಂದು ಕ್ಲಿಪ್ತಕಾಲ ಗೊತ್ತುಮಾಡಿ ಹೊರಗಿನಿಂದ ಬರುವವರಿಗೆ ಸ್ವಾಮಿಜಿಯವರ ಮತ್ತು ಶ್ರೀಮಾತೆಯವರ ದರ್ಶನಲಾಭ ಒದಗಿಸುವುದು ಒಳ್ಳೆಯದು. ಎಲ್ಲಾ ವೇಳೆಗಳಲ್ಲಿಯೂ ಜನ ಬಂದು ಸ್ವಾಮಿಜಿಯವರ ವೇಳೆಯನ್ನು ಹಾಳುಮಾಡುತ್ತಿದ್ದಾರೆ"

ಎಂದು ಮೇಜರ್ ಸ್ಕಿನ್ನರ್ ವಾಸೂಗೆ ತಿಳಿಸಿದರು. ಈ ಬಗ್ಗೆ ವಾಸು ವಿಚಾರ ಮಾಡಿ, ಎಲ್ಲರ ಸಲಹೆ ಕೇಳಿಕೊಂಡು ಒಂದು ನಿರ್ಧಾರಕ್ಕೆ ಬಂದ.

ಸಭಾಮಂದಿರದಲ್ಲಿ ಒಂದು ವೇದಿಕೆ ಏರ್ಪಡಿಸಲ್ಪಟ್ಟಿತು. ಬೆಳಿಗ್ಗೆ ಎಂಟರಿಂದ ಒಂಭತ್ತೂವರೆಗೆ, ಸಂಜೆ ನಾಲ್ಕರಿಂದ ಆರರವರೆಗೆ ಸ್ವಾಮಿಜಿ ಮತ್ತು ಯೋಗಿನಿ ಅಮ್ಮನವರು ವೇದಿಕೆಯ ಮೇಲೆ ಕುಳಿತು ಎಲ್ಲರಿಗೂ ದರ್ಶನ ಕೊಡುವುದೆಂದು ನಿರ್ಧರಿಸಲಾಯಿತು. ಸ್ವಾಮಿಜಿಯವರನ್ನಾಗಲಿ, ಯೋಗಿನಿ ಅಮ್ಮನವರನ್ನಾಗಲಿ ಪ್ರಶ್ನೆ ಕೇಳ ಬಯಸುವವರು, ನೇರವಾಗಿ ಕೇಳುವಂತಿಲ್ಲ. ತಮ್ಮ ಪ್ರಶ್ನೆಯನ್ನು ಕಾಗದದ ಮೇಲೆ ಬರೆದು ಆಶ್ರಮದ ಕಾರ್ಯದರ್ಶಿಯ ಕೈಯಲ್ಲಿ ಕೊಡಬೇಕು. ಅವರು ಸ್ವಾಮಿಜಿಯವರ ಯೋಗಿನಿ ಅಮ್ಮನವರ ಉತ್ತರ ತಿಳಿದುಕೊಂಡು ಪ್ರಶ್ನೆ ಕೇಳುತ್ತಿದ್ದವರಿಗೆ ಉತ್ತರ ಹೇಳುತ್ತಿದ್ದರು. ಉಳಿದ ವೇಳೆಗಳಲ್ಲಿ ಸ್ವಾಮಿಜಿಯವರ ಅಥವಾ ಯೋಗಿನಿ ಅಮ್ಮನವರ ದರ್ಶನ ಬಯಸುತ್ತಿದ್ದವರು ಗೌರವ ಕಾರ್ಯದರ್ಶಿಗೆ ಬರೆದುಕೊಂಡು, ಅವರು ಗೊತ್ತುಮಾಡಿದ ವೇಳೆಯಲ್ಲಿ ದರ್ಶನ ಪಡೆಯ ಬಹುದಾಗಿತ್ತು.

ದರ್ಶನಕ್ಕೆ ಬರುತ್ತಿದ್ದವರಿಗೆ ಕೆಲವು ನಿಯಮ ನಿಬಂಧನೆಗಳು ಗೊತ್ತು ಮಾಡಲ್ಪಟ್ಟವು. ದರ್ಶನಮಂದಿರಕ್ಕೆ ಯಾರೂ ಅಶುಚಿಯಾದ ವಸ್ತ್ರ ಧರಿಸಿ ಹೋಗುವಂತಿಲ್ಲ. ಕಾಲಿಗೆ ಯಾರೂ ಏನನ್ನೂ ಧರಿಸಿರಕೂಡದು. ದರ್ಶನಮಂದಿರಕ್ಕೆ ಹೋಗುವ ಮುನ್ನ ಕಾಲು ತೊಳೆದುಕೊಂಡೇ ಹೋಗ ಬೇಕು. ದರ್ಶನ ವೇಳೆಯಲ್ಲಿ ಭಕ್ತಾದಿಗಳು ನಿಶ್ಶಬ್ದವಾಗಿ ಒಂದೆಡೆ ಕುಳಿತು

ಕೊಂಡು ಧ್ಯಾನಮಾಡಬೇಕು. ಯಾರೂ ಸಂಭಾಷಣೆ, ಚರ್ಚೆಗಳಲ್ಲಿ ತೊಡಗುವಂತಿಲ್ಲ.

ರಾಮಸ್ವಾಮಿಯೋ ವಾಸುವೋ ದರ್ಶನ ವೇಳೆಗಳಲ್ಲಿ ನಿಂತುಕೊಂಡು ಯಾರು ನಿಮಯೋಲ್ಲಂಘನೆ ಮಾಡದಂತೆ ಎಚ್ಚರವಾಗಿರುತ್ತಿದ್ದರು.

ಭಕ್ತಾದಿಗಳು ಸ್ವಾಮಿಜಿ ಮತ್ತು ಯೋಗಿನಿ ಅಮ್ಮನವರು ದರ್ಶನ ಸಮಯದಲ್ಲಿ ಗ್ರಂಥ ಓದಿಕೊಂಡೋ, ತನಗೆ ಬೇಕಾದುದನ್ನು ಬರೆದುಕೊಂಡೇ ಕಾಲ ತಳ್ಳುತ್ತಿದ್ದರು.

ಕೆಲವು ಸಲ ಪ್ರಶ್ನೆಯ ಚೀಟಿಗಳು ದರ್ಶನ ವೇಳೆಯ ಮೊದಲೇ ಕಛೇರಿಗೆ ಬರುತ್ತಿದ್ದವು. ಕೆಲವು ಸಲ ಸಭಾಮಂದಿರದಲ್ಲಿಯೇ ಬರುತ್ತಿದ್ದವು. ಅನೇಕ ಪ್ರಶ್ನೆಗಳಿಗೆ ವಾಸುವೇ ಉತ್ತರಕೊಟ್ಟು ಮುಗಿಸಿಬಿಡುತ್ತಿದ್ದ. ತಾತ್ತ್ವಿಕ ಪ್ರಶ್ನೆಗಳಿಗೆ ಸ್ವಾಮಿಜಿ ಉತ್ತರಕೊಡುತ್ತಿದ್ದರು. ಸಾಮಾನ್ಯ ಪ್ರಶ್ನೆಗಳಿಗೆ ನೇರವಾದ ಉತ್ತರಗಳೂ, ಕ್ಲಿಷ್ಟ ಪ್ರಶ್ನೆಗಳಿಗೆ ಸಂದಿಗ್ಧ ಉತ್ತರಗಳೂ ದೊರೆಯುತ್ತಿದ್ದವು.

ವಿದ್ಯಾರ್ಥಿ : ನಾನು ಇಂಟರ್ ಪರೀಕ್ಷೆಗೆ ಕಟ್ಟಿದ್ದೇನೆ. ನನಗೆ ಈ ವರ್ಷ ತೇರ್ಗಡೆಯಾಗುತ್ತದೆಯೇ ?

ಸ್ವಾಮಿಜಿ : ನಾನು ಜೋತಿಷ್ಕನಲ್ಲ.

* * * *

ತಾಯಿ : ನನ್ನ ಮಗುವಿಗೆ ವಿಪರೀತ ಕಾಹಿಲೆ. ಗುಣವಾಗಲೆಂದು ಆಶೀರ್ವದಿಸಬೇಕು.

ಸ್ವಾಮಿಜಿ : ಆಶೀರ್ವದಿಸುತ್ತೇನೆ. ಭಗವಂತ ವೈದ್ಯನ ರೂಪಧರಿಸಿ ಬರುತ್ತಾನೆಂಬುದನ್ನು ಮರೆಯಬೇಡ.

* * * *

ನೊಂದ ಅಣ್ಣ : ನನ್ನ ತಮ್ಮ ಪೋಲಿಗಳ ಸಹವಾಸ ಮಾಡಿ ಮನೆಯ ಆಸ್ತಿಯನ್ನು ಪೋಲುಮಾಡುತ್ತಿತ್ತಾನೆ. ಅವನನ್ನು ದಾರಿಗೆ ತರುವುದು ಹೇಗೆ ?

ಸ್ವಾಮಿಜಿ : ಅವನ ಕೈಗೆ ಆಸ್ತಿ ಸಿಕ್ಕದಂತೆ ಮಾಡುವುದರಿಂದ. ಪೋಲಿಗಳ ಯೋಗಕ್ಷೇಮ ನೋಡಿಕೊಳ್ಳುವುದಕ್ಕೇ ಪೋಲೀಸಿನವರು ಇರುವುದು.

* * * *

ಹೆಂಗಸು : ನನಗೆ ಲಗ್ನವಾಗಿ ಆರು ವರ್ಷಗಳಾದವು. ಇನ್ನೂ ಮಕ್ಕಳಾಗಿಲ್ಲ. ನಾನೇನು ಮಾಡಬೇಕು ?

ಸ್ವಾಮಿಜಿ : ನೀನೂ ನಿನ್ನ ಗಂಡನೂ ದಕ್ಷರಾದ ಡಾಕ್ಟರಲ್ಲಿಗೆ ಹೋಗಿ ಅವರ ಸಲಹೆಯಂತೆ ವರ್ತಿಸಬೇಕು.

* * * *

ಹಳ್ಳಿಯುವ : ನಮ್ಮೂರ ಅಮಲ್ದಾರ ಬಹಳ ಕೆಟ್ಟವನು. ಸರ್ಕಾರ ಮೆಚ್ಚಿಸುವುದಕ್ಕೆ ನಮ್ಮ ಕಾಳು ಕಡ್ಡಿಯನ್ನೆಲ್ಲಾ ಹೊತ್ತುಕೊಂಡು ಹೋಗುತ್ತಾನೆ. ಇದಕ್ಕೇನು ಮಾಡಬೇಕು ?

ಸ್ವಾಮಿಜಿ : ಅಮಲ್ದಾರನನ್ನು ಬೇರೆ ಊರಿಗೆ ವರ್ಗಮಾಡಿಸಬೇಕು.

* * * *

ತಾತ್ವಿಕ ವಿಷಯಗಳಿಗೆ ಹೆಚ್ಚು ಗಂಭೀರವಾದ ಉತ್ತರ ದೊರೆಯುತ್ತಿತ್ತು.

ಜಿಜ್ಞಾಸು : ಭಗವಂತನನ್ನು ಕುರಿತು ಚಿಂತೆ ಮಾಡಬೇಕೆಂದು ತಾವು ಅಪ್ಪಣೆ ಕೊಡಿಸಿರುವಿರಿ. ನಾನು ಏನು ಮಾಡಿದರೂ ಚಿತ್ತೈಕಾಗ್ರತೆ ಬರಲೊಲ್ಲದು. ಮನಸ್ಸು ಮರ್ಕಟನಂತೆ ಹತ್ತಾರು ವಿಷಯಗಳ ಕಡೆ ಹಾರುತ್ತದೆ. ನಾನು ಏನು ಮಾಡಬೇಕು ?

ಸ್ವಾಮಿಜಿ : ನಿನಗೆ ಯಾವ ವಿಷಯದ ಬಗ್ಗೆ ಹೆಚ್ಚು ಅಭಿಮಾನವಿದೆ ತಿಳಿದುಕೊಂಡು, ಅದನ್ನೇ ಭಗವಂತನೆಂದು ಭಾವಿಸು. ಅದರ ಮೇಲೇ ಧ್ಯಾನಮಾಡು. ಒಂದೇ ವಿಷಯ ಕುರಿತು ಚಿಂತಿಸುವ ಶಕ್ತಿ ಬೆಳೆದರೆ ಅದನ್ನು ಭಗವಂತನ ಕಡೆ ತಿರುಗಿಸುವುದು ಸುಲಭ.

* * * *

ಜಿಜ್ಞಾಸು : ಪರಮಾತ್ಮ ಪರಿಪೂರ್ಣನೆಂದು ತಾವು ಅಪ್ಪಣೆ ಕೊಡಿಸಿರುವಿರಿ. ಪರಮಾತ್ಮ ಪರಿಪೂರ್ಣನಾಗಿದ್ದರೆ ಅವನ ಸೃಷ್ಟಿಯೇತಕ್ಕೆ

ಇಷ್ಟು ಅಪರಿಪೂರ್ಣವಾಗಿರುತ್ತಿತ್ತು. ನೂರೆಂಟು ಜಾತಿ, ಮತ, ಕುಲಗಳು ಏತಕ್ಕೆ ಹುಟ್ಟಿಕೊಳ್ಳುತ್ತಿದ್ದವು ?

ಸ್ವಾಮಿಜಿ : ಸಮುದ್ರದಿಂದ ನೀರು ತಂದವನು, ಸಮುದ್ರದ ಪ್ರಮಾಣ ತನ್ನ ಪಾತ್ರೆಯಷ್ಟೇ ಎಂದು ಹೇಳುವುದು ನ್ಯಾಯವೇ? ಪರಮಾತ್ಮನ ಪೂರ್ಣತೆ ಲೋಕದಲ್ಲಿ ಭಿನ್ನಭಿನ್ನವಾಗಿ ಪ್ರಕಟವಾಗಿದೆ- ಅವುಗಳನ್ನು ಕೂಡಿಸಿಕೊಂಡು ನೋಡುವ ಶಕ್ತಿಯನ್ನು ಮನುಷ್ಯ ದೊರಕಿಸಿ ಕೊಳ್ಳಬೇಕು. ಜಾತಿ, ಮತ ಕುಲಗಳ ರಚನೆಗೂ ಅಧ್ಯಾತ್ಮಕ್ಕೂ ಸಂಬಂಧ ವಿಲ್ಲ. ಮಗುವಿನ ಕೈಗೆ ಕನ್ನಡಿಕೊಟ್ಟರೆ ಅದನ್ನು ಒಡೆದು ನೂರು ಹೋಳು ಮಾಡಿ, ಆ ಹೋಳುಗಳಲ್ಲಿ ತನ್ನ ಪ್ರತಿಬಿಂಬ ಕಂಡು ಅದು ಹಿಗ್ಗುತ್ತದೆ. ಮನುಷ್ಯ ಬೆಳೆದ ಮಗುವಷ್ಟೇ!

* * * *

ಭಕ್ತ : ಭಗವಂತನ ಬಳಿಗೆ ಹೋಗಲು ಸುಲಭಮಾರ್ಗ ಯಾವದು ?

ಸ್ವಾಮಿಜಿ : ನಾನು ಭಗವಂತನೆಂಬ ರೈಲ್ವೆ ಕಂಪೆನಿಯ ಮ್ಯಾನೇ ಜಿಂಗ್ ಡೈರೆಕ್ಟರ್ ಅಲ್ಲ. ಬೆಟ್ಟ ಹತ್ತುವುದು ಕಷ್ಟ. ಕಷ್ಟಪಟ್ಟುಕೊಂಡು ಹತ್ತಿದರೇ ಅದರ ಸುಖವೆಂಥದು ಎಂದು ಗೊತ್ತಾಗುವುದು.

* * * *

ಸಾಧಕ : ಸ್ವಾಮಿಜಿ, ನನಗೆ ಮದುವೆಯಾಗಿದೆ, ಮೂರು ಮಕ್ಕಳೂ ಇವೆ. ಪ್ರಪಂಚದ ಕ್ಷಣಭಂಗುರತೆ ದಿನದಿನಕ್ಕೆ ಸ್ಪಷ್ಟವಾಗುತ್ತಿದೆ. ಗೃಹಸ್ಥಾ ಶ್ರಮಕ್ಕೆ ಶರಣುಹೊಡೆದು ನಾನು ಸನ್ಯಾಸಿಯಾಗಬೇಕೆಂದಿದ್ದೇನೆ.

ಸ್ವಾಮಿಜಿ : ನಿನ್ನ ವೈರಾಗ್ಯ ಅಭಾವವೈರಾಗ್ಯ. ನೀನು ಹುಡುಕು ತ್ತಿರುವುದು ವೈರಾಗ್ಯದ ಹಾದಿಯನ್ನಲ್ಲ- ಪಲಾಯನದ ಮಾರ್ಗವನ್ನು. ಹೆಂಡತಿ, ಮಕ್ಕಳನ್ನು ಅನ್ಯಾಕ್ರಾಂತ ಮಾಡಿ ಹೋಗುವ ಸನ್ಯಾಸವನ್ನು ವೇದಾಂತ ಬೋಧಿಸಿಲ್ಲ. ಸಂಸಾರಿಯಾಗಿದ್ದುಕೊಂಡು, ನಿನ್ನ ಕರ್ತವ್ಯ ನಿರ್ವಹಿಸುತ್ತಾ, ನೀನು ವಿರಾಗಿಯಾಗಿರಬಹುದು. ಕಾಷಾಯ ಧರಿಸುವುದು ಸನ್ಯಾಸವಲ್ಲ; ಮನಸ್ಸಿನ ಮಾಯಾಮಲಗಳನ್ನು ತೊಳೆಯುವುದೇ ಸನ್ಯಾಸ. ಕಾಷಾಯ ಧರಿಸಿಯೂ ಮನುಷ್ಯ ಕಾಮಿಯಾಗಿರಬಹುದು; ಸಂಸಾರಿ ಯಾಗಿದ್ದುಕೊಂಡೂ ಮನುಷ್ಯ ನಿಃಕಾಮಿಯಾಗಿರಬಹುದು. ಸನ್ಯಾಸ

ವೇಷದ ಒಂದು ಅವಸ್ಥೆಯಲ್ಲ-ಮನಸ್ಸಿನ ಅವಸ್ಥೆ. ಲೋಕಾಚಾರ, ಸಮಯಾಚಾರಗಳಿಂದ ಸನ್ಯಾಸ ಸಿದ್ಧಿಸುವುದಿಲ್ಲ; ಮನಸ್ಸಿನ ಪಕ್ವ ವಿಚಾರ ದಿಂದ ಸನ್ಯಾಸದ ರಹಸ್ಯ ಅರಿವಾಗುತ್ತದೆ.

ಸ್ವಾಮಿಜಿಯ ಪ್ರಶ್ನೋತ್ತರಗಳನ್ನು ಸ್ಕಿನ್ನರ್ ಜೋಪಾನವಾಗಿ ಸಂಗ್ರಹಿಸಿಡುತ್ತಿದ್ದರು.

ಸ್ಕಿನ್ನರ್ ಅವರ 'ಗುರು ಶಿಷ್ಯ ಸಂವಾದ' ಗ್ರಂಥದ ಕೆಲವು ಪ್ರತಿ ಗಳನ್ನು ಪ್ರಕಾಶಕರಾದ ಆಲೆನ್ ಅನ್‌ವಿನ್ ಕಂಪೆನಿಯವರು ಆಶ್ರಮದ ವಿಳಾಸಕ್ಕೆ ಕಳುಹಿಸಿಕೊಟ್ಟರು. ಸ್ಕಿನ್ನರ್ ಒಂದೊಂದು ಪ್ರತಿಯನ್ನು ಸ್ವಾಮಿಜಿಯವರಿಗೂ, ಯೋಗಿನಿ ಅಮ್ಮನವರಿಗೂ ಅರ್ಪಿಸಿದರು. ವಾಸೂ ಕೂಡಲೆ ಒಂದು ಪ್ರತಿಯನ್ನು ಜಸ್ಟಿಸ್ ರಾಘವಅಯ್ಯರ್ ಅವರಿಗೂ, ಒಂದು ಪ್ರತಿಯನ್ನು ಬೊಂಬಾಯಿವಾಲಾ ಅವರಿಗೂ ಕಳಿಸಿಕೊಟ್ಟ.

ಮಿಸ್. ಎಮಿಲಿಯವರ ಗ್ರಾಮಸೇವೆಯಲ್ಲಿ ಯೋಗಿನಿ ಅಮ್ಮನವರು ಭಾಗ ತೆಗೆದುಕೊಳ್ಳುತ್ತಿದ್ದರು. ಎಮಿಲಿಯವರೊಂದಿಗೆ ಹಳ್ಳಿಗಳಿಗೆ ಹೋಗಿ, ಅಲ್ಲಿಯ ಜನರಿಗೆ ಶುಚಿತ್ವ, ಋಜುತ್ವ, ಧರ್ಮಬೋಧೆ ಮಾಡಿ ಬರುತ್ತಿದ್ದರು. ಸುತ್ತಮುತ್ತಲಿನ ಎಲ್ಲಾ ಹಳ್ಳಿಗರಿಗೂ ಎಮಿಲಿಯವರೂ, ಯೋಗಿನಿ ಅಮ್ಮ ನವರೂ ಪರಮಪ್ರಿಯ ವ್ಯಕ್ತಿಗಳಾದರು. ಎಮಿಲಿಯವರನ್ನು 'ಬಿಳಿ ಅಮ್ಮ' ಎಂದು ಜನ ವಿಶ್ವಾಸದಿಂದ ಕರೆಯತೊಡಗಿದ್ದರು. ಜನರ ಮುಗ್ಧವಿಶ್ವಾಸಕ್ಕೆ ಎಮಿಲಿ ಮಾರುಹೋಗಿದ್ದರು; ಎಮಿಲಿಯವರ ಶ್ರದ್ಧೆ, ತ್ಯಾಗ, ಕಷ್ಟಸಹಿಷ್ಣುತೆ ಕಂಡು ಜನ ಬೆರಗಾಗಿದ್ದರು.

ಸ್ವಾಮಿಜಿ ತಮ್ಮ ಗೀತಾ ಉಪನ್ಯಾಸಗಳು ಗ್ರಂಥದ ಕನ್ನಡಾನುವಾದ ಮುಗಿಸಿ ಹಸ್ತಪ್ರತಿಯನ್ನು ವಾಸು ಕೈಯಲ್ಲಿಟ್ಟರು. ವಾಸು ಬೆಂಗಳೂರಿಗೆ ಹೋಗಿ ಮುದ್ರಣದ ವ್ಯವಸ್ಥೆಮಾಡಿ ಬಂದ.

ಆಶ್ರಮದಲ್ಲಿ ಆಸ್ಪತ್ರೆಯ ಕಟ್ಟಡ ಮುಗಿಸಿ ಬೈರಪ್ಪನವರು ಯೂರೋಪಿ ಯನ್ ಅತಿಥಿಗೃಹದ ಕಟ್ಟಡ ಆರಂಭಿಸಿದ್ದರು.

ಆಸ್ಪತ್ರೆಯ ಕೆಲಸ ನೋಡಿಕೊಳ್ಳುವುದಕ್ಕೆ ಒಬ್ಬ ದಕ್ಷರಾದ ಡಾಕ್ಟರು ಬೇಕೆಂದು ಮಿಸ್. ಎಮಿಲಿ ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸಿದರು.

ಬಂದ ಅಭ್ಯರ್ಥಿಗಳಲ್ಲಿ ಎಲ್. ಎಂ. ಪಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಬನ್ನೂರಿನಲ್ಲಿ ಖಾಸಗಿ ಪ್ರ್ಯಾಕ್ಟೀಸ್ ಮಾಡುತ್ತಿದ್ದ ಡಾಕ್ಟರ್ ಚಂದ್ರಶೇಖರ ನನ್ನು ಎಮಿಲಿ ಆರಿಸಿಕೊಂಡರು. ಡಾಕ್ಟರ್ ಚಂದ್ರಶೇಖರನ ಬನ್ನೂರು ಆಸ್ಪತ್ರೆಯನ್ನು ಆಶ್ರಮಕ್ಕೆ ಕೊಳ್ಳಲು ನಿಶ್ಚಯವಾಯಿತು.

ಮದರಾಸಿನ ಉಪನ್ಯಾಸ ಮಾಲೆಯ ತಾರೀಕು ನಿಶ್ಚಯಿಸಿ ಜಸ್ಟಿಸ್ ರಾಘವ ಅಯ್ಯರ್ ಅವರು ತಿಳಿಸಿದರು. ಸ್ವಾಮಿಜಿ ಮತ್ತು ಸ್ಕಿನ್ನರ್ ಹೊರಡುವ ಸಿದ್ಧತೆಮಾಡಿಕೊಳ್ಳತೊಡಗಿದರು.

ಸ್ವಾಮಿಜಿ ಕಾರನ್ನು ತೆಗೆದುಕೊಂಡು ಮದರಾಸಿಗೆ ಹೋಗಲಿ ಎಂದು ವಾಸು ಸೂಚಿಸಿದ.

"ಇಲ್ಲಿನ ಕೆಲಸಕ್ಕೆ ತೊಂದರೆಯಾಗಬಾರದು. ನನಗೆ ಕಾರೇಕೆ? ರೈಲಿನಲ್ಲಿ ಹೋಗಿ ಬಂದರಾಯಿತು. ಮದರಾಸಿನಲ್ಲಿ ತಿರುಗಾಡಬೇಕಾದರೆ ರಾಘವ ಅಯ್ಯರ್ ಕಾರಿನ ವ್ಯವಸ್ಥೆಮಾಡುತ್ತಾರೆ"

ಎಂದು ಸ್ವಾಮಿಜಿ ತಿಳಿಸಿದರು.

ಸ್ವಾಮಿಜಿಯವರನ್ನೂ ಸ್ಕಿನ್ನರ್ ಅವರನ್ನೂ ವಾಸು ಬೆಂಗಳೂರಿಗೆ ಕರೆದೊಯ್ದು ಫಸ್ಟ್‌ಕ್ಲಾಸ್ ಕಂಪಾರ್ಟ್‌ಮೆಂಟಿನಲ್ಲಿ ಕೂಡಿಸಿ ಬಂದ.

ಸ್ವಾಮಿಗಳ ಕೀರ್ತಿ ಮದರಾಸಿನಲ್ಲಿ ಸಾಕಷ್ಟು ವಿಸ್ತರಿಸಿತ್ತು. ಸ್ಕಿನ್ನರ್ ಅವರ ಗ್ರಂಥ ಅದಕ್ಕೆ ವಿಶೇಷ ಇಂಬುಗೊಟ್ಟಿತ್ತು. ಮದರಾಸಿನ ಪತ್ರಿಕೆಗಳು ಸ್ಕಿನ್ನರ್ ಅವರ ಪುಸ್ತಕದಿಂದ ವಿಸ್ತೃತವಾಗಿ ಉದ್ಧರಿಸಿ ಸ್ವಾಮಿಜಿಯವರ ಮಹಿಮೆಯನ್ನು ಕೊಂಡಾಡಿದ್ದರು.

ಮದರಾಸಿನ ಸೆಂಟ್ರಲ್ ಸ್ಟೇಷನ್ನಿನಲ್ಲಿ ಜನಜಾತ್ರೆ ಸೇರಿತ್ತು. ತಳಿರು ತೋರಣಗಳಿಂದ ಸ್ಟೇಷನ್ ಅಲಂಕೃತವಾಗಿತ್ತು: ಜಸ್ಟಿಸ್ ರಾಘವ ಅಯ್ಯರ್ ಅವರೂ ಅವರ ಮಿತ್ರರೂ ಹಾರತುರಾಯಿಗಳೊಂದಿಗೆ ಗುರುಗಳನ್ನು ಸ್ವಾಗತಿಸಲು ಸಿದ್ಧರಾಗಿದ್ದರು. ಅನೇಕ ಗಣ್ಯಮಹನೀಯರೂ, ಮಂತ್ರಿಮಂಡಳದ ಕೆಲವು ಮಂತ್ರಿಗಳೂ, ಹೈಕೋರ್ಟಿನ ನ್ಯಾಯಾಧೀಶರೂ, ಶ್ರೀಮಂತರೂ, ಪತ್ರಿಕಾಕರ್ತರೂ ಸ್ವಾಮಿಗಳನ್ನು ಸ್ವಾಗತಿಸಲು ಬಂದಿದ್ದರು. ಸ್ವಾಗತ ಸಮಾರಂಭದ ಚಿತ್ರ ತೆಗೆಯಲು ಸಿನೀಮಾ ಕಂಪೆನಿಯೊಂದು ಟ್ರಕ್ಕಿನೊಡನೆ ಸಿದ್ಧವಾಗಿತ್ತು.

ರೈಲು ಬಂದು ನಿಲ್ದಾಣದಲ್ಲಿ ನಿಲ್ಲಲು ನಾಗಸ್ವರಗಳು ಮೊಳಗಿದವು. ಜನ ಜಯಜಯಕಾರ ಮಾಡಿದರು. ಜಸ್ಟಿಸ್ ರಾಘವ ಅಯ್ಯರ್ ಸ್ವಾಮಿಗಳಿಗೆ ಹಾರತುರಾಯಿ ಅರ್ಪಿಸಿದರು. ಸ್ವಾಮಿಗಳ ಕೊರಳಿಗೆ ನೂರಾರು ಹಾರಗಳು ಬಿದ್ದವು. ಕೆಲವು ಹೆಣ್ಣುಮಕ್ಕಳು ಮುಂದೆ ಬಂದು ಸ್ವಾಮಿಗಳಿಗೆ ಆರತಿ ಬೆಳಗಿದರು. ರಾಘವ ಅಯ್ಯರ್ ಅಲ್ಲಿ ಬಂದಿದ್ದ ಕೆಲವು ಮುಖ್ಯಸ್ಥರ ಪರಿಚಯವನ್ನು ಸ್ವಾಮಿಗಳಿಗೆ ಮಾಡಿಕೊಟ್ಟರು. ಸಿನೀಮಾ ಕಂಪೆನಿಯವರು ಮೈಕ್ ತಂದು ಸ್ವಾಮಿಗಳ ಮುಂದೆ ಹಿಡಿದು 'ಸಂದೇಶ' ಬಯಸಿದರು.

ಸ್ವಾಮಿಗಳು ಮೈಕ್‌ನ ಮುಂದೆ ನಿಂತು

"ಈ ಮಹಾನಗರಕ್ಕೆ ನಾನು ಬರುತ್ತಿರುವುದು ಇದೇ ಮೊದಲು. ಭಾರತ ಧರ್ಮ, ಸಂಸ್ಕೃತಿಯ ಪೋಷಣೆಗೆ ಮದರಾಸು ಅಪಾರಸೇವೆ ಮಾಡಿದೆ. ನಿಮ್ಮ ಜತೆ ನಾಲ್ಕು ದಿನವಿದ್ದು ಸಂತೋಷಪಡಲು ಬಂದಿದ್ದೇನೆ – ಹಾಗೇ ಧರ್ಮಜ್ಯೋತಿಗೆ ತೈಲವೆರೆಯಲು ಬಂದಿದ್ದೇನೆ. ಭಗವಂತ ನಿಮ್ಮೆಲ್ಲರಿಗೂ ಮಂಗಳವನ್ನುಂಟುಮಾಡಲಿ."

ಎಂದು ಹೇಳಿದರು.

ಜನಸಂದಣಿಯಲ್ಲಿ ಸ್ಥಳ ಬಿಡಿಸಿಕೊಂಡು ಸ್ವಾಮಿಗಳು, ಸ್ಕಿನ್ನರ್ ಮತ್ತು ಅವರ ಆತಿಥೇಯರಾದ ರಾಘವ ಅಯ್ಯರ್ ಕಾರು ಸೇರಬೇಕಾದರೆ ಒಂದು ಗಂಟೆ ಬೇಕಾಯಿತು.

ರಾಘವ ಅಯ್ಯರ್ ಅವರ ಕಾರು ಸ್ವಾಮಿಗಳನ್ನೂ ಸ್ಕಿನ್ನರ್ ಅವರನ್ನೂ ಮೈಲಾಪುರದಲ್ಲಿದ್ದ ಭವ್ಯಭವನಕ್ಕೆ ಕರೆತಂದಿತು.

ಕಾರು ಬಂದು ಪೋರ್ಟಿಕೋದಲ್ಲಿ ನಿಂತಿತು. ರಾಘವ ಅಯ್ಯರ್ ಮಗ ಮಣಿ ಅಯ್ಯರ್ ಬಂದು ಕಾರಿನ ಬಾಗಿಲು ತೆಗೆದು ಸ್ವಾಮಿಗಳನ್ನು ಭಕ್ತಿಯಿಂದ ಇಳಿಸಿಕೊಂಡ.

ರಾಘವ ಅಯ್ಯರ್ ತಮ್ಮ ಕುಟುಂಬ, ಮಗ, ಸೊಸೆ, ಮಗಳ ಪರಿಚಯ ಮಾಡಿಕೊಟ್ಟರು. ರಾಘವ ಅಯ್ಯರ್ ಅವರ ವಿಧವೆ ತಂಗಿ ಬಂದು ನಮಸ್ಕಾರಮಾಡಿದರು.

ಅತಿಥಿಗಳ ಬಿಡಾರ ಮಹಡಿಯ ಮೇಲೆ ವ್ಯವಸ್ಥೆಯಾಗಿತ್ತು.

ಸ್ವಾಮಿಗಳು ಮತ್ತು ಸ್ಕಿನ್ನರ್ ಸ್ನಾನ ಮುಗಿಸಿದ ಮೇಲೆ ಉಪಹಾರ ಮೇಲಕ್ಕೇ ಬಂದಿತು.

ರಾಘವ ಅಯ್ಯರ್ ಅನರು ಔಪಚಾರಿಕವಾಗಿ ಸ್ಕಿನ್ನರ್ ಅವರಿಗೆ "ನಮ್ಮ ಊಟ ನಿಮಗೆ ಸರಿಬೀಳದಿದ್ದರೆ ಬೇರೆ ವ್ಯವಸ್ಥೆ ಮಾಡುತ್ತೇನೆ" ಎಂದರು. ಸ್ಕಿನ್ನರ್ ನಸುನಗುತ್ತಾ "ಬ್ರಿಟನ್ನಿನಲ್ಲಿಯೂ ಶಾಕಾಹಾರಿಗಳಿದ್ದಾರೆ ಮಿಲಾರ್ಡ್ (Milord)" ಎಂದರು.

ಸ್ವಾಮಿಗಳು ಫಲಹಾರಮಾಡುತ್ತಾ

"ನಿಮ್ಮ ಮಗ ಏನುಮಾಡುತ್ತಿದ್ದಾರೆ."

"ಲಾಯರಾಗಿದ್ದಾನೆ."

"ತಂದೆಯಂತೆ ಮಗ – ಮುಂದೆ ಜಡ್ಜ್ ಆಗುತ್ತಾರೆಯೋ ?"

"ಗುರುಗಳ ಆಶೀರ್ವಾದ."

"ಮಗಳಿಗೆ ಲಗ್ನವಾಗಿದೆಯೇ ?"

"ಈ ವರ್ಷ ಅಥವಾ ಮುಂದಿನ ವರ್ಷ ಮಾಡಬೇಕೆಂದು ನಿಶ್ಚಯಿಸಿ ಕೊಂಡಿದ್ದೇನೆ."

"ಲಗ್ನಕ್ಕೆ ನನ್ನನ್ನು ಕರೆಯುವಿರಲ್ಲವೇ ?"

"ತಮಗೆ ತಿಳಿಸದೆ ಲಗ್ನಮಾಡುವೆನೇ ?"

"ಸನ್ಯಾಸಿಗೇಕೆ ಸಂಸಾರದ ಚಿಂತೆಯೆಂದುಕೊಳ್ಳುವಿರೇನೋ ?"

ಅದಕ್ಕೆ ಏನು ಹೇಳಬೇಕೆಂದು ತೋರದೆ ರಾಘವ ಅಯ್ಯರ್ ದೇಶಾವಾರದ ನಗೆ ಬೀರಿ ಸ್ಕಿನ್ನರ್ ಕಡೆ ತಿರುಗಿ

"ಶ್ರೀ ಶ್ರೀಗಳವರ ಜತೆ ತಾವು ಬಂದದ್ದು ಬಹಳ ಸಂತೋಷ. ತಮ್ಮ ಗ್ರಂಥ ಓದಿದೆ – ಅದ್ಭುತವಾಗಿದೆ. ಭಾರತದ ಅಂತರಂಗವನ್ನು ತಾವು ಬಹಳ ಚೆನ್ನಾಗಿ ಅರ್ಥಮಾಡಿಕೊಂಡಿರುವಿರಿ."

ಸ್ಕಿನ್ನರ್ ಸಹಜ ವಿನಯದಿಂದ

"ಸೂರ್ಯನ ಮುಂದೆ ನಕ್ಷತ್ರವೇ!" ಎಂದರು

ಸ್ವಾಮಿಜಿ ಮಂದಹಾಸ ಬೀರಿ,

"ಕವಿ ರವೀಂದ್ರನಾಥ ಠಾಕೂರರು ತಮ್ಮ 'ಸ್ಟ್ರೇ ಬರ್ಡ್ಸ್' (Stray Birds) ಗ್ರಂಥದಲ್ಲಿ ಒಂದು ಗೀತೆ ಬರೆದಿದ್ದಾರೆ. ಸೂರ್ಯ, ನಕ್ಷತ್ರವನ್ನು ನೋಡಿ 'ನಾನು ಹೆಚ್ಚು – ನನ್ನ ಮುಂದೆ ನೀನು ತೃಣಸಮಾನ' ಎಂದನಂತೆ. ನಕ್ಷತ್ರ ಸೂರ್ಯನನ್ನು ನೋಡಿ 'ನಿಸ್ಸಂದೇಹವಾಗಿ. ಆದರೆ ನೀನು ಬೆಳಗದ ವೇಳೆಯಲ್ಲಿ ನಾನು ನನ್ನ ಶಕ್ತ್ಯನುಸಾರ ಲೋಕವನ್ನು ಬೆಳಗಿಸುತ್ತೇನೆ' ಎಂದಿತಂತೆ."

ರಾಘವ ಅಯ್ಯರ್ ಕೇಳಿದರು,

"ಶ್ರೀಮಾತೆಯವರೂ, ಮಿಸ್ ಎಮಿಲಿಯವರೂ ಏಕೆ ಬರಲಿಲ್ಲ."

"ಅವರಿಗೆ ಸ್ವಲ್ಪವೂ ಪುರಸತ್ತಿಲ್ಲ. ಆಸ್ಪತ್ರೆ ಕೆಲಸ ಆರಂಭವಾಗಿದೆ. ಒಬ್ಬ ಡಾಕ್ಟರನ್ನೂ ಗೊತ್ತುಮಾಡಿಕೊಂಡಿದ್ದೇವೆ."

"ನನ್ನ ಕಾರ್ಯಕ್ರಮ ಗೊತ್ತುಮಾಡಿರುವಿರಾ ರಾಘವ ಅಯ್ಯರ್ ಅವರೇ ?"

"ಗೊತ್ತುಪಡಿಸಿದ್ದೇನೆ. ತಾವು ಸೂಚಿಸಿದಂತೆ ರಾಮಾಯಣದ ಮೇಲೆ ಉಪನ್ಯಾಸ ಸಪ್ತಾಹ. ಆರಂಭದ ದಿನ ಮೇಜರ್‌ರವರು ನಾಲ್ಕುಮಾತು ಆಡಿದರೆ ಚೆನ್ನಾಗಿರುತ್ತದೆ."

"ನಾನು ಒಬ್ಬ ವಿದ್ಯಾರ್ಥಿ. ನಾನೇನು ಮಾತನಾಡಲಿ ಹೇಳಿ."

"ಶ್ರೀಗಳವರ ಪರಿಚಯ ತಾವೇ ಮಾಡಿಕೊಡಿ."

"ಅವರ ಪರಿಚಯಮಾಡಿಕೊಡುವ ಅಗತ್ಯವಿಲ್ಲ. ಆದರೆ ತಾವು ಹೇಳಿದುದರಿಂದ ಆಗಲಿ ಎನ್ನುತ್ತೇನೆ. ಸಪ್ತಾಹ ಎಂದಿನಿಂದ ಆರಂಭ ?"

"ಇವತ್ತು ತಾವು ವಿಶ್ರಾಂತಿ ತೆಗೆದುಕೊಳ್ಳಬಹುದು. ನಾಳೆಯಿಂದ ಸಪ್ತಾಹ ಆರಂಭ."

ಸ್ವಾಮಿಗಳು ವಿಶ್ರಾಂತಿಗೆ ಮನಸ್ಸುಗೊಡಲಿಲ್ಲ. ಉಪನಿಷದ್ ಸಾರದ ಅನುವಾದ ಅವರ ವೇಳೆಯನ್ನು ಪೂರ್ಣವಾಗಿ ಆಕ್ರಮಿಸಿತು.

ಸ್ವಾಮಿಗಳ ಜತೆ ಒಬ್ಬರೇ ಇರುವ ಈ ಅವಕಾಶ ಸಿಕ್ಕಿದುದಕ್ಕೆ ಸ್ಕಿನ್ನರ್ ಹರ್ಷಗೊಂಡರು. ಸ್ವಾಮಿಗಳ ಅಪಾರ ಪಾಂಡಿತ್ಯದೊಂದಿಗೆ ಹಾಸುಹೊಕ್ಕಾಗಿದ್ದ ಅವರ ವಿನಯ ಸ್ಕಿನ್ನರ್ ಅವರ ಮನಸ್ಸಿನ ಮೇಲೆ ವಿಚಿತ್ರ ಪರಿಣಾಮವನ್ನುಂಟುಮಾಡಿತ್ತು.

ಸ್ಕಿನ್ನರ್ ಸ್ವಾಮಿಗಳ ವಿಷಯದಲ್ಲಿ ಶಿಷ್ಯನಂತೆ ನಡೆದುಕೊಳ್ಳುತ್ತಿದ್ದರೂ ಸ್ವಾಮಿಗಳು ಸ್ಕಿನ್ನರ್ ಅವರನ್ನು ಮಿತ್ರರಂತೆ ಕಾಣುತ್ತಿದ್ದರು. ಸ್ಕಿನ್ನರ್ ಅವರಿಗೆ ಇದೂ ಒಂದು ಸೋಜಿಗವಾಗಿತ್ತು.

೨೩

ಮಿಸ್. ಎಮಿಲಿ ತಮ್ಮ ಟೋಕಿಯೋ ಗೆಳೆಯರೊಂದಿಗೆ ಪತ್ರವ್ಯವಹಾರ ಇಟ್ಟುಕೊಂಡಿದ್ದರು. ಆಶ್ರಮಕ್ಕೆ ತಾವು ಬಂದುದು, ಅಲ್ಲಿ ಕೈಗೊಂಡ ಕೆಲಸ, ಮೂಗುತಿ ಹಳ್ಳಿಯ ವೃತ್ತಾಂತ, ಯೋಗಿನಿ ಅಮ್ಮನವರ ನಿರ್ವ್ಯಾಜ ಪ್ರೇಮಗಳನ್ನು ಕುರಿತು ಬಿಪಿನ್ ಅವರಿಗೆ ವಿಶದವಾಗಿ ಬರೆದಿದ್ದರು. ಬಿಪಿನ್‌ರಿಂದ ಮಾರುತ್ತರ ಬಂದಕೂಡಲೆ ಅದನ್ನು ಯೋಗಿನಿ ಅಮ್ಮನವರಿಗೆ ಓದಿ ಹೇಳಿದ ಹೊರತೂ ಎಮಿಲಿಗೆ ಸಮಾಧಾನವಾಗುತ್ತಿರಲಿಲ್ಲ.

ಒಂದು ದಿನ ಟೋಕಿಯೋದಿಂದ ಬಂದ ಕಾಗದ ತೆಗೆದುಕೊಂಡು ಎಮಿಲಿ ಯೋಗಿನಿ ಅಮ್ಮನವರ ಬಳಿಗೆ ಹೋದಾಗ, ಅವರೂ ಒಂದು ಕಾಗದ ಓದುತ್ತಿದ್ದರು. ಎಮಿಲಿಯನ್ನು ನೋಡಿ ತಮ್ಮ ಕೈಯಲ್ಲಿದ್ದ ಕಾಗದವನ್ನು ಅವರ ಕೈಗಿತ್ತರು. ಎಮಿಲಿಯ ಸಂತೋಷ ಕಣ್ಣುಗಳಲ್ಲಿ ಉಕ್ಕುತ್ತಿತ್ತು.

"ಅವರು ನಿಮಗೂ ಬರೆದಿದ್ದಾರೆ."

"ಬರೆಯಿರಿ ಎಂದು ನೀವು ಹೇಳಿದ್ದಿರಾ ?"

"ಇಲ್ಲ. ನಿಮ್ಮ ವಿಷಯ ನಾಲ್ಕುಮಾತು ಬರೆದಿದ್ದೆ. ಅವರಿಗೆ ಸಂತೋಷವಾಗಿ ನಿಮಗೆ ಬರೆದಿದ್ದಾರೆ.

"ಎಮಿಲಿ, ಇಂದು ನಿಮಗೆ ಪರಮ ಸಂತೋಷವಾಗಿದೆಯಲ್ಲವೇ ?"

"ಇಲ್ಲವೆಂದು ಹೇಗೆ ಹೇಳಲಿ. ನನ್ನ ಸ್ವಾಮಿ ಅಮೇರಿಕೆಗೆ ಹೋಗುತ್ತಾರಂತೆ."

"ಹಾಗೇನು ? ನನಗೆ ಆ ವಿಷಯ ತಿಳಿಸಿಯೇ ಇಲ್ಲ."

"ಅದು ನಮ್ಮಿಬ್ಬರ ಗುಟ್ಟು."

"ನೀವು ರಟ್ಟುಮಾಡಿಬಿಟ್ಟರಲ್ಲಾ."

"ನಿಮ್ಮಿಂದ ನಾನು ಏನನ್ನೂ ಮುಚ್ಚಿಡಲಾರೆ."

"ಅಮೇರಿಕೆಗೆ ಏಕೆ ಹೋಗುತ್ತಾರಂತೆ."

"ಅಲ್ಲಿನ ಭಾರತೀಯ ಮಿತ್ರರು ಒಂದು 'ಇಂಡೋ-ಅಮೆರಿಕನ್ ಸೊಸೈಟಿ' ಸ್ಥಾಪಿಸಿದ್ದಾರಂತೆ. ಅದರ ಡೈರೆಕ್ಟರಾಗಿ ಬರಬೇಕೆಂದು ಕೋರಿದ್ದಾರೆ."

"ಅವರ ಕಾಗದಕ್ಕೆ ನಾನು ಉತ್ತರಬರೆಯಬೇಕು."

"ಬರೆಯುವಿರಾ ?"

"ಖಂಡಿತವಾಗಿ. ನಾನು ಬರೆಯುವ ಉತ್ತರ ನಿಮಗೆ ತೋರಿಸು ವುದಿಲ್ಲ."

"ಏಕೆ ?"

"ಅದು ನನ್ನ ಗುಟ್ಟು."

ಎಮಿಲಿಯವರ ಮುಖದಲ್ಲಿ ತೃಪ್ತಿಯ ನಗೆ ತೇಲಿತು.

"ಸ್ವಾಮಿಜಿಯವರ ಪುಸ್ತಕಗಳನ್ನು ಬಿಪಿನ್ ಅವರಿಗೆ ಕಳುಹಿಸಿಕೊಟ್ಟಿ ರುವಿರಾ ?"

"ಉಪನಿಷತ್ತು ಮತ್ತು ಗೀತೆ ಎರಡು ಗ್ರಂಥಗಳನ್ನೂ ಮುಂಬಯಿ ಯಿಂದಲೇ ಕಳಿಸಿಕೊಟ್ಟದ್ದೆ.

"ಮೇಜರ್ ಸ್ಕಿನ್ನರ್ ಅವರ ಗ್ರಂಥ ಕಳುಹಿಸಿಕೊಡಿ."

ರಾತ್ರಿ ಊಟವಾದ ಮೇಲೆ ವಾಸೂಗೆ ಕೇಳುವಂತೆ ಯೋಗಿನಿ ಅಮ್ಮನವರು

"ಮಿಸ್. ಎಮಿಲಿ, ಇವತ್ತು ನೀವು ನನ್ನ ರೂಮಿನಲ್ಲೇ ಮಲಗಿಕೊಳ್ಳಿ. ನಾನು ಮಾತನಾಡಬೇಕಾದ ವಿಷಯಗಳಿವೆ"

ಎಂದರು. ವಾಸು ಮುಖ ಕೆಂಪೇರಿತು. ಅಲ್ಲಿ ನಿಲ್ಲದೆ ಅವನು ಹೊರಟು ಹೋದ.

ಆಶ್ರಮದ ಆಳು ಒಂದು ಮಡಿಸುವ ಮಂಚ ತಂದು ಹಾಕಿ ಎಮಿಲಿ ಯವರಿಗೆ ಯೋಗಿನಿ ಅಮ್ಮನವರ ರೂಮಿನಲ್ಲಿ ಹಾಸಿಗೆ ಸಿದ್ಧಪಡಿಸಿದ.

ರಾತ್ರಿ ಬಹಳ ಹೊತ್ತಿನವರೆಗೆ ಇಬ್ಬರೂ ಮಾತನಾಡುತ್ತ ಕುಳಿತಿದ್ದು ಮಲಗಲು ಸಿದ್ಧರಾದರು.

ಯೋಗಿನಿ ಅಮ್ಮನವರು ಎಮಿಲಿಯ ಕಡೆ ತಿರುಗಿ

"ಇಲ್ಲೇ ಬನ್ನಿ. ನನ್ನ ಬಳಿಯಲ್ಲೇ ಮಲಗಿಕೊಳ್ಳಿ"

ಎಂದರು. ಎಮಿಲಿ ಬಂದು ಯೋಗಿನಿ ಅಮ್ಮನವರ ಮಂಚದ ಮೇಲೆ ಮಲಗಿದರು.

ಯೋಗಿನಿ ಅಮ್ಮನವರ ಅಪಾರ ಕರುಣೆ ಎಮಿಲಿಯವರ ಅಂತಃಕರಣ ಕಲಕಿತ್ತು. ಕಣ್ಣಲ್ಲಿ ಪ್ರವಾಹ ಹೊರಟಿತ್ತು. ಯೋಗಿನಿ ಅಮ್ಮನವರು ಎಮಿಲಿಯನ್ನಪ್ಪಿದರು.

"ನನ್ನ ತಾಯಿ ಹೀಗೆ ನನ್ನನ್ನಪ್ಪಿಕೊಂಡು ಸಂತೈಸುತ್ತಿದ್ದರು."

"ಅದೇ ತಾಯಿಯೇ ಈಗಲೂ ಸಂತೈಸುತ್ತಾಳೆ ಎಂದು ತಿಳಿದುಕೊಳ್ಳಿ. ತಾಯ್ತನ ಅಮರವಾದುದಲ್ಲವೇ ?"

"ಅಮ್ಮ, ನನ್ನ ಮನಸ್ಸನ್ನು ಎಷ್ಟು ಚೆನ್ನಾಗಿ ಅರ್ಥಮಾಡಿ ಕೊಳ್ಳುವಿರಿ ?"

"ಏಕೆ ಮಗಳೇ."

"ಇಂದು ನನ್ನ ಮನಸ್ಸಿಗೆ ಅಪರಿಮಿತ ದುಃಖ, ಸಂತೋಷಗಳೆರಡೂ ಆದವು. ನನ್ನ ಸ್ವಾಮಿ ನನ್ನ ಊರಿಗೆ ಹೋಗುತ್ತಾರಲ್ಲಾ ಎಂದು ಹಿಗ್ಗಿದೆ; ಆದರೆ ಅವರನ್ನು ಸ್ವಾಗತಿಸಲು, ಅವರ ಸೇವೆಮಾಡಲು ನಾನು ಅಲ್ಲಿಲ್ಲವಲ್ಲಾ ಎಂದು ಮನಸ್ಸು ವಿಷಾದಗೊಂಡಿತು."

"ಅದನ್ನು ನಾನು ಬಲ್ಲೆ ಮಗಳೇ. ನಿಮ್ಮ ಸ್ವಂತ ದುಃಖ ನಿಮ್ಮನ್ನು ಬಾಧಿಸಬಾರದೆಂದು ಹಗಲಿರುಳು ನೀವು ದುಡಿಯುತ್ತಿರುವುದನ್ನೂ ಬಲ್ಲೆ. ನಿಮ್ಮ ದುಃಖನಿವಾರಣೆಗೆ ನಾನು ಏನು ಬೇಕಾದರೂ ಮಾಡಲು ಸಿದ್ಧಳಾಗಿದ್ದೇನೆ. ಆದರೆ ಆದು ನನ್ನ ಕೈಯಲ್ಲಿಲ್ಲವಲ್ಲಾ !"

"ನಿಮ್ಮ ಸಂಗದಲ್ಲಿ ನಾನು ದುಃಖ ಮರೆಯುತ್ತೇನೆ—ಹೆನ್ರಿ ಮಿಚ್ಚೆಲ್ ನೆನಪಿದೆಯೇ ?"

"ನಿಮ್ಮ 'ಸಾಧಕರ ಸಂಘ'ದಲ್ಲಿದ್ದ ಕವಿ."

"ಅವರೇ – ಮಿಚ್ಚೆಲ್ ಉತ್ತಮ ಕವಿ ಮಾತ್ರವೇ ಅಲ್ಲದೆ ಉತ್ತಮ ಜೀವಿಯೂ ಆಗಿದ್ದಾರೆ. ನನ್ನನ್ನು ಮದುವೆಯಾಗ ಬಯಸಿ ಎರಡು ಮೂರು ಸಲ ವ್ಯಕ್ತಪಡಿಸಿದರು."

"ಅದಕ್ಕೆ ನೀವೇನು ಹೇಳಿದಿರಿ ?"

"'ಹೆನ್ರಿ – ನನ್ನ ಆತ್ಮ, ದೇಹ ಎರಡೂ ಬೇರೆಯವರಿಗೆ ವಿಾಸಲಾಗಿದೆ. ನೀವು ನನ್ನನ್ನು ಪ್ರೀತಿಸುವಂತೆ ನಾನು ನಿಮ್ಮನ್ನು ಪ್ರೀತಿಸಲಾರೆ. ಈ ವಿಷಯ ಪುನಃ ಪ್ರಸ್ತಾಪಿಸಬೇಡಿ' ಎಂದು ಹೇಳಿದೆ. ಹೆನ್ರಿ ಅದನ್ನು ಮನಸ್ಸಿಗೆ ಹಚ್ಚಿಕೊಂಡರು. ಇಲ್ಲಿಗೆ ನಾನು ಹೊರಟುಬರುವ ದಿನ ನನ್ನ ಬಳಿಗೆ ಬಂದು ನನ್ನ ಕೈಹಿಡಿದು 'ಎಮಿಲಿ, ನೀವು ಹೇಳಿದ್ದು ಸರಿ. ಈಗ ನೀವು ಆರಿಸಿರುವ ಜೀವನ ಮಾರ್ಗವೂ, ಯುಕ್ತವಾದದ್ದು.' ಹೋಗಿ ಬನ್ನಿ. ದೇವರು ನಿಮ್ಮನ್ನು ಕಾಪಾಡಲಿ.' ಎಂದು ಹೇಳಿದರು."

"ನಿಮ್ಮನ್ನು ಪ್ರೀತಿಸದಿರಲು ಯಾರಿಗೆ ಸಾಧ್ಯ ಎಮಿಲಿ. ಒಂದುವೇಳೆ ಬಿಪಿನ್ ಕರೆದರೆ ಅಮೇರಿಕಕ್ಕೆ ಹೋಗುವಿರಾ?"

"ಇಲ್ಲಿ ನನ್ನ ಕೆಲಸದ ಗತಿ?"

"ಡಾಕ್ಟರ್ ಚಂದ್ರಶೇಖರ್ ನಡೆಸಿಕೊಂಡು ಹೋಗುತ್ತಾರೆ."

"ನನ್ನ ಸ್ವಾಮಿಗೆ ಅಪ್ರಿಯವಾದುದನ್ನು ನಾನು ಮಾಡಲಾರೆ."

"ನೀವು ಅಮೇರಿಕಕ್ಕೆ ಹೋಗುವುದು ನಿಮ್ಮ ಸ್ವಾಮಿಗೆ ಪ್ರಿಯವಾದ ವಿಷಯ ತಾನೇ."

"ಇಲ್ಲ ತಾಯೀ. ಬಿಪಿನ್ ಉಗ್ರಸನ್ಯಾಸಿ. ಭಾರತದಲ್ಲಿ ನಾನು ಅವರ ಪ್ರತಿನಿಧಿಯಾಗಿದ್ದೇನೆಂಬುದನ್ನು ನಾನು ಮರೆಯುವಂತಿಲ್ಲ; ಅವರೂ ಮರೆಯುವುದಿಲ್ಲ."

"ಮಗಳೇ, ನೀನು ನನಗೆ ಎಂಥ ಪಾಠ ಕಲಿಸಿರುವೆ ಗೊತ್ತೇ?"

"ಅಯ್ಯೋ! ನಾನು ಪಾಠ ಕಲಿಸುವುದೇ – ನಿಮಗೆ ಪಾಠ ಕಲಿಸುವಷ್ಟು ನಾನು ಹಿರಿಯಳೇ?"

"ಈ ವಿಷಯದಲ್ಲಿ ಹಿರಿಯಳೆಂಬುದರಲ್ಲಿ ಸಂದೇಹವಿಲ್ಲ. ಪ್ರೇಮ ಭೋಗದಲ್ಲಿಲ್ಲ ತ್ಯಾಗದಲ್ಲಿದೆ ಎಂಬುದನ್ನು ಅರಿತು ಅನುಸರಿಸುವವರು ಹಿರಿಯರಲ್ಲವೇ?"

"ನಿಮ್ಮ ತ್ಯಾಗದ ಮುಂದೆ ನನ್ನದೇನು!"

ಎಮಿಲಿಯ ಪ್ರೇಯೋಕ್ತಿಗೆ ಉತ್ತರ ಕೊಡಲು ಯೋಗಿನಿ ಅಮ್ಮನವರಿಗೆ ಧೈರ್ಯವಾಗಲಿಲ್ಲ. 'ಅಯ್ಯೋ! ನನ್ನದೆಂಥ ಸುಳ್ಳು ಬಾಳುವೆ' ಎಂಬ ಕಟುರೋದನ ಅವರ ಹೃದಯಾಂತರಾಳದಿಂದೆದ್ದಿತು.

೨೪

ಸ್ವಾಮಿಜಿಯವರ ಮದರಾಸಿನ ಕಾರ್ಯಕ್ರಮ ಅವೋಘರೀತಿಯಲ್ಲಿ ಆರಂಭವಾಯಿತು. ಮುತ್ತಯ್ಯಚೆಟ್ಟಿಯಾರರ ಶಾಲೆಯ ಒಳಅಂಗಳದಲ್ಲಿ ಭವ್ಯವಾದ ಚಪ್ಪರ ಹಾಕಲಾಗಿತ್ತು. ವಿದ್ಯುದ್ದೀಪಗಳಿಂದಲೂ, ತಳಿರು ತೋರಣಗಳಿಂದಲೂ, ಮಹಾಪುರುಷರ ಭಾವಚಿತ್ರಗಳಿಂದಲೂ ಚಪ್ಪರ ಅಲಂಕೃತವಾಗಿತ್ತು.

ಚಪ್ಪರದ ಒಂದು ಕಡೆ ವೇದಿಕೆ ಏರ್ಪಡಿಸಲಾಗಿತ್ತು. ವೇದಿಕೆಯ ಮೇಲೆ ಸ್ವಾಮಿಜಿಯವರು ನಿಂತು ಭಾಷಣ ಮಾಡುವುದಕ್ಕೆ ಮತ್ತೊಂದು ವೇದಿಕೆ – ಅದರ ಎದುರಿಗೆ ಧ್ವನಿವಾಹಕ ಯಂತ್ರ.

ಕಾರ್ಯಕ್ರಮ ಆರಂಭವಾಗುವುದಕ್ಕೆ ಒಂದು ಗಂಟೆ ಮುಂಚೆಯೇ ದಟ್ಟವಾಗಿ ಜನಸಂದಣಿ ಸೇರಿತ್ತು. ಮದರಾಸಿನ ನಾಮಾಂಕಿತರೆಲ್ಲರೂ ಆಗಮಿಸಿದ್ದರು.

ಸ್ವಾಮಿಜಿಯವರು ದಯೆಮಾಡಿಸಿ ಆಸನಾಸೀನರಾದ ಮೇಲೆ ಜಸ್ಟಿಸ್ ರಾಘವ ಅಯ್ಯರ್ ಆವರ ಮಗಳು ಪಂಕಜ ನಾಲ್ಕು ಕೀರ್ತನೆ ಆಡಿದಳು. ರಾಘವ ಅಯ್ಯರ್ ನಿಂತುಕೊಂಡು ಸ್ವಾಮಿಜಿಯವರಿಗೂ, ಸ್ಕಿನ್ನರ್ ಅವರಿಗೂ, ಸಭಿಕರಿಗೂ ಸ್ವಾಗತ ಬಯಸಿ, 'ಋಷಿಧಾಮ'ದ ವಿಷಯ ಪ್ರಸ್ತಾಪಿಸಿದರು. ಸ್ಕಿನ್ನರ್ ಗಂಭೀರವಾಗಿ ಸ್ವಾಮಿಗಳ ಪರಿಚಯ ಮಾಡಿ ಕೊಟ್ಟು, ಸ್ವಾಮಿ ವಿವೇಕಾನಂದ, ಕವಿ ರವೀಂದ್ರ, ಯೋಗಿ ಅರವಿಂದ ಮತ್ತು ಸ್ವಾಮಿ ಶಂಕರಾನಂದ ಇವರಿಂದ ಪಾಶ್ಚಾತ್ಯ ಲೋಕಕ್ಕೆ ಆಗಿರುವ ಮಹೋಪ ಕಾರವನ್ನು ವಿವರಿಸಿದರು. ಸ್ಕಿನ್ನರ್ ಅವರ ಭಾಷಣಕ್ಕೆ ಮದರಾಸಿನ ವಿದ್ವಜ್ಜನರು ತಲೆದೂಗಿ ಅವರ ವಿಶ್ವಮೈತ್ರಿ ಭಾವನೆಯನ್ನು ಮೆಚ್ಚಿ ಕೊಂಡರು.

ಸ್ವಾಮಿಜಿಯವರು ನಿಂತಕೂಡಲೆ ಸಭಿಕರು ಸತತವಾಗಿ ಕರತಾಡನ ಮಾಡಿದರು. ಎರಡು ನಿಮಿಷ ತಡೆದು ಸ್ವಾಮಿಜಿ ಆರಂಭಿಸಬೇಕಾಯಿತು. ಅವರ ಧ್ವನಿ ಗಂಭೀರವೂ, ಆಳವೂ ಆಗಿತ್ತು. ಉಪನಿಷತ್ತಿನ ಮಂತ್ರ ಅವರ ಬಾಯಿಂದ ಪರ್ವತ ಧಾರೆಯಂತೆ ಉರುಳಿತು

"ಓಂ ಪೂರ್ಣಮದಃ ಪೂರ್ಣಮಿದಂ
ಪೂರ್ಣಾತ್ಪೂರ್ಣಮುದಚ್ಯತೆ ||
ಪೂರ್ಣಸ್ಯ ಪೂರ್ಣಮಾದಾಯ
ಪೂರ್ಣಮೇವಾವಶಿಷ್ಯತೇ ||
ಓಂ ಶಾಂತಿಃ ಶಾಂತಿಃ ಶಾಂತಿಃ ||"

[ಅದು (ಪರಾತ್ಪರವಸ್ತುವು) ಸರ್ವ ಸಂಪೂರ್ಣವು. ಇದು (ವ್ಯಕ್ತ ವಿಶ್ವವು) ಸರ್ವ ಸಂಪೂರ್ಣವು. ಪೂರ್ಣದಿಂದ ಪೂರ್ಣದ ಉತ್ಪತ್ತಿಯಾಗುವುದು. ಪೂರ್ಣದೊಳಗಿಂದ ಪೂರ್ಣವನ್ನು ಕಳೆದರೂ ಪೂರ್ಣವು ಅಚ್ಚಳಿಯದೆ ಉಳಿಯುವುದು. ಓಂ ಶಾಂತಿಃ ಶಾಂತಿಃ ಶಾಂತಿಃ]

"ಓಂ ಈಶಾವಾಸ್ಯಮಿದಂ ಸರ್ವಂ
ಯತ್ಕಿಂಚ ಜಗತ್ಯಾಂ ಜಗತ್ ||
ತೇನ ತ್ಯಕ್ತೇನ ಭುಂಜೀಥಾ ಮಾ
ಗೃಧಃ ಕಸ್ಯ ಸ್ವಿದ್ಧನಮ್ ||

[ಇದೆಲ್ಲ ಈ ವಿಶ್ವದೊಳಗಿನ ಚಲನಾತ್ಮಕ ಯಚ್ಚಾವತ್ ವಸ್ತುಗಳೆಲ್ಲ ಪರಮಾತ್ಮನ ವಾಸಸ್ಥಾನಗಳು ಅಂದರೆ ಅಧಿಷ್ಠಾನಗಳು. ಅವನು ಕೊಟ್ಟ ಪದಾರ್ಥಗಳನ್ನು (ಅವನ ಪ್ರಸಾದವೆಂಬ ಭಾವನೆಯಿಂದ) ಉಪಭೋಗಿಸು.]

"ಯಸ್ತು ಸರ್ವಾಣಿ ಭೂತಾನ್ಯಾತ್ಮನ್ಯೇವಾನುಪಶ್ಯತಿ ||
ಸರ್ವಭೂತೇಷು ಚಾತ್ಮಾನಾಂ ತತೋ ನ ವಿಜುಗುಪ್ಸತೇ ||"

[ಯಾವನು ಸರ್ವಭೂತ ಮಾತ್ರಗಳನ್ನು ಆತ್ಮನಲ್ಲಿಯೂ ಆತ್ಮನನ್ನು ಸರ್ವಭೂತಗಳಲ್ಲಿಯೂ ಕಾಣುವನೋ ಅವನ ಜುಗುಪ್ಸೆಯು ಅಂದರೆ ಹೇಯ ಭಾವನೆಯು ಅಳಿದುಹೋಗುವುದು.]

ಇಂದಿನಿಂದ ಏಳು ದಿವಸಕಾಲ ನಾನು ಭಗವಾನ್ ಶ್ರೀ ರಾಮಚಂದ್ರ
ನನ್ನು ಕುರಿತು ಮಾತನಾಡಬೇಕೆಂದು ಆತ್ಮೀಯರಾದ ಜಸ್ಟಿಸ್ ರಾಘವ
ಅಯ್ಯರ್ ಅವರೂ, ಅವರ ಮಿತ್ರರೂ ತಿಳಿಸಿದ್ದಾರೆ. ಸುಹೃತ್‌ವಾಕ್ಯ
ಭಗವಂತನ ವಾಕ್ಯದಷ್ಟೇ ಪವಿತ್ರ.

ಪೂರ್ಣಪ್ರಜ್ಞನೂ, ಸರ್ವಭೂತಾತ್ಮನೂ, ಆತ್ಮಕ್ರೀಡಾರತರೂ ಆದ
ಭಗವಾನ್ ಶ್ರೀ ರಾಮಚಂದ್ರಮೂರ್ತಿ ಭಾರತೀಯರ ಆರಾಧ್ಯಮೂರ್ತಿ.
ಶ್ರೀರಾಮ ಕ್ಷತ್ರಿಯ ರಾಜಕುಮಾರ. ರಾಜರ್ಷಿ ವಿಶ್ವಾಮಿತ್ರ, ದೇವರ್ಷಿ
ವಶಿಷ್ಠರ ಶಿಷ್ಯ. ಆ ಕ್ಷತ್ರಿಯ ರಾಜಕುಮಾರನನ್ನು ದೇವರೆಂದು ಭಾವಿಸಿ,
ಅವನಿಗೆ ದೇವಾಲಯಗಳನ್ನು ಕಟ್ಟಿ ಆರಾಧಿಸುತ್ತಿರುವ ಜನ ಕೇವಲ
ಕ್ಷತ್ರಿಯರಲ್ಲ. ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರೆಲ್ಲರಿಗೂ ಶ್ರೀ ರಾಮ
ಚಂದ್ರ ಪರಮಪೂಜ್ಯನಾಗಿದ್ದಾನೆ.

ಶ್ರೀ ರಾಮಚಂದ್ರ ಸತ್ಯಶೋಧಕ, ಸತ್ಯಸಾಧಕ. ಆತನ ಜೀವನವನ್ನು
ಪ್ರಬಲ ಸಮಸ್ಯೆಗಳೆದುರಿಸಿದವು. ಪ್ರಕೃತಿಯ ದೈತ್ಯಶಕ್ತಿಗಳು ಆತನ ಮೇಲೆ
ಪಾಶಬೀಸಿ, ಆತನನ್ನು ಕರ್ತವ್ಯಪರಾಙ್ಮುಖನನ್ನಾಗಿ ಮಾಡಲೆಳಸಿದವು.
ಶ್ರೀರಾಮ ಅವುಗಳಿಗೆ ಮಣಿಯಲಿಲ್ಲ. ಶಿವನ ಬಿಲ್ಲು ಕೂಡ ಅವನ ಕೈಯಲ್ಲಿ
ಒಣಗಿದ ಬಿದುರಾಯಿತು. ಶ್ರೀ ರಾಮಚಂದ್ರ ಸಾಧಿಸಿದ ಸತ್ಯದ ದಿಗ್ವಿಜಯ
ಜಗತ್ತಿನ ಸಾಹಿತ್ಯದಲ್ಲಿ ಧೃವನಕ್ಷತ್ರದಂತೆ ಮೆರೆಯುತ್ತಿದೆ. ಆತನ ಅಮರ
ಕಥೆಯನ್ನು ಬರೆದ ಮಹಾಕವಿ ವಾಲ್ಮೀಕಿ ಪುಣ್ಯಶ್ಲೋಕನಾಗಿದ್ದಾನೆ.

ಶ್ರೀಮದ್ರಾಮಾಯಣವನ್ನು ಕೂಲಂಕಷವಾಗಿ ಓದಿ, ಅದರ ಮಹಾ
ನಾಯಕನ ಆದರ್ಶವನ್ನು ಅನುಸರಿಸುವುದರ ಬದಲು ನಮ್ಮ ಜನ ರಾಮಾಯಣ
ವನ್ನು ಪೂಜಿಸುತ್ತಾರೆ. ರಾಮಾಯಣ ಪೂಜನೀಯ ಗ್ರಂಥ. ಆ ಬಗ್ಗೆ
ಭಿನ್ನಾಭಿಪ್ರಾಯವಿಲ್ಲ. ಆದರೆ ಪೂಜೆಯೆಂದರೆ, ಹೂ, ಪತ್ರೆ ಎರಚಿ, ಆರ
ಬೆಳಗಿ ಹಬ್ಬದ ಹೋಳಿಗೆ ಮಾಡಿ ತಿಂದು ತೃಪ್ತರಾಗುವುದೋ ಅಥವಾ ಪೂಜ
ಆದರ್ಶಗಳನ್ನು ಕುರಿತು ಧ್ಯಾನಮಾಡಿ ಅವುಗಳನ್ನು ಆಚರಣೆಗೆ ತರುವುದೋ
ಎಂದು ಯೋಚಿಸಬೇಕು. ಶ್ರೀ ರಾಮಚಂದ್ರನ ಪುಣ್ಯಕಥೆ ಬರೆದ ಮಹಾ
ಕವಿ, ಆ ಉದಾತ್ತ ಜೀವನದಿಂದ ಸ್ಫೂರ್ತಿಗೊಂಡ ಜನ ಶ್ರೀರಾಮನಂತಾ
ಬೇಕು ಎಂದು ಉದ್ದೇಶ ಪಟ್ಟಿದ್ದಾನೆ."

ಎಂಬ ಪ್ರಸ್ಥಾಪವನ್ನಿಟ್ಟುಕೊಂಡು ಸ್ವಾಮಿಜಿಯವರು ಅಯೋಧ್ಯಾ ಕಾಂಡ, ಬಾಲಕಾಂಡದ ಕಥಾಭಾಗವನ್ನು ವಿವರಿಸಿ, ಅವುಗಳ ಅಂತರಾರ್ಥ ಹೇಳಿದರು.

ರಾಮಾಯಣದ ಬಗ್ಗೆ ಸ್ವಾಮಿಜಿ ಕೊಟ್ಟ ವ್ಯಾಖ್ಯೆ ವಿದ್ವಜ್ಜನರ ಕುತೂಹಲವನ್ನು ಕೆರಳಿಸಿತು. ಕೆಲವು ಸಂಪ್ರದಾಯಪ್ರಿಯರು 'ಈ ಬಗೆಯ ವ್ಯಾಖ್ಯಾನ ಪ್ರಚ್ಛನ್ನ ನಾಸ್ತಿಕತೆಯ ಕುರುಹು' ಎಂದು ಮೂಗುಮುರಿದರು. ಆದರೆ ಯಾರೂ ವಿರೋಧಾಭಿಪ್ರಾಯ ವ್ಯಕ್ತಮಾಡಲು ಮುಂದುವರಿಯಲಿಲ್ಲ.

ಸಪ್ತಾಹ ಮುಗಿಯುವ ವೇಳೆಗೆ ಸ್ವಾಮಿಜಿಯವರಿಗೆ ನೂರಾರು ಆಹ್ವಾನಪತ್ರಗಳು ಬಂದವು. ತಮಿಳುನಾಡು, ಆಂಧ್ರದ ವಿವಿಧಭಾಗಗಳ ಜನರು ಬಂದು ಆಮಂತ್ರಣಕೊಟ್ಟರು. 'ಈಗ ಬರಲು ಸಾಧ್ಯವಿಲ್ಲ. ಇನ್ನೊಮ್ಮೆ ಬರುತ್ತೇನೆ' ಎಂದು ಸ್ವಾಮಿಜಿಯವರು ಹೇಳಬೇಕಾಗಿ ಬಂತು.

ಜಸ್ಟಿಸ್ ರಾಘವ ಅಯ್ಯರ್ ಅವರೂ, ಅವರ ಮಿತ್ರರೂ ವಾರಾಂತ್ಯದಲ್ಲಿ ಸ್ವಾಮಿಜಿಯವರನ್ನು ಊರಿಗೆ ಬೀಳ್ಕೊಡಲು ಒಪ್ಪಲಿಲ್ಲ. ಸ್ವಾಮಿಜಿಯವರು 'ಗೀತಾ ಸಪ್ತಾಹ'ಮಾಡಿ ಹೋಗಬೇಕೆಂದು ಹಟಹಿಡಿದರು. ಸ್ವಾಮಿಜಿ ಅವರ ಮಾತಿಗೆ ಒಲ್ಲೆಯೆನ್ನಲಾಗಲಿಲ್ಲ.

ಸ್ಕಿನ್ನರ್ ಅವರಿಗೆ ಸ್ವಲ್ಪವೂ ಬಿಡುವು ದೊರೆಯಲಿಲ್ಲ. ಮದರಾಸಿನ ಕಾಲೇಜುಗಳು, ಧರ್ಮಸಂಸ್ಥೆಗಳು ಅವರನ್ನು ಬರಮಾಡಿಕೊಂಡು ಸ್ವಾಮಿಜಿಯವರ ಜೀವನ, ಸಂದೇಶದ ಮೇಲೆ ಭಾಷಣ ಮಾಡಿಸಿದವು.

ಸ್ವಾಮಿಜಿಯವರು 'ಗೀತಾಸಪ್ತಾಹ' ನಡೆಸುತ್ತಿರುವಂತೆ ಮದರಾಸಿನ ಶ್ರೀ ರಾಮಕೃಷ್ಣಾಶ್ರಮ, ಥಿಯೋಸೋಫಿಕಲ್ ಸೊಸೈಟಿ, ಆರ್ಯಧರ್ಮ ಪ್ರಚಾರಣಿ ಸಭೆಗಳಿಗೆ ಭೆಟ್ಟಿಕೊಟ್ಟರು. ಆಲ್ ಇಂಡಿಯಾ ರೇಡಿಯೋದವರು ಅವರ 'ಶಾಂತಿಸಂದೇಶ'ವನ್ನು ಪ್ರಸಾರಮಾಡಿದರು.

ಜಸ್ಟಿಸ್ ರಾಘವ ಅಯ್ಯರ್ ಅವರು ಸ್ವಾಮಿಜಿ ಹೊರಡುವ ಮುನ್ನ 'ಋಷಿಧಾಮ'ದ ಒಂದು ಶಾಖೆಯನ್ನು ಮದರಾಸಿನಲ್ಲಿ ಸ್ಥಾಪಿಸಿ, ಸ್ವಾಮಿಜಿಯವರಿಂದ ಆರಂಭೋತ್ಸವ ನಡೆಸಿದರು. ಶಾಖಾಸಂಸ್ಥೆಗೆ ಪ್ರತ್ಯೇಕ ಕಟ್ಟಡ

ಕಟ್ಟಿಸಿ, ಅಧ್ಯಾತ್ಮಬೋಧೆಗೆ ಅವಕಾಶ ಕಲ್ಪಿಸಬೇಕೆಂದು ನಿರ್ಣಯಿಸ ಲಾಯಿತು.

ಮದರಾಸಿನ ಮಹಾಜನರು ಸ್ವಾಮಿಜಿಯವರನ್ನು ರಾಜಮರ್ಯಾದೆ ಯಿಂದ ಬೀಳ್ಕೊಟ್ಟರು. ರೈಲಿನಲ್ಲಿ ಬರುವಾಗ ಸ್ಕಿನ್ನರ್

"ಮದರಾಸಿನ ಜನ ತುಂಬ ಧರ್ಮಾಭಿಮಾನಿಗಳು. ಅವರ, ಶ್ರದ್ಧೆ, ಉತ್ಸಾಹ, ಕಾರ್ಯದಕ್ಷತೆ ಪ್ರಶಂಸನೀಯವಾಗಿದೆ"

ಎಂದರು. ಸ್ವಾಮಿಜಿ ಯೋಚಿಸುತ್ತಾ

"ಹೌದು ಹೌದು, ನೀವು ಹೇಳುವುದು ನಿಜ. ಆದರೆ ನಾನು ಏನು ಯೋಚಿಸುತ್ತಿದ್ದೆ ಬಲ್ಲಿರಾ ಮೇಜರ್ ?"

"ಏನು ಸ್ವಾಮಿಜಿ ?"

"ಅವರ ಧರ್ಮಶ್ರದ್ಧೆಯ ಹಿಂದಿರುವ ಅಪಾರ ದುಃಖ. ನನ್ನ ಕಣ್ಣುಗಳೇ ಕಾಮಿಣಿ ಕಣ್ಣುಗಳೋ ಏನೋ ?—ಎಲ್ಲಿ ನೋಡಿದರೂ ನನಗೆ ದುಃಖ, ಚಿಂತೆ, ವಿಪ್ಲವ ಕಂಡು ಬರುತ್ತದೆ. ವಿಜ್ಞಾನಿ, ವಿದ್ಯಾರ್ಥಿ; ಕಾರ್ಮಿಕ, ಕಲಾವಿದ; ದುಡಿಯುವವನು, ದುಡಿಸಿಕೊಳ್ಳುವವನು ಎಲ್ಲರ ಮನಸ್ಸಿನಲ್ಲಿಯೂ ಹಿಂಗಲಾಗದ ಹಸಿವು – ಅಡಗಿಸಿಕೊಳ್ಳಲಾಗದ ಆಂಹತಿ. ಇವರ ಪರಿಹಾರ ಹೇಗೆಂಬ ಚಿಂತೆ ನನ್ನನ್ನು ಪರಿಪರಿಯಾಗಿ ಕಾಡುತ್ತಿದೆ."

"ಪರಿಹಾರ ತೋರಿಸಿರುವಿರಲ್ಲಾ ಸ್ವಾಮಿಜಿ. ತೃಷೆಯಿಂದ ಅಶಾಂತಿ, ತೃಪ್ತಿಯಿಂದ ಶಾಂತಿ ಎಂದು ನೀವೇ ಹೇಳಿಲ್ಲವೇ ?"

"ಹೇಳಿದ್ದೇನೆ ಮೇಜರ್. ಹಸಿದವರಿಗೆ ಧರ್ಮಬೋಧೆ ಮಾಡಿದರೆ ಅನ್ನದ ಬದಲು ಕಲ್ಲುಕೊಟ್ಟಂತೆ ಎಂದು ಸ್ವಾಮಿ ವಿವೇಕಾನಂದರು ಹೇಳಿರುವುದು ಪದೇಪದೇ ನನ್ನ ಸ್ಮೃತಿಪಥಕ್ಕೆ ಬರುತ್ತದೆ. ಇಷ್ಟು ಭಾಷಣ, ಇಷ್ಟು ಉಪದೇಶ ನಾನು ಮಾಡುವುದರ ಬದಲು ನಿರ್ಗತಿಕರಿಗೆ ಒಪ್ಪತ್ತು ಊಟ ಹಾಕಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು."

"ಅದಕ್ಕೂ ಹೆಚ್ಚಿನದು ಮಾಡಿರುವಿರಿ ಸ್ವಾಮಿಜಿ. ನಿರ್ಗತಿಕರು ಅನ್ನ ದೊರಕಿಸಿಕೊಳ್ಳುವುದಕ್ಕೆ ಆವಶ್ಯಕವಾದ ಕ್ರತುಶಕ್ತಿಯನ್ನು ನೀಡಿ ದ್ದೀರಿ. ಒಪ್ಪತ್ತು ಊಟ ಹಾಕುವುದು ಶ್ರೇಯಸ್ಕರ; ಆದರೆ ಸತತವಾಗಿ

ಅನ್ನ ದೊರಕಿಸಿಕೊಳ್ಳುವ ಮಾರ್ಗನಿರ್ದೇಶನಮಾಡುವುದು ಅದಕ್ಕಿಂತಲೂ ಶ್ರೇಯಸ್ಕರವಲ್ಲವೇ ?"

ಸ್ಕಿನ್ನರ್ ಮಾತು ಸತ್ಯವಾಗಲಿ ಎಂದು ಸ್ವಾಮಿಜಿ ಮನಃಪೂರ್ವಕವಾಗಿ ಹಾರೈಸಿದರು. ಸ್ವಾಮಿಜಿಯವರ ಮನಸ್ಸಿನಲ್ಲಿ ನಡೆಯುತ್ತಿದ್ದ ಮಹಾ ಸಂಗ್ರಾಮ ಸೂಕ್ಷ್ಮಮತಿಯಾದ ಮೇಜರ್ ಸ್ಕಿನ್ನರ್ ಅವರಿಗೆ ಹೊಳೆಯದೆ ಹೋಗಲಿಲ್ಲ.

ಬೆಂಗಳೂರು ನಿಲ್ದಾಣಕ್ಕೆ ವಾಸುವೇ ಕಾರಿನೊಂದಿಗೆ ಬಂದು ಸ್ವಾಮಿಜಿ ಯವರನ್ನೂ ಮೇಜರ್ ಅವರನ್ನೂ ಆಶ್ರಮಕ್ಕೆ ಕರೆದೊಯ್ದ.

೨೫

ಶುಕ್ಲಪಕ್ಷದ ಚಂದ್ರನಂತೆ ಆಶ್ರಮ ವಿಕಾಸವಾಗತೊಡಗಿತು. ಆಶ್ರಮದ ಆಸ್ಪತ್ರೆ ಸುತ್ತಮುತ್ತಲಿನ ಹತ್ತಾರು ಹಳ್ಳಿಗಳಿಗೆ ವರಪ್ರದಾನ ವಾಯಿತು. ಆಸ್ಪತ್ರೆಯ ಖ್ಯಾತಿ ಕೇಳಿ ದೂರದಿಂದಲೂ ಜನ ಚಿಕಿತ್ಸೆಗೆ ಬರಲಾರಂಭಿಸಿದರು.

ಆಶ್ರಮದ ಖ್ಯಾತಿಯನ್ನು ವಿಶೇಷ ವಿಸ್ತರಿಸಿದುದು ಅದರ ಅನ್ನದಾನದ ಮಹಿಮೆ. ಪ್ರತಿಹೊತ್ತಿಗೆ ನೂರು, ನೂರೈವತ್ತು ಜನಗಳಿಗೆ ಪುಷ್ಕಳ ಭೋಜನವಾಗುತ್ತಿತ್ತು. ಶುಕ್ರವಾರ ಯೋಗಿನಿ ಅಮ್ಮನವರ ಭಜನೆಗೆ ಬರುತ್ತಿದ್ದವರಿಗೂ, ಶನಿವಾರ ಸ್ವಾಮಿಜಿಯವರ ಉಪದೇಶಕ್ಕೆ ಬರು ತ್ತಿದ್ದವರಿಗೂ ಅಲ್ಲಿಯೇ ಪ್ರಸಾದ ವಿನಿಯೋಗವಾಗುತ್ತಿತ್ತು. ಪ್ರಸಾದ ಸ್ವೀಕರಿಸಿದವರು ಬರಿಗೈಕೊಡವಿ ಹೋಗುತ್ತಿರಲಿಲ್ಲ. ಆಶ್ರಮದ ಗೋಲಕ ವಾರಕ್ಕೆ ಎರಡು ಮೂರು ಸಾರಿ ತುಂಬುತ್ತಿತ್ತು.

ಆಶ್ರಮದ ಅನ್ನದಾನದ ವಿತರಣೆಯಲ್ಲಿ ಒಂದು ವೈಶಿಷ್ಟ್ಯವಿತ್ತು. ಮಧ್ಯಾಹ್ನ ಹನ್ನೆರಡು ಗಂಟೆಗೆ ಸರಿಯಾಗಿ ಆಶ್ರಮದ ಗಂಟೆ ಬಾರಿಸುತ್ತಿತ್ತು. ಸ್ವಾಮಿಜಿ ಆದಿಯಾಗಿ ಎಲ್ಲರೂ ಭೋಜನ ಗೃಹಕ್ಕೆ ಬರುತ್ತಿದ್ದರು. ಒಂದೇ ಪಂಕ್ತಿಯಲ್ಲಿ ಊಟ. ಸಾಹುಕಾರನ ಪಕ್ಕದಲ್ಲಿ ಸಾಮಾನ್ಯ, ಸನ್ಯಾಸಿಯ ಪಕ್ಕದಲ್ಲಿ ಸಂಸಾರಿ, ಕ್ರಿಸ್ತನ ಜತೆಯಲ್ಲಿ ಬ್ರಾಹ್ಮಣ ಊಟಕ್ಕೆ ಕೂಡು

ತ್ತಿದ್ದರು. ಎಮಿಲಿ, ಮೇಜರ್ ಸ್ಕಿನ್ನರ್ ಪಂಕ್ತಿಯೂಟಕ್ಕೇ ಬರುತ್ತಿದ್ದರು. ಯೋಗಿನಿ ಅಮ್ಮನವರು ಮಾತ್ರ ಪಂಕ್ತಿಗೆ ಬರುತ್ತಿರಲಿಲ್ಲ.

ಆಶ್ರಮದ ಖ್ಯಾತಿ ವಿಸ್ತರಿಸಿದಂತೆ ಅದರ ಅತಿಮಾನುಷ ಶಕ್ತಿಯ ಕಥೆಗಳೂ, ಪವಾಡದ ವೃತ್ತಾಂತಗಳೂ ಜನ ಸಾಮಾನ್ಯರಲ್ಲಿ ಬಳಕೆಗೆ ಬಂದವು. ನಾನಾ ಬಗೆಯ ದುಃಖ ಪೀಡಿತರು ಆಶ್ರಮದ ಹೆಸರಿನಲ್ಲಿ ಹರಕೆ ಹೊತ್ತು, ಹರಕೆಯ ಕಾಣಿಕೆಯನ್ನು ತಪ್ಪದೆ ತಂದೊಪ್ಪಿಸುತ್ತಿದ್ದರು. ಸದಾ ಕಾಲವೂ ಆಶ್ರಮದ ಉಗ್ರಾಣ ತುಂಬಿ ತುಳುಕುತ್ತಿತ್ತು. ಎಲ್ಲಿಂದಲೋ ಭತ್ತ, ಎಲ್ಲಿಂದಲೋ ರಾಗಿ, ಎಲ್ಲಿಂದಲೋ ಬೆಲ್ಲ ಬಂದು ಬೀಳುತ್ತಿತ್ತು.

'ಭಗವಾನ್ ಮಂದಿರ'ದ ಕೆಲಸ ಮುಗಿಯುತ್ತ ಬಂದಿತ್ತು. ಅಯೋಧ್ಯಾ ಪ್ರಸಾದರು ಶ್ರೀಕೃಷ್ಣನ ಅಮೃತಶಿಲಾಮೂರ್ತಿಯನ್ನು ಮುಂಬಯಿಯ ಪ್ರಸಿದ್ಧ ಶಿಲ್ಪಿಗಳಾದ ಮಾತ್ರೆಯವರಿಂದ ಮಾಡಿಸಿ ಕಳಿಸಿದ್ದರು.

ಭಗವಾನ್ ಮಂದಿರದ ಆರಂಭೋತ್ಸವ ಸಮಾರಂಭವನ್ನು ಅತ್ಯಂತ ವಿಜೃಂಭಣೆಯಿಂದ ಮಾಡಬೇಕೆಂದು ಆಶ್ರಮದ ಅಧಿಕಾರಿಗಳು ನಿಶ್ಚ ಯಿಸಿದರು. ಎಂಟು ದಿವಸದ ಕಾರ್ಯಕ್ರಮದ ವಿವರ ಸಿದ್ಧವಾಯಿತು.

ತಮ್ಮ ಅಲ್ಪಸೇವೆಯನ್ನರ್ಪಿಸಲು ಕಾಲಾವಕಾಶ ಕಲ್ಪಿಸಿಕೊಡ ಬೇಕೆಂದು ಕೀರ್ತನಕಾರರು, ಗಮಕಿಗಳು, ಸಂಗೀತಗಾರರು, ಭಾಷಣ ಕಾರರು ಪ್ರಾರ್ಥಿಸಿಕೊಂಡರು.

ಆಹ್ವಾನಪತ್ರಗಳಿಗೆ ಪ್ರತ್ಯುತ್ತರವಾಗಿ ಹಿಡಿಹಿಡಿ ಹಣ ಆಶ್ರಮದ ಬೊಕ್ಕಸಕ್ಕೆ ಬಂದು ಬಿದ್ದಿತು. ಉತ್ಸವಕ್ಕೆ ಬರುವ ಎಲ್ಲರಿಗೂ ಊಟ ತಿಂಡಿಯ ವ್ಯವಸ್ಥೆಮಾಡುವುದಲ್ಲದೆ, ವಿದ್ವಾಂಸರಿಗೂ, ಕಲಾವಿದರೂ ಪಾರಿತೋಷಿಕ ಕೊಡಬೇಕೆಂದು ವಾಸು ನಿರ್ಧರಿಸಿದ.

ಹಂಗಾಮಿ ಗೃಹನಿರ್ಮಾಣದ ಕೆಲಸ ಭೈರಪ್ಪನವರಿಗೆ ವಹಿಸಲಾಯಿತು. ಅತಿಥಿಗಳ ಭೋಜನ ವ್ಯವಸ್ಥೆಗೆ ರಾಮನಾಥಯ್ಯ ನಿಂತರು.

ಮದರಾಸಿನಿಂದ ಜಸ್ಟಿಸ್ ರಾಘವ ಅಯ್ಯರ್ ಅವರೂ, ಅವರ ಕುಟುಂಬವರ್ಗ, ಗೆಳೆಯರು ಸಕಾಲಕ್ಕೆ ಬಂದಿಳಿದರು. ಮುಂಬಯಿಯ ಭಕ್ತವರ್ಗವೂ ಬಂದಿತು. ಆದರೆ ಬೊಂಬಾಯಿವಾಲಾ, ಷಿರೀನ್ ಬರಲಿಲ್ಲ.

"ಷಿರೀನರ ಸ್ಥಿತಿ ಚಿಂತಾಜನಕವಾಗಿದೆ. ಉತ್ಸವಕ್ಕೆ ಬರಲಾಗಲಿಲ್ಲವೆಂದು, ಅವರೂ ಬೊಂಬಾಯಿವಾಲಾ ತುಂಬ ವಿಷಾದಪಟ್ಟರು."

ಎಂದು ರತನ್‌ಲಾಲ್ ಹೇಳಿದ.

ಯೋಗಿನಿ ಅಮ್ಮನವರ ಮನಸ್ಸು ಅಧೀರವಾಯಿತು. 'ಈ ಸಲದ ಕುತ್ತಿನಿಂದ ಷಿರೀನ್ ಪಾರಾಗುವರೇ?' ಎಂಬ ಚಿಂತೆ ಒಂದೇ ಸಮನಾಗಿ ಅವರನ್ನು ಕಾಡತೊಡಗಿತು. ಉತ್ಸವ ಮುಗಿದಕೂಡಲೆ ಮುಂಬಯಿಗೆ ಹೋಗಿ ಬರಬೇಕೆಂದು ಸಂಕಲ್ಪಮಾಡಿಕೊಂಡರು.

ಭಾನುವಾರ ಸಂಜೆ ಗೋಧೂಳಿ ಲಗ್ನದಲ್ಲಿ 'ಶ್ರೀಕೃಷ್ಣ ಮಂದಿರ'ದ ಅನಾವರಣವಾಯಿತು. ಭಗವಂತನ ಸ್ನಿಗ್ಧ, ಸುಂದರಮೂರ್ತಿಯನ್ನು ಕಂಡು ಜನ ಪುಲಕಿತರಾದರು.

ಭಗವಾನ್ ಮಂದಿರದ ಪೂಜಾವ್ಯವಸ್ಥೆ ಎಲ್ಲರಿಗೂ ಅಚ್ಚರಿಯನ್ನುಂಟುಮಾಡಿತು. ಪೂಜಾರಿಗಳ ಅವಾಂತರವಿಲ್ಲ. ಮಂದಿರಕ್ಕೆ ಯಾರು, ಯಾವಾಗ ಬೇಕಾದರೂ ಹೋಗಬಹುದಾಗಿತ್ತು. ತೆಂಗಿನಕಾಯಿ ಒಡೆದು, ಕರ್ಪೂರ ಹಚ್ಚಿ, ಕಾಣಿಕೆಯನ್ನರ್ಪಿಸಬೇಕೆಂಬ ನಿರ್ಬಂಧವಿರಲಿಲ್ಲ.

ಉತ್ಸವಕ್ಕೆ ಸಹಸ್ರಾರು ಲೌಕಿಕರು ಬಂದಿದ್ದಂತೆ ಕೆಲವು ಸನ್ಯಾಸಿಗಳು, ಜಂಗಮರು, ಭಿಕ್ಷುಗಳೂ ಬಂದಿದ್ದರು.

ಸ್ವಾಮಿಜಿಯವರು ಪ್ರತಿನಿತ್ಯ 'ಶ್ರೀಕೃಷ್ಣನ ಧರ್ಮ'ವನ್ನು ಕುರಿತು ವ್ಯಾಖ್ಯಾನ ಮಾಡುತ್ತಿದ್ದರು. ವಿಶ್ವಬಂಧುವಾದ ಶ್ರೀಕೃಷ್ಣನ ಧರ್ಮ ವಿಶ್ವಧರ್ಮವೆಂದು ಅವರು ಸಾರಿದರು.

ಉತ್ಸವ ಮುಗಿದ ಮೇಲೆ ಒಬ್ಬ ತರುಣ ಸನ್ಯಾಸಿ ಬಂದು ವಾಸುವನ್ನು ಕಂಡ.

"ಎಲ್ಲಾ ಅನುಕೂಲವಾಗಿತ್ತೇ ಸ್ವಾಮಿಗಳೇ. ಇತ್ತಕಡೆ ಬಂದಾಗ ತಾವು ಆಶ್ರಮಕ್ಕೆ ತಪ್ಪದೆ ಬಂದು ಹೋಗಬೇಕು."

"ನನಗೆ ಹೋಗುವ ಯೋಚನೆಯೇ ಇಲ್ಲವಲ್ಲಾ. ನೀವು ಮಾಡುತ್ತಿರುವ ಮಹದ್ಕಾರ್ಯ ನೋಡಿ ನಾನೂ ಇಲ್ಲಿಯೇ ನಿಂತು ನಿಮಗೆ ನೆರವಾಗಬೇಕೆಂದು ಭಗವತ್ಪ್ರೇರಣೆಯಾಗಿದೆ."

ವಾಸು ಸ್ವಾಮಿಯನ್ನು ದಿಟ್ಟಿಸಿ ನೋಡಿದ.

ಸ್ವಾಮಿ ಶಂಕರಾನಂದರು ಸ್ವಾಮಿಗಳೆನಿಸಿಕೊಂಡಿದ್ದರೂ ಕಾವೀವೇಷ ಧರಿಸುತ್ತಿರಲಿಲ್ಲ. ಕಾವೀಧರಿಸುವ ಒಬ್ಬ ಸನ್ಯಾಸಿ ಇದ್ದರೆ ಆಶ್ರಮಕ್ಕೂ ಪ್ರಯೋಜನವಿದೆಯೆಂದು ವಾಸು ಯೋಚಿಸಿದ.

ವಾಸುವಿಂದ ಉತ್ತರ ಬಾರದಿರಲು ಸ್ವಾಮಿಗಳು

"ಹಿಂದೆಯೊಂದು ಆಶ್ರಮದಲ್ಲಿದ್ದೆ. ನನಗೆ ಆಶ್ರಮ ಕೆಲಸದ ಅನುಭವವಿದೆ."

"ಯಾವ ಆಶ್ರಮದಲ್ಲಿದ್ದಿರಿ ಸ್ವಾಮಿಜಿ."

"ಪಳನೀಬೆಟ್ಟದ ಹತ್ತಿರವಿರುವ ಸ್ವಾಮಿ ಶಾಂಭವಾನಂದರ ಬಳಿ ಇದ್ದೆ."

"ಅದನ್ನೇಕೆ ಬಿಟ್ಟುಬಂದಿರಿ ?"

"ಸ್ವಾಮಿ ಶಾಂಭವಾನಂದರ ಕೈವಲ್ಯದ ತರುವಾಯ ಉತ್ತರಾಧಿಕಾರಕ್ಕೆ ಬಂದ ಸ್ವಾಮಿಗಳಿಗೂ ನನಗೂ ಕೂಡಲಿಲ್ಲ. ಹೊಸ ಸ್ವಾಮಿಗಳು ಶಾಂಭವಾನಂದ ಶಿಷ್ಯರ ಮೇಲೆ ಬಿರುಗಣ್ಣು ಬೀರತೊಡಗಿದರು."

"ನಿಮ್ಮ ಹೆಸರೇನು ಸ್ವಾಮಿಗಳೇ ?"

"ಸ್ವಾಮಿ ಸಿದ್ಧಾನಂದ. ನನಗೆ ಬೇಕಾದ ಕೆಲಸ ನೀವು ವಿಧಿಸಬಹುದು."

"ನಮ್ಮ ಅತಿಥಿಗೃಹದ ವ್ಯವಸ್ಥೆ ನೋಡಿಕೊಳ್ಳುವಿರಾ ಸ್ವಾಮಿಗಳೇ. ಇಲ್ಲಿಗೆ ಲೌಕಿಕ ಭಕ್ತರಲ್ಲದೆ ಸನ್ಯಾಸಿಗಳು, ವೈದಿಕರು ಬರುತ್ತಾರೆ. ಅವರ ಯೋಗಕ್ಷೇಮ ನಿಮ್ಮಂತಹವರು ನೋಡಿಕೊಂಡರೆ ಒಳ್ಳೆಯದು."

"ಆಗಬಹುದು."

ಆಶ್ರಮದ ಉತ್ಸವ ಯಶಸ್ವಿಯಾಗಿ ನಡೆದು ಆಶ್ರಮಕ್ಕೆ ವಿಶೇಷ ಕೀರ್ತಿಯನ್ನು ತಂದಿದ್ದುದಲ್ಲದೆ ಅಪಾರ ಹಣವನ್ನು ತಂದಿದ್ದಿತು. ಸೇವಾ ಕಾರ್ಯದಲ್ಲಿ ಭಾಗವಹಿಸಿದ ಕಲಾವಿದರು, ವಿದ್ವಾಂಸರನ್ನು ಯೋಗ್ಯವಾಗಿ ಪುರಸ್ಕರಿಸಿ, ಅವರೆಲ್ಲರ ಕೃತಜ್ಞತೆಗೂ ವಾಸು ಪಾತ್ರನಾಗಿದ್ದ. ಜನ ಸಾಮಾನ್ಯರಲ್ಲಿ, ಗಣ್ಯವರ್ತಕರಲ್ಲಿ, ಮಾನ್ಯಮಂತ್ರಿಗಳಲ್ಲಿ ವಾಸು ಧಾರಾಳ ವಾಗಿ ಓಡಿಯಾಡುತ್ತಿದ್ದ. ಅವನ ಮಾತಿಗೆ ಪ್ರತಿ ಹೇಳುವವರಿಲ್ಲ.

ವಾಸುವಿನ 'ಶಿಫಾರಸು' ಬಂದರೆ ದೊಡ್ಡ ದೊಡ್ಡ ಅಧಿಕಾರಿಗಳು ತಲೆಬಾಗಿ ನಡೆದುಕೊಳ್ಳುತ್ತಿದ್ದರು.

ಸ್ವಾಮಿಜಿಯವರ ಗ್ರಂಥಗಳ ಕನ್ನಡ, ತೆಲುಗು ತಮಿಳು, ಮರಾಟಿ, ಹಿಂದಿ, ಗುಜರಾತಿ ಅನುವಾದಗಳು ಪ್ರಕಟವಾಗಿ ಅವರ ಹೆಸರು ದೇಶಾದ್ಯಂತ ಮೆರೆದಾಡಿತು.

ಯೋಗಿನಿ ಅಮ್ಮನವರ ರಿಕಾರ್ಡುಗಳು ಪ್ರವೇಶಮಾಡದ ಎಡೆಯೇ ಉಳಿಯಲಿಲ್ಲ. ಮುಸ್ಲಿಮರ ಚಹಾ ಅಂಗಡಿಗಳಲ್ಲಿ ಕೂಡ ಅವರ 'ನೀನ್ಯಾಕೋ ನಿನ್ನ ಹಂಗ್ಯಾಕೋ' ವಿಜೃಂಭಿಸಿತು.

ಆದರೆ ವಿಧಿ ತನ್ನ ಕಣ್ಣುಮುಚ್ಚಾಲೆ ಆಟ ಆಡದೆ ಬಿಡಲಿಲ್ಲ. ನಂದನ ವನದಂತಿದ್ದ ಋಷಿಧಾಮ ದುಃಖದಾಗರವಾಯಿತು. ಯೋಗಿನಿ ಅಮ್ಮನವ ರಂತೂ ಬೊಂಬಾಯಿವಾಲಾ ಅವರ ಪತ್ರನೋಡಿ ಭೂಮಿಗಿಳಿದು ಹೋದರು

"ಪೂಜ್ಯ ಮಾತಾಜೀ,

'ಭಗವಾನ್ ಮಂದಿರ'ದ ಆರಂಭೋತ್ಸವಕ್ಕೆ ಬಂದ ಮಿತ್ರರು ಇಲ್ಲಿನ ಸ್ಥಿತಿಗತಿಗಳನ್ನು ವರ್ಣಿಸಿರಬಹುದು. ಆಕಾಲಕ್ಕೆ ಆಶ್ರಮಕ್ಕೆ ಬಂದು ಎಲ್ಲರ ಸಂತೋಷದಲ್ಲಿ ಭಾಗಿಗಳಾಗಬೇಕೆಂದು ನಾನೂ ಷಿರೀನ್ ನಿಶ್ಚಯಿಸಿ ಕೊಂಡು, ನಿಮ್ಮ ಕರೆಯನ್ನು ಅತ್ಯಾತುರದಿಂದ ನಿರೀಕ್ಷಿಸುತ್ತಿದ್ದೆವು. ಭಗವಂತನಿಗೆ ಕರುಣೆ ಬರಲಿಲ್ಲವೆಂದು ಹೇಳಬೇಕೋ, ಅಪಾರ ಕರುಣೆ ಬಂತೆಂದು ಹೇಳಬೇಕೋ ನಾನು ಕಾಣೆ.

ಅಲ್ಲಿ ಉತ್ಸವ ನಡೆದಿರುವಾಗಲೇ ನನ್ನ ಷಿರೀನ್ ಭಗವಂತನ ಸನ್ನಿಧಿಗೆ ನಡೆದುಬಿಟ್ಟಳು. ನಾನು ಉದ್ದೇಶಪೂರ್ವಕವಾಗಿಯೇ ತಡಮಾಡಿ ಈ ಸುದ್ದಿ ತಿಳಿಸುತ್ತಿದ್ದೇನೆ.

ನಾನು ವ್ಯಸನಪಡುತ್ತಿಲ್ಲ. ವ್ಯಸನಪಟ್ಟರೆ ಶ್ರೀ ಗುರುದೇವನಿಗೆ ದ್ರೋಹ ವೆಸಗಿದಂತಾಗುತ್ತದೆ. ವ್ಯಸನಪಡುವುದಕ್ಕೆ ನನಗೆ ಚೇತನವಾದರೂ ಎಲ್ಲಿದೆ ? ಷಿರೀನ್ ಜತೆಗೆ ನನ್ನ ಪ್ರಾಣವೂ ಹೊರಟೇ ಹೋಗಿದೆ.

ಆಕೆ ಎಂಥ ನಿರ್ಮಲ, ಸುಂದರ, ದೈವಿಕ ಜೀವನ ನಡೆಸಿದಳೋ ಅದಕ್ಕನುಗುಣವಾದ ಸಾವನ್ನೇ ಕಂಡಳು. ತಾಯಿಯ ಮನೆಗೆ ಮಗಳು ಹೋಗುವಂತೆ ನಸುನಗುತ್ತಾ ಪ್ರಯಾಣ ಬೆಳಸಿದಳು. ಕೊನೆಗೊಮ್ಮೆ ನಿಮ್ಮನ್ನು ನೋಡಲಿಲ್ಲವಲ್ಲಾ – ನಿಮ್ಮ ಶ್ರೀ ಪಾದರೇಣುವನ್ನು ತಲೆಯಲ್ಲಿ ಮುಡಿಯಲಿಲ್ಲವಲ್ಲಾ ಎಂದು ದುಃಖಿಸಿದಳು.

ಷಿರೀನ್ ಇಷ್ಟುದಿನ ಬದುಕಿದ್ದುದು ಮುಂಬಯಿಯ ಎಲ್ಲಾ ಪ್ರಸಿದ್ಧ ಡಾಕ್ಟರುಗಳಿಗೂ ಬಗೆಹರಿಯದ ಸಮಸ್ಯೆಯಾಗಿತ್ತು. ನಿಮ್ಮ ಪ್ರೇಮದ ಪ್ರಭಾವದಿಂದ ಅವಳ ಪ್ರಾಣ ನಾಲ್ಕು ದಿವಸ ಹೆಚ್ಚಾಗಿ ಈ ಲೋಕದಲ್ಲಿ ನಿಂತಿತು. ಷಿರೀನಳ ಕೊನೆಯ ದಿವಸಗಳನ್ನು ಅಷ್ಟು ಪ್ರಿಯವೂ, ಸುಂದರವೂ, ಶಾಂತಿಯುತವೂ ಮಾಡಿ ನೀವು ಅವಳ ಆತ್ಮೋದ್ಧಾರ ಮಾಡಿರುವಿರಿ. ಇದಕ್ಕೆ ನಾನು ಋಣಿಯೆಂದು ಹೇಳಿದರೆ ಸಾಲದು.

ಇಂತು ನಿಮ್ಮ ಸೇವಕ 'ಬೊಂಬಾಯಿವಾಲಾ'"

ದುಃಖದಾವೇಗದಲ್ಲಿ ಬೊಂಬಾಯಿವಾಲಾ ಅವರಿಗೆ ನಾಲ್ಕು ಸಮಾಧಾನದ ಮಾತು ಬರೆಯಬೇಕೆಂಬುದೂ ಯೋಗಿನಿ ಅಮ್ಮನವರಿಗೆ ಹೊಳೆಯದಾಯಿತು. ಮಿಸ್. ಎಮಿಲಿ ಜ್ಞಾಪಿಸಿದರು

"ಏನು ಬರೆಯಲಿ ಮಿಸ್. ಎಮಿಲಿ. ನನ್ನ ಹೃದಯ ಒಡೆದುಹೋಗುತ್ತಿದೆ."

"ಎಲ್ಲರಿಗೂ ಧೈರ್ಯಕೊಟ್ಟು ಸಮಾಧಾನ ಹೇಳಲು ಶಕ್ತರಾದ ನೀವೇ ಹೀಗೆ ದುಃಖಕ್ಕೆ ಸೋತುಬಿಟ್ಟರೆ...."

"ಎಮಿಲಿ, ಇತರರಿಗೆ ದುಃಖಬಂದಾಗ ಸಮಾಧಾನ ಹೇಳುವುದು ಎಷ್ಟು ಸುಲಭ. ದುಃಖ ತನಗೇ ಒದಗಿದಾಗಲಲ್ಲವೇ ಅದರ ಸ್ವರೂಪ ಗೊತ್ತಾಗುವುದು."

"ಏನು ಬರೆಯಬೇಕು ಹೇಳಿದರೆ ನಿಮ್ಮ ಪರವಾಗಿ ನಾನೇ ಬರೆದು ಹಾಕುತ್ತೇನೆ."

"ಬೇಡ ಬೇಡ – ನಾನೇ ಬರೆಯುತ್ತೇನೆ."

ಕಾಗದ ಬರೆಯುವುದು ಯೋಗಿನಿ ಅಮ್ಮನವರಿಗೆ ಸುಲಭ ಸಾಧ್ಯವಾಗಿರಲಿಲ್ಲ. ನಾಲ್ಕಾರು ಕಾಗದಗಳನ್ನು ಬರೆದು ಹರಿದುಹಾಕಿ, ಕೊನೆಗೆ ಒಂದು ಕಾಗದ ಮುಗಿಸಿ ಎಮಿಲಿಯ ಕೈಗಿತ್ತು

"ಓದಿ" ಎಂದು ಹೇಳಿದರು.

"ಪ್ರಿಯ ಸೋದರ ಬೊಂಬಾಯಿವಾಲಾ,

ನಾವು ಋಣಾನುಬಂಧದಲ್ಲಿ, ಪೂರ್ವಜನ್ಮ ಸಂಸ್ಕಾರದಲ್ಲಿ ನಂಬಿಕೆಯುಳ್ಳವರು. ಆತ್ಮ ಅನಂತಯಾತ್ರೆ ಕೈಗೊಂಡಿರುವ ಯಾತ್ರಿಕನಂತೆ. ಅದು ಕಾಲಕ್ಕೆ ಬೇರೆ ಬೇರೆ ದೇಹಗಳನ್ನು ಆಶ್ರಯಿಸುತ್ತದೆ; ಬೇರೆ ಬೇರೆ ಸಂಬಂಧ ಬೆಳಸುತ್ತದೆ.

ನನ್ನ ಮತ್ತು ಷಿರೀನರ ಸಂಬಂಧ ಯೋಚಿಸುವಾಗ ಈ ತತ್ತ್ವದ ತಿರುಳು ಮತ್ತಷ್ಟು ನನಗೆ ಮನದಟ್ಟಾಗುತ್ತದೆ. ನಮ್ಮ ಪರಿಚಯ ಸ್ನೇಹವಾಯಿತು. ಸ್ನೇಹ ನಿಷ್ಕಳಂಕ ಪ್ರೇಮವಾಯಿತು. ಷಿರೀನ್ ಯಾವದೋ ಜನ್ಮದಲ್ಲಿ ನನ್ನ ಮಗಳಾಗಿದ್ದರೆಂಬ ಭಾವನೆ ನನ್ನ ಮನಸ್ಸಿನಲ್ಲಿ ಬೇರೂರಿದೆ. ಆಕೆಯ ನಿಧನದ ವಾರ್ತೆ ಕೇಳಿ ನನ್ನ ಹೃದಯ ಹಿಂಡಿಹೋಗಿದೆ.

ಈ ಹೊತ್ತಿನಲ್ಲಿ ಕೆಲವು ಸಂಪ್ರದಾಯದ ಮಾತುಗಳನ್ನು ಹೇಳಿ ಸಂತೈಸುವುದು ವಾಡಿಕೆ. ಈ ದುಃಖವನ್ನು ಅಣಗಿಸಬಲ್ಲ ಶಕ್ತಿ ಯಾವ ಮಾತಿಗೂ ಇಲ್ಲವೆಂದು ನಾನು ದೃಢವಾಗಿ ಬಲ್ಲೆ.

ಹೋದ ವಸ್ತು ಮರಳಿ ಹಿಂದಕ್ಕೆ ಬರುವುದಿಲ್ಲ. ಆದರೆ ಮೃತ್ಯುವೂ ಮುಟ್ಟಲಾಗದ ಷಿರೀನರ ಶಾಂತಿ, ಪ್ರೇಮ, ತ್ಯಾಗ, ವಿಶುದ್ಧಾಂತಃಕರಣ ಅನವರತ ನಮ್ಮ ಜತೆಯಲ್ಲಿದೆಯೆಂಬ ಭಾವನೆಯಿಂದ ನಾವು ಈ ದುಃಖ ಸಹಿಸೋಣ.

ಇಂತು ನಿಮ್ಮ ದುಃಖದಲ್ಲಿ ಭಾಗಿಯಾದ – 'ಶ್ರೀ'

ಎಮಿಲಿ ಕಾಗದವನ್ನು ಮಡಿಸಿ ಲಕೋಟೆಗೆ ಹಾಕಿ ವಿಳಾಸಬರೆಯುತ್ತಾ

"ತಾಯೀ, ನಿಮ್ಮ ಕಾಗದದ ಕೊನೆಯ ಪಂಕ್ತಿಯನ್ನು ನಾನು ನೆನಪಿಸುತ್ತೇನೆ. ಷಿರೀನರ ಆತ್ಮ ನಿಮ್ಮ ಶ್ರೀ ಚರಣಗಳಲ್ಲಿ ಮುಕ್ತಿ ಪಡೆದಿದೆ."

ಯೋಗಿನಿ ಅಮ್ಮನವರು ಮಾತನಾಡಲಿಲ್ಲ. ದೃಷ್ಟಿಯಿಲ್ಲದ ನೋಟ ಬೀರಿದರು. ಅವರ ಮನಸ್ಸು ಎಲ್ಲಿಯೋ ಹಾರಾಡುತ್ತಿತ್ತು.

ಸ್ವಾಮಿಜಿಯವರ ಮನಸ್ಸನ್ನೂ ಷಿರೀನರ ನಿಧನ ಹಿಡಿವಲುಗಿಸಿತ್ತು. ತಮ್ಮ ದುಃಖ ತೋರಿಸಿಕೊಳ್ಳಲಿಲ್ಲ. ಬೊಂಬಾಯಿವಾಲಾ ತಮಗೆ ಬರೆದಿದ್ದ ಕಾಗದ ನೋಡಿಕೊಂಡು, ಎದ್ದು, ಬೆಟ್ಟದ ಕಡೆಗೆ ನಡೆದುಬಿಟ್ಟರು.

ಅಂದು ಸ್ವಾಮಿಜಿಯವರ ದರ್ಶನ ಯಾರಿಗೂ ಲಭಿಸಲಿಲ್ಲ.

ಕರ್ತವ್ಯ ವಾಸುವಿನ ನೋವನ್ನು ಮರೆಮಾಡಿತ್ತು. ಬೊಂಬಾಯಿವಾಲಾ ಬರೆದ ಕಾಗದದಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು ಆಶ್ರಮಕ್ಕೆ ಅರ್ಪಿಸಿ ಷಿರೀನರ ಹೆಸರಿನಲ್ಲಿ 'ಕ್ಷಯರೋಗ ಚಿಕಿತ್ಸಾಲಯ' ವನ್ನು ತೆರೆಯಬೇಕೆಂದು ಕೋರಿದ್ದರು. ತನ್ನ ಹೆಗಲಮೇಲೆ ಬಿದ್ದ ಈ ಹೊಸ ಜವಾಬ್ದಾರಿಯನ್ನು ವಾಸು ಆಶ್ರಮದ ಮುಖ್ಯ ಕಾರ್ಯಕರ್ತರಲ್ಲಿ ಚರ್ಚಿಸುತ್ತಿದ್ದ.

ಷಿರೀನರ ಸಾವು ಆಶ್ರಮದ ಆಕಾಶದಲ್ಲಿ ಕಾರ್ಮೋಡಗಳನ್ನು ತಂದಿತು. ಎಂದಿನಂತೆ ಕೆಲಸಕಾರ್ಯಗಳು ನಡೆಯುತ್ತಿದ್ದರೂ ಯೋಗಿನಿ ಅಮ್ಮನವರ ಮನಸ್ಸು ಸಮಾಧಾನಕ್ಕೆ ಬಂದಿರಲಿಲ್ಲ. ಅವರ ಭಜನೆಯಲ್ಲಿ ಮೊದಲಿನ ಗೆಲುವು ಇರಲಿಲ್ಲ.

ಸ್ವಾಮಿಜಿ ಬೆಟ್ಟದ ಕಡೆ ಹೋಗುವುದು ಹೆಚ್ಚುತ್ತ ಬಂದಿತು.

೨೬

ಸ್ವಾಮಿ ಸಿದ್ಧಾನಂದರ ಉತ್ಸಾಹ, ಲವಲವಿಕೆ, ಚಟುವಟಿಕೆ ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿತ್ತು. ಆಶ್ರಮದ ಸಮಸ್ತ ಕಾರ್ಯಭಾರ, ಸಮಸ್ತ ಜವಾಬುದಾರಿ ತಮ್ಮ ಮೇಲೆ ಬಿದ್ದಿದ್ದೆ ಎಂದು ಸ್ವಾಮಿ ಭಾವಿಸತೊಡಗಿದರು. ಅತಿಥಿಗಳ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದುದು ಮಾತ್ರವಲ್ಲದೆ, ರೋಗಿಗಳ ವಿಷಯ, ಅಡಿಗೆಯ ಮನೆಯ ವಿತರಣೆ, ಕ್ಷಯರೋಗ ಚಿಕಿತ್ಸಾಲಯದ ಕಟ್ಟಡ ನಿರ್ಮಾಣಗಳೆಲ್ಲವನ್ನೂ ಸ್ವಾಮಿ ವಿಚಾರಿಸಿಕೊಳ್ಳುತ್ತಿದ್ದರು. ಸ್ವಾಮಿಗಳ ಕರ್ತವ್ಯದಕ್ಷತೆಯಿಂದ ಆಶ್ರಮಕ್ಕೆ ತುಂಬ ಪ್ರಯೋಜನವಾಗಿತ್ತು.

ಆಶ್ರಮಕ್ಕೆ ಬರುತ್ತಿದ್ದ ನೂರಾರು ಲೌಕಿಕ ಭಕ್ತರ ವಿಷಯ ಸ್ವಾಮಿ ಸಿದ್ಧಾನಂದರಿಗೆ ಸ್ವಲ್ಪವೂ ಭಯವಿರಲಿಲ್ಲ. ಆದರೆ ಆಗಾಗ್ಗೆ ಬರುತ್ತಿದ್ದ

ಸನ್ಯಾಸಿಗಳು, ಜೋಗಿಗಳು, ಜಂಗಮರು ಸ್ವಾಮಿಗಳ ಚಿತ್ತಸ್ಥೈರ್ಯವನ್ನು ಅಲುಗಾಡಿಸುತ್ತಿದ್ದರು.

ಆಶ್ರಮಕ್ಕೆ ಬರುತ್ತಿದ್ದ ಸನ್ಯಾಸಿಗಳು, ಕೆಲವು ದಿನ ಅಲ್ಲಿಯೇ ಉಳಿದುಕೊಂಡು ಆಶ್ರಮದ ಆತಿಥ್ಯ ಸ್ವೀಕರಿಸುತ್ತಿದ್ದರು. ಇತರ ಭಕ್ತರಂತೆ ಅವರೂ ದರ್ಶನವೇಳೆಯಲ್ಲಿ ಸಭಾಮಂದಿರದಲ್ಲಿ ಕುಳಿತು ಧ್ಯಾನಮಾಡುತ್ತಿದ್ದರು. ಸ್ವಾಮಿಜಿಯವರಿಗೆ ಉದ್ದಂಡ ಪ್ರಣಾಮ ಮಾಡುತ್ತಿದ್ದರು.

ಈ ಸಂಪ್ರದಾಯವನ್ನು ಮುರಿದವನು ಬಾವಾಜಿ. ಅವನ ನೀಳಗಡ್ಡ, ಉಗ್ರಮುಖ, ಗಂಭೀರವಾದ ನಿಲುವು ಎಂಥವರಿಗೂ ಭಯವನ್ನುಂಟು ಮಾಡುತ್ತಿತ್ತು. ಬಾವಾಜಿಯನ್ನು ನೋಡಿದರೆ ಸ್ವಾಮಿ ಸಿದ್ಧಾನಂದರು ಗಡಗಡನೆ ನಡುಗುತ್ತಿದ್ದರು.

ಬಾವಾಜಿ ಆಶ್ರಮದಲ್ಲಿ ಇಳಿದುಕೊಂಡಿರಲಿಲ್ಲ. ಅವನು ಎಲ್ಲಿರುತ್ತಾನೆಂಬುದೇ ಎಲ್ಲರಿಗೂ ಸಮಸ್ಯೆಯಾಗಿತ್ತು. ಯಾವಾಗಲೋ ಬಂದು ಸಭಾಮಂದಿರದ ಹೊರಗೆ ನಿಂತು ದರ್ಶನ ನೋಡಿಕೊಂಡು ಭಜನೆ ಕೇಳಿಕೊಂಡು ಹೊರಟುಹೋಗುತ್ತಿದ್ದ. ಆಶ್ರಮದ ಪ್ರಸಾದವನ್ನು ಕೈಯಿಂದ ಮುಟ್ಟುತ್ತಿರಲಿಲ್ಲ.

ಬಾವಾಜಿ ಊರಿನಲ್ಲಿ ಐದುಮನೆ ಭಿಕ್ಷವೆತ್ತಿ, ತನ್ನ ಬೋಗುಣಿಯಲ್ಲಿ ಸಂಗ್ರಹವಾಗುತ್ತಿದ್ದ ಆಹಾರದಲ್ಲಿ ಅರ್ಧವನ್ನು ಭಿಕ್ಷುಕರಿಗೆ ಹಂಚಿ, ಉಳಿದರ್ಧ ತಿಂದು ತೃಪ್ತನಾಗುತ್ತಿದ್ದ.

ಆಶ್ರಮದಲ್ಲಿಯೇ ಪ್ರಸಾದ ಸ್ವೀಕರಿಸಬೇಕೆಂದು ಒಂದು ದಿನ ಸ್ವಾಮಿ ಸಿದ್ಧಾನಂದರು ಬಾವಾಜಿಗೆ ಹೇಳಿದಾಗ ಅವನು ತನ್ನ ಕೆಂಗಣ್ಣು ತೆರೆದು, ಕೈಯಲ್ಲಿದ್ದ ಬೋಗುಣಿ ತೋರಿಸಿ ಹೊರಟುಹೋಗಿದ್ದ. ಅಂದಿನಿಂದ ಅವನನ್ನು ಮಾತನಾಡಿಸುವ ಧೈರ್ಯ ಸಿದ್ಧಾನಂದರು ಮಾಡಲಿಲ್ಲ.

ಬಾವಾಜಿಯ ಚಲನವಲನ ವಾಸೂವಿಗೂ ಕಳವಳವನ್ನುಂಟು ಮಾಡಿತ್ತು. ಆಶ್ರಮಕ್ಕೆ ಬರಬೇಡವೆಂದು ಬಾವಾಜೀಗೆ ಹೇಳಲು ಸಾಧ್ಯವಿರಲಿಲ್ಲ.

ಯೋಗಿನಿ ಅಮ್ಮನವರ ಲಕ್ಷ್ಯವೂ ಬಾವಾಜಿಯ ವಿಚಿತ್ರ ನಡೆವಳಿಕೆಯ ಮೇಲೆ ಬಿತ್ತು. ಶುಕ್ರವಾರದ ಭಜನೆಯಾಗಿತ್ತು. ಭಕ್ತಾದಿಗಳು ಯೋಗಿನಿ

ಅಮ್ಮನವರಿಗೆ ಕಾಣಿಕೆಗಳನ್ನರ್ಪಿಸಿ ಸಾಷ್ಟಾಂಗ ನಮಸ್ಕಾರಮಾಡುತ್ತಿದ್ದರು. ಯೋಗಿನಿ ಅಮ್ಮನವರು ಎಲ್ಲರನ್ನೂ ಆಶೀರ್ವದಿಸುತ್ತಿದ್ದರು. ಆ ದೃಶ್ಯ ನೋಡುತ್ತ ನಿಂತಿದ್ದ ಬಾವಾಜಿಯ ಮುಖದಲ್ಲಿ ತಿರಸ್ಕಾರದ ನಗೆ ತೇಲು ತ್ತಿದ್ದುದನ್ನು ಯೋಗಿನಿ ಅಮ್ಮನವರು ನೋಡಿದ್ದರು.

"ಈ ಬಾವಾಜಿ ಯಾರು ?"

ಎಂದು ವಾಸುವನ್ನು ಕೇಳಿದರು.

"ಅವನು ಯಾರೋ ಯಾರಿಗೂ ಗೊತ್ತಿಲ್ಲ. ಬಹಳ ವಿಚಿತ್ರ ಪ್ರಾಣಿ. ಯಾರ ಕೈಯಲ್ಲಿಯೂ ಮಾತನಾಡುವುದಿಲ್ಲ. ಮೌನವ್ರತ ಪರಿಪಾಲಿಸು ತ್ತಿದ್ದಾನೆಂದು ಕಾಣುತ್ತದೆ. ಸ್ವಾಮಿ ಸಿದ್ಧಾನಂದರು ಎಷ್ಟು ಉಪಚರಿಸಿದರೂ ಒಪ್ಪತ್ತೂ ಆಶ್ರಮದ ಪ್ರಸಾದ ಸ್ವೀಕರಿಸಿಲ್ಲ."

ಯೋಗಿನಿ ಅಮ್ಮನವರು ಏನನ್ನೋ ಜ್ಞಾಪಿಸಿಕೊಳ್ಳುತ್ತ

"ಈ ಬಾವಾಜಿಯನ್ನು ಎಲ್ಲಿಯೋ ನೋಡಿದಂತಿದೆ. ಥಟ್ಟನೆ ನೆನಪಾಗು ಲೊಲ್ಲದು."

"ಎಲ್ಲಿ ನೋಡಿರಬಹುದು. ನಮ್ಮ ದೇಶದಲ್ಲಿ ಇಂಥ ಭಿಕ್ಷುಕರಿಗೆ ಯಾವ ಕೊರತೆಯಿದೆ ?"

"ಅವನು ಭಿಕ್ಷುಕನಾಗಿರಲಾರ. ನಾವು ಜೋಗೇಶ್ವರಿ ನೋಡಲು ಹೋಗಿದ್ದಾಗ ಒಬ್ಬ ಬಾವಾಜಿ ನನ್ನನ್ನೇ ದುರುಗುಟ್ಟಿಕೊಂಡು ನೋಡಿದ್ದು ಜ್ಞಾಪಕವಿದೆಯೇ ? ಯಾವನೋ ಪಟಿಂಗ ಎಂದು ನೀವು ಹೇಳಿದಿರಿ ?"

"ಹೂ! ಜ್ಞಾಪಕವಿದೆ – ಅವನೇ ಇವನು ಎನ್ನುವೆಯೇನು ?"

"ಅನುಮಾನ ಅಷ್ಟೇ !"

"ಛೆ! ಛೆ! ಎಲ್ಲಿಯ ಜೋಗೇಶ್ವರಿ ಎಲ್ಲಿಯ ರಾಮಗಿರಿ! ಅವನು ಇಲ್ಲಿ ಏಕೆ ಬರುತ್ತಾನೆ."

ವಾಸು ವಿವರಣೆ ಯೋಗಿನಿ ಅಮ್ಮನವರ ಮನಸ್ಸಿಗೆ ತೃಪ್ತಿಯನ್ನುಂಟು ಮಾಡಲಿಲ್ಲ. ವಾಸು ಹೇಳಿದುದನ್ನು ನಂಬಲೆತ್ನಿಸಿದರು. ಆದರೆ ಬಾವಾಜಿಯ ಉಗ್ರಮುಖ ಬಂದು ಎದುರಿಗೆ ನಿಲ್ಲುತ್ತಿತ್ತು.

ಒಂದು ದಿನ ಸ್ವಾಮಿ ಶಂಕರಾನಂದರು, ಮೇಜರ್ ಸ್ಕಿನ್ನರ್ ಅವರ

ಮುಂದೆ ಒಂದು ವಿಚಿತ್ರ ವಿಷಯ ಪ್ರಸ್ತಾಪಿಸಿದರು. ಸ್ಕಿನ್ನರ್ ನಿರುತ್ತರನಾಗಿ ಅವರು ಕೊಟ್ಟ ಹಸ್ತಪ್ರತಿಯ ಹಾಳೆಗಳನ್ನು ಮಗುಚುತ್ತಾ

"ನೀವು ಹೇಳಿದ್ದು ನನಗೆ ಸರಿಯಾಗಿ ಅರ್ಥವಾಗಲಿಲ್ಲ ಸ್ವಾಮಿಜಿ."

"ಅರ್ಥವಾಗುವುದಕ್ಕೆ ಅದರಲ್ಲಿ ಚಿದಂಬರರಹಸ್ಯವೇನಿದೆ ಮೇಜರ್. ನಾನು ಬರೆಯಬೇಕಾದುದನ್ನು ಬರೆದದ್ದಾಯಿತು; ಹೇಳಬೇಕಾದುದನ್ನು ಹೇಳಿದ್ದಾಯಿತು. ನನ್ನ ಸಮಸ್ತ ವಿಚಾರಗಳನ್ನೂ ಸೂತ್ರಪ್ರಾಯವಾಗಿ ಬರೆದು ನಿಮ್ಮ ಕೈಯಲ್ಲಿಟ್ಟಿದ್ದೇನೆ. ಇನ್ನುಮೇಲೆ ನಾನು ಏನು ಹೇಳಿದರೂ ಇವುಗಳ ಪುನರಾವರ್ತನ – ಚರ್ವಿತಚರ್ವಣ."

"ನೀವೇ ಹೀಗೆಂದ ಮೇಲೆ ಇತರರ ಪಾಡೇನು ?"

"ನೀವೂ ನನ್ನನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ ಸ್ಕಿನ್ನರ್."

"ಪ್ರಯತ್ನಪಟ್ಟಿದ್ದೇನೆ ಸ್ವಾಮಿಜಿ."

"ಇಲ್ಲವೆಂದು ನಾನು ಹೇಳಲಾರೆ. ನಿಮ್ಮಲ್ಲಿ ಒಂದು ದೋಷವಿದೆ – ಸ್ಪಷ್ಟವಾಗಿ ಹೇಳಲೇ ?"

"ನೀವು ಹೇಳದೆ ಇನ್ನು ಯಾರು ಹೇಳಬೇಕು."

"ನಿಮ್ಮ ಗುರುವಿನ ಒಂದು ಮಹೋನ್ನತ ಚಿತ್ರವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡಿರಿ. ಆ ನಿಮ್ಮ ಗುರುವಿನ ಸಮಸ್ತಗುಣಗಳೂ ನನ್ನಲ್ಲಿವೆಯೆಂದು ಭ್ರಾಂತರಾದಿರಿ. ಆದರೆ ನಾನು ಆ ಮಟ್ಟಕ್ಕೆ ಬಂದಿಲ್ಲ ಮೇಜರ್. ನನ್ನ ದೇಹವೊಂದು ಬರಿಯ ಬಿದಿರು ಕೊಳವೆ."

"ಬಿದಿರು ಕೊಳವೆಯಿಂದ ದಿವ್ಯಗಾನ ಹೊರಬಿದ್ದಿದೆ."

"ಅದು ದಿವ್ಯಗಾನವಲ್ಲ – ಸಪ್ತ ಸ್ವರಗಳ ಸಂಯೋಜನೆ."

"ನೀವು ಯಾವದಕ್ಕೆ ದಿವ್ಯಗಾನವೆನ್ನುವಿರಿ ?"

"ಅನುಭಾವದಿಂದ ಪುಟಗೊಂಡು, ಹೃದಯವನ್ನು ಭೇದಿಸಿಕೊಂಡು ಬರುವ ಆ ಮಹಾಪ್ರವಾಹವೇ ದಿವ್ಯಗಾನ."

"ನಿಮ್ಮ ನಿರಪೇಕ್ಷ ಜೀವನ ಅನುಭಾವದ ಕುರುಹಲ್ಲವೇ ?"

"ಮಾಯೆ ಬಲು ಮಾಯಾವಿನಿ. ಅವಳು ಒಬ್ಬೊಬ್ಬರನ್ನು ಒಂದೊಂದು ಬಗೆಯಲ್ಲಿ ಕಾಡುತ್ತಾಳೆ. ಸಂಸರ್ಗದೋಷದಿಂದ ದೂರವಾಗಿರಲು ನಾನು ಬೆಟ್ಟಕ್ಕೆ ಹೋಗುತ್ತೇನೆ. ಅಲ್ಲಿ – ನಿಸರ್ಗದ ಮಡಿಲಲ್ಲಿ – ಪ್ರಕೃತಿಯ

ಸಹೇತುಕ ಸೃಷ್ಟಿಯ ಸಂಗದಲ್ಲಿ ಮೈಮರೆಯಲೆತ್ನಿಸುತ್ತೇನೆ. ಶನಿಕಾಟ ತಪ್ಪಿಸಿ ಕೊಳ್ಳಲು ದೇಶಾಂತರ ಹೋದವನ ಗತಿಯಾಗಿದೆ ನನ್ನದು ?"

"ಶನಿಕಾಟ ತಪ್ಪಿಸಿಕೊಳ್ಳಲು ಯತ್ನಿಸಿದವನ ಗತಿಯೇನಾಯಿತು ?"

"ಒಬ್ಬನಿಗೆ ಏಳುವರ್ಷ ಶನಿಕಾಟವಿದೆಯೆಂದು ಅವನ ಜ್ಯೋತಿಷಿ ಹೇಳಿದನಂತೆ. ಊರಿನಲ್ಲಿದ್ದರೆ ತಾನೆ ಈ ಶನಿ ಬಂದು ನನ್ನನ್ನು ಕಾಡುವುದು ಎಂದು ಅವನು ನಿಲ್ಲಲ್ಲಿ ನಿಲ್ಲದೆ, ಕೂತಲ್ಲಿ ಕೂಡದೆ, ಮಲಗಿದಲ್ಲಿ ಮಲಗದೆ ಏಳು ವರ್ಷ ಕಳೆದುಕೊಂಡು ಊರಿಗೆ ಬಂದು ಜ್ಯೋತಿಷಿಗೆ ಹೆಮ್ಮೆಯಿಂದ 'ನೋಡಿದೆಯಾ, ನಿನ್ನ ಶನಿಗೆ ಹೇಗೆ ಕೈಕೊಟ್ಟೆ. ಅವನ ಕೈಗೆ ಸಿಕ್ಕದ ಹಾಗೆ ಊರೂರು ತಿರುಗಿದೆ' ಎಂದು ಹೇಳಿದನಂತೆ. ಜ್ಯೋತಿಷಿ ನಕ್ಕು 'ಅಯ್ಯೋ ಹುಚ್ಚಾ ! ಶನಿಕಾಟವೆಂದರೆ ಇನ್ನೇನೆಂದು ಭಾವಿಸಿರುವೆ. ನಿನ್ನ ಮನೆ ಬಿಡಿಸಿ ಅನ್ನವಿಲ್ಲದೆ, ವಿಶ್ರಾಂತಿಯಿಲ್ಲದೆ, ನೆಳಲಿಲ್ಲದೆ ಏಳು ವರ್ಷ ಊರೂರು ಅಲೆಸಿ ತಲ್ಲಾ ಕರ್ಮ ಅದೇ ಶನಿಕಾಟ' ಎಂದು ಹೇಳಿದನಂತೆ."

ಸ್ವಾಮಿಜಿ ಆಡಿದ ಮಾತು ಸ್ಕಿನ್ನರ್ ಮನಸ್ಸಿಗೆ ಥಾರುಣವೇದನೆಯ ನ್ನುಂಟುಮಾಡಿತು.

"ಹರಿದು ಹಂಚಿಹೋಗಿರುವ ನನ್ನ ಚಿತ್ತವನ್ನು ಒಂದುಗೂಡಿಸಬೇಕು ಮೇಜರ್."

"ಹೇಗೆ ಸ್ವಾಮಿಜಿ ?"

"ಅದೇ ನನಗೆ ಗೊತ್ತಿಲ್ಲ."

ಸ್ವಾಮಿಜಿ ಬಿಟ್ಟದಲ್ಲಿ ಹಗಲಿರುಳಿನ ಬಹುಭಾಗ ಕಳೆಯುತ್ತಿದ್ದುದು ಆಶ್ರಮದ ವ್ಯವಸ್ಥಿತ ಕಾರ್ಯಕ್ರಮಕ್ಕೆ ಅಡಚಣೆಯನ್ನುಂಟುಮಾಡಿತ್ತು-ಯೋಗಿನಿ ಅಮ್ಮನವರ ಪಾಠ ಪ್ರವಚನವೂ ನಿಂತುಹೋಗಿತ್ತು. ಈ ವಿಷಯವನ್ನು ಸ್ವಾಮಿಜಿಯವರ ಗಮನಕ್ಕೆ ತರಬೇಕೆಂದು ವಾಸು ಪ್ರಯತ್ನಿಸಿ ಸ್ಕಿನ್ನರ್ ಮುಂದೆ ಪ್ರಸ್ತಾಪಿಸಿದ. ಸ್ವಾಮಿಜಿ ಹೇಳಿದ ಶನಿಕಾಟದ ಕಥೆಯನ್ನು ಸ್ಕಿನ್ನರ್ ವಾಸೂಗೆ ಹೇಳಿದರು.

'ಒಡಕು ದೋಣಿ ನಂಬಿಕೊಂಡು ಹೊಳೆಗೆ ಇಳಿದಂತಾಯಿತು.'

ಎಂದು ವಾಸು ಸಿಡಿಮಿಡಿಗೊಂಡ.

ಸ್ವಾಮಿಜಿ ಸೂರ್ಯೋದಯಕ್ಕೆ ಮುನ್ನವೇ ಬೆಟ್ಟ ಸೇರಿ ಧ್ಯಾನಾಸಕ್ತರಾಗುತ್ತಿದ್ದರು. ಬೆಟ್ಟದ ಮೇಲೆ ಯಾರೂ ಸುಳಿಯದಿದ್ದುದರಿಂದ ಅವರ ಸಾಧನೆ ನಿಷ್ಕಂಟಕವಾಗಿ ಸಾಗುತ್ತಿತ್ತು.

ಒಂದು ದಿನ ಸ್ವಾಮಿಜಿ ಪದ್ಮಾಸನಾಸೀನರಾಗಿ ಬೆಟ್ಟದ ಮೇಲೆ ಅರ್ಧ ನಿಮೀಲಿತರಾಗಿ ಕುಳಿತಿದ್ದಾರೆ. ಅದೇ ಪ್ರಭಾತ ಮೂಡಲಾರಂಭವಾಗಿದೆ· ಇದ್ದಕ್ಕಿದ್ದಂತೆ ಸ್ವಾಮಿಜಿಯ ಮೈಮೇಲೆ ಮಂಜುಗೆಡ್ಡೆ ಕವಿದಂತಾಯಿತು. ಮೈ ಶೀತಳವಾಗಿ ನಡುಗಲಾರಂಭಿಸಿತು. ಭಯಾಕ್ರಾಂತರಾಗಿ ಸ್ವಾಮಿಜಿ ಕಣ್ಣು ಬಿಟ್ಟು ನೋಡಿದರು

ಎದುರಿಗೆ ಅದೇ ಬಾವಾಜಿ.

ಸ್ವಾಮಿಜಿ ಎದ್ದು ಬಾವಾಜಿಗೆ ದೀರ್ಘದಂಡ ಪ್ರಣಾಮಮಾಡಿದರು.

ಸ್ವಾಮಿಜಿಯನ್ನು ಕೂಡಿಸಿ, ಬಾವಾಜಿಯೂ ಪಕ್ಕದಲ್ಲಿ ಕುಳಿತುಕೊಂಡ.

"ಮನಸ್ಸು ಅಲ್ಲೋಲ ಕಲ್ಲೋಲವಾಗಿದೆಯಲ್ಲವೇ ?"

"ಹೌದು – ಬಾಳು............"

"ನೀನೇನೂ ಹೇಳಬೇಡ – ನಾನು ಎಲ್ಲವನ್ನೂ ಬಲ್ಲೆ. ನಿನ್ನ ಸ್ಥಿತಿ ನಿನಗೆ ಗೊತ್ತಿರುವುದಕ್ಕಿಂತ ಚೆನ್ನಾಗಿ ನನಗೆ ಗೊತ್ತಿದೆ."

"ನನ್ನ ಗತಿಯೇನು ?"

"ಈ ಸ್ಥಿತಿಯಲ್ಲಿ ನಿನಗೆ ಗತಿಯೂ ಇಲ್ಲ, ಮತಿಯೂ ಇಲ್ಲ. ನೀನು ಯೋಗಭ್ರಷ್ಟನಾಗುತ್ತಿರುವೆ."

"ಗುರುದೇವಾ............"

"ಗಾಬರಿಯಾಗಬೇಡ. ನಿನ್ನ ಪೂರ್ವಜನ್ಮದ ಸುಕೃತ ನಿನ್ನನ್ನು ಕಾಪಾಡುತ್ತಿದೆ."

"ನಾನೇನು ಮಾಡಬೇಕು ?"

"ನಾನು ಹೇಳುವುದನ್ನು ಮಾಡುವೆಯಾ ?"

"ಖಂಡಿತವಾಗಿ............"

"ಇಲ್ಲಿಂದ ಈ ಕೂಡಲೆ ಹೊರಟುಹೋಗು."

"ಎಲ್ಲಿಗೆ ?"

"ಎಲ್ಲಿಂದ ಬಂದೆಯೆಂಬುದನ್ನು ಬಲ್ಲೆಯೇನು ?"

"ಇಲ್ಲ"

"ಎಲ್ಲಿಗೆ ಹೋಗುವುದು ಎಂದೂ ಕೇಳಬೇಡ."

"ಆಶ್ರಮ!"

"ಅದಕ್ಕೆ ನಿನ್ನ ಶ್ರಮಬೇಕಿಲ್ಲ."

"ಪುನಃ ನಿಮ್ಮನ್ನೆಲ್ಲಿ ಕಾಣುವುದು ?"

"ಏಕೆ ಕಾಣಬೇಕು."

"ನನ್ನ ಮಾರ್ಗ ಸರಿಯೋ ತಪ್ಪೋ ಹೇಳುವವರು ಯಾರು ?"

"ಮೀನಿಗೆ ಈಜು ಕಲಿಸಿದವರು ಯಾರು ?"

"ನನಗೆ ಪುನಃ ತಮ್ಮ ದರ್ಶನ ದೊರೆಯುವುದಿಲ್ಲವೇ ?"

"ದೊರೆಯುತ್ತದೆ. ಎಲ್ಲಿ, ಎಂದು ಕೇಳಬೇಡ."

ಎಂದು ಹೇಳಿ ಬಾವಾಜಿ ಅಲ್ಲಿ ನಿಲ್ಲದೆ ಹೊರಟುಹೋದ. ಅಂದಿನಿಂ ಆಶ್ರಮದ ಒಳಗಾಗಲಿ ಹೊರಗಾಗಲಿ ಯಾರೂ ಅವನನ್ನು ನೋಡಲಿಲ್ಲ.

ಶನಿವಾರ ಸಂಜೆ ಸ್ವಾಮಿಜಿ ತಮ್ಮ ಉಪದೇಶ ಮುಗಿಸಿದರು. ಎಲ್ಲರ ಎದ್ದು ನಿಲ್ಲುವಷ್ಟರಲ್ಲಿ ತಾವೇ ಎದ್ದುನಿಂತು

"ಇನ್ನೊಂದು ಮಾತು ಚಿತ್ತಗೊಟ್ಟು ಲಾಲಿಸಿ. ಈ ವರೆಗೆ ನನ್ನನ ಗುರುವೆಂದು ಭಾವಿಸಿಕೊಂಡು ಭಕ್ತಿಯಿಂದ ನಡೆದುಕೊಳ್ಳುತ್ತ ಬಂದಿರುವಿ ಇದರಿಂದ ನಿಮಗೇನಾದರೂ ಒಳ್ಳೆತಾಗಿದ್ದರೆ ಅದು ನಿಮ್ಮ ಗುರುವಿನ ಮಹಿ ಯಲ್ಲ – ನಿಮ್ಮಲ್ಲಿಯೇ ಅಂತರ್ಗತವಾಗಿರುವ ದೈವತ್ವದ ಪ್ರಭಾವ. ನಿ ಗುರುವೂ ನಿಮ್ಮಂತೆ ಸತ್ಯಾರ್ಥಿ. ಅವನೂ ತನ್ನ ಮಾರ್ಗ ಹುಡುಕಿಕೊ ಬೇಕಾಗಿದೆ.

ಆಶ್ರಮ ಇತ್ತೋಽಪ್ಯತಿಶಯವಾಗಿ ಬೆಳೆದು, ನಾನಾ ಬಗೆಯ ಸತ್ಕಾಯ ಗಳನ್ನು ನಿರ್ವಹಿಸುತ್ತಿದೆ. ಭಗವಂತನ ದಯೆ, ನಿಮ್ಮ ವಿಶ್ವಾಸವೇ ಇದ ಕಾರಣ."

ಸ್ವಾಮಿಜಿ ಏಕೆ ಹೀಗೆ ಮಾತನಾಡುತ್ತಿರುವರೆಂದು ಯಾರಿಗೂ ಅ ವಾಗಲಿಲ್ಲ. ವಾಸು, ರಾಮಸ್ವಾಮಿ ಮುಖ ನೋಡಿದ; ಯೋಗಿನಿ ಅ ನವರು ಮೇಜರ್ ಸ್ಕಿನ್ನರ್ ಮುಖನೋಡಿದರು.

"ನನಗೆ ಕರೆ ಬಂದಿದೆ. ಸದ್ಗುರುವಿನ ಆಜ್ಞೆ ಪರಿಪಾಲಿಸಬೇಕಾದುದು ನನ್ನ ಧರ್ಮ. ನಿಮ್ಮನ್ನು ಬಿಟ್ಟು ಹೋಗುವೆನೆಂದು ವ್ಯಸನಪಡಬೇಡಿ. ನಾನು ಎಲ್ಲಿದ್ದರೂ ಸದಾ ನಿಮ್ಮ ಮಂಗಳವನ್ನು ಹಾರೈಸುತ್ತೇನೆ."

ನೆರೆದಿದ್ದ ಜನ ಸ್ತಂಭೀಭೂತರಾದರು. ಕೆಲವು ಭಕ್ತರು ಧಾವಿಸಿ ಬಂದು ಸ್ವಾಮಿಜಿಯ ಪಾದಗಳ ಮೇಲೆ ಬಿದ್ದರು.

ವಾಸು ಮೆಲ್ಲನೆ ರಾಮಸ್ವಾಮಿಗೆ

"ಯಾರು ಇವನ ಸದ್ಗುರು"

"ಯಾರೋಪ್ಪ – ನಾನು ಕಾಣೆ"

ಎಂದು ಅವನು ಹೇಳಿದ.

ಸ್ವಾಮಿಜಿ ಹೊರಟುಹೋಗುವ ಸುದ್ದಿ ಕಾಳ್ಗಿಚ್ಚಿನಂತೆ ವ್ಯಾಪಿಸಿತು. ಸಾವಿರಾರು ಜನ ಆಶ್ರಮಕ್ಕೆ ಸ್ವಾಮಿಜಿಯವರ ಕೊನೆಯ ದರ್ಶನ ಪಡೆಯಲು ಬಂದರು. ತಾಯಂದಿರು ಮಕ್ಕಳನ್ನು ತಂದು ಸ್ವಾಮಿಜಿಯವರ ಪಾದಗಳ ಮೇಲೆ ಹಾಕಿದರು. ತಂಡತಂಡವಾಗಿ ರೋಗಿಗಳು ಬಂದರು.

ಮೇಜರ್ ಸ್ಕಿನ್ನರ್ ಮಾತ್ರ ಈ ಸುದ್ದಿಕೇಳಿ ಅಸ್ತವ್ಯಸ್ತನಾಗಲಿಲ್ಲ. ಹೃದಯದಲ್ಲಿ ತುಂಬಿದ್ದ ದುಃಖವನ್ನು ತೋಡಿಕೊಳ್ಳಲು ಅವರು ಯತ್ನಿಸಲಿಲ್ಲ.

ಸ್ವಾಮಿಜಿ ಕರುಣಾರ್ದ್ರತೆಯಿಂದ ಸ್ಕಿನ್ನರ್ ತಲೆನೇವರಿಸಿ

"ತುಂಬ ದುಃಖವಾಗಿದೆಯೇ ?" ಎಂದು ಕೇಳಿದರು.

"ಇಲ್ಲವೆನ್ನಲಾರೆ ಸ್ವಾಮಿಜಿ. ಆದರೆ ಅಷ್ಟೇ ಸಂತೋಷವೂ ಆಗಿದೆ."

"ಸಂತೋಷವೇತಕ್ಕೆ ?"

"ತಮ್ಮ ಮುಕ್ತಿಯಿಂದ ನಮ್ಮ ಮುಕ್ತಿಯೂ ಆಗುತ್ತದೆಯೆಂದು ನನ್ನ ಅಂತಃಕರಣ ಹೇಳುತ್ತಿದೆ."

ಯೋಗಿನಿ ಅಮ್ಮನವರನ್ನು ಸಂತೈಸುವುದು ಸ್ವಾಮಿಜಿಗೆ ಸ್ವಲ್ಪ ಪ್ರಯಾಸವಾಯಿತು.

"ನನಗೇನೂ ಹೇಳುವುದಿಲ್ಲವೇ ?" ಎಂದು ಕೇಳಿದರು.

"ಹೊಸದಾಗಿ ಹೇಳಬೇಕಾದದ್ದೇನಿದೆ. ಸತ್ಯವೊಂದೇ ಶಾಶ್ವತ;

ಉಳಿದುದೆಲ್ಲಾ ಕ್ಷಣಿಕ. ಸತ್ಯದ ನೆಲೆ ನಿಮಗೆ ಸಿಕ್ಕಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ."

ವಾಸು ಕಿಡಿಕಿಡಿಯಾಗಿದ್ದ. ಕೋಪವನ್ನು ತಡೆದುಕೊಳ್ಳುವ ಪ್ರಯತ್ನ ಅವನು ಮಾಡಿದಷ್ಟೂ ಅದು ಪ್ರಕಟವಾಗುತ್ತಿತ್ತು.

"ನೀನೇ ಆಶ್ರಮದ ಆಧಾರಸ್ತಂಭ. ಆಶ್ರಮ ಇಂಥ ಉಚ್ಛ್ರಾಯ ಸ್ಥಿತಿಗೆ ಬಂದಿರುವಾಗ ನೀನು ಹೊರಟುಹೋದರೆ ನಾವು ಮಾಡಿದ ಕೆಲಸವೆಲ್ಲಾ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ."

"ಯಾವ ಸಂಸ್ಥೆಯೂ ವ್ಯಕ್ತಿಯನ್ನವಲಂಬಿಸಬಾರದು ವಾಸು. ತತ್ತ್ವದ ಭದ್ರಬುನಾದಿಯ ಮೇಲೆ ಆಶ್ರಮ ನಿಲ್ಲಬೇಕು. ನಾನು ಹೋಗುವು ದಕ್ಕೆ ಅಡ್ಡಿ ಪಡಿಸಬೇಡ."

"ನೀನು ತಿರುಗಿ ಬರುವುದು ಯಾವಾಗ?"

"ಅದನ್ನು ಈಗ ಹೇಗೆ ಹೇಳಲಿ. ಗುರು ಅಪ್ಪಣೆಮಾಡಿದ ಕೂಡಲೆ ಬರುತ್ತೇನೆ."

ಸ್ವಾಮಿಜಿ ಹೊರಡಲನುವಾದರು.

ಚೈತ್ರ ಶುದ್ಧ ಪ್ರತಿಪದೆಯ ದಿನ ಸ್ವಾಮಿಜಿಯ ಪ್ರಯಾಣ ನಿಶ್ಚಯಿಸ ಲ್ಪಟ್ಟಿತು. ಜನಜಾತ್ರೆಯಿಂದ ಪಾರಾಗಿ ಸ್ವಾಮಿಜಿ ಕಾರುಹತ್ತಿ ಕುಳಿತರು.

ಸ್ವಾಮಿಜಿಯವರನ್ನು ಬೀಳ್ಕೊಡಲು ವಾಸು, ರಾಮಸ್ವಾಮಿ, ಸ್ಕಿನ್ನರ್, ಎಮಿಲಿ, ಯೋಗಿನಿ ಅಮ್ಮನವರು ಹೊರಟರು. ಬೆಂಗಳೂರು ರೈಲ್ವೆ ನಿಲ್ದಾಣ ತುಂಬಿಹೋಯಿತು.

ಮುಂಬಯಿಗೆ ಒಂದು ಟಿಕೆಟ್ ತೆಗೆಸಲ್ಪಟ್ಟಿತ್ತು. ಸ್ವಾಮಿಜಿ ಕೈಗೆ ವಾಸು ಹಣಕೊಡಲು ಹೋದಾಗ ಸ್ವಾಮಿಜಿ 'ಸನ್ಯಾಸಿಗೇಕೆ ಹಣ' ಎಂದರು.

ವಾಸು ಮುಂಬಯಿಗೆ ತಾರು ಮಾಡಿ ಸ್ವಾಮಿಜಿ ಪ್ರಯಾಣಮಾಡಿದ ವಿಷಯ ತಿಳಿಸಿದ.

ಸ್ವಾಮಿಜಿ ಪುಣೆಯಲ್ಲಿ ಇಳಿದು ಪಾರ್ವತಿಬೆಟ್ಟದ ಕಡೆ ನಡೆದು ಹೋದರು.

ಸ್ವಾಮಿಜಿ ಮುಂಬಯಿಗೆ ಬರಲಿಲ್ಲವೆಂದು ಬೊಂಬಾಯಿವಾಲಾ ಅವರಿಂದ ತಾರು ಬಂದಿತು.

ಸ್ವಾಮಿಜಿಯವರ ಪ್ರಯಾಣ ನಿರ್ಧಾರ ವಾಸುವಿಗೆ ಅನಿರೀಕ್ಷಿತ ಆಘಾತ ವಾಗಿದ್ದರೂ ಅವನು ಅದರಿಂದ ಚೇತರಿಸಿಕೊಳ್ಳಲು ತಡವಾಗಲಿಲ್ಲ. ಆಶ್ರಮ ದಲ್ಲಿ ಸ್ವಾಮಿಜಿಯವರ 'ದರ್ಶನ ಪೀಠ'ದ ಮೇಲೆ ಅವರ ಭಾವಚಿತ್ರ ಸ್ಥಾಪಿಸಿದ. ನಿತ್ಯ ಅದಕ್ಕೆ ಪೂಜೆಯ ವ್ಯವಸ್ಥೆಮಾಡಿಸಿದ.

ಶನಿವಾರ ಸಂಜೆಯ ಉಪದೇಶದ ಹೊಣೆಯನ್ನು ಮೇಜರ್ ಸ್ಕಿನ್ನರ್ ಹೊರಬೇಕಾಯಿತು. ಆಶ್ರಮದ ಕಾರ್ಯ ವಿಧಾನದಲ್ಲಿ ಸ್ವಲ್ಪವೂ ಬದಲಾವಣೆಯಾಗಲಿಲ್ಲ.

ಆಶ್ರಮದ ಪ್ರಧಾನ ಕಟ್ಟಡದಲ್ಲಿದ್ದ ಸ್ವಾಮಿಜಿಯವರ ರೂಮನ್ನು ರಾಮುಸ್ವಾಮಿಗೆ ಕೊಡಬೇಕೆಂದು ವಾಸು ಯೋಚಿಸಿದ. ಯೋಗಿನಿ ಅಮ್ಮ ನವರು ಅವನ ಯೋಚನೆಯನ್ನು ಬಲವಾಗಿ ವಿರೋಧಿಸಿದರು.

"ಶಂಕರ ಹಿಂದಕ್ಕೆ ಬರುತ್ತಾನೆಯೋ ಬರುವುದಿಲ್ಲವೋ. ರಾಮುಸ್ವಾಮಿ ಯಾದರೂ ಉಪಯೋಗಿಸಿಕೊಳ್ಳಲಿ. ಅವನೆಷ್ಟು ದಿವಸ ಅತಿಥಿಗೃಹದಲ್ಲಿ ವಾಸಮಾಡಬೇಕು.''

"ಅವರು ಬರಲಿ, ಬರದಿರಲಿ, ಆ ರೂಮನ್ನು ಹಾಗೆಯೇ ಕಾದಿಡಿ. ಅವರು ರೂಮನ್ನು ಯಾವ ರೀತಿಯಲ್ಲಿ ಬಿಟ್ಟುಹೋಗಿದ್ದಾರೆ, ಅದೇ ರೀತಿ ಯಲ್ಲಿರಬೇಕು. ಏಕಾಂತಧ್ಯಾನ ಮಾಡಬೇಕೆಂದು ಬಯಸುವವರು ಅಲ್ಲಿಗೆ ಬರಬಹುದು."

"ಈ ಧ್ಯಾನದ ಹುಚ್ಚು ನಿನಗೂ ಬಲವಾಗಿ ಏರುತ್ತಿದೆ ಪ್ರಮಿ"

ಎಂದು ವಾಸು ಅಸಮಾಧಾನ ವ್ಯಕ್ತಗೊಳಿಸಿದ.

ಸ್ವಾಮಿಜಿಯವರ ರೂಮು ಕಾದಿಟ್ಟದ್ದು ನಿರರ್ಥಕವಾಗಲಿಲ್ಲ. ಅದು ಕಾಲಕ್ರಮೇಣ ಆಶ್ರಮದ ಅತ್ಯಂತ ಪ್ರೇಕ್ಷಣೀಯ ಸ್ಥಳವಾಗುತ್ತ ಬಂತು.

೨೭

ಪ್ರಮಿಳೆಯ ಮನೋಭಾವದಲ್ಲಿ ಆಗುತ್ತಿದ್ದ ಬದಲಾವಣೆ ವಾಸುವಿಗೆ ಅರ್ಥವಾಗಲಿಲ್ಲ. ಅವಳ ಮನಸ್ಸನ್ನು ಕೊರೆಯುತ್ತಿದ್ದ ಕೀಟ ಅವಳ ದೇಹವನ್ನೂ ಕೊರೆಯಲಾರಂಭಿಸಿತ್ತು, ದಿನದ ಬಹುಭಾಗವನ್ನು ಸ್ವಾಮಿಜಿ

ಯವರ ಕೋಣೆಯಲ್ಲಿ ಒಬ್ಬಳೇ ಕಳೆಯುತ್ತಿದ್ದಳು. ವಾಸು ಎಷ್ಟು ವಿಧದಲ್ಲಿ ಕೇಳಿದರೂ ಅವಳು ತನ್ನ ದುಃಖದ ಕಾರಣವನ್ನು ವಿವರಿಸಲಿಲ್ಲ.

ವಾಸು ಮನಸ್ಸಿನಲ್ಲಿ ಒಂದು ಸಂದೇಹಮೂಡಿತು. 'ಪ್ರಮಿಳಾ, ಶಂಕರನಲ್ಲಿ ಅನುರಕ್ತಳಾಗಿದ್ದಳೇ? ಅವನು ಹೊರಟುಹೋದನೆಂದು ದುಃಖಿಸುತ್ತಿರುವಳೇ?' ಅಂಥ ಆಪಾದನೆ ಪ್ರಮಿಳೆಯ ವಿಷಯದಲ್ಲಿ ಮಾಡುವುದು ಅನುಚಿತವೆಂದು ವಾಸು ಮನಸ್ಸಿಗೆ ಹೊಳೆಯಿತು. ಆದರೆ ಅನುಮಾನ ಪರಿಹಾರಮಾಡಿಕೊಳ್ಳುವುದು ಒಳ್ಳೆಯದೆಂದು ಅವನು ನಿರ್ಧರಿಸಿದ.

ಒಂದು ದಿನ ರಾತ್ರಿ ಮಾತಿನ ಸರಣಿಯಲ್ಲಿ

"ಶಂಕರ ಹೊರಟುಹೋದುದು ನಿನಗೆ ಬಹಳ ದುಃಖವನ್ನುಂಟುಮಾಡಿದೆಯಲ್ಲವೇ ಪ್ರಮಿಳಾ." ಎಂದ.

"ನಿಸ್ಸಂದೇಹವಾಗಿ. ನಾನು ತ್ರಿಕರಣಪೂರ್ವಕವಾಗಿ ಅವರನ್ನು ಗುರುಗಳೆಂದು ಸ್ವೀಕರಿಸಿದ್ದೆ."

"ಅವನು ಏಕೆ ಹೊರಟುಹೋದನೆಂಬುದು ನನಗಿನ್ನೂ ಅರ್ಥವಾಗಿಲ್ಲ. ದುಡ್ಡೂ ತೆಗೆದುಕೊಂಡು ಹೋಗಲಿಲ್ಲ. ಅವನು ಹೋಗಿ ಐದು ತಿಂಗಳಾಯಿತು. ಒಂದು ಕಾರ್ಡು ಕೂಡ ಬರೆದಿಲ್ಲ."

ಪ್ರಮಿಳೆ ಗಹಗಹಿಸಿ ನಕ್ಕಳು.

"ನಿಮಗೆ ಅರ್ಥವಾಗುವುದಿಲ್ಲ. ವೃಥಾ ತೊಂದರೆ ತೆಗೆದುಕೊಳ್ಳಬೇಡಿ."

"ಪ್ರಮಿಳಾ, ನಿನ್ನ ಆರೋಗ್ಯ ಸಮರ್ಪಕವಾಗಿಲ್ಲ. ಹವಾ ಬದಲಾವಣೆಯಾದರೆ ಒಳ್ಳೆಯದು. ನಡಿ, ಒಂದು ತಿಂಗಳು ಮುಂಬಯಿಗಾದರೂ ಹೋಗಿ ಬರೋಣ. ನನಗೂ ಸ್ವಲ್ಪ ವಿಶ್ರಾಂತಿ ಬೇಕಾಗಿದೆ."

"ಎಲ್ಲಿಗೆ ಹೋದರೂ ನನಗೆ ಸಮಾಧಾನ ದೊರೆಯುವುದಿಲ್ಲ. ನೀವು ಬೇಕಾದರೆ ಮುಂಬಯಿಗೆ ಹೋಗಿ ಬನ್ನಿ."

"ಪ್ರಮಿಳಾ, ನೀನು ನನ್ನನ್ನು ತುಂಬ ದುಃಖಿಯನ್ನಾಗಿ ಮಾಡುತ್ತಿರುವೆ."

"ಅದನ್ನು ನಾನು ಬಲ್ಲೆ. ಆದರೆ...."

"ಏನು ಆದರೆ...."

"ನೀವು ಬಯಸುವಂತೆ ನಾನು ನಿಮ್ಮನ್ನು ಸುಖಿಮಾಡಲಾರೆ."

"ಏಕೆ?"

"ನಮ್ಮ ದಾರಿ ಕವಲಾಗಿರುವುದು ಕಾಣುವುದಿಲ್ಲವೇ? ನನಗೆ ಈ ಪ್ರಪಂಚ, ಈ ಬಾಳು, ಈ ಆಶ್ರಮ ಎಲ್ಲಾ ಬೇಸರವನ್ನುಂಟುಮಾಡಿವೆ, ನನ್ನ ಚಿತ್ತ ಅತೃಪ್ತಿಯ ದಳ್ಳುರಿಗೆ ಸಿಕ್ಕಿ ಬೇಯುತ್ತಿದೆ."

ಪ್ರಮೀಳೆಯ ವಜ್ರಕಠೋರ ನುಡಿ ಕೇಳಿ ವಾಸು ಮನಸ್ಸು ಮಮ್ಮಲ ಮರುಗಿತು. ಅವನ ಕಣ್ಣುಗಳಿಂದ ದುಃಖಬಿಂದುಗಳುದುರಿದವು.

"ದುಃಖಿಸಬೇಡಿ. ಅಲ್ಲಿ ನೋಡಿ – ಎದುರಿಗಿರುವ ಗುಲಾಬಿ ಗಿಡದಲ್ಲಿ ಒಂದು ಮೊಗ್ಗೆ ಇದೆ. ಅದು ನಾಳೆ ವಿಕಸಿಸುತ್ತದೆ. ಪ್ರಾಯಶಃ ನಾಡಿದ್ದು ಗುಲಾಬಿ ಹೂವಿನ ಪಕಳೆಗಳು ಉದುರಿಹೋಗುತ್ತವೆ – ತನ್ನ ಬಾಳು ಶಾಶ್ವತ ವಾಗಲಿಲ್ಲವೆಂದು ಗುಲಾಬಿ ಅಳುವುದರಲ್ಲಿ ಅರ್ಥವಿದೆಯೇ? ನಾನೊಂದು ಮಾತು ಹೇಳುವೆನು ಕೇಳುವಿರಾ?"

"ಹೇಳು."

"ಇನ್ನು ಈ ಅಭಿಮಾನ ಬಿಟ್ಟುಬಿಡಿ. ಮೊದಲಿನ ನಮ್ಮ ಸಂಬಂಧಕ್ಕೆ ನಾವು ತಿಲತರ್ಪಣಕೊಟ್ಟು ಬಿಡಬೇಕು. ನನ್ನನ್ನು ಮನಃಪೂರ್ವಕವಾಗಿ ಪ್ರೀತಿಸುವಿರಲ್ಲವೇ?"

"ಪ್ರಮಿ – ಪ್ರಮಿ, ಆ ಪ್ರಶ್ನೆಯನ್ನೇಕೆ ಕೇಳುವೆ?"

"ಕೇಳಬೇಕಾಗಿದೆ. ನಿಮ್ಮ ಪ್ರೇಮದ ಪರೀಕ್ಷೆ ನಾನು ಮಾಡ ಬೇಕಾಗಿದೆ."

"ಪರೀಕ್ಷೆಯೇ?"

"ಬೇಕು ಎನ್ನುವುದು ಪ್ರೇಮವಲ್ಲ – ಭೋಗ; ಬೇಡ ಎನ್ನುವುದು ಪ್ರೇಮ – ತ್ಯಾಗ. ಪ್ರೇಮಕ್ಕೆ ನಿಮ್ಮ ಲಾಲಸೆಯನ್ನು ಬಲಿದಾನವಾಗಿ ಅರ್ಪಿಸ ಬಲ್ಲಿರಾ?"

"ಹೀಗನ್ನಬೇಡ ಪ್ರಮಿ. ನಿನ್ನ ಬಿಟ್ಟು ನಾನು ಬಾಳಲಾರೆ."

"ಬಾಳುವುದನ್ನು ಅಭ್ಯಾಸಮಾಡಿಕೊಳ್ಳಬೇಕು. ಈ ಆಶ್ರಮ ನಿಮ್ಮ ಕೈಗೂಸು. ಅದರ ರಕ್ಷಣೆ ಪೋಷಣೆ ನಿಮ್ಮ ಮೇಲೆ ಬಿದ್ದಿದೆ. ನನ್ನ ಬಾಳು ಅಶಾಶ್ವತ."

ಮಾತು ಮುಂದುವರಿಸಲು ವಾಸುವಿಗೆ ಸಾಧ್ಯವಾಗಲಿಲ್ಲ. ಅಲ್ಲಿಂದೆದ್ದು ಹೊರಟುಹೋದ.

ಪ್ರಮೀಳೆಯ ಮಾತು ವಾಸು ಹೃದಯಕ್ಕೆ ಶಲ್ಯದಂತೆ ನೆಟ್ಟಿದ್ದವು. ಅವಳನ್ನು ಮಾತನಾಡಿಸುವ ಪ್ರಯತ್ನಕೂಡ ಮಾಡದೆ, ಮೂರು ದಿವಸ ದೂರ ದೂರ ಇದ್ದ. ಕೈತುಂಬ ಕೆಲಸ ಹಚ್ಚಿಕೊಂಡು, ತನ್ನ ನೋವನ್ನು ಮರೆಯಲೆತ್ನಿಸಿದ.

ನಾಲ್ಕನೆಯ ದಿನ ಬೆಳಿಗ್ಗೆ ಎಂಟು ಗಂಟೆಯಾದರೂ ಯೋಗಿನಿ ಅಮ್ಮನವರ ಕೋಣೆಯ ಬಾಗಿಲು ತೆಗೆಯಲಿಲ್ಲ. ದರ್ಶನದ ವೇಳೆಯಾಗುತ್ತ ಬಂದಿತ್ತು. ರಾಮಸ್ವಾಮಿ ಮಿಸ್. ಎಮಿಲಿಯವರಿಗೆ 'ಸ್ವಲ್ಪ ನೋಡಿ ಬನ್ನಿ–ಶ್ರೀಮಾತೆಯವರು ಮಲಗಿದ್ದರೆ ಎಚ್ಚರಿಸಿ' ಎಂದು ಹೇಳಿದ.

ಮಿಸ್. ಎಮಿಲಿ ಬಂದು ಯೋಗಿನಿ ಅಮ್ಮನವರ ರೂಮಿನ ಕದ ನೂಕಿದರು. ಚಿಲಕ ಹಾಕಿರಲಿಲ್ಲ. ಒಳಗೆ ಯಾರೂ ಕಾಣಲಿಲ್ಲ. ಸುತ್ತ ಕಣ್ಣು ಹೊರಳಿಸಿದರು. ಮೇಜಿನ ಮೇಲೆ ವಾಸು ಹೆಸರಿನಲ್ಲಿದ್ದ ಒಂದು ಲಕೋಟೆ ತಂದು ವಾಸು ಕೈಗಿತ್ತರು.

ಲಕೋಟೆ ಹಿಡಿದ ವಾಸು ಕೈ ಗಡಗಡ ನಡುಗುತ್ತಿತ್ತು. ತನ್ನ ರೂಮಿಗೆ ಹೋಗಿ ಕುಳಿತ ಓದಿಕೊಂಡ

"ಪ್ರಿಯ ಆತ್ಮ,

ಈ ಕಾಗದ ಒಡೆದು ನೀವು ನೋಡುವಲ್ಲಿ ನಾನು ನಿಮ್ಮಿಂದ ಬಹಳ ದೂರದಲ್ಲಿರುತ್ತೇನೆ. ಎಲ್ಲಿಗೆ ಹೋದೆ–ಏಕೆ ಹೋದೆ ಎಂದು ಕೇಳಬೇಡಿ. ನಮ್ಮ ಮಾರ್ಗ ಕವಲೊಡೆದಿದೆಯೆಂದು ನಾನು ಹೇಳಿದುದು ನಿಮಗೆ ಜ್ಞಾಪಕವಿರಬಹುದು.

ನನ್ನ ಹೇಯಜೀವನವನ್ನು ಸಾರ್ಥಕಪಡಿಸುವುದಕ್ಕೆ ಹೊರಟಿದ್ದೇನೆ. ನನ್ನ ಉದ್ಯಮ ಯಶಸ್ವಿಯಾಗಲಿ ಎಂದು ಹಾರೈಸಿ.

ನನಗಾಗಿ ಹುಡುಕಬೇಡಿ–ನನಗಾಗಿ ಹಂಬಲಿಸಬೇಡಿ. ಯಾವ ವಿಧಿ ನಮ್ಮನ್ನು ಒಂದುಗೂಡಿಸಿತೋ ಅದೇ ವಿಧಿ ನಮ್ಮನ್ನು ಬಿಡಿಸಿತು.

ನನಗೆ ಗುರುಕಟಾಕ್ಷ ಲಭ್ಯವಾದರೆ ಆಶ್ರಮಕ್ಕೆ ಹಿಂದಿರುಗಿ ಬರುತ್ತೇನೆ. ಈ ಬಾರಿ ನಾನು 'ಪ್ರಮೀಳೆ'ಯಾಗಿ ಬರುವುದಿಲ್ಲ–ಯೋಗಿನಿ ಅಮ್ಮನಾಗಿಯೇ ಬರುತ್ತೇನೆ.

ಎಲ್ಲ ಆಶ್ರಮವಾಸಿಗಳಿಗೂ ನನ್ನ ವಿಶ್ವಾಸ ತಿಳಿಸಿ. ಎಮಿಲಿ ಮನಸ್ಸಿಗೆ ತುಂಬ ನೋವಾಗುತ್ತದೆ. ಅವರನ್ನು ಸಮಾಧಾನಮಾಡುವುದು ನಿಮ್ಮ ಕರ್ತವ್ಯ.

ಇಂತು ನಿಮ್ಮ 'ಯೋಗಿನಿ ಅಮ್ಮ' "

ವಾಸು ಕೂಡಲೆ ಮದರಾಸು, ಮುಂಬಯಿಗಳಿಗೆ ತಾರು ಕಳಿಸಿದ. ಆಶ್ರಮದ ಕಾರುಗಳಲ್ಲಿ ಜನ ಕಳುಹಿಸಿ ಯೋಗಿನಿ ಅಮ್ಮನವರಿಗಾಗಿ ಹುಡುಕಿಸಿದ.

ಎಲ್ಲ ಪ್ರಯತ್ನ ನಿಷ್ಫಲವಾಯಿತು. ಕೋಪ, ದುಃಖ ಎರಡೂ ವಾಸುವಿನ ಹೃದಯ ಹಿಂಡಿಬಿಟ್ಟಿತು. ಸ್ಕಿನ್ನರ್ ಅವನ ದುಃಖೋಪಶಮನ ಮಾಡಲೆತ್ನಿಸಿದರು.

ಎಮಿಲಿ, ತಾಯಿಯನ್ನು ಕಳೆದುಕೊಂಡ ಮಗುವಿನಂತೆ ಅತ್ತರು.

ಆಶ್ರಮಕ್ಕೆ ಮಂಕು ಕವಿದಂತಾಯಿತು. ಮೂಗುತಿಹಳ್ಳಿ ಗಂಗವ್ವ ಬಂದು ಎಮಿಲಿಗೆ ಸಮಾಧಾನದ ಮಾತುಗಳನ್ನು ಹೇಳಿದಳು.

ಬೊಂಬಾಯಿವಾಲಾ ವಾಸೂಗೆ ಕಾಗದ ಬರೆದು ಅವನ ಕಣ್ಣಿಗೆ ಅಂಜನ ಹಾಕಿದ್ದರು.

'ಲೋಕದ ಬೆಳಕಿನ ಮೇಲೆ ಸ್ವಾಮ್ಯ ಸ್ಥಾಪಿಸುವುದು ಸಾಧ್ಯವೇ? ಶ್ರೀಮಾತೆಯವರ ನಿಷ್ಕ್ರಮಣಕ್ಕಾಗಿ ನೀವು ಪರಿತಪಿಸಬಾರದು. ಲೌಕಿಕ ದೃಷ್ಟಿಯಿಂದ ಆಶ್ರಮ ಬೆಳೆಸಲು ನೀವು ಬೇರೆ ಬೇರೆ ಕಡೆಯಿಂದ ಹಣ ತಂದಿರಿ. ಹಾಗೇ ಅಧ್ಯಾತ್ಮದೃಷ್ಟಿಯಿಂದ ಆಶ್ರಮ ಬೆಳೆಯಬೇಡವೇ? ಆಧ್ಯಾತ್ಮಿಕ ಸಂಪತ್ತು ತರುವುದಕ್ಕೆ ಶ್ರೀಮಾತೆಯವರು ಹೋಗಿದ್ದಾರೆ. ಭಕ್ತಿಯಿಂದ, ಶ್ರದ್ಧೆಯಿಂದ, ಆತ್ಮಪಾರಿಶುದ್ಧ್ಯದಿಂದ ಅವರ ಬರುವನ್ನು ಎದುರು ನೋಡೋಣ. ಶ್ರೀಮಾತೆಯವರನ್ನು ಬೇಗ ಕಳಿಸೆಂದು ಭಗವಂತನನ್ನು ಪ್ರಾರ್ಥಿಸೋಣ.'

ವಾಸು ದುಃಖಕ್ಕೀಡಾಗಿ ಕರ್ತವ್ಯಪರಾಙ್ಮುಖನಾಗಲು ಸಾಧ್ಯವಿರಲಿಲ್ಲ. ಆಶ್ರಮದ ಕ್ಷಯರೋಗ ಚಿಕಿತ್ಸಾಲಯ ಜನತೆಗೆ ಮಹೋಪಕಾರ ಮಾಡುತ್ತಿತ್ತು. ಅದರ ಬೆಳವಳಿಗೆಗೆ ಧನ ಸಂಗ್ರಹಿಸಬೇಕಾಗಿತ್ತು.

ಸಭಾ ಮಂದಿರದಲ್ಲಿ ಯೋಗಿನಿ ಅಮ್ಮನವರು ಕೂಡುತ್ತಿದ್ದ ಪೀಠದ ಮೇಲೆ ಅವರ ಭಾವಚಿತ್ರ ಪ್ರತಿಷ್ಠಾಪಿಸಲ್ಪಟ್ಟಿತು. ಯೋಗಿನಿ ಅಮ್ಮನವರ ರೂಮನ್ನು ಅವರಿಗಾಗಿಯೇ ಕಾಯ್ದಿಡಲಾಯಿತು.

೨೮

ಯೋಗಿರಾಜ ಶಂಕರನ ತಪೋಭೂಮಿಯೆನಿಸಿದ ಹಿಮಾಚಲ ಭೂಮಿ ಅಂತರಿಕ್ಷಕ್ಕೆ ಸೇತುವೆ ಕಟ್ಟಿದಂತೆ ನಿಂತಿತ್ತು. ಆದಿಸೃಷ್ಟಿಯಿಂದಲೂ, ಶಂಕರ ಹಿಮವತ್ಪ್ರದೇಶದಲ್ಲಿ ತಪಸ್ಸಿಗೆ ಕುಳಿತಿದ್ದಾನೆಂದು ಜನ ನಂಬಿದ್ದರು. ಹಿಮಾಲಯ ಜಟಾಜೂಟಧಾರಿಯಾದ ತಪಸ್ವಿಯನ್ನು ಹೋಲುತ್ತಿದುದೇ ಜನ ಹೀಗೆ ನಂಬಲು ಕಾರಣವಾಗಿರಬಹುದು. ಹಿಮಾಲಯ ಭಾರತದ ಅಧ್ಯಾತ್ಮ ಮಹೋನ್ನತಿಯ ಸಂಕೇತವಾಗಿತ್ತು. ಯೋಗಿಗಳು, ತಪಸ್ವಿಗಳು, ಮುಮುಕ್ಷುಗಳು ಹಿಮಾಲಯದ ನಿತ್ಯನಿರ್ಮಲ ಸತ್ಯಸುಂದರ ಸನ್ನಿಧಿಯಲ್ಲಿ ನೆಲಸಿ ತಮ್ಮ ಮಮಕಾರವನ್ನು ನೀಗಿ ಕೊಂಡಿದ್ದರು. ಕಾಳಿದಾಸನಂಥ ಮಹಾಕವಿ, ಆಚಾರ್ಯ ಶಂಕರನಂಥ ಮಹಾಪುರುಷ ಹಿಮಾಲಯದ ನಿತ್ಯನೂತನ ಸಂದೇಶದ ಪ್ರವಾದಿ ಗಳಾಗಿದ್ದರು.

ಮಾನಸ ಸರೋವರದಲ್ಲಿ ಮಿಂದು ಧ್ಯಾನಪರವಶನಾಗಿದ್ದ ಸ್ವಾಮಿಜಿ ಯನ್ನು ಬಾವಾಜಿ ಬಂದು ಎಚ್ಚರಗೊಳಿಸಿದ. ನಿಧಿಯನ್ನು ಕಂಡ ದರಿದ್ರ ನಂತೆ ಸ್ವಾಮಿಜಿ ಬಾವಾಜಿಯ ಶ್ರೀಚರಣಗಳನ್ನು ಅಪ್ಪಿದ.

"ಕೊನೆಗೂ ನಿಮ್ಮನ್ನು ಕಂಡೆನಲ್ಲಾ ಗುರುದೇವಾ."

"ನನ್ನನ್ನು ನೀನು ಕಾಣುವೆ ಎಂದು ಹೇಳಿರಲಿಲ್ಲವೇ ?"

"ನನ್ನನ್ನೇಕೆ ಪರೀಕ್ಷಿಸುತ್ತಿರುವಿರಿ ?"

"ಪರೀಕ್ಷೆಯೆಲ್ಲಿಂದ ಬಂತು ?"

"ಕೊನೆಯ ಘಟ್ಟದವರೆಗೂ ನನ್ನನ್ನು ಕರೆದೊಯ್ದು 'ಸಾಕು – ನಿಲ್ಲು' ಎಂದೇಕೆ ಹೇಳುತ್ತಿರುವಿರಿ ?"

"ಅದಕ್ಕೆ ಕಾರಣವಿದೆ. ನನ್ನ ಜತೆಬಾ. ಕಾಶಿಯಲ್ಲಿ ವಿಶ್ವೇಶ್ವರ ನಮ್ಮದಾರಿ ನೋಡುತ್ತಿದ್ದಾನೆ."

ಸ್ವಾಮಿಜಿ ಬಾವಾಜಿಯ ಜತೆ ಮಾತನಾಡದೆ ಹೊರಟರು.

ಕಾಶಿಯಲ್ಲಿ ಪಂಚಗಂಗಾ ಘಾಟೆಯ ಬಳಿ ಬಾವಾಜಿ ಬೀಡು ಮಾಡಿದ. ಬಾವಾಜಿಯ ಜೀವನ ಕಂಡು ಸ್ವಾಮಿಜಿಗೆ ಪರಮಾಶ್ಚರ್ಯವಾಯಿತು. ಯಾರಾದರೂ ಆಹಾರ ತಂದುಕೊಟ್ಟರೆ ಬಾವಾಜಿ ಸ್ವಾಮಿಜಿಯವರೊಂದಿಗೆ ಭುಜಿಸುತ್ತಿದ್ದ. ಸಾಧುಗಳು ಯಾರಾದರೂ ಗಾಂಜಾಕೊಳವೆ ಕೈಗಿತ್ತರೆ ಅದನ್ನು ಬಾವಾಜಿ ಸೇದುತ್ತಿದ್ದ.

ಒಂದು ತಿಂಗಳು ಕಳೆದರೂ ಬಾವಾಜಿ ಯಾವ ಮಾತನ್ನೂ ಎತ್ತಲಿಲ್ಲ. ಬಾವಾಜಿ ಮನಸ್ಸಿನಲ್ಲೇನಿದೆಯೆಂಬುದನ್ನು ಅರಿಯಲು ಕಷ್ಟವಾಗಿ ಒಂದು ದಿನ ಸ್ವಾಮಿಜಿ

"ಗುರುದೇವಾ, ಇಲ್ಲಿಗೆ ನಾವು ಬಂದು ಒಂದು ತಿಂಗಳಾಯಿತು."

"ಬಲ್ಲೆ. ಇನ್ನೂ ಹತ್ತು ದಿವಸ ಇಲ್ಲಿಯೇ ಕಳೆಯಬೇಕು."

"ಏಕೆ ಎಂದು ನಾನು ಕೇಳಬಹುದೋ ಕೇಳಬಾರದೋ ?"

"ನೀನು ಕೇಳಬಹುದು – ನಾನು ಅದಕ್ಕೆ ಉತ್ತರವನ್ನು ಹತ್ತು ದಿವಸಗಳ ಮೇಲೇ ಕೊಡತಕ್ಕವನು."

ಹತ್ತು ದಿವಸಗಳೂ ಕಳೆದುಹೋದವು. ಹನ್ನೊಂದನೆಯ ದಿನ ಬಾವಾಜಿ ಸ್ವಾಮಿಜಿಯನ್ನು ಹತ್ತಿರ ಕರೆದು

"ನೀನು ಮಣಿಕರ್ಣಿಕಾ ಘಾಟಿಗೆ ಹೋಗಿ ಬಾ. ಅಲ್ಲಿಗೆ ನಿನ್ನನರಸಿ ಕೊಂಡು ಒಂದು ಜೀವ ಬರುತ್ತದೆ. ಅದನ್ನೂ ಕರೆದುಕೊಂಡು ಇಲ್ಲಿಗೆ ಬಾ."

ಸ್ವಾಮಿಜಿ ಮಣಿಕರ್ಣಿಕಾ ಘಾಟಿಗೆ ಹೋಗಿ ಒಂದು ಮಂದಿರದ ಮುಂದುಗಡೆ ಕುಳಿತರು. ಯಾತ್ರಾರ್ಥಿಗಳು ಸ್ವಾಮಿಜಿಯವರನ್ನು ಭಿಕ್ಷುಕ ರೆಂದು ಭಾವಿಸಿ ಪುಡಿಕಾಸುಗಳನ್ನು ಅವರ ಮುಂದೆ ಹಾಕಿ ಹೋಗುತ್ತಿದ್ದರು.

ಮಧ್ಯಾಹ್ನ ಮುಗಿಯುತ್ತ ಬಂದಿತ್ತು, ಘಾಟಿಯಲ್ಲಿ ಓಡಿಯಾಡು ತ್ತಿದ್ದವರ ಮುಖ ಸ್ವಾಮಿಜಿ ನೋಡುತ್ತ ಕುಳಿತರು. 'ನನ್ನನ್ನರಸಿಕೊಂಡು ಬರುವವರು ಯಾರು ?' ಎಂಬ ಕುತೂಹಲ ಅವರನ್ನು ಕಾಡುತ್ತಿತ್ತು.

ಸಂಜೆ ಸಮೀಪಿಸುತ್ತ ಬಂದಿತು. ಯಾರ ಸುಳಿವೂ ಇಲ್ಲ. 'ಬಾವಾಜಿ ನನ್ನ ತಾಳ್ಮೆಯ ಪರೀಕ್ಷೆ ಮಾಡುತ್ತಿರಬಹುದೇ' ಎಂದು ಸ್ವಾಮಿಜಿ ಆಲೋಚಿಸಿದರು.

ಲೋಕರಕ್ಷಣೆಯ ಕೆಲಸ ಚಂದ್ರನಿಗೊಪ್ಪಿಸಿ ಭಾಸ್ಕರ ಅಸ್ತಂಗತ ನಾಗುವುದರಲ್ಲಿದ್ದ. ಯಾರೋ ಒಬ್ಬ ಭಿಕ್ಷುಣಿ– ಅತ್ತಲೇ ಬರುತ್ತಿದ್ದಳು. ಸ್ವಾಮಿಜಿ ಅವಳ ಬರುವನ್ನು ನೋಡುತ್ತ ಕುಳಿತರು. ಭಿಕ್ಷುಣಿಯ ಬಟ್ಟೆ ಚಿಂದಿ ಚಿಂದಿಯಾಗಿತ್ತು. ತಲೆ ಬೊಂತೆಕಟ್ಟಿತ್ತು. ನೀಳವಾದ ಅವಳ ಕೇಶರಾಶಿ ದೂಳೀಮಯವಾಗಿ ಮುಖಕ್ಕೆ ಅವಕುಂಠನ ಹಾಕಿತ್ತು.

ಸ್ವಾಮಿಜಿ ಎದ್ದು ಅವಳ ಬಳಿ ಸಾರಿದರು.

ಭಿಕ್ಷುಣಿ ಚಕಿತಳಾಗಿ ನಿಂತಳು.

ಸ್ವಾಮಿಜಿ ಭಿಕ್ಷುಣಿಯ ಸಮೀಪಗತರಾಗಿ ಅವಳ ಮುಖ ದಿಟ್ಟಿಸಿ ನೋಡಿ ಆಶ್ಚರ್ಯಚಕಿತರಾಗಿ

"ನೀವೇ ಬರುವವರು!" ಎಂದರು.

"ನೀವು ಯಾರು?"

"ಶ್ರೀಮಾತೆಗೆ ನನ್ನ ಗುರುತು ಸಿಕ್ಕಲಿಲ್ಲ."

"ನನ್ನ ಗುರುದೇವರಲ್ಲವೇ?"

ಎಂದು ಯೋಗಿನಿ ಅಮ್ಮನವರು ಸ್ವಾಮಿಜಿಯವರ ಪಾದಗಳ ಮೇಲುರುಳಿದರು.

ಯೋಗಿನಿ ಅಮ್ಮನವರ ಕಣ್ಣುಗಳಿಂದ ಆನಂದಭಾಷ್ಪ ಉಕ್ಕಿ ಹರಿಯುತ್ತಿತ್ತು.

"ನಂಬಿ ಕರೆದೊಡೆ 'ಓ' ಎನ್ನನೇ ಶಿವನು."

"ಏಳಿ– ಪರಮಗುರು ನಿಮ್ಮ ದಾರಿ ನೋಡುತ್ತಿದ್ದಾರೆ."

'ಪರಮಗುರು ಯಾರು' ಎಂದು ಯೋಗಿನಿ ಅಮ್ಮನವರು ಕೇಳಲಿಲ್ಲ. ಸ್ವಾಮಿಜಿಯನ್ನನುಸರಿಸಿ ಪಂಚಗಂಗಾ ಘಾಟಿಯ ಬಳಿಗೆ ಹೋದರು.

ಬಾವಾಜಿಯನ್ನು ನೋಡಿದ ಕೂಡಲೆ ಯೋಗಿನಿ ಅಮ್ಮನವರು ಅವನ ಚರಣಗಳಿಗೆ ಮಣಿದರು. ಬಾವಾಜಿ ಕರುಣಾಪೂರ್ಣನಾಗಿ

"ಮಗಳೇ, ಸ್ನಾನಮಾಡಿ ಬಾ. ಮೊದಲು ಸ್ವಲ್ಪ ಆಹಾರ ಸ್ವೀಕರಿಸು"

ಎಂದು ಹೇಳಿದ.

ಯೋಗಿನಿ ಅಮ್ಮನವರು ಸ್ನಾನಮಾಡಿ ಬಂದು, ಬಾವಾಜಿ ಕೊಟ್ಟ ಫಲಗಳನ್ನು ಭಕ್ಷಿಸಿದರು.

ರಾತ್ರಿಯಾಗುತ್ತ ಬಂದಿತ್ತು, ಬಾವಾಜಿ ಕಟ್ಟಿಗೆಯ ಕಟ್ಟು ಬಿಚ್ಚಿ ಮುಂದೆ ಹರಡಿ, ಅದಕ್ಕೆ ಬೆಂಕಿಯಿಟ್ಟು, ಕಾಸಿಕೊಳ್ಳುತ್ತಾ ಕುಳಿತ.

ಬೆಂಕಿಯ ಕೆಂಪು ಬೆಳಕು ಬಾವಾಜಿಯ ಮುಖದಮೇಲೆ ಬಿದ್ದು ಅದಕ್ಕೆ ಅಪೂರ್ವಕಾಂತಿಯನ್ನಿತ್ತಿತ್ತು.

"ಬಾವಾಜಿ ಆಶ್ರಮಕ್ಕೆ ಬಂದಿದ್ದುದು ನಿಮಗೆ ನೆನಪಿದೆಯೇ ?"

ಎಂದು ಸ್ವಾಮಿಜಿ ಶ್ರೀಮಾತೆಯವರನ್ನು ಕೇಳಿದರು.

"ಈಗ ನೆನಪಾಯಿತು. ಸಭಾ ಮಂದಿರದ ಹೊರಗೆ ನಿಲ್ಲುತ್ತಿದ್ದರು. ಅವರ ಮುಖ ಕಂಡಾಗಲೆಲ್ಲಾ ನನಗೆ ವಿಚಿತ್ರ ಅನುಭವವಾಗುತ್ತಿತ್ತು. ವಿದ್ಯುಚ್ಛಕ್ತಿ ಮೈಯೊಳಗೇ ಹೊಕ್ಕಂತಾಗುತ್ತಿತ್ತು."

"ಯೋಗಿನಿ, ನಿನಗೆ ನಿನ್ನ ಪೂರ್ವಾಶ್ರಮದ ಕಥೆ ನೆನಪಿದೆಯೇ ?"

ಎಂದು ಬಾವಾಜಿ ಕೇಳಿದ. ಅವನ ಧ್ವನಿಯಲ್ಲಿ ಸ್ಥೈರ್ಯ, ಗಾಂಭೀರ್ಯ ಮೂಡಿದ್ದವು.

"ನೆನಪಿದೆ."

"ನಿನ್ನ ಅಭಾಗ್ಯಪತಿಯ ಗತಿಯೇನಾಯಿತೆಂದು ಬಲ್ಲೆಯಾ ?"

"ಕಾಣೆ. ಅವರು ಜೀವಂತರಾಗಿರುವರೇ ?"

"ಇದ್ದಾನೆ. ತನ್ನ ಚರಿತ್ರೆಯೆಲ್ಲವನ್ನೂ ನನಗೆ ಹೇಳಿದ್ದಾನೆ."

"ನಾನು ಕೇಳಬಹುದೇ ?"

"ಅವಶ್ಯಕವಾಗಿ. ನಿನ್ನ ಪ್ರಣಯರಹಸ್ಯ ಹೊರಬಿದ್ದ ರಾತ್ರಿಯನ್ನು ಜ್ಞಾಪಿಸಿಕೋ. ನಿನ್ನಪತಿ ರಾತ್ರಿಯನ್ನೆಲ್ಲಾ ಬಸವನಗುಡಿ ಬಂಡೆಯಮೇಲೆ ಕಳೆದು ಬೆಳಿಗ್ಗೆ ರೈಲು ಹತ್ತಿ ಹೊರಟ. ಎಲ್ಲಿಗೆ ಎನ್ನುವುದು ಅವನಿಗೇ ಗೊತ್ತಿಲ್ಲ. ದಾರಿಯಲ್ಲಿ ಸಿಕ್ಕುತ್ತಿದ್ದ ಯಾತ್ರಿಕರ ಗುಂಪು ಎಲ್ಲಿಗೆ ಹೋಗುತ್ತಿದ್ದರೆ ಅವರ ಜತೆ ಅಲ್ಲಿಗೆ ಹೋಗುತ್ತಿದ್ದ. ಹಾಗೂಹೀಗೂ ಕೊನೆಗೆ ಕಾಶಿ ಮುಟ್ಟಿದ. ಅವನ ಹೃದಯ ದುಃಖದ ಭಾರದಲ್ಲಿ ನುಗ್ಗಾಗಿ ಹೋಗಿತ್ತು. ನಿರ್ವಿಣ್ಣತೆ ಅವನ ಚೇತನವನ್ನುಡುಗಿಸಿತ್ತು. ವಿಶ್ವೇಶ್ವರನ ಮಂದಿರಕ್ಕೆ ಹೋಗಿ

ಕೊನೆಯ ನಮಸ್ಕಾರ ಹಾಕಿ ಗಂಗಾನದಿಯ ಬಳಿಗೆ ಧಾವಿಸಿದ. ಎಲ್ಲರ ಪಾಪವನ್ನು ತೊಳೆಯಲು ಸಿದ್ಧಳಾಗಿದ್ದ ಗಂಗಾಮಾತೆ ಆ ತನ್ನ ಮಗನ ಮನಸ್ಸಿಗೂ ಶಾಂತಿನೀಡಲು ಸಿದ್ಧಳಾಗಿದ್ದಳು. ದುಃಖಿ ಕೈಯೆತ್ತಿ ಒಮ್ಮೆ ಗಂಗಾಮಾತೆಗೆ ಅಭಿವಂದಿಸಿ ಧುಮುಕಿದ. ಅವನ ಹಿಂದೆಯೇ ಯಾರೋ ನದಿಗೆ ಧುಮುಕಿದರು. ದುಃಖಿಯನ್ನು ಸಾಯಬಿಡಲಿಲ್ಲ. ಬೈರಾಗಿ ನಿನ್ನ ಪತಿಯ ಶಿಶ್ರೂಷೆಮಾಡಿ ಅವನನ್ನು ಹಿಮಾಚಲಕ್ಕೆ ಕರೆದೊಯ್ದ – ನಿನ್ನ ಪತಿಗೆ ಪುನರ್ಜನ್ಮವುಂಟಾಯಿತು."

"ಅವರ ಪ್ರಾಣ ಉಳಿಸಿದ ಮಹಾನುಭಾವರು ತಾವೇನೇ, ಬಾವಾಜಿ."

"ಅಲ್ಲ ಪ್ರಮೀಳಾ – ಬೈರಾಗಿಯಿಂದ ಪ್ರಾಣಭಿಕ್ಷೆ ಪಡೆದವನು ನಾನು."

ಯೋಗಿನಿ ಅಮ್ಮನವರು ಬಾವಾಜಿಯನ್ನೊಮ್ಮೆ ದಿಟ್ಟಿಸಿ ನೋಡಿ ಮೂರ್ಛಿತರಾದರು. ಬಾವಾಜಿ ಶಿಶ್ರೂಷೆ ಮಾಡಲು ಮೂರ್ಛೆ ತಿಳಿದೆದ್ದು.

"ನನ್ನನ್ನು ಕ್ಷಮಿಸುವಿರಾ ?"

"ಕ್ಷಮಿಸದಿದ್ದರೆ ಹಿಮವತ್ಪ್ರದೇಶದಿಂದ ನಿನ್ನದೆರುಗೊಳ್ಳಲು ಇಲ್ಲಿಗೆ ಬರುತ್ತಿದ್ದೆನೇ ?"

"ನನ್ನ ಮುಂದಿನ ಮಾರ್ಗ ಯಾವದು ?"

"ಅದನ್ನು ಸ್ವಾಮಿಜಿ ಹೇಳುತ್ತಾರೆ. ನಿನ್ನ ಗುರುಭಕ್ತಿ ನಿನ್ನನ್ನು ಕಾಪಾಡಿಕೊಂಡು ಬಂದಿದೆ. ಪಶ್ಚಾತ್ತಾಪದಲ್ಲಿ ನಿನ್ನ ಹೃದಯ ಬೆಂದು ಪರಿಶುದ್ಧವಾಗಿದೆ. ನಾಳೆ ಉಷಃಕಾಲಕ್ಕೆ ನಿನ್ನ ಗುರು ನಿನಗೆ ಉಪದೇಶ ಕೊಡುತ್ತಾರೆ. ಮುಂದಿನ ಮಾರ್ಗ ಯಾವುದೆಂಬುದು ತರುವಾಯ ನಿನಗೇ ನಿರ್ದಿಷ್ಟವಾಗಿ ಗೊತ್ತಾಗುತ್ತದೆ."

"ನಿಮ್ಮ ಸೇವೆ ಮಾಡುವ ಭಾಗ್ಯ ನನಗಿಲ್ಲವೇ ?"

"ನನ್ನ ಸೇವೆ ಮಾಡಬೇಕಾದ ಅಗತ್ಯವಿಲ್ಲ. ಇದೇ ನಮ್ಮ ಕೊನೆಯ ದರ್ಶನ. ಸಕಲ ಜೀವಕೋಟಿಯಲ್ಲಿ, ನಿರ್ಜೀವ ಕೋಟಿಯಲ್ಲಿ ಇರುವವನೇ ನನ್ನಲ್ಲಿಯೂ ನಿನ್ನಲ್ಲಿಯೂ ಇದ್ದಾನೆ – ಸರ್ವಂ ಖಲ್ವಿದಂ ಬ್ರಹ್ಮ. ಅದನ್ನು ಕಾಣುವ ಕಣ್ಣನ್ನು ನಿನ್ನ ಗುರು ನಿನಗೆ ಕೊಡುತ್ತಾರೆ. ಲೋಕದ ಕಣ್ಣು ತೆರೆಯಿಸಿ ನಿನ್ನ ಗುರುದಕ್ಷಿಣೆಯನ್ನರ್ಪಿಸು"

ಎಂದನ್ನುತ್ತಾ ಬಾವಾಜಿ ಎದ್ದುನಿಂತ.

ಸ್ವಾಮಿಜಿ, ಯೋಗಿನಿ ಅಮ್ಮ ಇಬ್ಬರೂ ಅವನಿಗೆ ನಮಸ್ಕಾರ ಮಾಡಿದರು. ಬಾವಾಜಿ ಅಲ್ಲಿಂದ ಹೊರಟುಬಿಟ್ಟ. ಮತ್ತೆ ಅವನು ಯಾರಿಗೂ ಕಾಣಿಸಿಕೊಳ್ಳಲಿಲ್ಲ.

ಮಾರನೆಯ ದಿನ ಉಷಃಕಾಲಕ್ಕೆ ಸ್ವಾಮಿಜಿ ಯೋಗಿನಿ ಅಮ್ಮನವರು ಉಪದೇಶಕೊಟ್ಟು ಹೊರಡಲು ಸಿದ್ಧರಾದರು. ಯೋಗಿನಿ ಅಮ್ಮನವರು ನಿರ್ವಿಷಣ್ಣರಾಗಿದ್ದರು. ಅವರ ಮನಸ್ಸಿನಲ್ಲಿದ್ದ ತುಮುಲ ವಿಪ್ಲವ ಅಡಗಿದಂತಾಗಿತ್ತು. ಗುರು ಹೊರಡಲು ಅವರು ನಿಂತಿದ್ದೆಡೆಗೆ ತಲೆಬಾಗಿ ವಂದಿಸಿದರು.

ಕಾಶಿಯಲ್ಲಿ ಬಹಳ ಕಾಲ ಯೋಗಿನಿ ಅಮ್ಮನವರು ನಿಂತರು. ಊರಿನವರು, ಯಾತ್ರಾರ್ಥಿಗಳು ಅವರ ಬಗ್ಗೆ ಭಯಭಕ್ತಿಯಿಂದ ವರ್ತಿಸುತ್ತಿದ್ದರು. ಅನಾಥ ಮಕ್ಕಳಿಗೆ, ನಿರ್ಗತಿಕ ಸ್ತ್ರೀಯರಿಗೆ ಯೋಗಿನಿ ಅಮ್ಮನವರು ಪ್ರತ್ಯಕ್ಷ ಪರಮೇಶ್ವರಿಯಾದರು.

ಬೆಂಗಳೂರು, ಮೈಸೂರು ಕಡೆಯಿಂದ ಕಾಶೀಯಾತ್ರೆ ಹೋಗುತ್ತಿದ್ದ ಅನೇಕರನ್ನು ಯೋಗಿನಿ ಅಮ್ಮನವರು ಗುರುತಿಸುತ್ತಿದ್ದರು. ಆದರೆ ಯಾರಿಗೂ ಅವರ ಗುರುತು ಸಿಕ್ಕುತ್ತಿರಲಿಲ್ಲ. ಕೆಲದಿವಸಗಳಲ್ಲಿ ಯೋಗಿನಿ ಅಮ್ಮನವರು ಕೇಶಮುಂಡನ ಮಾಡಿಸಿಕೊಂಡು ಕಾಷಾಯಧರಿಸಿಬಿಟ್ಟರು.

೨೯

ಬೆಳಿಗ್ಗೆ ಗಾಡಿಯಲ್ಲಿ ಬೆಂಗಳೂರಿನಲ್ಲಿ ಇಳಿದ ವೇಣಕ್ಕ ಕೂಡಲೆ ಮೈಸೂರು ಗಾಡಿ ಹತ್ತಿ ರಾಮಗಿರಿಗೆ ಹೋದರು.

ಅಕ್ಕನನ್ನು ಕಂಡ ವಾಸು ಹಿರಿಹಿರಿ ಹಿಗ್ಗಿದ.

"ಬದುಕಿದ್ದೀಯಾ ವೇಣಕ್ಕ"

"ಬದುಕಿರಬಾರದಾಗಿತ್ತೇನು ?"

"ಕಾಗದವಿಲ್ಲ ಪತ್ರವಿಲ್ಲ. ನೀನು ಬದುಕಿದ್ದೀಯೋ ಇಲ್ಲವೋ ಅದೂ ನನಗೆ ತಿಳಿಯಲಿಲ್ಲ."

“ತಿಳಿದು ಏನು ಮಾಡಬೇಕಾಗಿತ್ತು. ಇದೇಯೋ ನಿನ್ನ ಆಶ್ರಮ- ದೊಡ್ಡ ಅರಮನೆ ಕಟ್ಟಿಸಿಬಿಟ್ಟಿದ್ದೀಯಲ್ಲೋ ವಾಸು.”

“ಏನೋ ಕಟ್ಟಿಸಿದ್ದೇನೆ.”

“ಏಕೆ ಬೇಸರ. ಪ್ರಮಿಳಾ ಎಲ್ಲಿ?”

ವಾಸು ನಿಟ್ಟುಸಿರ್ಗರೆದು ತಲೆಯ ಮೇಲೆ ಕೈಹೊತ್ತು ಕುಳಿತು ತನ್ನ ಕಥೆಯನ್ನೆಲ್ಲಾ ಅಕ್ಕನಿಗೆ ಒಪ್ಪಿಸಿದ.

“ಇದ್ದಕ್ಕಿದ್ದಂತೆ ಪ್ರಮಿಳಾ ಹೊರಟುಹೋದಳು. ಎಲ್ಲಿದ್ದಾಳೆಯೋ ಏನೋ ಭಗವಂತನೇ ಬಲ್ಲ.”

“ಭಗವಂತನೇಕೆ ಬಲ್ಲ - ನಾನು ಬಲ್ಲೆ.”

“ನೀನು!”

“ಹೌದು - ಇಲ್ಲಿಗೆ ಹೋಗೆಂದು ನನ್ನ ಕಳಿಸಿದವಳು ಅವಳೇ.”

“ವೇಣಕ್ಕ, ಇದೇನು ಕನಸೋ ಸತ್ಯವೋ.”

“ಕಾಶಿಯಲ್ಲಿ ನಾನು ಗಂಗಾಸ್ನಾನ ಮಾಡಿಕೊಂಡು ಬರುತ್ತಿದ್ದೆ. ಎದುರಿಗೆ ಒಬ್ಬ ಸನ್ಯಾಸಿನಿ ಬಂದಳು. ಕಾಶಿಯಲ್ಲೇನು ಸನ್ಯಾಸಿಗಳಿಗೆ, ಸನ್ಯಾಸಿನಿಯರಿಗೆ ಕ್ಷಾಮವೇ? ಯಾರೋ ಏನೋ ಎಂದು ನಾನು ಸುಮ್ಮನಿದ್ದೆ. ಸನ್ಯಾಸಿನಿ ನನ್ನ ಸಮೀಪಕ್ಕೆ ಬಂದು ‘ವೇಣಕ್ಕ’ ಎಂದಳು. ಇಲ್ಲಿ ಯಾರು ನನ್ನನ್ನು ಮಾತನಾಡಿಸುವವರು ಎಂದು ನಾನು ಆಶ್ಚರ್ಯಚಕಿತಳಾಗಿ ‘ಯಾರಮ್ಮ ನೀವು’ ಎಂದೆ. ಸನ್ಯಾಸಿನಿ ನನ್ನನ್ನು ಎವೆಯಿಕ್ಕದೆ ನೋಡಿ ‘ನಾನು - ಪ್ರಮಿಳಾ’ ಎಂದಳು. ನಾನು ಗಾಬರಿಯಾಗಿ ‘ಇದೇನಮ್ಮಾ- ನಿನ್ನ ಅವಸ್ಥೆ. ತಲೆಗೂದಲೇನಾಯಿತೇ’ ಎಂದೆ. ‘ಹಿಂದಿನ ಜನ್ಮ ದೊಂದಿಗೇ ಹೋಯಿತು. ಇದು ಹೊಸ ಜನ್ಮ.’ ಎಂದಳು. ಅವಳ ಸ್ಥಿತಿ ನೋಡಿ ನನಗೆ ತುಂಬ ದುಃಖವಾಯಿತು. ನನ್ನನ್ನು ಸಮಾಧಾನಪಡಿಸಿ ‘ವೇಣಕ್ಕ, ನೀವು ಕಾಶೀಯಾತ್ರೆ ಮುಗಿಸಿ ಆಶ್ರಮಕ್ಕೆ ಹೋಗಿ. ಅಲ್ಲಿ ನಿಮ್ಮ ತಮ್ಮಂದಿರಿಗೆ ನಿಮ್ಮ ನೆರವು ಬೇಕು’ ಎಂದಳು. ‘ನೀನು ಬರುವು ದಿಲ್ಲವೇ?’ ಎಂದು ಕೇಳಿದೆ. ‘ನಾನು ನಾಳೆ ಕಾಶಿ ಬಿಡುತ್ತೇನೆ.’ ‘ಎಲ್ಲಿಗೆ ಹೋಗುತ್ತೀ’ ಎಂದು ಕೇಳಿದೆ. ‘ತಾಯಿಯ ಮಡಿಲಿಗೆ’ ಎಂದು ಹೇಳಿದಳು. ಅವಳ ಮಾತು ನನಗರ್ಥವಾಗಲಿಲ್ಲ. ನಾನು ಕಾಶೀಯಲ್ಲೇ ಇದ್ದೆ. ಪ್ರಮಿಳೆ

ಗಾಗಿ ಬೇಕಾದಷ್ಟು ಹುಡುಕಿದೆ. ಪುನಃ ಅವಳು ಸಿಕ್ಕಲಿಲ್ಲ. ಅವಳು ಹೇಳಿದಂತೆ ನಿನ್ನ ಆಶ್ರಮಕ್ಕೆ ಬಂದೆ.''

''ನಾನು ಪಾಪಿ ವೇಣಕ್ಕ. ಅವಳು ಪುಣ್ಯಜೀವಿ.''

''ನೀನು ಪಾಪಿಯಾಗಿದ್ದರೆ ನಿನ್ನ ಕೈಯಲ್ಲಿ ಭಗವಂತ ಇಷ್ಟೊಂದು ಧರ್ಮಕೆಲಸ ಮಾಡಿಸುತ್ತಿರಲಿಲ್ಲ ವಾಸು.''

ಎಂದು ವೇಣಕ್ಕ ಅವನನ್ನು ಸಂತೈಸಿದಳು.

ವೇಣಕ್ಕನಿಗೆ ಆಶ್ರಮವಾಸಿಗಳು ಸ್ವಾಗತ ಬಯಸಿದರು.

ಯೋಗಿನಿ ಅಮ್ಮನವರ ವಿಷಯ ಎಮಿಲಿ, ವೇಣಕ್ಕನ ಬಾಯಿಂದ ಕೇಳಿ ಸಂತೋಷಪಟ್ಟರು. ದಿನಗಳೆದಂತೆ ಎಮಿಲಿಯವರಿಗೂ ವೇಣಕ್ಕನಿಗೂ ಹಾರ್ದಿಕ ವಿಶ್ವಾಸ ಕೂಡಿಬಂತು. ಎಮಿಲಿಯ ಸ್ನಾನ, ಪೂಜಾವಿಧಾನ ನೋಡಿ, ಅವರ ನಿಷ್ಕಾಮಸೇವೆ ಕಂಡು ವೇಣಕ್ಕ ವಾಸು ಹತ್ತಿರ

''ಧರ್ಮ – ಜಾತಿ ಎಂದು ನಾವು ಹಾರಾಡುತ್ತೇವೆ. ಎಮಿಲಿ ದೇಶ ಯಾವದು, ಧರ್ಮ ಯಾವದು ? ಆಕೆಯ ನಿಷ್ಠೆ, ದೈವಭಕ್ತಿ ಎಷ್ಟು ಜನಕ್ಕೆ ಸಾಧ್ಯ ?''

ಎಂದಳು.

ಆಶ್ರಮದ ಕೆಲಸ ಕಾರ್ಯಗಳು ಎಂದಿನಂತೆ ಸಾಗಿದ್ದವು; ಸ್ವಾಮಿಜಿ ಮತ್ತು ಯೋಗಿನಿ ಅಮ್ಮ ಹೊರಟುಹೋದ ದಿನಗಳನ್ನು 'ಮಹಾದಿನ'ಗಳೆಂದು ಭಾವಿಸಿ, ಆಶ್ರಮವಾಸಿಗಳು ಉಪವಾಸ, ಪೂಜೆಯಲ್ಲಿ ಕಳೆಯುತ್ತಿದ್ದರು.

'ಋಷಿಧಾಮ'ವನ್ನು ಅಕ್ಷರಶಃ ಋಷಿಧಾಮವನ್ನಾಗಿ ಮಾಡಬೇಕೆಂಬ ಸತ್ಯಸಂಕಲ್ಪ ವಾಸು ಅಂತಃಕರಣದಲ್ಲಿ ಮೊಳೆಯಿತು.

ವಾಸುವಿನಲ್ಲಾಗುತ್ತಿದ್ದ ಮಾರ್ಪಾಟನ್ನು ಗಮನಿಸಿ ಒಂದು ದಿನ ರಾಮುಸ್ವಾಮಿ ಪರಿಹಾಸ್ಯವಾಗಿ

"ಆಶ್ರಮದಿಂದ ಇಬ್ಬರನ್ನು ಕಳಿಸಿಕೊಟ್ಟದ್ದಾಯಿತು. ಮೂರನೆಯವರು ಸಿದ್ಧವಾಗುತ್ತಿರುವ ಹಾಗಿದೆ."

"ಮೂರನೆಯವರು ಯಾರು ರಾಮು ?"

"ಯಾರೇ – ನೀನೇ !"

"ಮನೆಯಿಂದ, ಮಠದಿಂದ, ಮನುಷ್ಯರಿಂದ ತಪ್ಪಿಸಿಕೊಳ್ಳಬಹುದು. ಆದರೆ ಮನಸ್ಸಿನಿಂದ ತಪ್ಪಿಸಿಕೊಳ್ಳುವುದು ಸಾಧ್ಯವೇ ರಾಮು. ಮನುಷ್ಯ ತನ್ನ ಕರ್ತವ್ಯಪಥದಿಂದ ಓಡಿಹೋಗುವುದನ್ನು ಬಿಟ್ಟು, ಕರ್ತವ್ಯನಿರ್ವಹಣದಲ್ಲಿ ವಿಲೀನನಾಗಬೇಕು. ಪ್ರತಿಯೊಬ್ಬನ ಮುಕ್ತಿ ಅವನ ಕೈಯಲ್ಲೇ ಇರುತ್ತದೆ. ಆದರೆ ತಮ್ಮ ಕೈಯಲ್ಲಿರುವ ಅನರ್ಘ್ಯ ಆಭರಣದ ಬೆಲೆ ಬಲ್ಲವರು ವಿರಳ."

ರಾಮು ಚಕಿತನಾಗಿ ವಾಸುವನ್ನು ದಿಟ್ಟಿಸಿ ನೋಡಿದ.

'ಇವನು ನನ್ನ ಹಳೆಯ ಸ್ನೇಹಿತ ವಾಸುವೇ ?'

ಎಂದು ಅವನ ಮನಸ್ಸು ಕೇಳಿತು.

ಅವನ ಪ್ರಶ್ನೆಯನ್ನರಿತೋ ಏನೋ ವಾಸು ಮುಗುಳ್ನಗೆ ನಕ್ಕ.

ಅ. ನ. ಕೃಷ್ಣರಾಯರ ಕೃತಿಗಳು

(ನಮ್ಮ ಪ್ರಕಟನೆಗಳು)

ಅರುಳು ಮರುಳು	....	ಕಾದಂಬರಿ
ತಾಯಿಯ ಕರುಳು	....	,,
ಮುಯ್ಯಿಗೆ ಮುಯ್ಯಿ	....	,,
ಹೊಸಲು ದಾಟಿದ ಹೆಣ್ಣು	....	,,
ಅಮರ ಆಗಸ್ಟ್	....	,,
ಸಾಹಿತ್ಯ ರತ್ನ	....	,,
ಜೀವನಯಾತ್ರೆ	....	,,
ಸಂಧ್ಯಾರಾಗ	....	,,
ಉದಯರಾಗ	....	,,
ಶಿಲ್ಪಿ	....	ಕತಾಸಂಗ್ರಹ
ಮಿಂಚು	....	,,
ಕಿಡಿ	....	,,
ಸ್ವರ್ಣಮೂರ್ತಿ	....	ನಾಟಕ
ಹಿರಣ್ಯಕಶಿಪು	....	,,
ರಜಪೂತಲಕ್ಷ್ಮೀ	....	,,
ಮದುವೆಯೋ ಮನೆಹಾಳೋ	....	,,
ಕಿತ್ತೂರ ರಾಣಿ ಚೆನ್ನಮ್ಮ	....	ರೇಡಿಯೋ ನಾಟಕ
ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ	....	ಸಾಹಿತ್ಯ ಪ್ರಬಂಧ

ಅಚ್ಚಿನಲ್ಲಿ

ಶೋಕಚಕ್ರ	....	ಕಾದಂಬರಿ
ಚಿತ್ರವಿಚಿತ್ರ	....	,,
ಕಣ್ಣೀರು	....	,,
ಕರ್ನಾಟಕದ ಕಲಾವಿದರು (ಭಾಗ ೨)	....	ಕಲಾವಿಮರ್ಶೆ
ಕನ್ನಡ ಕುಲರಸಿಕರು	....	ಜೀವನಚಿತ್ರ
ಉಮರ್ ಖಯ್ಯಂ (ಸಚಿತ್ರ)	....	ಕಾವ್ಯವಿಮರ್ಶೆ

ಆನಂದ್ ಬ್ರದರ್ಸ್

ಬೆಂಗಳೂರು ೨.